ಸಂಪುಟ ೧ ಸಂಚಿಕೆ ೧

ಮಾನವಿಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಜನವರಿ, ೧೯೭೭

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ, ಹಾಗೂ ಅನುವಾದಿತ ಲೇಖನಗಳನ್ನು 'ಮಾನವಿಕ ಭಾರತಿ'ಯಲ್ಲಿ ಪ್ರಕಟಿಸಲಾಗುವುದು. ಅನುವಾದ ಲೇಖನಗಳಿದ್ದರೆ ಮೂಲ ಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವುದಲ್ಲದೆ, ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

೨ ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು, ಇಲ್ಲವೆ ಟೈಪ್ ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲಿ, ಅಸಂಪೂರ್ಣವಾಗಿಯಾಗಲಿ ಇರಬಾರದು. ಲೇಖಕರು ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಬೇಕು. ಲೇಖನವನ್ನು ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೩ ಲೇಖನಕ್ಕೆ ಆವಶ್ಯಕವಾದ ಚಿತ್ರಗಳಿದ್ದರೆ ಅವನ್ನು ಕಲಾಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಯಿಸಿ ಕಳುಹಿಸಬೇಕು.

೪ ಲೇಖನ ಸ್ವೀಕೃತವಾದ ಕೂಡಲೇ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆಚೀಟಿಗಳನ್ನು ಕಳುಹಿಸಬೇಕು.

೫ ಲೇಖಕರಿಗೆ ಅಚ್ಚಾದ ಅವರ ಲೇಖನದ ೨೫ ಪ್ರತಿಗಳನ್ನು ಒದಗಿಸಲಾಗುವುದು. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುವುದು. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

೬ ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು **ಸಂಪಾದಕರು, 'ಮಾನವಿಕ ಭಾರತಿ', ರಾಜ್ಯಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦೦೦೩** ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸಬಯಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು.

೭ ಮಿಕ್ಕ ವಿವರಗಳಿಗೆ **ನಿರ್ದೇಶಕರು, ವ್ಯಾಸಂಗವಿಸ್ತರಣ-ಪ್ರಕಟನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦೦೦೩** ಇವರಿಗೆ ಬರೆಯಬೇಕು.

ಮಾನವಿಕ ಭಾರತಿ

ಷಾಣ್ಮಾಸಿಕ ಪತ್ರಿಕೆ

ಸಂಪುಟ : ೧ ಸಂಚಿಕೆ : ೧

ಪ್ರಧಾನ ಸಂಪಾದಕರು :

ಡಾ. ಎ. ಎಂ. ರಾಜಶೇಖರಯ್ಯ

ಸಹಾಯಕ ಸಂಪಾದಕರು :

ಡಾ. ಕೆ. ಜಿ. ಗುರುಮೂರ್ತಿ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮಾನವಿಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ಷಾಣ್ಮಾಸಿಕ ಪತ್ರಿಕೆ

ಸಂಪುಟ : ೧ ಸಂಚಿಕೆ : ೧

ಜನವರಿ, ೧೯೭೭


ಪ್ರಕಾಶಕರು :

ಶ್ರೀ ಸಿ. ಎಸ್. ಕಣವಿ
ನಿರ್ದೇಶಕರು, ವ್ಯಾಸಂಗವಿಸ್ತರಣ–ಪ್ರಕಟನ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮುದ್ರಕರು :

ಶ್ರೀ ಜಿ. ಬಿ. ಮನ್ನಾಚಾರ
ಸಹಾಯಕ ನಿರ್ದೇಶಕರು,
ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ,
ಧಾರವಾಡ ೫೮೦೦೦೩

ಪರಿವಿಡಿ



ವಿಶ್ವವಿದ್ಯಾಲಯದ ರಜತಮಹೋತ್ಸವ ಮುಕ್ತಾಯ ಸಮಾರಂಭವನ್ನು
ನೆರವೇರಿಸಲಿರುವ ಭಾರತದ ರಾಷ್ಟ್ರಪತಿ ಡಾ. ಫಕ್ರುದ್ದೀನ್ ಅಲಿ ಅಹಮದ್ ಅವರು



ರಜತಮಹೋತ್ಸವದ ಸ್ವಾಗತ ಸಮಿತಿಯ ಅಧ್ಯಕ್ಷರಾದ
ಕುಲಪತಿ ಡಾ. ಆರ್. ಸಿ. ಹಿರೇಮಠ ಅವರು

ಜಾಗತಿಕ ಕ್ರಾಂತಿಗಳು : ಒಂದು ವಿಶ್ಲೇಷಣೆ

● ಎ. ಎಮ್. ರಾಜಶೇಖರಯ್ಯ

ಒಂದು ದೇಶದ ಸರಕಾರ ಪದ್ಧತಿ, ಆಡಳಿತ ವ್ಯವಸ್ಥೆ, ಸಂವಿಧಾನ ಅಥವಾ ಸಾಮಾಜಿಕ ವ್ಯವಸ್ಥೆಯಲ್ಲಿ ಅಸಾಧಾರಣ ಹಾಗೂ ಅನಿರೀಕ್ಷಿತ ಬದಲಾವಣೆಯುಂಟಾದರೆ, ಅದನ್ನು ಕ್ರಾಂತಿಕಾರಕ ಬದಲಾವಣೆ ಅಥವಾ 'ಕ್ರಾಂತಿ' ಎಂದು ಕರೆಯಲಾಗುವುದು. ಸಾಮಾನ್ಯವಾಗಿ ಕ್ರಾಂತಿ ಎಂದರೆ ಅದು ರಾಜಕೀಯ ಬದಲಾವಣೆಗೆ ಮಾತ್ರ ಸೀಮಿತವಾಗುವಂತಹ ಅರ್ಥವನ್ನು ಕಲ್ಪಿಸಲಾಗುತ್ತದೆ. ಇತಿಹಾಸದಾದ್ಯಂತ ಕ್ರಾಂತಿಕಾರಕ ಬದಲಾವಣೆಗಳು ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿಯೂ ಉಂಟಾಗಿರುವುದನ್ನು ನಾವು ಕಾಣುತ್ತೇವೆ. ಆದ್ದರಿಂದ 'ಕ್ರಾಂತಿ'ಯ ಅರ್ಥವು ವ್ಯಾಪಕವಾಗಿದ್ದು ಅದು ಮಾನವ ಜೀವನದ ಯಾವುದೇ ಕ್ಷೇತ್ರದಲ್ಲಿಯಾದರೂ ಆಗುವ ಅಸಾಧಾರಣ ಮತ್ತು ಕ್ಷಿಪ್ರ ಬದಲಾವಣೆಯನ್ನು ವಿವರಿಸುವ ಪದವಾಗಿದೆ. ಹೀಗೆ ಮಾನವ ಇತಿಹಾಸದಲ್ಲಿ ಅನೇಕ ಕ್ಷೇತ್ರಗಳಲ್ಲಿ ಕ್ರಾಂತಿಗಳುಂಟಾಗಿರುವುದನ್ನು ನಾವು ಕಾಣಬಹುದು.

'ಕ್ರಾಂತಿ' ಪದವು ಇಂದಿನ ಆಧುನಿಕ ಅರ್ಥದಲ್ಲಿ—ಎಂದರೆ ರಾಜಕೀಯ ಅರ್ಥದಲ್ಲಿ—ಮಧ್ಯಯುಗ (Middle Ages) ದ ಕೊನೆಯಭಾಗದಲ್ಲಿ ಇಟಲಿಯ ನಗರ ರಾಜ್ಯಗಳಲ್ಲಿ ಬಳಕೆಯಲ್ಲಿ ಬಂದಿತು. ಆಗ ಅದನ್ನು ಸಾಮಾನ್ಯವಾಗಿ ಧಾರ್ಮಿಕ ಕ್ಷೇತ್ರದಲ್ಲಿ ಕಂಡುಬಂದ ಕ್ರಾಂತಿಕಾರಕ ಸುಧಾರಣೆಗಳನ್ನು ವಿವರಿಸಲು ಉಪ

ಯೋಗಿಸಲಾಯಿತು. ಈ ಪದವು ಸುಮಾರು ಕ್ರಿ.ಶ. ೧೬೦೦ರ ಹೊತ್ತಿಗೆ ಆಲಿವರ್ ಕ್ರಾಮ್‌ವೆಲ್‌ನ ಕಾಲದಲ್ಲಿ ಆಂಗ್ಲ ಭಾಷೆಯಲ್ಲಿ ಪ್ರಥಮವಾಗಿ ಪ್ರಯೋಗಿಸಲ್ಪಟ್ಟಿತು. ಅಂದು ಈ ಪದವು ಇಂಗ್ಲೆಂಡಿನಲ್ಲಿ ಹಳೆಯ ಆಡಳಿತ ಪದ್ಧತಿಯನ್ನು ಪುನಃ ಸ್ಥಾಪಿಸುವ ಪ್ರಯತ್ನದ ಸಂಬಂಧದಲ್ಲಿ ಬಳಸಲಾಯಿತು. ಇಂತಹ ಬಳಕೆಯು ಕ್ರಾಂತಿ ಪದದ ವಿಪರ್ಯಾಸವಾಗಿದ್ದಿತು.

ತದನಂತರ "ಕ್ರಾಂತಿ" ಪದದ ಬಳಕೆಯು ನಿಜವಾಗಿಯೂ ಆಧುನಿಕ ಅರ್ಥದಲ್ಲಿ ಆಗಿರುವುದನ್ನು ನಾವು ಕಾಣುತ್ತೇವೆ. ಆಧುನಿಕ ಕ್ರಾಂತಿಗಳು ದಬ್ಬಾಳಿಕೆ, ಅನೀತಿಯುತ ಆಡಳಿತ, ಲಂಚಗುಳಿತನ, ನಿರುಪಯುಕ್ತ ರಾಜಕೀಯ ವ್ಯವಸ್ಥೆ ಹಾಗೂ ಸಾಮಾಜಿಕ ಅನ್ಯಾಯದ ವಿರುದ್ಧ ಜನತೆಯು ಬಂಡೇಳುವುದರ ಮೂಲಕ ಉಂಟಾಗಿವೆ; ಅಥವಾ ವಸಾಹತು ಆಡಳಿತದ ವಿರುದ್ಧ ಜನರು ದಂಗೆ ಎದ್ದು ತಮ್ಮ ಸ್ವಾತಂತ್ರ್ಯವನ್ನು ಸಾರುವ ಯುದ್ಧಗಳೋಪಾದಿಯುಂಟಾಗಿರುವದನ್ನೂ ನಾವು ಕಾಣಬಹುದು. ಇಂತಹ ಸ್ವಾತಂತ್ರ್ಯ ಸಮರ ಅಥವಾ 'ಕ್ರಾಂತಿ'ಯನ್ನುಂಟುಮಾಡುವುದರಲ್ಲಿ ನಾಯಕನ ಪಾತ್ರವು ಬಹು ಮುಖ್ಯವೆನಿಸುವುದು. ಕ್ರಾಂತಿಗಳು ಯಾವುದಾದರೂ ಒಂದು ಸಿದ್ಧಾಂತದ ವಿರುದ್ಧವಾಗಿ ಅಥವಾ ಪರವಾಗಿ ಉಂಟಾದ ಚಳುವಳಿಯ ರೂಪವನ್ನು ತಳೆಯಬಹುದಾಗಿವೆ. ಜನತೆಯ ಮನಸ್ಸಿನಲ್ಲಿ ಹಾಗೂ ಭಾವನೆಗಳಲ್ಲಿಯೂ ಹಳೆಯ ವಿಚಾರಗಳ ಬದಲು ಹೊಸ ವಿಚಾರಗಳ ಜ್ಯೋತಿಯನ್ನು ಹೊತ್ತಿಸುವ ಪ್ರಯತ್ನವು ಸಫಲವಾದಾಗ ಅದು 'ಕ್ರಾಂತಿ' ಎಂದೆನಿಸಿಕೊಳ್ಳುವುದು. ಹೀಗೆ ಕ್ರಾಂತಿಯ ಅರ್ಥವು ಸರ್ವವ್ಯಾಪಿಯಾಗಿದ್ದು ಮಾನವನ ಜೀವಿತದಲ್ಲಿ ಸಾಮಾಜಿಕ, ಆರ್ಥಿಕ, ರಾಜಕೀಯ ಸಾಂಸ್ಕೃತಿಕ ಮತ್ತು ಧಾರ್ಮಿಕ ಕ್ಷೇತ್ರದಲ್ಲಿ ಉಂಟಾಗಬಹುದಾದ ಅನಿರೀಕ್ಷಿತ, ಅಸಾಧಾರಣ ಹಾಗೂ ತೀವ್ರ ಬದಲಾವಣೆಯನ್ನು 'ಕ್ರಾಂತಿ' ಎಂದು ಕರೆಯಲಾಗುವುದು. ಅಂತಹ ಬದಲಾವಣೆ ಕ್ರಾಂತಿಕಾರಕ ಬದಲಾವಣೆ ಎನಿಸುವುದು. ಇಂತಹ ಕ್ರಾಂತಿಯು ವೈಚಾರಿಕ ಕ್ರಾಂತಿಯೂ ಆಗಿರಬಹುದು. ಆದ್ದರಿಂದ 'ಕ್ರಾಂತಿ' ಎಂದರೆ ಕೇವಲ ರಾಜಕೀಯ ಸ್ವಾತಂತ್ರ್ಯಕ್ಕಾಗಿ ನಡೆಸಲಾದ ಹೋರಾಟ ಅಥವಾ ಬಂಡಾಯ ಎನ್ನುವುದು ಸಮಂಜಸವೆನಿಸುವುದಿಲ್ಲ. ಫ್ರೆಂಚ್ ವೈಚಾರಿಕ ಕಂಡಾರ್ಸೆಯು ಕ್ರಾಂತಿಯ ಶಬ್ದಕ್ಕೆ ಕಲ್ಪಿಸಿದ ಈ ಸೀಮಿತ ಅರ್ಥವು ಇಂದು ಸರಿ ಎನಿಸುವುದಿಲ್ಲ. ಒಟ್ಟಾರೆಯಲ್ಲಿ, ಸಮಾಜದಲ್ಲಿ ಉಂಟಾಗುವ ತೀವ್ರ ಬದಲಾವಣೆಗೆ 'ಕ್ರಾಂತಿ' ಎಂದು ಹೇಳಬಹುದು.

ಕಾರಣಗಳು :

ಇತಿಹಾಸದಲ್ಲಿ ಇದುವರೆಗೆ ಅನೇಕಬಗೆಯ ಹಲವಾರು ಕ್ರಾಂತಿಗಳು ಆಗಿ ಹೋಗಿವೆ. ಪ್ರತಿಯೊಂದು ದೇಶದಲ್ಲಿ ಇಂತಹ ಕ್ರಾಂತಿಕಾರಕ ಬದಲಾವಣೆಗಳನ್ನು ನಾವು ಗುರುತಿಸಬಹುದು. ಪ್ರತಿಯೊಂದು ಕ್ರಾಂತಿಯೂ ತನ್ನದೇ ಆದ ಕಾರಣಗಳಿಂದುಂಟಾದ ಘಟನೆಯಾಗಿರುವುದಾದರೂ, ಎಲ್ಲಾ ಕ್ರಿಯೆಗಳಿಗೂ ಕೆಲವು ಸಾಮಾನ್ಯ ಕಾರಣಗಳಿವೆ. ಅಂತಹ ಸಾಮಾನ್ಯಕಾರಣಗಳನ್ನು ಈಗ ಪರಿಶೀಲಿಸೋಣ.

ಆಡಳಿತವರ್ಗದ ಅಪಕ್ವತೆ ಮತ್ತು ಅನೀತಿಯುತ ನಡವಳಿಕೆಯಿಂದ ಅಸ್ತಿತ್ವದಲ್ಲಿರುವ ರಾಜಕೀಯ ವ್ಯವಸ್ಥೆಯು ಕುಸಿದುಬೀಳುವುದು ಸಹಜ. ಅಂತಹ ಸಂದರ್ಭದಲ್ಲಿ ಆರ್ಥಿಕ ಬಿಕ್ಕಟ್ಟು ಉಂಟಾಗುವುದೂ ಅಷ್ಟೇ ಸಹಜ. ಇಂತಹ ಪರಿಸ್ಥಿತಿಯಲ್ಲಿ ಕ್ರಾಂತಿಯು ಅನಿವಾರ್ಯವಾಗುವುದು. ಉದಾಹರಣೆಗಾಗಿ ಕ್ರಿ.ಶ. ೧೭೮೮ರಲ್ಲಿ ಫ್ರಾನ್ಸಿನಲ್ಲಿ ಉಂಟಾದ ಕ್ಷಾಮವು ೧೭೮೯ರಲ್ಲಿ ಫ್ರಾನ್ಸಿನ ಮಹಾಕ್ರಾಂತಿಗೆ ಕಾರಣವಾಯಿತು.

ಇಂದಿನ ಕ್ರಾಂತಿಗಳು ಯುದ್ಧದಿಂದ ಜನಿಸಿದ ಶಿಶುಗಳಾಗಿವೆ ಎನ್ನಬಹುದು. ಇಪ್ಪತ್ತನೆಯ ಶತಮಾನದ ಕ್ರಾಂತಿಗಳೆಲ್ಲವೂ ಯಾವುದಾದರೂ ಒಂದು ಯುದ್ಧದ ತರುವಾಯವೇ ಸಂಭವಿಸಿವೆ. ಕ್ರಿ.ಶ. ೧೯೧೭ರಲ್ಲಿ ರಷ್ಯದ ಕ್ರಾಂತಿ ಮತ್ತು ೧೯೧೪–೧೮ರ ಹಾಗೂ ೧೯೩೯–೪೫ರ ಎರಡೂ ಜಾಗತಿಕ ಮಹಾಯುದ್ಧಗಳ ನಂತರ ಉಂಟಾದ ಕ್ರಾಂತಿಗಳು ಅದರಲ್ಲಿಯೂ ೧೯೪೯ರಲ್ಲಿ ಚೀನಾದಲ್ಲಿ ಆದ ಕ್ರಾಂತಿ ಇವಕ್ಕೆ ನಿದರ್ಶನಗಳಾಗಿವೆ. ಯುದ್ಧಗಳಿಂದ ಉಂಟಾಗುವ ಅನಿಶ್ಚಿತ, ಅಸ್ತವ್ಯಸ್ತತೆ, ಜೀವ–ವಿತ್ತಗಳ ನಷ್ಟ ಮತ್ತು ಕಷ್ಟಗಳಿಂದ ಕ್ರಾಂತಿಕಾರಕ ಬದಲಾವಣೆಗೆ ಅನುಕೂಲಕರವಾದ ವಾತಾವರಣ ನಿರ್ಮಿತವಾಗುತ್ತದೆ. ಇದೂ ಅಲ್ಲದೆ ಯುದ್ಧದಲ್ಲಿ ಸೋತುಹೋದ ದೇಶದಲ್ಲಿ ಆಡಳಿತಾಧಿಕಾರವು ಸಡಿಲವಾಗಿ, ಸಾಮಾಜಿಕ ಅತೃಪ್ತಿ ಉಂಟಾಗುವುದು. ಇಂತಹ ಅತೃಪ್ತಿಯೊಡನೆ, ಸೋಲಿನಿಂದುಂಟಾದ ಅಪಮಾನವೂ ಸೇರಿ ಆ ದೇಶದ ಜನತೆಯಲ್ಲಿ ಪ್ರತೀಕಾರದ ಭಾವನೆಯುಂಟಾಗಿ ತಮ್ಮ ಸೋಲಿನ ಸೇಡು ತೀರಿಸಿಕೊಳ್ಳಲು ಎಂತಹ ಕ್ರಾಂತಿಕಾರಕ ಬದಲಾವಣೆಗೂ ಅವರು ಸಿದ್ಧರಾಗುತ್ತಾರೆ. ಉದಾಹರಣೆಯ ರೂಪವಾಗಿ ೧೯೦೮ರಲ್ಲಿ ಕಿರಿಯ ತುರುಕರು ಮತ್ತು ೧೯೫೨ರಲ್ಲಿ ಇಜಿಪ್ತದ ಜನರಲ್ ನಗೀಬ್ ಮತ್ತು ಕರ್ನಲ್ ನಾಸೀರರವರು ಇಂತಹ ವಾತಾವರಣದಲ್ಲಿ ಕ್ರಾಂತಿಯ ನಾಯಕರುಗಳಾಗಿ ತಮ್ಮ ದೇಶದಲ್ಲಿ ಕ್ರಾಂತಿಯನ್ನುಂಟುಮಾಡಿದರು.

ಕ್ರಾಂತಿಗಳು ಸಮಾಜದಲ್ಲಿ ಯಾವುದಾದರೂ ಒಂದು ಸಾಮಾಜಿಕ ಗುಂಪಿನ ವರ್ಗದ ಅಥವಾ ಪಂಗಡದ ಜನರನ್ನು ಪಕ್ಷಪಾತದಿಂದ ಕಾಣುವದರಿಂದಲೂ ಸಂಭವಿಸಬಹುದು. ಇವನ್ನು ಸಾಮಾಜಿಕ ಅರಾಜಕತೆ ಮತ್ತು ರಾಜಕೀಯ ಆಂದೋಲನದ ರೂಪದಲ್ಲಿಯೂ ಕಾಣಬಹುದು. ಒಂದು ವರ್ಗದ ಜನರಲ್ಲಿ ತಾವು ಇತರರಂತೆ ರಾಜಕೀಯ ಹಕ್ಕುಬಾಧ್ಯತೆಗಳನ್ನು ಹೊಂದಿಲ್ಲವೆಂಬ ಭಾವನೆಯುಂಟಾದಾಗ ಅಥವಾ ಸಾಮಾಜಿಕವಾಗಿ ತಾವು ಇತರರೊಡನೆ ಸಮಾನರಾಗಿಲ್ಲವೆಂದು ಅರಿತಾಗ ಮತ್ತು ತಮ್ಮ ಆರ್ಥಿಕ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಶಕ್ತರಾಗಿಲ್ಲವೆಂದು ಪರಿತಪಿಸಿದಾಗ ಕ್ರಾಂತಿಯ ಕಿಡಿಯು ಹೊತ್ತಿಕೊಳ್ಳುತ್ತದೆ. ಅದರಲ್ಲಿಯೂ ತಮ್ಮ ಆಶೋತ್ತರಗಳನ್ನು ಶಾಂತಿಯುತವಾಗಿ ಬಗೆಹರಿಸಿಕೊಳ್ಳುವುದು ಅಸಾಧ್ಯವೆಂದು ತೋರಿದಾಗ ಅಂತಹ ವರ್ಗಗಳು ಕ್ರಾಂತಿಗೇ ಶರಣಾಗುವವು. ಅಧಿಕಾರದಲ್ಲಿರುವ ಆಳರಸರು ಜನತೆಯಲ್ಲಿ ಕಾಲಕಾಲಕ್ಕೆ ಉಂಟಾಗುವ ಆಶೋತ್ತರಗಳನ್ನು ಅರಿತುಕೊಳ್ಳಲು ತಪ್ಪಿದಾಗ ಇಂತಹ ವಾತಾವರಣ ನಿರ್ಮಿತವಾಗುವುದು. ಅರಿತುಕೊಂಡರೂ ಇತರ ವರ್ಗಗಳೊಡನೆ ತಮ್ಮ ಅಧಿಕಾರವನ್ನು ಹಂಚಿಕೊಳ್ಳಲು ಅವರು ಇಷ್ಟಪಡದೆಹೋದರೂ ಕ್ರಾಂತಿ ಅನಿವಾರ್ಯವಾಗುವುದು. ಆಗ ಅಂತಹ ಅನ್ಯಾಯದ ವಿರುದ್ಧ ಹೋರಾಡುವ ಜನತೆ ಪರಂಪರಾನುಗತವಾಗಿ ನಡೆದು ಬಂದಿರುವ ಆಡಳಿತ ಪದ್ಧತಿ ಮತ್ತು ರಾಜಕೀಯ ವ್ಯವಸ್ಥೆಯ ವಿರುದ್ಧ ಬಂಡೆದ್ದು ಅದನ್ನು ನಿರ್ಮೂಲಗೊಳಿಸಿ ಅದರ ಸ್ಥಾನದಲ್ಲಿ ಒಂದು ಹೊಸ ವ್ಯವಸ್ಥೆಯನ್ನೇ ಸ್ಥಾಪಿಸುವುದು. ಹೀಗೆ ಅತೃಪ್ತಿ ಮತ್ತು ಅಸಮಾನತೆಯ ನಿರ್ಮೂಲನಕ್ಕಾಗಿ ಕ್ರಾಂತಿ ಸಂಭವಿಸುವುದು. ಇಂತಹ ಕ್ರಾಂತಿಯು ಅನೇಕ ವರುಷಗಳ ಶೋಷಣೆ ಮತ್ತು ಅತ್ಯಾಚಾರದಿಂದ ಉಂಟಾಗುತ್ತದೆ. ಇದು ಕ್ಷಿಪ್ರ ಕಾಲದಲ್ಲಿ ಉಂಟಾಗದಿದ್ದರೂ ಅದರಿಂದ ಉಂಟಾಗುವ ಪರಿಣಾಮಗಳು ಅಸಾಧಾರಣವಾದವುಗಳಾಗಿದ್ದರಿಂದ ಅದೂ ಕ್ರಾಂತಿಯೇ ಎನಿಸುವುದು. ಫ್ರೆಂಚ್ ಮತ್ತು ರಷ್ಯದ ಕ್ರಾಂತಿಗಳು ಆಯಾ ದೇಶದ ಸಾಮಾಜಿಕ, ಆರ್ಥಿಕ ಕ್ಷೇತ್ರಗಳಲ್ಲಿ ಅನೇಕ ವರುಷಗಳಿಂದ ನಡೆದುಬಂದಿದ್ದ ಅನ್ಯಾಯದ ವಿರುದ್ಧವಾಗಿದ್ದವೇ ಹೊರತು ಜನತೆಯಲ್ಲಿ ಅನಿರೀಕ್ಷಿತವಾಗಿ ಅಥವಾ ತತ್‌ಕ್ಷಣ ಉಂಟಾದ ಕ್ಷೋಭೆಯಿಂದಲ್ಲ.

ಕೊನೆಯದಾಗಿ, ಕ್ರಾಂತಿಗಳು ರಾಜಕೀಯವಾಗಿ ಒಂದು ವಸಾಹತುವಿನ ಜನತೆಯು ಸಾಕಷ್ಟು ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ಪ್ರಗತಿಯನ್ನು ಸಾಧಿಸಿದಾಗ ತನ್ನ ವಿದೇಶಿ ಆಡಳಿತಗಾರರಿಂದ ಮುಕ್ತರಾಗುವ ಇಚ್ಛೆಯನ್ನು ವ್ಯಕ್ತಪಡಿಸುವುದರಿಂದ ವಸಾಹತು ಮತ್ತು ವಸಾಹತುಶಾಹಿ ರಾಷ್ಟ್ರದ ನಡುವೆ

ಉಂಟಾಗುವ ಘರ್ಷಣೆಯಿಂದಲೂ ಸಂಭವಿಸುತ್ತವೆ. ಯಾವ ವಸಾಹತುಶಾಹಿ ರಾಷ್ಟ್ರವೂ ಸ್ವಸಂತೋಷದಿಂದ ತನ್ನ ವಸಾಹತುವನ್ನು ಸ್ವತಂತ್ರ ರಾಷ್ಟ್ರವೆಂದು ಘೋಷಿಸಿರುವುದನ್ನು ನಾವು ಕಂಡಿಲ್ಲ. ಬ್ರಿಟಿಷ್ ಪ್ರಧಾನಿ ವಿನ್‌ಸ್ಟನ್ ಚರ್ಚಿಲ್ಲರು ಭಾರತದ ಬಗ್ಗೆ ತಳೆದ ಧೋರಣೆಯನ್ನು ಇಲ್ಲಿ ನೆನೆಯಬಹುದು. ಬ್ರಿಟಿಷ್ ಚಕ್ರಾಧಿಪತ್ಯವನ್ನು ವಿಸರ್ಜಿಸುವ ಕಾರ್ಯವನ್ನು ನೆರವೇರಿಸುವವಕ್ಕಾಗಿ ತಮ್ಮ ಚಕ್ರವರ್ತಿಯವರ ಪ್ರಧಾನಿಯಾಗಿಲ್ಲವೆಂದು ಅವರು ಗುಡುಗಿದ್ದುಂಟು. ಹದಿನೆಂಟ ನೆಯ ಶತಮಾನದ ಅಮೇರಿಕದ ಕ್ರಾಂತಿಯು ಸ್ವಾತಂತ್ರ್ಯ ಸಮರವಾಗಿಯೇ ರೂಪಿತವಾಯಿತು. ಅಂತೆಯೇ ಇಪ್ಪತ್ತನೆಯ ಶತಮಾನದಲ್ಲಿ ಏಷ್ಯ ಮತ್ತು ಆಫ್ರಿಕಖಂಡದ ಅನೇಕ ವಸಾಹತು ರಾಜ್ಯಗಳು ತಮ್ಮ ಸ್ವಾತಂತ್ರ್ಯಸಮರದಲ್ಲಿ ವಿಜಯಿಗಳಾದರು. ಭಾರತ ಸ್ವಾತಂತ್ರ್ಯಸಮರವೂ ತನ್ನದೇ ಆದ ರೀತಿಯಲ್ಲಿ ಕ್ರಾಂತಿಯೇ ಆಗಿದೆ. ಈ ರೀತಿಯ ಕ್ರಾಂತಿಯಲ್ಲಿ ನಾಯಕರುಗಳ ಪಾತ್ರ ಮಹತ್ವವಾದುದು. ಇಂತಹ ಪ್ರತಿಯೊಂದು ಕ್ರಾಂತಿಯೂ ಹೆಸರಾಂತ ನಾಯಕರು ಗಳನ್ನು ಹೊಂದಿದ್ದು ಆ ನಾಯಕರೇ ಸ್ವತಂತ್ರ ರಾಷ್ಟ್ರದ ಸರಕಾರದ ಮುಖಂಡ ರಾಗಿದ್ದನ್ನು ನಾವು ಕಂಡಿದ್ದೇವೆ. ಅಮೇರಿಕದಲ್ಲಿ ಜಾರ್ಜ್ ವಾಷಿಂಗ್‌ಟನ್, ಭಾರತದಲ್ಲಿ ಮಹಾತ್ಮಾ ಗಾಂಧಿ ಮತ್ತು ಜವಹರಲಾಲ್ ನೆಹರೂ, ಇಂಡೋನೇಶ್ಯ ದಲ್ಲಿ ಸುಕರ್ನೋ, ಘಾನಾದಲ್ಲಿ ಎನ್‌ಕ್ರೂಮರ ಪಾತ್ರವನ್ನು ಇಲ್ಲಿ ಉದಾಹರಿಸ ಬಹುದು.

ಹಂತಗಳು :

ಪ್ರತಿಯೊಂದು ಕ್ರಾಂತಿಯು ಕಾಲ, ಮಾನ ಮತ್ತು ಉದ್ದೇಶಗಳಿಗನುಗುಣ ವಾಗಿ ಅದು ಪ್ರಾರಂಭವಾಗಿ ಕೊನೆಯವರೆಗೂ ತನ್ನದೇ ಆದ ವಿವಿಧ ಹಂತಗಳಲ್ಲಿ ಮುಂದುವರೆಯುತ್ತದೆ. ಆದರೂ ಸಾಮಾನ್ಯವಾಗಿ ಎಲ್ಲಾ ಕ್ರಾಂತಿಗಳಲ್ಲಿ ಕೆಲವು ಪ್ರಮುಖ ಘಟಕಗಳನ್ನು ಕಾಣಬಹುದು.

ಕ್ರಾಂತಿ ಎಂದರೆ ತೀವ್ರಗತಿಯ ಚಟುವಟಿಕೆ ಎಂದೆನಿಸಿಕೊಂಡರೂ ಕ್ರಾಂತಿಯ ಪೂರ್ವಘಟ್ಟವನ್ನು ಗುರುತಿಸಲು ಸಾಧ್ಯ. ಮೊದಲನೆಯದಾಗಿ, ಪ್ರದರ್ಶನಗಳು, ಮುಷ್ಕರಗಳು, ಸಭೆಗಳು, ಹಿಂಸಾಚಾರ, ಕಾಯಿದೆ ಮತ್ತು ಶಿಸ್ತು ಭಂಗ ಮುಂತಾದ ಅಸಾಮಾನ್ಯ ಘಟನೆಗಳು ಮುಂಬರುವ ಕ್ರಾಂತಿಸೂಚಕಗಳಾ ಗಿವೆ. ಆದ್ದರಿಂದ ಇದನ್ನು ಕ್ರಾಂತಿಯ ಪೂರ್ವಭಾವಿ ಘಟ್ಟವೆಂದು ಕರೆಯ ಬಹುದು. ಎರಡನೆಯದಾಗಿ, ಇವುಗಳಿಂದುಂಟಾಗುವ ಅರಾಜಕತೆಯಿಂದ ಇಂತಹ ಚಟುವಟಿಕೆಗಳ ನಾಯಕರುಗಳ ಗುಂಪೊಂದು ಅಧಿಕಾರಕ್ಕೆ ಬರಬಹುದು. ಇದು

ತಾತ್ಕಾಲಿಕ ಸ್ವರೂಪದ್ದಾಗಿರಬಹುದು. ಕ್ರಾಂತಿಪೂರ್ವದಲ್ಲಿ ಇಂತಹ ಅನೇಕ ಶಕ್ತಿ ಮತ್ತು ವ್ಯಕ್ತಿಗಳು ಅಧಿಕಾರದ ಮೇಲೆ ತಮ್ಮ ಕಣ್ಣನ್ನಿರಿಸಿಕೊಂಡಿರುವುದು ಸಹಜ. ಬಹುದಿನಗಳ ಆಂತರಿಕ ಯುದ್ಧದ ತರುವಾಯ ಸಂಪೂರ್ಣ ಅಧಿಕಾರ ವನ್ನು ಹೊಂದುವ ಘಟನೆಗಳು ವಿರಳ. ಚೀನಾದಲ್ಲಿ ೧೯೪೯ರ ಕ್ರಾಂತಿಯ ತರುವಾಯ ಕಮ್ಯುನಿಸ್ಟ್ ಪಕ್ಷ ಅಧಿಕಾರಕ್ಕೆ ಬಂದ ಒಂದು ನಿದರ್ಶನ ಉಂಟು. ಮೂರನೆಯದಾಗಿ, ಹೀಗೆ ಅಧಿಕಾರಕ್ಕೆ ಬಂದ ವ್ಯಕ್ತಿ-ಶಕ್ತಿಗಳ ವಿರುದ್ಧ ಪ್ರತಿ ಕ್ರಾಂತಿಯ ಘಟ್ಟವನ್ನೂ ಕಾಣಬಹುದು. ಇಲ್ಲವೆ ವಿದೇಶಗಳು ಹಸ್ತಕ್ಷೇಪ ಮಾಡುವ ಸಾಧ್ಯತೆಯೂ ಇರುತ್ತದೆ. ಅಧಿಕಾರದಲ್ಲಿರುವ ಶ್ರೀಮಂತರು ಅಥವಾ ಕುಲೀನರ ಗುಂಪನ್ನು ಕಿತ್ತೊಗೆದು ಅವರ ಸ್ಥಾನದಲ್ಲಿ ಸಮಾಜದ ಮಧ್ಯಮವರ್ಗ ದವರ ಮತ್ತು ಕೆಳವರ್ಗದವರ ಅಧಿಕಾರ ಸ್ಥಾಪಿಸುವುದು ಕ್ರಾಂತಿಯ ಮೂಲ ಉದ್ದೇಶವಾಗಿರುವುದರಿಂದ ಪ್ರತಿಯೊಂದು ಕ್ರಾಂತಿಯಲ್ಲಿಯೂ ಈ ಮೂರು ಹಂತಗಳಿರುವುದು ಸ್ವಾಭಾವಿಕ. ರಷ್ಯದಲ್ಲಿ ೧೯೧೭ರ ಫೆಬ್ರುವರಿ ಕ್ರಾಂತಿಯ ತರುವಾಯ ಅಕ್ಟೋಬರ್ ಕ್ರಾಂತಿಯು ಪ್ರತಿ-ಕ್ರಾಂತಿ ಹಾಗೂ ಸುಧಾರಣೆಯ ಕ್ರಾಂತಿಯಾಗಿ ಬೊಲ್ಷೆವಿಕರು ಅಧಿಕಾರಕ್ಕೆ ಬಂದರು. ಕ್ರಾಂತಿಯ ಕಾರ್ಯ ಕ್ರಮವು ಸಂಪೂರ್ಣವಾದಕೂಡಲೇ ಶಾಂತಸ್ಥಿತಿಯುಂಟಾಗಿ ತದನಂತರ ಅಧಿಕಾರ ಕ್ಕಾಗಿ ಪೈಪೋಟಿ ನಡೆದು, ಕ್ರಾಂತಿಯ ನಾಯಕರುಗಳ ಸ್ಥಾನದಲ್ಲಿ ಸೈನ್ಯದ ಸಹಾಯ ಮತ್ತು ಸಹಾನುಭೂತಿಯನ್ನು ಪಡೆದಂತಹ ಚತುರ ವ್ಯಕ್ತಿಯು ಅಧಿ ಕಾರಕ್ಕೆ ಬರುವುದು ಕ್ರಾಂತಿಯ ಒಂದು ವಿಶಿಷ್ಟ ಲಕ್ಷಣ. ರಷ್ಯದ ಕ್ರಾಂತಿಯ ನಾಯಕ ಲೆನಿನ್ ಆಗಿದ್ದರೂ, ಕೊನೆಗೆ ಜೋಸೆಫ್ ಸ್ಟಾಲಿನ್ ಅಧಿಕಾರಕ್ಕೆ ಬಂದನು. ಆದೇರೀತಿ ಈಜಿಪ್ಟ್‌ನಲ್ಲಿ ಫರೂಕ್ ದೊರೆಯ ವಿರುದ್ಧ ಕ್ರಾಂತಿ ಎಬ್ಬಿಸಿದ ನಾಯಕ ಜನರಲ್ ನಗೀಬರು ಅಲ್ಪಕಾಲ ಅಧಿಕಾರದಲ್ಲಿದ್ದು ನಂತರ ಕರ್ನಲ್ ನಾಸೀರರು ಅವರ ಸ್ಥಾನವನ್ನು ಆಕ್ರಮಿಸಿಕೊಂಡು ತಮ್ಮ ಜೀವ ದಾದ್ಯಂತ ಆ ದೇಶದ ನಾಯಕ ಹಾಗೂ ಅಧ್ಯಕ್ಷರಾಗಿದ್ದರು.

ನಾಯಕತ್ವ :

ಪ್ರತಿ ವ್ಯಕ್ತಿಯಲ್ಲಿ ಕ್ರಾಂತಿಕಾರಿ ವಿಚಾರಗಳು ಇರುವುದು ಸಾಧ್ಯವಿಲ್ಲ. ಇದ್ದಾಗ್ಯೂ ಅಂತಹ ಕ್ರಾಂತಿಕಾರಿ ವಿಚಾರಗಳು ವ್ಯಕ್ತವಾಗಬೇಕಾದರೆ ಅವಕ್ಕೆ ಅನುಕೂಲಕರವಾದ ಪರಿಸರದ ಅವಶ್ಯಕತೆ ಇರುತ್ತದೆ. ಇದೇರೀತಿ ಒಂದು ಸಮಾಜದ ವರ್ಗರಚನೆಯೂ ಮುಖ್ಯವಾದ ಅಂಶವಾಗಿರುತ್ತದೆ. ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಸಮಾಜದ ವಿವಿಧ ವರ್ಗಗಳ ಸ್ಥಾನ

ಮಾನಗಳು ಬೇರೆಯಾಗಿದ್ದು ಶ್ರೀಮಂತವರ್ಗ, ಮಧ್ಯಮವರ್ಗ ಹಾಗೂ ಕಾರ್ಮಿಕ ವರ್ಗ ಮುಂತಾದವುಗಳನ್ನೊಳಗೊಂಡ ಕನಿಷ್ಟ ವರ್ಗಗಳಿದ್ದು ಸಾಮಾನ್ಯವಾಗಿ ಶ್ರೀಮಂತವರ್ಗದವರು ಅಧಿಕಾರದಲ್ಲಿರುತ್ತಾರೆ. ಕೆಳವರ್ಗದವರಾದ ಬಡವರ ವರ್ಗ ಶೋಷಿತವರ್ಗವೆನಿಸುತ್ತವೆ. ಆದರೆ ಇವೆರಡು ವರ್ಗಗಳ ನಡುವಣ ವರ್ಗವಾದ ಮಧ್ಯವರ್ಗದವರು ಸಾಮಾನ್ಯವಾಗಿ ಕ್ರಾಂತಿಕಾರಿ ವಿಚಾರಗಳನ್ನು ಹೊಂದಿದವರಾಗಿದ್ದು ಅವರೇ ಕ್ರಾಂತಿಗಳ ಜನಕರಾಗುವರು. ಅವರು ವಿದ್ಯಾವಂತರಾಗಿ ಮತ್ತು ಅಷ್ಟು ಅನುಕೂಲತೆಗಳನ್ನು ಹೊಂದದ ವರ್ಗಕ್ಕೆ ಸೇರಿದವರಾಗಿರುವದರಿಂದ ಸಮಾಜದ ನ್ಯೂನತೆಗಳನ್ನು ಅರಿತುಕೊಂಡು ಅವುಗಳ ನಿವಾರಣೆಗಾಗಿ ಪ್ರಯತ್ನಿಸುವ ಜ್ಞಾನ ಮತ್ತು ಪರಿಸರದ ಒತ್ತಡವು ಅವರಲ್ಲಿ ಕಂಡುಬರುತ್ತದೆ. ಇದೂ ಅಲ್ಲದೆ ವಯಸ್ಸಿಗನುಗುಣವಾಗಿ ಹೆಚ್ಚು ವಯಸ್ಸಾದವರೂ ಮತ್ತು ಶ್ರೀಮಂತರು ಕ್ರಾಂತಿಯ ಪರವಾಗಿರುವುದು ಸಾಧ್ಯವಿಲ್ಲ. ಆದ್ದರಿಂದ ಉನ್ನತ ವ್ಯಾಸಂಗದಲ್ಲಿ ತೊಡಗಿರುವ ಹಿರಿಯ ವಿದ್ಯಾರ್ಥಿಗಳು, ಕಿರಿಯ ವಕೀಲರುಗಳು, ಅಥವಾ ಸೈನ್ಯದ ಕಿರಿಯ ಅಧಿಕಾರಿಗಳೇ ಸಾಮಾನ್ಯವಾಗಿ ಕ್ರಾಂತಿಯ ನಾಯಕತ್ವವನ್ನು ವಹಿಸುತ್ತಿರುವುದು ಸ್ವಾಭಾವಿಕ. ಹಿರಿಯ ವಿದ್ಯಾರ್ಥಿಗಳು, ಬುದ್ಧಿಜೀವಿಗಳು ತಮ್ಮ ದೇಶದ ಹಾಗೂ ಸಮಾಜದಲ್ಲಿರಬಹುದಾದ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಗಳನ್ನು ವಿಶ್ಲೇಷಿಸುವದರ ಮೂಲಕ ಅನ್ಯಾಯದ ವಿರುದ್ಧ ಜನತೆಯ ಭಾವನೆಗಳನ್ನು ಕೆರಳಿಸುವ ಶಕ್ತಿಯನ್ನು ಪಡೆದಿರುತ್ತಾರೆ. ಉನ್ನತ ಶಿಕ್ಷಣವು ಜನತೆಯಲ್ಲಿ ಉನ್ನತ ಆಕಾಂಕ್ಷೆಗಳನ್ನು ಹೆಚ್ಚಿಸುತ್ತದೆ. ಇಂತಹ ಆಕಾಂಕ್ಷೆಗಳನ್ನು ಕಾರ್ಯಗತಗೊಳಿಸುವದಕ್ಕಾಗಿ ಕ್ರಾಂತಿಗಳುಂಟಾಗಿರುವುದನ್ನು ನಾವು ಎಲ್ಲೆಲ್ಲೂ ಕಾಣುತ್ತೇವೆ. ರಷ್ಯ, ಚೀನಾ, ಲ್ಯಾಟಿನ್-ಅಮೇರಿಕಾ, ಆಫ್ರಿಕ, ಏಷ್ಯ ಮತ್ತು ಮಧ್ಯಪ್ರಾಚ್ಯ ದೇಶಗಳ ಕ್ರಾಂತಿಗಳಲ್ಲಿ ಹಿರಿಯ ವಿದ್ಯಾರ್ಥಿಗಳು, ಕಿರಿಯ ವಕೀಲರುಗಳು ಮತ್ತು ಕಿರಿಯ ಸೈನ್ಯದ ಅಧಿಕಾರಿಗಳ ಪಾತ್ರವನ್ನು ಇಲ್ಲಿ ಉಲ್ಲೇಖಿಸಬಹುದು. ಐರೋಪ್ಯ ರಾಷ್ಟ್ರಗಳಲ್ಲಿ ಉಂಟಾಗಿರುವ ಕ್ರಾಂತಿಗಳು ಸಾಮಾನ್ಯವಾಗಿ ಬುದ್ಧಿಜೀವಿಗಳ ವರ್ಗಕ್ಕೆ ಸೇರಿದ ವೈಚಾರಿಕರು, ಸೈದ್ಧಾಂತಿಕರು ಮತ್ತು ಬರಹಗಾರರು, ಕವಿಗಳಿಂದ ಸ್ಫೂರ್ತಿಪಡೆದವುಗಳಾಗಿವೆ. ಇದುವರೆಗೆ ಆಗಿಹೋಗಿರುವ ಕ್ರಾಂತಿಗಳಲ್ಲಿ ಕೆಲವು ಒಂದೇ ಒಂದು ನಿರ್ದಿಷ್ಟವರ್ಗದ ಜನರಿಂದ–ಕಾರ್ಮಿಕರು ಅಥವಾ ರೈತರುಗಳಿಂದ ಉಂಟಾದವುಗಳಾಗಿವೆಯಾದರೂ ಕೆಲವು ಪ್ರಮುಖ ಕ್ರಾಂತಿಗಳ ಪರವಾಗಿ ಜನತೆಯ ಸಹಕಾರವಿದ್ದು ಅವು ವ್ಯಾಪಕವಾಗಿರುತ್ತವೆ. ಈ ಕ್ರಿಯೆಗಳು ವಿಶಾಲ ತಳಹದಿಯನ್ನು ಹೊಂದಿರುವ ಚಳುವಳಿಗಳಾಗಿದ್ದವು. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಕ್ರಾಂತಿಗಳು ಇಂತಹ

ವಿಶಾಲ ತಳಹದಿಯನ್ನು ಹೊಂದಿರುತ್ತಿವೆಯಾದರೆ ಅಭಿವೃದ್ಧಿ ಹೊಂದುತ್ತಿರುವ ಅಥವಾ ಅನಭಿವೃದ್ಧ ರಾಷ್ಟ್ರಗಳಲ್ಲಿ ಸಾಮಾನ್ಯವಾಗಿ ಸೈನಿಕ ಅಧಿಕಾರಿಗಳು ಕ್ರಾಂತಿಗಳ ಜನಕರಾಗಿರುತ್ತಾರೆ. ಸೈನ್ಯವನ್ನು ಮೊದಲನೆಯ ಘಟ್ಟದಲ್ಲಿ ಉಪಯೋಗಿಸಬಹುದು. ಅಥವಾ ಕೊನೆಯುವರೆಗೂ ಅವರೇ ಕ್ರಾಂತಿಯ ಮುಂಚೂಣಿಯಲ್ಲಿರಬಹುದು. ಹೀಗೆ ದೇಶ, ಕಾಲ, ಮಾನ, ಸ್ಥಿತಿಗನುಗುಣವಾಗಿ ಸಮಾಜದ ಒಂದು ವಿಶಿಷ್ಟ ವರ್ಗ ಅಥವಾ ಹಲವು ವರ್ಗಗಳಿಂದ ಕೂಡಿದ ಗುಂಪುಗಳು ಕ್ರಾಂತಿಗಳ ಮುಂಚೂಣಿಯಲ್ಲಿರುತ್ತವೆ.

ಇದುವರೆಗೆ ಕ್ರಾಂತಿಗಳ ಬಗ್ಗೆ ಹಲವು ಸಾಮಾನ್ಯ ಸಮಸ್ಯೆಗಳನ್ನು ವಿವೇಚಿಸಲಾಯಿತು. ಇನ್ನು ಆಧುನಿಕ ಯುಗದ ಇತಿಹಾಸದಲ್ಲಿ ಘಟಿಸಿದ ಕೆಲವು ಪ್ರಮುಖ ಕ್ರಾಂತಿಗಳೆನಿಸಿಕೊಂಡಿರುವ ೧೭೭೬ರ ಅಮೇರಿಕದ ಕ್ರಾಂತಿ (ಅಮೇರಿಕದ ಸ್ವಾತಂತ್ರ್ಯ ಸಮರ), ೧೭೮೯ರ ಫ್ರಾನ್ಸಿನ ಮಹಾಕ್ರಾಂತಿ, ೧೯೧೭ರ ರಷ್ಯದ ಕ್ರಾಂತಿಗಳಲ್ಲದೆ, ಇಂಗ್ಲಂಡಿನಲ್ಲಿ ಜರುಗಿದ ೧೬೮೮ರ ರಕ್ತರಹಿತ ಕ್ರಾಂತಿ ಮತ್ತು ಕೈಗಾರಿಕಾ ಕ್ರಾಂತಿಗಳನ್ನು ಸ್ಥೂಲವಾಗಿ ವಿವರಿಸಲಾಗುವುದು.

೧. ಅಮೇರಿಕದ ಕ್ರಾಂತಿ (೧೭೭೫–೮೩) :

ಕೊಲಂಬಸನು ಇಂದು ಉತ್ತರ ಅಮೇರಿಕವೆಂದು ಕರೆಯಲ್ಪಡುವ ಭೂಭಾಗವನ್ನು ಕಂಡುಹಿಡಿದ ನಂತರ ಅನೇಕ ಐರೋಪ್ಯರು ಅಲ್ಲಿ ಹೋಗಿ ನೆಲೆಸಿದರು. ಇವರಲ್ಲಿ ಇಂಗ್ಲಂಡಿನಿಂದ ವಲಸೆಹೋದವರು ಪ್ರಮುಖರು. ಅಲ್ಲಿ ಕಾಲಕ್ರಮೇಣ ವಸಾಹತುಗಳು ಸ್ಥಾಪಿತವಾಗಿ ಅವುಗಳ ಆಡಳಿತವು ಬ್ರಿಟಿಷ್ ಪಾರ್ಲಿಮೆಂಟಿನ ಅಧಿಕಾರಕ್ಕೆ ಒಳಪಟ್ಟಿತು. ಬ್ರಿಟಿಷ್ ಸರ್ಕಾರವು ಈ ವಸಾಹತುಗಳ ಬಗ್ಗೆ ತಳೆದ ನಿಲುಮೆಯಿಂದಾಗಿ ಅಮೇರಿಕದ ವಸಾಹತುಗಳು ಮತ್ತು ಬ್ರಿಟಿಷ್ ಸರಕಾರಗಳ ನಡುವೆ ಭಿನ್ನಾಭಿಪ್ರಾಯಗಳುಂಟಾಗಿ ಅವು ಕಾಲಕ್ರಮೇಣ ತೀಕ್ಷ್ಣವಾಗುತ್ತಾಹೋದವು. ಬ್ರಿಟಿಷ್ ಪಾರ್ಲಿಮೆಂಟಿನಿಂದ ಅಂಗೀಕೃತವಾದ "ಸಮುದ್ರಯಾನ ಕಾಯಿದೆ" (Navigation Act) ಯನ್ನು ವಸಾಹತುಗಳು ಮಾನ್ಯಮಾಡಲೇ ಇಲ್ಲ. ಕೊನೆಗೆ ೧೭೬೫ರಲ್ಲಿ ಅಂಗೀಕೃತವಾದ "ಸ್ಟ್ಯಾಂಪ್ ಕಾಯಿದೆ" (Stamp Act) ಯ ವಿರುದ್ಧ 'ಪ್ರಾತಿನಿಧ್ಯವಿಲ್ಲದೇ ಕರ ಹೇರಲಾಗದು' (No Taxation without Representation) ಎಂಬ ಚಳುವಳಿಯನ್ನು ಪ್ರಾರಂಭಿಸಿದರು. ೧೭೬೭ರ 'ಟೌನ್‌ಷೆಂಡ್ ಕಾಯಿದೆ'ಯ ನಂತರ ಅನೇಕ ವಿರೋಧಿ ಚಟುವಟಿಕೆಗಳು ಜರುಗಿ, ಇವುಗಳಲ್ಲಿ ೧೭೭೩ರ 'ಬೋಸ್ಟನ್ ಟೀ ಪಾರ್ಟಿ' ಪ್ರಮುಖವಾಗಿದ್ದು ಇಲ್ಲಿಂದ ಚಳುವಳಿಯು ಹಿಂಸಾತ್ಮಕವಾಗಿ

ಕೊನೆಗೆ ೧೭೭೬ರ ಜುಲೈ ೪ನೆಯ ದಿನಾಂಕದಂದು ಅಮೇರಿಕದ ಸ್ವಾತಂತ್ರ್ಯ ಘೋಷಣೆಯನ್ನು ಮಾಡಲಾಯಿತು. ಇದು ಮುಂದೆ ದೇಶದ ಸರಕಾರ ಮತ್ತು ವಸಾಹತುಗಳ ನಡುವಣ ಯುದ್ಧಕ್ಕೆ ನಾಂದಿಯಾಗಿ ಜಾರ್ಜ್ ವಾಷಿಂಗ್‌ಟನ್‌ನ ನಾಯಕತ್ವದಲ್ಲಿ ಅಮೇರಿಕದ ವಸಾಹತುಗಳು ತಮ್ಮ ಸ್ವಾತಂತ್ರ್ಯಕ್ಕಾಗಿ ಹೋರಾಡತೊಡಗಿದವು. ಈ ಸ್ವಾತಂತ್ರ್ಯಸಮರದಲ್ಲಿ ಸಾರಾಟೋಗಾ ಯುದ್ಧ (೧೭೭೭), ವ್ಯಾಲಿಫೋರ್ಜ್ ಕದನ, ಕ್ಯಾರೋಲಿನಾ ಕದನ (೧೭೮೦-೮೧) ಇವು ಪ್ರಮುಖವಾದವುಗಳು. ಫ್ರಾನ್ಸ್ ಸರಕಾರ ಮತ್ತು ಕ್ರಾಂತಿಕಾರಿಗಳಿಂದ ಇದಕ್ಕೆ ಸಹಾಯ ಮತ್ತು ಸ್ಫೂರ್ತಿ ಒದಗಿತು. ಕೊನೆಗೆ ಯಾರ್ಕ್‌ಟೌನ್ ಕದನ (೧೭೮೧)ದಲ್ಲಿ ಕಾರನ್‌ವಾಲೀಸನು ಶರಣಾಗತನಾದಾಗ ಈ ಯುದ್ಧವು ಕೊನೆಗೊಂಡಿತು. ೧೭೮೩ರ ಪ್ಯಾರಿಸ್ ಒಪ್ಪಂದದಲ್ಲಿ ಅಮೇರಿಕವನ್ನು ಪ್ರತ್ಯೇಕ ರಾಷ್ಟ್ರವೆಂದು ಮಾನ್ಯಮಾಡಲಾಯಿತು.

ಅಮೇರಿಕದ ಕ್ರಾಂತಿಯು ಪ್ರಾರಂಭದಲ್ಲಿ ಯಾವ ಸೈದ್ಧಾಂತಿಕ ತಳಹದಿಯನ್ನೂ ಹೊಂದಿರಲಿಲ್ಲ. ಅದು ಬ್ರಿಟಿಷ್ ಸರಕಾರವು ಹೇರುತ್ತಿದ್ದ ತೆರಿಗೆಗಳ ವಿರುದ್ಧ ರೂಪಿತವಾದ ಚಳುವಳಿಯಾಗಿ ಪ್ರಾರಂಭವಾಗಿ ಕೊನೆಗೆ ಆ ದೇಶದಿಂದ ಸಿಡಿದು ಸ್ವತಂತ್ರ ರಾಷ್ಟ್ರವಾಯಿತು. ಈ ಕ್ರಾಂತಿಯ ಮೂಲ ೧೬೮೮ ರಲ್ಲಿ ಇಂಗ್ಲಂಡಿನಲ್ಲಿ ಜರುಗಿದ ರಕ್ತರಹಿತ ಕ್ರಾಂತಿಯಲ್ಲಿ ಅಡಗಿತ್ತೆಂದು ಹೇಳಬಹುದು. ಅಮೇರಿಕದ ಕ್ರಾಂತಿಯ ನಾಯಕರುಗಳು ಸಂಪ್ರದಾಯವಾದಿಗಳಾಗಿದ್ದು ಅವರು ಕೇವಲ ಕಾಲಸ್ಫೂರ್ತಿಯಿಂದ ಮುನ್ನಡೆದರು. ಆ ಕಾಲಕ್ಕೆ ಇಟಲಿಯ ತತ್ವಜ್ಞಾನಿ ಮಾಂಟೆಸ್ಕ್ಯೋವಿನ ವಿಚಾರಗಳು ಅಮೇರಿಕದಲ್ಲಿ ಪ್ರಚಲಿತವಿದ್ದು, ಫ್ರಾನ್ಸ್‌ದೇಶದ ರೂಸೋನ ವಿಚಾರಗಳೂ ತಕ್ಕಮಟ್ಟಿಗೆ ಸ್ಫೂರ್ತಿಯನ್ನು ನೀಡಿದವೆನ್ನಬಹುದು. ಅಲ್ಲಿಯ ಕ್ರಾಂತಿಕಾರಿಗಳು ತಮ್ಮ ಸಂವೈಧಾನಿಕ ಹಕ್ಕುಗಳನ್ನು ಮುಂದುಮಾಡಿದರು. ಅದರಂಗವಾಗಿ ಅವರು : (i) ಆಸ್ತಿಯ ಬಗೆಗಿನ ಮಾನವರ ಹಕ್ಕು (ii) ಪ್ರಾತಿನಿಧ್ಯವಿಲ್ಲದೆ ಕರಹೇರುವುದು ಮತ್ತು (iii) ಕಾನೂನು ಮಾಡುವ ಅಧಿಕಾರವಿಲ್ಲವೆಂಬ ತತ್ವಗಳನ್ನು ಪ್ರತಿಪಾದಿಸಿದರು. ಕ್ರಾಂತಿಯ ನಾಯಕರುಗಳಲ್ಲಿ ಭಿನ್ನಾಭಿಪ್ರಾಯಗಳಿದ್ದರೂ ಸಹ ಸ್ಥೂಲವಾಗಿ ಅವರೆಲ್ಲರೂ ಈ ತತ್ವಗಳನ್ನು ಮಾನ್ಯಮಾಡಿದ್ದರು ಮತ್ತು ಜಾನ್‌ಲಾಕ್‌ನ ಸಾಮಾಜಿಕ ಸಿದ್ಧಾಂತ ತತ್ವವನ್ನು ಮೂಲತತ್ವವನ್ನಾಗಿ ಅಳವಡಿಸಿಕೊಂಡಿದ್ದರು. ಈ ತತ್ವಗಳನ್ನೊಳಗೊಂಡ ಸ್ವಾತಂತ್ರ್ಯಘೋಷಣೆ (Declaration of Independence) ಯ ಮೂಲಕ ಅಮೇರಿಕದ ವಸಾಹತುಗಳು ಬ್ರಿಟಿಷ್ ಸರಕಾರದ ಆಳಿಕೆಯಿಂದ ಮುಕ್ತವಾಗಿ ಸ್ವತಂತ್ರ ರಾಷ್ಟ್ರವಾಗುವ ದಿಸೆಯಲ್ಲಿ ಹೆಜ್ಜೆ ಇಟ್ಟವು. ಸ್ವರೂಪದಲ್ಲಿ ಈ

ಕ್ರಾಂತಿಯು ರಾಜಕೀಯವಾಗಿದ್ದು ಸ್ವಾತಂತ್ರ್ಯ, ಸಮಾನ ಹಕ್ಕುಗಳು ಮತ್ತು ಪ್ರಜಾಪ್ರಭುತ್ವ ತತ್ವದನ್ವಯ ಸರಕಾರ ರಚನೆ ಮುಂತಾದ ವಿಚಾರಗಳಿಗೆ ನಾಂದಿಯಾಯಿತು. ಸರಕಾರದ ಅಧಿಕಾರದ ಮೂಲ ಜನತೆಯೇ ಆಗಿದ್ದು ಜನತೆಯಿಂದ ರಚಿತವಾದ ಹಾಗೂ ಮಾನ್ಯವಾದ ಸಂವಿಧಾನದನ್ವಯ ಸರಕಾರ ರಚಿತವಾಗಬೇಕೆಂಬ ಪರಿಪಾಠವೂ ಈ ಕ್ರಾಂತಿಯಿಂದಲೇ ಉಗಮವಾಗಿ ಅಮೇರಿಕ ಸಂಯುಕ್ತಸಂಸ್ಥಾನಗಳ ಸಂವಿಧಾನ (೧೭೮೭) ವು ಪ್ರಥಮ ಲಿಖಿತ ಸಂವಿಧಾನವಾಗಿ ಉದಯಿಸಿತು.

೨. ಫ್ರಾನ್ಸಿನ ಮಹಾಕ್ರಾಂತಿ (೧೭೮೯)

ಹದಿನೆಂಟನೆಯ ಶತಮಾನದ ಕೊನೆಯಭಾಗದಲ್ಲಿ ಫ್ರಾನ್ಸ್‌ನಲ್ಲಿ ರಾಜಪ್ರಭುತ್ವದ ವಿರುದ್ಧ ನಡೆದ ಕ್ರಾಂತಿಯು ಜಗತ್ಪ್ರಸಿದ್ಧ ಕ್ರಾಂತಿ. ಈ ಕ್ರಾಂತಿಯ ಕಾರಣಗಳ ಬಗೆಗೆ ಚರಿತ್ರಕಾರರಲ್ಲಿ ಒಮ್ಮತವಿಲ್ಲ. ಇದು ಹದಿನೆಂಟನೆಯ ಶತಮಾನದಲ್ಲಿ ಪ್ರಗತಿಪರ ಜ್ಞಾನೋದಯ ಚಳುವಳಿಯಿಂದ ಉದ್ಭವಿಸಿದ ಒಂದು ಬೌದ್ಧಿಕ ಕ್ರಾಂತಿ ಎಂದು ಕೆಲವರು ತಿಳಿಸಿದ್ದಾರೆ; ಇತರರು ಇದು ಊಳಿಗಮಾನ್ಯ ಪದ್ಧತಿಯ ರಾಜಪ್ರಭುತ್ವದ ದಬ್ಬಾಳಿಕೆಯ ವಿರುದ್ಧ ಬಡಜನತೆಯು ಎಬ್ಬಿಸಿದ ದಂಗೆ ಎಂದಿದ್ದಾರೆ. ಇದು ಹೊಸದಾಗಿ ಉದಿಸಿದ್ದ ಬಂಡವಾಳಶಾಹಿ ವರ್ಗವು ಹಳೆಯ ಆರ್ಥಿಕ ವ್ಯವಸ್ಥೆಯ ವಿರುದ್ಧ ಹೂಡಿದ ಚಳುವಳಿ ಎಂದು ಸಹ ಹೇಳಲಾಗಿದೆ. ಒಟ್ಟಿನಲ್ಲಿ ಈ ಕ್ರಾಂತಿಯು ಆ ದೇಶದಲ್ಲಿ ಆಡಳಿತ ನಡೆಸುತ್ತಿದ್ದ ರಾಜರ ಮತ್ತು ಅವರ ಅನುಯಾಯಿಗಳ ಅತ್ಯಾಚಾರಗಳ ವಿರುದ್ಧ ನಡೆದ ಜನತೆಯ ಚಳುವಳಿಯಾಗಿದ್ದಿತೆಂದು ಹೇಳಬಹುದು. ಫ್ರಾನ್ಸ್‌ದೇಶದ ಖಜಾನೆಯು ಬರಿದಾಗಿ ದಿವಾಳಿ ಸ್ಥಿತಿಗೆ ಬಂದದ್ದು ಈ ಕ್ರಿಯೆಗೆ ಮೂಲಕಾರಣವೆನ್ನಬಹುದು. ೧೭ ಮತ್ತು ೧೮ನೇ ಶತಮಾನಗಳ ಯುದ್ಧಗಳು, ಕರಭಾರದ ಅಸಮಾನತೆ, ಆರ್ಥಿಕ ಅಶಿಸ್ತು ಮತ್ತು ದುಸ್ಥಿತಿ ಹಾಗೂ ಅಮೇರಿಕದ ಸ್ವಾತಂತ್ರ್ಯಯುದ್ಧದಲ್ಲಿ ಹಸ್ತಕ್ಷೇಪ ಮುಂತಾದವುಗಳಿಂದಾಗಿ ರಾಷ್ಟ್ರವು ದೊಡ್ಡ ಮೊತ್ತದ ಋಣಭಾರವನ್ನು ಹೊರಬೇಕಾಯಿತು. ಈ ಭಾರವನ್ನು ತಗ್ಗಿಸಲು ಅಂದು ಆಡಳಿತದ ಪ್ರಮುಖರೆನಿಸಿಕೊಂಡಿದ್ದ ನೆಕ್ಕರ್, ಕ್ಯಾಲೋನೆ ಇವರಿಗೆ ಸಾಧ್ಯವಾಗಲಿಲ್ಲ. ಕೊನೆಗೆ ಹದಿನಾರನೆಯ ಲೂಯಿಯು ದೇಶದ ಪ್ರಮುಖ ಸಂಸ್ಥೆಯಾಗಿದ್ದ 'ಸ್ಟೇಟ್ಸ್ ಜನರಲ್'ನ ಅಧಿವೇಶನವನ್ನು ಕರೆದನು (ಮೇ ೫, ೧೭೮೯). ವರ್ಸೇಲ್ಸ್‌ನಲ್ಲಿ ಸಮಾವೇಶಗೊಂಡ ಸ್ಟೇಟ್ಸ್ ಜನರಲ್ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಪರಿಹಾರವನ್ನು ಕಂಡುಹಿಡಿಯಬೇಕಾಗಿದ್ದಿತು. ಆದರೆ ಜನಸಾಮಾನ್ಯರ ಪ್ರತಿ

ನಿಧಿಗಳು ಮತ್ತು ಕೆಲವು ಧಾರ್ಮಿಕ ವರ್ಗದ ಸದಸ್ಯರುಗಳು ಸೇರಿ ಪರಿಣಾಮ ಕಾರಿ ಹಾಗೂ ಕ್ರಾಂತಿಕಾರಿ ರಾಜಕೀಯ ಮತ್ತು ಸಾಮಾಜಿಕ ಸುಧಾರಣೆಗಳನ್ನು ಮಾಡಬೇಕೆಂದು ಒತ್ತಾಯಪಡಿಸಿದರು. ಇದು ಈ ಸಭೆಯ ಅಧಿಕಾರವನ್ನು ಮೀರಿದ ಬೇಡಿಕೆಯಾಗಿತ್ತು. ಆದರೂ ಅವರು ರಾಜನ ಅಧಿಕಾರವನ್ನು ಉಲ್ಲಂಘಿಸಿ ತಾವೇ ಒಂದು 'ರಾಷ್ಟ್ರೀಯ ಅಸೆಂಬ್ಲಿ'ಯೆಂದು ಘೋಷಿಸಿ ಸಂವಿಧಾನ ಸಿದ್ಧವಾಗುವವರೆಗೂ ಈ ಸಭೆಯು ಪ್ರತ್ಯೇಕವಾಗಿ ಸೇರತಕ್ಕದ್ದೆಂದು ಸಾರಿದರು. ರಾಜನು ಈ ಒತ್ತಾಯಕ್ಕೆ ಮಣಿದನು. ಆದರೆ ನೆಕ್ಕರ್‌ನನ್ನು ಪದಚ್ಯುತಗೊಳಿಸಿದ್ದರ ವಿರುದ್ಧ ಜನತೆ ದಂಗೆ ಎದ್ದು ಬ್ಯಾಸ್ಟಿಲನ್ನು ಮುತ್ತಿದರು (ಜುಲೈ ೧೪, ೧೭೮೯). ರಕ್ತಪಾತವನ್ನು ತಡೆಯಲು ರಾಜನು ನೆಕ್ಕರನನ್ನು ಪುನಃ ನೇಮಿಸಿದನು. ರಾಷ್ಟ್ರೀಯ ಆಸೆಂಬ್ಲಿಯು ಊಳಿಗಮಾನ್ಯ ಹಕ್ಕುಗಳನ್ನೆಲ್ಲಾ ಕಿತ್ತುಹಾಕುವ ನಿರ್ಣಯ ಮಾಡಿತು. ಈ ಕ್ರಾಂತಿಕಾರಕ ಬದಲಾವಣೆಗಳ ವಿರುದ್ಧ ಪ್ರತಿಕ್ರಾಂತಿಯು ಸಂಭವಿಸಲಿದೆ ಎಂಬ ವದಂತಿ ಹಬ್ಬಿತು. ಉಗ್ರಗಾಮಿಗಳು ಅಕ್ಟೋಬರ್ ೫, ೧೭೮೯ರಂದು ವರ್ಸೆಲ್‌ಗೆ ಹೋಗಿ ಅಲ್ಲಿದ್ದ ರಾಜಮನೆತನದವರನ್ನು ಮತ್ತು ರಾಷ್ಟ್ರೀಯ ಅಸೆಂಬ್ಲಿಯನ್ನು ಪ್ಯಾರಿಸ್ಸಿಗೆ ರವಾನಿಸಿದರು. ಈ ಅಸೆಂಬ್ಲಿಯು ಘಟನಾಸಭೆಯಾಗಿ 'ಮಾನವನ ಮೂಲಭೂತ ಹಕ್ಕುಗಳ ಘೋಷಣೆ'ಯನ್ನಳವಡಿಸಿಕೊಂಡ ಹೊಸ ಸಂವಿಧಾನವನ್ನು ರಚಿಸಿತು (೧೭೯೧). ಈ ಸಮಯದಲ್ಲಿ ದೊರೆಯು ದೇಶದಿಂದ ಪಲಾಯನಮಾಡಲು ಪ್ರಯತ್ನಿಸಿದಾಗ ದಾರಿಯಲ್ಲಿ ಸಿಕ್ಕಿಬಿದ್ದನು. ದೊರೆಯನ್ನು ಪ್ಯಾರಿಸ್ಸಿಗೆ ತರಲಾಯಿತು. ದೊರೆಯು ಹೊಸ ಸಂವಿಧಾನಕ್ಕೆ ಒಪ್ಪಿಗೆ ಇತ್ತನು. ನಂತರ ರಾಷ್ಟ್ರೀಯ ಅಸೆಂಬ್ಲಿಯಲ್ಲಿ ಜಿರೋಂಡಿಸ್ಟರು ಮತ್ತು ಜಾಕೋಬೀನರು ಎಂಬ ಎರಡು ಗುಂಪುಗಳಾದವು. 'ಸ್ವಾತಂತ್ರ್ಯ', 'ಸಮಾನತೆ', 'ಸಹಬಂಧುತ್ವ' ಇವು ಮೂಲಘೋಷಣೆಗಳಾದವು. ೧೭೯೨ರಲ್ಲಿ ಆಸ್ಟ್ರೀಯದ ವಿರುದ್ಧ ಸಾರಲಾದ ಯುದ್ಧದೊಡನೆ ಫ್ರಾನ್ಸಿನ ಕ್ರಾಂತಿಕಾರಿ ಯುದ್ಧಗಳು ಪ್ರಾರಂಭವಾದವು. ಈ ಸಂದರ್ಭದಲ್ಲಿ ರಾಜಮನೆತನದವರು ದೇಶದ್ರೋಹಮಾಡುತ್ತಿರುವರೆಂಬ ಸಂಶಯದಮೇಲೆ ಜನರು ಗುಂಪುಗುಂಪಾಗಿ 'ಟುಲೇರಿ' ಅರಮನೆಗೆ ಮುತ್ತಿಗೆಹಾಕಿ ಸ್ವಿಸ್ ರಕ್ಷಣಾದಳದವರನ್ನು ಕೊಂದು ಹಾಕಿದಾಗ (೧೦–೮–೧೭೯೨), ಪೊಲೀಸ್ ಅಧಿಕಾರವನ್ನು ಪ್ಯಾರಿಸ್ ಕಮ್ಯೂನ್ ತನ್ನ ಕಡೆಗೆ ತೆಗೆದುಕೊಂಡಿತು. ಅಸೆಂಬ್ಲಿಯು ರಾಜನನ್ನು ಪದಚ್ಯುತಗೊಳಿಸಿ ರಾಷ್ಟ್ರೀಯ ಸಮಿತಿಗೆ ಹೊಸ ಚುನಾವಣೆಗಳು ನಡೆಯಬೇಕೆಂದು ಸಾರಿತು. ಸೆಪ್ಟೆಂಬರ್ ತಿಂಗಳಲ್ಲಿ ಉದ್ರಿಕ್ತಜನರಿಂದ ರಾಜಮನೆತನದ ಕೈದಿಗಳ ಸಾಮೂಹಿಕ ಕೊಲೆಯಾಯಿತು. ಹೊಸ ರಾಷ್ಟ್ರೀಯ ಸಮಿತಿ (National Convention)

ಸೆಪ್ಟೆಂಬರ್ ೨೧ ರಂದು ರಾಜಪ್ರಭುತ್ವವನ್ನು ಅಳಿಸಿ ಮೊದಲನೆಯ ಫ್ರೆಂಚ್ ಗಣರಾಜ್ಯವನ್ನು ಸ್ಥಾಪಿಸಿತು. ದೊರೆ ೧೬ನೆಯ ಲೂಯಿಯನ್ನು ದೇಶದ್ರೋಹದ ಆಪಾದನೆಗಾಗಿ ೧೭೯೩ರ ಜನವರಿಯಲ್ಲಿ ಗಲ್ಲಿಗೇರಿಸಲಾಯಿತು. ಇದರ ವಿರುದ್ಧ ಲೂಯಿಯ ಅನುಯಾಯಿಗಳು ಹಲವೆಡೆ ದಂಗೆ ಎದ್ದರು. ಇದನ್ನು ಹತ್ತಿಕ್ಕಲು ಕ್ರೂರ ಆಳ್ವಿಕೆಯ ಕ್ರಮವನ್ನು (Reign of Terror) ತೆಗೆದುಕೊಳ್ಳಲಾಯಿತು. ಉಗ್ರಗಾಮಿ ರಾಬ್ಸ್‌ಪಿಯರನ ಕೈ ಮೇಲಾಯಿತು. ಈತನ ಕ್ರೂರ ಆಳ್ವಿಕೆಯ ವಿರುದ್ಧ ದಂಗೆ ಎದ್ದು ಆತನನ್ನು ಕೊಲ್ಲಲಾಯಿತು (ಜುಲೈ ೨೭, ೧೭೯೪). ೧೭೯೫ರಲ್ಲಿ ಹೊಸ ಸಂವಿಧಾನವನ್ನು ಜಾರಿಗೆ ತರಲಾಯಿತು. ಅದರನ್ವಯ ಸ್ಥಾಪಿತವಾಗಿದ್ದ ನಿರ್ದೇಶನಮಂಡಲಿಯ ಆಡಳಿತದ ಲಂಚಗುಳಿತನ, ಅಂತಃಕಲಹ, ಹಣದುಬ್ಬರದಿಂದ ಬೇಸತ್ತು, ನವೆಂಬರ್ ೧೯, ೧೭೯೯ರಂದು ನೆಪೋಲಿಯನ್ ಬೋನಾಪಾರ್ಟನು ಕ್ಷಿಪ್ರ ಕ್ರಾಂತಿಯನ್ನು ನಡೆಸಿ ತಾನೇ ಅಧಿಕಾರಕ್ಕೆ ಬಂದನು. ಫ್ರಾನ್ಸಿನ ಕ್ರಾಂತಿ ಮತ್ತು ನೆಪೋಲಿಯನ್ನನ ಯುದ್ಧಗಳ ಫಲವಾಗಿ ಐರೋಪ್ಯ ರಾಷ್ಟ್ರಗಳಲ್ಲಿ ಮಧ್ಯಕಾಲೀನ ಸಮಾಜವ್ಯವಸ್ಥೆಯು ನಿರ್ಮೂಲವಾಗಿ ಹತ್ತೊಂಬತ್ತನೆಯ ಶತಮಾನದ ಉದಾತ್ತ ಪ್ರಗತಿಪರ ಪದ್ಧತಿಗೆ ಅನುವಾಯಿತು. ರೂಸೋ, ಪೇನ್, ವಾಲ್ಟೇರ್ ಮತ್ತು ಮಾಂಟೆಸ್ಕ್ಯೂ ಇವರ ಕ್ರಾಂತಿಕಾರಿ ವಿಚಾರಧಾರೆಗಳು ಫ್ರಾನ್ಸಿನ ಕ್ರಾಂತಿಯನ್ನು ಚೇತನಗೊಳಿಸಲು ಸಹಾಯಕವಾದವು. ಅಬೆಸೇ (Abbesies) ಮತ್ತು ಕಂಡಾರ್ಸೆ (Condorcet) ಇವರುಗಳೂ ಸಹ ತಮ್ಮದೇ ಆದ ರೀತಿಯಲ್ಲಿ ಈ ಕ್ರಾಂತಿಗೆ ನೆರವಾದರು.

೩. ರಷ್ಯಾದ ಕ್ರಾಂತಿ (೧೯೧೭)

ರಷ್ಯಾದಲ್ಲಿ ಜರುಗಿದ ಕ್ರಾಂತಿಯು ಮೂರುಹಂತಗಳಲ್ಲಿ ಸಂಭವಿಸಿತು. ೧೯೦೫ರಲ್ಲಿ, ೧೯೧೭ರ ಫೆಬ್ರುವರಿಯಲ್ಲಿ ಹಾಗೂ ಅಕ್ಟೋಬರ್‌ನಲ್ಲಿ ಕ್ರಾಂತಿ ಸಂಭವಿಸಿತು. ಈ ಕ್ರಿಯೆಗಳಿಗೆ ಮುಖ್ಯವಾಗಿ ಆ ದೇಶದಲ್ಲಿ ಝಾರ್ ದೊರೆಗಳ ಆಳ್ವಿಕೆಯ ಕಾಲದಲ್ಲಿ ಜನತೆಯ ಶೋಷಣೆಯೇ ಕಾರಣವೆನ್ನಬಹುದು. ೧೯೦೫ರಲ್ಲಿ ರಷ್ಯ ಮತ್ತು ಜಪಾನ್‌ಗಳ ನಡುವೆ ನಡೆದಿದ್ದ ಯುದ್ಧ ಮತ್ತು ೧೯೧೪ರಲ್ಲಿ ಮೊದಲನೆಯ ಜಾಗತಿಕ ಯುದ್ಧದಲ್ಲಿ ರಷ್ಯ ಅನುಭವಿಸಿದ ಸೋಲುಗಳಿಂದ ಈ ಕ್ರಾಂತಿಗಳು ಸಂಭವಿಸಿದವು.

ಭೂರಹಿತ ರೈತರು, ಕಾರ್ಮಿಕರು, ಸೈನ್ಯದ ಕಿರಿಯ ಅಧಿಕಾರಿಗಳು, ನಿರಾಶೆಗೊಂಡ ಬುದ್ಧಿಜೀವಿಗಳು, ದಮನಕ್ಕೊಳಗಾಗಿದ್ದ ಧಾರ್ಮಿಕ ಹಾಗೂ

ರಾಷ್ಟ್ರೀಯ ಅಲ್ಪಸಂಖ್ಯಾಕರೂ ಅಲ್ಲದೆ ಮಧ್ಯಮವರ್ಗದ ವ್ಯಾಪಾರಸ್ಥರೂ ಶ್ರೀಮಂತರೂ ಕೂಡ ಝಾರ್ ದೊರೆಗಳ ನಿರಂಕುಶಾಡಳಿತಕ್ಕೆ ಬೇಸರಗೊಂಡಿದ್ದರು. ಈ ಎಲ್ಲಾ ವರ್ಗಗಳ ಜನರು ಝಾರ್ ಆಡಳಿತದ ವಿರುದ್ಧ ದಂಗೆ ಏಳಲು ಏನಾದರೂ ನೆಪಕ್ಕಾಗಿ ಕಾಯುತ್ತಿದ್ದರು. ಯುದ್ಧಗಳಲ್ಲುಂಟಾದ ಸೋಲು ಮತ್ತು ಅವುಗಳಿಂದುಂಟಾದ ಅಶಾಂತತೆಯನ್ನು ಈ ಜನತೆ ಉಪಯೋಗಿಸಿಕೊಂಡಿತು. ೧೯೦೫ರಲ್ಲಿ ಅನೇಕ ಮುಷ್ಕರಗಳು ದಂಗೆಗಳು ಸಂಭವಿಸಿದವು. ಇವುಗಳ ಫಲವಾಗಿ ಜನತೆಯ ನಾಗರಿಕ ಹಕ್ಕುಗಳನ್ನು ಮಾನ್ಯಮಾಡಲಾಯಿತು ಮತ್ತು ಪಾರ್ಲಿಮೆಂಟನ್ನು (ಡುಮಾ) ಸ್ಥಾಪಿಸಲಾಯಿತು. ಆದರೆ ಎಲ್ಲಾ ಸುಧಾರಣೆಗಳನ್ನು ಸ್ಟೋಲಿಪಿನ್ ಮೊಟಕುಗೊಳಿಸಿದನು. ನಂತರ ಎರಡನೆಯ ನಿಕೋಲಸ್‌ನ ಪ್ರತಿಗಾಮಿ ನೀತಿಯಿಂದ ಬೇಸತ್ತ ಜನರು ೧೯೧೭ರ ಮಾರ್ಚ್ (ಹಳೆಯ ಪಂಚಾಂಗದಂತೆ ಫೆಬ್ರುವರಿ) ತಿಂಗಳಲ್ಲಿ ಪೆಟ್ರೋಗ್ರಾಡ್‌ನಲ್ಲಿ ಮುಷ್ಕರಹೂಡಿದ್ದ ಕಾರ್ಮಿಕರು ರಾಜಧಾನಿಯನ್ನು ಮುತ್ತಿದರು. ಚಕ್ರವರ್ತಿಯು ಮಾರ್ಚ್ ೧೫ರಂದು ಅಧಿಕಾರ ತ್ಯಜಿಸಿದನು.

ಯುದ್ಧವನ್ನು ಮುಂದುವರಿಸುವ ಪ್ರಶ್ನೆಯಬಗ್ಗೆ ಭಿನ್ನಾಭಿಪ್ರಾಯಗಳುಂಟಾಗಿ ಕಾರ್ಮಿಕರ, ರೈತರ ಮತ್ತು ಸೈನಿಕರ ಸಮಿತಿಗಳು ಅದರಲ್ಲಿಯೂ ಲೆನಿನ್‌ರವರ ನಾಯಕತ್ವದಲ್ಲಿನ ಬೊಲ್ಶೆವಿಕ್‌ರು ಯುದ್ಧವನ್ನು ವಿರೋಧಿಸುತ್ತಾ ಶಾಂತಿ ಸ್ಥಾಪನೆಯಾಗಬೇಕೆಂದು ಪ್ರತಿಪಾದಿಸಿದರು. ಬೊಲ್ಶೆವಿಕ್‌ರ ಸಂಖ್ಯೆ ಮೆನ್ಶೆವಿಕ್‌ರಿಗಿಂತ ಕಡಿಮೆ ಇದ್ದುದರಿಂದ ಲೆನಿನನು ಜುಲೈ ತಿಂಗಳಲ್ಲಿ ಪೆಟ್ರೋಗ್ರಾಡ್‌ನಲ್ಲಿ ಎಬ್ಬಿಸಿದ ದಂಗೆ ವಿಫಲವಾಯಿತು. ನಂತರ ಕೆರೆನ್‌ಸ್ಕಿ ಅಧಿಕಾರಕ್ಕೆ ಬಂದನು. ಈತನ ಅನಿರ್ದಿಷ್ಟ ನೀತಿಯಿಂದಾಗಿ ನವೆಂಬರ್ ೭, ೧೯೧೭, (ಹಳೆಯ ಪಂಚಾಂಗದಂತೆ ಅಕ್ಟೋಬರ್) ರಂದು ಬೊಲ್ಶೆವಿಕ್‌ರು ಅಧಿಕಾರವನ್ನು ಕಿತ್ತುಕೊಂಡರು. ಲೆನಿನರ ಅಧ್ಯಕ್ಷತೆಯಲ್ಲಿ ಜನತಾಸಮಿತಿಯು ಅಧಿಕಾರಕ್ಕೆ ಬಂದಿತು. ಈ ಸಮಿತಿಯು ಖಾಸಗಿ ಭೂ ಒಡೆತನವನ್ನು ನಿರ್ನಾಮಮಾಡಿ 'ಕಾರ್ಮಿಕರ ಸರ್ವಾಧಿಕಾರ'ವನ್ನು ಎಂದರೆ ವಸ್ತುತಃ ಕಮ್ಯುನಿಸ್ಟ್ ಪಕ್ಷದ ಆಡಳಿತವನ್ನು ಸ್ಥಾಪಿಸಿತು. ನಂತರವೂ ಕೂಡ ಪ್ರತಿ-ಕ್ರಾಂತಿಯ ಭಯವಿದ್ದುದರಿಂದ ವಿರೋಧಿಗಳೆಲ್ಲರನ್ನೂ ನಿರ್ದಾಕ್ಷಿಣ್ಯವಾಗಿ ಹತ್ತಿಕ್ಕಲಾಯಿತು. ಈ ಕ್ರಾಂತಿಯಿಂದ ರಷ್ಯದಲ್ಲಿ ಇಂದು ಸಮತಾವಾದಿ ಸಮಾಜ ಅಸ್ತಿತ್ವಕ್ಕೆ ಬಂದಿದೆ.

೪. ಕೈಗಾರಿಕಾ ಕ್ರಾಂತಿ (೧೭೫೧–೧೮೫೦)

ಕೈಗಾರಿಕಾ ಕ್ರಾಂತಿಯು ೧೮–೧೯ನೆಯ ಶತಮಾನಗಳಲ್ಲಿ ಸುಮಾರು ಒಂದು ಶತಮಾನದ ಅವಧಿಯಲ್ಲಿ ಯುರೋಪಿನಲ್ಲಿ ಅದರಲ್ಲಿಯೂ ಇಂಗ್ಲಂಡಿನಲ್ಲಿ ಆರ್ಥಿಕ

ಹಾಗೂ ಔದ್ಯೋಗಿಕಕ್ಷೇತ್ರದಲ್ಲಿ ಉಂಟಾದ ಕ್ರಾಂತಿಕಾರಿ ಬದಲಾವಣೆಗಳಿಗೆ ಸಂಬಂಧಿಸಿದ್ದಾಗಿದೆ. ಈ ಅವಧಿಯಲ್ಲಿ ಕೃಷಿಪ್ರಧಾನ ಮತ್ತು ವಾಣಿಜ್ಯಪ್ರಧಾನ ಸಮಾಜವನ್ನು ಆಧುನಿಕ ಔದ್ಯೋಗಿಕ ಸಮಾಜವಾಗಿ ಪರಿವರ್ತಿಸುವಂತಹ ಬದಲಾವಣೆಗಳುಂಟಾದವು. ೧೫ ಮತ್ತು ೧೬ನೆಯ ಶತಮಾನಗಳಲ್ಲಿ ಸಮುದ್ರಯಾನದಿಂದ ಜಾಗತಿಕ ವಾಣಿಜ್ಯಸಂಬಂಧಗಳು ಬೆಳೆದವು. ೧೬ನೆಯ ಶತಮಾನದಲ್ಲಿ ಬಂಡವಾಳಶಾಹಿ ಪದ್ಧತಿ ರೂಪುಗೊಂಡಿತು. ಮರದ ಯಂತ್ರಗಳನ್ನು ತಯಾರಿಸಿ ನೀರು ಮತ್ತು ಗಾಳಿ ಶಕ್ತಿಯಿಂದ ಅವುಗಳನ್ನು ನಡೆಸಲಾಗುತ್ತಿತ್ತು. ೧೮ನೆಯ ಶತಮಾನದ ಅನೇಕ ವೈಜ್ಞಾನಿಕ ಆವಿಷ್ಕಾರಗಳು ಔದ್ಯೋಗಿಕ ಕ್ರಾಂತಿಗೆ ನೆರವಾದವು. ಜೇಮ್ಸ್‌ವ್ಯಾಟ್ ಎಂಬುವನು ಯಂತ್ರಗಳನ್ನು ನಡೆಸಲು ಆವಿಶಕ್ತಿಯನ್ನು ಕಂಡುಹಿಡಿದನು. ೧೭೬೯ರಲ್ಲಿ ಆರ್ಕ್‌ರೈಟ್ ಎಂಬವನು ನೂಲುವ ಯಂತ್ರವನ್ನು ಕಂಡುಹಿಡಿದನು. ೧೭೮೫ರಲ್ಲಿ ಕಾರ್ಟ್‌ರೈಟ್‌ನು ಪಾವರ್‌ಮಗ್ಗವನ್ನು ಕಂಡುಹಿಡಿದನು. ಕಲ್ಲಿದ್ದಲು ಮತ್ತು ಉಕ್ಕಿನ ಉಪಯೋಗ ಹೆಚ್ಚಾಗುತ್ತಾ ಬಂದು ದೊಡ್ಡ ದೊಡ್ಡ ಕಾರಖಾನೆಗಳು ಸ್ಥಾಪಿತವಾದವು. ಇದರಿಂದ ಸಿದ್ಧವಸ್ತುಗಳ ಉತ್ಪಾದನೆಯನ್ನು ಬೃಹತ್‌ಪ್ರಮಾಣದಲ್ಲಿ ಮಾಡಲು ಸಾಧ್ಯವಾಯಿತು. ಕಾರಖಾನೆಗಳ ಸುತ್ತ ನಗರಗಳು ಮತ್ತು ರೈಲುಮಾರ್ಗಗಳು ರಚನೆಯಾದವು. ಒಂದಕ್ಕೊಂದು ಪೂರಕವಾಗಿ ಬೆಳೆದುಬಂದ ಈ ಬದಲಾವಣೆಗಳಿಂದಾಗಿ ಸಮಾಜದ ರೂಪರೇಷೆಗಳು, ಜನಜೀವನಪದ್ಧತಿ ಮತ್ತು ಉತ್ಪಾದನೆಯ ರೀತಿಯಲ್ಲಿ ಕ್ರಾಂತಿಕಾರಕ ಬದಲಾವಣೆಗಳಾಗಿದ್ದರಿಂದ ಈ ಬದಲಾವಣೆಗಳನ್ನು ಕೈಗಾರಿಕಾ ಅಥವಾ ಔದ್ಯಮಿಕ ಕ್ರಾಂತಿ ಎಂದು ಕರೆಯಲಾಗಿದೆ.

೫. ಸಾಂಸ್ಕೃತಿಕ ಕ್ರಾಂತಿ

ಚೀನಾದಲ್ಲಿ ಕಮ್ಯುನಿಸ್ಟ್‌ಪಕ್ಷ ೧೯೪೯ರಲ್ಲಿ ಅಧಿಕಾರಕ್ಕೆ ಬಂದನಂತರ ಮಾವೋತ್ಸೆ ತುಂಗರ ನಾಯಕತ್ವದಲ್ಲಿ ಅನೇಕ ಸುಧಾರಣೆಗಳನ್ನು ಜಾರಿಗೆತರುವ ಪ್ರಯತ್ನ ನಡೆಯಿತು. ಅಂತಹ ಪ್ರಯತ್ನಗಳಲ್ಲಿ ಸಾಂಸ್ಕೃತಿಕ ಸುಧಾರಣೆಗಳನ್ನು ಮಾಡುವ ಪ್ರಯತ್ನವೂ ಒಂದಾಗಿದೆ. ಮಾವೋತ್ಸೆ ತುಂಗರ ವಿಚಾರಸರಣಿಯನ್ವಯವೇ ಚೀನಾದಲ್ಲಿ ಸಮಾಜ ಪುನರ್ನಿರ್ಮಿತವಾಗಬೇಕೆಂಬುದು ನಿರ್ವಿವಾದವಾದ ಗುರಿ. ಅದರನ್ವಯ ಸಮಾಜವಾದಿ ತತ್ವ ವಿರೋಧಿಗಳನ್ನು ಪರಿವರ್ತಿಸುವುದು ಒಂದು ಮುಖ್ಯ ಕಾರ್ಯಕ್ರಮ. ಹಳೆಯ ಪ್ರತಿಗಾಮಿ ವಿಚಾರಗಳನ್ನು ಶಿಕ್ಷಣ, ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಿಂದ ತೊಡೆದುಹಾಕಿ ಮಾವೋರವರ ತತ್ವಗಳಿಗನುಗುಣವಾಗಿ ಅವುಗಳನ್ನು ಹೊಸದಾಗಿ ರಚಿಸಬೇಕು.

ಈ ಕಾರ್ಯಕ್ಕಾಗಿ ಒಂದು ಕೆಂಪು ರಕ್ಷಕ (Red Guards)ರ ದಳವನ್ನು ರಚಿಸಲಾಯಿತು. ಇವರಲ್ಲಿ ಮಾಧ್ಯಮಿಕ ಶಾಲೆಯ ವಿದ್ಯಾರ್ಥಿಗಳೇ ಹೆಚ್ಚುಸಂಖ್ಯೆಯಲ್ಲಿದ್ದು ಅವರು ಬುದ್ಧಿಜೀವಿಗಳಾದ ಶಿಕ್ಷಕರು, ಸಾಂಸ್ಕೃತಿಕ ಕೆಲಸಗಾರರು ಎಂವರೆ ಕಲಾವಿದರುಗಳು ಹಾಗೂ ಅಧಿಕಾರಿಗಳ ವಿರುದ್ಧ ಹೋರಾಡುವವರಾಗಿದ್ದರು. ಶಾಲೆಗಳು, ಕಾರಖಾನೆಗಳು, ಸರಕಾರಿ ಕಛೇರಿಗಳು ಮುಂತಾದ ಸಾರ್ವಜನಿಕ ಸಂಸ್ಥೆಗಳಲ್ಲೆಲ್ಲಾ ಮಾವೋರವರ ವಿಚಾರಗಳ ಪ್ರಚಾರ ಮತ್ತು ಅವುಗಳ ಅನುಕರಣೆಯಾಗುವಂತೆ ಮಾಡುವುದೇ ಚೀನಾದ ಸಾಂಸ್ಕೃತಿಕ ಕ್ರಾಂತಿಯ ಮೂಲ ಉದ್ದೇಶವಾಗಿತ್ತು. ೧೯೪೯ರಲ್ಲಿ ಸಂಭವಿಸಿದ ಕಮ್ಯುನಿಸ್ಟ್ ಕ್ರಾಂತಿಯು ಪರಿಪೂರ್ಣವಾಗಬೇಕಾದರೆ ಈ ತರಹದ ಸಾಂಸ್ಕೃತಿಕ ಕ್ರಾಂತಿ ಅತ್ಯವಶ್ಯವೆಂದು ಮಾವೋರವರ ನಂಬುಗೆಯಾಗಿತ್ತು.

ಈ ರೀತಿ ಕ್ರಾಂತಿಗಳು ರಾಷ್ಟ್ರದ ಜೀವನದಲ್ಲಿ ತಮ್ಮವೇ ಆದ ಪಾತ್ರಗಳನ್ನಾಡಿ ಜನಜೀವನಕ್ಕೆ ಆಗಾಗ್ಗೆ ತಿರುವನ್ನು ನೀಡಿವೆ. ಕ್ರಾಂತಿಗಳು ಪ್ರಾರಂಭದಲ್ಲಿ ಅಹಿತಗಳಂತೆ ಕಂಡುಬಂದರೂ ನಂತರದಲ್ಲಿ ಅವು ಸಮಾಜದ ಉನ್ನತಿಗೆ ಒಳ್ಳೆಯ ಕೊಡುಗೆಗಳೇನೋ ಎನ್ನುವ ರೀತಿಯಲ್ಲಿ ಮಾರ್ಪಾಟಾಗಿವೆ. ಇಲ್ಲಿಗೆ ಕ್ರಾಂತಿಗಳು ಮುಗಿದವು ಎಂದು ಅನ್ನಲು ಬರುವಂತಿಲ್ಲ. ಬದುಕಲು ಹೋರಾಡುವ ಜನತೆ ಇರುವತನಕ ಇವು ಮುಂದುವರೆಯುವವು. ಬಹುಶಃ ಅವುಗಳ ಪದ್ಧತಿ, ಉದ್ದೇಶಗಳಲ್ಲಿ ಮಾತ್ರ ಬದಲಾವಣೆಗಳು ಕಂಡುಬರಬಹುದು. ಒಟ್ಟಿನಲ್ಲಿ ಇಂದು ನಾವು ಕ್ರಾಂತಿಯ ಯುಗದಲ್ಲಿಯೇ ಇರುವೆವು. ಇಂದು ಕ್ರಾಂತಿಗಳು ಮಾನವನ ಸಾಮಾಜಿಕ, ಆರ್ಥಿಕ, ರಾಜಕೀಯ ಮುಂತಾದ ಎಲ್ಲ ರಂಗಗಳಲ್ಲಿಯೂ ಕಂಡುಬರುತ್ತಿವೆ. ಅವು ಒಳ್ಳೆಯ ಸೂಚನೆಗಳೆಂದೇ ಹೇಳಬಹುದು. ಕ್ರಾಂತಿಗಳು ಪ್ರಗತಿಯ ದ್ಯೋತಕಗಳು.

——

ಅರಬ ಇತಿಹಾಸಕಾರ ಇಬ್ನ ಖಾಲ್ದೂನ್ : 'ಪ್ರಥಮ ನಿಜ ಸಮಾಜಶಾಸ್ತ್ರಜ್ಞ' ?

● ಹಾ. ವೆಂ. ನಾಗೇಶ

ಸ್ನಾನಗೃಹ, ಸುರಾಪಾನ, ಅಂತಃಪುರ, ಕಾವ್ಯವಿನೋದಗಳಿಗೂ, ಕಲ್ಲಿಣ್ಣಿಗೂ, ಅಂತರ್ಯುದ್ಧಗಳಿಗೂ ಹೆಸರಾದ ಅರಬ್ಬರಲ್ಲಿ ಒಬ್ಬನು-ಅದೂ ೧೪ನೆಯ ಶತಮಾನದಲ್ಲಿ-ಆಧುನಿಕ ಸಮಾಜಶಾಸ್ತ್ರದ ಪ್ರಕಲ್ಪನೆ ಹಾಗೂ ಸಿದ್ಧಾಂತಗಳಿಗೆ ಸರಿದೊರೆಯಾದ ವಿಚಾರಗಳನ್ನು ಮಂಡಿಸಿದ್ದನೆಂಬುದು ಆಶ್ಚರ್ಯದ ಮಾತಾದರೂ ಅದು ನಿಜ. ಹದಿನಾಲ್ಕನೆಯ ಶತಮಾನದಲ್ಲಿದ್ದ ಇಬ್ನ ಖಾಲ್ದೂನ್ ಆ ಮೇಧಾವಿ. ಇಂದು ಅವನನ್ನು ಸಮಾಜಶಾಸ್ತ್ರಜ್ಞರು 'ಪ್ರಥಮ ನಿಜ ಸಮಾಜಶಾಸ್ತ್ರಜ್ಞ' ಎಂದು ಹೊಗಳುತ್ತಿದ್ದಾರೆ. ಸಮಾಜಶಾಸ್ತ್ರದ 'ಪ್ರಥಮ ಆಚಾರ್ಯ'ನೆಂಬ ಬಿರುದು ಅಗಸ್ಟ ಕೋಂಟನಿಗಿಂತ ಹೆಚ್ಚಾಗಿ ಇಬ್ನ ಖಾಲ್ದೂನನಿಗೆ ಸಲ್ಲಬೇಕೆಂಬ ವಾದವಿದೆ. ಹಾಗೆ ನೋಡಿದರೆ, ಇಬ್ನ ಖಾಲ್ದೂನ್ ತಾನು ಸಮಾಜಶಾಸ್ತ್ರದ ತಳಹದಿ ಹಾಕಿದ್ದೇನೆಂದಾದಗಲೀ, ಸಾಮಾಜಿಕ ಚಿಂತನೆಗೆ ಹೊಸ ತಿರುವು ಕೊಟ್ಟಿದ್ದೇನೆಂದಾಗಲೀ ಹೇಳಿಕೊಂಡಿಲ್ಲ. ಅರಬ್ಬಿ ಭಾಷೆಯೊಂದನ್ನು ಬಿಟ್ಟು ಬೇರೆ ಭಾಷೆ ಬಾರದ ಈ ವಿದ್ವಾಂಸನು ೧೯ನೆಯ ಶತಮಾನದ ಅಂತ್ಯಭಾಗವವರೆಗೆ ಅಜ್ಞಾತನಾಗಿಯೇ ಉಳಿದಿದ್ದ. ಅವನ ಗ್ರಂಥಗಳಾವುವೂ ಪಾಶ್ಚಿಮಾತ್ಯ ಭಾಷೆಗಳ ಅನುವಾದವನ್ನು ಕಂಡಿದ್ದಿಲ್ಲ. ಈಗಲೂ ಅವು ಪೂರ್ಣವಾಗಿ ಲಭ್ಯವಿಲ್ಲ.

ಹೀಗಿದ್ದರೂ ಸಮಾಜಶಾಸ್ತ್ರಜ್ಞರು, ಅರ್ಥಶಾಸ್ತ್ರಜ್ಞರು, ರಾಜ್ಯಶಾಸ್ತ್ರಜ್ಞರು ಮತ್ತಿತರರು ಅವನಿಗೆ ನಾನು-ತಾನೆಂದು ಮುಂದೆಬಂದು ಈ ಗೌರವವನ್ನು ಸಲ್ಲಿಸುತ್ತಿದ್ದಾರೆ. ಸುಮಾರು ೫೦೦ ವರ್ಷಗಳವರೆಗೆ ಅಸಡ್ಡೆಮಾಡಿದ ಪಾಪದ ಪರಿಮಾರ್ಜನೆಗೆಂದೋ ಏನೋ ಇಬ್ನ ಖಾಲ್ದೂನನಿಗೆ ಈಗ ವಿದ್ವಾಂಸರ ಮುಕ್ತ ಕಂಠದ ಪ್ರಶಂಸೆ ಲಭ್ಯವಾಗಿದೆ. ಜರ್ಮನ್ ವೈಚಾರಿಕರಾದ ಗಂಪ್ಲೊವಿಜ್, ಓಪೆನ್‌ಹೀಮರ್ ಮೊದಲಾದವರು ಅವನನ್ನು 'ಪ್ರಥಮ ನಿಜಸಮಾಜ ಶಾಸ್ತ್ರಜ್ಞ'ನೆಂದು ಕರೆದರೆ, ಅಮೇರಿಕದ ಸಮಾಜಶಾಸ್ತ್ರಜ್ಞರಾದ ಪಿತಿರಿಮ್ ಸಾರೊಕಿನ್, ಜಿಮ್ಮರ್‌ಮನ್ ಮತ್ತಿತರರು ಸಮಾಜಶಾಸ್ತ್ರದ ಸಂಸ್ಥಾಪಕನೆಂದು ಯಾವನಾದರೂ ಒಬ್ಬ ವ್ಯಕ್ತಿ ಕರೆಯಿಸಿಕೊಳ್ಳಬಹುದಾದರೆ ಅಂಥವನು ಇಬ್ನ ಖಾಲ್ದೂನ್ ಎಂದಿದ್ದಾರೆ. ಅದರಲ್ಲೂ ಮುಖ್ಯವಾಗಿ 'ಗ್ರಾಮೀಣ-ನಾಗರಿಕ ಸಮಾಜಶಾಸ್ತ್ರದ ಸಂಸ್ಥಾಪಕ'ನೆಂಬ ಬಿರುದು ಅವನಿಗಲ್ಲದೆ ಬೇರೆಯಾರಿಗೂ ಸಲ್ಲ ಬಾರದೆಂದು ಅವರ ಮತ. ಪ್ರಸಿದ್ಧ ಇತಿಹಾಸಕಾರರಾದ ಆರ್ನಾಲ್ಡ ಟಾಯ್ನಬೀ ಇಬ್ನ ಖಾಲ್ದೂನನ ಗ್ರಂಥವು ಆ ಜಾತಿಯ ಗ್ರಂಥಗಳಲ್ಲೆಲ್ಲಾ ಅಪ್ರತಿಮವಾದ ಗ್ರಂಥವೆಂದು ಪ್ರಶಂಸಿಸಿದ್ದಾರೆ. ಇತಿಹಾಸದರ್ಶನದಲ್ಲಿ ಇಬ್ನ ಖಾಲ್ದೂನನು ಪ್ಲೇಟೋ, ಅರಿಸ್ಟಾಟಲ್ ಮತ್ತು ಸೇಂಟ ಆಗಸ್ಟಾಯಿನರನ್ನು ಮೀರಿಸುತ್ತಾನೆಂದು ಫ್ಲಿಂಟ್ ಎಂಬ ಲೇಖಕರ ಅಭಿಪ್ರಾಯ. ಇಷ್ಟು ಹೊಗಳಿಸಿಕೊಳ್ಳುವ ಭಾಗ್ಯ ಶಾಲಿಗಳು ತೀರ ವಿರಳ.

ಇಬ್ನ ಖಾಲ್ದೂನ್ ಸಮಾಜಶಾಸ್ತ್ರಜ್ಞರ ಗಮನ ಸೆಳೆದುದು ೧೮೯೯ರಲ್ಲಿ. ಆ ವರ್ಷ ಗಂಪ್ಲೊವಿಜ್ ತನ್ನ ಸಮಾಜಶಾಸ್ತ್ರೀಯ ಪ್ರಬಂಧಗಳಲ್ಲಿ "೧೪ನೆಯ ಶತಮಾನದ ಒಬ್ಬ ಸಮಾಜಶಾಸ್ತ್ರಜ್ಞ" ಎಂಬ ಅಧ್ಯಾಯವನ್ನು ಬರೆದು ಇಬ್ನ ಖಾಲ್ದೂನನು ಪ್ರತಿಪಾದಿಸಿದ 'ಸಂಘರ್ಷ ಸಿದ್ಧಾಂತ'ವನ್ನು ಬಹಳವಾಗಿ ಪ್ರಶಂಸಿ ಸಿದ್ದಾನೆ. ಹಾಗೆಯೇ ರಾಜನ್‌ಹಾಫರ್, ಓಪೆನ್‌ಹೀಮರ್ ಮತ್ತಿತರ ಸಂಘರ್ಷ ಸಿದ್ಧಾಂತದ ಪ್ರತಿಪಾದಕರು ಕೂಡ ಇದೇ ರೀತಿಯಾಗಿ ಶ್ಲಾಘಿಸಿದ್ದಾರೆ.

ಹೀಗಿದ್ದರೂ ಭಾರತೀಯ ಸಮಾಜಶಾಸ್ತ್ರಜ್ಞರಿಗೂ ಪಾಶ್ಚಿಮಾತ್ಯ ಲೇಖಕ ರಿಗೂ ತೀರ ಇತ್ತೀಚಿಗಿನ ದಿನಗಳ ತನಕವೂ ಅವನು ಪರಿಚಿತನಿರಲಿಲ್ಲ. ಪ್ರಸಿದ್ಧ ವಾದ ಅವನ 'ಮುಕದ್ದಮಾ'ದ ಕೈಬರೆಹದ ಪ್ರತಿಗಳು ಸಾಂಪ್ರದಾಯಿಕವಾಗಿ ಕೈಯಿಂದ ಕೈಗೆ ಬಂದರೂ ಅವು ಬಹುಕಾಲದ ನಂತರ, ಅಂದರೆ ೧೮೬೩ರಿಂದ ೧೮೬೮ರ ನಡುವೆ, ಫ್ರೆಂಚ್ ಭಾಷೆಗೆ ಭಾಷಾಂತರಗೊಂಡವು. ಅಲ್ಲಿಂದ ೧೯೫೦ರಲ್ಲಿ ಚಾರ್ಲ್ಸ ಇಸ್ಸಾವಿಯವರಿಂದ ಅದು ಇಂಗ್ಲಿಷ್ ಭಾಷೆಗೆ ಸಂಗ್ರಹಾನುವಾದಗೊಂಡ

ನಂತರವೆ ಇತಿಹಾಸ, ತತ್ವಜ್ಞಾನ ಮತ್ತು ಸಮಾಜಶಾಸ್ತ್ರಗಳಿಗೆ ಅವನು ಕೊಟ್ಟ ಅಮೂಲ್ಯವಾದ ಕೊಡುಗೆಯು ಪರಿಚಯವಾಯಿತು.

ಇಬ್ನ ಖಾಲ್ದೂನ್ ಪ್ರಸಿದ್ಧಿ ಪಡೆದುದು ಅವನ 'ವಿಶ್ವಚರಿತ್ರೆಗೊಂದು ಉಪೋದ್ಘಾತ' ಎಂಬ ಗ್ರಂಥದಿಂದ. ಅದು 'ಉಪೋದ್ಘಾತ' ಅಥವಾ 'ಪ್ರಸ್ತಾವನೆ' (ಅಲ್ ಮುಕದ್ದಮಾ) ಎಂದು ಪ್ರಸಿದ್ಧವಾಗಿದೆ. ಇದರಲ್ಲಿ ಅವನು ಸಂಪದ್ಭರಿತವಾದ ಉತ್ತರ ಆಫ್ರಿಕೆಯ ಮಘರೆಬ್ ಸಮಾಜವು ಅತ್ಯುನ್ನತಿಯ ಶಿಖರವನ್ನು ಏರಿದಮೇಲೆ ಒಮ್ಮಿಂದೊಮ್ಮೆಲೆ ತನ್ನೆಲ್ಲ ಶಕ್ತಿಯನ್ನು ಕಳೆದುಕೊಂಡು ಏಕೆ ನಾಶವಾಯಿತು ಎಂಬ ಪ್ರಶ್ನೆಯನ್ನು ಉತ್ತರಿಸಲು ಪ್ರಯತ್ನಿಸಿದ್ದಾನೆ. ಆ ಸಮಾಜದ ಆರ್ಥಿಕ, ಭೌಗೋಲಿಕ, ಧಾರ್ಮಿಕ ಹಾಗೂ ಕಾಯಿದೆಯ ಅಂಶಗಳ ಪಾತ್ರವನ್ನು ವಿವೇಚಿಸಿದ್ದಾನೆ. ಮಘರೆಬ್ ಸಮಾಜಕ್ಕೆ ಅನ್ವಯಿಸುವ ಮಾತು ಬೇರೆ ಸಮಾಜಗಳಿಗೂ ಅನ್ವಯಿಸುತ್ತದೆ ಎಂಬುದನ್ನು ಗ್ರಹಿಸಿ ಇನ್ನಿತರ ಸಮಾಜಗಳ ಚರಿತ್ರೆಯನ್ನು ಅವಲೋಕಿಸಿದ್ದಾನೆ. ತನ್ನ ಗ್ರಂಥವನ್ನು ಅವನು 'ವಿಶ್ವಚರಿತ್ರೆ'ಯೆಂದು ಕರೆದಿದ್ದರೂ ಅದು ನಿಜವಾಗಿ ಅರಬ್ಬರ ರಾಜವಂಶಗಳಿಗೆ ಸಂಬಂಧಿಸಿದ ಚರಿತ್ರೆಯೆಂಬ ಅರಿವು ಅವನಿಗಿತ್ತು. ಗ್ರೀಕ್, ರೋಮನ್, ಸಿರಿಯನ್ ಸಮಾಜಗಳ ಬಗ್ಗೆ ಅಷ್ಟಿಷ್ಟು ಬರೆದಿದ್ದರೂ ಮುಖ್ಯವಾಗಿ ಅದು ಮುಸ್ಲಿಮ್ ಸಾಮ್ರಾಜ್ಯಗಳ ಇತಿಹಾಸ. ಮುಸ್ಲಿಮ್ ಜನಾಂಗಗಳ ಚರಿತ್ರೆಯನ್ನು ಬರೆದಿದ್ದರೂ ಅವನು ಮುಸ್ಲಿಮ್ ಜನಾಂಗದ ಹೊಗಳುಭಟ್ಟನಲ್ಲ. ಅವನ ವಿಶ್ವಚರಿತ್ರೆ ವಸ್ತುನಿಷ್ಠವಾದ ಮಹಾಗ್ರಂಥ.

ಜೀವನ ವೃತ್ತಾಂತ

ಇಬ್ನ ಖಾಲ್ದೂನ್ ಟ್ಯುನೀಸಿಯದ ಪ್ರಸಿದ್ಧ ಮನೆತನವೊಂದರಲ್ಲಿ ೧೩೩೨ರಲ್ಲಿ ಹುಟ್ಟಿದ. ಅವನ ಪೂರ್ವಜರಾದ ಬಾನು ಖಾಲ್ದೂನ್ ಮನೆತನದವರು ಅನೇಕ ಶತಮಾನಗಳಿಂದಲೂ ಸ್ಪೇನಿನಲ್ಲಿದ್ದು ೧೩ನೇ ಶತಮಾನದ ಮಧ್ಯಭಾಗದಲ್ಲಿ ಆಫ್ರಿಕಕ್ಕೆ ಬಂದವರು. ಅವನ ತಂದೆ ಮತ್ತು ಅಜ್ಜಂದಿರು ಪಾಂಡಿತ್ಯ ಮತ್ತು ರಾಜಕೀಯವೆರಡರಲ್ಲಿಯೂ ಹೆಸರುಗಳಿಸಿದ್ದರು. ಇಬ್ನ ಖಾಲ್ದೂನ್ ಅವರಂತೆಯೇ ಸುಸಂಸ್ಕೃತವಾದ ಪರಿಸರದಲ್ಲಿ ಬೆಳೆದರೂ ಒಮ್ಮೆ ಇಡೀ ಖಾಲ್ದೂನ್ ಕುಟುಂಬವೇ ಪ್ಲೇಗ್ ಬೇನೆಗೆ ಆಹುತಿಯಾದಮೇಲೆ ತುಂಬಾ ಕಷ್ಟಪಡಬೇಕಾಯಿತು. ಆದರೂ ಆತ ಹಾಗೂಹೀಗೂ ಆಗಿನ ಕಾಲದಲ್ಲಿ ಲಭ್ಯವಾಗಬಹುದಾದಷ್ಟು ಜ್ಞಾನವನ್ನು ಗಳಿಸಿದ. ಕಿರಿವಯಸ್ಸಿನಲ್ಲಿಯೇ ಟ್ಯುನಿಸದ ಸುಲ್ತಾನನ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ. ಅಲ್ಲಿಂದ ಮುಂದೆ ಟ್ಯೂನಿಸ್, ಸ್ಪೇನ್, ಉತ್ತರ ಆಫ್ರಿಕೆ,

ಇಜಿಪ್ತಗಳ ರಾಜಕೀಯ ತುಮುಲಗಳಲ್ಲಿ ಬಿಟ್ಟೂಬಿಡದೆ ಭಾಗವಹಿಸಿದ. ಅನೇಕ ಮುಖ್ಯ ಹುದ್ದೆಗಳನ್ನು ವಹಿಸಿಕೊಂಡು ಪಾತ್ರವಾಡಿದ. ಕೈರೋ ನಗರದ ಸಾದಿಯೂ ಆಗಿದ್ದ. ಕ್ಯಾಸ್ಟೀಲದ ಪೆದ್ರೋವಿನ ಆಸ್ಥಾನದಲ್ಲಿ ರಾಯಭಾರಿಯಾಗಿದ್ದ. ನ್ಯಾಯಾಧೀಶನಾಗಿಯೂ ಕೆಲಸಮಾಡಿದ್ದ. ರಾಜರು, ರಾಜಕಾರಣಪಟುಗಳು, ಮುತ್ಸದ್ದಿಗಳ ಒಡನಾಟದಲ್ಲಿದ್ದ. ಪ್ರಸಿದ್ಧನಾದ ಚಕ್ರಾಧಿಪತಿ ತೈಮೂರನ ಗೌರವಾನ್ವಿತ ಅತಿಥಿಯೂ ಆಗಿದ್ದನೆಂದಮೇಲೆ ಹೆಚ್ಚಿಗೆ ಹೇಳಬೇಕಾಗಿಲ್ಲ. ಕೇವಲ ರಾಜಕಾರಣವೊಂದೇ ಅಲ್ಲ, ಮುಸ್ಲಿಮ್ ಜನಾಂಗದ ಇತಿಹಾಸವೂ ಅವನ ಗಮನ ಸೆಳೆದಿತ್ತು. ನಡುವೆ ಒಂದಿಷ್ಟು ಕಾಲ ಅವನು ಅಧ್ಯಾಪನವನ್ನೂ ಕೈಕೊಂಡಿದ್ದನೆಂದು ಕಾಣುತ್ತದೆ. ಜೀವಿತದ ಕೊನೆಯ ಭಾಗದಲ್ಲಿ ಪ್ರಾರ್ಥನೆ ಮತ್ತು ಗ್ರಂಥ ರಚನೆಯಲ್ಲಿ ಕಾಲಕಳೆದು ೧೪೦೬ರಲ್ಲಿ ತನ್ನ ೭೪ನೇ ವಯಸ್ಸಿನಲ್ಲಿ ಕೈರೋ ನಗರದಲ್ಲಿ ಮರಣಹೊಂದಿದ.

‘ ಮುಕದ್ದಮಾ ’

‘ಅಲ್ ಮುಕದ್ದಮಾ’ (The Prolegomena) ಅವನೇ ಹೇಳುವಂತೆ ವಿಶ್ವಚರಿತ್ರೆಗೆ ಒಂದು ಉಪೋದ್ಘಾತ ಅಥವಾ ಪ್ರಸ್ತಾವನೆಯಾಗಿದೆ. ಅದು ಸಮಾಜ ಮತ್ತು ಸಂಸ್ಕೃತಿಗಳ ಹೊಸಬಗೆಯ ಅಧ್ಯಯನವೊಂದಕ್ಕೆ ನಾಂದಿ ಹಾಕಿದೆ. ಈ ಅಧ್ಯಯನಕ್ಕೆ ಇಬ್ನ ಖಾಲ್ದೂನ್ ‘ಸಮಾಜದ ವಿಜ್ಞಾನ’ (ಇಲ್ಮ ಅಲ್ ಉಮರಾನ್) ಎಂದು ಕರೆದಿದ್ದಾನೆ. ‘ಉಮರಾನ್’ ಎಂಬ ಶಬ್ದಕ್ಕೆ ಸಂಸ್ಕೃತಿ, ಮಾನವ ಸಮೂಹ, ಸಾಮಾಜಿಕ ಜೀವನ, ನಗರ – ಈ ಎಲ್ಲ ಅರ್ಥ ಬರುತ್ತದೆ. ಆದುದರಿಂದ ಅವನ ಹೊಸ ವಿಜ್ಞಾನವನ್ನು ಸಮಾಜಶಾಸ್ತ್ರವೆಂದಾಗಲೀ, ಸಮಾಜವಿಜ್ಞಾನವೆಂದಾಗಲೀ, ಇತಿಹಾಸದರ್ಶನವೆಂದಾಗಲೀ ಅಥವಾ ಸಂಸ್ಕೃತಿಯ ವಿಜ್ಞಾನವೆಂದಾಗಲೀ ಕರೆಯಬಹುದು. ಯಾವ ಹೆಸರಿನಿಂದ ಕರೆದರೂ ಅದು ಸಮಾಜಶಾಸ್ತ್ರದ ನಿಶ್ಚಿತವಾದ ಆರಂಭವೆಂದು ಆಧುನಿಕರ ಮತ.

ಬಹು ವಿಸ್ತಾರವಾದ ‘ಮುಕದ್ದಮಾ’ದ ಸಂಕ್ಷಿಪ್ತ ಪರಿಚಯವನ್ನು ಇಬ್ನ ಖಾಲ್ದೂನ್ ತಾನೇ ಮಾಡಿದ್ದಾನೆ. ತಾನು ಇತಿಹಾಸವನ್ನು ಒಂದು ಶಾಸ್ತ್ರದ ಸ್ಥಾನಕ್ಕೆ ಏರಿಸುವ ಸಂಕಲ್ಪ ತೊಟ್ಟದ್ದೇನೆಂದು ಹೇಳಿ, ಅನಂತರ ತನ್ನ ಗ್ರಂಥದ ಪರಿಚಯವನ್ನು ಹೀಗೆ ಹೇಳುತ್ತಾನೆ : “ಈ ಗ್ರಂಥದಲ್ಲಿನ ವಿಷಯವು ಆರು ವಿಭಾಗಗಳಲ್ಲಿ ಬರುವಂಥದು (೧) ಮೊದಲನೆಯದು ಮಾನವಸಮಾಜದ ಬಗೆಗೆ ಇರುವ ಸಾಮಾನ್ಯ ವಿವೇಚನೆ. ಇದರಲ್ಲಿ ಸಮಾಜದ ಪ್ರಕಾರಗಳು ಹಾಗೂ ಅವರ ಭೌಗೋಲಿಕ ವಿತರಣೆಯ ಬಗೆಗೆ ಪರಿಚಯವೂ ಸೇರುತ್ತವೆ. (೨) ಎರಡನೆಯದು

ಅನಾಗರಿಕ ಜನಾಂಗಗಳು ಹಾಗೂ ಬುಡಕಟ್ಟುಗಳನ್ನು ಕುರಿತದ್ದು. (೩) ಮೂರನೆಯದು ರಾಜ್ಯ, ಆಧ್ಯಾತ್ಮಿಕ ಹಾಗೂ ಲೌಕಿಕಶಕ್ತಿ, ರಾಜಕೀಯ ಅಂತಸ್ತು ಇವುಗಳಿಗೆ ಸಂಬಂಧಿಸಿದೆ. (೪) ನಾಲ್ಕನೆಯದು ಒಂದೇ ಕಡೆಗೆ ನೆಲೆನಿಂತಿರುವ (ಸ್ಥಾಯೀ) ಸಮಾಜಗಳು, ನಗರಸಮಾಜಗಳು ಹಾಗೂ ಪ್ರಾಂತಗಳಿಗೆ ಸಂಬಂಧಿಸಿದ್ದು. (೫) ಕುಶಲಕರ್ಮಗಳು, ಜೀವನೋಪಾಯದ ಮಾರ್ಗಗಳು ಮತ್ತು ಆರ್ಥಿಕ ಚಟುವಟಿಕೆಗಳಿಗೆ ಸಂಬಂಧಿಸಿದ ವಿಭಾಗ. (೬) ಆರನೆಯ ಹಾಗೂ ಕೊನೆಯ ವಿಭಾಗವು ವಿದ್ಯೆ ಹಾಗೂ ಅದರ ಸಂಗ್ರಹಣೆಗೆ ಸಂಬಂಧಿಸಿದೆ."

ಮೇಲೆ ಹೇಳಿದ ವಿಷಯಗಳನ್ನು ಆಧುನಿಕ ಸಮಾಜಶಾಸ್ತ್ರಜ್ಞರ ಮಾತುಗಳಲ್ಲಿ ಹೀಗೆ ಸಂಗ್ರಹಿಸಬಹುದು. ಇಬ್ನ ಖಾಲ್ದೂನನ ಸಮಾಜಶಾಸ್ತ್ರದ ವಿಭಾಗಗಳೆಂದರೆ ಇವು :

(೧) ಸಮಾಜ-ಅದರ ಪ್ರಕಾರಗಳು
(೨) ಸಮಾಜ ಮತ್ತು ಭೌಗೋಳಿಕ ಆವರಣ
(೩) ಜನಾಂಗಗಳು ಹಾಗೂ ಬುಡಕಟ್ಟುಗಳು
(೪) ರಾಜ್ಯ ವಿಷಯಕ ಅಧ್ಯಯನ
(೫) ನಗರ ಸಮಾಜಶಾಸ್ತ್ರ
(೬) ಆರ್ಥಿಕ ಸಮಾಜಶಾಸ್ತ್ರ
(೭) ವಿದ್ಯೆಯ ಸಮಾಜಶಾಸ್ತ್ರೀಯ ಅಧ್ಯಯನ

ಇದನ್ನು ಇತಿಹಾಸವೆನ್ನಲಿ ಅಥವಾ ಇತಿಹಾಸದರ್ಶನವೆನ್ನಲಿ, ಇದು ಸಾಂಪ್ರದಾಯಿಕ ಅರ್ಥದಲ್ಲಿ ಇತಿಹಾಸವಲ್ಲ. ಈ 'ಹೊಸ' ಕ್ಷೇತ್ರವು ಹೆಚ್ಚು-ಕಡಿಮೆ ಆಧುನಿಕ ಸಮಾಜಶಾಸ್ತ್ರದ ಕ್ಷೇತ್ರವನ್ನು ಹೋಲುತ್ತವೆ ಎಂದರೆ ತಪ್ಪಲ್ಲ.

ಇತಿಹಾಸದರ್ಶನ : ಇಬ್ನ ಖಾಲ್ದೂನನ ಹೊಸಶಾಸ್ತ್ರ

ಮೇಲೆ ಹೇಳಿದಂತೆ ಇಬ್ನ ಖಾಲ್ದೂನನ 'ಮುಕದ್ದಮಾ' ಸಾಮಾನ್ಯ ಅರ್ಥದಲ್ಲಿ ಚರಿತ್ರೆ ಇತಿಹಾಸವಲ್ಲ. ಅದು ಕೇವಲ ಘಟನಾವಳಿಗಳ ಪಟ್ಟಿಯಲ್ಲ. ಇತಿಹಾಸವೆಂದರೆ ಘಟನೆಗಳನ್ನು ನಿರ್ದಿಷ್ಟವಾಗಿ ಕಾಲಾನುಕ್ರಮವಾಗಿ ಹೊಂದಿಸಿದರೆ ಆಗಲಿಲ್ಲ. ಅವುಗಳ ಹಿಂದೆ ಇರುವ ಸಾಮಾನ್ಯ ನಿಯಮಗಳು ಯಾವುವು? ಪ್ರಾಕೃತಿಕ ನಿಯಮಗಳ ಹಾಗೆಯೇ ಗುರುತಿಸಬಲ್ಲ ಮಾನವಸಮಾಜದ ನಿಯಮ

ಗಳು ಯಾವುವು? ಇತಿಹಾಸದ ಉದ್ದೇಶದ ಬಗೆಗೆ 'ಮುಕದ್ದಮಾ' ಹೀಗೆ ಹೇಳುತ್ತದೆ: "ಇತಿಹಾಸವು ಮಾನವನ ಸಾಮಾಜಿಕಸ್ಥಿತಿಯ ಅಥವಾ ನಾಗರಿಕತೆಯ ಸರಿಯಾದ ಜ್ಞಾನವನ್ನು ಕೊಡಲು ಯತ್ನಿಸುತ್ತದೆ. ಇದಕ್ಕೆ ಸಂಬಂಧಿಸಿದ ವಿಷಯಗಳೆಂದರೆ ಅನಾಗರಿಕ ಜೀವನದ ಲಕ್ಷಣಗಳು, ನೈತಿಕ ಕಟ್ಟಳೆಗಳ ಪ್ರಗತಿ, ಕುಟುಂಬ ಮತ್ತು ಜನಾಂಗಗಳ ಐಕ್ಯಭಾವನೆ, ಜನಾಂಗಗಳ ನಡುವಿನ ತಾರತಮ್ಯಗಳು, ಜನಾಂಗಗಳು ತಮ್ಮ ಶ್ರೇಷ್ಠತೆಗಾಗಿ ಹೆಣಗಿ ರಾಜವಂಶಗಳಾಗುವ ಹಾಗೂ ಸಾಮ್ರಾಜ್ಯಗಳಾಗುವ ಬಗೆ, ಸಾಮಾಜಿಕ ಅಂತಸ್ತುಗಳು, ಘನತೆಯ ವೃತ್ತಿಗಳು, ಸಮಾಜದ ಸ್ವರೂಪದಲ್ಲಿ ಉಂಟಾಗುವ ಪರಿವರ್ತನೆಗಳು-ಇವೆಲ್ಲ ಇತಿಹಾಸವು ನಮಗೆ ತಿಳಿಸುವ ವಸ್ತು."

ಇಬ್ನ ಖಾಲ್ದೂನನ ಪ್ರಕಾರ ಹೆಚ್ಚಿನ ಇತಿಹಾಸ ಗ್ರಂಥಗಳೆಲ್ಲ ದೋಷಪೂರ್ಣವಾಗಿವೆ. ಅವು ಸಮಾಜದ ಯಥಾರ್ಥಜ್ಞಾನವನ್ನು ಕೊಡಲು ಸಮರ್ಥವಾಗಿಲ್ಲ. ಇದಕ್ಕೆ ಅನೇಕ ಕಾರಣಗಳಿವೆ. ಇತಿಹಾಸಕಾರನು ಏಳು ಬಗೆಯ ತಪ್ಪುಗಳನ್ನು ಮಾಡುತ್ತಾನೆ. ಆ ತಪ್ಪುಗಳೆಂದರೆ: (೧) ಯಾವುದಾದರೊಂದು ಅಭಿಪ್ರಾಯದ ಬಗೆಗೆ ಪಕ್ಷಪಾತದ ಧೋರಣೆ (೨) ತನ್ನ ಆಕರಗಳ ಅಥವಾ ಮೂಲಗಳ ಬಗೆಗೆ ಇರುವ ಅತಿ ವಿಶ್ವಾಸ (೩) ಉದ್ದೇಶವನ್ನೇ ಅರ್ಥಮಾಡಿಕೊಳ್ಳಲು ತಪ್ಪುವುದು (೪) ಸತ್ಯದಬಗೆಗೆ ತಪ್ಪುಭಾವನೆ ಹೊಂದುವುದು (೫) ಸಂಗತಿ ಮತ್ತು ಸಂದರ್ಭಗಳ ಸಂಬಂಧವನ್ನು ಸರಿಯಾಗಿ ಹೊಂದಿಸಲು ಆಗದೇ ಇರುವುದು (೬) ಮೇಲಿನವರ ಅನುಗ್ರಹ ಸಂಪಾದಿಸುವ ಅತಿ ಸಾಮಾನ್ಯವಾದ ಬಯಕೆ (೭) ಮಾನವ ಸಮಾಜದ ಪ್ರಗತಿ-ಪರಿವರ್ತನೆಗಳ ನಿಯಮಗಳ ಬಗೆಗೆ ಇರುವ ಅಜ್ಞಾನ ಮತ್ತು ಉತ್ಪ್ರೇಕ್ಷೆ.

ಈ ತಪ್ಪುಗಳಿಂದ ಪಾರಾಗಲು ಇತಿಹಾಸಕಾರನು ಸಾಮಾಜಿಕ ಸಂಗತಿಗಳ ಕಾರಣ ಮತ್ತು ಸನ್ನಿವೇಶಗಳನ್ನು ಅರಿಯಬೇಕು. ಸಾಮಾಜಿಕ ಪರಿವರ್ತನೆಯ ಬಗೆಗೆ ಯಥಾದೃಷ್ಟಿಯನ್ನು ಬೆಳೆಸಿಕೊಳ್ಳಬೇಕು. ಹೀಗೆ ವಸ್ತುನಿಷ್ಠವಾಗಿ ನೋಡಿದರೆ ಐತಿಹಾಸಿಕ ಘಟನೆಗಳ ಹಿಂದೆ ಇರುವ ಅನುಗತಿಯನ್ನೂ ವಿನ್ಯಾಸಗಳನ್ನೂ ಗುರುತಿಸಬಹುದು. ಭೂತ ಮತ್ತು ಭವಿಷ್ಯತ್ತುಗಳ ಸಂಬಂಧಗಳನ್ನು ತಿಳಿಯಬಹುದು. "ನೀರಿನ ಎರಡು ಹನಿಗಳ ಹಾಗೆ ಭೂತ ಮತ್ತು ಭವಿಷ್ಯತ್ತುಗಳು ಒಂದನ್ನೊಂದು ಹೋಲುತ್ತವೆ." ತನ್ನ 'ಹೊಸ' ಶಾಸ್ತ್ರದ ಸಹಾಯದಿಂದ ಇತಿಹಾಸದ ತಿರುಳನ್ನು ತಿಳಿಯಬಹುದೆಂದು ಅವನು ನಂಬಿದ್ದಾನೆ. ತನ್ನ ಗ್ರಂಥದ ತುಂಬೆಲ್ಲಾ ನಡುನಡುವೆ ಇಬ್ನ ಖಾಲ್ದೂನ್ 'ಆ ಅಲ್ಲಾ ಒಬ್ಬನೇ ಬಲ್ಲ'

ಎಂದು ಉದ್ಗಾರ ತೆಗೆಯುತ್ತಾನೆ. ಅಲ್ಲಾನೊಬ್ಬನೇ ಎಲ್ಲವನ್ನೂ ತಿಳಿದವನು ಎಂದು ಹೇಳಿದರೂ ಅವನಿಗೆ ತನ್ನ ಶಾಸ್ತ್ರದಲ್ಲಿ ಭರವಸೆಯಿದೆ. ಅದು ಒಬ್ಬ ವ್ಯಕ್ತಿ ಅಥವಾ ಒಂದು ಸಾಮಾಜಿಕಕ್ಷೇತ್ರದ ಬಗೆಗೆ ಇರುವ ಪರಿಮಿತವಾದ ಅಧ್ಯಯನ ವಲ್ಲ. ಅದು ಇಡೀ ಸಮಾಜವನ್ನು ಮತ್ತು ನಿರಂತರವಾಗಿ ಸಾಗುವ ಸಾಮಾಜಿಕ ಪರಿವರ್ತನೆಗಳನ್ನು ಅಭ್ಯಸಿಸುವ ಶಾಸ್ತ್ರವೆಂದು ಅವನು ತಿಳಿಸುತ್ತಾನೆ.

'ಇತಿಹಾಸಪರ್ಶನ' (Philosophy of History) ಪ್ರಕಲ್ಪನೆಯನ್ನು ಬಳಕೆಗೆ ತಂದವನು ೧೮ನೆಯ ಶತಮಾನದಲ್ಲಿದ್ದ ವಿಕೊ ಎಂದು ಸಾಮಾನ್ಯವಾಗಿ ತಿಳಿಯಲಾಗುತ್ತದೆ. ಆದರೆ ಅವನಿಗೂ ಸುಮಾರು ನಾಲ್ಕುನೂರು ವರ್ಷಗಳಷ್ಟು ಹಿಂದೆ ಇಂಥ ವಿಚಾರವನ್ನು ಇಬ್ನ ಖಾಲ್ದೂನ್ ನೀಡಿದ್ದಾನೆಂದರೆ ತಪ್ಪಿಲ್ಲ. ಅವನ ಇತಿಹಾಸದರ್ಶನ ಪರಿಪೂರ್ಣವಲ್ಲ ಎಂಬ ಮಾತನ್ನು ಒಪ್ಪಲೇಬೇಕು. ಹಿಂದೆ ಹೇಳಿದಹಾಗೆ, ಅರಬ ಜಗತ್ತಿನ ಹೊರಗಿನ ಪರಿಚಯ ಅವನಿಗಿರಲಿಲ್ಲ. ತನ್ನ ಮೂಗಿನ ನೇರಕ್ಕೆ ಬಾರದೇ ಇರುವ ಸಮಕಾಲೀನ ಜಗತ್ತನ್ನು ಅವನು ಸರಿಯಾಗಿ ತಿಳಿದಿರಲಿಲ್ಲ. ಕೆಲವೊಮ್ಮೆ ಅವನು ತಪ್ಪುತಪ್ಪಾದ ಸಾಮಾನ್ಯೀಕರಣಗಳನ್ನು ಕೊಟ್ಟಿದ್ದಾನೆ. ಉದಾಹರಣೆಗೆ, ಎಲ್ಲಾ ಸಮಾಜಗಳ ಅಥವಾ ಸಾಮ್ರಾಜ್ಯಗಳ ಆಯುಷ್ಯ ಕೇವಲ ಮೂರು ತಲೆಮಾರುಗಳು ಅಂದರೆ ಸುಮಾರು ೧೨೦ ವರ್ಷ ಗಳೆಂದು ಹೇಳಿದ್ದಾನೆ. ಇಷ್ಟಿದ್ದರೂ ಸಾಮಾಜಿಕ ಸತ್ಯದ ಅನೇಕ ಮುಖಗಳನ್ನು ಅವನು ಕಂಡಿದ್ದು ನಿಜ; ಕಾರ್ಯ–ಕಾರಣ ಸಂಬಂಧಗಳನ್ನು ಗುರುತಿಸಿ ಇತಿಹಾಸದ ಅಂತರ್ದರ್ಶನ ಮಾಡಿದ್ದು ನಿಜ. ಆಗಿನ ಪಾಶ್ಚಿಮಾತ್ಯ ಕ್ರಿಸ್ತೀಯ ಇತಿಹಾಸಕಾರರಿಗಿಂತ ಚೆನ್ನಾಗಿ ಐತಿಹಾಸಿಕ ಪ್ರಕ್ರಿಯೆಗಳನ್ನು ಗುರುತಿಸಿದ್ದಾನೆ. ನಾಗರಿಕತೆಗಳು ನಿರಂತರವಾಗಿ ಪರಿವರ್ತನೆ ಹೊಂದುತ್ತಿರುತ್ತವೆ ಎಂದು ಗುರುತಿ ಸಿದ್ದಾನೆ. ಈ ಕಾರಣದಿಂದಲೇ ಬಾರ್ನ್ಸ್ ಇಬ್ನ ಖಾಲ್ದೂನನನ್ನು ವಿಕೋ ಮತ್ತು ಅನಂತರದ ಇತಿಹಾಸದರ್ಶನಕಾರರಿಗಿಂತಲೂ ಶ್ರೇಷ್ಠನೆಂದು ಸಾರಿದ್ದಾನೆ.

ಸಮಾಜಸೃಷ್ಟಿಯ ಕಾರಣಗಳು

ಸಮಾಜ ಹೇಗೆ ಹುಟ್ಟಿತು? ಏಕೆ ಹುಟ್ಟಿತು? ಎಂಬಿವು ಚಿಂತಕರನ್ನು ಸದಾ ಕಾಡುತ್ತಲೇ ಇರುವ ಪ್ರಶ್ನೆಗಳು. ಅವುಗಳಿಗೆ ಕೊನೆಯ ಉತ್ತರವೊಂದು ಇನ್ನೂ ಸಿಕ್ಕಿಲ್ಲ. ಸದ್ಯ, ಇಬ್ನ ಖಾಲ್ದೂನ್ ಈ ಪ್ರಶ್ನೆಗಳನ್ನು ಹೇಗೆ ಉತ್ತರಿ ಸಿದ್ದಾನೆಂದು ನೋಡೋಣ.

ಯಾವುದೇ ವಸ್ತುವಿನ ಸೃಷ್ಟಿ ಮತ್ತು ವಿಕೃತಿ ಕಾರ್ಯಗಳಿಗೆ ಅರಿಸ್ಟಾಟಲನು ನಾಲ್ಕು ಕಾರಣಗಳನ್ನು ಸೂಚಿಸಿದ್ದಾನೆ. ಇವುಗಳಲ್ಲಿ ಮೊದಲನೆಯದು ಕಾರ್ಯ

ಸಾಧನೆಗೆ ಬೇಕಾದ ನಿಮಿತ್ತ ಕಾರಣ (ಎಫಿಸಿಯಂಟ್ ಕಾಸ್). ಎರಡನೆಯದು ಅದಕ್ಕೆ ಬೇಕಾದ ಸಾಧನ ಸಂಪತ್ತು ಅಥವಾ ಉಪಾದಾನ ಕಾರಣ (ಮಟೀರಿಯಲ್ ಕಾಸ್). ಮೂರನೆಯದು ಸಂಕಲ್ಪ ಕಾರಣ (ಫ್ಯಾನಲ್ ಕಾಸ್). ಇಬ್ನ ಖಾಲ್ದೂನನು ಅರಿಸ್ಟಾಟಲನ ಈ ಅಧ್ಯಾತ್ಮಶಾಸ್ತ್ರದ ರೀತಿಯನ್ನೇ ತನ್ನ ಹೊಸ ಶಾಸ್ತ್ರಕ್ಕೆ ಅಳವಡಿಸಿಕೊಂಡಿದ್ದಾನೆ. ಅವನಿಗೆ ಅರಿಸ್ಟಾಟಲನ ಬರೆಹಗಳ ನೇರ ಪರಿಚಯವಿದ್ದ ಹಾಗೆ ಕಾಣುವುದಿಲ್ಲ. ಆದರೆ ಇನ್ನೂ ಅನೇಕ ಅರಬ್ ಲೇಖಕರಿಗೆ ತಿಳಿದಷ್ಟು ಅವನಿಗೂ ಅರಿಸ್ಟಾಟಲನ ವಿಚಾರಗಳು ತಿಳಿದಿರಬಹುದೇನೋ! ಏನಿದ್ದರೂ ಸಮಾಜಸೃಷ್ಟಿಯ ಕಾರಣಗಳು ನಾಲ್ಕು ಬಗೆಯವೆಂದು ಅವನ ಅಭಿಪ್ರಾಯ. (೧) ಸಾಮಾಜಿಕ ಹಿತ (ಮಸಾಲಿಹ ಆಮ್ಮಾ), ನ್ಯಾಯ (ಅದಲ್) ಮತ್ತು ಮಿತಿ (ಕಸ್ದ್) ಇವು ಉದ್ದೇಶಗಳು ಅಥವಾ ಪ್ರಯೋಜನ ಕಾರಣಗಳು. (೨) ರಾಷ್ಟ್ರ ಅಥವಾ ಸರಕಾರವೆಂಬುದು ಸಮಾಜಕ್ಕೆ ಅವಶ್ಯವಿರುವ ಸಂಕಲ್ಪ ಕಾರಣ. ಕಟ್ಟಡದ ನಕ್ಷೆಯ ಹಾಗೆಯೇ ಅದು ಬೇಕೇಬೇಕು. (೩) ಐಕಮತ್ಯ ಅಥವಾ ಏಕತಾಭಾವನೆ (ಅಸಬಿಯಾ) ಸಮಾಜದ ನಿರಂತರತೆಗೆ ಬೇಕಾದ ನಿಮಿತ್ತ ಕಾರಣ. (೪) ಸಮಾಜ ಸೃಷ್ಟಿಯಲ್ಲಿ ಬರುವ ಸಾಧನ ಸಂಪತ್ತಿಗಳೆಂದರೆ ಬೇಟೆ, ಪಶುಪಾಲನೆ, ಕೃಷಿ, ಉದ್ಯೋಗ, ವೃತ್ತಿ, ಉದ್ದಿಮೆ ಇತ್ಯಾದಿ ಆರ್ಥಿಕ ಚಟುವಟಿಕೆಗಳು. ಒಂದು ಕಟ್ಟಡವನ್ನು ಕಟ್ಟಲು ಇಟ್ಟಿಗೆ ಮತ್ತು ತೊಲೆಗಳು ಹೇಗೆ ಬೇಕೋ ಹಾಗೆಯೇ ಸಮಾಜದ ಅಸ್ತಿತ್ವಕ್ಕೆ ಇವು ಬೇಕೇಬೇಕು.

ಅರಿಸ್ಟಾಟಲ್ ಹೇಳಿದಂತೆಯೇ ಇಬ್ನ ಖಾಲ್ದೂನನೂ ಕೂಡ ಮಾನವನು ಸಮಾಜಜೀವಿ ಎಂದು ಹೇಳುತ್ತಾನೆ. ಅವನು ಸಮಾಜಜೀವಿಯಾಗಲು ಅವನ ಅವಶ್ಯಕತೆಗಳೇ ಕಾರಣವೆಂದು ಅಭಿಪ್ರಾಯಪಡುತ್ತಾನೆ. ಮಾನವನು ತನ್ನ ಅವಶ್ಯಕತೆಗಳಿಗಾಗಿಯೇ ಒಗ್ಗೂಡುತ್ತಾನೆ; ಲಾಭಕ್ಕಾಗಿ ಶ್ರಮವಿಭಜನೆಯನ್ನು ನಿರ್ಮಿಸಿಕೊಳ್ಳುತ್ತಾನೆ. ಪ್ರಾಣಿಸಹಜವಾದ ಮೃಗತ್ವದಿಂದ ಪರಸ್ಪರರನ್ನು ಸಂರಕ್ಷಿಸಿಕೊಳ್ಳಲು ಮಾನವರು ನಾನಾವಿಧದ ನಿಯಂತ್ರಣಗಳನ್ನು ಹಾಕಿಕೊಳ್ಳುತ್ತಾರೆ. ಸಂರಕ್ಷಣೆ ಬೇಕಾದುದರಿಂದಲೇ ರಾಜತ್ವ ಅಥವಾ ರಾಷ್ಟ್ರವನ್ನು ಅವರು ರಚಿಸಿಕೊಂಡರು. ಇದು ಇಬ್ನ ಖಾಲ್ದೂನ್ ಹೇಳಿದ ಸಮಾಜಸೃಷ್ಟಿಯ ಅವಶ್ಯಕತೆ.

ಆಧುನಿಕ ಸಮಾಜಶಾಸ್ತ್ರಜ್ಞರು ಹೇಳುವ ಇನ್ನೊಂದು ಮಾತನ್ನು ಅವನು ಹೇಳಿದ್ದಾನೆ. ಅದೆಂದರೆ, ಸಂಸ್ಕೃತಿ ಅಥವಾ ಸಮಾಜಜೀವನ (ಉಮರಾನ್) ನಿಧಾನವಾಗಿ ಹಂತಹಂತವಾಗಿ ಬೆಳೆದುಬಂದಿದೆ. ವ್ಯಕ್ತಿಗಳು ಮೊದಮೊದಲಿಗೆ

ತಮ್ಮ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲಿಂದೂ ಹಾಗೂ ಒಡನಾಟದ ಸುಖಕ್ಕಾಗಿಯೂ ಚಿಕ್ಕದೊಡ್ಡ ಸಮುದಾಯಗಳಲ್ಲಿ ಬಾಳಿದರು. ಮುಂದೆ ಸಮಾಜದ ಬೆಳವಣಿಗೆಯೊಂದಿಗೆ ವ್ಯಕ್ತಿಗಳಿಗೆ ಬರಬರುತ್ತ ಈ ಸಂಸ್ಕೃತಿ ಅಥವಾ ಸಾಮಾಜಿಕಜೀವನ ಸ್ವಾಭಾವಿಕವಾಗಿಬಿಡುತ್ತದೆ. ಹೀಗೆ ಸಮಾಜಜೀವನ ಅಥವಾ ಸಂಸ್ಕೃತಿಯೆಂಬುದು ಮೊದಲು ಮನುಷ್ಯನಿಗೆ ಸ್ವಾಭಾವಿಕ ಅವಶ್ಯಕತೆಯಾಗಿ ಹುಟ್ಟಿಬಂದು, ನಂತರ ಅದೇ 'ಸಾಮಾಜಿಕ' ಅವಶ್ಯಕತೆಯಾಯಿತು.

'ಅಸಬಿಯಾ' ಅಥವಾ ಸಾಮಾಜಿಕ ಐಕಮತ್ಯ

ಐಕಮತ್ಯ ಅಥವಾ ಒಗ್ಗೂಡುವಿಕೆಯ ಭಾವನೆಯು ಸಮಾಜಸೃಷ್ಟಿಯ ಕಾರಣಗಳಲ್ಲಿ ಒಂದು ಎಂದು ಹಿಂದೆ ಹೇಳಲಾಗಿದೆ. ಇಬ್ನ ಖಾಲ್ದೂನ್ ಅದನ್ನು 'ಅಸಬಿಯಾ' ಎಂದು ಕರೆದಿದ್ದಾನೆ. ಇದೇ ಸಮಾಜದ ತಳಹದಿ. ಹಾಗೆ ನೋಡಿದರೆ, ನಮ್ಮ ಇಚ್ಛೆಗಳಾಗಲೀ ಬೇಡಿಕೆಗಳಾಗಲೀ ಮಾನವ ಸಮೂಹಗಳನ್ನು ಸೃಷ್ಟಿಸಲಿಲ್ಲ. ಸಮಾನಧರ್ಮ, ಐಕಮತ್ಯದ ಭಾವನೆ, ಸ್ವಕೀಯರೆಂಬ ಭಾವನೆ ಇವೇ ಮಾನವರನ್ನು ಪರಸ್ಪರ ಹತ್ತಿರಕ್ಕೆ ತಂದವು. ಈ ಭಾವನೆಗಳು ಇರದಿದ್ದರೆ ಅವರು ಪ್ರತ್ಯೇಕವಾಗಿಯೇ ಇರುತ್ತಿದ್ದರು.

ಐಕಮತ್ಯದ ಪರಿಶುದ್ಧ ರೂಪವನ್ನು ನಾವು ಪ್ರಾಚೀನ ಅರಬ್ಬಿ ಸಂಚಾರಿ ಜನಾಂಗಗಳಲ್ಲಿ ಕಾಣಬಹುದೆಂದು ಇಬ್ನ ಖಾಲ್ದೂನ್ ಹೇಳುತ್ತಾನೆ. ಅರಬ್ಬಿ ಅಲೆಮಾರಿಗಳು ವಿಶಾಲವಾದ ಮರಳುಗಾಡಿನಲ್ಲಿ ನೆಲೆನಿಲ್ಲುವಾಗ ಬೇರೆ ಪಂಗಡಗಳಿಂದ ದೂರವಿರುತ್ತಿದ್ದರು. ಬೇರೆಯವರಿಂದ ಬಹು ಕ್ರೂರವಾಗಿ ಪ್ರತ್ಯೇಕಿಸಲ್ಪಡುತ್ತಿದ್ದರು. ಹೊರಗಿನ ಯಾರ ನಿಯಂತ್ರಣವೂ ಅವರ ಮೇಲಿರುತ್ತಿರಲಿಲ್ಲ. ಅವರ ಬದುಕು–ಸಾವಿಗೆ ಅವರೇ ಹೊಣೆ. ಅವರು ಸದಾ ಎಚ್ಚರದಿಂದ ಇರಬೇಕಿತ್ತು. ಏನಾದರೂ ಗಂಡಾಂತರ ಒದಗಿದ ಕೂಡಲೇ ಪಂಗಡದ ಎಲ್ಲ ಜನರೂ ಆದಷ್ಟು ತೀವ್ರವಾಗಿ, ಏಕತ್ರವಾಗಿ, ಸಂಯುಕ್ತವಾಗಿ ಕೆಲಸಮಾಡಬೇಕಿತ್ತು. ಗಂಡಾಂತರವು ಪೂರ್ಣವಾಗಿ ನಿವಾರಣೆಯಾಗುವತನಕ ಪರಸ್ಪರ ಅಗಲದೆ ಇರಬೇಕಿತ್ತು. ಹೀಗೆ ಹುಟ್ಟಿದ ಸಾಹಚರ್ಯ ಮತ್ತು ಸಹಭಾಗಿತ್ವವು ಅವರಲ್ಲಿ ಐಕಮತ್ಯವು ಅತಿ ಮಹತ್ವದ್ದು ಹಾಗೂ ಪವಿತ್ರವಾದುದು ಎಂಬ ಭಾವನೆಯನ್ನು ಬೆಳೆಸಿತ್ತು.

ತದ್ವಿರುದ್ಧವಾಗಿ, ಸ್ಥಾಯೀ ಸಮೂಹಗಳಲ್ಲಿ–ಅದರಲ್ಲೂ ಮುಖ್ಯವಾಗಿ ನಗರವಾಸಿಗಳಲ್ಲಿ–ಆಸಬಿಯಾ ಭಾವನೆ ದುರ್ಬಲವಾಗಿರುತ್ತದೆ. ಇಂಥ ಸಮೂಹ

ಗಳಲ್ಲಿ ಬಲಾಢ್ಯವಾದ ಸೇನೆಗಳಿರುವುದು ಸಾಮಾನ್ಯ. ಸೇನೆಗಳು ಜನರನ್ನು ರಕ್ಷಿಸುವ ಹೊಣೆ ಹೊತ್ತಿರುವುದರಿಂದ ಜನರಲ್ಲಿ ಮೃದುತ್ವ, ಆಲಸೀತನ ಹಾಗೂ ವಿಲಾಸಪ್ರವೃತ್ತಿಗಳು ಬೆಳೆದು ಐಕಮತ್ಯ ದುರ್ಬಲವಾಗುತ್ತದೆ. ಹೀಗೆ ಅನಾಗರಿಕ ಸಂಚಾರಿ ಜನಾಂಗಗಳಲ್ಲಿರುವ ಒಗ್ಗಟ್ಟು ದೊಡ್ಡ ನಗರರಾಜ್ಯಗಳಲ್ಲಿಲ್ಲ.

ಒಂದೇ ರಕ್ತಕ್ಕೆ ಸೇರಿದ ಕುಟುಂಬದ ಸದಸ್ಯರಲ್ಲಿ ಅಸಬಿಯಾ ತೀವ್ರವಾಗಿರುವುದನ್ನು ಇಬ್ನ ಖಾಲ್ದೂನ್ ಗುರುತಿಸಿದ್ದಾನೆ. ಅವರು ಪರಸ್ಪರರಿಗಾಗಿ ಮಾಡುವ ಬಲಿದಾನ ಹಾಗೂ ತ್ಯಾಗಗಳು ಪ್ರಸಿದ್ಧವಾಗಿವೆ. ಆದರೆ ಕೇವಲ ರಕ್ತ ಸಂಬಂಧಿಗಳಿಗೆ ಮಾತ್ರ ಈ ಭಾವನೆ ಸೀಮಿತವಾಗಿಲ್ಲ. ಪರಸ್ಪರ ಹತ್ತಿರ ಹತ್ತಿರವಾಗಿ ಬಾಳುವುದರಿಂದ, ಸಾಮಾನ್ಯ ಗಂಡಾಂತರಗಳನ್ನು ಒಟ್ಟಾಗಿ ಎದುರಿಸಬೇಕಾಗುವುದರಿಂದ, ಸಾಮಾನ್ಯ ವೈರಿಗಳ ವಿರುದ್ಧ ಸೆಣಸುವುದರಿಂದ, ಸಾಮಾನ್ಯ ಉದ್ಯಮ ಅಥವಾ ಪ್ರಯತ್ನಗಳಲ್ಲಿ ತೊಡಗುವುದರಿಂದ ಮತ್ತು ಸಾಮಾನ್ಯ ಗತಿಯನ್ನು ಅನುಭವಿಸುವುದರಿಂದ ಐಕ್ಯಭಾವನೆ ವೃದ್ಧಿಯಾಗುತ್ತದೆ.

ಸಮಾಜವು ನಿರಂತರವಾಗಿ ಸಾಗಬೇಕಾದರೆ ವ್ಯಕ್ತಿಗಳು ಇತರರೊಡನೆ ಒಗ್ಗೂಡಲೇಬೇಕು. ಅಸಬಿಯಾ ಇಲ್ಲದೆ ಅದು ಮುಂದುವರಿಯಲಾರದು. ಅದೆ ಎಲ್ಲರನ್ನೂ ನಿಯಂತ್ರಿಸುವ ಶಕ್ತಿ. ಎಲ್ಲಾ ಶಿಕ್ಷೆ ಅಥವಾ ದಂಡನೆಗಳಿಗಿಂತಲೂ ಅದು ಮಿಗಿಲಾದುದು. ಐಕಮತ್ಯ ಭಾವನೆ ಶಿಥಿಲವಾಗುತ್ತಲೇ ಕಾಲಕ್ರಮದಲ್ಲಿ ಸಮಾಜಗಳು ದುರ್ಬಲವಾಗುವುವು, ಪರಿವರ್ತನೆ ಹೊಂದುವುವು ಅಥವಾ ಅಳಿದು ಹೋಗುವುವು. ಒಟ್ಟಿನಲ್ಲಿ ಇಬ್ನ ಖಾಲ್ದೂನನ ಸಮಾಜ ಶಾಸ್ತ್ರದಲ್ಲಿ ಅಸಬಿಯಾ ಎಂಬುದು ಅತಿ ಮುಖ್ಯವಾದ ಒಂದು ತತ್ವ.

ಅನಾಗರಿಕ–ನಾಗರಿಕ ಸಮಾಜಗಳು

ಸಾರೊಕಿನ್ ಮೊದಲಾದ ಸಮಾಜಶಾಸ್ತ್ರಜ್ಞರು ಇಬ್ನ ಖಾಲ್ದೂನನನ್ನು ಗ್ರಾಮೀಣ–ನಾಗರಿಕ ಸಮಾಜಶಾಸ್ತ್ರದ ಅಧ್ವರ್ಯುವೆಂದು ಕರೆದಿದ್ದಾರೆಂದು ಹಿಂದೆ ಹೇಳಿದೆ. ಈ ಗೌರವ ಅವನಿಗೆ ಪೂರ್ಣವಾಗಿ ಸಲ್ಲಬೇಕು. ಆಧುನಿಕ ಸಮಾಜಶಾಸ್ತ್ರದಲ್ಲಿ ಈ ವಿಷಯವಾಗಿ ಕಂಡುಬರುವ ಅನೇಕ ವಿಚಾರಗಳು ಅವನ ಬರೆಹದಲ್ಲಿ ಕಂಡು ಬರುತ್ತವೆ. ಆರು ಶತಮಾನಗಳಷ್ಟು ಹಿಂದೆಯೇ ಗ್ರಾಮೀಣ ಮತ್ತು ನಗರ ಸಮಾಜಗಳ ನಡುವೆ ಇರುವ ಅನೇಕ ವ್ಯತ್ಯಾಸಗಳನ್ನು ಆತ ಆಶ್ಚರ್ಯಕರವಾಗಿ ಗುರುತಿಸಿದ್ದಾನೆ.

ಅವನ ಪ್ರಕಾರ ಮಾನವಸಮಾಜಗಳಲ್ಲಿ ತೀರ ಭಿನ್ನವಾದ ಎರಡು ರೂಪಗಳಿವೆ. ಇವುಗಳಲ್ಲಿ ಮೊದಲನೆಯದು ಅನಾಗರಿಕ ಸಮಾಜ (ಉಮರಾನ್ ಬದರೀ). ಎರಡನೆಯದು ನಾಗರಿಕ ಸಮಾಜ (ಉಮರಾನ್ ಬದವೀ). ಒಂದು ಅವಶ್ಯಕತೆಯ ಒಕ್ಕೂಟ; ಮತ್ತೊಂದು ವಿಲಾಸದ ಒಕ್ಕೂಟ. ಇವುಗಳ ಅಂತಸ್ಸತ್ವವನ್ನು ಇಬ್ನ ಖಾಲ್ದೂನ್ ಚೆನ್ನಾಗಿ ವಿವೇಚಿಸಿದ್ದಾನೆ. ಅನಾಗರಿಕ ಸಮಾಜದ ಬಗ್ಗೆ ಕೊಟ್ಟ ವಿವರಣೆಯು ಹೆಚ್ಚುಕಡಿಮೆ ಜರ್ಮನ್ ಸಮಾಜಶಾಸ್ತ್ರಜ್ಞರಾದ ಟೊನಿಸ್ ಹೇಳಿದ 'ಸಮುದಾಯ' (ಜೆಮಿನ್‌ಶಾಫ್ಟ್)ದ ವಿವರಣೆಯನ್ನು ಹೋಲುತ್ತದೆ. ಅದೇ ರೀತಿಯಲ್ಲಿ ನಾಗರಿಕ ಸಮಾಜದ ವರ್ಣನೆಯು ಟೊನಿಸ್ ಹೇಳಿದ ಕರಾರುರೂಪದ 'ಸಂಘಜೀವನ' (ಜೆಸೆಲ್‌ಶಾಫ್ಟ್)ವನ್ನು ಹೋಲುತ್ತದೆ.

ಅನಾಗರಿಕ ಸಮಾಜವು ಸರಳವಾಗಿದೆ. ಅಲ್ಲಿ ಅತ್ಯವಶ್ಯಕ ಬೇಡಿಕೆಗಳಷ್ಟೇ ಪೂರ್ತಿಗೊಳ್ಳುವುವು. ಅದು ಗಾತ್ರದಲ್ಲಿ ಚಿಕ್ಕದು; ಸ್ವಯಂಪೂರ್ಣವಾದುದು. ಸದಸ್ಯರು ಸರಳ ನೈಸರ್ಗಿಕ ಆಹಾರವನ್ನು ಬಳಸುತ್ತಾರೆ. ಅವರ ಉಡುಗೆ ಚರ್ಮದಿಂದ ಮಾಡಿದ್ದು ಅಥವಾ ಕೈನೇಯ್ಗೆಯ ಹತ್ತಿ ಬಟ್ಟೆಯದು. ಅವರು ಗುಹೆಗಳಲ್ಲೋ ಡೇರೆಗಳಲ್ಲೋ ಸರಳವಾದ ಗುಡಿಸಲುಗಳಲ್ಲೋ ವಾಸಿಸುತ್ತಾರೆ. ಅನಾಗರಿಕ ಸಮಾಜಗಳಲ್ಲಿ ನಗರಗಳಿಲ್ಲ; ಪೇಟೆ, ಯಂತ್ರೋಪಕರಣ, ತೆರಿಗೆಗಳು, ಓದು ಬರೆಹ ವಿಜ್ಞಾನಗಳೂ ಇಲ್ಲ. ಆದರೆ ಅಲ್ಲಿಯ ಜನ ಸದೃಢರು, ಶ್ರಮಜೀವಿಗಳು. ನಿಸರ್ಗದ ಸ್ವಚ್ಛಂದ ಬಾಳು ಅವರದು. ಪಾಪಗಳಿಂದ ದೂರವಿರುತ್ತಾರೆ; ತಿಳಿಸಿ ಹೇಳಿದರೆ ಸದ್ಗುಣಗಳನ್ನು ಬೆಳೆಸಿಕೊಳ್ಳುತ್ತಾರೆ. ಅವರಿಗೆ ನಿಯಂತ್ರಣಗಳೂ ತಾರತಮ್ಯಗಳೂ ಬೇಡ; ರಾಜಕೀಯ ಸಂಸ್ಥೆಗಳೂ ಬೇಡ. ಆದರೆ ಹಿರಿಯರನ್ನು ಮನ್ನಿಸುತ್ತಾರೆ; ಏಕಕುಟುಂಬಿಗಳಂತೆ ಐಕಮತ್ಯದಿಂದ ಬಾಳುತ್ತಾರೆ.

ನಾಗರಿಕ ಸಮಾಜಗಳು ತದ್ವಿರುದ್ಧವಾದ ಲಕ್ಷಣಗಳನ್ನು ಹೊಂದಿವೆಯೆಂದರೆ ಸಾಕು. ಅವರದು ಇಂದ್ರಿಯ ಪ್ರಧಾನವಾದ ಶೋಕೀ ಜೀವನ. ಐಕ್ಯಭಾವನೆ ಬಹು ಶಿಥಿಲವಾಗಿರುತ್ತದೆ. ನಿಯಂತ್ರಣಗಳು ಸಡಿಲುಗೊಂಡಿರುತ್ತವೆ. ಎಮಿಲ್ ಡರ್ಕಹೈಮ್ ಹೇಳಿದ 'ಅಪ್ರತಿಮಾನತೆ'ಯ (Anomie) ಸ್ಥಿತಿ ಮನೆಮಾಡಿರುತ್ತದೆ. ಧೈರ್ಯಸಾಹಸ ಭಾವನೆಗಳಿಲ್ಲ. ಸರಕಾರ ಮಾಡಲಿ, ಸರಕಾರ ನೋಡಲಿ ಅನ್ನುತ್ತಿರುತ್ತಾರೆ. ಇನ್ನೂ ಅನೇಕ ವಿಷಯಗಳಲ್ಲಿ ಅನಾಗರಿಕ ಮತ್ತು ನಾಗರಿಕ ಸಮಾಜಗಳು ಭಿನ್ನವಾಗಿವೆ.

ಇಷ್ಟು ಸತ್ವಯುತವಾದ ವಿವೇಚನೆಯನ್ನು ಇಬ್ನ ಖಾಲ್ದೂನನಂತೆ ಮಾಡಿದವರು ಬಹಳ ವಿರಳ. ಇತ್ತೀಚಿಗಿನ ಮೂರು ನಾಲ್ಕು ದಶಕಗಳಲ್ಲಿ ಈ ಬಗೆಗೆ ವಿವೇಚನೆ ನಡೆದಿದೆಯಾದರೂ ೧೪ನೆಯ ಶತಮಾನದ ಒಬ್ಬ ಇತಿಹಾಸ ಕಾರನು ಇದನ್ನು ಮಾಡಿದ್ದು ಆಶ್ಚರ್ಯದ ಮಾತು.

ರಾಜ್ಯದ ಹುಟ್ಟು-ಸಾವು

ಇಬ್ನ ಖಾಲ್ದೂನ್ ಪ್ರಾಚೀನ ರಾಜಶಾಸ್ತ್ರಜ್ಞರ ಹಾಗೆಯೇ ರಾಜ್ಯ ಮತ್ತು ಸಮಾಜಗಳ ನಡುವಿನ ಭೇದಗಳನ್ನು ಗುರುತಿಸಲಿಲ್ಲ. ಅವೆರಡೂ ಒಂದೇ ಎಂದು ಅವನ ಅಭಿಪ್ರಾಯ. ಹೀಗಾಗಿ ಅವನು ಅವುಗಳ ಉಗಮದ ಬಗೆಗೆ ಒಂದು ಸಾಮಾನ್ಯಸಿದ್ಧಾಂತವನ್ನು ಕೊಟ್ಟಿದ್ದಾನೆ.

ರಾಜ್ಯದ ಹುಟ್ಟು ಹಾಗೂ ಬೆಳವಣಿಗೆಯಲ್ಲಿ ನಾಲ್ಕು ಹಂತಗಳಿವೆ. ಮೊದಲ ಹಂತದಲ್ಲಿ ವ್ಯಕ್ತಿಗಳ ಅವಶ್ಯಕತೆಗಳನ್ನೂ ಇಚ್ಛೆಗಳನ್ನೂ ಪೂರೈಸಲು ಸಮೂಹ ಗಳು ಹುಟ್ಟಿಕೊಳ್ಳುತ್ತವೆ. ಚಿಕ್ಕಚಿಕ್ಕ ಕುಟುಂಬಗಳೂ ವಂಶಗಳೂ ಹುಟ್ಟಿ, ಅಧಿಕಾರ ಮತ್ತು ಮಹತ್ವಾಕಾಂಕ್ಷೆಗಳಿಗಾಗಿ ಸೆಣಸಾಡಿ, ಕೊನೆಗೆ ಯಾವುದಾದ ರೊಂದು ಅಲೆಮಾರಿ ಜನಾಂಗವು ಜಯಶಾಲಿಯಾಗುತ್ತದೆ. ಅದು ತನ್ನ ಐಕಮತ್ಯ ಮತ್ತು ಧರ್ಮದ ಶಕ್ತಿಯಿಂದಾಗಿ ಇತರ ಗುಂಪುಗಳನ್ನು ತನ್ನಲ್ಲಿ ವಿಲೀನಮಾಡಿ ಕೊಳ್ಳಬಹುದು. ಆ ಜನಾಂಗದ ಪ್ರಬಲ ವ್ಯಕ್ತಿಯೇ ವಿಸ್ತೃತ ಗುಂಪಿನ ನಾಯಕನಾಗುತ್ತಾನೆ. ಇದು ವೃದ್ಧಿಯ ಹಂತ.

ಎರಡನೆಯ ಹಂತದಲ್ಲಿ ಆ ನಾಯಕನ ಪ್ರಾಣಿಸಹಜವಾದ ಅಧಿಕಾರಮೋಹವು ಜಾಗೃತವಾಗುತ್ತದೆ. ಬರಬರುತ್ತ ಅವನು ಪೂರ್ಣವಾದ ಹಾಗೂ ನಿರಂಕುಶವಾದ ಪ್ರಭುತ್ವವನ್ನು ಬಯಸುತ್ತಾನೆ. ಜನರೆಲ್ಲರೂ ತಮ್ಮ ಕುಟುಂಬ, ವಂಶ ಹಾಗೂ ಜನಾಂಗಗಳ ನಿಷ್ಠೆಯನ್ನು ತೊರೆದು ತನ್ನ ಪ್ರಭುತ್ವಕ್ಕೆ ಪೂರ್ಣವಾದ ನಿಷ್ಠೆಯನ್ನು ತೋರಿಸಬೇಕೆಂದು ಆಶಿಸುತ್ತಾನೆ. ಅದನ್ನು ಸಾಧಿಸಲು ಸೈನ್ಯ ಮತ್ತು ದಂಡನೆಯ ಬೇರೆ ಮಾರ್ಗಗಳನ್ನು ಉಪಯೋಗಿಸುತ್ತಾನೆ. ರಾಜನ ಆಡಳಿತೆ ಯನ್ನು ಬಲಪಡಿಸಲು ವಿಸ್ತೃತವಾದ ಕರಣಿಕ ಪ್ರಭುತ್ವದ (Bureaucracy) ವ್ಯವಸ್ಥೆಯೊಂದು ಹೆಜೆದುಕೊಳ್ಳುತ್ತದೆ. ಜನರಲ್ಲಿರುವ ಧಾರ್ಮಿಕಭಾವನೆ ಮತ್ತು ಸ್ವಾಭಾವಿಕವಾದ ಐಕಮತ್ಯವು ನಾಶವಾಗಿ ಆಡಳಿತ ವ್ಯವಸ್ಥೆ ಮತ್ತು ಸೈನ್ಯ ಮುಂತಾದ ಹೊಸ ಸಂಘಟನೆಗಳಿಂದ ಬರುವ ಬಾಹ್ಯ ಐಕಮತ್ಯವೇ ರಾಜ್ಯವನ್ನಾಳುಸುತ್ತದೆ.

ಮೂರನೆಯ ಹಂತದಲ್ಲಿ ನಾಗರಿಕತೆ ತುಂಬಾ ಬೆಳೆದಿರುತ್ತದೆ. ರಾಜನೂ ಅವನ ಅನುಯಾಯಿಗಳೂ ಫಲಗಳನ್ನು ಭೋಗಿಸುವುದರಲ್ಲಿ ತೊಡಗಿರುತ್ತಾರೆ. ರಾಜಧಾನಿಯು ಅಲಂಕಾರ, ವೈಭವ, ಐಷಾರಾಮ, ಕಲೆ ಮತ್ತು ವಿಜ್ಞಾನಗಳಿಗೆ ಪ್ರೋತ್ಸಾಹ ಸಿಗುತ್ತದೆ. ಇಲ್ಲಿಂದ ಮುಂದೆ ನಾಲ್ಕನೆಯ ಹಾಗೂ ಕೊನೆಯ ಹಂತ. ಈ ಹಂತದಲ್ಲಿ ಮೇಲ್ನೋಟಕ್ಕೆ ಸಮೃದ್ಧಿ ಸಂತೋಷಗಳಿದ್ದರೂ ಜನರಲ್ಲಿ ಧನ್ಯತಾಭಾವನೆಯೂ ಮೃದುತ್ವವೂ ಬಂದಿರುತ್ತದೆ. ಅವರು ದುರ್ಬಲರೂ ಅಜಾಗರೂಕರೂ ಆಗಿರುತ್ತಾರೆ. ಈ ಸಂದರ್ಭಕ್ಕಾಗಿಯೇ ಕಾದು ನಿಂತಿರುವ ಹೊರಗಿನ ಅನಾಗರಿಕ ಜನಾಂಗವೊಂದು ಅದರಮೇಲೆ ಆಕ್ರಮಣ ಮಾಡಿ ನಾಗರಿಕತೆಯನ್ನು ನೆಲಸಮಮಾಡುತ್ತದೆ. ಇಲ್ಲಿಗೆ ರಾಜ್ಯಚಕ್ರದ ಒಂದು ಆವರ್ತ ಮುಗಿದಂತಾಯಿತು.

ಈ ರಾಜ್ಯಚಕ್ರ ಮತ್ತೆಮತ್ತೆ ಸುತ್ತುತ್ತಲೇ ಇರುತ್ತದೆ. ಆಕ್ರಮಣದಲ್ಲಿ ಜಯಶಾಲಿಯಾದ ಹೊಸ ಜನಾಂಗವು ಕಾಲಕ್ರಮೇಣ ನಗರಜೀವನಕ್ಕೆ ಮನಸೋತು ಐಕಮತ್ಯವನ್ನು ಕಳೆದುಕೊಂಡು, ಬೇರೊಂದು ಬಲಾಢ್ಯವಾದ ಆಕ್ರಮಣಕಾರಿ ಗುಂಪಿನ ದಾಳಿಗೆ ಬಲಿಯಾಗುತ್ತದೆ. ಬಾಹ್ಯ ಆಕ್ರಮಣವು ರಾಜ್ಯದ ಸಾವಿನ ಹೇತುವೇನೋ ನಿಜ; ಆದರೆ ಅದರ ನಿಜವಾದ ಕಾರಣವೆಂದರೆ ಒಳಗಿನ ಐಕಮತ್ಯ ಕುಗ್ಗಿರುವುದು ಹಾಗೂ ಧರ್ಮದಿಂದ ಬರುವ ಶಕ್ತಿಯು ಹ್ರಾಸವಾಗಿರುವುದು ಎಂದರೆ ತಪ್ಪಿಲ್ಲ.

ಇದು ರಾಜ್ಯದ ಹುಟ್ಟುಸಾವುಗಳ ಸಿದ್ಧಾಂತ. ಇದು ಇಬ್ನ ಖಾಲ್ದೂನ್ ಕಂಡ ಅರಬ್ಬಿ ತಂಡಗಳ ಸೆಣಸಾಟದ ಅನುಭವದಿಂದ ಹುಟ್ಟಿರಬೇಕು ಎನ್ನಿಸುತ್ತದೆ. ಇಲ್ಲಿ ಮನುಷ್ಯಪ್ರಯತ್ನಗಳಿಗೆ ಹೆಚ್ಚಿನ ಸ್ಥಾನವಿಲ್ಲ ಎಂಬ ಭಾವನೆ ಬರುತ್ತದೆ. ಆದುದರಿಂದ ಈ ಸಿದ್ಧಾಂತವನ್ನು ನಿಯತಿವಾದ ಎಂದು ಕರೆದವರಿದ್ದಾರೆ. ಹಾಗೆಯೇ ಅದು ನಿರಾಶಾವಾದದ ಸಿದ್ಧಾಂತ ಎಂಬ ಟೀಕೆಯೂ ಇವೆ.

ಸಂಘರ್ಷ ಮತ್ತು ಸಾಮಾಜಿಕ ಪರಿವರ್ತನೆ

ಹಿಂದೆ ಹೇಳಿದಂತೆ ಇಬ್ನ ಖಾಲ್ದೂನನ ಹೆಸರನ್ನು ಬೆಳಕಿಗೆ ತಂದುದು ಅವನ ಸಂಘರ್ಷ ಸಿದ್ಧಾಂತ. ಆದರೆ ವಾಸ್ತವವಾಗಿ ಅವನು (ಆ ನಂತರದ ಸಿದ್ಧಾಂತಕಾರರ ಹಾಗೆ) ಸಂಘರ್ಷವೇ ಸಮಾಜದ ಬೆಳವಣಿಗೆಯ ಅಥವಾ ಪರಿವರ್ತನೆಯ ಕೇಂದ್ರ ಚಾಲಕಶಕ್ತಿಯೆಂದು ಒಪ್ಪುವುದಿಲ್ಲ. ಅವನ ಪ್ರಕಾರ ಅದು ಸಮಾಜವನ್ನು ರೂಪಿಸುವ ಹಾಗೂ ಬದಲಿಸುವ ಅನೇಕ ಅಂಶಗಳಲ್ಲಿ

ಒಂದು. ಸಂಘರ್ಷದಂತೆ ಐಕಮತ್ಯವೂ ಒಂದು ಪ್ರಬಲ ಅಂಶವೆಂದು ಇಬ್ನ ಖಾಲ್ದೂನ್ ಸಾರಿಹೇಳಿದ್ದಾನೆ. ನಾವು ಮುಂದೆ ನೋಡುವಂತೆ ಭೌಗೋಳಿಕ ಅಂಶವೂ ಕೂಡ ಮಹತ್ವದ್ದಾಗಿದೆ.

ಮಾನವನು ಸ್ವಭಾವತಃ ಸಮಾಜಜೀವಿಯಾಗಿದ್ದಾನೆ; ಸಹಕರಿಸಿ ಬಾಳುತ್ತಾನೆ. ಆದರೆ ಅವನ ಇಚ್ಛೆಗಳು ಸಂಘರ್ಷವನ್ನು ತಂದೇತರುತ್ತವೆ. ಸಂಚಾರಿ ಜನಾಂಗಗಳು ಸ್ಥಾಯೀ ಸಮಾಜಗಳೊಡನೆ, ಅನಾಗರಿಕರು ನಾಗರಿಕರೊಡನೆ ಸಂಘರ್ಷಕ್ಕೆ ಇಳಿಯುತ್ತಾರೆ. ಈ ಹಿಂದೆ ನೋಡಿದಂತೆ ರಾಜ್ಯಗಳ ಅಭ್ಯುದಯ ಮತ್ತು ಅವಸಾನಗಳಿಗೆ ಹಾಗೂ ಪರಿವರ್ತನೆಗಳಿಗೆ ಸಂಘರ್ಷವೇ ಕಾರಣ. ಆರ್ಥಿಕ ಸಂಸ್ಥೆಗಳ ಹಿಂದೆಯೂ ಸಂಘರ್ಷವಿದೆ. ಲಾಭದ ಬಯಕೆಯು ಅಧಿಕಾರದ ದಾಹದಂತೆಯೇ ಮಾನವನ ಒಂದು ಮೂಲಭೂತವಾದ ಲಕ್ಷಣ. ಈ ಲಾಭದ ಬಯಕೆಯಿಂದಾಗಿ ಕೃಷಿ, ವ್ಯಾಪಾರ ಉದ್ದಿಮೆಗಳೂ ವೃತ್ತಿಗಳೂ ಹುಟ್ಟಿಕೊಳ್ಳುತ್ತವೆ. ಸಂಘರ್ಷವು ಇವುಗಳ ಸಹಚರಿ.

ಇಬ್ನ ಖಾಲ್ದೂನನಿಗೂ ಇನ್ನಿತರ ಸಂಘರ್ಷ ಸಿದ್ಧಾಂತಕಾರರಿಗೂ ಒಂದು ಮುಖ್ಯವಾದ ಭೇದವಿದೆ. ಉಳಿದವರು ಸಂಘರ್ಷವು ಸಾಮಾಜಿಕ ಪ್ರಗತಿಗೆ ಸಾಧಕವೆಂದು ಬಗೆದರೆ, ಇಬ್ನ ಖಾಲ್ದೂನ್ ಆ ಮಾತನ್ನು ಒಪ್ಪುವುದಿಲ್ಲ. ಅವನ ವಿಶ್ಲೇಷಣೆಯಂತೆ ವಿಜಯದ ಕೊನೆಗೆ ಇರುವುದು ಮತ್ತೆ ಸೋಲು. ರಾಜ್ಯಗಳ ಹುಟ್ಟುಸಾವಿನ ಕಥೆ ತಿಳಿಸುವಂತೆ, ನಾಗರಿಕ ಸಮಾಜಗಳು ಬಾರಿಬಾರಿಗೆ ಅನಾಗರಿಕ ಸಮಾಜಗಳ ಆಕ್ರಮಣಕ್ಕೆ ತುತ್ತಾಗುತ್ತವೆ. ವಿಜಯಿಗಳಾದ ಅನಾಗರಿಕರೂ ಸಹ ತಾವು ಸೋಲಿಸಿದ ಪರಾಜಿತ ಜನಾಂಗದ ಅನುಕರಣೆ ಮಾಡುತ್ತ ವಿಲಾಸಿಗಳೂ ಸತ್ವಹೀನರೂ ಆಗುತ್ತಾರೆ. ಮತ್ತೊಮ್ಮೆ ಅಭ್ಯುದಯ-ಅವಸಾನಗಳ ಆವರ್ತ ಪ್ರಾರಂಭವಾಗುತ್ತದೆ. ಇದು ಇಬ್ನ ಖಾಲ್ದೂನ್ ಕೊಟ್ಟ ಸಾಮಾಜಿಕ ಪರಿವರ್ತನೆಯ ಆವರ್ತ (Cyclic) ಸಿದ್ಧಾಂತ.

ಇಬ್ನ ಖಾಲ್ದೂನ್ ಕಂಡಂತೆ ಪ್ರತಿಯೊಂದು ರಾಜ್ಯವೂ ಉದಯ, ಅಭ್ಯುದಯ ಮತ್ತು ಅವಸಾನ-ಹೀಗೆ ಮೂರು ಹಂತಗಳನ್ನು ಕಾಣುತ್ತವೆ. ಅದರ ಒಟ್ಟು ಆಯುಷ್ಯ ಮೂರು ತಲೆಮಾರುಗಳು ಅಥವಾ ಸುಮಾರು ೧೨೦ ವರ್ಷಗಳು. ಉದಯ-ಅಭ್ಯುದಯ-ಅವಸಾನಗಳ ಆವರ್ತಗಳನ್ನು ತಪ್ಪಿಸಲು ಸಾಧ್ಯವಿಲ್ಲ ಎಂದು ಅವನ ಮತ. ಎಷ್ಟೇ ಪ್ರಬಲರಾದ ನಾಯಕರೂ ಕೂಡ ಅದನ್ನು ತಡೆಯಲಾರರು. ಸಮಾಜದ ಪ್ರಾರಬ್ಧವನ್ನು ಯಾರು ತಡೆಯಬೇಕು ?

ಭೌಗೋಳಿಕದ ಬೇಲಿ

ಭೌಗೋಳಿಕ ಆವರಣವು ಸಮಾಜದ ಮೇಲೆ ಎಂಥ ಪ್ರಭಾವ ಬೀರುತ್ತದೆ ಯೆಂಬುದನ್ನು ಇಬ್ನ ಖಾಲ್ದೂನ್ 'ಮುಕದ್ದಮಾ'ದ ಆರಂಭ ಭಾಗದಲ್ಲಿ ಪ್ರಸ್ತಾಪಿಸಿದ್ದಾನೆ. ಮುಂದಿನ ಶತಮಾನಗಳಲ್ಲಿ ಅನೇಕರು ಭೌಗೋಳಿಕ ನಿರ್ಣಯವಾದವನ್ನು ಸಮರ್ಥಿಸಿ ಆ ಬಗೆಗೆ ಹೆಚ್ಚುಹೆಚ್ಚಾಗಿ ಸಾಕ್ಷ್ಯಗಳನ್ನು ಸಂಗ್ರಹಿಸಲು ಯತ್ನಿಸಿದ್ದಾರೆಂಬುದು ನಿಜ. ಆದರೆ ಭೌಗೋಳಿಕ ಅಂಶಗಳ ಮಹತ್ವವನ್ನು ಅಸಹಜತೆ ಮತ್ತು ಉತ್ಪ್ರೇಕ್ಷೆಗಳಿಲ್ಲದೆ ಸಾರಿದವರಲ್ಲಿ ಇಬ್ನ ಖಾಲ್ದೂನನೇ ಮೊದಲಿಗ. ಅವನು ಹೇಳುವಂತೆ ನಾಗರಿಕತೆಯು ಯಾವಾಗಲೂ 'ಭೌಗೋಳಿಕದ ಬೇಲಿ'ಯೊಳಗೆಯೇ ಇರುತ್ತದೆ; ಅದರ ಪರಿಮಿತಿಯೊಳಗೆಯೇ ಬೆಳೆಯುತ್ತದೆ. ಅತಿಯಾದ ಶೀತ ಅಥವಾ ಉಷ್ಣ ಹವಾಗುಣದಲ್ಲಿ ಮಾನವ ಸಮೂಹಗಳು ಪ್ರಾಣಿ ಜೀವನದಿಂದ ಬಹಳ ಎತ್ತರಕ್ಕೆ ಏರಲಾರವು. ಸಮಶೀತೋಷ್ಣವಲಯದಲ್ಲಿ ಮಾತ್ರ ನಾಗರಿಕತೆಯು ನಿರಾತಂಕವಾಗಿ ಬೆಳೆಯಬಲ್ಲುದು. ಗಾಳಿ, ನೆಲ, ಆಹಾರಗಳು ಅನುಕೂಲವಿದ್ದ ಕಡೆ ನಿಸರ್ಗದೊಡನೆ ಗುದ್ದಾಡುವ ಶ್ರಮವಿಲ್ಲ.

ಅವನ ಪ್ರಕಾರ ಹವಾಗುಣವು ಮಾನವನ ಮೈಮನಸ್ಸುಗಳೆರಡರ ಮೇಲೆಯೂ ಪ್ರಭಾವ ಬೀರುತ್ತದೆ. ಶೀತವಲಯದ ನಿವಾಸಿಗಳು ಸಾಧಾರಣವಾಗಿ ತಿಳುಮೈಬಣ್ಣದವರೂ ಪ್ರಶಾಂತ ಸ್ವಭಾವದವರೂ ಆಗಿರುತ್ತಾರೆ. ಉಷ್ಣವಲಯದ ಜನರು ಕಪ್ಪು ಮೈಬಣ್ಣದವರೂ ಉಲ್ಲಾಸಭರಿತರೂ ಇರುತ್ತಾರೆ. ಉದಾಹರಣೆಗೆ ಇಜಿಪ್ಶಿಯನರು ಸದಾ ಸುಪ್ರಸನ್ನರೂ, ಲಲಿತ ಸ್ವಭಾವದವರೂ, ನಾಳಿನ ಬಗ್ಗೆ ಚಿಂತೆ ಮಾಡದ ಜನರೂ ಆಗಿದ್ದಾರೆ. ಹವಾಗುಣದಂತೆ ಆಹಾರವೂ ಮುಖ್ಯ. ನಗರವಾಸಿಗಳು ದುರ್ಬಲರಾಗಿ ಅವನತಿಹೊಂದಲು ಅವರನ್ನು ಮಿದುಮಾಡುವ ಆಹಾರವೂ ಒಂದು ಪ್ರಬಲ ಕಾರಣ ಎಂದು ಅವನು ಹೇಳುತ್ತಾನೆ.

ಅರಬರ ಸಾಮ್ರಾಜ್ಯಗಳಲ್ಲಿದ್ದ ಒಂದು ವಿಶೇಷವಾದ ಪ್ರಾಕೃತಿಕ ಲಕ್ಷಣವನ್ನು ಅವನು ಗುರುತಿಸಿದ್ದಾನೆ. ಅದೇನೆಂದರೆ, ಅರಬರು ಎರಡು ರೀತಿಯ ನೆಲೆಗಳಲ್ಲಿ ವಾಸಮಾಡುತ್ತಾರೆ. ಮೊದಲನೆಯದು ವಿಶಾಲವಾದ ಮರುಭೂಮಿ ಅಥವಾ ಕಲ್ಲುಬಂಡೆಗಳಿರುವ ಮೈದಾನು ಜಾಗ. ಅದು ಏನೂ ಬೆಳೆಯದ ಬರಡು ಭೂಮಿ. ಅಲ್ಲಿ ವಾಸಮಾಡಿಕೊಂಡಿರುವವರು ಅಲೆಮಾರಿ ಜನಾಂಗದವರು. ಎರಡನೆಯದು ಇಂಥ ಮರಳುಗಾಡಿನ ನಡುನಡುವೆ ಕಂಗೊಳಿಸುವ ಫಲವತ್ತಾದ ಕೃಷಿಭೂಮಿ. ಇಲ್ಲಿನ ಜನರು ಬೇಸಾಯ ಮತ್ತು ಉದ್ದಿಮೆಗಳಲ್ಲಿ ತೊಡಗಿರುತ್ತಾರೆ. ಹೀಗೆ, ಅವರ ಜಗತ್ತು ಅನಾಗರಿಕ ಅಲೆಮಾರಿಗಳು ಮತ್ತು ನಾಗರಿಕ

ಜನರು ಎಂದು ಇಬ್ಭಾಗವಾಗಿದೆ. ಪ್ರತಿಯೊಂದು ಭಾಗಕ್ಕೂ ತನ್ನದೇ ಆದ ಲಕ್ಷಣಗಳಿವೆ. ಹಿಂದೆ ಹೇಳಿದಂತೆ ಮರುಭೂಮಿಯ ಅನಾಗರಿಕ ಅಲೆಮಾರಿಗಳು ನಾಗರಿಕರ ಮೇಲೆ ಆಕ್ರಮಣ ಮಾಡುತ್ತಿರುತ್ತಾರೆ. ಮುಂದೆ ತಾವೂ ನಾಗರಿಕರಾಗಿ, ದುರ್ಬಲರಾಗಿ ಬೇರೆ ಅಲೆಮಾರಿಗಳ ಆಕ್ರಮಣಕ್ಕೆ ತುತ್ತಾಗುತ್ತಾರೆ. ಇದು ಅನಾಗರಿಕ ಮತ್ತು ನಾಗರಿಕ ಜನಾಂಗಗಳ ತಾಕಲಾಟವೂ ಹೌದು; ಇದು ಇಬ್ನ ಖಾಲ್ದೂನ್ ಕಂಡ ಭೌಗೋಳಿಕ ಸತ್ಯ. ಇದು ಅತಿರೇಕ ಮತ್ತು ಅಸಹಜತೆಗಳಿಲ್ಲದ ಭೌಗೋಳಿಕ ನಿರ್ಣಯವಾದ.

ಇಬ್ನ ಖಾಲ್ದೂನನು ಪ್ರಥಮ ನಿಜ ಸಮಾಜಶಾಸ್ತ್ರಜ್ಞನೆ ?

ಈಗ ನಾವು ಇಬ್ನ ಖಾಲ್ದೂನನಿಗೆ 'ಪ್ರಥಮ ನಿಜ ಸಮಾಜಶಾಸ್ತ್ರಜ್ಞ'ನೆಂಬ ಬಿರುದು ಎಷ್ಟರಮಟ್ಟಿಗೆ ಒಪ್ಪೀತೆಂದು ಲೆಕ್ಕಹಾಕೋಣ. ಯಾವುದರಲ್ಲಿ ಅವನು 'ಪ್ರಥಮ'ನು ? ಎಷ್ಟರಮಟ್ಟಿಗೆ ಅವನು 'ನಿಜ' ಸಮಾಜಶಾಸ್ತ್ರಜ್ಞನು ?

ಅವನು, ಅಗಸ್ಟ ಕೋಂಟನ ಹಾಗೆ 'ಸಮಾಜಶಾಸ್ತ್ರ' ಎಂಬ ಈಗಿನ ಹೆಸರನ್ನು ಕೊಟ್ಟಿಲ್ಲ. ಆದರೆ ಅವನು ಕೊಟ್ಟ 'ಸಂಸ್ಕೃತಿ ಶಾಸ್ತ್ರ' (ಇಲ್ಮ ಅಲ್ ಉಮರಾನ್) ಎಂಬ ಹೆಸರು ತೂಕದಲ್ಲಿ ಕಡಿಮೆಯೇನಲ್ಲ. ಅದೇನೇ ಇರಲಿ, ಅವನು ಇತಿಹಾಸದರ್ಶನವನ್ನು ಮಾಡಿಸುತ್ತಾನೆ; ಬೇರೆ ಅಧ್ವರ್ಯುಗಳಿಗಿಂತ ಅದನ್ನು ಚೆನ್ನಾಗಿಯೇ ಮಾಡಿಸುತ್ತಾನೆ.

ಅವನ 'ಅಸಬಿಯಾ' ಕಲ್ಪನೆ ಅತಿ ಮೌಲಿಕವಾದ ಕೊಡುಗೆ. ಅಂಥ ವಿಚಾರಗಳನ್ನು ಮುಂದಿನವರು ಕ್ವಚಿತ್ತಾಗಿ ಕೊಟ್ಟಿದ್ದಾರೆಂದರೆ ತಪ್ಪಿಲ್ಲ. ಇದಲ್ಲದೆ ಅವನು ಅನಾಗರಿಕ ಮತ್ತು ನಾಗರಿಕ ಜನರಲ್ಲಿರುವ ಗುಣಭೇದಗಳನ್ನು ಅತ್ಯಾಧುನಿಕ ರೀತಿಯಲ್ಲಿ ವಿಶ್ಲೇಷಿಸಿದ್ದಾನೆ. ಅವನು ಕೊಟ್ಟ ರಾಜ್ಯದ ಹುಟ್ಟು ಸಾವುಗಳ ವಿವರಣೆಯು ಆಗಿನ ಕಾಲದಮಟ್ಟಿಗೆ ಹೇಳುವುದಾದರೆ ಒಳ್ಳೆಯ ರಾಜ್ಯಶಾಸ್ತ್ರವಾಗಿತ್ತು; ಅದು ಒಳ್ಳೆಯ ಸಮಾಜಶಾಸ್ತ್ರವೂ ಆಗಿದೆ.

ಇಬ್ನ ಖಾಲ್ದೂನನ ಸಂಘರ್ಷಸಿದ್ಧಾಂತವನ್ನು ಮೆಚ್ಚದಿರುವ ಸಮಾಜಶಾಸ್ತ್ರಜ್ಞರಿಲ್ಲ. ಅದು ಹೆಚ್ಚು ಸ್ವೀಕಾರಾರ್ಹವಾಗಿದೆ. ಅದೇ ರೀತಿಯಲ್ಲಿ ಅವನು ಭೌಗೋಳಿಕ ಅಂಶಗಳ ಮಹತ್ವವನ್ನು ಉತ್ಪ್ರೇಕ್ಷೆಗಳಿಲ್ಲದೆ ಒತ್ತಿಹೇಳಿದ್ದಾನೆ. ಇಲ್ಲಿಯೂ ಅವನು ಅನೇಕ ಆಧುನಿಕ ಲೇಖಕರಿಗಿಂತ ಹೆಚ್ಚು ಸ್ವೀಕಾರಾರ್ಹನಾಗಿದ್ದಾನೆ. ಮುಂದಿನ ಅನೇಕ ಸಿದ್ಧಾಂತಕಾರರು ನೀಡಿದ ಸಿದ್ಧಾಂತಗಳಿಗೆ

ಸರಿದೊರೆಯಾದ ಸಾಮಾಜಿಕ ಪರಿವರ್ತನೆಯ ಸಿದ್ಧಾಂತವೊಂದನ್ನೂ ಇಬ್ನ ಖಾಲ್ದೂನ್ ನೀಡಿದ್ದಾನೆ.

ಒಟ್ಟಿನಲ್ಲಿ, ಹದಿನಾಲ್ಕನೆಯ ಶತಮಾನದಲ್ಲಿದ್ದ ಈ ಅರಬ ಇತಿಹಾಸಕಾರನು ಹಲವು ಹತ್ತುರೀತಿಗಳಲ್ಲಿ ಆಧುನಿಕ ಸಮಾಜಶಾಸ್ತ್ರದ ಪ್ರಕಲ್ಪನೆ ಮತ್ತು ಸಿದ್ಧಾಂತಗಳಿಗೆ ಸಮನಾದ ಪ್ರಕಲ್ಪನೆ ಮತ್ತು ಸಿದ್ಧಾಂತಗಳನ್ನು ಮುಂಡಿಸಿದ್ದಾನೆ. ಆದುದರಿಂದ ಸಮಾಜಶಾಸ್ತ್ರದ ಜನಕನೆಂಬ ಬಿರುದು ಅವನಿಗೆ ಸಲ್ಲಬೇಕೆಂಬ ವಾದವಿದೆ. ಹಲವು ರೀತಿಗಳಲ್ಲಿ ಸಮಾಜದ ಶಾಸ್ತ್ರೀಯ ಮತ್ತು ವಸ್ತುನಿಷ್ಠವಾದ ಅಧ್ಯಯನವು ಇಬ್ನ ಖಾಲ್ದೂನನಿಂದಲೇ ಪ್ರಾರಂಭವಾಯಿತೆಂದರೆ ತಪ್ಪಿಲ್ಲ. ಅಂದರೆ, ಸಮಾಜಶಾಸ್ತ್ರದ ಪ್ರಾರಂಭವು ಅಗಸ್ಟ ಕೋಂಟನಿಗಿಂತ ನಾಲ್ಕು ಶತಮಾನಗಳ ಹಿಂದೆ ಇಬ್ನ ಖಾಲ್ದೂನನಿಂದ ಅರಬ ಜಗತ್ತಿನಲ್ಲಿ ಆಯಿತೆನ್ನಬೇಕು!

——

ಮಾನವತಾವಾದಿ ಬಸವಣ್ಣ

● ವಸಂತ ಪಾಟೀಲ

ಬಸವಣ್ಣನವರ ವಿಚಾರಧಾರೆಗೆ ಕುಲನೆಲಗಳು ಸೀಮಿತವಾಗಿಲ್ಲ. ಅದು ಜಗದಗಲ ಹಬ್ಬಿದ ಮಾನವತೆಗೇ ಮೀಸಲು. ಬಸವಣ್ಣನವರ ಆಚಾರವಿಚಾರಗಳು ಆದರ್ಶಪ್ರಾಯ-ಇಡೀ ಮಾನವತೆಗೆ. ಅಂತೆಯೇ ಅವರು ಜಗದ ಜ್ಯೋತಿ, ಮಾನವತೆಯ ಜೀವನದ ಕಾಂತಿ. ಅವರು ಆದರ್ಶಕ್ಕಾಗಿ ಆದರ್ಶದಿಂದ ಬಾಳಿದರು. ಅಂತೆಯೇ ಅವರು ಹನ್ನೆರಡನೆಯ ಶತಮಾನದಿಂದ ಇಂದಿನವರೆಗೂ ಅಮರರಾಗಿ ಬಂದಿರುವರು. ಅಮರರಾಗಿಯೇ ಉಳಿಯುವರು ಮಾನವತೆ ಇರುವತನಕ.

ಬಸವಣ್ಣನವರ ಆದರ್ಶ ಜೀವನವೇ ಜನತೆಗೆ ಒಂದು ದೊಡ್ಡ ಕೊಡುಗೆ. ಆದರ್ಶವಾಗಿ ಬದುಕಬೇಕೆನ್ನುವವರಿಗೆ ಬಸವಣ್ಣನವರ ಆಚಾರವಿಚಾರಗಳು ಆದರ್ಶಪ್ರಾಯ. ಮಾನವನು ದಾನವನಾಗದೆ ನಿಜ ಮಾನವನಾಗಿಯೇ ಬದುಕಬೇಕೆಂಬುದು ಬಸವಣ್ಣನವರ ಹಂಬಲವಾಗಿತ್ತು.

ಶರಣರ ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರಿದ್ದರು. ಅವರ ಜನ್ಮದೂರಾದ ಬಾಗೇವಾಡಿ (ವಿಜಾಪುರ ಜಿಲ್ಲೆಯ ಬಸವನಬಾಗೇವಾಡಿ), ಅವರಿಗೆ ಶಿಕ್ಷಣ ಮತ್ತು ಸ್ಫೂರ್ತಿಯನ್ನಿತ್ತ ತಾಣ ಕೂಡಲ ಸಂಗಮ (ವಿಜಾಪುರಜಿಲ್ಲೆ

ಹುನಗುಂದ ತಾಲೂಕು) ಹಾಗೂ ಅವರ ಕಾರ್ಯಕ್ಷೇತ್ರವಾದ ಕಲ್ಯಾಣ (ಬೀದರ ಜಿಲ್ಲೆಯ ಬಸವಕಲ್ಯಾಣ) ಗಳು ಇಂದಿಗೂ ಪಾವನವಾಗಿವೆ, ಪುಣ್ಯಕ್ಷೇತ್ರಗಳಾಗಿವೆ.

ಕಲ್ಯಾಣದಲ್ಲಿ ಸ್ಥಾಪಿಸಿದ ಅನುಭವಮಂಟಪ, ಶೂನ್ಯಸಿಂಹಾಸನಗಳು ಬಸವಣ್ಣನವರು ಸಮಾಜಕ್ಕೆ ನೀಡಿದ ಉತ್ತಮ ಕೊಡುಗೆಗಳು. ಅವು ವೈಚಾರಿಕ ಕ್ರಾಂತಿಗೆ ಅನುವುಮಾಡಿಕೊಟ್ಟವಲ್ಲದೆ, ಸಮಾಜಕ್ಕೆ ನೈತಿಕ ನೆಲಗಟ್ಟನ್ನು ಹಾಕಿಕೊಟ್ಟವು. ಒಟ್ಟಿನಲ್ಲಿ ಅವು ಅಸ್ತವ್ಯಸ್ತವಾಗಿದ್ದ ಸಮಾಜಕ್ಕೆ ಒಂದು ಸ್ಥಿರತೆಯನ್ನು ನೀಡಿ, ಸಮಾಜದ ಉನ್ನತಿಯತ್ತ ಮಾರ್ಗದರ್ಶನ ಮಾಡಿದವು. ಅವುಗಳ ಮುಖಾಂತರ ಅಲ್ಲಮಪ್ರಭು, ಚೆನ್ನಬಸವಣ್ಣ, ಅಕ್ಕಮಹಾದೇವಿ ಮುಂತಾದ ಶರಣ ಶರಣೆಯರು ಬೆಳಕಿಗೆ ಬಂದರು. ಒಟ್ಟಿನಲ್ಲಿ ಅದು ಶರಣರ ಕಾಲ, ಶರಣರ ಯುಗವಾಗಿ ಮಾರ್ಪಟ್ಟಿತು. ಶರಣರು ನಿಂತ ನೆಲಗಳು ಪಾವನವಾಗಿ ಇಂದಿಗೂ ಪುಣ್ಯಕ್ಷೇತ್ರಗಳಾಗಿ ಪರಿಣಮಿಸಿವೆ. ಅಂಥವುಗಳಲ್ಲಿ ಚೆನ್ನಬಸವಣ್ಣನ ಉಳವಿ, ಅಕ್ಕಮಹಾದೇವಿಯ ಶ್ರೀಶೈಲ ಮತ್ತು ಮೂರುಸಾವಿರ ಶರಣರು ತಂಗಿದ ತಾಣ ಹುಬ್ಬಳ್ಳಿಯ ಮೂರುಸಾವಿರಮಠಗಳನ್ನು ಉದಾಹರಿಸಬಹುದು.

ಭಕ್ತಿಭಂಡಾರಿ ಬಸವಣ್ಣ ಜ್ಞಾನದ ಖಣಿಯೂ ಆಗಿದ್ದರು. ಅಂತೆಯೇ ಜ್ಞಾನಿಗಳಾದ ಅಲ್ಲಮಪ್ರಭು, ಚೆನ್ನಬಸವಣ್ಣ ಮುಂತಾದ ಶರಣರನ್ನು ಅವರು ಆಕರ್ಷಿಸಿದ್ದರು. ಮಾನವತೆ ಬದುಕಲು ಭಕ್ತಿ, ಜ್ಞಾನಗಳೆರಡೇ ಸಾಕಾಗದು ಎಂಬುದನ್ನು ಬಸವಣ್ಣನವರು ಅರಿತಿದ್ದರು. ಅಂತೆಯೇ ಪ್ರತಿಯೊಬ್ಬ ಶರಣ ಶರಣೆಯರಿಗೂ ಕರ್ಮದ ಮರ್ಮ ಅರುಹಿ ಅವರೆಲ್ಲರಿಗೂ ಕಾಯಕದ ಕಂಕಣ ಕಟ್ಟಿದ್ದರು. ಈ ರೀತಿ ಭಕ್ತಿ, ಜ್ಞಾನ, ಕರ್ಮಗಳ ತ್ರಿವೇಣಿ ಸಂಗಮವಾದ ಕಲ್ಯಾಣ ಕೈಲಾಸವೆನಿಸಿದ್ದರಲ್ಲಿ ಆಶ್ಚರ್ಯವೇನಿಲ್ಲ. ಅದೆಲ್ಲಕ್ಕೂ ಮೂಲಚೈತನ್ಯ ಕೂಡಲಸಂಗಮನಾಥನ ಪರಮಭಕ್ತ ಬಸವಣ್ಣ.

ಜ್ಞಾನ, ವಿಜ್ಞಾನಗಳ ಬೆಳವಣಿಗೆಗೆ ಪ್ರತ್ಯಕ್ಷವಲ್ಲದಿದ್ದರೂ ಅಪ್ರತ್ಯಕ್ಷವಾಗಿ ತಮ್ಮ ಆಚಾರ ವಿಚಾರಗಳ ಮುಖಾಂತರ ಬಸವಣ್ಣನವರು ಅಮರ ಕೊಡುಗೆಯನ್ನಿತ್ತಿರುವರು–ಮಾನವತೆಗೆ ಆಸರವಾಗುವ ರೀತಿಯಲ್ಲಿ.

ಜ್ಞಾನ, ವಿಜ್ಞಾನ

'ಜ್ಞಾನ' (Knowledge) ಶಬ್ದವು ಸಂಸ್ಕೃತ ಭಾಷೆಯ 'ಜ್ಞಾ' ಎಂಬ ಮೂಲ ಧಾತುವಿನಿಂದ ಬಂದಿದೆ. 'ಜ್ಞಾ' ಎಂದರೆ ತಿಳಿ ಅಥವಾ ಅರಿತುಕೊ.

ಏನನ್ನು ? ಬಹುಶಃ ಈಶ್ವರ, ಜೀವ ಜಗತ್ತನ್ನು. ಇಷ್ಟೆಲ್ಲ ಸರಿಯಾಗಿ ಅರಿತು ಕೊಂಡರೆ ಪೂರ್ಣಜ್ಞಾನ ಲಭಿಸುವದು. ಅದು ಆತ್ಮಜ್ಞಾನಕ್ಕೆ (Metaphysics) ಅಂದರೆ ತನ್ನನ್ನು ತಾನು ತಿಳಿದುಕೊಳ್ಳಲು ಅನುಕೂಲವಾಗುವದು. ಅದುವೇ ಶ್ರೇಷ್ಠಜ್ಞಾನ. "ವಿಜ್ಞಾನಿಗಳಿಗೆ ತಿಳಿಯದ ಸಂಗತಿಯು ಆತ್ಮಜ್ಞಾನಿಗಳಿಗೆ ಸುಲಭವಾಗಿಯೇ ತಿಳಿದುಬರುವದು."[೧] ಬಸವಣ್ಣ ಆತ್ಮಜ್ಞಾನಿ, ಸುಜ್ಞಾನಿ. ಅರಿತುಕೊಂಡ ವಿಷಯ ಜ್ಞಾನ. ಅರಿತವನು ಜ್ಞಾನಿ. ಅರಿಯಲಾರದವನು ಅಜ್ಞಾನಿ. ಇನ್ನು 'ವಿ'ಪೂರ್ವಕಜ್ಞಾನ (ವಿ+ಜ್ಞಾನ)ವೆಂದರೆ ವಿಶಿಷ್ಟವಾದ ವಿಷಯದ ತಿಳವಳಿಕೆ. ವಿಜ್ಞಾನವು ಜ್ಞಾನದ ಅಂಗದ ಹೆಸರು. ಜ್ಞಾನವು ಅಪಾರವೂ, ಅಖಂಡವೂ ಆಗಿವೆ. ಅಭ್ಯಾಸದ ಅನುಕೂಲಕ್ಕಾಗಿ ಪ್ಲೇಟೋನ ಕಾಲದಿಂದ ಹಿಡಿದು ಇಂದಿನವರೆಗೆ ಎಷ್ಟೋ ಜ್ಞಾನಿಗಳು ಅದನ್ನು ಹಲವು ಭಾಗ ಗಳಲ್ಲಿ ವಿಂಗಡಿಸಿದ್ದಾರೆ.

(೧) ಆಗಸ್ಟ ಕಾಮ್ಟೆ ಮತ್ತು ಹರ್ಬರ್ಟ ಸ್ಪೆನ್ಸರರು ಗೋಚರ (Concrete) ಮತ್ತು ಅಗೋಚರ (Abstract) ಎಂದು ಜ್ಞಾನದಲ್ಲಿ ಎರಡು ಭಾಗ ಮಾಡಿದ್ದಾರೆ. ಕಾರ್ಲ ಪಿಅರಸನ್ನನು (೧೮೫೭–೧೯೩೬) ಅಂಕಗಣಿತ ಮತ್ತು ತತ್ವಜ್ಞಾನವನ್ನು ಅಗೋಚರವೆಂದು, ಭೌತಿಕ (Physical) ಮತ್ತು ಜೀವ (Biological) ವಿಜ್ಞಾನಗಳನ್ನು ಗೋಚರವೆಂದು ಎಣಿಸಿದ್ದನು.

(೨) ಹಲವರು ಮಿಶ್ರ (Applied) ಮತ್ತು ಶುದ್ಧ (Pure)ವೆಂದು,

(೩) ಇನ್ನು ಹಲವರು ನಿರ್ದಿಷ್ಟ (Exact) ಮತ್ತು ಅನಿರ್ದಿಷ್ಟ (Inexact) ವಿಜ್ಞಾನಗಳೆಂದು, ಕೊನೆಯದಾಗಿ,

(೪) ನೈಸರ್ಗಿಕ ವಿಜ್ಞಾನಗಳು (Natural sciences), ಸಾಮಾಜಿಕ ವಿಜ್ಞಾನಗಳು (Social sciences) ಮತ್ತು ಲಲಿತವಿದ್ಯೆಗಳು (Humanities) ಎಂದು ವಿಂಗಡಿಸಿರುವರು.

ಕೊನೆಯ ಜ್ಞಾನವಿಂಗಡಣೆಯೇ ಸದ್ಯದಲ್ಲಿ ಎಲ್ಲೆಡೆಯೂ (ಶಾಲೆ, ಕಾಲೇಜು, ವಿಶ್ವವಿದ್ಯಾಲಯಗಳಲ್ಲಿ) ಪ್ರಚಲಿತದಲ್ಲಿದೆ.

ಸಾಮಾಜಿಕ ವಿಜ್ಞಾನಗಳು ಹಲವಾರು. ಅವು ಸಮಾಜಕ್ಕೆ ಸಂಬಂಧಿಸಿದ ವಿಶಿಷ್ಟ ಜ್ಞಾನಗಳನ್ನು ಕೊಡುತ್ತವೆ. ಉದಾ– ತತ್ವಜ್ಞಾನ (Philosophy)ವು ತಾತ್ವಿಕ ವಿಚಾರಗಳನ್ನು, ನೀತಿಶಾಸ್ತ್ರ (Ethics)ವು ಸಮಾಜದ ನೈತಿಕತೆಗಳನ್ನು,

ರಾಜ್ಯಶಾಸ್ತ್ರವು ರಾಜಕೀಯ ಸಂಘ, ಸಂಸ್ಥೆಗಳನ್ನು, ಅರ್ಥಶಾಸ್ತ್ರವು ಸಮಾಜದ ಆರ್ಥಿಕ ವ್ಯವಹಾರವನ್ನು ಸಮಾಜಶಾಸ್ತ್ರ (Sociology)ವು ಸಾಮಾಜಿಕ ಸಂಘ, ಸಂಸ್ಥೆಗಳನ್ನು ಅಭ್ಯಸಿಸುವವು. ಈ ಎಲ್ಲ ಸಾಮಾಜಿಕ ವಿಜ್ಞಾನಗಳಿಗೂ ಬಸವಣ್ಣನವರು, ತಮ್ಮ ಆಚಾರ ವಿಚಾರಗಳ ಮುಖಾಂತರ ಕೊಡುಗೆಯನ್ನಿತ್ತಿರುವರು.

ಬಸವಣ್ಣನವರು ತಾವು ನಡೆದದ್ದನ್ನೇ ನುಡಿದಿದ್ದಾರೆ ತಮ್ಮ ವಚನರಸಗಟ್ಟಿಗಳಲ್ಲಿ. ಅವರ ವಚನಗಳು ಇಂದಿಗೂ ಸ್ಫೂರ್ತಿಯ ಚಿಲುಮೆಗಳಾಗಿವೆ. ತಮ್ಮ ವಚನಗಳಲ್ಲಿ ಅವರಿನ್ನೂ ಜೀವಂತವಾಗಿದ್ದಾರೆ. ಅವರ ಆದರ್ಶವು ಮಾನವತೆಯ ಆದರ್ಶವಾಗಿದೆ.

ಧಾರ್ಮಿಕ ಮತ್ತು ನೈತಿಕ ವಿಚಾರಗಳು

ಭಕ್ತಿಯ ಮಹತ್ವವನ್ನು ಎತ್ತಿ ತೋರಿಸಲೆಂದೇ ಮೂರ್ತಿವೆತ್ತಂತಿದೆ ಭಕ್ತಿಭಂಡಾರಿ ಬಸವಣ್ಣನವರು. ಅವರು ಆದರ್ಶ ಭಕ್ತರಾಗಿ ಬಾಳಿದರು. 'ಭಕ್ತಿ' ಎಂದಾಗ್ಗೆ ಬಸವಣ್ಣ, 'ಜ್ಞಾನ' ಎಂದಾಗ್ಗೆ ಪ್ರಭುದೇವರು ಹಾಗೂ ಚೆನ್ನಬಸವಣ್ಣನವರು ಮತ್ತು 'ಕರ್ಮ' ಎಂದಾಗ್ಗೆ ಸೊನ್ನಲಾಪುರದ ಸಿದ್ಧರಾಮರು ಮನದ ಮುಂದೆ ಎದ್ದು ಬರುವರು. ಅವರಿಂದ ಅವಕ್ಕೆ ಹೊಸ ಕಳೆ ಬಂದಂತಿದೆ. ಆದರೆ ಅವರಿಗೆ ಆ ಸ್ಥಿತಿಯಲ್ಲಿರುವೆವೆಂಬ ಅಭಿಮಾನವಿಲ್ಲ. ಅದು ಅವರ ದೊಡ್ಡ ಗುಣ.

> "ಎನ್ನಲ್ಲಿ ಭಕ್ತಿಸಾಸವೆಯ ಷಡ್ಭಾಗದನಿತಿಲ್ಲ;
> ಎನ್ನ ಭಕ್ತನೆಂಬರು,...
> ನಾನೇನು ಪಾಪವ ಮಾಡಿದೆನೋ"...[೨]

ಎಂಬಲ್ಲಿ ಬಸವಣ್ಣನವರ ಮುಗ್ಧತೆ ಎದ್ದು ಕಾಣುವದು. ಅಷ್ಟೇ ಅಲ್ಲ "ಎನಗಿದು ವಿಧಿಯೇ ಕೂಡಲ ಸಂಗಮದೇವಾ ?" ಎಂದು ತಮ್ಮ ವಿಧಿಯನ್ನು ಹಳಿಯುವರು. "ಎನ್ನವರೊಲಿದು ಹೊನ್ನಶೂಲದಲ್ಲಿಕ್ಕಿದರೆನ್ನ ಹೊಗಳಿ, ಹೊಗಳಿ"[೩] ಎಂದು ಬಸವಣ್ಣನವರು ಪೇಚಾಡುವುದನ್ನು ನೋಡಿದರೆ ಹೊಗಳಿಕೆಯೇ ನಾಚಬೇಕು !

"ನೀನೆನಗೊಳ್ಳಿದನಾದರೆ, ಎನ್ನ ಹೊಗಳಿಕೆಗಡ್ಡಬಾರಾ, ಧರ್ಮೀ"[೪] ಎಂದು ಬೇಡಿಕೊಳ್ಳುವನು.

“ಎನ್ನಿಂದ ಕಿರಿಯರಿಲ್ಲ, ಶಿವಭಕ್ತರಿಂದ ಹಿರಿಯರಿಲ್ಲ
ನಿಮ್ಮ ಪಾದಸಾಕ್ಷಿ, ಎನ್ನ ಮನ ಸಾಕ್ಷಿ...”[೫]

ಎಂಬಲ್ಲಿ ಬಸವಣ್ಣನವರ ನಿಜ ಹಿರಿತನ ಕಂಡುಬರುತ್ತದೆ. ‘ನಾನೇ’ ‘ನಾನೇ’ ಎಂದು ತಮ್ಮ ಅಹಂಭಾವ ಮೆರೆಯುವವರಿಗೆ ಬಸವಣ್ಣನವರ ಮಾತು ಚಾಟಿ ಏಟು! “ದೊಡ್ಡ ಬಸರು ಎನಗಿಲ್ಲಯ್ಯ”[೬] ಎನ್ನುವಲ್ಲಿ ಹಾಸ್ಯವೂ ಇದೆ, ಮತ್ತು ಅದರ ಹಿಂದೆ–ಹಾಗೆ ತಿಳಿದುಕೊಂಡವರಿಗೆ ಏಟೂ ಇದೆ!

ಬಸವಣ್ಣನ ಭಕ್ತಿ ತಮ್ಮ ವ್ಯಕ್ತಿತ್ವಕ್ಕಷ್ಟೇ ಸೀಮಿತವಾಗಿರಲಿಲ್ಲ. ಅದು ಸಮಾಜ ಸುಧಾರಣೆಯತ್ತ ಹಬ್ಬಿತ್ತು. ಅವರದು ಮೂಕ, ಮೂಢ ಅಥವಾ ಡಾಂಭಿಕ ಭಕ್ತಿಯಲ್ಲ. ಹಿಂದು ತತ್ವಜ್ಞಾನದ ಪ್ರಕಾರ ನಾಲ್ಕು ಪುರುಷಾರ್ಥಗಳುಂಟು– ಧರ್ಮ, ಅರ್ಥ, ಕಾಮ, ಮೋಕ್ಷ. ಬಸವಣ್ಣನವರ ವಿಚಾರದಂತೆ ಅವು ಐದಿರಬೇಕು. ಕೊನೆಯದೇ ‘ಭಕ್ತಿ’. ಭಕ್ತನಾದಾಗ್ಗೆ ಮುಕ್ತಿಯ ಅರ್ಥ ಹೊಳೆಯುವದು.

ಬಸವಣ್ಣ ಪವಾಡಪುರುಷನಲ್ಲ, ಸಮಾಜ ಸುಧಾರಕ. ವೈಜ್ಞಾನಿಕ ದೃಷ್ಟಿ ಆತನಿಗಿತ್ತು. ಜಗದ ಕಣ್ಣನ್ನು ಕುಕ್ಕಿಸಲು ಆತ ಬರಲಿಲ್ಲ. ಜಗದ ಮೂಢಾಂಧತೆಯನ್ನು ನೀಗಿಸಿ ಬೆಳಕು ನೀಡಲು ಬಂದವ. ನೀರ ಕಂಡಲ್ಲಿ ಮುಳುಗುವ, ಮರನ ಕಂಡಲ್ಲಿ ಸುತ್ತುವ[೭] ಜನರನ್ನು ಎಚ್ಚರಿಸುತ್ತಿರುವನು. “ದೇವನೊಬ್ಬ ನಾಮ ಹಲವು”[೮] ಎಂಬ ಸತ್ಯ ಸ್ವತಃ ಅರಿತಿರುವನು.

“ಮಡಿಕೆ ದೈವ, ಮೊರದೈವ, ಬೀದಿಯ ಕಲ್ಲು ದೈವ
ಹಣಿಗೆ ದೈವ, ಬಿಲ್ಲ ನಾರಿದೈವ, ಕಾಣಿರೋ,
ಕೊಳಗ ದೈವ, ಗಿಣ್ಣಿಲು ದೈವ ಕಾಣಿರೋ!
ದೈವದೈವವೆಂದು ಕಾಲಿಡಲಿಂಬಿಲ್ಲಾ!!
ದೇವನೊಬ್ಬನೆ ಕೂಡಲ ಸಂಗಮದೇವ.”[೯]

ಬಸವಣ್ಣನ ಜೀವನದ ವೈಶಿಷ್ಟ್ಯವೆಂದರೆ– ಆತನು ತನ್ನ ಪರಿಪೂರ್ಣತೆಯ ಆದರ್ಶ ವ್ಯಕ್ತಿತ್ವವನ್ನು ಮಾದರಿಯೆಂಬ ರೀತಿಯಲ್ಲಿ ಜನತೆಯ ಮುಂದಿಟ್ಟನು. ಧಾರ್ಮಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಮುಂತಾದ ರಂಗಗಳಲ್ಲಿಯ ಆದರ್ಶಗಳನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡು ಆಯಾರಂಗದಲ್ಲಿ ಸುಧಾರಣೆ ಮಾಡಿದನು. ಆತನ ವಿಚಾರಗಳೆಲ್ಲವು ಹೊಸ ಮೆರುಗನ್ನು ಪಡೆದಿವೆ, ಉದಾತ್ತವಾಗಿವೆ.

“ದಯವಿಲ್ಲದ ಧರ್ಮದಾವುದಯ್ಯಾ
ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿಯೂ;
ದಯವೇ ಧರ್ಮದ ಮೂಲವಯ್ಯಾ...”[೧೦]

ಎಂಬಲ್ಲಿ ಧರ್ಮದ ನಿಜ ತಿರುಳು ಸಮಾಜಕ್ಕೆ ಸ್ಪಷ್ಟವಾಗುವದು. ಧರ್ಮದ ಹೆಸರಿನಲ್ಲಿ ಅನ್ಯಾಯ ಮಾಡುವವರಿಗೆಲ್ಲ ಇದು ಚಾಟಿ ಏಟು !

“ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿಭೋ !
ಸತ್ಯವ ನುಡಿವುದೇ ದೇವಲೋಕ; ಮಿಥ್ಯವ ನುಡಿವುದೇ
ಮರ್ತ್ಯಲೋಕ;
ಆಚಾರವೇ ಸ್ವರ್ಗ, ಅನಾಚಾರವೇ ನರಕ....”[೧೧]

ಎಂಬಲ್ಲಿ ದೇವಲೋಕ, ಮರ್ತ್ಯಲೋಕ, ಸ್ವರ್ಗ, ನರಕಗಳ ನಿಜಸ್ಥಾನ ತಿಳಿಯುವದು. ನಮ್ಮ ಆಚಾರ ವಿಚಾರಗಳಲ್ಲಿ ಸ್ವರ್ಗ, ನರಕಗಳವೆಯೇವಿನಹ ಮುಗಿಲಿನ ಮೇಲೆ ಅಥವಾ ನೆಲದ ಕೆಳಗೆ ಅವಿಲ್ಲ. “ಅಯ್ಯಾ” ಎಂದರೆ ಸ್ವರ್ಗ; “ಎಲವೊ,” ಎಂದರೆ ನರಕ.”[೧೨] “ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯ; ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯ”.[೧೩] “ಮೃದುವಚನವೇ ಸಕಲ ಜಪ, ತಪಂಗಳು....ಸದುವಿನಯವೇ ಸದಾಶಿವನ ಒಲುಮೆ”.[೧೪] “ಎನಗೆ ನಾನೇ ಹಗೆ ನೋಡಯ್ಯ, ಎನಗೆ ನಾನೇ ಕೆಳೆನೋಡಯ್ಯ....ಬಾಗಿದ ತಲೆಯ, ಮುಗಿದ ಕೈಯಾಗಿರಿಸು ಕೂಡಲ ಸಂಗಮದೇವ.”[೧೫]

ಹಲವರು ‘ನೇಮ,’ ‘ನೇಮ’-ಎಂದು ನೇಮದ ಹೆಸರಿನಲ್ಲಿ ತಮ್ಮ ನಾಮವನ್ನೇ ಕೆಡಿಸುವ ರೀತಿಯಲ್ಲಿ ವರ್ತಿಸುವರು. ಬಸವಣ್ಣನವರ ನೇಮವೇ ನೇಮ.

“ಬಂದುದ ಕೈಕೊಳ್ಳಬಲ್ಲರೆ ಅದು ನೇಮ;
ಇದ್ದುದ ವಂಚನೆ ಮಾಡದಿದ್ದರೆ ಅದು ನೇಮ;
ನಡೆದು ತಪ್ಪದಿದ್ದರೆ ನೇಮ, ನುಡಿದು ಹುಸಿಯದಿದ್ದರೆ ನೇಮ.
ನಮ್ಮ ಕೂಡಲ ಸಂಗನ ಶರಣರು ಬಂದರೆ
ಒಡೆಯರಿಗೊಡವೆಯನೊಪ್ಪಿಸುವುದೇ ನೇಮ.”[೧೬]

ಯಾರವೋ (ಬಾಡಿಗೆ) ಮನೆಯಲ್ಲಿದ್ದು ತನ್ನದೇ ಮನೆ ಎಂದು ಕೋರ್ಟಿ ನಲ್ಲಿ ವಾದಿಸುವವರು, ಯಾರದೋ ಹೊಲಕ್ಕೆ ಯಾರ್ಯಾರಿಗೋ ಲಂಚಕೊಟ್ಟು

ತನ್ನದನ್ನಾಗಿ ಮಾಡಿಕೊಳ್ಳಲು ಹೊಂಚುಹಾಕುವವರು ದಯಮಾಡಿ ಬಸವಣ್ಣನ ಕೊನೆಯ ನೇಮ ಆಲಿಸಬೇಕು. "ಊರ ಸೀರೆಗೆ ಅಗಸ ತಡಬಡಗೊಂಡಂತಾಗ ಬಾರದು" ಅವರ ಜೀವನ !

'ನಡೆ' ಮತ್ತು 'ನುಡಿ'ಯ ಸಂಬಂಧ ಬಸವಣ್ಣ ಸಮಾಜಕ್ಕೆ ಸದುಪದೇಶ ನೀಡಿರುವರು.

> "ಕಳಬೇಡ, ಕೊಲಬೇಡ ಹುಸಿಯ ನುಡಿಯಲು ಬೇಡ.
> ಮುನಿಯಬೇಡ ಅನ್ಯರಿಗೆ ಅಸಹ್ಯಪಡಬೇಡ;
> ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ.
> ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ,
> ಇದೇ ನಮ್ಮ ಕೂಡಲ ಸಂಗಮದೇವರನೊಲಿಸುವ ಪರಿ."[೧೭]

ಇದು ಮಾನವನ ನಡತೆಗೇನೇ ವಿಶೇಷವಾಗಿ ತಯಾರಿಸಿದ ಸಂವಿಧಾನ. ಜೀವನದ ಯಶಸ್ಸಿನ ಗುಟ್ಟು ಇಲ್ಲಿದೆ. "ಕಳಬೇಡ" ಅದೊಂದರಲ್ಲಿಯೇ ಸಾಕಷ್ಟು ಮದ್ದಿದೆ–ಕಳ್ಳವ್ಯಾಪಾರ, ಕಳ್ಳಸಂತೆ, ಕಲಬೆರಕೆ ಮುಂತಾದವುಗಳಿಗೆ. "ಕೊಲಬೇಡ"–ಮಾತು, ಕೃತಿ, ನೋಟ, ವ್ಯಂಗ್ಯ, ನಟನೆ–ಯಾವುದರಿಂದಲೂ ಕೊಲಬೇಡ.

> "ಲೋಕದ ಡೊಂಕ ನೀವೇಕೆ ತಿದ್ದುವಿರಿ,
> ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ,
> ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ,
> ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ
> ಕೂಡಲಸಂಗಮದೇವ."[೧೮]

ಪ್ರತಿ ವ್ಯಕ್ತಿ ಒಳ್ಳೆಯವನಾದರೆ ಇಡೀ ಮಾನವತೆಯೇ ಒಳ್ಳೆಯದಾದಂತೆ. "ನುಡಿದರೆ ಲಿಂಗಮೆಚ್ಚಿ ಅಹುದಹುದು ಎನಬೇಕು." ಇನ್ನು ನುಡಿಯೊಳಗಾಗಿ ನಡೆಯದಿದ್ದರೆ ಕೂಡಲ ಸಂಗನು ಮೆಚ್ಚನು. "ನುಡಿಯಲ್ಲಿ ಎಚ್ಚತ್ತು ನಡೆಯಲ್ಲಿ ತಪ್ಪಿದರೆ ಹಿಡಿದಿರ್ದ ಲಿಂಗವು ಘಟಸರ್ಪನಂತೆ."[೧೯] ಎಷ್ಟೇ ದಿನ ಬದುಕಲಿ "ಲೇಸೆನಿಸಿಕೊಂಡು" ಬದುಕಬೇಕು.

ಪುನರ್ಜನ್ಮ, ಪಾಪ–ಪುಣ್ಯ, ಹಣೆಯಬರಹ ಮತ್ತು ಕರ್ಮ (ಸಂಚಿತ, ಪ್ರಾರಬ್ಧ) ಮುಂತಾದವುಗಳಲ್ಲಿ ಬಸವಣ್ಣನವರಿಗೆ ನಂಬಿಗೆಯಿದೆ. ಅವನ್ನು ಅವರು ಎಲ್ಲಿಯೂ ಅಲ್ಲಗಳೆದಂತೆ ಕಂಡುಬರುವುದಿಲ್ಲ.

"ಹಿಂದೆ ನಾನಾ ಯೋನಿಯಲ್ಲಿ ಬಂದೆನೆಂಬ ಹೇಯವಿಲ್ಲ.
ಮುಂದೆ ಮುಕ್ತಿಯಾಗಬೇಕೆಂಬ ಯುಕ್ತಿಯಿಲ್ಲ"[೨೦]

ಬಸವಣ್ಣನು ತನ್ನನ್ನು ತಾನೇ ಹಳಿದುಕೊಳ್ಳುವನು. "ಹಿಂದಣ ಜನನವೇನಾದೊಡಾಗಲಿ ಇಂದಿನ ಭೋಗವು ಕೈಯಮೇಲೆ"[೨೧] ಎಂದು ಈ ಜನ್ಮದಲ್ಲಿ ಮುಕ್ತಿಗಾಗಿ ಸಿದ್ಧರಾಗುವರು.

"ಮುನ್ನ ಹುಟ್ಟಿದುದಕ್ಕೆ ಕೃಪೆಮಾಡು ಲಿಂಗವೆ !
ಇನ್ನು ಹುಟ್ಟಿದೆನಾದರೆ ಕೂಡಲಸಂಗಮದೇವಾ, ನಿಮ್ಮಾಣೆ."[೨೨]

"ಮುನ್ನ ಮಾಡಿದ ಪಾಪ ಬೆನ್ನಬಿಡದನ್ನಕ್ಕ"[೨೩] "ನಮ್ಮ ಕೂಡಲ ಸಂಗಮದೇವರು ಬರೆದ ಬರಹ ತಪ್ಪಿಸುವರೆ."[೨೪] "ಲಲಾಟ ಲಿಖಿತ ಬರೆದ ಬಳಿಕ ಪಲ್ಲಟ ಮಾಡಬಾರದು."[೨೫]

"ಸಂಚಿತ ಕರ್ಮ ಉಂಡಲ್ಲದೆ ಬಿಡದು. ಪ್ರಾರಬ್ಧ ಕರ್ಮ ಭೋಗಿಸಿದಲ್ಲದೆ ಹೋಗದು."[೨೬]

"ಮಸಿಯನೇಸು ಕಾಲ ಬೆಳಗಿದರೆ, ಬಿಳಿದಾಗಬಲ್ಲುದೆ ?
ಕರ್ಮಸ್ಥಿತಿ ಬೆನ್ನಬಿಡದು.
ಅನಂತಕೋಟಿ ಸನ್ಮಾನವ ಮಾಡಿಪರೇನು ?"[೨೭]

ಕಾಯಕವೇ ಕೈಲಾಸ[೨೮]

ನನ್ನ ಕರ್ಮ ಎಂದು ಜನ ಕೈಕಟ್ಟಿ ಕುಳಿತರೆ ಕೊಡುವವರ್ಯಾರು, ನೀಡುವವರ್ಯಾರು ? ಅದಕ್ಕೆ ಬಸವಣ್ಣನವರು "ಕಾಯಕವೇ ಕೈಲಾಸ"ವೆಂದರು. ಅವರ ಹಿಂದಣ ಧಾರ್ಮಿಕ ಮುಖಂಡರೆಲ್ಲರೂ ಹೆಚ್ಚಾಗಿ ಜಪ, ತಪ, ಸನ್ಯಾಸ, ವಿರಕ್ತಿ ಮುಂತಾದವುಗಳತ್ತ ಉಪದೇಶಮಾಡಿ ಜನರನ್ನು ನಾಡಿನಿಂದ ಕಾಡಿನ ಕಡೆಗೆ ಕಳಿಸಲು ಪ್ರಯತ್ನಿಸಿದರೆ, ಬಸವಣ್ಣನವರು ಕಾಡಿನಲ್ಲಿದ್ದವರಿಗೂ ಕಾಯಕದ ಕಂಕಣ ಕಟ್ಟುವರು. ಕಾಯಕದಲ್ಲಿ ಸರ್ವಸಂಪದವಿದೆ, ಶಾಂತಿಯಿದೆ, ಸಮೃದ್ಧಿಯಿದೆ–ಒಳ್ಳೆಯದೆಲ್ಲವೂ ಇದೆ. ಅವಕೆ ಅದು ಕೈಲಾಸ ! ಕಾಯಕವಿರದಿರೆ ರೌರವ ನರಕ ! ಪ್ರತಿಯೊಬ್ಬರಿಗೂ ಕಾಯಕ ಹಚ್ಚಿದುದು ಬಸವಣ್ಣನವರ ಕೊಡುಗೆಗಳಲ್ಲಿಯೇ ಅತಿ ಶ್ರೇಷ್ಠ.

ಹೆಣ್ಣು ಹೇಯುವಲ್ಲ

ಹೊನ್ನು, ಹೆಣ್ಣು, ಮಣ್ಣುಗಳನ್ನು ಸಾಮಾನ್ಯವಾಗಿ ಎಲ್ಲ ಸಾಧು ಸತ್ಪುರುಷರು ಹೇಯುವೆಂದಿರುವರು. ಬಸವಣ್ಣನವರು "ಪರಧನ", "ಪರಸ್ತ್ರೀ"ಯರನ್ನು ಮಾತ್ರ ಅಲ್ಲಗಳೆದಿರುವರು. ಅವನ್ನು ಒಲ್ಲೆನೆಂಬ ಛಲಬೇಕು[೨೯]–ಎಂದು ಛಲ ಕಲಿಸುತ್ತಿದ್ದಾರೆ ಜನತೆಗೆ.

"ಪರವಧುವ ನೋಡುವ ಸರಸಬೇಡ
ಒಡೆಯನರಸಿಯು ಸರಸಬೇಡ . . .
ರಾಣಿವಾಸದೊಡನೆ ಸರಸಬೇಡ"[೩೦]

ಪರಧನ, ಪರಸ್ತ್ರೀಗೆ ಬಸವ ಅಂಜುವನು.[೩೧] ತನ್ನ ಕಾಯಕದಿಂದ ಬಂದ ಧನ ಹೇಯುವಲ್ಲ. ತನ್ನ ಅರ್ಧಾಂಗಿಯಾಗಿ ಬಂದವಳು ಹೇಯುವಲ್ಲ. ಸಂಸಾರದಿಂದ ಸದ್ಗತಿ ಕಾಣಬಹುದೆಂಬುದನ್ನು ಸ್ವತಃ ಸಂಸಾರಿಯಾಗಿ, ಒಬ್ಬರಲ್ಲ ಇಬ್ಬರು ಹೆಂಡರೊಡನೆ (ಎರಡನೆಯದು ಬಹುಶಃ ಪುತ್ರಪ್ರಾಪ್ತಿಗಾಗಿರಬಹುದು) ಬಾಳ್ವೆ ಮಾಡಿ ತೋರಿಸಿದ್ದಾನೆ.

ಹರಿಜನೋದ್ಧಾರ

ಜಾತ್ಯತೀತತೆ, ಸಮಾನತೆ, ಸ್ವಾತಂತ್ರ್ಯ ಹಾಗೂ ಮುಖ್ಯವಾಗಿ ಹರಿಜನೋದ್ಧಾರ–ಮುಂತಾದ ಅಮೋಘ ಕಾರ್ಯಕ್ಕೆ ಬಸವಣ್ಣನವರು ಹನ್ನೆರಡನೆಯ ಶತಮಾನದಲ್ಲಿಯೇ ಬದ್ಧ ಕಂಕಣರಾದರು. ಅವರ ಹಿಂದೆ ಈ ಕಾರ್ಯವನ್ನು ಮಾಡಿದ ಮಹಾನುಭಾವನೆಂದರೆ, ಸ್ವಲ್ಪ ಮಟ್ಟಿಗೆ ಬುದ್ಧ. ಆ ನಂತರದ ಸಿದ್ಧ ಪುರುಷನೆಂದರೆ ಬಸವಣ್ಣ. ಈ ವಿಷಯಗಳಲ್ಲಿ ಬಸವಣ್ಣ ಉಪದೇಶ ನೀಡಲಿಲ್ಲ, ಸ್ವತಃ ಮಾಡಿ ತೋರಿಸಿದರು. ಬಸವಣ್ಣನವರು ಯಾವುದೇ ಒಂದು ಜಾತಿ, ಕುಲ ಅಥವಾ ಧರ್ಮ ಎತ್ತಿ ಹಿಡಿಯಲಿಲ್ಲ. ಅವರದು ಒಂದೇ ಜಾತಿ, ಕುಲ ಮತ್ತು ಧರ್ಮ–ಅದು ಮಾನವತೆ! ಬಸವಣ್ಣ ಮಾನವತಾವಾದಿ, ಜಾತಿವಾದಿಯಲ್ಲ. "ಲಿಂಗಾಯತ" ಶಬ್ದ ಜಾತಿವಾಚಕವಲ್ಲ, ನೀತಿವಾಚಕ. "ಲಿಂಗ"– ವಿಶ್ವವ್ಯಾಪಿ ಪರಮಾತ್ಮನ ಸ್ವರೂಪ. ಈ ಮುದ್ರೆ ಇದ್ದಾತ "ಲಿಂಗಾಯತ"-ಅಂದರೆ "ಭಕ್ತ." ಅದು ಇಲ್ಲದಾತ "ಭವಿ." "ಅಂಗದ ಮೇಲೆ ಲಿಂಗವಿದ್ದಾತನೇ ಸಂಗಮನಾಥನು." "ಲಿಂಗವಂತನ ಸನ್ನಿಧಿಯಿಂದ ಹಿಂದಣ ದುಸ್ಸಂಗ ಕೆಡುವದು."[೩೨] ಭಕ್ತರಲ್ಲಿ ಅರ್ಥಾತ್ ಲಿಂಗಾಂಗಿಗಳಲ್ಲಿ ಬಸವಣ್ಣನು ಭೇದಭಾವ ಮಾಡುವುದಿಲ್ಲ.

"ವಿಪ್ರ ಮೊದಲು ಅಂತ್ಯಜ ಕಡೆಯಾಗಿ
ಶಿವಭಕ್ತರಾದವರನೆಲ್ಲರನೊಂದೇ ಎಂಬೆ
"ಈ ನುಡಿದ ನುಡಿಯೊಳಗೆ ಎಳ್ಳಮೊನೆಯಷ್ಟು ಸಂದೇಹವುಳ್ಳರೆ,
ಹಲುದೋರೆ ಮೂಗು ಕೊಯಿ, ಕೂಡಲ ಸಂಗಮದೇವಾ !"[೩೩]

ಇನ್ನೇನು ಪ್ರಮಾಣಬೇಕು ? ಲಿಂಗಧರಿಸಿದ ಹೊಲೆಯು ಕೂಡ ಭಕ್ತ. ಹಾಗಾದರೆ ನಿಜ ಹೊಲೆಯರಾರು ? "ಲಿಂಗವಿಲ್ಲದವನೇ ಹೊಲೆಯ"[೩೪] "ಕೊಲುವವನೇ ಮಾದಿಗ, ಹೊಲಸು ತಿಂಬುವವನೇ ಹೊಲೆಯ."[೩೫] "ಲಿಂಗವಿದ್ದವನೇ ವಾರಣಾಸಿ."[೩೬] "ಶಿವಲಿಂಗವಿದ್ದವನೇ ಕುಲಜನು. ಕುಲವನರಸುವರೆ ಶರಣರಲ್ಲಿ...ಒಕ್ಕುದ ಕೊಂಬೆನವರಲ್ಲಿ, ಕೂಸ ಕೊಡುವೆ"[೩೭] ಲಿಂಗಾಂಗಿಗಳಾದ ಎಲ್ಲ ಭಕ್ತರೊಡನೆಯೂ ಸಮನಾಗಿ ಬಳಕೆ ಮಾಡಲು ಬಸವಣ್ಣ ಸಿದ್ಧ.

"ಆವನಾದರೇನು, ಶ್ರೀ ಮಹಾದೇವನ ನೆನೆವನ
ಬಾಯ ತಂಬುಲ ಮೆಲುವೆ, ಬೀಳುಡಿಗೆಯ ಹೊದೆವೆ,
ಪಾದರಕ್ಷೆಯ ಕಾಯ್ದು ಬದುಕುವೆ, ಕೂಡಲ ಸಂಗಮದೇವಾ"[೩೮]

ಹರಳಯ್ಯನ ಮಗನಿಗೆ (ಶಿವಲಿಂಗ)-ಬ್ರಾಹ್ಮಣ ಮಂತ್ರಿ ಮಧುವರಸನ ಮಗಳ (ನೀಲಾ)ನ್ನು ಕೊಟ್ಟು ವಿವಾಹ ಮಾಡಿಸಿದನು ಬಸವಣ್ಣ ಹನ್ನೆರಡನೆಯ ಶತಮಾನದಲ್ಲಿ ! ಈಗಿನ ಪಾಶ್ಚಾತ್ಯ ವಿದ್ಯೆ ಹೊದ್ದಿದ ೨೦ನೆಯ ಶತಮಾನ ಇನ್ನೂ ಇಂಥ ವಿಷಯಕ್ಕೆ ನಾಚುತ್ತಿದೆ ! ಹಾಗಾದರೆ ಬಸವನಕಿಂತಧಿಕ ಸಮಾಜ ಸುಧಾರಕರುಂಟೇ ? ಆತ ನ್ಯಾಯ-ನಿಷ್ಠುರಿ, ದಾಕ್ಷಿಣ್ಯಪರನಲ್ಲ ![೩೯]" "ಆರು ಮುನಿದು ನಮ್ಮನೇನು ಮಾಡುವರು ? "[೪೦] ಸತ್ಯಕ್ಕಾಗಿ ಬಸವಣ್ಣ ಸಾಯಲೂ ಸಿದ್ಧ. ಮಂತ್ರಿಪದದ ತ್ಯಾಗ ಸಾಮಾನ್ಯ ಮಾತು ಆತನಿಗೆ ! ಅಧಿಕಾರ, ಪದವಿ, ಕೀರ್ತಿಗೆ ಆಶೆಪಟ್ಟವನಲ್ಲ ಬಸವ ! ಹಾಗೆ ಆಶೆಪಟ್ಟಿದ್ದರೆ ಕಲಚೂರಿಯ ವಂಶವವರ ಆಳ್ವಿಕೆ ಕೊನೆಯಾಗಿ- ವೀರಶೈವರ ಆಳ್ವಿಕೆ ಆರಂಭವಾಗಬಹುದಿತ್ತು !

"ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ;
ಹಾಸನಿಕ್ಕಿ ಸಾಲಿಗನಾದ; ವೇದವನೋದಿ ಹಾರುವನಾದ !
ಕರ್ಣದಲ್ಲಿ ಜನಿಸಿದವರುಂಟೇ ಜಗದೊಳಗೆ ?"[೪೧]

ಯಾರಾದರೂ ಶ್ರೇಷ್ಠನೆಂದು ಹೇಳಿಕೊಂಡರೆ ಬಹುಶಃ ಆತ ಕಿವಿಯಲ್ಲಿ ಹುಟ್ಟಿರ ಬೇಕೆಂದು ಮೂದಲಿಸುವನು. ಭಕ್ತನು ಯಾವುದೇ ಕಾಯಕ ಮಾಡಿದರೂ ಕುಲಜನು. ಭಕ್ತರೆಲ್ಲ ಸಮಾನರು. "ಭಕ್ತರಲ್ಲಿ ಕುಲವನರಸಿದರೆ ನಿಮ್ಮ ರಾಣೀವಾಸದಾಣೆ".[೪೨] ಇದಕ್ಕಿಂತ ಹೆಚ್ಚಿನ ಆಣೆ ನಾ ಕಾಣೆ!

> "ಶೆಟ್ಟಿಯೆಂದೆಂಬೆನೆ ಸಿರಿಯಾಳನ? ಮಡಿವಾಳನೆಂದೆಂಬೆನೆ
> ಮಾಚಯ್ಯನ?
> ಡೋಹಾರನೆಂದೆಂಬೆನೆ ಕಕ್ಕಯ್ಯನ?
> ಮಾದಾರನೆಂದೆಂಬೆನೆ ಚೆನ್ನಯ್ಯನ?
> ಆನು ಹಾರುವನೆಂದರೆ ಕೂಡಲಸಂಗಯ್ಯ ನಗುವನಯ್ಯಾ!"[೪೩]

ಸ್ವತಃ 'ಹಾರುವ' ಕಟ್ಟಿಗೆ ಸಿಲುಕದೆ ಹಾರಿಬಂದರು ಕೂಡಲಸಂಗಮಕೆ ಭಕ್ತನಾಗಲು! ಸಕಲ ಭಕ್ತರು ಹರಜನರು. ಹರಿಜನರು (ವೈದಿಕರು) ಸಹ ಭವಿಗಳು. "ನೆಲನೊಂದೆ ಹೊಲಗೇರಿ ಶಿವಾಲಯಕ್ಕೆ!"[೪೪]

ಸಮಾಜವಾದ

ಪಾಶ್ಚಿಮಾತ್ಯದೇಶ ಇನ್ನೂ ಪಿಚ್ಚುಗಣ್ಣಿನಲ್ಲಿದ್ದಾಗಲೇ ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನು ಸಮಾಜವಾದವನ್ನು ಎತ್ತಿಹಿಡಿದನು.

> "ಹೊನ್ನಿನೊಳಗೊಂದೊರೆಯು, ಸೀರೆಯೊಳಗೊಂದೆಳೆಯ
> ಅನ್ನದೊಳಗೊಂದಗುಳ ಇಂದಿಂಗೆ ನಾಳಿಂಗೆ ಬೇಕೆಂದೆನಾದರೆ,
> ನಿಮ್ಮಾಣೆ! ನಿಮ್ಮ ಪುರಾತನರಾಣೆ
> ನಿಮ್ಮ ಶರಣರಿಗಲ್ಲದೆ ಮತ್ತೊಂದನರಿಯೆ, . . ."[೪೫]

ಊಟದನಂತರ ತಾಟಿಗೆ ನೀರುಹಾಕಿ ಉಳಿದ ಅನ್ನದ ಅಗುಳನ್ನು ಸಹ ಸ್ವೀಕರಿಸುವದು ಎಲ್ಲ ಲಿಂಗಾಯತರ ನೇಮ—ಕೇವಲ ಗದ್ದುಗೆಯ ಮೇಲೆ ಕುಳಿತ ಗುರುವಿಗಲ್ಲ! ಅನ್ನ ಪ್ರಾಣದೇವರು. ಅದು ಹಾಳಾಗಬಾರದು. ಉಳಿಸಿದ ಅನ್ನ ಹಸಿದ ಒಡಲನ್ನು ತುಂಬಿಸಲಿ ಎಂಬ ತಾತ್ಪರ್ಯವಿದೆ! ಸಂಗ್ರಹಣ ಮಾಡುವದು ಸಮಾಜವಾದಕ್ಕೆ ವಿರೋಧವು. ತನಗೆ ಅವಶ್ಯವಿದ್ದಷ್ಟನ್ನೇ ಇಟ್ಟು ಕೊಳ್ಳಬೇಕು. ಉಳಿದುದನ್ನು ವಿತರಣೆಮಾಡಬೇಕೆಂಬುದು ಬಸವನ ವಾದ.

ಸಮಾಜವಾದವು ಜೀವನದ ಸ್ವಾಭಾವಿಕವಾದ ಒಂದು ನಿಯಮ. ಇದನ್ನು ಪ್ರಾಣಿವರ್ಗದಲ್ಲಿಯೂ ಕಾಣಬಹುದು.

"ಕಾಗೆಯೊಂದಗುಳ ಕಂಡರೆ ಕರೆಯದೆ ತನ್ನ ಬಳಗವನು ?
ಕೋಳಿಯೊಂದು ಗುಟುಕ ಕಂಡರೆ
ಕೂಗಿ ಕರೆಯದೆ ತನ್ನ ಕುಲವೆಲ್ಲವ ?
ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದರೆ
ಕಾಗಿ ಕೋಳಿಯಿಂದ ಕರಕಷ್ಟ !..."[೪೬]

ಸಮಾಜವಾದವೆಂದರೆ ಇದ್ದವರದನ್ನು ಕಸಿದು ಇಲ್ಲದವರಿಗೆ ಹಂಚುವುದಲ್ಲ. ಎಲ್ಲರನ್ನೂ ಕಾಯಕಕ್ಕೆ ಹಚ್ಚುವುದು ನಿಜ ಸಮಾಜವಾದ. ಅಂಥ ಸಮಾಜವನ್ನು ಬಸವನ ಆಚಾರ ವಿಚಾರದಲ್ಲಿ ಕಾಣಬಹುದು. ಆತನ 'ಸಮಾಜವಾದ ಮತ್ತು ಕಲ್ಯಾಣರಾಜ್ಯ (Welfare State) ಗಳು ಕಾಯಕದ ಮೇಲೆ ನಿಂತಿವೆ. ಕಾಶ್ಮೀರ ದಿಂದ ಕಲ್ಯಾಣಕ್ಕೆ ಬಂದ ಕಾಶ್ಮೀರ ದೊರೆಯೂ ಮೋಳಿಗೆಯ ಮಾರಯ್ಯನಾದನು. ದುಡಿಯುವವ ಮಾತ್ರ ಊಟಮಾಡಬೇಕು. ದುಡಿಯಲಾರದ ಮೈಗಳ್ಳನಿಗೆ ಊಟವಿಲ್ಲ. (ಇದೇ ವಿಷಯ ರಶಿಯಾದ ಸಂವಿಧಾನದಲ್ಲಿ ಮೂಲಭೂತ ಹಕ್ಕು).

"ಅನ್ಯರ ಮನೆಗೆ ಹೋಗಿ ತನ್ನುದರವ ಹೊರೆಯದ
ಅಚ್ಚ ಶರಣರ ಕಂಡರೆ, ನಿಶ್ಚಯವಾಗಿ
ಕೂಡಲಸಂಗಯ್ಯನೆಂಬೆನು."[೪೭]

ಎಲ್ಲರೂ ದುಡಿಯುವುದೇ ಸಮಾಜವಾದ.

ಭೂಮಿಯಲ್ಲಿ ಸಿಕ್ಕ ಸಂಪತ್ತಿಗೆ ಭೂಮಿಯ ಒಡೆಯ ಅಂದರೆ ಅರಸನೇ ನಿಜ ಒಡೆಯನೆಂಬುದು ಬಸವನ ವಾದ. ಪಾಶ್ಚಿಮಾತ್ಯದಲ್ಲಿ ಅರಸ ಮತ್ತು ಚರ್ಚು ಇವುಗಳಲ್ಲಿ ಯಾವದು ಮುಖ್ಯ-ಎಂದು ಆಗಿನ್ನೂ ವಾದವಿವಾದವಿತ್ತು. ಹನ್ನೆರಡ ನೆಯ ಶತಮಾನದಲ್ಲಿ ಕಲ್ಯಾಣದ ಶರಣ ಬಸವ-ರಾಜ್ಯ, ರಾಜ್ಯದಾಡಳಿತಕ್ಕೆ ಹೆಚ್ಚಿನ ಹಕ್ಕನ್ನು ಕೊಟ್ಟಿರುವುದನ್ನು ನೋಡಿದರೆ ಆತನಲ್ಲಿ ರಾಜಕೀಯ ವಿಚಾರಗಳು ಪರಿಪಕ್ವವಾಗಿದ್ದವೆಂಬುದು ಸ್ಪಷ್ಟ. ಅರಸನೊಡನೆ ಭಿನ್ನಮತ ಬಂದಾಗ ಸ್ವತಃ ರಾಜೀನಾಮೆ ಕೊಡುವನು. ಕಾರಣವೆಂದರೆ ರಾಜ್ಯದ ಅರಸು ಸಾರ್ವಭೌಮನು. "ಅರಸು ಮುನಿದರೆ ನಾಡೊಳಗಿರಬಾರದಯ್ಯ."[೪೮] ಅರಸು ಮುನಿಯದಂತೆ ಆತನಿಗೆ ವಿಧೇಯನಾಗಿರಬೇಕು ಎನ್ನುವಲ್ಲಿ ಕಾಯ್ದೆ ಕಾನೂನಿಗೆ ಪ್ರತಿಯೊಬ್ಬರೂ ವಿಧೇಯರಾಗಿರಬೇಕೆಂಬುದು ಇಲ್ಲಿ ಸ್ಪಷ್ಟವಾಗುತ್ತದೆ. ಅರಸನ ಆಜ್ಞೆ ಸರಿ ಬೀಳದಾಗ ನಾಡೊಳಗಿರಬಾರದು, ನಾಡನ್ನು ತ್ಯಜಿಸಬೇಕು. ಕ್ರಾಂತಿಗೆ ಎಡೆ ಕೊಡದೆ ಶಾಂತರೀತಿಯಿಂದ ತ್ಯಜಿಸಿ ಸತ್ಯಾಗ್ರಹಮಾಡಬೇಕೆಂಬುದು ಇಲ್ಲಿ ಸ್ಪಷ್ಟ.

ಇದೇ ರೀತಿ ಎಲ್ಲ ಪ್ರಜರೂ ನಾಡು ತ್ಯಜಿಸಿದರೆ ಅರಸನ ಅಸ್ತಿತ್ವಕ್ಕೆ ಕುಂದು. ಆಗ್ಗೆ ಅರಸನು ತನ್ನ ಆಜ್ಞೆಯನ್ನು ಸ್ವಾಭಾವಿಕವಾಗಿ ಬದಲಿಸಬಹುದು ಪ್ರಜರ ಅಭಿಪ್ರಾಯದಂತೆ !

ಆರ್ಥಿಕ ವಿಚಾರಗಳು

ಪ್ರತಿಯೊಬ್ಬನೂ ದುಡಿದು ನಾಡಿನ ಸಂಪತ್ತನ್ನು ಬೆಳೆಸಬೇಕೆಂಬುದು ಬಸವಣ್ಣನವರ ವಾದ. ಅದಕ್ಕೆ ಎಲ್ಲರಿಗೂ ಕಾಯಕದ ಕಂಕಣ ಕಟ್ಟಿ ಕೈಲಾಸದ ನಿರ್ಮಾಣದಲ್ಲಿ ತೊಡಗಿದರು. ಸರ್ವರೂ ದುಡಿದು ಸರ್ವರೂ ಸರಿಯಾಗಿ ಬದುಕುವ ಸಮಾಜವಾದಿ ಮಾರ್ಗವನ್ನು ತೋರಿಸಿದರು. ಇವೇ ಆರ್ಥಿಕ ವಿಚಾರದ ಬುನಾದಿಗಳು.

"ಬಿದಿರಲಂದಣವಕ್ಕು, ಬಿದಿರೆ ಸತ್ತಿಗೆಯಕ್ಕು,
ಬಿದಿರಲ್ಲಿ ಗುಡಿಯು ಗೂಡಾರವಕ್ಕು;
ಬಿದಿರಲ್ಲಿ ಸಕಲ ಸಂಪದವೆಲ್ಲವು !"೪೯

ಎಂಬ ಆತನ ಆರ್ಥಿಕ ಜ್ಞಾನವನ್ನು ಮೆಚ್ಚಬೇಕು. ಬಿದಿರಿನ ಬುಟ್ಟಿ ಮಾಡು ವವರಿಂದ ಹಿಡಿದು ಕಾಗದದ ಕಾರಖಾನೆಯವರೆಗೆ ಎಲ್ಲರೂ ಈ ಸಂಪದವನ್ನು ಕಂಡುಕೊಂಡಿರುವರು.

ಬಸವಣ್ಣನವರು ಸಂಗ್ರಹಣ (Hoarding) ದ ವಿರೋಧಿಯಾಗಿದ್ದರು. ರಾಷ್ಟ್ರದ ಸಂಪತ್ತು ಒಂದೆಡೆ ಕೂಡಿಡುವುದು ಅವಶ್ಯಕತೆಗನುಗುಣವಾಗಿ ಸರ್ವರಲ್ಲಿ ಹಂಚಹೋಗಬೇಕೆನ್ನುವ ವಾದ ಬಸವಣ್ಣನವರದು. ಈ ವಿಷಯ ಈಗಾಗಲೇ ಸಮಾಜವಾದವನ್ನು ವಿವೇಚಿಸುವಾಗ ಬಂದಿದೆ.

ದೈವಿಕ ಸಿದ್ಧಾಂತ (Divine Theory)

ಜಗದ ಉತ್ಪತ್ತಿಯು ವೈಜ್ಞಾನಿಕವಾಗಿ ಡಾರ್ವಿನ್ನನ ಪ್ರಕಾರ ವಿಕಸನ ಸಿದ್ಧಾಂತ (Evolutionary theory) ದ ಮೇರೆಗೆ ಆಗಿರುವುದಲ್ಲದೆ ಮಂಗ ನಿಂದ ಮಾನವನವರೆಗೆ ವಿಕಸನವಾಗುತ್ತ ಬಂದಿದೆ. ಸದ್ಯಕ್ಕೆ ವೈಜ್ಞಾನಿಕವಾಗಿ ಸ್ವೀಕರಿಸಿದ ವಿಷಯವಿದು. ಆದರೆ ಇದನ್ನು ಯಾವ ಧರ್ಮವೂ ಒಪ್ಪಿಲ್ಲ. ಹಿಂದೂ ಧರ್ಮದ ಸಾಂಖ್ಯ ದರ್ಶನದ ಪ್ರಕಾರ "ಪ್ರಕೃತಿ-ಪುರುಷ, ಕ್ರಿಶ್ಚಿಯನ್ನರ ಪ್ರಕಾರ "ಅಡ್ಯಾಮ್" ಮತ್ತು "ಈವ್" ಹಾಗೂ ಮುಸ್ಲಿಂ ಧರ್ಮದ ಪ್ರಕಾರ

"ಅದಾಂ" ಮತ್ತು "ಇವಾ" ಇವರ ಸಮ್ಮಿಳನದಿಂದ ಜಗದುತ್ಪತ್ತಿಯಾಯಿತು. ಇದೇ ಧಾಟಿಯಲ್ಲಿ ಇನ್ನೂ ಸ್ಪಷ್ಟವಾಗಿ ಬಸವಣ್ಣನವರು ಹೇಳಿರುವರು :

"ಆದಿಯಲೊಬ್ಬ ಶರಣ ಮೂರ್ತಿಯಾದ
ಆ ಶರಣನ ಮೂರ್ತಿಯಿಂದ ಸದಾಶಿವನಾದ;
ಆ ಸದಾಶಿವನ ಮೂರ್ತಿಯಿಂದ ಜ್ಞಾನಶಕ್ತಿಯಾದಳು;
ಆ ಸದಾಶಿವಂಗೆ ಜ್ಞಾನಶಕ್ತಿಗಿಬ್ಬರಿಗೆಯೂ ಶಿವನಾದ;
ಆ ಶಿವಂಗೆ ಇಚ್ಛಾಶಕ್ತಿಯಾದಳು,
ಆ ಶಿವಂಗೆ ಇಚ್ಛಾಶಕ್ತಿಗಿಬ್ಬರಿಗೆಯೂ ರುದ್ರನಾದ;
ಆ ರುದ್ರಂಗೆ ಕ್ರಿಯಾಶಕ್ತಿಗಿಬ್ಬರಿಗೆಯೂ ವಿಷ್ಣುವಾದ;
ಆ ವಿಷ್ಣುವಿಗೆ ಲಕ್ಷ್ಮಿಯಾದಳು,
ಈ ವಿಷ್ಣುವಿಗೆ ಮಹಾಲಕ್ಷ್ಮಿಗಿಬ್ಬರಿಗೆಯೂ ಬ್ರಹ್ಮನಾದ;
ಆ ಬ್ರಹ್ಮಂಗೆ ಸರಸ್ವತಿಗಿಬ್ಬರಿಗೆಯೂ
ನರರು ಸುರರು ದೇವರ್ಕಳು ಹೆಣ್ಣು ಗಂಡು ಸಚರಾಚರ ಸಹಿತವಾಗಿ
ಎಂಬತ್ತುನಾಲ್ಕುಲಕ್ಷ ಜೀವಜಂತುಗಳ ಜಾತಿ
ಎಂದರೆ ಜಗವಾಯಿತು; ಹೊರೆಯೆಂದೊಡೆ ಆಕಾಶದಲ್ಲಿ ನಿಂದರು !
ಗರುಡ ಗಂಧರ್ವಸಿದ್ಧ ವಿದ್ಯಾಧರರು
ಮೊದಲಾದ ದೇವಸಮೂಹಂಗಳೆಲ್ಲಾ
ಕೂಡಲ ಸಂಗಮದೇವಾ, ನೀವು ಮನದಲ್ಲಿ ಸಂಕಲ್ಪಿಸಿ
ಆಗೆಂದೊಡಾದವು."೨೦

ದೇವನೊಬ್ಬ ನಾಮ ಹಲವು ಎಂಬುದಕ್ಕೆ ಇಲ್ಲಿ ಸಾಕ್ಷ್ಯವಿದೆ. ಆದಿಯಲ್ಲಿಯ ಶರಣ (ಶೂನ್ಯ) ಮೂರ್ತಿಯೇ ದೇವರು. ಆತನ ಜ್ಞಾನಶಕ್ತಿ, ಇಚ್ಛಾಶಕ್ತಿ, ಕ್ರಿಯಾಶಕ್ತಿಗಳಿಂದ ಇನ್ನುಳಿದುದೆಲ್ಲವೂ. ಹರ, ಹರಿ, ಬ್ರಹ್ಮರು ಆತನ ತರುವಾಯ. ಬ್ರಹ್ಮನ ಮುಖಾಂತರ ಮುಂದೆ ೮೪ ಲಕ್ಷ ಜೀವಜಂತುಗಳು. ಬ್ರಹ್ಮ ಯಾವರೀತಿ ಸೃಷ್ಟಿಕರ್ತ ಎಂಬುದು ಇಲ್ಲಿ ಸ್ಪಷ್ಟವಾಗಿದೆ. ಆತ ಕೇವಲ ಮಂತ್ರಿ ಆದಿಮೂರ್ತಿಯ ಕೈಯಲ್ಲಿ! ಇಂದಿನ ಬ್ರಹ್ಮಕುಮಾರಿಯರ ಪ್ರಚಾರಕ ಧಾಟಿಯೂ ಇದೇ ಆಗಿದೆ.

ವೈಜ್ಞಾನಿಕವಾಗಿ ವಿಕಸನ ಸಿದ್ಧಾಂತವನ್ನು ಸಧ್ಯಕ್ಕೆ ಸ್ವೀಕರಿಸಿದರೂ ಈ ವೈದಿಕ ಸಿದ್ಧಾಂತವೇ ಸತ್ಯವೆಂಬುದು ಸ್ಪಷ್ಟ. ಕೇವಲ ವಿಕಸನದಿಂದ ೮೪ಲಕ್ಷ

ಜೀವಜಂತುಗಳು ಉತ್ಪತ್ತಿಯಾದವೆಂದು ಹೇಳಲು ಶಕ್ಯವಿಲ್ಲ. ಮಾನವತೆಯು ಮನದಲ್ಲಿ ಅಚ್ಚಳಿಯದೆ ಉಳಿದಿರುವ ಅಗೋಚರ ಜೀವಿಗಳಾದ ದೇವಸಮೂಹಕ್ಕೆ ವಿಕಸನ ಸಿದ್ಧಾಂತದಲ್ಲಿ ಎಡೆಯಿಲ್ಲ. ಆದರೆ ದೈವಿಕ ಸಿದ್ಧಾಂತದಲ್ಲಿ ಎಲ್ಲಕ್ಕೂ ಎಡೆ ಇದೆಯಲ್ಲದೆ ಹೆಚ್ಚು ವ್ಯಾಪಕವಾಗಿದೆ.

ಶಿಕ್ಷಣ

ಬಸವಣ್ಣ ವಿದ್ಯೆಗೆ ಮಹತ್ವವಿತ್ತಿರುವನು. "ಅಭ್ಯಾಸಸ್ಯ ವಿಹೀನಸ್ಯ ತಸ್ಯ ಜನ್ಮ ನಿರರ್ಥಕಂ"[೫೧] ಎಂದು ಹೇಳಿರುವನು. "ಗುರೋರಪಿ ಸಮಂ ಹಾಸ್ಯಂ | ಕರ್ತವ್ಯಂ ಕುಟಿಲಂ ವಿನಾ |"[೫೨] ಕುಟಿಲತನವಿಲ್ಲದ ಹಾಸ್ಯವನ್ನು ಗುರುಗಳೊಂದಿಗೂ ಸಹ ಮಾಡಬಹುದು—ಎಂಬಲ್ಲಿ ಗುರುಶಿಷ್ಯರಲ್ಲಿಯ ಅನ್ಯೋನ್ಯ ಸಂಬಂಧವನ್ನು ತೋರಿಸುವನು.

ವಿದ್ಯಾ ವಿನಯೇನ ಶೋಭತೇ—ಎಂಬ ಮಾತು ಆತನಿಗೆ ಗೊತ್ತು. "ನೂರನೋದಿ ನೂರ ಕೇಳಿದರೇನು ? ಆಶೆ ಹರಿಯದು ರೋಷ ಬಿಡದು".[೫೩] "ವಿನನೋದಿ, ಏನಕೇಳಿ, ಏನಮಾಡಿಯೂ ಫಲವೇನು ನಿಮ್ಮವರನೊಲ್ಲದನ್ನಕ್ಕ ?[೫೪]

"ಬ್ರಹ್ಮಪದವಿಯನೊಲ್ಲೆ, ವಿಷ್ಣುಪದವಿಯನೊಲ್ಲೆ,
ರುದ್ರಪದವಿಯನೊಲ್ಲೆ,
ಮತ್ತಾವ ಪದವಿನೊಲ್ಲೆನಯ್ಯಾ !
ಕೂಡಲಸಂಗಮದೇವಾ, ನಿಮ್ಮ ಸದ್ಭಕ್ತರ ಪಾದವನರಿದಿಪ್ಪ
ಮಹಾಪದವಿಯನೆ ಕರುಣಿಸಯ್ಯಾ"[೫೫]

ಪದವಿ (Degree), ಪುರಸ್ಕಾರ, ಸ್ಥಾನಕ್ಕಾಗಿ ಮಾನವನ್ನೂ ಮಾರುವವರು ಇದನ್ನು ಮೂರುಸಲವಾದರೂ ಪಠಣಮಾಡಬೇಕು !

ಅತಿಥಿ ಸತ್ಕಾರದ ಅವರ ಮಾತಂತೂ ಮಾರ್ಮಿಕವಾಗಿದೆ. "ಏನು ಬಂದಿರಿ ಹದುಳವಿದ್ದಿರೆ ? ಎಂದರೆ ನಿಮ್ಮ ಮೈಸಿರಿ ಹಾರಿಹೋಹುದೆ ? ಕುಳ್ಳಿರೆಂದರೆ ನೆಲ ಕುಳಿಹೋಹುದೆ ? ಒಡನೆ ನುಡಿದರೆ ಶಿರ ಹೊಟ್ಟೆಯೊಡೆವುದೇ ? ಕೊಡಲಿಲ್ಲದಿದ್ದರೊಂದು ಗುಣವಿಲ್ಲದಿರ್ದೊಡೆ ಕೆಡಹಿ ಮೂಗು ಕೊಯ್ಯದೆ ಮಾಬ್ಬನೆ ಕೂಡಲ ಸಂಗಮದೇವನು".[೫೬] ಮನೆದೊಡ್ಡದಿರುವದು ಮುಖ್ಯವಲ್ಲ ಮನದೊಡ್ಡದಿರಬೇಕು.[೫೭] ಅದು ಆತನ ಇಚ್ಛೆ. ಇಂಥ ಗುಣಗಳನ್ನು ಕಲಿಸುವ

ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಬೇಕು. ಅಂದರೆ ಜೀವನ ಸಾರ್ಥಕ, ಆಗ್ಗೆ "ಕೂಡಲ ಸಂಗಮದೇವ ತಮಗೆ ಬೇಕೆಂದು ಎತ್ತಿಕೊಳ್ಳುವ."

ಬುದ್ಧ, ಬಸವ

ಬಸವನು ಮಾಡಿದಂಥ ಕ್ರಾಂತಿ ಭಾರತದಲ್ಲಿ ಆ ಮೊದಲು ಆರನೆಯ ಶತಮಾನದಲ್ಲಿ ಆಗಿತ್ತು ಗೌತಮ ಬುದ್ಧನಿಂದ. ಜಗವಿನ್ನೂ ಗಾಢನಿದ್ರೆಯಲ್ಲಿದ್ದಾಗ ಬುದ್ಧನು ಎದ್ದು ಅಜ್ಞಾನದ ಅಂಧಕಾರವನ್ನು ಹರಿದೊಗೆದು ಜನತೆಗೆ ಮಾನವತೆಯ ಮರ್ಮ ತಿಳಿಸಿದನು. ಆತನ ನಂತರವೇ ಅಲ್ಲವೇ ಜಗದ ಇನ್ನುಳಿದ ಮುಖ್ಯ ಧರ್ಮ ಸಂಸ್ಥಾಪಕರಾದ ಏಸುಕ್ರಿಸ್ತ ಮತ್ತು ಮುಹಮ್ಮದ ಪೈಗಂಬರ ಮುಂತಾದವರು ಅವತರಿಸಿದ್ದು? "ಏಸುಕ್ರಿಸ್ತನು ಕೂಡ ಅಹಿಂಸೆಯ ದೀಕ್ಷೆಯನ್ನು ಭಾರತದ ಬೌದ್ಧ ಮಹಾವಿದ್ಯಾಲಯದಲ್ಲಿಯೇ ಪಡೆದುದು ಎಂದು ಕೆಲವು ಇತಿಹಾಸಜ್ಞರು ಹೇಳುವರು."[೫೯]

ಜಗದ ಪೂರ್ವದ ಮೇಲೆ ಇಂದಿಗೂ ತನ್ನ ಧಾರ್ಮಿಕ ಸಾಮ್ರಾಜ್ಯ ಪಡೆದ ಬೌದ್ಧ ಧರ್ಮಸದ್ಯಕ್ಕೆ ತನ್ನ ತವರುಮನೆಯಲ್ಲಿಯೇ ಹೇಳಹೆಸರಿಲ್ಲದಂತಾದುದು ಅದರ ಹಣೆಯಬರಹ! ವೈದಿಕ ಧರ್ಮದ ವಿರುದ್ಧ ಹೋದುದಕ್ಕೆ ಈ ಮರಣಾಂತಿಕ ಪೆಟ್ಟು ಬಿದ್ದಿರಬಹುದೇ? ಅದೂ ಅಲ್ಲದೆ, ಬೌದ್ಧ ಧರ್ಮಕ್ಕೆ ತನ್ನದೇ ಆದ ವಿಶಿಷ್ಟ ಗುಣಧರ್ಮವಿರಲಿಲ್ಲ. ಜನತೆಯನ್ನು ಒಂದು ಕಟ್ಟಿನಲ್ಲಿ ಬಂಧಿಸಲು. ಬಸವಣ್ಣ "ಲಿಂಗ" ಎಂಬ ವಿಶ್ವರೂಪಿ ಪರಮಾತ್ಮನ ಮುದ್ರೆಯನ್ನು ಎಲ್ಲರ ಹೃನ್ಮರ್ಮದಲ್ಲಿ ಅಚ್ಚಳಿಯದಂತೆ ಮುದ್ರಿಸಿದನೆಂತಲೇ ಲಿಂಗಾಯತವೆಂಬ ವಿಶ್ವಮಾನವತಾವಾದಿ ಧರ್ಮ ಇನ್ನೂ ಕವಲೊಡೆದು ಬೆಳೆಯತೊಡಗಿದೆ.

ಬುದ್ಧನ ಮುಖ್ಯ ತತ್ವಗಳಾದ "ಸರ್ವಂ ಅನಾತ್ಮಂ" "ಸರ್ವಂ ಅನಿತ್ಯಂ" ಮತ್ತು "ಸರ್ವಂ ದುಃಖಂ"– ಮುಂತಾದವುಗಳು ಜನತೆಯಲ್ಲಿ ಹುಮ್ಮಸ್ಸು, ಸ್ಫೂರ್ತಿಯನ್ನು ತುಂಬಿ ಕಾರ್ಯೋನ್ಮುಖರನ್ನಾಗಿ ಮಾಡುವ ಬದಲು ಅವರನ್ನು ನಿರ್ವೀರ್ಯರನ್ನಾಗಿ ಮಾಡಿ ನಾಡಿನಿಂದ ಕಾಡಿಗಟ್ಟಿರಬೇಕು. ಅಂತೆಯೇ ಮುಂದೆ ಮುಸಲ್ಮಾನರ ದಾಳಿಗಳಿಗೆ ಸ್ವಾಭಾವಿಕವಾಗಿ ತುತ್ತಾಗಿ ಕೊನೆಯವರೆಗೂ ನರಳಬೇಕಾಯಿತು ಪಾಕಿಸ್ತಾನವೆಂಬ ಕರುಳಿನ ಕ್ಯಾನ್ಸರದಿಂದ! ತದ್ವಿರುದ್ಧವಾಗಿ, ಬಸವಣ್ಣನವರು ಸರ್ವದಲ್ಲಿ ಸಂಗಮನಾಥನನ್ನು ಕಂಡು ಅವರನ್ನು ಅನಿತ್ಯದಿಂದ ನಿತ್ಯದ ಕಡೆಗೆ ಒಯ್ದುದಲ್ಲದೆ, ಶಾಶ್ವತ ಸುಖದ ಮಾರ್ಗ ತೋರಿಸಿದರು– ಅವರನ್ನೆಲ್ಲ ಬೇರೆ ಬೇರೆ ಕಾಯಕಕ್ಕೆ ಹಚ್ಚಿ. ನಾಡಿನಲ್ಲಿದ್ದವರಷ್ಟೇ ಅಲ್ಲ

ಕಾಡಿನಲ್ಲಿದ್ದವರೂ ಕಾಯಕ ನಿರತರಾದರು. ಪ್ರಜೆಗಳಷ್ಟೇ ಅಲ್ಲ, ಪ್ರಜಾಪ್ರತಿನಿಧಿಗಳು ಕೊನೆಗೆ ಪ್ರಭುಗಳೇ ಕಾಯಕಕ್ಕೆ ಮಾರುಹೋದರು. ಕಾಶ್ಮೀರದ ದೊರೆ ಕಲ್ಯಾಣಕ್ಕೆ ಬಂದು ಮೋಳಿಗೆಯ ಮಾರಯ್ಯನಾಗಲಿಲ್ಲವೇ? ಬಹುಶಃ ಸಂಗಮನಾಥನನ್ನೂ ಎಚ್ಚರಿಸಿರಬೇಕು–ಆತನ ಕಾಯಕದತ್ತ! ಅಂದಬಳಿಕ ಕಾಯಕ ಕೈಲಾಸ ನಿರ್ಮಿಸದೇ ಬಿಡಬಹುದೇ? ಅದುವೇ ಇಂದಿನ ಕಲ್ಯಾಣ ರಾಜ್ಯ (Welfare state).

ಬುದ್ಧ ತಾನು ಕಟ್ಟಿಕೊಂಡ ಸಂಸಾರ ತ್ಯಾಗಮಾಡಿ ವಿಶ್ವಸಂಸಾರ ಕಟ್ಟಿಕೊಂಡ. ವಿಶ್ವದ ಕೆಲವರಿಗೆ ಹಿತವಾಗಿರಬಹುದು– ಆದರ್ಶದ ಆಶೆಯಲ್ಲಿ! ಆದರೆ ತನ್ನನ್ನೇ ನೆರೆನಂಬಿ ಬಂದ ಮುಗ್ಧ ನವಯುವತಿಯಾದ ಹೆಂಡತಿಯ ಭೋಗಿಕ, ಭೌತಿಕ ಸುಖಕ್ಕೆ ಕೊನೆಯವರೆಗೂ ಸಂಚಕಾರ ತಂದ! ಅದೂ ಪ್ರಾಚೀನ ಭಾರತದಲ್ಲಿ!! ಒಬ್ಬ ಹೆಂಡತಿಗೆ ದುಃಖವಾದರೂ ಚಿಂತೆಯಿಲ್ಲ ಇಡೀ ಮಾನವತೆಗೆ ಸುಖವಾಯಿತಲ್ಲ ಎಂದು ಹಲವಾರು ವಾದಿಸಬಹುದು. ಆದರೂ ಬುದ್ಧ ಲೌಕಿಕವಾಗಿ, ವ್ಯವಹಾರಿಕವಾಗಿ ವರ್ತಿಸಿ ತನ್ನ ಮನೆಯಿಂದ ವಿಶ್ವಮನೆಯನ್ನು ಜಯಿಸಬೇಕಿತ್ತು. ಅದನ್ನು ಜನತೆ ಹೆಚ್ಚು ನಂಬುತ್ತಿತ್ತು. ಅಂಥ ಧರ್ಮ ಸ್ಥಿರವಾಗಿ ಉಳಿಯುತ್ತಿತ್ತು. ಈ ದಿಶೆಯಲ್ಲಿ ಬಸವನ ಮಾರ್ಗ ಲೌಕಿಕ, ವ್ಯವಹಾರಿಕ ಅಷ್ಟೇ ರೀತಿಯಲ್ಲಿ ಆಧ್ಯಾತ್ಮಿಕ, ಪಾರಮಾರ್ಥಿಕ ಮತ್ತು ಯೋಗಿಕ. ನಿಜ ಅರ್ಥದಲ್ಲಿ ಆತ ಮನೆಗೆದ್ದು ಮಾರುಗೆದ್ದಿರುವನು. ಸಂಸಾರದಿಂದ ಸದ್ಗತಿ ಕಂಡಿರುವನು. ಆತ ಕಟ್ಟಿಕೊಂಡ ಸಂಸಾರವನ್ನೂ ಬಿಡಲಿಲ್ಲವಷ್ಟೇ ಅಲ್ಲ, ತನ್ನ ಬಿಟ್ಟು ನಿಂತ ಸಮಾಜವನ್ನೂ ಕಟ್ಟಿಕೊಂಡ. ಇದು ಬಸವನ ವೈಶಿಷ್ಟ್ಯ. ಬುದ್ಧ ಇದ್ದ ಮುದ್ದು ಮಗ ರಾಹುಲನನ್ನು ಎತ್ತಿ ಮುದ್ದಾಡಲಿಲ್ಲ. ತಂದೆ ಇದ್ದರೂ ಏಕಮಾತ್ರ ಪುತ್ರ ಪರದೇಶಿ! ಗಂಡನಿದ್ದರೂ ಹೆಂಡತಿ ವಿಧವೆ! ಇದು ಬುದ್ಧನ ಸ್ವಂತ ಗೃಹದ ಪರಿಸ್ಥಿತಿ! ಬಸವ ಬಹುಶಃ ಪುತ್ರಾಕಾಂಕ್ಷಿಯಾಗಿ ಮೊದಲ ಪ್ರೇಮದ ಪತ್ನಿ ಗಂಗಾಂಬಿಕೆ ಇದ್ದರೂ ನೀಲಾಂಬಿಕೆಯನ್ನು ವರಿಸುವನು. (ಮೋಹದ ಗೆಳತಿಯನ್ನು ಬಿಡಲಾರದ್ದಕ್ಕೆ ಗಂಗಾಂಬಿಕೆ ನೀಲಾಂಬಿಕೆಯನ್ನು ತನ್ನ ಸವತಿಯಾಗಿ ತರುವಳು– ಎಂಬ ವಾದವೂ ಇದೆ). ಜೀವನ ನೆಲೆಯಾಗಿ ನಿಂತಿರುವದು ಪ್ರೇಮ, ವಾತ್ಸಲ್ಯ, ಭಕ್ತಿಗಳ ನೆಲಗಟ್ಟಿನಮೇಲೆ. ಈ ನೆಲೆಗಳು ಮನೆಯಲ್ಲಿ ಹುಟ್ಟಿ ವಿಶ್ವದೆಡೆಗೆ ಹರಿಯುವವು ತಮ್ಮ ಸಾಮರ್ಥ್ಯವಿದ್ದಷ್ಟು.

ಬುದ್ಧ ಮತ್ತು ಬಸವರಲ್ಲಿ ಒಂದು ಸಾಮ್ಯತೆ ಇದೆ. ಇಬ್ಬರೂ ತಾತ್ವಿಕ
ಕ್ಕಿಂತ ಸಾತ್ವಿಕಕ್ಕೆ, ವಿಚಾರಕ್ಕಿಂತ ಆಚಾರಕ್ಕೆ, ಭೌತಿಕಕ್ಕಿಂತ ನೈತಿಕತ್ವಕ್ಕೆ
ಹೆಚ್ಚು ಮಹತ್ವವನ್ನಿತ್ತು ಮಾನವತಾವಾದಿಗಳಾದರು. "ಗುಡ್ಡದಷ್ಟು ತಾತ್ವಿಕ
ವಿಚಾರ ಮಾಡುವುದಕ್ಕಿಂತ ಸಾಸಿವೆಯಷ್ಟು ಸಾತ್ವಿಕಾಚಾರದಲ್ಲಿ ತೊಡಗಿಕೊಳ್ಳು
ವುದೇ ಮೇಲೆಂಬುದು ಬುದ್ಧನ ವಿಚಾರಸರಣಿ."[೬೦] ಬಹುಶಃ ಬುದ್ಧನು ಚಾರ್ವಾಕರ
ಅತಿ ಭೌತಿಕಕ್ಕೆ ಹಾಗೂ ವೈದಿಕರ ಅತಿ ಮೂಢನಂಬಿಕೆಗೆ ಬೇಸತ್ತಿರಬೇಕು.
ಬುದ್ಧನಿಗೆ ಬೇಕಾದುದು ಮಾನವತೆ. "ಒಳ್ಳೆಯವನಾಗಿರು, ಒಳ್ಳೆಯದನ್ನೇ
ಮಾಡು"- ಇದೇ ಅವರಿತ್ತ ಪರಮೋಪದೇಶ. ಪ್ರಾಣಿದಯಾಪರನಾದ ಬುದ್ಧ
ನಿರೀಶ್ವರವಾದಿಯಾಗಿರಲಿಕ್ಕಿಲ್ಲ.[೬೧] ಅದೇ ರೀತಿ ಬಸವಣ್ಣನವರ "ಕಳಬೇಡ,
ಕೊಲಬೇಡ..." (ಟಿಪ್ಪಣಿ ನಂ. ೧೭)-ಎಂಬ ವಚನವು ಮಾನವತೆಯ ಮೂಲ
ಭೂತ ಸಂವಿಧಾನವಾಗಿದೆ.

ಬಸವ ಬುದ್ಧನಿಗಿಂತಲೂ ಹೆಚ್ಚು ಮಾನವತಾವಾದಿ- ಈ ಎಲ್ಲ ದೃಷ್ಟಿ
ಗಳಿಂದ. ಅಂದಬಳಿಕ, ವಿಶಿಷ್ಟ ಗುಣಗಳ ಚೌಕಟ್ಟಿನಲ್ಲಿರುವ ಬಸವನ ವೀರಶೈವ
ಧರ್ಮ ಹೆಚ್ಚು ಕಾಲ ಮತ್ತು ನೆಲವನ್ನು ಆವರಿಸಬೇಕಿತ್ತು. ಆದರೆ ಅದರ
ಬದಲು ಬೌದ್ಧ ಧರ್ಮ ಹೆಚ್ಚು ನೆಲವನ್ನು ಆವರಿಸಿತು. ಕಾರಣವೆಂದರೆ
ಬುದ್ಧ ಸ್ವತಃ ಪ್ರಾರಂಭದಲ್ಲಿ ಸಾಮ್ರಾಟನಾಗಿದ್ದ. ಆತನ ಮಾಂಡಲಿಕ ಅರಸರು
ಬೌದ್ಧಮತವನ್ನು ತಮ್ಮ ತಮ್ಮ ನಾಡಿನಲ್ಲಿ ಪ್ರಚುರಪಡಿಸಿರಬಹುದು. ಸ್ವತಃ
ಸಾಮ್ರಾಟನ (ಅಶೋಕ) ಮಕ್ಕಳೇ ಪರದೇಶಗಳಿಗೂ ಹೋಗಿ ಪ್ರಚಾರ ಮಾಡಿದು
ದರಿಂದ ಜಗದ ಪೂರ್ವಭಾಗ ಈಗಲೂ ಬೌದ್ಧಮತವಾದಿಯಾಗಿದೆ. ಬಸವಣ್ಣ
ಸ್ವಲ್ಪ ಕಾಲ ಮಾತ್ರ ಮುಖ್ಯಮಂತ್ರಿಯಾಗಿದ್ದ. ಪ್ರಚಾರಕ್ಕೆ ಅಧಿಕಾರ
ಮತ್ತು ಹಣ ಎರಡೂ ಬೇಕು. ಅಂದರೇನೇ ಹೆಚ್ಚು ಪ್ರಚಾರವಾಗುವದು.
ಬಸವನಿಗೆ ಇವೆರಡೂ ಬಹು ದಿನ ದಕ್ಕಲಿಲ್ಲ. ಆತ ಪ್ರಾರಂಭದಲ್ಲಿ ಒಬ್ಬ ಸಾಮಾನ್ಯ
ವ್ಯಕ್ತಿ (ಪೌರಾಣಿಕ ದೃಷ್ಟಿಯಲ್ಲಿ ಮಾತ್ರ ನಂದಿಯ ಅವತಾರ)! ಅದೂ
ಮತಾಂತರ ಹೊಂದಿದ ವ್ಯಕ್ತಿ! ಅಂದಬಳಿಕ ಅತ್ತ ಬಿಟ್ಟು ಬಂದ ಮತದ
ಸಹಾಯವಿಲ್ಲ, ಇತ್ತ ಅಪ್ಪಿ ಬಂದ ಮತದ ಸಹಾನುಭೂತಿಯಿಲ್ಲ- ಎಂದಂತಾಗಿರ
ಬೇಕು ಬಸವನ ಬಾಳು! ಅಂಥದರಲ್ಲಿ ಜಾತೀಯವಾದಿ ಮತ್ತು ಅಧಿಕಾರವಾಹಿ
ಕುಹಕಿಗಳ ಕಣ್ಣು ಬೇರೆ ಆತನ ಮೇಲೆ! ಕಲ್ಯಾಣದಲ್ಲಿ ಕ್ರಾಂತಿಯಾದಾಗ
ಲಂತೂ ಆತನು ಕಂಗೆಟ್ಟು ಕೃಷ್ಣೆಯನ್ನು ಮೊರೆಹೊಕ್ಕಿದ್ದು ಆಶ್ಚರ್ಯವೇನಲ್ಲ!
ಅಂತೂ ಛಲವಾದಿ ಬಸವಣ್ಣ. ಆತ ಮಾನವರ ಬೇಡನು.[೬೨] ಮಾನವರಿಗೆ

ಶರಣಾಗತನಾಗಲಾರನು. ಬಸವನಿಗೆ ಭವಿಗಳಾದ ಕಲ್ಯಾಣದ ಜೈನರು, ವೈದಿಕರಷ್ಟೇ ಶತ್ರುಗಳಾಗಿರಲಿಲ್ಲ, ಭಕ್ತರಲ್ಲಿಯ ಕೆಲ ಒಳಪಂಗಡದವರೂ ಸಹ ತಿರುಗಿಬಿದ್ದಿರಬೇಕು. ಕಾರಣವೆಂದರೆ ಬಸವನು ಜಂಗಮ ಪಕ್ಷಪಾತಿ ಯೆಂಬುದು-ಅವರ ಕುತರ್ಕ. ಈಗಲೂ ಇಂಥ ವಿಪರೀತ ಬುದ್ಧಿಯ ಒಳಪಂಗಡಗಳಿರುವವೆಂದೇ ವೀರಶೈವರಲ್ಲಿ ಒಕ್ಕಟ್ಟಿಲ್ಲ, ಬೆಳವಣಿಗೆಯಿಲ್ಲ, ಪ್ರಚಾರವಂತೂ ಮೊದಲೇ ಇಲ್ಲ. ಇಂದಿಗೂ ಒಳಪಂಗಡಗಳಲ್ಲಿ ವಿವಾಹ, ಊಟ ಮುಂತಾದ ಬಳಕೆಗಳಿಲ್ಲದ್ದು ಅವಹೇಳನದ ಸಂಗತಿ. ಬಸವಣ್ಣನ ವ್ಯಕ್ತಿತ್ವಕ್ಕೆ ಆದರ್ಶಕ್ಕೆ ಮಸಿಹಚ್ಚುವ ಸಂಗತಿ ಇದು !

ಇಂದಿಗೂ ಬಸವನ ಬಗೆಗೆ ಇಮ್ಮತಗಳಿವೆ. ಹಲವರಿಗೆ ಆತ ನಂದಿಯ ಅವತಾರಿ. ಇನ್ನುಳಿದವರಿಗೆ ಅವನೊಬ್ಬ ಮಾನವಶ್ರೇಷ್ಠ, ದೇವಮಾನವನಲ್ಲ. ಕಾರಣವೆಂದರೆ ಆತ ಜನ್ಮತಃ ಲಿಂಗಾಯತನಲ್ಲ. ನಂದಿಯ ಅವತಾರಿಯಾಗಿದ್ದರೆ- ಲಿಂಗವಂತ ಮನೆತನದಲ್ಲಿಯೇ ಜನ್ಮತಾಳುತ್ತಿದ್ದ ಎಂಬುದು ಅವರ ವಾದ. ಅದರಲ್ಲಿಯೂ ಆತನು ಜಂಗಮನಲ್ಲ ಒಬ್ಬ ಸಾಮಾನ್ಯ ಮತಾಂತರವಾದ ಭಕ್ತ. ಇದೊಂದು ದೈವದುರ್ವಿಪಾಕವಿರಬೇಕು. ಬಹುಶಃ ಆತನ ಮಂತ್ರ ಆತನಿಗೆ ಮುಳುವಾಗಿರಬೇಕು.

"ಗುರು ಮುನಿದರೆ ಒಂದು ದಿನ ತಾಳುವೆ,
ಲಿಂಗ ಮುನಿದರೆ ದಿನದರೆ ತಾಳುವೆ
ಜಂಗಮ ಮುನಿದರೆ ಕ್ಷಣಮಾತ್ರ ತಾಳಿದೆನಾದರೆ
ಎನ್ನ ಪ್ರಾಣದ ಹೋಕು !...."[೬೩]

ಸತ್ಯಸಂಗತಿಯೆಂದರೆ ಬಸವನ ಪ್ರಕಾರ ಲಿಂಗವಿದ್ದವರೆಲ್ಲರೂ ಸಂಗಮನಾಥರು. ಇಲ್ಲಿ ಕನಿಷ್ಠತೆಗೆ ಆಸ್ಪದವೇ ಇಲ್ಲ. ಸಮಾನತೆ ಹಿಂದೆಂದೂ ಇರಲಿಲ್ಲ. ಸಮಾನತೆಯಿದ್ದಲ್ಲಿ ಸ್ವಾತಂತ್ರ್ಯವಿದೆ, ಎರಡೂ ಇದ್ದಲ್ಲಿ ಸಹಬಂಧುತ್ವ ಸ್ವಾಭಾವಿಕ.

ಬಸವನು ಸಾಮಾನ್ಯನಾಗಿ ಹುಟ್ಟಿ, ಸಂಗ, ಸಂಸ್ಕಾರ ಬಲಗಳಿಂದ ಅಸಾಮಾನ್ಯನಾಗಿ ಬೆಳೆದು, ಮಾನವ ಶ್ರೇಷ್ಠನಾದನಷ್ಟೇ ಅಲ್ಲ, ನೈತಿಕ ದೃಷ್ಟಿ ಯಿಂದ ಆತನು ಪೂಜನೀಯ ದೇವಮಾನವನಾದನು.

ಒಟ್ಟಿನಲ್ಲಿ, ಬುದ್ಧ ಬಸವರು ಪ್ರಪಂಚದ ಪ್ರಥಮ ಮತ್ತು ದ್ವಿತೀಯ ಕ್ರಾಂತಿಕಾರಿ ಸಮಾಜ ಸುಧಾರಕರು, ಮಾನವತಾವಾದಿಗಳು. ತೃತೀಯ ಸ್ಥಾನಕ್ಕೆ

ಬಹುಶಃ ಅಮೇರಿಕೆಯ ಅಬ್ರಹ್ಯಾಂ ಲಿಂಕನ್ ಮತ್ತು ಭಾರತದ ಮಹಾತ್ಮಾ ಮೋಹನದಾಸ ಕರಮಚಂದ ಗಾಂಧಿಯವರು ಸ್ಪರ್ಧಾಳುಗಳು. ಬುದ್ಧ ಬಸವರಲ್ಲಿ ಮಾನವತಾಂಶಗಳು ಒಗ್ಗೂಡಿವೆ. ಅದಕೆಂತಲೇ ಅವರು ಮಾನವತೆ ಇರುವ ತನಕ ಆದರ್ಶರಾಗಿ ಅಮರರಾಗಿ ನಿಲ್ಲುವರು.

ಟಿಪ್ಪಣೆಗಳು

೧. ಪಂಡಿತ ನಾಗಭೂಷಣ ಶಾಸ್ತ್ರಿಗಳು : “**ಭಾರತೀಯ ದರ್ಶನ ಸಮೀಕ್ಷೆ**”, ಭಾಗ-೧ ಮೃತ್ಯುಂಜಯ ಪ್ರಕಾಶನ–೩; ಪ್ರಕಾಶಕರು–ಎಸ್. ಬಸವರಾಜ; ಮೃತ್ಯುಂಜಯ ನಿಲಯ, ಮಹಾಂತ ಮುದ್ರಣಾಲಯ, ಧಾರವಾಡ–೬, ೧೯೭೫, ಪು. ೧೧; ೫೯–ಪು. ೫೩; ೬೦ ಮತ್ತು ೬೧ ಪು. ೫೭
೨ ರಿಂದ ೫೮ ಮತ್ತು ೬೨, ೬೩. ವಿಹಾರಿ : **ಬಸವಣ್ಣನವರ ವಚನಗಳು**, (ಭಾವಾರ್ಥಸಹಿತ), ಎರಡನೆಯ ಮುದ್ರಣ, ೧೯೫೮,
ಪ್ರಕಾಶಕರು : ಬಿ. ಜಿ. ಸಂಕೇಶ್ವರ, ಹುಬ್ಬಳ್ಳಿ.

ಹರ್ಡೇಕರ ಮಂಜಪ್ಪನವರ ರಾಷ್ಟ್ರೀಯ ವಾದ

● ಎನ್. ಎ. ಪಾಟೀಲ

ಹರ್ಡೇಕರ ಮಂಜಪ್ಪನವರು ಕರ್ನಾಟಕದ ಸುಪುತ್ರರಾಗಿದ್ದಂತೆಯೇ ಭಾರತಮಾತೆಯ ಹೆಮ್ಮೆಯ ಶಿಶುವೂ ಆಗಿದ್ದರು. ಆಗಿನ ಮುಂಬೈಪ್ರಾಂತದ ಉತ್ತರಕನ್ನಡ ಜಿಲ್ಲೆಯ ಬನವಾಸಿಯಲ್ಲಿ ೧೮೮೫ರಲ್ಲಿ ಅವರು ಜನಿಸಿದರು. ೧೯೦೫ರಲ್ಲಿ ಅವರು ಗೋಕರ್ಣದಲ್ಲಿ ಸ್ವದೇಶಿಯ ಮೇಲೆ ಭಾಷಣಮಾಡಿದಾಗಲೇ ಸಾರ್ವಜನಿಕ ಚಟುವಟಿಕೆಗಳಲ್ಲಿ ಪದಾರ್ಪಣಮಾಡಿದಂತಾಯಿತು.[೧] ಪತ್ರಿಕಾ ಸಾಹಸಕ್ಕೆ ಮಂಜಪ್ಪನವರನ್ನು ಪ್ರೇರೇಪಿಸಿದ ಶಕ್ತಿ ತಿಲಕರ 'ಕೇಸರಿ' ಪತ್ರಿಕೆ. ಅವರಿಗೆ ಮಾತಿನ ಚಾತುರ್ಯ ಮತ್ತು ಲೇಖನಕಲೆಗಳು ಸಾಧಿಸಿದ್ದವು. ಅವರು ೧೯೦೬ರಲ್ಲಿ "ಧನುರ್ಧಾರಿ" ಎಂಬ ಪತ್ರಿಕೆಯನ್ನು ಹೊರಡಿಸಿದರು. ಮರಾಠಿಯ 'ಕೇಸರಿ'ಯಲ್ಲಿಯ ವಿಷಯಗಳ ಕನ್ನಡ ಅನುವಾದವನ್ನೇ ಬಹುಶಃ ಅದು ಒಳಗೊಂಡಿರುತ್ತಿತ್ತು. ಅವರು ತಮ್ಮ ಪತ್ರಿಕೆಯಲ್ಲಿ ರಾಷ್ಟ್ರೀಯ ಮುಖಂಡರುಗಳಾದ ತಿಲಕ, ಬಿಪಿನಚಂದ್ರ ಪಾಲ, ಲಾಲಾಲಜಪತರಾಯರುಗಳಂಥವರ ಭಾಷಣಗಳನ್ನು ಪ್ರಕಾಶಿಸುತ್ತಿದ್ದರು. ಹೀಗೆ ಅವರು ತಮ್ಮ ಪತ್ರಿಕೆಯ ಮುಖಾಂತರ ರಾಷ್ಟ್ರೀಯ

---

೧. ಡಾ. ಎಸ್. ಸಿ. ನಂದಿಮಠ (ಸಂ) ಹರ್ಡೇಕರ ಮಂಜಪ್ಪನವರ ಸ್ಮಾರಕ ಗ್ರಂಥ ಬಾಗಲಕೋಟೆ, ೧೯೫೧ ಪು. ೨,

ಜಾಗೃತಿಯ ಪುನರುಜ್ಜೀವನವನ್ನು ಮಾಡಿ ಕನ್ನಡದ ಪತ್ರಿಕಾಪ್ರಪಂಚಕ್ಕೆ ಹೊಸ ತಿರುವನ್ನು ನೀಡಿದರು.

ಅವರು ಮುಂಬೈಯಲ್ಲಿಯ ಆರ್ಯಸಮಾಜಕ್ಕೆ ೧೯೧೧ರಲ್ಲಿ ಭೇಟ್ಟಿಯನ್ನಿತ್ತರು.[೧] ಅದರ ಪರಿಣಾಮವು ಇವರ ಮೇಲೆ ಘನವಾಗಿ ಆಯಿತು. ಆದ್ದರಿಂದ ಆರ್ಯಸಮಾಜದ ಪ್ರಾರ್ಥನಾಸಭೆಯಂತೆ ಧಾರವಾಡದ ಮೃತ್ಯುಂಜಯ ಸ್ವಾಮಿಗಳೂ ಒಂದು ಸಭೆಯನ್ನು ಪ್ರಾರಂಭಿಸಬೇಕೆಂದು ಅವರು ಮೃತ್ಯುಂಜಯ ಸ್ವಾಮಿಗಳಿಗೆ ವಿನಂತಿಸಿಕೊಂಡರು. ಅದರಂತೆ ಧಾರವಾಡದಲ್ಲಿ ಅಂಥ ಸಂಸ್ಥೆಯು ಪ್ರಾರಂಭವಾಯಿತು. ಮತ್ತು ಅದರ ಪರವಾಗಿ ಪ್ರತಿ ವಾರಕ್ಕೊಂದರಂತೆ ಭಾಷಣಗಳ ಮಾಲಿಕೆಗಳೇರ್ಪಟ್ಟವು.

ಮಂಜಪ್ಪನವರು ತಮ್ಮ ಧಾರ್ಮಿಕ ವಿಚಾರಗಳಲ್ಲಿ ಖಂಡಿತವಾದಿಯಾಗಿದ್ದರು. ಅವರು ಬಾಲ್ಯ ವಿವಾಹಗಳನ್ನು ಸಾರ್ವಜನಿಕವಾಗಿ ಖಂಡಿಸಿದರು; ಪ್ರಾಥಮಿಕ ಶಿಕ್ಷಣದ ಪ್ರಚಾರವನ್ನು ಕೈಕೊಂಡರು; ಮತ್ತು ಸಮಾಜ ಸುಧಾರಣೆಗಳ ಅವಶ್ಯಕತೆಯನ್ನು ಒತ್ತಿ ಹೇಳಿದರು. ಇಂತು ಅವರು ಧಾರ್ಮಿಕ ಹಾಗೂ ಸಾಮಾಜಿಕ ಜಾಗೃತಿಯನ್ನು ತಮ್ಮ ಭಾಷಣಗಳ ಮುಖಾಂತರ ಮಾಡಿದರು.[೨]

೧೯೧೪ ರಲ್ಲಿ ಲೋ. ಟಿಳಕರು ಜೇಲಿನಿಂದ ಬಿಡುಗಡೆಯಾದಾಗ ಮಂಜಪ್ಪನವರು ಅವರನ್ನು ಅಭಿನಂದಿಸಲು ಪುಣೆಗೆ ಹೋಗಿದ್ದರು. ಅದೇ ವರ್ಷ ನಡೆದ ರಾಷ್ಟ್ರೀಯ ಸಭೆಗೆ ಹಾಜರಾಗಿದ್ದರು. ೧೯೧೫ ರಲ್ಲಿ ಬೆಂಗಳೂರಿನಲ್ಲಿ ಸರ್ ಕೆ. ಪಿ. ಪುಟ್ಟಣ್ಣ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿಯೂ ಭಾಗವಹಿಸಿದ್ದರು. ೧೯೨೧ರಲ್ಲಿ ದಾವಣಗೇರಿಯಲ್ಲಿ ವೀರಶೈವ ತರುಣ ಸಂಘವನ್ನು ಸ್ಥಾಪಿಸಿದರು. ಜನತೆಯಲ್ಲಿ ಅವರು ಸಾಮಾಜಿಕ ಜಾಗೃತಿಯ ಭಾವನೆಗಳನ್ನು ತುಂಬಿದರು.[೪] ಧಾರವಾಡದ ಉದಾರ ವಿಚಾರವಾದಿಗಳೂ ಮತ್ತು ಉತ್ತಮ ಭಾಷಣಕಾರರೂ ಆದ ಗದಿಗೆಯ್ಯ ಹೊನ್ನಾಪುರಮಠರು ೧೯೧೨ರಲ್ಲಿ ನಡೆದ ಬಸವ ಜಯಂತಿಯ ಕಾಲದ ಸಭೆಗೆ ಅಧ್ಯಕ್ಷರಾಗಿದ್ದರು.[೫] ಅದೊಂದು

೧. ಕಬ್ಬೂರ ಸತ್ಕಾರ ಸಮಿತಿ 'ಡಾ. ಕಬ್ಬೂರ ನಾರಾಯಣರಾಯರು' (ಚರಿತ್ರೆ) ಧಾರವಾಡ, ೧೯೫೮ ಪು. ೪

೨. ಎಸ್.ಸಿ.ನಂದಿಮಠ (ಸಂ) 'ಹರ್ಡೇಕರ ಮಂಜಪ್ಪನವರ ಸ್ಮಾರಕ ಗ್ರಂಥ' ಬಾಗಲಕೋಟ ೧೯೫೧, ಪು. ೨೦–೨೧.

೪. ಅದೇ, ಪು. ೨೨

೫. ಅದೇ, ಪು. ೨೨

ಯಶಸ್ವಿ ಕಾರ್ಯಕ್ರಮವಾಗಿತ್ತು. ಮಂಜಪ್ಪನವರು ಅದೇ ವರ್ಷವೇ ಶ್ರೀಮತಿ ಆ್ಯನಿಬೆಸಂಟರ ಹೋಂ ರೂಲ ಚಳವಳಿಯ ಕಡೆಗೆ ಆಕರ್ಷಿತರಾದರು.

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸು ಭಾಷಾವಾರು ಪ್ರಾಂತಗಳ ನಿರ್ಮಾಣವನ್ನು ತಾತ್ವಿಕವಾಗಿ ಒಪ್ಪಿಕೊಂಡಿತ್ತು. ಅದಕ್ಕನುಗುಣವಾಗಿ ಕರ್ನಾಟಕಕ್ಕೊಂದು ಪ್ರತ್ಯೇಕ ಪ್ರಾಂತದ ಕಾಂಗ್ರೆಸ್ಸ ಕಮಿಟಿಯನ್ನು ನಿರ್ಮಿಸಲಾಯಿತು. ಆದ್ದರಿಂದ ಜನತೆಯಲ್ಲಿ ನವಚೈತನ್ಯ ಬಂದಂತಾಯಿತು. ಇದು ಮಹಾತ್ಮಾ ಗಾಂಧಿಯವರು ಅಸಹಕಾರ ಚಳವಳಿಯನ್ನು ಪ್ರಾರಂಭಿಸಿದ ಕಾಲ. ಗಾಂಧಿಯವರ ಚತುರ್ಮುಖ (Four-fold constructive programme) ರಚನಾತ್ಮಕ ಕಾರ್ಯಕ್ರಮಗಳಲ್ಲಿ ಖಾದಿಯ ಪ್ರಚಾರವು ಮೊದಲನೆಯದಾಗಿತ್ತು. ಮಂಜಪ್ಪನವರು ಗಾಂಧೀಜಿಯವರ ಪ್ರಭಾವಕ್ಕೊಳಗಾಗಿದ್ದರು. ೧೯೨೦ರ ಅಗಸ್ಟ ೧ರಂದು ಅವರು ಖಾದೀ ವ್ರತವನ್ನು ತೊಟ್ಟರು. ಅವರು ಗಿರಣಿ ಬಟ್ಟೆ ಧರಿಸುವುದನ್ನು ಬಿಟ್ಟುಬಿಟ್ಟರು; ಖಾದೀ ಧರಿಸುವದನ್ನು ಪ್ರಾರಂಭಿಸಿದರು; ಖಾದೀ ಪ್ರಚಾರವನ್ನು ಮೊದಲು ಮಾಡಿದರು.[೬] ಖಾದೀ ಪ್ರಚಾರವು ಕೇವಲ ಬ್ರಾಹ್ಮಣರದೆಂದು ಭಾವಿಸಿದ ವೀರಶೈವ ಸಮಾಜವು ಮೊದಮೊದಲು ಅದರ ಪ್ರಚಾರವನ್ನು ವಿರೋಧಿಸಿತು. ಮೊದಮೊದಲು ಬ್ರಾಹ್ಮಣರ ಅನುಯಾಯಿಯಂತೆ ಕಾಣಲಾಯಿತು.[೭] ಮಂಜಪ್ಪನವರ ಪ್ರಯತ್ನದಿಂದ ಈ ತಪ್ಪು ತಿಳುವಳಿಕೆ ನಿವಾರಣೆಯಾಗಿ ವೀರಶೈವ ಸಮಾಜವು ಅದನ್ನು ಹೆಚ್ಚು ಸಹಾನುಭೂತಿಯಿಂದ ಕಾಣಲು ಪ್ರಾರಂಭಿಸಿತು. ಮಂಜಪ್ಪನವರ ಪ್ರತಿಭೆಯು ಖಾದೀ ತತ್ವವನ್ನು ವೀರಶೈವ ಸಿದ್ಧಾಂತಕ್ಕೆ ಅನ್ವಯಿಸುವದರಲ್ಲಿ ಅಡಗಿದೆ. ತಾವೇ ಸ್ವತಃ ನೂಲುವದು ವೀರಶೈವ ಧರ್ಮವು ಒಪ್ಪಿಕೊಂಡ ಚಟುವಟಿಕೆಯೆಂದು ಅವರು ವಾದಿಸಿದರು.[೮] 'ವೀರಶೈವ ಸಮಾಜ ಸುಧಾರಣೆ' ಮತ್ತು 'ಸ್ವಾಮಿ ರಮಾನಂದತೀರ್ಥರ ಭಾಷಣಗಳು' (ನಾಲ್ಕು ಭಾಗಗಳಲ್ಲಿ) ಎಂಬ ಪುಸ್ತಕಗಳನ್ನು ಕನ್ನಡದಲ್ಲಿ ಪ್ರಕಟಿಸಿದರು.

೧೯೨೦ರ ನಂತರ ಭಾರತದ ರಾಜಕೀಯದಲ್ಲಿ ಮಹಾತ್ಮ ಗಾಂಧೀಜಿಯವರು ಪ್ರಮುಖರಾದರು. ಮಂಜಪ್ಪನವರು ಗಾಂಧೀಜಿಯವರಿಗೆ ಅತಿ ಗೌರವದ ಸ್ಥಾನ ಕೊಟ್ಟಿದ್ದರು. ಅವರು ೧೯೨೨ ರಲ್ಲಿ ಗಾಂಧೀಜಿಯವರ ಸತ್ಯಾಗ್ರಹದ

---

೬. ಅದೇ, ಪು. ೨೬-೨೭.

೭. ಅದೇ, ಪು. ೨೭.

೮. ಜಿ. ಎಸ್. ಹಾಲಪ್ಪ, ಹಿಸ್ಟರಿ ಆಫ್ ಫ್ರೀಡಮ್ ಮೂವ್ಮೆಂಟ ಇನ್ ಕರ್ನಾಟಕ, ೨ ನೇ ಗ್ರಂಥ, ಮೈಸೂರ ಸರಕಾರದ ಪ್ರಕಟಣೆ, ೧೯೬೪. ಪು. ೪೨೭-೨೮.

ಆಚಾರ ನಿಷ್ಠೆಯನ್ನು ಸಿರಸಿ ಕುಮಟಾ, ಹೊನ್ನಾವರ, ಗೋಕರ್ಣ, ಅಂಕೋಲಾ, ಗೇರಸೊಪ್ಪಾ ಮತ್ತು ಸಿದ್ದಾಪುರಗಳಲ್ಲಿ ಬೋಧಿಸಿದರು. ಅವರ ಎಲ್ಲ ಚಟುವಟಿಕೆಗಳಿಗೆ ಧಾರವಾಡದ ಮೃತ್ಯುಂಜಯ ಸ್ವಾಮಿಗಳ ಆಶೀರ್ವಾದವಿದ್ದೇ ಇತ್ತು. ಅವರು ೧೯೨೨ರಲ್ಲಿ ನಡೆದ ಇಟಗಿಯ ವೀರಶೈವ ಮಹಾಸಭೆಯಲ್ಲಿ ಭಾಗವಹಿಸಿದ್ದರು. ಕಂಬಳಿಯವರ ಅಧ್ಯಕ್ಷತೆಯಲ್ಲಿ ಬಾಗಲಕೋಟೆಯಲ್ಲಿ ವೀರಶೈವ ಯುವಕರನ್ನು ಸಂಘಟಿಸಿದರು. ಅವರು ಸ್ವಾಮಿ ರಮಾನಂದರ ಭಾಷಣಗಳ ಐದನೆಯ ಭಾಗವನ್ನೂ ಮತ್ತು ಸ್ತ್ರೀ ನೀತಿ ಸಂಗ್ರಹವನ್ನೂ ಪ್ರಕಾಶಪಡಿಸಿದರು. ರಾಷ್ಟ್ರೀಯತೆಯ ಮೇಲೆ ಅವರ ಅತ್ಯಂತ ಮಹತ್ವದ ಗ್ರಂಥವೆಂದರೆ ೧೯೨೧ರಲ್ಲಿ ಪ್ರಕಾಶಿತವಾದ 'ಭಾರತೀಯರ ದೇಶಭಕ್ತಿ'ಯಾಗಿದೆ.[೯] ಅವರು ೧೯೨೨ರ ಸಪ್ಟಂಬರ ೧೮ ರಂದು ಹುಬ್ಬಳ್ಳಿಯಲ್ಲಿ ಸತ್ಯಾಗ್ರಹ ಸಮಾಜವನ್ನು ಸ್ಥಾಪಿಸಿದರು. ಸತ್ಯಾಗ್ರಹದ ಬಗೆಗೆ ಪುಸ್ತಕಗಳನ್ನು ಬರೆದರು ಮತ್ತು ಹಾಡುಗಳನ್ನು ರಚಿಸಿದರು.[೧೦] ಅವರ ಕಾರ್ಯಕ್ಷೇತ್ರ ೧೯೨೬ರಲ್ಲಿ ಕೃಷ್ಣಾ ನದಿಯ ದಂಡೆಯ ಮೇಲಿನ ಆಲಮಟ್ಟಿಗೆ ಸ್ಥಳಾಂತರವಾಯಿತು. ಅವರು ತಮ್ಮ ಮುಂದಿನ ೨೦ ವರ್ಷಗಳನ್ನು ಅಲ್ಲಿಯೇ ಕಳೆದರು. ಇಲ್ಲಿಂದಲೇ 'ಶರಣ ಸಾಹಿತ್ಯ'ವೆಂಬ ಪತ್ರಿಕೆಯನ್ನು ತಮ್ಮ ಮುಂದಿನ ಜೀವಮಾನ ಪರ್ಯಂತ ಪ್ರಕಟಿಸುತ್ತಾ ಬಂದರು.

ಮಂಜಪ್ಪನವರ ಜೀವನ ಅದಮ್ಯ ಶಕ್ತಿಯ ಒಂದು ಕತೆ; ಕರ್ನಾಟಕದ ಕರಾವಳಿ ಪ್ರದೇಶದ ಬಡ ಮನೆತನದಲ್ಲಿ ಜನಿಸಿದ ತರುಣನ ಉತ್ಸಾಹದಾಯಕ ಕತೆ; ಕೇವಲ ತನ್ನ ಶಕ್ತಿ ಸಾಮರ್ಥ್ಯಗಳ ಬಲದಿಂದ, ಈ ಶತಮಾನದ ಪ್ರಥಮಾರ್ಧದಲ್ಲಿ ಕರ್ನಾಟಕದ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಪ್ರಮುಖರಾಗಿ ಹೊರಬಂದ ವ್ಯಕ್ತಿತ್ವದ ಕತೆ ಅದು. ಅವರ ಇಡೀ ಸಾರ್ವಜನಿಕ ಜೀವನಾವಧಿಯು ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟದ ಸಂದಿಗ್ಧ ಪರಿಸ್ಥಿತಿಯ ಸಮೃದ್ಧ ಹಾಗೂ ವೈವಿಧ್ಯಮಯವಾದ ನಿರೂಪಣೆಯಾಗಿದೆ. ಈ ನಾಲ್ವತ್ತು ವರ್ಷಗಳ ಜೀವನಾವಧಿ ಎಂದರೆ ೧೯೦೬ ರಿಂದ ೧೯೪೬ವರೆಗಿನ ಅವಧಿಯಾಗಿದೆ.[೧೧]

---

೯. ಎಸ್. ಸಿ. ನಂದೀಮಠ (ಸಂ) 'ಹರ್ಡೇಕರ ಮಂಜಪ್ಪನವರ ಸ್ಮಾರಕ ಗ್ರಂಥ,' ಬಾಗಲಕೋಟ, ೧೯೫೧, ಪು. ೨೮-೨೯.

೧೦. ಅದೇ, ಪು. ೪೩-೪೪.

೧೧. ಜಿ. ಎಸ್. ಹಾಲಪ್ಪ, 'ಹಿಸ್ಟರಿ ಆಫ್ ಫ್ರೀಡಮ್ ಮೂವ್ಮೆಂಟ ಇನ್ ಕರ್ನಾಟಕ,' ೨ ನೇ ಗ್ರಂಥ, ಮೈಸೂರ ಸರಕಾರ ಪ್ರಕಟಣೆ, ೧೯೬೪, ಪು. ೪೭೦.

ರಾಷ್ಟ್ರೀಯ ಐಕ್ಯತೆಗೆ ಭಂಗವನ್ನುಂಟುಮಾಡುವ ಎಲ್ಲ ವಿಭಜನಾತ್ಮಕ ಪ್ರವೃತ್ತಿಗಳನ್ನು ಅವರು ಉಗ್ರವಾಗಿ ಖಂಡಿಸುತ್ತಿದ್ದರು. ರಾಷ್ಟ್ರೀಯತೆಯನ್ನು ವಸ್ತುನಿಷ್ಠವಾದ ಸತ್ಯತೆಯೆಂದು ಅವರು ಭಾವಿಸಿದ್ದರು. ಪ್ರತಿಯೊಂದು ರಾಷ್ಟ್ರವೂ ವಿಕಸನಶೀಲವಾದದ್ದು; ಅದು ಐತಿಹಾಸಿಕ ಘಟನೆ ತನ್ನ ಆಂತರಿಕ ನಿಯಮಂಗಳಿಗನುಗುಣವಾಗಿ ಪ್ರಗತಿಹೊಂದುತ್ತ ಹೋಗುತ್ತದೆ; ಅದನ್ನೇ ರಾಷ್ಟ್ರೀಯ ಧರ್ಮವೆಂದು ಕರೆಯಬಹುದು ಎಂಬುದು ಅವರ ವಾದಸರಣಿ.

ರಾಷ್ಟ್ರವು ತನ್ನ ಹೆಸರನ್ನು ಸಾರ್ಥಕಗೊಳಿಸಿಕೊಳ್ಳಬೇಕಾದರೆ ತನ್ನ ಭಾಷೆ ಹಾಗೂ ವಿಶಿಷ್ಟ ಪರಂಪರೆಯನ್ನು ಹಿಗ್ಗಿಸಿಕೊಳ್ಳಬೇಕು. ಇದರ ಅರ್ಥ ಜಗತ್ತಿನ ಆಗುಹೋಗುಗಳ ಕಡೆಗೆ ರಾಷ್ಟ್ರವು ಕಣ್ಣುಮುಚ್ಚಿ ಕುಳಿತುಕೊಳ್ಳಬೇಕೆಂದೇನೂ ಅಲ್ಲ. ಅದರ ಹೊರತಾಗಿ ವಿದೇಶೀಯವಾದದ್ದನ್ನು ಅರಗಿಸಿಕೊಳ್ಳುವದರಲ್ಲಿ ಆರಿಸುವಿಕೆ ನಡೆಯಬೇಕು. ಭಾರತದ ರಾಷ್ಟ್ರೀಯತೆಯನ್ನು ತಮ್ಮತ್ತ ಎಳೆದುಕೊಳ್ಳುವ ಎರಡು ಮುಖ್ಯ ಶಕ್ತಿಗಳನ್ನು ಮಂಜಪ್ಪನವರು ಕಂಡುಕೊಂಡರು. ಅವುಗಳಲ್ಲಿ ಮೊದಲನೆಯದು ರಾಷ್ಟ್ರೀಯ ಧಾರ್ಮಿಕ ಮನೋವೃತ್ತಿಯ ಪ್ರಾಮುಖ್ಯತೆ. ಎರಡನೆಯದೆಂದರೆ ವಿದೇಶದ, ನಮಗೆ ಸೇರದ ಆದರೂ ವಿಹಿತವಾದ ಸಂಗತಿಗಳೊಡನೆ ಒಂದಾಗೂಡಿಕೊಂಡು ಹೋಗುವದು.

ಭಾರತದ ಭವಿಷ್ಯವನ್ನು ಕುರಿತು ಮಂಜಪ್ಪನವರು ಪ್ರಜಾತಂತ್ರದ ರಾಜಕೀಯ ಸ್ವರೂಪ ಮತ್ತು ಜಾತ್ಯತೀತತೆಯನ್ನು ಸೂಚಿಸಿದ್ದರು. ಅವರ ರಾಷ್ಟ್ರೀಯತೆಯು ತತ್ವನಿಷ್ಠವೂ ಅಲ್ಲ; ಹಿಂಸಾತ್ಮಕ ಪ್ರಜಾತಂತ್ರವೂ ಅಲ್ಲ; ಒಂದುಕಡೆಗೆ ಅದು ಆಂತರಿಕವಾಗಿ ಸಾಮೂಹಿಕ ಜೀವನದ ಮೇಲಿನ ಹಿಡಿತವೂ ಅಲ್ಲ. ಒಟ್ಟಾರೆ ಅದರ ಅರ್ಥವೆಂದರೆ ಸಾಮೂಹಿಕ ಜೀವನವೇ ಆಗಲಿ, ವೈಯಕ್ತಿಕ ಜೀವನವೇ ಆಗಲಿ ರಾಷ್ಟ್ರೀಯ ಚೌಕಟ್ಟನ್ನು ಗಂಡಾಂತರಕ್ಕೆ ಈಡು ಮಾಡಿ ಬೆಳೆಯಬಾರದು. ಅದರ ಹೊರತಾಗಿ ಅವರ ರಾಷ್ಟ್ರೀಯತೆಯು ಒತ್ತಾಯ ಪೂರ್ವಕವಾದದ್ದೂ ಅಲ್ಲ; ಅದು ಕುತ್ಸಿತ ಭಾವನೆಯ ತನ್ನ ರಾಷ್ಟ್ರದ ಮೇಲಿನ ಪ್ರೀತಿಯೂ ಅಲ್ಲ.

ಮಂಜಪ್ಪನವರಲ್ಲಿ ವಿಶ್ವಸರಕಾರದ ದರ್ಶನ ಮೂಡಿತ್ತು. ಆದರೂ ಅವರು ಅದರ ವಿವರಗಳನ್ನು ತಯಾರಿಸಿರಲಿಲ್ಲ. ಅದರ ಪ್ರಾರಂಭಿಕ ಹಾಗೂ ಪ್ರಾಯೋ

ಗಿಕ ತೊಂದರೆಗಳನ್ನೂ ಅವರು ಪರೀಕ್ಷಿಸಿರಲಿಲ್ಲ. ರಾಷ್ಟ್ರೀಯತೆಯ ಆದರ್ಶ ಭಾರತೀಯವಲ್ಲವೆಂಬುದೂ ಮತ್ತು ಹೊರಗಿನಿಂದ ಆಕರ ಮಾಡಿಕೊಂಡ ಈ ಆದರ್ಶವನ್ನು ಅತ್ಯಂತ ನಿರ್ಧಾರದಿಂದ ಕೈಗೆತ್ತಿಕೊಳ್ಳಬೇಕೆಂಬ ಅರಿವು ಮಂಜಪ್ಪನವರಿಗೆ ಸ್ಪಷ್ಟವಾಗಿ ಉಂಟಾಗಿತ್ತು.[೧೨]

— —

೧೨. ಜಿ. ಎಸ್. ಹಾಲಪ್ಪ, 'ಹಿಸ್ಟರಿ ಆಫ್ ಫ್ರೀಡಮ್ ಮೂವ್ಮೆಂಟ್ ಇನ್ ಕರ್ನಾಟಕ' ೨ನೇ ಗ್ರಂಥ, ಮೈಸೂರ ಸರಕಾರದ ಪ್ರಕಟಣೆ, ೧೯೬೪, ಪು. ೩೭೦.

ಶಿಕ್ಷಣ ಮತ್ತು ಸಂಸ್ಕೃತಿ

● ವ್ಹಿ. ಎಸ್. ಕುಲಕರ್ಣಿ

ನಮ್ಮ ಭಾರತದಲ್ಲಿ ಮೇಲಿಂದಮೇಲೆ ಬಳಸಿ ಸವೆಸಿದ ಶಬ್ದನಾಣ್ಯಗಳಲ್ಲಿ ಶಿಕ್ಷಣವೂ ಒಂದು. ಭಾರತ ಸ್ವಾತಂತ್ರ್ಯಪೂರ್ವದಲ್ಲಿ ಶೈಕ್ಷಣಿಕ ಪುನರ್ಘಟನೆಯ ವಿಷಯವಾಗಿ ಮಾತನಾಡುತ್ತಿದ್ದೆವು; ಶೈಕ್ಷಣಿಕ ಧ್ಯೇಯಧೋರಣೆಗಳನ್ನು ಚರ್ಚಿಸುತ್ತಿದ್ದೆವು. ಹಾಗೆಯೇ ಕೆಲವು ಸಂಘ ಸಂಸ್ಥೆಗಳೂ, ಮುಂದಾಳುಗಳೂ ಧೈರ್ಯದ ಹೆಜ್ಜೆಯಿಟ್ಟು 'ರಾಷ್ಟ್ರೀ'ಯ ಶಿಕ್ಷಣಸಂಸ್ಥೆಗಳನ್ನು ಹಮ್ಮಿಕೊಂಡು ರಾಷ್ಟ್ರೀಯ ಶಿಕ್ಷಣ ಕೊಡಲು ಮುಂದಾದರು. ಆದರೆ ಕಾಲಾಂತರದಲ್ಲಿ ಅವು ಮುಂದುವರಿಯಲಿಲ್ಲ. ಮುಂದುವರಿಸಲ್ಪಟ್ಟ ಹಲಕೆಲವು ಸಂಸ್ಥೆಗಳು ಪುನಃ ಬ್ರಿಟಿಷ ಪದ್ಧತಿಯ ಶಿಕ್ಷಣ ಚೌಕಟ್ಟಿಗೆ ಹೊಂದಿಕೊಂಡು ಕಾರ್ಯನಿರತವಾದವು. ಬರಬರುತ್ತ ಅವುಗಳ ರಾಷ್ಟ್ರೀಯ ಶಿಕ್ಷಣದ ಧ್ಯೇಯಧೋರಣೆಗಳು ಮಸಮಸಕಾಗಿ, ಬ್ರಿಟಿಷ ಸರಕಾರದ ಸಹಾಯಧನದ ಆಶ್ರಯದಲ್ಲಿ ಅಳಿದುಳಿದ ರಾಷ್ಟ್ರೀಯ ಪ್ರಖರತೆಯನ್ನೂ ಕಳೆದುಕೊಂಡುಬಿಟ್ಟವು. ಸ್ವಾತಂತ್ರ್ಯಾನಂತರ ರಾಷ್ಟ್ರೀಯ ಶಿಕ್ಷಣದ ಪುನರ್ವಿಚಾರಣೆಗೆ ಒಂದು ಸದವಕಾಶ ಒದಗಿತ್ತು. ಆದರೆ ರಾಜಕೀಯ ಸ್ವಾತಂತ್ರ್ಯದ ಉತ್ಸಾಹದಲ್ಲಿ ರಾಷ್ಟ್ರೀಯ ಶಿಕ್ಷಣದ ಕನಸು ನನಸಾಗುವ ಸೌಭಾಗ್ಯ ಒದಗಿಬರಲಿಲ್ಲ. ರಾಜಕೀಯ ಆಡಳಿತ, ಪ್ರಜಾಪ್ರಭುತ್ವ, ಚುನಾವಣೆ, ಪ್ರಾಂತೀಯ ಸ್ವಾಯತ್ತತೆ, ಭಾಷಾವಾರ ಪ್ರಾಂತೀಕರಣ, ಪಂಚವಾರ್ಷಿಕ ಯೋಜನೆ ಮುಂತಾದ

ವಿಷಯಗಳೇ ನಮ್ಮ ರಾಜಕಾರಣಿಗಳ ಮನಸ್ಸನ್ನು ಸೂರೆಗೊಂಡವು. ಹಾಗೆಯೇ ಭಾರತ ವಿಭಜನೆ, ನಿರಾಶ್ರಿತರ ಸಮಸ್ಯೆಗಳಂಥ ಭೀಕರ ಘಟನೆಗಳು ಆಡಳಿತ ಯಂತ್ರವನ್ನೇ ಶಿಥಿಲಗೊಳಿಸಿದವು. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ನಿರ್ಮಾಣ ಗೊಂಡ ಭಾರತೀಯ ರಾಜ್ಯಘಟನೆಯು, ಶೈಕ್ಷಣಿಕವಾಗಿ ಅಖಿಲಭಾರತ ದೃಷ್ಟಿ ಯನ್ನಾಗಲೀ, ಸಮಗ್ರತೆಯ ದೃಷ್ಟಿಯನ್ನಾಗಲೀ ಇಟ್ಟುಕೊಳ್ಳಲಿಲ್ಲ. ಶಿಕ್ಷಣವನ್ನು ಪ್ರಾಂತೀಯ ಸರಕಾರಗಳಿಗೆ ಒಪ್ಪಿಸಿ ಶೈಕ್ಷಣಿಕ ಗಾಂಭೀರ್ಯವನ್ನೇ ಕಡೆಗಣಿಸಿತು. ಪ್ರಾಂತೀಯ ಸ್ವಾಯತ್ತತೆಯ ಮಬ್ಬಿನಲ್ಲಿ ಪ್ರತಿಯೊಂದು ಪ್ರಾಂತಿಕ ಸರಕಾರವೂ ತನ್ನದೇ ಆದ ಗೊತ್ತುಗುರಿಯಿಟ್ಟುಕೊಂಡು ಶೈಕ್ಷಣಿಕ ವ್ಯವಸ್ಥೆಯನ್ನು ಮುಂದು ವರಿಸಿದವು. ಭಾಷಾವಾರ ರಾಜ್ಯರಚನೆಯಿಂದ ಶಿಕ್ಷಣವು ಮತ್ತಿಷ್ಟು ಛಿದ್ರವಿಚ್ಛಿದ್ರ ವಾಯಿತು. ಸ್ಥಳೀಯ ಮತ್ತು ಪ್ರಾಂತೀಯ ವಿಚಾರಗಳೇ ಮೇಲುಗೈ ಪಡೆದು, ಅಖಿಲಭಾರತ ರಾಷ್ಟ್ರೀಯ ಶಿಕ್ಷಣವು ಹಿಂದೆ ಬಿತ್ತು.

ಪರಿಸ್ಥಿತಿಯು ಕೈಮೀರಿಹೋಗುತ್ತಿದೆಯೆಂದು ಕಂಡುಬಂದಾಗ, ಕೇಂದ್ರದ ಧುರೀಣರು ಆಗೊಂದು ಈಗೊಂದು ಆಯೋಗಗಳನ್ನು ನೇಮಿಸಿ ಶೈಕ್ಷಣಿಕ ಪುನರ್ಘಟನೆಯ ಪ್ರಯತ್ನ ಹಮ್ಮಿಕೊಂಡರು. ಆದರೆ ರಾಷ್ಟ್ರೀಯ ಶಿಕ್ಷಣದ ಸಮಗ್ರತೆಯ ಅಭಾವದಿಂದ ಈ ಯಾವ ಆಯೋಗಗಳಿಂದಲೂ ಪ್ರಯೋಜನವಾಗದೆ ಬ್ರಿಟಿಷರು ಬಿಟ್ಟುಹೋದ ಶಿಕ್ಷಣಪದ್ಧತಿಯೇ ಹೆಚ್ಚುಕಡಿಮೆ ನಮ್ಮ ದೇಶದಲ್ಲೀಗ ಮುಂದುವರಿದಿದೆ. ಅದರಿಂದ ಹುಟ್ಟಿಕೊಂಡ ಸಮಸ್ಯೆಗಳು ದೇಶದ ಏಕ್ಯ, ಭದ್ರತೆಗೆ ಆವ್ಹಾನವಾಗಿ ಹುಟ್ಟಿಕೊಂಡಿವೆ. ದೇಶಪ್ರೇಮ ಶಿಥಿಲವಾಗಿದೆ. ಭಾರತೀಯ ಸಂಸ್ಕೃತಿ ಹಳಸಿಹೋಗಿದೆ. ಭಾರತೀಯ ಸಂಪ್ರದಾಯ ಜಾತೀಯವೆಂಬ ಅಪ ಹಾಸ್ಯಕ್ಕೀಡಾಗಿದೆ. ಧರ್ಮ-ನೀತಿಗಳೆಂಬ ಭಾರತೀಯ ಜೀವನದ ಸಂಜೀವಿನಿ ಬೇರುಗಳು ಸಡಿಲಾಗಿವೆ. ಭಾರತ ಸ್ವಾತಂತ್ರ್ಯವೆಂಬ ಮಾತು ಕೇವಲ ರಾಜಕೀಯ ಸ್ವಾತಂತ್ರ್ಯವಾಗಿ ಮಾರ್ಪಟ್ಟು, ಭಾರತೀಯರು ತಮ್ಮ ಸಂಸ್ಕೃತಿ-ಸಭ್ಯತೆಗಳನ್ನು ತಾವಾಗಿಯೇ ಗಾಳಿಗೆ ತೂರುವ ಹವ್ಯಾಸದಲ್ಲಿದ್ದಾರೆ. ಸ್ವಾತಂತ್ರ್ಯಪೂರ್ವದಲ್ಲಿದ್ದ ದಾಸ್ಯತೆಯು ಸ್ವಾತಂತ್ರ್ಯಾನಂತರವೂ, ಬೌದ್ಧಿಕ, ಸಾಂಸ್ಕೃತಿಕ, ನೈತಿಕ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ ನೂರುಪಟ್ಟು ಹೆಚ್ಚಿದೆ. ಭಾರತೀಯ ಜೀವನದೃಷ್ಟಿ ಮಾಯವಾಗಿ, ಪರಾನುಕರಣೆಯು ಸ್ವಚ್ಛಂದ ಗತಿಯಲ್ಲಿ ಮುಂದುವರೆದಿದೆ. ಭಾರತೀಯ ರಾಜ್ಯಘಟನೆಯು ಕೊಡಮಾಡಿದ ಪ್ರಜಾಪ್ರಭುತ್ವ, ಜಾತ್ಯತೀತರಾಜ್ಯ, ಸಮಾಜವಾದ ಮುಂತಾದ ಘೋಷಣೆಗಳು ಹೊಸ ಹೊಸ ಸಮಸ್ಯೆಗಳನ್ನು ಹುಟ್ಟಿಸಿವೆ.

ಇಂಥ ಪರಿಸ್ಥಿತಿಯಲ್ಲಿ ಪ್ರತಿಯೊಬ್ಬ ಭಾರತೀಯನೂ ಆತ್ಮನಿರೀಕ್ಷಣೆ ಮಾಡಿಕೊಳ್ಳಬೇಕಾಗಿದೆ. ಇಂದಿನ ಸ್ಥಿತಿಯು ಹೀಗೆಯೇ ಮುಂದುವರಿಯಬೇಕೇ? ಇದ್ದದ್ದು ಯಥಾವತ್ತಾಗಿದೆಯೇ? ಇರಬೇಕಾದದ್ದು ಹೇಗಿರಬೇಕು? ಇವೇ ಮುಂತಾದ ಗಂಭೀರ ವಿಷಯಗಳನ್ನು ಚರ್ಚಿಸಬೇಕಾಗಿದೆ. ಸಧ್ಯದ ತಲೆಮಾರಿನ ಜನಾಂಗ ಗೊತ್ತುಗುರಿಯಿಲ್ಲದೆ ಅಂಧಾನುಕರಣೆಯನ್ನೇ ಮುಂದುವರಿಸಿದರೆ ಭಾರತದ ಭಾವೀ ಸಂತಾನ ಭಾರತೀಯವಾಗಿಯೇ ಉಳಿದೀತೆ ಹೇಗೆ ಎಂಬುದನ್ನೂ ನಿರ್ಧರಿಸಬೇಕಾಗಿದೆ. ಭಾರತಮಾತೆಯ ಸುಕೃತದಿಂದ ಭಾರತೀಯರಲ್ಲಿ ಆತ್ಮಪ್ರಜ್ಞೆ ಮತ್ತೊಮ್ಮೆ ಜಾಗೃತವಾಗಿ, ತಮ್ಮದೆನ್ನುವದು ಯಾವುದೆಂದು ತಿಳಿದುಕೊಳ್ಳುವ ಹಂಬಲ ಉಂಟಾವದ್ದೇ ಆದರೆ, ಅದನ್ನು ಉಳಿಸಿ ಬೆಳೆಸಿಕೊಂಡು ಸಮೃದ್ಧಗೊಳಿಸುವ ಮಹಾಸಾಧನವಾದರೂ ಯಾವುದು ಎಂಬುದನ್ನು ನಿರ್ಧರಿಸಬೇಕಾಗಿದೆ.

ಮಾನವಪ್ರಪಂಚದ ಇತಿಹಾಸವನ್ನು ಅವಲೋಕಿಸಿದರೆ, ಆಯಾ ಜನಾಂಗದ ಆಶೆ-ಆಕಾಂಕ್ಷೆ, ಗೊತ್ತು-ಗುರಿ, ಸಂಸ್ಕೃತಿ-ಸಾಹಿತ್ಯ, ಸಮೃದ್ಧಿ-ಸಂಯೋಜನೆಗಳನ್ನು ಶಿಕ್ಷಣವೊಂದೇ ಪೂರೈಸಿಕೊಡಬಲ್ಲದೆಂಬುದನ್ನು ಕಾಣಬಹುದು. ಆಯಾ ಜನಾಂಗದ ಸೃಜನಶೀಲತ್ವವು ತಲೆಮಾರಿನಿಂದ ತಲೆಮಾರಿಗೆ ಮುಂದುವರೆಯುವದಾಗಲೀ, ಬೌದ್ಧಿಕ-ಭಾವನಾತ್ಮಕ-ಸಾಂಸ್ಕೃತಿಕ ಚಿರಂತನ ಗಂಗೆಯು ಪ್ರವಹಿಸುವದಾಗಲೀ, ತರುಣ ಜನಾಂಗ ತನ್ನ ಪರಿಸರದಲ್ಲಿ ಹೊಂದಾಣಿಕೆಗೆ ಅಣಿಯಾಗಿ ತಲೆಯೆತ್ತಿ ನಿಲ್ಲುವದಾಗಲೀ, ಸಾಧ್ಯವಾಗಬೇಕಾದರೆ, ಉದ್ದೇಶಪೂರ್ಣ ಸಮಗ್ರ ಶಿಕ್ಷಣಪದ್ಧತಿಯನ್ನೇ ಅವಲಂಬಿಸಬೇಕಾಗುತ್ತದೆ. ಸ್ವತಂತ್ರ ಭಾರತವು ಇಟ್ಟುಕೊಂಡ ರಾಜಕೀಯ, ಸಾಮಾಜಿಕ, ಆರ್ಥಿಕ ಗೊತ್ತುವಳಿಗಳನ್ನು ಶಾಶ್ವತವಾಗಿ ಈಡೇರಿಸಿಕೊಳ್ಳಬೇಕಾಗಿದ್ದರೂ ನಿಸ್ಸಂಶಯವಾಗಿ ಶಿಕ್ಷಣವನ್ನೇ ಅವಲಂಬಿಸಬೇಕಾಗಿದೆ. ಭಾರತದ ಆರ್ಥಿಕ ಸ್ಥಿತಿ-ಗತಿಗಳನ್ನು ಸುಧಾರಿಸುವ ಸಲುವಾಗಿ ಹಮ್ಮಿಕೊಳ್ಳುತ್ತಿರುವ ಪಂಚವಾರ್ಷಿಕ ಯೋಜನೆಗಳಿಗಿಂತಲೂ ಮಿಗಿಲಾಗಿ, ಶತವಾರ್ಷಿಕ ಶೈಕ್ಷಣಿಕ ಯೋಜನೆಗಳನ್ನು ನಿರ್ಧರಿಸಬೇಕಾಗಿದೆ. ಸುಸ್ಪಷ್ಟವಾದ ಶೈಕ್ಷಣಿಕ ನಿಲುವನ್ನು ತಾಳದೆ, ರಾಷ್ಟ್ರೀಯ ಪುನರುಜ್ಜೀವನ ಕೈಕೊಳ್ಳುವ ನೂರಾರು ಯೋಜನೆಗಳೆಲ್ಲ ವ್ಯರ್ಥ.

ಆದ್ದರಿಂದ ಶಿಕ್ಷಣವು ಜನಮನವನ್ನು ತಿದ್ದಿ ಸಂಸ್ಕಾರಗೊಳಿಸುವ ಒಂದು ಪ್ರಚಂಡ ಸಾಧನವೆಂಬುದನ್ನು ಅರಿತುಕೊಳ್ಳಬೇಕು. ಸಾಧನವು ಸುಸ್ಪಷ್ಟವಿದ್ದಷ್ಟೂ ಸಾಧ್ಯವು ಸುಲಭವಾಗಿ ಲಭ್ಯವಾಗಬಹುದು. ಶಿಕ್ಷಣವು ಸಾಧನವೆಂದ-

ಗ್ರಹಿಸಿದರೆ ಸಂಸ್ಕೃತಿಯು ಅದರ ಅಮೃತಸಿದ್ಧಿಯಾಗಬಹುದು. ಶಿಕ್ಷಣ-ಸಂಸ್ಕೃತಿಗಳು ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಒಂದನ್ನು ಮತ್ತೊಂದರಿಂದ ಬೇರ್ಪಡಿಸಲಾಗದು. ಒಂದು ಮತ್ತೊಂದರ ಫಲ. ಆದರೆ ಒಂದು ಮುಗಿದು ಮತ್ತೊಂದು ಪ್ರಾರಂಭವಾಗುವಂಥದಲ್ಲ. ನಿರಂತರ ಕಾಲಪ್ರವಾಹದಲ್ಲಿ ಇವೆರಡರ ಕಲ್ಯಾಣತೀರ್ಥವನ್ನು ಪಡೆಯಬೇಕು. ಈ ಹಿನ್ನೆಲೆಯಲ್ಲಿ ಸಧ್ಯದ ಶಿಕ್ಷಣವು ಸಂಸ್ಕೃತಿಪ್ರಧಾನವಾಗಿದೆಯೇ ಎಂಬುದನ್ನು ನಿರ್ಣಯಿಸಬೇಕಾದರೆ :

೧. ಸಧ್ಯದ ಶೈಕ್ಷಣಿಕ ಸ್ಥಿತಿ-ಗತಿಗಳನ್ನು ವಿಶ್ಲೇಷಿಸಿ ಅದರ ಒಟ್ಟಾರೆ ಪರಿಣಾಮಗಳನ್ನು ಪರಾಮರ್ಶಿಸಬೇಕು;

೨. ಸಧ್ಯದ ಶಿಕ್ಷಣಪದ್ಧತಿಯು ನಮ್ಮ ರಾಷ್ಟ್ರೀಯಜೀವನದ ಆದರ್ಶಗಳನ್ನು ಎಷ್ಟರಮಟ್ಟಿಗೆ ಪೂರೈಸಬಲ್ಲುದೆಂಬುದನ್ನು ಪರಿಕಿಸಬೇಕು;

೩. ಶೈಕ್ಷಣಿಕ ಪ್ರಪಂಚದಲ್ಲಿ ಯಾರು ಯಾರು, ತಮ್ಮ ಹೊಣೆಗಾರಿಕೆಗಳನ್ನು ಹೇಗೆ ಮತ್ತು ಎಂತು ನಿರ್ವಹಿಸಬೇಕೆಂಬುದನ್ನು ವಿಚಾರಿಸಬೇಕು;

೪. ಭಾರತೀಯ ರಾಜ್ಯಘಟನೆಯು ಅಪೇಕ್ಷಿಸುವ ಸಮಾಜನಿರ್ಮಾಣ ಕಾರ್ಯದಲ್ಲಿ, ಶೈಕ್ಷಣಿಕ ಗೊತ್ತುವಳಿಗಳನ್ನು ಅದೆಂತು ಹಮ್ಮಿಕೊಳ್ಳಬೇಕೆಂಬುದನ್ನು ವಿವೇಚಿಸಬೇಕು.

(೧) **ಸಧ್ಯದ ಶೈಕ್ಷಣಿಕ ಸ್ಥಿತಿಗತಿ :** ಸಧ್ಯದ ಶಿಕ್ಷಣಪದ್ಧತಿಯು ಮುಖ್ಯವಾಗಿ ಬ್ರಿಟಿಷರು ಆಳರಸರಾಗಿ ಹಮ್ಮಿಕೊಂಡ ಶಿಕ್ಷಣಪದ್ಧತಿಯನ್ನೇ ಅವಲಂಬಿಸಿ ಮುಂದುವರೆದಿದೆ. ಕಳೆದ ಇಪ್ಪತ್ತೈದು ವರುಷಗಳಲ್ಲಿ ಏನಾದರೂ ಬದಲಾವಣೆಗಳಾಗಿದ್ದರೆ ಅವೆಲ್ಲ ತಾತ್ಪೂರ್ತಿಕ ಬದಲಾವಣೆಗಳು. ಸಮಗ್ರ ಬದಲಾವಣೆಯನ್ನು ಯಾವ ಹಂತದಲ್ಲಿಯೂ ಕಾಣೆವು. ನಮ್ಮ ರಾಷ್ಟ್ರೀಯ ಸರಕಾರವಾದರೂ ಆ ದಿಶೆಯಲ್ಲಿ ವಿಚಾರಮಾಡಲಿಲ್ಲ. ಸ್ವಾತಂತ್ರ್ಯಾನಂತರ ಆರ್ಥಿಕ ಯೋಜನೆಗಳನ್ನು ಕೈಕೊಂಡಂತೆ ಅಖಿಲಭಾರತ ಶೈಕ್ಷಣಿಕ ಪುನರ್ಘಟನೆಯ ಯೋಜನೆಯನ್ನು ಸ್ವೀಕರಿಸಲಿಲ್ಲ. ಸ್ವಾತಂತ್ರ್ಯಪೂರ್ವದಲ್ಲಿ ಯುದ್ಧೋತ್ತರ ಯೋಜನೆಯೆಂದು ಸಾರ್ಜಂಟ ಯೋಜನೆ ರೂಪುಗೊಂಡಿತ್ತು. ಆದರೆ ಆ ಯೋಜನೆಯನ್ವಯ ನಲ್ವತ್ತು ವರುಷಗಳಲ್ಲಿ ಕೆಲವೊಂದು ಗೊತ್ತುಗುರಿಗಳನ್ನು ನಿರ್ಧರಿಸಲಾಗಿತ್ತು. ಆದರೆ ಅವೆಲ್ಲ ಬ್ರಿಟಿಷ ಸರಕಾರದ ಗೊತ್ತುಗುರಿಗಳಾಗಿದ್ದರಿಂದಲೂ, ಮತ್ತು ಬ್ರಿಟಿಷರು ಮುಂದೆ ಮೂರು ವರುಷಗಳಲ್ಲಿಯೇ ಭಾರತ ಬಿಟ್ಟು ತೊಲಗಿದ್ದ

ರಿಂದಲೂ, ಅವರ ಯೋಜನೆಯು ಯೋಜನೆಯಾಗಿಯೇ ಉಳಿಯಿತು. ಸ್ವತಂತ್ರ ಭಾರತ ಸರಕಾರಕ್ಕೆ ಈ ದಿಶೆಯಲ್ಲಿ ಏನನ್ನಾದರೂ ಮಾಡಬೇಕಾಗಿತ್ತು. ಅದಕ್ಕಾಗಿ ೧೯೪೮ರಲ್ಲಿ ರಾಧಾಕೃಷ್ಣನ್ ಆಯೋಗ ನೇಮಿಸಿತು. ಆದರೆ ಅದರ ವ್ಯಾಪ್ತಿಯನ್ನು ಕೇವಲ ವಿಶ್ವವಿದ್ಯಾಲಯ ಶಿಕ್ಷಣಕ್ಕಷ್ಟೇ ಸೀಮಿತಗೊಳಿಸಿದ್ದರಿಂದ ಅದು ಸಮಗ್ರ ಶೈಕ್ಷಣಿಕ ಸಮಸ್ಯೆಗಳನ್ನು ಚರ್ಚಿಸಲಿಲ್ಲ. ಆದರೂ ರಾಧಾಕೃಷ್ಣನ್ ಆಯೋಗವು ಸಿದ್ಧಪಡಿಸಿದ ವಿದ್ವತ್‌ಪೂರ್ಣ ವರದಿಯು ಸಮಗ್ರವಾಗಿ ಸ್ವೀಕೃತವಾಗದೆ ಅದರ ಕೆಲವು ಶಿಫಾರಸುಗಳು ವಿಶ್ವವಿದ್ಯಾಲಯದ ಶಿಕ್ಷಣಕ್ರಮದಲ್ಲಿ ಅಂಗೀಕರಿಸಲ್ಪಟ್ಟವು. ಆದರೆ ಮುಂದಿನ ನಾಲ್ಕಾರು ವರುಷಗಳಲ್ಲಿ, ಮಾಧ್ಯಮಿಕ ಶಿಕ್ಷಣದಲ್ಲಿ ವಿಶೇಷ ಬದಲಾವಣೆಗಳನ್ನು ಮಾಡದೆ ವಿಶ್ವವಿದ್ಯಾಲಯ ಶಿಕ್ಷಣಕ್ರಮದಲ್ಲಿ ಪ್ರಗತಿಯನ್ನು ಸಾಧಿಸುವದು ಅಸಾಧ್ಯವೆಂದು ಕಂಡುಬಂದದ್ದರಿಂದ ೧೯೫೨ರಲ್ಲಿ ಮುದಲಿಯಾರ ಆಯೋಗವನ್ನು ನೇಮಿಸಲಾಯಿತು. ಅದಾದರೂ ಸಹ ತನ್ನ ವಿದ್ವತ್‌ಪೂರ್ಣ ವರದಿಯಲ್ಲಿ ಮಾಧ್ಯಮಿಕ ಶಿಕ್ಷಣದ ಆಗುಹೋಗುಗಳನ್ನು ಚರ್ಚಿಸಿ ಎಷ್ಟೋ ಬದಲಾವಣೆಗಳನ್ನು ಸೂಚಿಸಿತು. ಆದರೆ ಕೇಂದ್ರ ಹಾಗು ರಾಜ್ಯಸರಕಾರಗಳು ಈ ಆಯೋಗದ ಒಂದೆರಡು ಶಿಫಾರಸುಗಳನ್ನು ಸ್ವೀಕರಿಸಿ ಸಮಗ್ರ ವರದಿಯನ್ನು ಬಿಟ್ಟುಕೊಟ್ಟವು. ಆದರೆ ಪ್ರಾಥಮಿಕ ಶಿಕ್ಷಣದ ಪುನರ್ಘಟನೆಗಾಗಿ ಮೇಲಿನ ಆಯೋಗಗಳಂತೆ ಒಂದು ಪ್ರತ್ಯೇಕ ಆಯೋಗವನ್ನೇನೂ ನೇಮಿಸಲಿಲ್ಲ. ಹೀಗಾಗಿ ಪ್ರಾಥಮಿಕ ಶಿಕ್ಷಣವು ಗೊತ್ತುಗುರಿಯಿಲ್ಲದೆ ತನ್ನ ಹಳೆಯ ಜಾಡನ್ನೇ ಹಿಡಿದು ಇಂದಿಗೂ ನಡೆದಿದೆ. ರಾಷ್ಟ್ರೀಯ ಶಿಕ್ಷಣಕ್ಕಾಗಿ ಹಾತೊರೆಯುತ್ತಿದ್ದ ಭಾರತದ ಜನತೆಗೆ ಇದರಿಂದ ತೀವ್ರ ಆಘಾತವಾಯಿತು. ಇದನ್ನು ಮನಗಂಡು ಭಾರತ ಸರಕಾರವು ೧೯೬೪ರಲ್ಲಿ ಕೋಠಾರಿ ಆಯೋಗವನ್ನು ಸಮಗ್ರ ಶಿಕ್ಷಣಕ್ರಮವನ್ನು ಪುನರ್ಘಟಿಸುವ ದೃಷ್ಟಿಯಿಂದ ನೇಮಿಸಿತು. ದೇಶ-ವಿದೇಶಗಳ ಶಿಕ್ಷಣತಜ್ಞರು, ಭಾರತದಾದ್ಯಂತ ಸಂಚರಿಸಿ, ಸಮಗ್ರ ಶಿಕ್ಷಣಕ್ರಮದ ಪರಿಶೀಲನಗೈದು ಒಂದು ಬೃಹತ್ ವರದಿಯನ್ನು ಸಲ್ಲಿಸಿದರು. ಆದರೆ ಭಾರತ ಸರಕಾರವಾಗಲೀ, ಪ್ರಾಂತೀಯ ಸರಕಾರಗಳಾಗಲೀ ಒಂದು ದೃಢನಿರ್ಧಾರಕ್ಕೆ ಬಂದು, ಸರ್ವ ಹಂತದಲ್ಲಿಯ ಶೈಕ್ಷಣಿಕ ಪುನರ್ಘಟನೆಯನ್ನು ಸ್ವೀಕರಿಸಲಿಲ್ಲ. ಪರಿಣಾಮವಾಗಿ ಅಲ್ಲೊಂದು, ಇಲ್ಲೊಂದು ಶಿಫಾರಸುಗಳನ್ನು ಅಂಗೀಕರಿಸಿ ಇದುವರೆಗೂ ನಡೆದು ಬಂದ ಶಿಕ್ಷಣಕ್ರಮವನ್ನೇ ಪುನಃ ಮುಂದುವರಿಸಿವೆ. ಹೀಗಾಗಿ ಭಾರತಕ್ಕೊಂದು ಇರಬೇಕಾದ ರಾಷ್ಟ್ರೀಯ ಶಿಕ್ಷಣನೀತಿಯಾಗಲೀ, ಪ್ರಣಾಲಿಯಾಗಲೀ ಇರದೆ, ಬ್ರಿಟಿಷ ಶಿಕ್ಷಣ ನೀತಿಯೇ ಅಲ್ಪಸ್ವಲ್ಪ ಬದಲಾವಣೆಯೊಡನೆ ಹಾಗೆಯೇ ಮುಂದುವರಿದಿವೆ.

ಭಾರತದ ರಾಷ್ಟ್ರೀಯಭಾಷೆ ಇಂಗ್ಲೀಷೋ ಹಿಂದಿಯೋ ಎಂಬುದು ಇನ್ನೂ ಇತ್ಯರ್ಥವಾಗಿಲ್ಲ. ಭಾರತ ಸರಕಾರದ ಆಡಳಿತಭಾಷೆಯಾಗಿ ಇಂಗ್ಲೀಷೇ ಮುಂದುವರಿದಿದೆ. ಈ ಮೊದಲು ಹಿಂದಿಗಾಗಿ ಇದ್ದ ಪ್ರೇಮ-ಸದ್ಭಾವನೆಗಳು ಇಂದು ಉಳಿದಿಲ್ಲ. ಪ್ರಾಂತೀಯ ಭಾಷೆಗಳು ಆಯಾ ಪ್ರಾಂತಗಳಲ್ಲಿ ಮೇಲುಗೈ ಪಡೆದಿವೆ. ಇದರೂ ಉಚ್ಚ ಶಿಕ್ಷಣವು ಇನ್ನೂ ಇಂಗ್ಲೀಷಿನಲ್ಲಿಯೇ ಮುಂದುವರೆದಿದೆ. ಎಷ್ಟೋ ರಾಜ್ಯ ಸರಕಾರಗಳು ಇಂದಿಗೂ ಇಂಗ್ಲೀಷನ್ನೇ ತಮ್ಮ ಆಡಳಿತ ಭಾಷೆಯನ್ನಾಗಿ ಮುಂದುವರೆಸಿವೆ. ವಿಶ್ವವಿದ್ಯಾಲಯಗಳು ಸ್ವಾಯತ್ತತೆಯ ಹೆಸರಿನಲ್ಲಿ ಇಂಗ್ಲೀಷಿಗೇ ಅಂಟಿಕೊಂಡಿವೆ. ಪ್ರಾದೇಶಿಕ ಭಾಷೆಯೇ ಆಡಳಿತ ಭಾಷೆ ಆಗಿ ಸಂಪೂರ್ಣವಾಗಿ ಕಾರ್ಯರೂಪದಲ್ಲಿ ಬರುವವರೆಗೂ ವಿಶ್ವವಿದ್ಯಾಲಯಗಳು ಇಂಗ್ಲೀಷನ್ನು ಬಿಡಲು ಸಿದ್ಧವಿಲ್ಲ. ಹಾಗೆಯೇ ಪ್ರಾದೇಶಿಕ ಭಾಷೆಗಳು ಇಂಗ್ಲೀಷಿನಂತೆ ಸಮೃದ್ಧಿ ಹೊಂದದೆ ವಿಜ್ಞಾನ-ತಾಂತ್ರಿಕಜ್ಞಾನವನ್ನು ಆ ಭಾಷೆಗಳಲ್ಲಿ ಕೊಡಲು ಸಾಧ್ಯವಿಲ್ಲವೆಂಬ ಕೂಗು ಒಂದುಕಡೆಯಿದ್ದರೆ, ಪ್ರಾದೇಶಿಕ ಭಾಷೆಗಳನ್ನು ವಿಶ್ವವಿದ್ಯಾಲಯದ ಮಾಧ್ಯಮವನ್ನಾಗಿ ಮಾಡುವವರೆಗೆ, ಪಠ್ಯಪುಸ್ತಕಗಳನ್ನು ನಿರ್ಮಿಸುವದು ಸಾಧ್ಯವಿಲ್ಲವೆಂಬ ಕೂಗು ಮತ್ತೊಂದು ಕಡೆಗೆ ಕೇಳಬರುತ್ತದೆ. ವಿಶ್ವವಿದ್ಯಾಲಯದ ಮಾಧ್ಯಮ ಹಾಗು ಪ್ರಾದೇಶಿಕ ಮತ್ತು ಕೇಂದ್ರಸರಕಾರದ ಆಡಳಿತ ಭಾಷೆ ಅನಿರ್ಣಿತ ಸ್ಥಿತಿಯಲ್ಲಿದ್ದಾಗ, ಮಾಧ್ಯಮಿಕ ಹಂತದಲ್ಲಿಯೂ ಭಾಷೆಯ ಬಿಕ್ಕಟ್ಟು ಹಾಗೆಯೇ ಮುಂದುವರೆದಿದೆ. ಇಂಗ್ಲೀಷ ಹಾಗು ಹಿಂದಿ ಎರಡೂ ಮುಂದುವರಿದಿದ್ದರೂ ಅವುಗಳ ಸಮರ್ಥ ಬೋಧನೆಗೆ ಅವಕಾಶವಿಲ್ಲದಾಗಿದೆ. ಮಾತೃಭಾಷೆಯನ್ನು ಸಮರ್ಥವಾಗಿ ಕಲಿಸಲಾಗುತ್ತಿಲ್ಲ. ಮಾಧ್ಯಮಿಕ ಹಂತದಲ್ಲಿಂದ ಹೊರಬರುವ ವಿದ್ಯಾರ್ಥಿಗಳು ಇಂಗ್ಲೀಷನ್ನೂ ಅರಿಯರು, ಹಿಂದಿಯನ್ನೂ ತಿಳಿಯರು; ಮಾತೃಭಾಷೆಯನ್ನೂ ಸಮರ್ಥವಾಗಿ ಓದಲು ಮತ್ತು ಬರೆಯರು. ಇದೇ ರೋಗ ಪ್ರಾಥಮಿಕ ಹಂತದಲ್ಲಿಯೂ ಕಂಡುಬರುತ್ತದೆ. ರಾಜ್ಯಘಟನೆಯ ಆದೇಶದಂತೆ ಕಡ್ಡಾಯದ ಪ್ರಾಥಮಿಕ ಶಾಲೆಗಳ ಸ್ಥಿತಿಯನ್ನು ಗಮನಿಸುವವರೇ ಇಲ್ಲದಂತಾಗಿದೆ. ಕಡ್ಡಾಯದ ಪ್ರಾಥಮಿಕ ಶಿಕ್ಷಣವನ್ನು ಜಾರಿಗೊಳಿಸುವ ಮೊದಲು ಸಾಕಷ್ಟು ಶಾಲಾಕಟ್ಟಡ, ಶಿಕ್ಷಕರ ಪೂರೈಕೆ, ಉಪಕರಣಗಳ ಸೌಕರ್ಯ ಇತ್ಯಾದಿ ಸಂಗತಿಗಳನ್ನೂ ಗಮನಿಸಬೇಕಾಗಿತ್ತು. ತದ್ವಿರುದ್ಧವಾಗಿ ರಾಜ್ಯಸರಕಾರಗಳ ಕಟ್ಟಡ ನೀತಿಯೂ ಬಹು ವಿಚಿತ್ರವಾಗಿದೆ. ಸಾರ್ವಜನಿಕರ ಸಹಕಾರ ಸಿಗುವಲ್ಲಿ ಕಟ್ಟಡಗಳು ನಿರ್ಮಾಣಗೊಂಡಿವೆ. ಅಂಥ ಸಹಕಾರವಿಲ್ಲದಲ್ಲಿ, ಬಾಡಿಗೆ ಮನೆಗಳಲ್ಲಿ ಪ್ರಾಥಮಿಕ ಶಾಲೆಗಳು ಮುಂದುವರೆದಿವೆ. ಪ್ರಾಥಮಿಕ ಶಿಕ್ಷಣದ ಪೂರ್ಣ ಹೊಣೆಗಾರಿಕೆಯು

ಪ್ರಾಂತಿಕ ಸರಕಾರಗಳ ಮೇಲಿರುವಾಗ ಆವಶ್ಯಕ ಕಟ್ಟಡಗಳನ್ನೇಕೆ ಕಟ್ಟಿಸಬಾರದು ? ಅದೇ ರೀತಿ ಭಾಷೆಯು ಗೊಂದಲವೂ ಹೇಳತೀರದಷ್ಟು ವಿಕಾರರೂಪ ತಳೆದಿದೆ. ಈಗ ಪ್ರಾಥಮಿಕ ಶಾಲೆಗಳಲ್ಲಿಯೇ ಇಂಗ್ಲೀಷ ಹಾಗೂ ಹಿಂದಿ ಭಾಷೆಗಳನ್ನು ಅನುಕ್ರಮವಾಗಿ ೫ನೇ ಹಾಗೂ ೬ನೇ ವರ್ಗಗಳಲ್ಲಿ ಕಲಿಸಲಾಗುತ್ತದೆ. ೫, ೬, ೭ ವರ್ಗಗಳಲ್ಲಿ ಕಲಿಯಬೇಕಾದ ಮೂಲಭೂತ ಇಂಗ್ಲೀಷ ಎಸ್. ಎಸ್. ಎಲ್. ಸಿ. ಕಲಿತ ಶಿಕ್ಷಕರು ಬೋಧಿಸುವದುಂಟು. ಇದರ ಸಾರ್ವತ್ರಿಕ ಪರಿಣಾಮವು ಮಾತ್ರ ಅತ್ಯಂತ ಅಸಮಾಧಾನಕರವಾಗಿದೆ. ಪ್ರಾಥಮಿಕ ಹಂತದಿಂದ ಬರುವ ಮಕ್ಕಳು ಮೂರು ವರ್ಷ ಇಂಗ್ಲೀಷ ಕಲಿತು ಬಂದವರಿರುತ್ತಾರೆಂದು ಮಾಧ್ಯಮಿಕ ಹಂತದಲ್ಲಿ ಇಂಗ್ಲೀಷ ಬೋಧನೆಯು ತಿಳಿಯಲಾರದಷ್ಟು ಕ್ಲಿಷ್ಟವಾಗುತ್ತದೆ. ಅದು ಹೀಗೆಯೇ ಮುಂದುವರೆದು ವಿದ್ಯಾರ್ಥಿಗಳ ಮಾಧ್ಯಮಿಕ ಹಂತವೂ ಮುಗಿಯುತ್ತದೆ. ಮಾಧ್ಯಮಿಕ ಹಂತದಿಂದ ಹೊರ ಬರುವ ಮಕ್ಕಳ ಇಂಗ್ಲೀಷ ಜ್ಞಾನದ ವಿಷಯವಾಗಿ ಹೇಳದಿರುವದೇ ಮೇಲು ! ಅಂಥವರು ನೇರವಾಗಿ ಕಾಲೇಜ ವ್ಯಾಸಂಗ ಮುಂದುವರಿಸುತ್ತಾರೆ. ಕಾಲೇಜುಗಳಲ್ಲೋ ಇಂಗ್ಲೀಷೇ ಶಿಕ್ಷಣ ಮಾಧ್ಯಮ. ವಿಶ್ವವಿದ್ಯಾಲಯದವರು ಪ್ರಾಂತೀಯ ಭಾಷೆಯ ಬಳಕೆಯನ್ನು ಮಾನ್ಯ ಮಾಡಿದ್ದರೂ, ವಿದ್ಯಾರ್ಥಿಗಳ ಒಲವು ಮಾತ್ರ ಇಂಗ್ಲೀಷಿನೆಡೆಗೆ. ಆದರೆ ಅವರ ಇಂಗ್ಲೀಷ ಭಾಷೆಯ ಜ್ಞಾನವೂ ಅಷ್ಟಕ್ಕಷ್ಟೇ. ಮಾತೃಭಾಷೆಯನ್ನು ಬಳಸುವದು ಕನಿಷ್ಠ ಪ್ರತಿಷ್ಠೆಯ ವಿಷಯವಾಗಿ ಬಿಟ್ಟಿದೆ. ಅದರಂತೆ ಕಾಲೇಜಿನ ಆಡಳಿತ ವರ್ಗಗಳು ಬೋಧಭಾಷೆಯನ್ನಾಗಿ ಇಂಗ್ಲೀಷ ಮತ್ತು ಪ್ರಾಂತೀಯ ಭಾಷೆಗಳೆರಡನ್ನೂ ಅಂಗೀಕರಿಸಿ ಶೈಕ್ಷಣಿಕ ವೆಚ್ಚವನ್ನು ಸಹಿಸರು. ವಿಶ್ವವಿದ್ಯಾಲಯಗಳಲ್ಲಂತೂ ಇಂಗ್ಲೀಷೇ ಮಾಧ್ಯಮವಾಗಿರುವಾಗ, ಯಾವ ವಿದ್ಯಾರ್ಥಿಯೂ ಇಂಗ್ಲೀಷನ್ನು ತೊರೆಯಲಾರ. ಅಂತೂ ವಿಶ್ವವಿದ್ಯಾಲಯ ಮಟ್ಟದಲ್ಲಿಯೂ ಹರಕುಮುರಕು ಇಂಗ್ಲೀಷ ಜ್ಞಾನದಿಂದ ಉಚ್ಚ ಪದವಿಯನ್ನು ಗಿಟ್ಟಿಸಿ, ಸುಶಿಕ್ಷಿತ ತರುಣ ತರುಣಿಯರೆಂದು ನಮ್ಮ ಮಕ್ಕಳು ಹೊರಬರುತ್ತಾರೆ. ಇವರೇ ನಮ್ಮ ಆಡಳಿತ, ಶಿಕ್ಷಣ ಹಾಗೂ ಸಾರ್ವಜನಿಕ ಕ್ಷೇತ್ರಗಳಲ್ಲಿ, ಉಚ್ಚ ಸ್ಥಾನಗಳನ್ನು ಸಂಪಾದಿಸಿ, ಆಡಳಿತಗಾರರಾಗಿ, ಶಿಕ್ಷಕರಾಗಿ, ಸಾರ್ವಜನಿಕ ಮುಂದಾಳುಗಳಾಗಿ ಕಾರ್ಯನಿರ್ವಹಿಸುವದುಂಟು. ಇದೆಲ್ಲದರ ಒಟ್ಟಾರೆ ಪರಿಣಾಮ ನೋಡಿದರೆ ಶಿಥಿಲ ಆಡಳಿತ, ಅಪಕ್ವ ಅಧ್ಯಾಪನ, ಅಸಮರ್ಪಕ ಮುಂದಾಳುತನ ಎಲ್ಲೆಲ್ಲಿಯೂ ಗೋಚರಿಸುವದುಂಟು.

ಇದೆಲ್ಲವೂ ಬೋಧಭಾಷೆಯನ್ನಷ್ಟೇ ಗಮನದಲ್ಲಿಟ್ಟುಕೊಂಡಾಗ ಹೊರಡುವ ನಿಷ್ಪತ್ತಿ. ಇದರೊಂದಿಗೇ ಹುಟ್ಟಿಕೊಂಡು ಬರುವ ಇತರ ಪರಿಣಾಮಗಳೂ ಅಷ್ಟೇ

ಭಯಂಕರವಾಗಿವೆ. ಇಂಗ್ಲೀಷ ಭಾಷೆಯೊಂದಿಗೆ ಅಂಟಿಕೊಂಡಿರುವ ಪರ ಸಂಸ್ಕೃತಿ, ಆಚಾರ, ವಿಚಾರ, ವೇಷ, ಭೂಷಣ, ಪರಾನುಕರಣೆ ಇವುಗಳ ಅಸಹ್ಯ ಪರಿಣಾಮವನ್ನು ನಮ್ಮ ತರುಣ ತರುಣಿಯರ ಜೀವನದಲ್ಲಿ ಹೆಜ್ಜೆಹೆಜ್ಜೆಗೂ ಕಾಣಬಹುದು. ದೇಶಪ್ರೇಮ, ಸಾಮಾಜಿಕ-ಸಾಂಸ್ಕೃತಿಕ ಮೌಲ್ಯ, ನೈತಿಕ ಹೊಣೆಗಾರಿಕೆ ಮುಂತಾದವುಗಳನ್ನು ಅಪೇಕ್ಷಿಸುವದು ಹುಚ್ಚು ಸಾಹಸವೇ ಆದೀತು. ಸ್ವೇಚ್ಛಾಚಾರವು ಗರಿಗೆದರಿ, ಪಕ್ಕಬಲಿತು ಗಗನಗಾಮಿನಿಯಾದಾಗ, ಭಾರತೀಯ ಪುಣ್ಯಭೂಮಿಯಲ್ಲಿ, ಭಾರತೀಯ ಪರಿಸರದಲ್ಲಿ ನಮ್ಮ ಮಕ್ಕಳು ಬೆಳೆಯಬೇಕೆಂದು ಬಯಸುವದು, ಬೇವಿನ ಗಿಡನೆಟ್ಟು ಮಾವಿನ ಫಲ ಬಯಸಿ ದಂತೆ ಹುಚ್ಚು ನಿರೀಕ್ಷೆಯಾಗಿಬಿಟ್ಟಿದೆ !

ಹಾಗೆಯೇ ಸಧ್ಯದ ಶಿಕ್ಷಣ ಪದ್ಧತಿಯು, ವಿಶೇಷವಾಗಿ ಪುಸ್ತಕೀಯ ಜ್ಞಾನ ವನ್ನೇ ಹೆಚ್ಚಾಗಿ ಅವಲಂಬಿಸಿದ್ದರಿಂದಲೂ, ಸಮಗ್ರ ಶಿಕ್ಷಣ ಪದ್ಧತಿಯು, ಸ್ವತಂತ್ರ ವೃತ್ತಿವ್ಯವಸಾಯಕ್ಕಾಗಿ ತರುಣರನ್ನು ಅಣಿಗೊಳಿಸದೇ ಇರುವದ ರಿಂದಲೂ, ಶಾಲೆ-ಕಾಲೇಜುಗಳಿಂದ ಹೊರಬರುವ ಪ್ರತಿಯೊಬ್ಬ ತರುಣನೂ ನೌಕರಿಯನ್ನೇ ಹುಡುಕುವ ಮನೋವೃತ್ತಿಯುಳ್ಳವನಾಗಿರುತ್ತಾನೆ. ರಾಜಕೀಯ ಪಕ್ಷಪಾತಗಳ ಮಧ್ಯದಲ್ಲಿ ಎಲ್ಲರಿಗೂ ತೃಪ್ತಿಯನ್ನುಂಟುಮಾಡುವ ಉದ್ಯೋಗಗಳು ಸಿಗುವದು ಕಷ್ಟಕರವಾಗಿದೆ. ಸುಶಿಕ್ಷಿತರಲ್ಲಿ ನಿರುದ್ಯೋಗವು ತಾಂಡವವಾಡು ತ್ತಿದೆ. ಹತಾಶರಾದ ತರುಣರು ಅಲ್ಲಸಲ್ಲದ ಅರಾಷ್ಟ್ರೀಯ ಚಟುವಟಿಕೆಗಳಲ್ಲಿ ಮನಸ್ಸು ಹಾಕುತ್ತಿದ್ದಾರೆ. ಸಧ್ಯದ ಸಾಮಾಜಿಕ ಪರಿಸರವಾಗಲೀ, ರಾಜಕೀಯ ಕ್ಷೇತ್ರವಾಗಲೀ ಯಾವ ಆದರ್ಶಗಳನ್ನೂ ಒದಗಿಸುತ್ತಿಲ್ಲ. ಅಸಹ್ಯ ಬಡತನ, ನಿರುದ್ಯೋಗ ಒಟ್ಟಿಗೆ ಸೇರಿ, ನಾಡಿನ ತರುಣರಲ್ಲಿರಬೇಕಾದ ಧ್ಯೇಯವಾದ, ಆದರ್ಶ, ಉದ್ಯೋಗಶೀಲತೆ, ಸಹಿಷ್ಣುತೆ, ಧ್ಯೇಯನಿಷ್ಠ ಜೀವನ ಇವುಗಳಿಂದ ಅವರನ್ನು ಪರಾವೃತ್ತಗೊಳಿಸಿವೆ. ಉಚ್ಚಶಿಕ್ಷಣ ಪಡೆದವರೂ ವೈಯಕ್ತಿಕ ಜೀವನ ದಲ್ಲಿರಬೇಕಾದ ಧೈರ್ಯ, ಸಾಹಸ, ಸಜ್ಜನಿಕೆ, ಸದಾಚಾರ, ಸದ್ವಿವೇಕ, ಆತ್ಮ ವಿಶ್ವಾಸ, ಸಮಾಜ ಹಾಗೂ ದೇಶನಿಷ್ಠೆ ಇಲ್ಲದಾಗಿವೆ. ಇವೆಲ್ಲ ಸದ್ಗುಣಗಳ ಬೆಳ ವಣಿಗೆಗೆ ನಮ್ಮ ಶಾಲೆ ಕಾಲೇಜುಗಳ ಸ್ಥಿತಿಗತಿಗಳೂ ಅನುಕೂಲವಾಗಿಲ್ಲ. ತಂದೆ ತಾಯಿಗಳಾದ ನಾವೂ ಆದರ್ಶ ಹಾಕಿಕೊಟ್ಟಿಲ್ಲ. ಸಾಮಾಜಿಕ ಹಾಗೂ ರಾಜಕೀಯ ಮುಂದಾಳುಗಳೂ ಸತ್ಸಂಪ್ರದಾಯ ಹಾಕಿಕೊಟ್ಟಿಲ್ಲ. ಇಂತಹ ವಾತಾವರಣದಲ್ಲಿ ಅಪ್ರಬುದ್ಧ ತರುಣರಲ್ಲಿ ಶಿಸ್ತು-ಸಂಯಮಗಳನ್ನು ಅಪೇಕ್ಷಿಸುವದು ಸಾಹಸದ ಮಾತೇ ಆಗಿದೆ. ಇದೆಲ್ಲ ನಮ್ಮ ಇಂದಿನ ಶಿಕ್ಷಣ ಪದ್ಧತಿಯ ದುಷ್ಟರಿಣಾಮ ವೆಂದು ನಿರಾತಂಕವಾಗಿ ಹೇಳಬಹುದು.

(೨) **ರಾಷ್ಟ್ರೀಯ ಜೀವನದ ಆದರ್ಶಗಳ ಪಾಲನೆ :** ಎರಡನೆಯದಾಗಿ ಸಧ್ಯದ ಶಿಕ್ಷಣ ಪದ್ಧತಿಯು ನಮ್ಮ ರಾಷ್ಟ್ರೀಯ ಆದರ್ಶಗಳನ್ನು ಪೂರೈಸಬಲ್ಲುದೇ ಎಂಬುದನ್ನು ನೋಡಬೇಕು. ಭಾರತವು ಪುರಾತನ ದೇಶವಾಗಿದೆ. ಹಲವಾರು ಧರ್ಮ, ಭಾಷೆ, ವೇಷ, ಭೂಷಣ, ಆಚಾರ, ವಿಚಾರಗಳು ಈ ನೆಲದಲ್ಲಿ ಹುಟ್ಟಿ ಕೊಂಡು ಬೆಳೆದು ಬಂದಿವೆ. ಆದರೂ ಭಾರತೀಯ ಸಂಸ್ಕೃತಿಯೆಂಬ ಅವಿಭಾಜ್ಯ ಅಂತಸ್ಸತ್ವ ಮಾತ್ರ ಭಾರತೀಯರೆಲ್ಲರಲ್ಲಿ ಉಳಿದುಬಂದಿದೆ ಎನ್ನುವದು ಯಾರೂ ಅಲ್ಲಗಳೆಯದ ಅಂಶವಾಗಿದೆ. ಬಹುತ್ವದಲ್ಲಿ ಏಕತ್ವವನ್ನು ಭಾರತವು ಇನ್ನೂ ಉಳಿಸಿಕೊಂಡಿದೆ. ಪರಕೀಯ ದಾಳಿಗಳೊಂದಿಗೆ ಪರಸಂಸ್ಕೃತಿ ಸಭ್ಯತೆಗಳು ಭಾರತೀಯರನ್ನು ಆಕ್ರಮಿಸಿದರೂ, ಭಾರತೀಯರು ಕಾಲಾಂತರದಲ್ಲಿ ಅವುಗಳ ನ್ನೆಲ್ಲ ಅರಗಿಸಿಕೊಂಡಿದ್ದಾರೆ. ಇದು ಅವರ ಗುಣಗ್ರಾಹಿಕತೆಯ ಉಚ್ಚ ತಮ ನಿದರ್ಶನ. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೂ ಈ ರಾಷ್ಟ್ರೀಯ ಐಕ್ಯ ಎದ್ದು ಕಾಣುತ್ತದೆ. ಭಾರತದ ಪ್ರತಿಯೊಂದು ನದಿ-ನದವೂ ಪುಣ್ಯ ತೀರ್ಥವಾಗಿದೆ. ಪ್ರಾಂತೀಯ ಗಡಿಯನ್ನು ಮೀರಿ ಉತ್ತರ-ದಕ್ಷಿಣದ ತೀರ್ಥಕ್ಷೇತ್ರಗಳು ಭಾರತೀಯರೆಲ್ಲರ ಸಾಂಸ್ಕೃತಿಕ ಸೊತ್ತಾಗಿವೆ. ಭಾರತದ ಮೂಲೆಮೂಲೆಯಲ್ಲಿ ಹುಟ್ಟಿ ಭಾರತದ ಅಖಂಡತೆಯನ್ನು ಬೋಧಿಸಿದ ಸಂತ ವಿದ್ವಜ್ಜನರು ಪುಣ್ಯಪುರುಷರಾಗಿದ್ದಾರೆ. ಅವರ ನುಡಿಮುತ್ತು ಯಾವ ಭಾಷೆಯಲ್ಲಿ ಪ್ರಕಟವಾಗಿದ್ದರೂ ಅದು ಭಾರತದ ಸತ್ಪುರುಷರ ಅನುಭಾವ ವಾಣಿಯೆಂದು ಎಲ್ಲೆಡೆಗೂ ಮನ್ನಿಸಲ್ಪಡುತ್ತದೆ. ವೇದೋಪನಿಷತ್ತುಗಳಿಂದ ಮೊದಲುಗೊಂಡು ಇದುವರೆಗೂ ಅವೇ ಮೂಲಭೂತ ಭಾರತ ಸಂಸ್ಕೃತಿಯ ಭಾವಸೂತ್ರಗಳು ಗೌರವಿಸುತ್ತ ಬಂದಿವೆ. ಭಾರತೀಯರಿಗೆ ಭಾರತವು ಕಲ್ಲು ಮಣ್ಣುಗಳ ಆಗರವಾಗಿಲ್ಲ, ಅದೊಂದು ಜೀವಂತ ಸತ್ಯದ ಪ್ರತಿಮೂರ್ತಿ. ಭಾರತ ವನ್ನು ಮಾತೆಯ ರೂಪದಲ್ಲಿ ಕಾಣುವದು ಭಾರತೀಯರ ಜೀವನದೃಷ್ಟಿ. ಭಾರತೀಯರ ಧರ್ಮ ಸಂಸ್ಕೃತಿ ಸಾಹಿತ್ಯ ಭಾಷೆಗಳು ಒಂದಕ್ಕೊಂದು ಪೂರಕ ವಾಗಿವೆ. ಒಂದನ್ನು ಮತ್ತೊಂದರಿಂದ ಬೇರ್ಪಡಿಸಲಾರದಷ್ಟು ಅವು ಒಂದು ಗೂಡಿವೆ. ಭಾರತೀಯರ ಜೀವನದಿಂದ ಇವುಗಳನ್ನು ದೂರಿಡುವ ಪ್ರಯತ್ನ ಮಾಡುವದೆಂದರೆ ಭಾರತೀಯತ್ವವನ್ನೇ ಅವರಿಂದ ಬೇರ್ಪಡಿಸಿದಂತೆ ಬ್ರಿಟಿಷರು ನಮ್ಮ ಜನತೆಯಲ್ಲಿ ನೈತಿಕಶಿಥಿಲತೆಯನ್ನು ಉಂಟುಮಾಡಲು ಅವರ ಧರ್ಮವನ್ನು ತೆಗಳಿದರು, ಸಂಸ್ಕೃತಿಯನ್ನು ಪದಚ್ಯುತಗೊಳಿಸಿದರು, ಸಾಹಿತ್ಯವನ್ನು ದೂರಿ ಟ್ಟರು, ಭಾಷೆಯನ್ನು ಬಂಧಿಸಿದರು. ಮೆಕಾಲೆಪ್ರಣೀತ ಶಿಕ್ಷಣ ಕ್ರಮವು ಭಾರ ತೀಯರ ಭಾರತೀಯತ್ವವನ್ನೇ ಅಲ್ಲಗಳೆಯಲು ಪ್ರಯತ್ನಿಸಿತು. ಭಾರತೀಯರನ್ನು

ಕರಿಪಾಶ್ಚಾತ್ಯರನ್ನಾಗಿ ಮಾಡುವ ಅವರ ಯೋಜನೆಯು ಸಾಕಷ್ಟು ಯಶಸ್ವಿಯಾಯಿತು.

ಇಂದು ಧರ್ಮ ನಿರಪೇಕ್ಷ ಅಥವಾ ಜಾತ್ಯತೀತ ರಾಜ್ಯವೆಂಬ ಕಲ್ಪನೆಯು ಇಂಥ ವೈಚಾರಿಕ ಗೊಂದಲದಲ್ಲಿ ಜನ್ಮವೆತ್ತ ತತ್ವವಾಗಿದೆ. ಧರ್ಮವು ನಮ್ಮ ಜೀವನದಲ್ಲಿಂದ ಪಲಾಯನಗೈಯುವಂತೆ ನಾವಾಗಿಯೇ ಪಣತೊಟ್ಟು ನಿಂತಿದ್ದೇವೆ. ಸರಕಾರವೆಂಬುದು ಧರ್ಮ ಧರ್ಮಗಳ ನಡುವೆ ತಾರತಮ್ಯವೆಸಗದೆ ರಾಜ್ಯದಾಡಳಿತ ನಡೆಸಬೇಕೆಂಬುದು ಧರ್ಮನಿರಪೇಕ್ಷೆಯ ಮೂಲಮಾತಾಗಿದ್ದರೂ, ವ್ಯವಹಾರದಲ್ಲಿ ತದ್ವಿರುದ್ಧವಾದ ಪ್ರಚಾರ ನಡೆದಿದೆ. ಜಾತೀಯತೆಯೆಂಬ ಹೆಸರಿನಲ್ಲಿ ಧರ್ಮದ ಸೂಕ್ಷ್ಮ ನೈತಿಕ ಮೌಲ್ಯ-ಮಾಪನಗಳನ್ನು ಅವಹೇಳನ ಮಾಡಲಾಗುತ್ತದೆ. ಭಾರತದ ಧಾರ್ಮಿಕ ಪುರುಷರೆಲ್ಲ ಜಾತೀಯ ಪುಢಾರಿಗಳಂತೆ ಕಾಣಹತ್ತಿದ್ದಾರೆ. ಬುದ್ಧ, ಮಹಾವೀರ, ಶಂಕರ, ಮಧ್ವ, ರಾಮಾನುಜ, ಬಸವ ಮುಂತಾದ ಉಚ್ಚ ದಾರ್ಶನಿಕರು ಜಾತೀಯ ಚೌಕಟ್ಟಿಗೆ ಸಿಲುಕಿದ್ದಾರೆ. ಇವರೆಲ್ಲರ ಆದರ್ಶಗಳನ್ನು ಅಲ್ಲಗಳೆಯುತ್ತಾ ಹೊರಟರೆ ಭಾರತೀಯರಲ್ಲಿ ಉಳಿಯುವದಾದರೂ ಏನು ? ಸದ್ಯದ ಶಿಕ್ಷಣಪದ್ಧತಿಯು ಭಾರತೀಯರ ಜೀವನ ದೃಷ್ಟಿಯನ್ನೇ ಅಲ್ಲಗಳೆಯುವ ಸಾಹಸ ಮಾಡುತ್ತಿದೆಯೆಂದು ಕಂಡುಬರುತ್ತದೆ. ನಮ್ಮ ಶಾಲೆ-ಕಾಲೇಜುಗಳಲ್ಲಿ ಪ್ಲೇಟೋ, ಅರಿಸ್ಟಾಟಲರ ತತ್ವಗಳೇ ಅಭ್ಯಾಸಾರ್ಹವಾಗಿವೆ. ಹೆಗೆಲ್ಲನ ಭೌತಿಕವಾದವೇ ನಮ್ಮ ಮುಕ್ತಿಯ ಮಾರ್ಗವಾಗಿದೆ. ಮಾರ್ಕ್ಸನ ಆರ್ಥಿಕಪ್ರಧಾನ ಸಮತಾವಾದವೇ ನಮ್ಮ ಆರ್ಥಿಕ ನೀತಿಯಾಗಿದೆ. ಪಾಶ್ಚಾತ್ಯರ ಕುಟುಂಬನೀತಿ, ವಿವಾಹಪದ್ಧತಿ, ವಿವಾಹ ವಿಚ್ಛೇದನ, ಸ್ವಚ್ಛಂದಜೀವನ ನಮ್ಮ ಸಾಮಾಜಿಕ ಆದರ್ಶಗಳಾಗಿವೆ. ಅಹಲ್ಯಾ, ದ್ರೌಪದಿ, ಸೀತಾ, ತಾರಾ, ಮಂಡೋದರಿಗಳಂಥ ಭಾರತೀಯ ನಾರಿಯರ ಪವಿತ್ರ ಜೀವನ ನಮ್ಮವರಿಗಿಂದು ಅವ್ಯವಹಾರಿಕ ಚರಿತ್ರೆಗಳಾಗಿವೆ. ಸತ್ಯ, ಪ್ರೇಮ, ಅಹಿಂಸೆ, ತ್ಯಾಗ, ಅಪರಿಗ್ರಹ, ಬ್ರಹ್ಮಚರ್ಯ ಮುಂತಾದ ಮಾತುಗಳು ಸವೆದ ನಾಣ್ಯಗಳಂತೆ ಹಿಂದೆ ಸರಿಸಲ್ಪಡುತ್ತಿವೆ.

ಶಾಲೆ-ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಬೆಳೆಯುತ್ತಿದ್ದಂತೆ ಗುರು-ಶಿಷ್ಯರ ಸಂಬಂಧ ದೂರಾಗುತ್ತಿದೆ. ಇತ್ತ ಪಾಲಕರಿಗೆ ತಮ್ಮ ಮಕ್ಕಳಮೇಲೆ ಲಕ್ಷ್ಯವಿಡಲು ಸಮಯವಿಲ್ಲ; ಶಿಕ್ಷಕರಿಗೆ ವಿದ್ಯಾರ್ಥಿಗಳನ್ನು ಸಂದರ್ಶಿಸಿ ಮಾರ್ಗದರ್ಶನ ಮಾಡಲು ಅವಕಾಶವಿಲ್ಲ. ಸ್ವತಃ ವಿದ್ಯಾರ್ಥಿಗಳಿಗೂ ಈ ಸಂಬಂಧ ಬೇಕಾಗಿಲ್ಲ.

ಇವೆಲ್ಲ ವಿದ್ಯಾರ್ಥಿಗಳ ತಪ್ಪಲ್ಲ; ಗುರುಗಳಾದ ನಾವೂ ಅಷ್ಟೇ ಪ್ರಮಾಣದಲ್ಲಿ ನಮ್ಮ ಆದರ್ಶಗಳಿಂದ ದೂರ ಸರಿಯುತ್ತಿದ್ದೇವೆ. ಶಿಕ್ಷಕವೃತ್ತಿಗಿರಬೇಕಾದ ಪಾವಿತ್ರ್ಯ ಈಗ ಉಳಿದಿಲ್ಲ. ಶಿಕ್ಷಕರಿಗಿರುವ ಗೌರವವೂ ಅಷ್ಟಕ್ಕಷ್ಟೆ. ವೃತ್ತಿ ಗಾಂಭೀರ್ಯ ಕಡಿಮೆಯಾದಂತೆ ವೃತ್ತಿಯಲ್ಲಿ ನೀರಸತೆಯೂ ಹುಟ್ಟಿಕೊಳ್ಳುತ್ತದೆ. ಚಿರಂತನ ಜ್ಞಾನಾಮೃತದ ಬುಗ್ಗೆಯಂತಿರಬೇಕಾದ ಶಿಕ್ಷಕರು ನೀರಿಲ್ಲದ ಕೊಳಗಳಂತಾಗಿದ್ದಾರೆ. ಬಹುಜನ ಶಿಕ್ಷಕರು ಹೀಗಿದ್ದಾಗ ಗುರುಶಿಷ್ಯರ ಆತ್ಮೀಯ ಸಂಬಂಧ ಹೇಗೆ ಹುಟ್ಟಬೇಕು ?

ಇಂದು ಶೈಕ್ಷಣಿಕ ಸಂಸ್ಥೆಗಳ ಪ್ರಭಾವಕ್ಕಿಂತ ಹೊರಜಗತ್ತಿನ ಪ್ರಚಾರ ಸಾಧನಗಳ ಪ್ರಭಾವ ಹೆಚ್ಚಾಗುತ್ತಿದೆ. ಸಿನೀಮಾ, ರೇಡಿಯೊ, ಪತ್ರಿಕೆ, ಪ್ರಚಾರಗಳು ಶಿಕ್ಷಕರ ಪ್ರಭಾವವನ್ನು ಅಳಿಸಿಹಾಕುತ್ತಿವೆ. ಇಂಥ ಆಧುನಿಕ ಪ್ರಭಾವಗಳಿಗೆ ಎದುರಾಗಿ ನಿಂತು ತನ್ನ ವ್ಯಕ್ತಿತ್ವ ಉಳಿಸಿಕೊಳ್ಳುವ ಶಿಕ್ಷಕರು ಬಹು ಕಡಿಮೆ. ಶಾಲೆ–ಕಾಲೇಜುಗಳಲ್ಲಿ ಸಿಗುವ ಜ್ಞಾನ ಇಂದು ಪೇಟೆಯಲ್ಲಿಯೂ ಸಿಗುತ್ತದೆ ಎಂದಾಗ ಗುರುಶಿಷ್ಯರ ಸಂಬಂಧವನ್ನು ಅಪೇಕ್ಷಿಸುವದಾದರೂ ಹೇಗೆ? ಪುಸ್ತಕಪ್ರಧಾನ ಶಿಕ್ಷಣಪದ್ಧತಿಯು ಮುಂದುವರಿಯುವವರೆಗೂ ಇಂಥ ಸ್ಥಿತಿ ಇರುವಂಥದ್ದೇ.

(೩) **ಶೈಕ್ಷಣಿಕ ಹೊಣೆಗಾರಿಕೆ :** ಹಾಗಾದರೆ ಇಂಥ ಗೊಂದಲಮಯ ಶೈಕ್ಷಣಿಕ ಸ್ಥಿತಿಗತಿಗೆ ಯಾರು ಹೊಣೆ? ಇದರ ಮೀಮಾಂಸೆಯನ್ನು ಬೆಳೆಸಿದಷ್ಟೂ ಬೆಳೆಯಬಹುದು. ಆದರೂ ಸಂಬಂಧಿಸಿದ ವ್ಯಕ್ತಿ–ಸಂಸ್ಥೆ–ಸರಕಾರಗಳ ಹೊಣೆಯನ್ನು ಅಲ್ಲಗಳೆಯುವಂತಿಲ್ಲ. ರಾಷ್ಟ್ರಕ್ಕೊಂದು ರಾಜಕೀಯ ನೀತಿಯಿರುವಂತೆ, ಶೈಕ್ಷಣಿಕ ನೀತಿಯಿರುವದು ಅನಿವಾರ್ಯವಾಗಿದೆ. ಸ್ವಾತಂತ್ರ್ಯಕ್ಕಾಗಿ ಪರಿತಪಿಸಿದ ಭಾರತೀಯರು, ಸ್ವಾತಂತ್ರ್ಯ ಸಿಕ್ಕ ಮರುದಿನವೇ ನಮ್ಮ ದೇಶದ ಶೈಕ್ಷಣಿಕ ನೀತಿಯನ್ನು ನಿರ್ಧರಿಸಿ ದೇಶವ್ಯಾಪೀ ಯೋಜನೆಯನ್ನು ಹಮ್ಮಿಕೊಳ್ಳಬೇಕಾಗಿತ್ತು. ಈ ಇಪ್ಪತ್ತೆಂಟು ವರುಷಗಳವರೆಗೂ ಪರಿಸ್ಥಿತಿಯನ್ನು ಇದ್ದಂತೆ ಇರಗೊಟ್ಟುದೇ ಮಹಾಪರಾಧವಾಗಿದೆ. ಇದರಿಂದ ರಾಷ್ಟ್ರಭಾಷಾ ಸಮಸ್ಯೆ, ಇಂಗ್ಲೀಷಿನ ಸ್ಥಾನಮಾನ, ಪ್ರಾಥಮಿಕ–ಮಾಧ್ಯಮಿಕ ವಿಶ್ವವಿದ್ಯಾಲಯ ಶಿಕ್ಷಣದ ಸಂಯೋಜನೆ, ವೃತ್ತಿಶಿಕ್ಷಣ, ನೈತಿಕ ಶಿಕ್ಷಣ ಮುಂತಾದ ವಿಷಯಗಳು ಇತ್ಯರ್ಥವಾಗದೆ ಅವು ವಿಷವೃಕ್ಷವಾಗಿ ಬೆಳೆದುನಿಂತಿವೆ. ಶಿಕ್ಷಣವನ್ನು ಕೆಲವು ವರುಷ ಕೇಂದ್ರಾಧೀನ ವಿಷಯವನ್ನಾಗಿ ಮಾಡಿದ್ದರೆ, ಬೃಹತ್ ಸಮಸ್ಯೆಗಳನ್ನು ಸುಲಭವಾಗಿ ಬಿಡಿಸಬಹುದಾಗಿತ್ತು. ಶಿಕ್ಷಣವನ್ನು ರಾಜ್ಯ ವಿಷಯವನ್ನಾಗಿ ಮಾಡಿ ಸಮಸ್ಯೆಗಳನ್ನು

ನೂರ್ಮಡಿ ಹೆಚ್ಚಿಸಿದಂತಾಗಿದೆ. ಆಳರಸರಾಗಿದ್ದ ಬ್ರಿಟಿಷರು ತಮ್ಮ ಹೊಣೆಗಾರಿಕೆಯನ್ನು ಹಾರಿಸಿಕೊಳ್ಳಲು ಆಯ್ದುಕೊಂಡಿದ್ದ ಸಹಾಯಧನ ಶಿಕ್ಷಣಪದ್ಧತಿಯನ್ನೇ ಅನುಸರಿಸಹತ್ತಿದ್ದರಿಂದ, ಶಿಕ್ಷಣವು ಹಲವಾರು ಜಾತಿ-ಮತ-ಪಂಥಗಳ ಪ್ರಭಾವಕ್ಕೆ ಸಿಕ್ಕು ತನ್ನ ಪಾವಿತ್ರ್ಯವನ್ನೇ ಕಳೆದುಕೊಂಡಿದೆ. ಈ ಹೊಣೆಗೇಡಿತನದ ಸಹಾಯಧನ ಪದ್ಧತಿಯನ್ನೇ ಇಂದಿಗೂ ಮುಂದುವರಿಸಿದ್ದೇವೆ. ಹಣಕಾಸಿನ ಅಡಚಣೆಯಲ್ಲಿ ಕಾರ್ಯನಿರ್ವಹಿಸುವ ಸಂಘ-ಸಂಸ್ಥೆಗಳು ಶೈಕ್ಷಣಿಕ ಆದರ್ಶಗಳನ್ನು ಎತ್ತಿಹಿಡಿಯಲಾರವು. ಶಿಕ್ಷಕರು ಜೀತದ ಆಳಾಗಿ, ಅವರು ಕೊಟ್ಟಷ್ಟು ಸ್ವೀಕರಿಸಿ ಅಧ್ಯಾಪನಗೈಯುವ ಸ್ಥಿತಿ ನಿರ್ಮಾಣವಾಯಿತು. ಶಾಶ್ವತ ಸೇವಾ ನಿಯಮಗಳು ಹುಟ್ಟಿಕೊಳ್ಳಲಿಲ್ಲ. ಇಂಥ ಅಸ್ಥಿರ ವೃತ್ತಿಯಲ್ಲಿ ಕೇವಲ ಅಸಹಾಯಕ ಜನ ಸೇರುವಂತಾಯಿತೇ ಹೊರತು, ನಿಷ್ಠಾವಂತ ಬುದ್ಧಿಜೀವಿಗಳು ಶೈಕ್ಷಣಿಕ ಕ್ಷೇತ್ರದಿಂದ ಹೊರಗುಳಿಯುವಂತಾಯಿತು. ಸರಕಾರವೇ ಕುಳಿತು, ಶಿಕ್ಷಣವನ್ನು ವ್ಯಾಪಾರಿ ವೃತ್ತಿಯನ್ನಾಗಿ ಪರಿವರ್ತಿಸಿದ್ದರಿಂದ, ವ್ಯಾವಹಾರಿಕ ಲೋಪ-ದೋಷಗಳೆಲ್ಲ ಶಿಕ್ಷಣ ಪ್ರಪಂಚದಲ್ಲಿ ನುಸುಳಿಕೊಂಡವು. ಇಂದಿನ ಶಿಕ್ಷಣ ಸಮಸ್ಯೆಗೆ ನೇರವಾದ ಉಪಾಯವಿದ್ದರೆ, ಮೊದಲು ಶಿಕ್ಷಣವನ್ನು ಕೇಂದ್ರ ಹಾಗು ಪ್ರಾಂತಿಕ ಸರಕಾರಗಳ ಮುಖ್ಯ ಹೊಣೆಗಾರಿಕೆಯ ವಿಷಯವನ್ನಾಗಿ ಮಾಡಬೇಕು.

ಕೇಂದ್ರ ಹಾಗು ರಾಜ್ಯಸರಕಾರಗಳಲ್ಲಿ ಶೈಕ್ಷಣಿಕ ಹೊಣೆ ಹೊರುವ ಅಧಿಕಾರಿಗಳು ಶೈಕ್ಷಣಿಕ ತಜ್ಞರಿರಬೇಕು. ಐ. ಎ. ಎಸ್., ಐ. ಪಿ. ಎಸ್., ಸೇವೆಗಳಿರುವಂತೆ ಐ. ಈ. ಎಸ್. ಸೇವಾಪಡೆಯನ್ನು ನಿರ್ಮಿಸಬೇಕು. ಶೈಕ್ಷಣಿಕ ವೆಚ್ಚವನ್ನು ಜನಸಂಖ್ಯೆ ಹಾಗು ಮಕ್ಕಳ ಸಂಖ್ಯೆಯ ಹೆಚ್ಚಳವನ್ನು ಅನುಲಕ್ಷಿಸಿ ಹೆಚ್ಚಿಸುತ್ತ ಹೋಗಬೇಕು. ಶೈಕ್ಷಣಿಕ ಆಡಳಿತಗಾರರು ಕಂದಾಯ ಖಾತೆಯ ಅಧಿಕಾರಿಗಳಂತೆ ಆಡಳಿತ ನಿರ್ವಹಿಸಿದರೆ ನಡೆಯಲಾರದು. ಮಕ್ಕಳ ಶಿಕ್ಷಣಾಡಳಿತವನ್ನು ನಿರ್ವಹಿಸುವ ಅವರು ಹೊಸ ಜನಾಂಗ ನಿರ್ಮಿಸುವ ದ್ರಷ್ಟಾರರಾಗಿರಬೇಕು. ಪ್ರತಿ ಮಗುವೂ ತನ್ನ ಪರಿಸರದಲ್ಲಿ ಯೋಗ್ಯ ಶಿಕ್ಷಣ ಪಡೆಯುವಂತೆ ನೋಡಿಕೊಳ್ಳಬೇಕು. ಬುದ್ಧಿವಂತ ಮಕ್ಕಳನ್ನು ಗುರುತಿಸಿ ಅವರಿಗೆ ಹೆಚ್ಚಿನ ಶಿಕ್ಷಣ ದೊರೆಯುವಂತೆ ವ್ಯವಸ್ಥೆಗೈಯಬೇಕು. ಮಕ್ಕಳ ಅಭಿರುಚಿಯನ್ನು ಗಮನಿಸಿ, ಅವರವರ ಅಭಿರುಚಿಯಂತೆ, ವೃತ್ತಿಮಾರ್ಗದರ್ಶನಗೈಯಬೇಕು. ಯಾವ ಶಿಕ್ಷಿತ ತರುಣನೂ ನಿರುದ್ಯೋಗಿಯಾಗಿ ಉಳಿಯದಂತೆ, ಬೃಹದ್ ಯೋಜನೆಗಳನ್ನು ಹಮ್ಮಿಕೊಳ್ಳಬೇಕು. ಸರಕಾರ, ಶಿಕ್ಷಣಸಂಸ್ಥೆ, ಉದ್ಯೋಗಕ್ಷೇತ್ರಗಳಲ್ಲಿ ಶಾಶ್ವತ ಸಂಬಂಧವನ್ನು ಪ್ರಸ್ತಾಪಿಸಬೇಕು. ಇಂದು ಈ ಸ್ಥಿತಿ ಇರದ್ದರಿಂದಲೇ ಶಿಕ್ಷಿತ ಜನತೆಯಲ್ಲಿ ನಿರುದ್ಯೋಗವು ತಾಂಡವವಾಡುತ್ತಿದೆ.

ಆಧುನಿಕ ಶಿಕ್ಷಣವು ಬಹುವ್ಯಾಪಿಯಾಗಿರುವದರಿಂದ ಪಾಲಕರು ತಮ್ಮ ಹೊಣೆಗಾರಿಕೆಯನ್ನು ಹಾರಿಸಿಕೊಳ್ಳಲಾರರು. ಬಹುಜನ ಪಾಲಕರಿಗೆ ತಮ್ಮ ಮಕ್ಕಳು ಶಾಲೆ-ಕಾಲೇಜುಗಳಲ್ಲಿ ಏನನ್ನು ಓದುತ್ತಿದ್ದಾರೆ, ಹೇಗೆ ಓದುತ್ತಿದ್ದಾರೆ, ಎಂಥವರ ಸಹವಾಸದಲ್ಲಿ ಕಾಲಕಳೆಯುತ್ತಿದ್ದಾರೆ, ಅವರ ಪ್ರಗತಿ ಎಂತಿದೆ-ಇವೇ ಮುಂತಾದ ವಿಷಯಗಳು ಗೊತ್ತಿರುವದಿಲ್ಲ. ಮಕ್ಕಳಿಗೆ ಹಣ, ಬಟ್ಟೆಬರೆಗಳನ್ನು ಪೂರೈಸಿದ ಮಾತ್ರಕ್ಕೆ ಅವರ ಹೊಣೆಗಾರಿಕೆ ಮುಗಿಯಲಿಲ್ಲ. ಪಾಲಕರು ಶೈಕ್ಷಣಿಕ ಸಂಸ್ಥೆಗಳೊಡನೆ ಮತ್ತು ಶಿಕ್ಷಕರೊಡನೆ ನೇರ ಸಂಪರ್ಕವಿಟ್ಟುಕೊಂಡದ್ದೇ ಆದರೆ ವಿದ್ಯಾರ್ಥಿಗಳ ಇಂದಿನ ಸ್ವೇಚ್ಛಾಚಾರವೃತ್ತಿಗೆ ಕಡಿವಾಣ ಹಾಕಿದಂತಾಗುತ್ತದೆ.

ಹಾಗೆಯೇ ಶಿಕ್ಷಕವೃತ್ತಿಯನ್ನು ಅವಲಂಬಿಸುವವರು, ಉಳಿದೆಡೆಗೆ ಉದ್ಯೋಗಾವಕಾಶಗಳು ಸಿಗುತ್ತಿಲ್ಲ ಎಂಬ ಕಾರಣದಿಂದ ಈ ವೃತ್ತಿಯನ್ನು ಕೈಕೊಳ್ಳಬಾರದು. ಸತತ ವ್ಯಾಸಂಗಪ್ರಿಯರೇ ಶಿಕ್ಷಕವೃತ್ತಿಯನ್ನು ಆಯ್ದುಕೊಳ್ಳಬೇಕು. ಮಕ್ಕಳ ಮನಸ್ಸನ್ನು ಗೆದ್ದು ಅವರಲ್ಲಿ ಚಿರಂತನ ವಿಶ್ವಾಸ-ಪ್ರೇರಣೆಗಳನ್ನು ಹುಟ್ಟಿಸುವ ಶಿಕ್ಷಕನಿಗೆ ಸಮಾಜದಲ್ಲಿ ಗೌರವದ ಸ್ಥಾನವಿದ್ದೇ ಇದೆ. ಗೌರವವನ್ನು ಕಾಡಿ-ಬೇಡಿ ಪಡೆಯುವ ಇಂದಿನ ವ್ಯಾಮೋಹ ಮೊದಲು ತೊಲಗಬೇಕು. ಶಿಕ್ಷಕರು ತಮ್ಮ ಉಪಯುಕ್ತತೆಯನ್ನು ಉಳಿಸಿಕೊಂಡಷ್ಟೂ ಗೌರವ-ಸಹಾನುಭೂತಿಗಳು ಅವರಿದ್ದಲ್ಲಿಗೇ ಹರಿದುಬರುತ್ತವೆ. ಇಂದು ಅರ್ಜಿ ಹಾಕಿ, ರಾಷ್ಟ್ರಪ್ರಶಸ್ತಿ, ರಾಜ್ಯಪ್ರಶಸ್ತಿಗಾಗಿ ಕಚ್ಚಾಡುವ ಹುಚ್ಚುತನ ನಿಲ್ಲಬೇಕು. ಶಿಕ್ಷಕರಾಗಿರುವವರು ಶಿಕ್ಷಣವೃತ್ತಿಯನ್ನು ಒಂದು ರಾಷ್ಟ್ರೀಯ ಆಹ್ವಾನವೆಂದು ಸ್ವೀಕರಿಸಬೇಕು. ಹೊಸ ಜನಾಂಗವನ್ನು ಸನ್ನದ್ಧಗೊಳಿಸುವ ಮಹಾ ಹೊಣೆಗಾರಿಕೆಯನ್ನು ಎದುರಿಸುವ ಧೈರ್ಯ-ಸಾಹಸಗಳಿದ್ದರೆ ಮಾತ್ರ ಶಿಕ್ಷಕರು ಯಶಸ್ವಿಯಾಗುತ್ತಾರೆ. ಆಧುನಿಕ ಸೌಕರ್ಯಗಳ ಪ್ರಚಾರಯುಗದಲ್ಲಿಯೂ ಶಿಕ್ಷಕನ ಮಾರ್ಗದರ್ಶನ ಅತ್ಯಾವಶ್ಯವಾಗಿದೆ ಎಂಬ ಅಭಿಪ್ರಾಯ ತರುಣರಲ್ಲಿ ಹಾಗು ಪಾಲಕರಲ್ಲಿ ಮೂಡಿಬರಬೇಕು.

ಅದರಂತೆ ಸಾಮಾಜಿಕ ಹಾಗು ರಾಷ್ಟ್ರೀಯ ಮುಂದಾಳುಗಳು ತರುಣ ಜನಾಂಗಕ್ಕೆ ಆದರ್ಶ ಹಾಕಿಕೊಡುವಲ್ಲಿ ಎಚ್ಚರಿಕೆ ವಹಿಸಬೇಕು. ಇಂದು ಇಂಥ ಯಾವ ಆದರ್ಶಗಳೂ ನಮ್ಮ ತರುಣರಲ್ಲಿ ಇರದ್ದರಿಂದ ಅವರು ಯಾರನ್ನೂ ಗೌರವಿಸುತ್ತಿಲ್ಲ. ಮಕ್ಕಳ ಶೀಲಸಂವರ್ಧನೆಗೆ ಅವರ ಪರಿಸರ, ಗುರುಹಿರಿಯರು, ಮುಂದಾಳುಗಳು ಕಾರಣೀಭೂತರಾಗುವಷ್ಟು ಪುಸ್ತಕೀಯ ಓದು ಆಗಲಾರದು. ಸಾಮಾಜಿಕ ಸಂಸ್ಕಾರವಿಲ್ಲದೆ ವ್ಯಕ್ತಿಗತ ಸಂಸ್ಕಾರ ಗಟ್ಟಿಗೊಳ್ಳಲಾರದು. ಮನೆ,

ಮಠ, ವಿದ್ಯಾಲಯಗಳ ಪಾತ್ರ ಹಿರಿದಾಗಿದೆ. ಒಬ್ಬ ರಾಮ ಮತ್ತೊಬ್ಬ ಧರ್ಮ ಇರದೇಹೋಗಿದ್ದರೆ ರಾಮಾಯಣ, ಮಹಾಭಾರತಗಳಿಗೆ ಬೆಲೆಯಿರುತ್ತಿದ್ದಿಲ್ಲ; ಭಾರತದ ಪ್ರಾಚೀನ ಸಂಸ್ಕೃತಿಯನ್ನು ಯಾರೂ ಪ್ರಶಂಸಿಸುತ್ತಿದ್ದಿಲ್ಲ.

(೪) **ನವ್ಯಸಮಾಜ ನಿರ್ಮಾಣ** ಕೊನೆಯದಾಗಿ ನಮ್ಮ ರಾಜ್ಯ ಘಟನೆಯ ಆಶೋತ್ತರಗಳನ್ನಷ್ಟು ಗಮನಿಸೋಣ. ನಮ್ಮ ಸಂವಿಧಾನ ನಿರ್ಮಾಪಕರು ಕೆಲವೊಂದು ಮಹತ್ವದ ಸಂಗತಿಗಳನ್ನು ಆಧರಿಸಿ ನಮ್ಮ ದೇಶಕ್ಕೊಂದು ರಾಜ್ಯ ಘಟನೆಯನ್ನು ಒದಗಿಸಿದ್ದಾರೆ. ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕವಾಗಿ ಭಾರತವನ್ನು ಸುಭದ್ರಗೊಳಿಸುವದು ಅವರ ಮಹತ್ವದ ಗುರಿಯಾಗಿತ್ತು. ಬ್ರಿಟಿಷ ಆಡಳಿತದಿಂದ ಉದ್ಭೂತವಾದ ಎಷ್ಟೋ ಅನಿಷ್ಟಗಳನ್ನು ಘಟನಾತ್ಮಕವಾದ ರೀತಿಯಲ್ಲಿ ನಿವಾರಿಸಬೇಕಾಗಿತ್ತು. ಭಾರತದಲ್ಲಿ ನೆಲಸಿರುವ ಸಕಲ ಧರ್ಮ-ಮತಾನುಯಾಯಿಗಳನ್ನು ಒಂದು ಧ್ವಜದಡಿಯಲ್ಲಿ ತಂದು ಮೊದಲು ರಾಜಕೀಯ ಸ್ಥಿರತೆಯನ್ನು ಸ್ಥಾಪಿಸಬೇಕಾಗಿತ್ತು. ಭಾರತವು ವಿಭಾಗವಾದ ಸನ್ನಿವೇಶದಲ್ಲಿ ಹುಟ್ಟಿಕೊಂಡ, ಜಾತೀಯ ದ್ವೇಷವನ್ನು ಶಮನಗೊಳಿಸಬೇಕಾಗಿತ್ತು. ಅದಕ್ಕಾಗಿ ನಮ್ಮ ರಾಜ್ಯಘಟನೆಯನ್ನು ವ್ಯಾವಹಾರಿಕ ಸತ್ಯವನ್ನಾಧರಿಸಿ ರಚಿಸಲಾಯಿತು. ಸಂವಿಧಾನ ತಜ್ಞರು ಸಧ್ಯದ ರಾಜ್ಯ ಘಟನೆಯಲ್ಲಿ ಅವೆಷ್ಟೋ ಲೋಪದೋಷಗಳನ್ನು ಎತ್ತಿತೋರಿಸಬಹುದು. ಭಾರತೀಯರ ಸಮಗ್ರ ಜೀವನ ಧರ್ಮವನ್ನು ಅದು ಪ್ರತಿಬಿಂಬಿಸಲಿಕ್ಕಿಲ್ಲ. ಆದರೆ ಕಾಲಾಂತರದಲ್ಲಿ ಅವುಗಳನ್ನು ಜನತೆಯ ಇಚ್ಛೆಯಂತೆ ಸರಿಪಡಿಸಬಹುದು. ರಾಜ್ಯಘಟನೆ ಇರುವದು ನಮ್ಮ ಬಾಳನ್ನು ಸರ್ವಾಂಗಸುಂದರಗೊಳಿಸುವದಕ್ಕಾಗಿ ಮಾತ್ರ. ರಾಜ್ಯಘಟನೆಗಾಗಿಯೇ ನಾವು ಬಾಳಬೇಕಾಗಿಲ್ಲ. ಸಾರ್ವಭೌಮಾಧಿಕಾರ ಹೊಂದಿದ ಜನತೆ ಸಧ್ಯದ ಘಟನೆಯನ್ನು ತಮಗೆ ಸರಿಕಂಡಂತೆ ಮಾರ್ಪಡಿಸಿಕೊಳ್ಳಲು ಯಾವಾಗಲೂ ಸಮರ್ಥವಿದೆ.

ಈ ಹಿನ್ನೆಲೆಯಲ್ಲಿ ಸಧ್ಯದ ರಾಜ್ಯಘಟನೆಯು ಕೊಡಮಾಡಿದ ಪ್ರಜಾಪ್ರಭುತ್ವ ಜಾತ್ಯತೀತ ರಾಜ್ಯ, ಸಮಾಜವಾದ, ಆರ್ಥಿಕಾಭಿವೃದ್ಧಿ ಸರಿಸಮಾನ ಅವಕಾಶ, ರಾಷ್ಟ್ರೀಯ ಐಕ್ಯ, ವಿಜ್ಞಾನ ಮತ್ತು ತಾಂತ್ರಿಕಜ್ಞಾನಗಳ ಬೆಳವಣಿಗೆ, ಸಾಂಸ್ಕೃತಿಕ ಪುನರುಜ್ಜೀವನ ಮುಂತಾದ ಅಂಶಗಳನ್ನು ನಾವು ಅಂಗೀಕರಿಸಬೇಕಾಗಿದೆ. ಈ ದಿಶೆಯಲ್ಲಿ ಶಿಕ್ಷಣದ ಪಾತ್ರ ಅದ್ವಿತೀಯವಾಗಿದೆ.

ಭಾರತೀಯರ ಜೀವನ ನೀತಿಗೆ ಪ್ರಜಾಪ್ರಭುತ್ವವು ಒಂದು ಹೊಸ ಪ್ರಯೋಗವಾಗಿದೆ. ಧರ್ಮ ನ್ಯಾಯ ನೀತಿಗಳನ್ನು ಆಧರಿಸಿದ ಸಮಾಜವು ಬಹುಮತವೆಂಬ ಹೊಸ ತಂತ್ರವನ್ನಾಧರಿಸಿ ಮುನ್ನಡೆಯಬೇಕಾಗಿದೆ. ಸಾಮಾಜಿಕ ನ್ಯಾಯ

ನಿಷ್ಠೆ, ರೂಢಿ, ಸಂಪ್ರದಾಯ, ಸದಾಚಾರ–ಸದ್ವರ್ತನೆ, ತ್ಯಾಗ, ವೈರಾಗ್ಯಗಳನ್ನು ಬಹುಮತವೆಂಬ ಬಿರುಗಾಳಿಗೆ ಮೈಯೊಡ್ಡಿಸಬೇಕಾಗಿದೆ. ಒಪ್ಪಿರಲಿ, ತಪ್ಪಿರಲಿ ಜನಾಭಿಪ್ರಾಯವೆಂಬ ಹೆಸರಿನಲ್ಲಿ ನಮಗೆ ಒಗ್ಗದ ಆಚಾರ–ವಿಚಾರಗಳನ್ನು ಮೈಗೂಡಿಸಿಕೊಳ್ಳಬೇಕಾಗಿದೆ. ಇಂಥ ಪರಿಸ್ಥಿತಿಯಲ್ಲಿ ನಮ್ಮ ಸಾಮಾಜಿಕ ಮೌಲ್ಯಗಳನ್ನು ಉಳಿಸಿಕೊಂಡು, ಪ್ರಜಾಪ್ರಭುತ್ವವನ್ನು ಮುನ್ನಡೆಸಬೇಕಾಗಿದೆ. ಭಾರತೀಯ ನಾಗರಿಕರಿಗೆ ಇದೊಂದು ಹೊಸ ಆಹ್ವಾನ. ಇದನ್ನು ಯಶಸ್ವಿಯಾಗಿ ಎದುರಿಸಬೇಕಾಗಿದ್ದರೆ ಭಾರತದ ಭಾವೀ ನಾಗರಿಕರು ಮೊದಲು ನಮ್ಮ ರಾಷ್ಟ್ರೀಯ ಆದರ್ಶಗಳನ್ನು ಮೈಗೂಡಿಸಿಕೊಳ್ಳುವಂತೆ ಪ್ರಯತ್ನಿಸಬೇಕು. ಇಂಥ ಆದರ್ಶಗಳಿಗೆ ಚ್ಯುತಿಬರದಂತೆ ಪ್ರಜಾಪ್ರಭುತ್ವವನ್ನು ಮುನ್ನಡೆಸುವ ದೇಶವ್ಯಾಪಿ ಶಿಕ್ಷಣವನ್ನು ಹಮ್ಮಿಕೊಳ್ಳಬೇಕು. ನೂರಾರು ವರ್ಷಗಳಿಂದ ಪ್ರಜಾಪ್ರಭುತ್ವದಲ್ಲಿ ಮುನ್ನಡೆದ ಇಂಗ್ಲಂಡ ದೇಶವು, ತನ್ನ ರಾಷ್ಟ್ರೀಯ ಸಂಪ್ರದಾಯಗಳಿಗೆ ಚ್ಯುತಿಬರದಂತೆ ನಡೆದುಕೊಂಡದ್ದನ್ನು ಸ್ಪಷ್ಟವಾಗಿ ಗಮನಿಸಬೇಕು. ಮತಾಧಿಕಾರ ಹೊಂದಿದ ನಾಗರಿಕರು ತಮ್ಮ ದೇಶದ ಶಾಸನಾಂಗ ಕೈಕೊಳ್ಳುವ ನಿರ್ಣಯಗಳನ್ನು, ಕಣ್ಣಲ್ಲಿ ಕಣ್ಣಿಟ್ಟು ಗಮನಿಸಿ, ಸಾವಿರಾರು ವರುಷಗಳಿಂದ ಕಾಯ್ದುಕೊಂಡು ಬಂದ ನೈತಿಕ ಮೌಲ್ಯಗಳನ್ನು ರಕ್ಷಿಸಲು ಹೋರಾಡಬೇಕು. ಈ ಕಾರ್ಯ ಈಡೇರಬೇಕಾದರೆ ಸದುದ್ದೇಶಪೂರ್ಣ ಶಿಕ್ಷಣವನ್ನೇ ಅನುಸರಿಸಬೇಕಾಗುತ್ತದೆ. ಒಮ್ಮೆ ತಾವು ಸಂಸ್ಕೃತಿಯ ಪೀಯೂಷವನ್ನು ಕುಡಿದು ಸಂತೃಪ್ತವಾದ ಜನಾಂಗವು ಪ್ರಜಾಪ್ರಭುತ್ವವನ್ನು ಬೇಕಾದಂತೆ ನಿರ್ವಹಿಸಬಹುದು.

ಜಾತ್ಯತೀತ ರಾಜ್ಯವೆನ್ನುವ ಮಾತೂ ಕೇವಲ ಆಡಳಿತಾತ್ಮಕವಾದ ಒಂದು ನೀತಿ. ಸಕಲ ಧರ್ಮಗಳನ್ನು ಸಮಾನ ದೃಷ್ಟಿಯಿಂದ ಕಂಡು, ಸಕಲ ನಾಗರಿಕರಿಗೆ ಸಮಾನ ಅವಕಾಶಗಳನ್ನು ಒದಗಿಸಬೇಕೆಂಬುದೇ ಅದರ ಇಂಗಿತಾರ್ಥ. ಆದರೆ ದುರ್ದೈವದಿಂದ ಈ ಮಾತನ್ನು ವಿಪರ್ಯಾಸಗೊಳಿಸಿ, ಪ್ರತಿಯೊಂದನ್ನೂ ಜಾತೀಯವೆಂಬ ಹೆಸರಿನಿಂದ ತೆಗಳುವ ಪ್ರಯತ್ನ ನಡೆದಿದೆ. ಇದರಿಂದಾಗುವ ಒಟ್ಟಾರೆ ಪರಿಣಾಮವು ಮಾತ್ರ ಭಯಂಕರವಾಗಬಹುದು. ಭಾರತೀಯ ಸಮಾಜ ಜೀವನಕ್ಕೆ ಧರ್ಮವೇ ಅಡಿಗಲ್ಲಾಗಿದೆ. ಪಾಶ್ಚಾತ್ಯರ ಅಭಿಪ್ರಾಯದಂತೆ ಭಾರತೀಯರಿಗೆ ಧರ್ಮವು ಕೇವಲ ಕರ್ಮಕಾಂಡವಾಗಿಲ್ಲ. ಭಾರತೀಯರು ಸಕಲ ಮಾನವೀಯ ವ್ಯವಹಾರಗಳನ್ನು ಧರ್ಮದ ಸೂಕ್ಷ್ಮ ತಂತುವಿನಿಂದ ಹೆಣೆದಿದ್ದಾರೆ. ಸಾಮಾಜಿಕ ನೀತಿ ಮೌಲ್ಯಗಳು ಧರ್ಮಸಮ್ಮತವಾದ ವಿಧಿ ವಿಧಾನಗಳಾಗಿವೆ. ಸಕಲ ಮಾನವರಿಗೆ ಲೇಸನೇ ಬಯಸುವ ಧಾರ್ಮಿಕ ವಿಧಿ

ನಿಯಮಗಳು ನಮಗೆ ತ್ಯಾಜ್ಯವಾಗಿಲ್ಲ. ಇಂಥ ವಿಶಾಲ ಅರ್ಥದಲ್ಲಿ ಧರ್ಮದ ಸ್ಥಾನವನ್ನು ನಾವು ನಿರ್ಣಯಿಸಬೇಕಾಗಿದೆ. ರಾಜಕೀಯ ಒತ್ತಡಕ್ಕೆ ಒಳಗಾಗಿ ಇಂಥ ಧಾರ್ಮಿಕ ಮೂಲಭೂತ ಸತ್ಯಗಳನ್ನು ಬದಿಗೊತ್ತಿದರೆ ನಮಗಾರಿಗೂ ಕ್ಷೇಮಕರವಾಗದು. ಈ ದ್ವಂದ್ವ ನೀತಿಯನ್ನು ಸ್ಪಷ್ಟಗೊಳಿಸಿ ನಮ್ಮ ಸಧ್ಯದ ಸಾಮಾಜಿಕ ಜೀವನವನ್ನು ನಿರ್ಮಲಗೊಳಿಸಬೇಕಾಗಿದ್ದರೆ, ನಾವು ಸುಯೋಗ್ಯ ಶಿಕ್ಷಣ ಕ್ರಮವನ್ನೇ ಅನುಸರಿಸಬೇಕು.

ಸಮಾಜವಾದದ ಮೂಲಕ ಆರ್ಥಿಕಾಭಿವೃದ್ಧಿಯನ್ನು ಸಾಧಿಸಬೇಕೆನ್ನುವ ಮಾತೂ ಅಷ್ಟೇನೂ ಹೊಸದಲ್ಲ. ಸಾವಿರಾರು ವರುಷಗಳಿಂದ ನಮ್ಮ ದಾರ್ಶನಿಕರು, ಶರಣರು, ಸಂತರು ತಮ್ಮ ಅಮೃತವಾಣಿಯಿಂದ ಈ ಮಾತನ್ನು ಹೇಳುತ್ತಲೇ ಬಂದಿದ್ದಾರೆ. ನಾನು ನನ್ನದೆಂಬ ಅಹಂಭಾವ ತೊಲಗಿಸುವ ಸಲುವಾಗಿಯೇ ಗೀತೆ ಉಪನಿಷತ್ತುಗಳು ಹುಟ್ಟಿಕೊಂಡವು. ರಶಿಯಾ, ಚೀನಾಗಳಲ್ಲಿ ಸಮತಾವಾದವನ್ನು ರಕ್ತಪಾತದಿಂದ ಸ್ಥಾಪಿಸಿದ್ದರೆ ಭಾರತೀಯರು ಶಾಂತಿ–ಅಹಿಂಸೆಗಳಿಂದ ಸ್ಥಾಪಿಸಬಹುದು. ಭೂತದಯೆ, ದಾನ, ಧರ್ಮಗಳಂಥ ನೈತಿಕ ಸಿದ್ಧಾಂತಗಳು ಇನ್ನೂ ಜೀವ ಹಿಡಿದುಕೊಂಡು ನಿಂತಿವೆ. ಯೋಗ್ಯ ಶಿಕ್ಷಣ ಬಲದಿಂದ ಅವುಗಳನ್ನು ಅಂಗೀಕರಿಸುವ ಪ್ರಯತ್ನ ಆಗಬೇಕಾಗಿದೆ.

ಭಾರತದಲ್ಲಿ ಐಕ್ಯವೇ ಇಲ್ಲವೆಂಬಂತೆ ರಾಷ್ಟ್ರೀಯ ಭಾವೈಕ್ಯವನ್ನುಂಟು ಮಾಡುವ ಪ್ರಯತ್ನಗಳು ದಿನಬೆಳಗೂ ನಡೆಯುತ್ತಿವೆ. ಬಹುಶಃ ಜಾತೀಯ ದಂಗೆಗಳು ಈ ವಿಚಾರಕ್ಕೆ ಕಾರಣಗಳಾಗಿರಬಹುದು. ಪ್ರಜಾಪ್ರಭುತ್ವವನ್ನು ಅಂಗೀಕರಿಸಿ ಸರಿಸಮಾನತೆಗಳಂಥ ಹಕ್ಕುಗಳನ್ನು ಒದಗಿಸಿದ ಭಾರತವು ಯಾವ ಜಾತಿಯನ್ನು ಕಡೆಗಣಿಸಿದೆ ? ಎಲ್ಲರೂ ನೆಮ್ಮದಿಯಿಂದ ಬಾಳಲು ಅವಕಾಶ ಒದಗಿಸಿಕೊಟ್ಟಾಗ ಜಾತಿಯ ಹೆಸರಿನಲ್ಲಿ ಯಾಕೆ ವೈರ ಸಾಧಿಸಬೇಕು ? ವೈರತ್ವದ ಬೀಜ ಬಿತ್ತುವವರು ಸಂತೃಪ್ತ ರಾಜಕಾರಣಿಗಳು. ಮೊದಲು ಅವರನ್ನೇ ನಿರ್ಬಂಧಿಸಬೇಕು. ಉಳಿದುದೆಲ್ಲವೂ ತಾವಾಗಿಯೇ ಸರಿಹೊಂದುವವು. ಭಾರತವನ್ನು ಮಾತೆಯ ರೂಪದಲ್ಲಿ ಕಾಣುವ ಪ್ರತಿಯೊಬ್ಬ ಭಾರತೀಯನು ಇನ್ನೊಬ್ಬನಿಗೆ ಸಮಾನಬಂಧುವಾಗಿದ್ದಾನೆ. ಅಂಥ ಮಾತೃಪ್ರೇಮ ಹಾಗೂ ಭ್ರಾತೃಪ್ರೇಮ ಮಕ್ಕಳಲ್ಲಿ ಚಿಕ್ಕಂದಿನಲ್ಲಿಯೇ ಬೇರೂರುವಂತೆ ಪ್ರಯತ್ನಿಸಬೇಕಾಗಿದೆ.

ಶಿಕ್ಷಣ ಮತ್ತು ಸಂಸ್ಕೃತಿಯ ಸಂಬಂಧವನ್ನು, ಸಧ್ಯದ ಸ್ಥಿತಿಯಲ್ಲಿ ಪರಾಮರ್ಶಿಸುವ ಉದ್ದೇಶದಿಂದ ಇದುವರೆಗೂ (೧) ಸಧ್ಯದ ಶೈಕ್ಷಣಿಕ ಸ್ಥಿತಿಗತಿ, (೨) ರಾಷ್ಟ್ರೀಯ ಜೀವನದ ಆದರ್ಶ, (೩) ಶೈಕ್ಷಣಿಕ ಹೊಣೆಗಾರಿಕೆ ಮತ್ತು

(೪) ನವ್ಯಸಮಾಜ ನಿರ್ಮಾಣವೆಂಬ ನಾಲ್ಕು ಅಂಶಗಳ ಹಿನ್ನೆಲೆಯಲ್ಲಿ ಚರ್ಚಿಸಿದ್ದಾಯಿತು. ಈ ಮೊದಲೇ ಸ್ಪಷ್ಟಪಡಿಸಿದಂತೆ ಶಿಕ್ಷಣ ಮತ್ತು ಸಂಸ್ಕೃತಿಗಳು ಒಂದಕ್ಕೊಂದು ಪೂರಕವಾಗಿ, ಒಂದು ನಾಣ್ಯದ ಎರಡುಮುಖಗಳಾಗಿವೆ. ಭಾರತೀಯ ಸಂಸ್ಕೃತಿಯು ಅವರ ಧರ್ಮ ಸಾಹಿತ್ಯ-ಭಾಷೆ-ಆಚಾರ-ವಿಚಾರಗಳಲ್ಲಿ ಹಾಸುಹೊಕ್ಕಾಗಿ ಹರವಿಕೊಂಡಿದೆ. ಸಧ್ಯದ ಶಿಕ್ಷಣವು ಪರಕೀಯ ಭಾಷೆಯನ್ನು ಆಧರಿಸಿ ಹೊರಟಾಗ ಪರಕೀಯ ಸಾಹಿತ್ಯವನ್ನು ಎದೆಗಪ್ಪಿಕೊಂಡಾಗ, ಪರಕೀಯ ಆಚಾರ ವಿಚಾರಗಳನ್ನು ಅನುಕರಿಸ ಹೊರಟಾಗ ಧರ್ಮವನ್ನೇ ಜನಜೀವನದಿಂದ ದೂರಿಡುವ ಘಟನಾತ್ಮಕ ಪ್ರಯತ್ನ ಮಾಡುತ್ತಿರುವಾಗ ಭಾರತೀಯ ಸಂಸ್ಕೃತಿಯ ಸಂವರ್ಧನೆಯನ್ನು ಅಪೇಕ್ಷಿಸುವದು ಬಹುಸಾಹಸದ ಮಾತಾಗಬಹುದು. ನಮಗೆ ನಮ್ಮ ಸಂಸ್ಕೃತಿಯನ್ನು ಉಳಿಸಿಕೊಳ್ಳುವದಿದ್ದರೆ ನಮ್ಮ ಶಿಕ್ಷಣಕ್ರಮದಲ್ಲಿ ಸೇರಿಕೊಂಡ ಅ-ಭಾರತೀಯ ವಿಚಾರ-ಪರಂಪರೆಗಳನ್ನು ಮೊದಲು ಕೈಬಿಡಬೇಕು.

——

ಹರಿಜನರು ಮತ್ತು ಹಿಂದೂ ಸಮಾಜ

● ಎನ್. ಕೆ. ಕಡೆತೋಟದ

ಈಗ ಹರಿಜನರು ದೇಶದಲ್ಲಿ ವಿವಿಧ ಹೆಸರುಗಳಿಂದ ಕರೆಯಲ್ಪಡುತ್ತಿದ್ದಾರೆ. ಅಸ್ಪೃಶ್ಯರು, ಅಂತ್ಯಜರು ಮತ್ತು ಪರಿಶಿಷ್ಟ ಜಾತಿಯವರು ಎಂದು ಅವರು ಮುಖ್ಯವಾಗಿ ಕರೆಯಲ್ಪಡುತ್ತಾರೆ. 'ಹರಿಜನ' ಎಂಬ ಪದದ ಬಳಕೆ ಮೊಟ್ಟಮೊದಲು ಗುಜರಾತಿನ ಮಹಾತ್ಮಾ ನರಸಿಂಹ ಮೆಹತಾ ಎಂಬುವವರಿಂದ ಆಯಿತು. ಅದೇ ಹೆಸರನ್ನು ಮಹಾತ್ಮಾ ಗಾಂಧಿಯವರು ಪ್ರಚಾರಗೊಳಿಸಿದರು. 'ಹರಿಜನ' ಎಂಬ ಪದದ ಅರ್ಥವು 'ದೇವರ ಜನರು' ಅಥವಾ ದೇವರು ಯಾವಾಗಲೂ ಕರುಣಾಮಯಿ ಎನಿಸಿರುವದರಿಂದ, ದೇವರು ಹೀನವಾಗಿ ಕಾಣಲ್ಪಡುವ ಈ ಜನರಲ್ಲಿ ಇರುತ್ತಾನೆ ಎಂಬ ಅರ್ಥದಲ್ಲಿ ಈ ಜನರನ್ನು ಗಾಂಧೀಜಿಯವರು 'ಹರಿಜನ'ರೆಂದು ಕರೆದರು.

ಹಿಂದೂ ಧರ್ಮಶಾಸ್ತ್ರಗಳಲ್ಲಿ ಹರಿಜನರನ್ನು ಅಸ್ಪೃಶ್ಯರು, ಅಂತ್ಯವಾಸಿಗಳು, ಅಂತ್ಯಜರು, ಶೂದ್ರರು ಎಂದು ಮುಂತಾಗಿ ಕರೆಯಲಾಗಿದೆ. ಸರಕಾರವು ಈ ಜನಾಂಗವನ್ನು ಪರಿಶಿಷ್ಟ ಜಾತಿಯವರೆಂದು ಕರೆದು ಅವರ ಜಾತಿಗಳ ಯಾದಿಯನ್ನು ಸಿದ್ಧಪಡಿಸಿತು. ಹರಿಜನರಿಗೆ ಶೂದ್ರರೆಂದು ಕರೆಯುವದು ಅಷ್ಟು ಸಮಂಜಸವಾಗುವದಿಲ್ಲ. ಯಾಕೆಂದರೆ ಹಿಂದೂ ಧರ್ಮದ ಕೊನೆಯ ವರ್ಣವಾದ ಶೂದ್ರವರ್ಣದವರು ಅಸ್ಪೃಶ್ಯರಾಗಿರಲಿಲ್ಲ. ಕೆಲವೊಂದು ಸಲ ಅವರನ್ನು

ಅಸ್ಪೃಶ್ಯರಂತೆ ಗಣಿಸಿರುವದೂ ಉಂಟು. ಅಂತ್ಯಜ ಮತ್ತು ಅಂತ್ಯವಾಸಿಗಳೆಂಬ ಅವರ ಹೆಸರುಗಳು ಹರಿಜನರ ಕನಿಷ್ಠ ವರ್ಗವನ್ನು ಸೂಚಿಸುತ್ತವೆ. ಆದರೆ ಹಳ್ಳಿ ಪಟ್ಟಣಗಳಿಂದ ದೂರ ವಾಸಿಸುತ್ತಿರುವ ಗಿರಿಜನರು ಅಸ್ಪೃಶ್ಯರೆಂದು ನಿಶ್ಚಿತ ವಾಗಿಯೂ ತಿಳಿದುಕೊಳ್ಳಲ್ಪಡುವದಿಲ್ಲ.

ಈಗ ಘಟನಾತ್ಮಕವಾಗಿ ದೇಶದಲ್ಲಿ ಅಸ್ಪೃಶ್ಯರೆಂಬ ವರ್ಗವೇ ಉಳಿದಿಲ್ಲ. ಯಾಕೆಂದರೆ ನಮ್ಮ ರಾಜ್ಯಘಟನೆಯು ಅಸ್ಪೃಶ್ಯತೆಯನ್ನು ಆಚರಿಸುವದು ಒಂದು ಅಪರಾಧವೆಂದು ಘೋಷಿಸಿದೆ. (Constitution of India, Article 17.) ಆದರೆ ನಿಜ ಪರಿಸ್ಥಿತಿಯನ್ನು ತಿಳಿದಾಗ ಅಸ್ಪೃಶ್ಯತೆಯು ಇನ್ನೂ ದೇಶದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಆಚರಿಸುತ್ತಿರುವದು ಕಂಡುಬರುತ್ತದೆ. ಆದ್ದರಿಂದ Isaacs ಎಂಬ ಮಾನವಶಾಸ್ತ್ರಜ್ಞರು ಹರಿಜನರನ್ನು ಮಾಜಿ ಅಸ್ಪೃಶ್ಯರು (Ex-untouchables of India) ಎಂದು ಕರೆದರು. ಆದರೆ ಅಸ್ಪೃಶ್ಯತೆಯು ಗ್ರಾಮಾಂತರ ಪ್ರದೇಶಗಳಲ್ಲಿ ವ್ಯಾಪಕವಾಗಿ ಆಚರಣೆಯಲ್ಲಿ ಕಂಡುಬರುತ್ತಿರುವದ ರಿಂದ ಅಸ್ಪೃಶ್ಯತೆಯ ನಿವಾರಣೆಯ ಪ್ರಶ್ನೆಯು ಮೊದಲಿನಂತೆಯೇ ಸಜೀವ ವಾಗಿದೆ.

ಹರಿಜನರನ್ನು 'ಆದಿ ಹಿಂದು' ಇಲ್ಲವೆ ಆದಿಜನ ಎಂದು ಕರೆಯ ಬೇಕೆಂಬ ಆಂದೋಲನವು ಅಲ್ಲಲ್ಲಿ ಕಂಡುಬರುತ್ತದೆ. ಡಾ. ಲಿಂಚ್ ಎಂಬ ಅಮೇರಿಕೆಯ ಮಾನವಶಾಸ್ತ್ರಜ್ಞರು ತಮ್ಮ Politics of Untouchability (೧೯೭೪; ೭೧) ಎಂಬ ಗ್ರಂಥದಲ್ಲಿ ಇಂಥ ಒಂದು ಆಂದೋಲನದ ಬಗ್ಗೆ ಹೇಳುತ್ತಾ "ಉತ್ತರ ಪ್ರದೇಶದಲ್ಲಿ ಹರಿಜನರನ್ನು 'ಆದಿ ಹಿಂದೂ'ಗಳೆಂದು ಕರೆಯ ಬೇಕೆಂಬ ಒಂದು ಆಂದೋಲನವೇ ನಡೆದಿತ್ತು. ಆದರೆ ಇದು ಹಿಂದೂ ಜಾತಿಯ ಜನರಿಂದ ಸಹಿಸಲ್ಪಡಲಿಲ್ಲ. ೧೯೩೦ರಲ್ಲಿ ಅಚ್ಯುತ ಆನಂದ ಎಂಬ ಹಿಂದುಳಿದ ಜಾತಿಯ ಸಾಧು ಒಬ್ಬರು 'ಆದಿ ಹಿಂದೂ' ಆಂದೋಲನವನ್ನು ನಡೆಯಿಸಿದರು. ಈ ಆಂದೋಲನಕ್ಕೆ ಉತ್ತರಪ್ರದೇಶದ ತುಂಬೆಲ್ಲ ಸಹಕಾರ ದೊರೆತಿತ್ತು. ಕೆಲವೊಂದು ಜನರ ಗುಂಪು ಆಗ್ರಾ ನಗರದಲ್ಲಿ ಈ ಸ್ವಾಮಿಯ ಮುಂದಾಳುತನದಲ್ಲಿ ಆಂದೋಲನವನ್ನು ನಡೆಯಿಸಿದ್ದರು. ಆದರೆ ಹಿಂದೂ ಜಾತಿಯ ಜನರು ಇವರನ್ನು ಅಲ್ಲಿಂದ ಓಡಿಸಿದರೆಂದೂ, ಕಲ್ಲುಗಳಿಂದ ಹೊಡೆಯಲ್ಪಟ್ಟರೆಂದೂ ಹೇಳಲಾಗು ತ್ತಿದೆ. ಇವಕ್ಕೆ ಕಾರಣೀಭೂತರಾದವರೆಂದರೆ ಜಾಟವ-ಕ್ಷತ್ರಿಯ ಆಂದೋಲನದ ಪ್ರಮುಖರೇ ಆಗಿದ್ದರು. ಯಾಕೆಂದರೆ ಅಚ್ಯುತಾನಂದ ಸ್ವಾಮಿಯು ಹರಿಜನರು ಭಾರತದ ಮೂಲನಿವಾಸಿಗಳೆಂದು ವಾದಿಸಿದರೆಂದೂ ಮತ್ತು ಅಸ್ಪೃಶ್ಯತೆಯು

ಅವರ ಮೇಲೆ ಹೇರಲ್ಪಟ್ಟಿದೆ ಎಂದೂ ಮತ್ತು ಅವರ ಆಂದೋಲನವು ತೀವ್ರಗಾಮಿಯಾದುದೆಂದೂ ಜಾಟವ-ಕ್ಷತ್ರಿಯ ಆಂದೋಲನದ ಪ್ರಮುಖರು ಹೇಳಿಕೊಳ್ಳುತ್ತಿದ್ದರು."

ಇಂಥ ಒಂದು ಸಂಗತಿಯು, ಹರಿಜನರು ಆದಿ ಹಿಂದೂಗಳೆಂದು ಹೇಳಿಕೊಳ್ಳುವದು, ಕೇವಲ ಇತ್ತೀಚಿನ ಘಟನೆ ಮಾತ್ರವೇ ಅಲ್ಲ. ದಕ್ಷಿಣ ಭಾರತವಲ್ಲಿ ಹರಿಜನರನ್ನು 'ಆದಿ ಕರ್ನಾಟಕ' ಮತ್ತು 'ಆದಿ ದ್ರಾವಿಡ' ಎಂದು ಕರೆಯಲ್ಪಡುವದು ಸಾಮಾನ್ಯವಾದ ವಿಷಯವಾಗಿದೆ. ಹರಿಜನರಲ್ಲಿಯ ದಂತಕತೆಗಳು ಹರಿಜನರು ಭಾರತದ ಮೂಲನಿವಾಸಿಗಳೆಂಬ ಹೇಳಿಕೆಯನ್ನು ಪುಷ್ಟೀಕರಿಸುತ್ತವೆ. ಮಾದಿಗರು ಜಾಂಬುವಂತ ಎಂಬ ಹೆಸರಿನ ಮೂಲಪುರುಷನಿಂದ ತಮ್ಮ ಪುರಾತನತ್ವವನ್ನು ತೋರಿಸುತ್ತಾರೆ. ಆದ್ದರಿಂದ 'ಆದಿ ಹಿಂದೂ' ಎಂಬ ಹೆಸರನ್ನು ಕರ್ನಾಟಕದ ಹರಿಜನರು ಸಹಿತ ಮುಂದೆ ತರಲು ಪ್ರಯತ್ನಗಳನ್ನು ಅಲ್ಲಲ್ಲಿ ಮಾಡುತ್ತಿದ್ದಾರೆ. ಧಾರವಾಡದ ಒಬ್ಬ ಪ್ರಾಥಮಿಕ ಶಾಲಾ ಶಿಕ್ಷಕರು ಕೇಂದ್ರಮಂತ್ರಿಯಾದ ಒಬ್ಬ ಹರಿಜನ ಮುಂದಾಳುಗಳಿಗೆ ಪತ್ರ ಬರೆದು ಇಂಥ ಒಂದು ಸೂಚನೆಯನ್ನು ಮಾಡಿದ್ದು ನಮ್ಮ ಗಮನಕ್ಕೆ ಬಂದಿತು. ಇಂಥ ಒಂದು ಪ್ರಸಂಗವಲ್ಲಿ ಆ ಶಿಕ್ಷಕರು ಅಧಿಕಾರದಲ್ಲಿರುವ ಹರಿಜನ ಮಂತ್ರಿಗಳಿಂದ ತಮ್ಮ ಹೆಸರಿನಲ್ಲಿ ಬದಲಾವಣೆ ಮಾಡಿಸಿ ತಾವು ತಮ್ಮ ಸಾಮಾಜಿಕ ಸ್ಥಾನಮಾನವನ್ನು ಬದಲಿಸಿಕೊಳ್ಳುವ ಶಕ್ಯತೆ ಇದೆ ಎಂದು ನಂಬಿದ್ದರು.

ಅಸ್ಪೃಶ್ಯತೆ : ಅಸ್ಪೃಶ್ಯತೆಯು ಭಾರತೀಯ ಸಮಾಜದಲ್ಲಿ ಮತ್ತು ವಿಶೇಷವಾಗಿ ಹಿಂದೂಗಳಲ್ಲಿ ವಿವಿಧ ಅಂಶಗಳಲ್ಲಿ ಸಾಮಾಜಿಕ ಮತ್ತು ಧಾರ್ಮಿಕ ರೂಪಗಳಲ್ಲಿ ಆಚರಿಸಲ್ಪಡುತ್ತದೆ. ಅಸ್ಪೃಶ್ಯತೆಯ ಕಲ್ಪನೆಯು ಮತ್ತು ಆಂಶಿಕ ಆಚರಣೆಯು ಕೇವಲ ಭಾರತದಲ್ಲಿ ಆಚರಿಸಲ್ಪಡುವದಿಲ್ಲ. ಇದು ಕೆಲವೊಂದು ಪಾಶ್ಚಾತ್ಯ ಸಮಾಜಗಳಲ್ಲಿಯೂ, ಬರ್ಮಾ ಮತ್ತು ಜಪಾನ ದೇಶಗಳಲ್ಲಿಯೂ ಆಚರಿಸಲ್ಪಡುತ್ತದೆ. ಆದರೆ ಹಿಂದೂಗಳಲ್ಲಿ ಆಚರಿಸಲ್ಪಡುತ್ತಿರುವ ಅಸ್ಪೃಶ್ಯತೆಗಿಂತ ಉಳಿದ ಸಮಾಜಗಳಲ್ಲಿ ಆಚರಿಸಲ್ಪಡುವ ಅಸ್ಪೃಶ್ಯತೆಯಲ್ಲಿ ಭಿನ್ನತೆ ಇದೆ. ಯಾಕೆಂದರೆ ಹಿಂದೂಗಳಲ್ಲಿ ಆಚರಿಸಲ್ಪಡುವ ಅಸ್ಪೃಶ್ಯತೆಯು ಜಾತಿ ಎಂಬ ಸಂಸ್ಥೆಯಿಂದ ಉಗಮಹೊಂದಿದ್ದು, ಅದರ ಬೇರುಗಳು ಉದ್ಯೋಗ, ಮಡಿ ಮತ್ತು ಮೈಲಿಗೆಯ ಕಲ್ಪನೆಗಳ ಆಳದಲ್ಲಿ ಇಳಿದಿವೆ. ಹಿಂದೂ ಸಮಾಜದಿಂದ ಪ್ರಭಾವಿತವಾದ ಭಾರತೀಯ ಇತರ ಧರ್ಮಗಳಲ್ಲಿ ಸಹಿತ ಅಸ್ಪೃಶ್ಯತೆಯ ಕಲ್ಪನೆಗಳ ಪ್ರಭಾವ ಉಂಟಾಗಿ ಮುಸ್ಲಿಮರು, ಕ್ರಿಶ್ಚಿಯನ್‌ರು, ಶೀಖರು ಮುಂತಾದ ಧರ್ಮೀಯರು ಅಸ್ಪೃಶ್ಯತೆಯನ್ನು ಆಚರಿಸತೊಡಗಿದ್ದಾರೆ.

ಒಂದು ರೀತಿಯಿಂದ ಅಸ್ಪೃಶ್ಯತೆಯು ಮಡಿ–ಮೈಲಿಗೆಗಳ ಕಲ್ಪನೆಗಳ ಆಧಾರದ ಮೇಲೆ ಉದ್ಭವಿಸುತ್ತವೆ. ಉದಾಹರಣಾರ್ಥವಾಗಿ ಒಬ್ಬ ಬ್ರಾಹ್ಮಣನು ತಾನು ಮಡಿಯಲ್ಲಿ ಇದ್ದಾಗ ಮತ್ತು ಧಾರ್ಮಿಕಕ್ರಿಯೆಗಳನ್ನು ಆಚರಿಸುವಾಗ ತನ್ನ ಧರ್ಮೀಯನೇ ಅಪವಿತ್ರತೆಯ ಸ್ಥಿತಿಯಲ್ಲಿದ್ದಾಗ ಮುಟ್ಟಿದರೆ ಮೈಲಿಗೆಯುಂಟಾಗುತ್ತದೆ. ಹಿಂದೂಗಳಲ್ಲಿ ಬೇರೆ ಬೇರೆ ಜಾತಿಯವರು ತಮ್ಮತಮ್ಮೊಳಗೆ ಊಟ ಮಾಡುವಾಗ, ಮುಟ್ಟುವಾಗ, ಮದುವೆಯಾಗುವಾಗ ಮತ್ತು ವ್ಯವಹರಿಸುವಾಗ ಸಾಮಾಜಿಕ ಅಂತರವನ್ನು (Social distance) ಇಟ್ಟುಕೊಳ್ಳುತ್ತಾರೆ. ಆದ್ದರಿಂದ ಅಸ್ಪೃಶ್ಯತೆಯು ಕೇವಲ ಹರಿಜನರಿಗೆ ಸೀಮಿತವಾಗಿರುವದಿಲ್ಲ. ಶ್ರೀ ಜವಾಹರಲಾಲ ನೆಹರು ಅವರು ಒಂದೆಡೆ ಹೇಳಿದಂತೆ "ಅಸ್ಪೃಶ್ಯತೆಯು ಜಾತೀಯತೆಯ ಒಂದು ಅತ್ಯಂತ ಕಠೋರ ರೂಪವಾಗಿದೆ". ಹಿಂದುಗಳಲ್ಲಿ ದ್ವಿಜರು ಮತ್ತು ಸವರ್ಣ ಜಾತಿಗಳೆಂದು ಕರೆಯಲ್ಪಡುವ ಜನರನ್ನು ಹೊರತುಪಡಿಸಿ ಇನ್ನೂ ಅನೇಕ ಹಿಂದುಳಿದ ಜಾತಿಯವರು, ಹರಿಜನರು ಮತ್ತು ಗಿರಿಜನರಿಂದ ಭಿನ್ನವಾದ ಸಾಮಾಜಿಕ ಅಂತಸ್ತಿನಲ್ಲಿ ಜೀವಿಸುತ್ತಾರೆ. ಹಿಂದೂಗಳಲ್ಲಿ ಸವರ್ಣೀಯರಲ್ಲದವರನ್ನು ಹರಿಜನರು ಮತ್ತು ಗಿರಿಜನರೆಂದು ವರ್ಗೀಕರಿಸಲಾಗಿದೆ. ಆದ್ದರಿಂದ ಹಿಂದೂಗಳಲ್ಲಿ ಹರಿಜನರ ಸ್ಥಾನಮಾನವು ಅತ್ಯಂತ ವಿಭಿನ್ನರೂಪದ್ದಾಗಿದೆ. ಹರಿಜನರನ್ನು ಕೆಲವೊಂದು ಸಲ ಪಂಚಮವರ್ಣದವರೆಂದು ಕರೆಯಲಾಗಿದೆ. ಗಿರಿಜನರು ಸುಸಂಸ್ಕೃತ ಸಮಾಜದಿಂದ ದೂರ ಇದ್ದರೂ ಹರಿಜನರಂತೆ ಅಸ್ಪೃಶ್ಯತೆಯ ದೃಷ್ಟಿಯಿಂದ ನೋಡಿಕೊಳ್ಳಲ್ಪಡುವದಿಲ್ಲ

ಹರಿಜನರು ಮತ್ತು ಹಿಂದುಳಿದವರು : ಹಿಂದುಳಿದ ಜಾತಿಗಳಾದ ಇತರೇ ಜನರನ್ನು ಎರಡು ಗುಂಪುಗಳಲ್ಲಿ ವಿಭಜಿಸಬಹುದು- (೧) ಹಿಂದುಳಿದವರು ಮತ್ತು (೨) ಅತಿ ಹಿಂದುಳಿದವರು. ಈ ಹಿಂದುಳಿದ ಜಾತಿಗಳು ಹರಿಜನರಿಗಿಂತ ಮತ್ತು ಗಿರಿಜನರಿಗಿಂತ ಉಚ್ಚ ಜಾತಿಯವರೆಂದು ತಿಳಿದುಕೊಳ್ಳಲ್ಪಟ್ಟದ್ದರೂ ಈ ಜಾತಿಗಳಿಗೆ ಮತ್ತು ಗಿರಿಜನರಿಗೆ ಇರುವ ಕೆಲವು ಸಾಮಾಜಿಕ ಸಮಸ್ಯೆಗಳು ಒಂದೇ ತೆರನಾದವುಗಳಾಗಿವೆ. ಹಿಂದುಳಿದ ಜನರ ವಸತಿಗಳು ಮತ್ತು ನಿವೇಶನಗಳು ಹರಿಜನರ ವಸತಿಗಳಿಗೆ ಮತ್ತು ನಿವೇಶನಗಳಿಗೆ ಅತಿ ಹತ್ತಿರವಾಗಿವೆಯೇ ಹೊರತು ಉಚ್ಚ ಜಾತಿಯ ಜನರ ವಸತಿಗಳು ಮತ್ತು ನಿವೇಶನಗಳು ಬಹಳ ದೂರ ಇರುವದು ಸಾಮಾನ್ಯವಾಗಿ ಕಂಡು ಬರುತ್ತದೆ. ಕೆಲವೊಂದು ಸಂದರ್ಭಗಳಲ್ಲಿ ಹರಿಜನರು ಹಿಂದುಳಿದವರ ವಸತಿಗಳಲ್ಲಿ ವಾಸವಾಗಿರುವ ಉದಾಹರಣೆಗಳು ಕಂಡು ಬರುತ್ತವೆಯೇ ಹೊರತು ಉಚ್ಚ ಜಾತಿಗಳ ಜನರ ಮಧ್ಯದಲ್ಲಿ ಹರಿಜನರು ವಾಸವಾಗಿದ್ದ ಉದಾಹರಣೆಗಳು ಕಂಡು ಬರುವದಿಲ್ಲ. ಇದು ಉತ್ತಮ

ಜಾತಿಯ ಜನರು ಹರಿಜನರ ಸಂಗಡ ಇಟ್ಟುಕೊಂಡ ಸಾಮಾಜಿಕ ಅಂತರವನ್ನು ಸೂಚಿಸುತ್ತದೆ.

ಹರಿಜನರು ಮತ್ತು ಗಿರಿಜನರು : ಗಿರಿಜನರಲ್ಲಿಯೂ ಎರಡು ವಿಧದ ಗಿರಿಜನರಿದ್ದಾರೆ. (೧) ಹೊರಗಿನ ದಾಳಿಗಾರರಿಂದ ಸೋತು ಅಡವಿ ಸೇರಿದ ಗಿರಿಜನರು, ಮತ್ತು (೨) ಮೂಲನಿವಾಸಿ ಗಿರಿಜನರು. ಗಿರಿಜನರೆಂದರೆ ಗುಡ್ಡುಗಾಡುಗಳಲ್ಲಿ ವಾಸಿಸುವ ಜನರೆಂದು ಅರ್ಥವಾಗುತ್ತದೆ. ಹಿಂದುಳಿದ ಜಾತಿಗಳಲ್ಲಿ, ಗಿರಿಜನರು ಒಂದಾಗಿ ಅಡವಿ ಮತ್ತು ಬೆಟ್ಟಗಳನ್ನು ಬಿಟ್ಟು ಊರು ಸೇರಿದವರಲ್ಲಿ ಬಹಳ ಜಾತಿಗಳು ನಿರ್ಮಾಣವಾಗಿರುವದು ಮಾನವಶಾಸ್ತ್ರಜ್ಞರಿಗೆ ವಿಶೇಷವಾಗಿ ಕಂಡುಬಂದಿದೆ. ಇಂಥ ಒಂದು ಸಾಮಾಜಿಕ ಪ್ರಕ್ರಿಯೆಯು ಭಾರತೀಯ ಸಮಾಜದಲ್ಲಿ ಬಹಳ ದಿನಗಳಿಂದ ನಡೆದುಕೊಂಡು ಬಂದಿರುವದು ಕಂಡುಬಂದಿದೆ.

೧೯೭೧ನೇ ಜನಗಣತಿಯ ಪ್ರಕಾರ ಭಾರತದಲ್ಲಿ ೫೦ ಲಕ್ಷಕ್ಕಿಂತಲೂ ಹೆಚ್ಚು ಅಪರಾಧೀ ಜನಾಂಗದವರು ಇರುವದು ಕಂಡುಬಂದಿದೆ. ಇಂಥ ಅಪರಾಧೀ ಜನಾಂಗಗಳು ಹಿಂದುಳಿದ ಜಾತಿಗಳಾಗಿ ಪರಿವರ್ತನೆಯಾದಾಗ ಕೆಲವೊಂದು ಜಾತಿಗಳು ಹರಿಜನ ಜಾತಿಗಳಾಗಿಯೂ ಪರಿವರ್ತನೆಯಾಗಿವೆ. ಇಂಥವುಗಳಲ್ಲಿ ಧಾರವಾಡದಲ್ಲಿ ಕಂಡುಬಂದ ರಾಮೋಶಿ ಎಂಬ ಜಾತಿಯೂ ಒಂದು. ಯಾಕೆಂದರೆ ಹರಿಜನರಾದ ಮಾದಿಗರು ರಾಮೋಶಿಗಳ ಸಂಗಡ ಮದುವೆಯ ಸಂಬಂಧವನ್ನು ಇಟ್ಟುಕೊಳ್ಳಬಲ್ಲರು. ಇಂಥ ಸಂಬಂಧವಿರುವ ರಾಮೋಶಿಗಳು ಮಿಣಿ–ಮಾದಿಗರೆಂದೂ ಕರೆಯಲ್ಪಡುತ್ತಾರೆ. ಮತ್ತು ರಾಮೋಶಿ ಜಾತಿಯವರು ತಳವಾರ ಇಲ್ಲವೆ ಬೇಡರ ಜಾತಿಯವರಿಗೆ ಅತಿ ಹತ್ತಿರದ ಜಾತಿ ಎಂದು ತಿಳಿಯಲಾಗುತ್ತಿದೆ. ಅಷ್ಟೇ ಅಲ್ಲ, ಕೆಲವೊಂದು ಪ್ರದೇಶಗಳಲ್ಲಿ ಬೇಡಜಾತಿಯವರನ್ನು ಅಸ್ಪೃಶ್ಯರೆಂದು ಭಾವಿಸುತ್ತಾರೆ.

ಗಿರಿಜನರ ಸಮಾಜಗಳೂ ಸಹಿತ ಸಾಮಾಜಿಕ ಅಂತಸ್ತಿನಲ್ಲಿ ಉಚ್ಚ ಮತ್ತು ನೀಚ ಶ್ರೇಣಿಗಳಲ್ಲಿ ರಚನೆಯಾಗಿರುವದು ಕಂಡುಬಂದಿದೆ. ಗಿರಿಜನರಲ್ಲಿಯೂ ಕೆಲವೊಂದು ಜಾತಿಗಳು ಅಸ್ಪೃಶ್ಯ ಜಾತಿಗಳೆಂದು ತಿಳಿಯಲಾಗುತ್ತಿವೆ. ಇದು ಮಾನವಶಾಸ್ತ್ರಜ್ಞರ ಕ್ಷೇತ್ರಕಾರ್ಯಗಳಲ್ಲಿ ದೊರೆತ ಸಂಗತಿಯಾಗಿದೆ.

ಒಂದು ಉಚ್ಚ ಜಾತಿಯವರು ತಮಗಿಂತ ಹೀನವಾದ ಮತ್ತೊಂದು ಜಾತಿಯವರೊಡನೆ ವ್ಯವಹರಿಸುವಾಗ ಸಾಮಾಜಿಕ ಅಂತರವನ್ನು ಇಟ್ಟುಕೊಂಡು ಒಂದು ರೀತಿಯ ಅಸ್ಪೃಶ್ಯತೆಯನ್ನೇ ಆಚರಿಸುತ್ತಾರೆ. ಇದು ಕೇವಲ ಸವರ್ಣೀಯ

ಹಿಂದೂಗಳು ವರ್ಣಬಾಹಿರ ಜಾತಿಗಳೊಡನೆ ಇಟ್ಟುಕೊಳ್ಳುವ ಸಂಬಂಧ ಮಾತ್ರವಲ್ಲ, ಹರಿಜನರಲ್ಲಿಯು ಜಾತಿಗಳನ್ನು ಶ್ರೇಣಿಬದ್ಧವಾದ ರೀತಿಯಲ್ಲಿ ನೋಡಿದಾಗ ಉಚ್ಚ ಜಾತಿಯ ಹರಿಜನರು ಹೀನಜಾತಿಯ ಹರಿಜನರೊಡನೆ ವ್ಯವಹರಿಸುವಾಗ ಇಂಥ ಒಂದು ಅಸ್ಪೃಶ್ಯತೆಯನ್ನು ಆಚರಿಸುತ್ತಿರುವದು ಕಂಡುಬರುವದು. ಹರಿಜನರಲ್ಲಿ ಅತ್ಯಂತ ಉಚ್ಚ ಜಾತಿಯವರೆಂದು ತಿಳಿದುಕೊಳ್ಳಲ್ಪಡುವ ಮಚಗಾರರು ವೀರಶೈವ ಧರ್ಮವನ್ನು ಅನುಸರಿಸುತ್ತಾರೆ. ಇಂಥ ಒಂದು ಉಚ್ಚಸ್ಥಾನವಾನವು ಅವರ ಉದ್ಯೋಗಗಳಲ್ಲಿರುವ ಉಚ್ಚತೆಯನ್ನು ಅನುಸರಿಸುತ್ತದೆ. ಉದಾಹರಣೆಗಾಗಿ, ಕೇವಲ ಹೊಸ ಮಚ್ಚಿಗಳನ್ನು ಮಾಡುವ ಮಚಿಗಾರರು ಹಳೆ ಪಾದರಕ್ಷೆಗಳನ್ನು ರಿಪೇರಿ ಮಾಡುವ ಸಮಗಾರರಿಗಿಂತ ಉಚ್ಚ ಜಾತಿಯವರೆಂದು ತಿಳಿಯುತ್ತಾರೆ. ಅದೇ ರೀತಿ ಭಂಗೀಜನರು ಹರಿಜನರಲ್ಲಿ ಕನಿಷ್ಠವರ್ಗದವರೆಂದು ತಿಳಿಯಲಾಗುತ್ತಿದೆ.

ಹರಿಜನರು ಮತ್ತು ಪ್ರತ್ಯೇಕ ಚುನಾವಣೆಯ ಕ್ಷೇತ್ರ : ಭಾರತೀಯ ಆಧುನಿಕ ಇತಿಹಾಸವನ್ನು ಓದಿದವರಿಗೆ ಹರಿಜನರನ್ನು ಹಿಂದೂ ಸಮಾಜದಿಂದ ರಾಜಕೀಯವಾಗಿ ಬೇರ್ಪಡಿಸುವ ಒಂದು ಪ್ರಯತ್ನವು ನಡೆದುಹೋದುದು ಸರ್ವಸಾಮಾನ್ಯವಾಗಿ ತಿಳಿದ ವಿಷಯವಾಗಿದೆ. ಹರಿಜನರಿಗೆ ಪ್ರತ್ಯೇಕ ಚುನಾವಣೆಯ ಕ್ಷೇತ್ರವನ್ನು ಮೀಸಲಿರಿಸಬೇಕೆಂದು ವಾದಿಸಿದವರಲ್ಲಿ ಡಾ. ಬಿ. ಆರ್. ಅಂಬೇಡಕರರು ಪ್ರಮುಖರಾಗಿದ್ದರು. ಹರಿಜನರನ್ನು ಮುಂದೆ ತರಬೇಕೆಂಬ ಹೆಬ್ಬಯಕೆಯಿಂದಲೇ ಡಾ. ಬಿ. ಆರ್. ಅಂಬೇಡಕರರು ಪ್ರವೃತ್ತರಾಗಿದ್ದರೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಆದರೆ ಹಿಂದೂ ಸಮಾಜದ ಒಂದು ಘಟಕವಾದ ಹರಿಜನರನ್ನು ಚುನಾವಣಾ ಪ್ರಣಾಲಿಕೆಯಿಂದ ಪ್ರತ್ಯೇಕಿಸಿದರೆ ಹಿಂದೂ ಸಮಾಜದ ಒಂದು ಘಟಕವನ್ನು ಬೇರ್ಪಡಿಸಿದಂತೆ ಎಂಬುದು ಮಹಾತ್ಮಾ ಗಾಂಧಿಯವರ ವಾದವಾಗಿದ್ದಿತು. ಅದರಂತೆ ಮಹಾತ್ಮಾ ಗಾಂಧಿಯವರು ಉಪವಾಸ ಮಾಡಿಯಾದರೂ ತಮ್ಮ ವಾದಕ್ಕೆ ಜಯ ಗಳಿಸುವಲ್ಲಿ ಯಶಸ್ವಿಯಾದರು. ಆದರೆ ಡಾ. ಅಂಬೇಡಕರರು ಹರಿಜನರಿಗಾಗಿ ಕಾಯ್ದಿಟ್ಟ ಸ್ಥಾನಗಳಿಂದ ಸಂತುಷ್ಟರಾಗಬೇಕಾಯಿತು. ಹರಿಜನರಲ್ಲಿ ಆಚರಿಸಲ್ಪಡುವ ಧಾರ್ಮಿಕ ಮತ್ತು ಮಾಂತ್ರಿಕ ವಿಧಿಗಳನ್ನು ಅವಲೋಕಿಸಿದಾಗ ಸಹಿತ ಹರಿಜನರು ಹಿಂದೂಗಳಿಗಿಂತ ಭಿನ್ನವಾದವರಲ್ಲವೆಂಬುದು ಸ್ಪಷ್ಟವಾಗುವದು.

ಹರಿಜನರು ಮತ್ತು ಧರ್ಮಾಂತರ: ಹರಿಜನರು ಉಳಿದ ಹಿಂದುಳಿದ ಜಾತಿಯವರಂತೆ ತಾವು ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮದಿಂದ ಅಸ್ಪೃಶ್ಯರಾಗಿ

ಜನಿಸಿರುವರೆಂದು ತಿಳಿದುಕೊಳ್ಳಲ್ಪಡುತ್ತಾರೆ. ಇದೇ ಕರ್ಮವೆಂಬ ಮೂಲಭೂತ ಕಲ್ಪನೆಯು ಅಸ್ಪೃಶ್ಯತೆಯನ್ನು ಹೋಗಲಾಡಿಸುವದರಲ್ಲಿಯೂ ಮತ್ತು ಹರಿಜನರನ್ನು ಮೇಲೆತ್ತುವದರಲ್ಲಿಯೂ ಒಂದು ಆತಂಕವಾಗಿದೆ. ಅವರು ಹಿಂದೂ ಧರ್ಮದ ಕರ್ಮಸಿದ್ಧಾಂತದಿಂದ ಬಹಳಷ್ಟು ಪ್ರಭಾವಿತರಾಗಿದ್ದಾರೆ. ಮತ್ತು ಸವರ್ಣ ಹಿಂದೂಗಳ ಜೀವನದ ಆದರ್ಶಗಳನ್ನು ತಮ್ಮ ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನ ಮಾಡುತ್ತಾರೆ. ಕೆಲವೊಂದು ಸಂದರ್ಭಗಳಲ್ಲಿ ಹರಿಜನರು ತಮ್ಮನ್ನು ಮೇಲೆತ್ತಿಕೊಳ್ಳಲು ಉಳಿದ ಬೌದ್ಧ, ಕ್ರೈಸ್ತ ಮತ್ತು ಇಸ್ಲಾಮೀಯ ಧರ್ಮಗಳಿಗೆ ಧರ್ಮಾಂತರಹೊಂದಿದ ಉದಾಹರಣೆಗಳಿವೆ. ಆದರೆ ಧರ್ಮಾಂತರಗಳು ಹರಿಜನರ ಸಮಸ್ಯೆಗಳನ್ನು ಮತ್ತು ಅಸ್ಪೃಶ್ಯತೆಯನ್ನು ಹೋಗಲಾಡಿಸುವಲ್ಲಿ ಯಶಸ್ವಿಯಾಗಲಿಲ್ಲ. ಯಾಕೆಂದರೆ ಉಳಿದ ಧರ್ಮೀಯರೂ ಅಸ್ಪೃಶ್ಯತೆಯನ್ನು ಆಚರಿಸಿ ಧರ್ಮಾಂತರಹೊಂದಿದ ಹರಿಜನರನ್ನು ಕನಿಷ್ಠರೀತಿಯಿಂದ ನೋಡಿಕೊಳ್ಳಲಾರಂಭಿಸಿರುವದೇ ಇದಕ್ಕೆ ಮುಖ್ಯ ಕಾರಣವಾಗಿದೆ. ಧರ್ಮಾಂತರಹೊಂದಿದ ಹರಿಜನರು ಉಳಿದ ಹರಿಜನರಿಗೆ ಕೊಡಮಾಡಿರುವ ಸೌಲಭ್ಯಗಳನ್ನು ಕೇಳಹತ್ತಿದ್ದಾರೆ. ಯಾಕೆಂದರೆ ಧರ್ಮಾಂತರಹೊಂದಿದಾಗಲೂ ಅವರ ಸಮಸ್ಯೆಗಳ ಪರಿಹಾರವಾಗಲಿಲ್ಲ. ಇಸ್ಲಾಮ ಧರ್ಮವನ್ನು ಸೇರಿದ ಹರಿಜನರನ್ನು ಮುಸ್ಲಿಮ-ಮಾದಿಗರೆಂದೂ, ಮುಸ್ಲಿಮ-ಭಂಗಿಗಳೆಂದೂ ಕರೆದರು. ಹರಿಜನ-ಕ್ರಿಶ್ಚಿಯನ್‌ರಿಗೆ ಕೇರಳದಲ್ಲಿ ಚರ್ಚುಗಳಲ್ಲಿ ಪ್ರತ್ಯೇಕ ಬೆಂಚುಗಳನ್ನೂ ಇರಿಸಿದ್ದು ನಿಜಕ್ಕೂ ಅಸ್ಪೃಶ್ಯತೆಯ ಪರಮಾವಧಿಯನ್ನು ತೋರಿಸುತ್ತದೆ.

ಹರಿಜನರು ಸವರ್ಣ ಹಿಂದೂಗಳನ್ನು ದ್ವೇಷಿಸುತ್ತಾರೆ. ಏಕೆಂದರೆ ಅವರೇ ಅಸ್ಪೃಶ್ಯತೆಗೆ ಕಾರಣರೆಂದು ಅವರು ಬಗೆಯುತ್ತಾರೆ. ಮುಸ್ಲಿಮರನ್ನು, ಬೌದ್ಧ ಧರ್ಮೀಯರನ್ನು ಮತ್ತು ಜೈನರನ್ನು ಅವರು ಸೇರುವದಿಲ್ಲ. ಏಕೆಂದರೆ ಅವರೂ ಅಸ್ಪೃಶ್ಯತೆಯನ್ನು ಆಚರಿಸಿದರು. ಕ್ರೈಸ್ತಧರ್ಮವು ಸಾಮಾನ್ಯ ಹರಿಜನರಿಗೆ ಒಂದು ವಿದೇಶೀ ಧರ್ಮದಂತೆ ಕಂಡುಬರುತ್ತದೆ. ಮಹಾರಾಷ್ಟ್ರ ಮತ್ತು ಉತ್ತರ ಪ್ರದೇಶದಲ್ಲಿ ಹರಿಜನರು ದೊಡ್ಡಪ್ರಮಾಣದಲ್ಲಿ ಬೌದ್ಧ ಧರ್ಮವನ್ನು ಸೇರಿದರು. ಡಾ. ಅಂಬೇಡಕರರ ಪ್ರಭಾವ ಕಡಿಮೆ ಇರುವ ಪ್ರದೇಶಗಳಲ್ಲಿ, ಅದೂ ಕರ್ನಾಟಕದಲ್ಲಿ, ಹರಿಜನರು ವಿಶೇಷವಾಗಿ ಪರಧರ್ಮಗಳನ್ನು ಅಂಗೀಕರಿಸಿರುವರು. ಪರಧರ್ಮವನ್ನು ಅಂಗೀಕರಿಸುವದು ಪಾಪಕರವೆಂದು ಹರಿಜನರು ಬಗೆದಿರುವರು. ಹರಿಜನ ಮುಂದಾಳುಗಳು ಅದು ಸಮಸ್ಯೆ ಪರಿಹರಿಸುವ ಮಾರ್ಗವಲ್ಲವೆಂದೂ, ಸಮಸ್ಯೆಯಿಂದ ದೂರ ಓಡಿಹೋಗುವ ಒಂದು ಉಪಾಯವೆಂದೂ ಬಗೆದು

ಹರಿಜನರನ್ನು ಹಿಂದೂ ಧರ್ಮದಲ್ಲಿಯೇ ಇಟ್ಟುಕೊಂಡು ಅವರ ಉದ್ಧಾರ ಮಾಡುವದು ತಮ್ಮ ಆದ್ಯಕರ್ತವ್ಯವೆಂದು ಬಗೆದಿದ್ದಾರೆ.

ಅಸ್ಪೃಶ್ಯತಾ ನಿವಾರಣೆ : ಅಸ್ಪೃಶ್ಯತೆಯನ್ನು ಹೋಗಲಾಡಿಸುವ ಸಾಧನೆಗಳಲ್ಲಿ ನಗರೀಕರಣ (Urbanisation) ವು ಮಹತ್ವದ ಪಾತ್ರವೆಂದು ಬಗೆಯಲ್ಪಟ್ಟಿವೆ. ಏಕೆಂದರೆ ಗ್ರಾಮಾಂತರ ಪ್ರದೇಶವಲ್ಲಿ ಅಸ್ಪೃಶ್ಯತೆ ಹೆಚ್ಚಾಗಿ ಆಚರಿಸಲ್ಪಡುತ್ತಿವೆ. ಗ್ರಾಮಾಂತರ ಪ್ರದೇಶವು ಅಸ್ಪೃಶ್ಯತೆಯನ್ನು ಪೋಷಿಸುವ ಪ್ರದೇಶವಾಗಿದೆ. ಆದ್ದರಿಂದ ಸಮಾಜಶಾಸ್ತ್ರಜ್ಞರು ದೇಶವನ್ನು ನಗರೀಕರಣಗೊಳಿಸುವುದರಿಂದ ಅಸ್ಪೃಶ್ಯತೆಯನ್ನು ನಿರ್ಮೂಲಗೊಳಿಸಬಹುದೆಂದು ತಾತ್ವಿಕವಾಗಿ ಒಪ್ಪಿಕೊಂಡಿದ್ದಾರೆ. ಈ ಸೂಚನೆಯು ತಾರ್ಕಿಕವಾಗಿ ಒಪ್ಪಿಕೊಳ್ಳತಕ್ಕ ವಿಷಯವಾಗಿದ್ದರೂ ಇಡೀ ದೇಶವನ್ನು ನಗರೀಕರಣಗೊಳಿಸುವದು ಸುಲಭ ಸಾಧ್ಯವಾದ ಮತ್ತು ಪ್ರಾಯೋಗಿಕವಾಗಿ ಒಪ್ಪಿಕೊಳ್ಳಬಲ್ಲ ವಿಷಯವಲ್ಲವೆಂದು ಸಹಜವಾಗಿಯೇ ತಿಳಿದುಕೊಳ್ಳಬಹುದು.

ಅದೇ ಪ್ರಕಾರವಾಗಿ ದೇಶವನ್ನು ಔದ್ಯೋಗೀಕರಣ(Industrialization) ಗೊಳಿಸುವುದರಿಂದ ಅಸ್ಪೃಶ್ಯತೆಯನ್ನು ನಿರ್ಮೂಲ ಮಾಡಬಹುದೆಂಬ ಒಂದು ವಿಚಾರವನ್ನು ಮುಂದೆ ಮಾಡಲಾಗಿದೆ. ಏಕೆಂದರೆ, ಔದ್ಯೋಗಿಕ ಮತ್ತು ಉದ್ದಿಮೆಗಳ ಪ್ರದೇಶಗಳಲ್ಲಿ ಅಸ್ಪೃಶ್ಯತೆಯನ್ನು ಆಚರಿಸುವದು ಸಾಧ್ಯವಾಗುವದಿಲ್ಲ. ಆದರೆ ಇತ್ತೀಚಿನ ಕೆಲವು ಸಾಮಾಜಿಕ ಅಭ್ಯಸನಗಳಿಂದ ಔದ್ಯೋಗಿಕ ಪ್ರದೇಶಗಳಲ್ಲಿಯೂ ಜಾತೀಯತೆಯನ್ನು ಅಂಶಿಕವಾಗಿ ಆಚರಿಸಲ್ಪಡುವ ಸಂದರ್ಭಗಳಿವೆ ಎಂಬುದನ್ನು ಡಾ. ಎಮ್. ಎನ್. ಶ್ರೀನಿವಾಸರಂಥ ಸಮಾಜಶಾಸ್ತ್ರಜ್ಞರು ಎತ್ತಿತೋರಿಸಿದ್ದಾರೆ. ಆದ್ದರಿಂದ ಔದ್ಯೋಗೀಕರಣವು ಸಹ ಅಸ್ಪೃಶ್ಯತೆಯನ್ನು ಹೋಗಲಾಡಿಸುವಲ್ಲಿ ನಮಗೆ ಸಹಾಯ ನೀಡುವಂತಿಲ್ಲ.

ಹರಿಜನರು ಮತ್ತು ಸಂಸ್ಕೃತೀಕರಣ : ಡಾ. ಎಮ್. ಎನ್. ಶ್ರೀನಿವಾಸ ಅವರು ತಮ್ಮ ಪ್ರಬಂಧಗಳಲ್ಲಿ ಬೆಳೆಯುತ್ತಿರುವ ಸಂಸ್ಕೃತೀಕರಣವು ಹರಿಜನರ ವಿಷಯದಲ್ಲಿಯೂ ಕೆಲಮಟ್ಟಿಗೆ ಸತ್ಯಸಂಗತಿಯಾಗಿದೆ. ಸಂಸ್ಕೃತೀಕರಣದಲ್ಲಿ ಕೆಳವರ್ಗದ ಜನರು ಉಚ್ಚವರ್ಗದ ಜಾತಿಗಳ ಭಾಷೆ, ನಡತೆ, ರೀತಿ ಮತ್ತು ನೀತಿಗಳನ್ನು ಅನುಸರಿಸುವದೇ ಆಗಿದೆ. ಹರಿಜನರು ಸಹಿತ ತಮ್ಮ ಜೀವನದ ಸ್ಥಿತಿಗತಿಗಳನ್ನು ಎತ್ತರಿಸುವಲ್ಲಿ ಇಂಥ ಒಂದು ಪ್ರಕ್ರಿಯೆಗೆ ಒಳಪಟ್ಟಿದ್ದಾರೆಂಬುದು ಗಣನೆಗೆ ಬಂದಿದೆ. ಮೊದಲು ಹರಿಜನರು ತಮ್ಮ ಹೆಸರುಗಳನ್ನು ಕರಿಯವ್ವ, ದುರ್ಗವ್ವ ಮತ್ತು ಬೆಳ್ಳಿ ಎಂದು ಕರೆದರೆ ಈಗ ಅವರು ಕಮಲಾ,

ಸುಶೀಲಾ ಮತ್ತು ಶಾಂತಾ ಎಂದು ಕರೆದುಕೊಳ್ಳುತ್ತಾರೆ. ಈಗ ಹರಿಜನರು ತಮ್ಮ ಅಡ್ಡ ಹೆಸರುಗಳಾದ ಮಾದರ, ಹೊಲೆಯರ ಮತ್ತು ಢೋರ ಎಂಬವುಗಳ ಬದಲಾಗಿ ರಾವ್, ಕಾಂಬಳೆ, ಗಾಯಕವಾಡ ಮತ್ತು ಸೂರ್ಯವಂಶಿ ಎಂದು ಕರೆದುಕೊಳ್ಳುತ್ತಾರೆ. ಈ ರೀತಿಯಾಗಿ ಸಂಸ್ಕೃತೀಕರಣವು ಹರಿಜನರಲ್ಲಿ ಸಾವಧಾನವಾಗಿ ವಿವಿಧ ಕ್ಷೇತ್ರಗಳಲ್ಲಿ ಮತ್ತು ಆಚರಣೆಗಳಲ್ಲಿ ಕಂಡು ಬರತೊಡಗಿದೆ.

ಹರಿಜನರಲ್ಲಿ ಬದಲಾವಣೆ : ಹರಿಜನರು ಮೊದಲು ಒಂದು ನಿರ್ದಿಷ್ಟವಾದ ಕೆಳಮಟ್ಟದ ಭಾಷೆಯಲ್ಲಿಯೇ ಮಾತನಾಡಬೇಕೆಂದೂ ಸವರ್ಣೀಯರನ್ನು ಸಂಬೋಧಿಸುವಾಗ ಮತ್ತು ಅವರೊಡನೆ ವ್ಯವಹರಿಸುವಾಗ ತಾವು ಕೀಳುಮಟ್ಟದ ಪ್ರಾಣಿಗಳಂತೆಯೂ ಮತ್ತು ಅವರ ದಾಸ, ಮಗ ಇಲ್ಲವೆ ಆಳು ಎಂದು ಕರೆದುಕೊಳ್ಳುವದೂ ರೂಢಿಯಲ್ಲಿತ್ತು. ಈಗ ಇಂಥ ಪದ್ಧತಿಗಳು ಬಹುಮಟ್ಟಿಗೆ ಕಡಿಮೆಯಾಗಿವೆ ಮತ್ತು ಕಡಿಮೆಯಾಗುತ್ತಿವೆ.

ಹರಿಜನರು ತಮ್ಮ ಆಚಾರ, ವಿಚಾರ ಮತ್ತು ವಿಧಿಗಳಲ್ಲಿಯೂ ಕೆಳಮಟ್ಟದಲ್ಲಿಯೇ ವ್ಯವಹರಿಸಬೇಕಾಗುತ್ತಿತ್ತು. ಅವರಲ್ಲಿದ್ದ ದೇವದಾಸಿ ಪದ್ಧತಿ, ಭಿಕ್ಷೆ ಬೇಡುವ ಪದ್ಧತಿ, ಬಲಿಕೊಡುವ ಪೂಜಾಪದ್ಧತಿ ಮುಂತಾದವುಗಳು ಹರಿಜನರ ಕನಿಷ್ಠ ವ್ಯವಹಾರಗಳಾಗಿದ್ದವು. ಮದುವೆಯ ಸಂದರ್ಭಗಳಲ್ಲಿ ಉಚ್ಚಜಾತಿಯವರು ಅಕ್ಕಿಕಾಳು ಉಪಯೋಗಿಸಿದರೆ ಹರಿಜನರು ಕುಸುಬೆಕಾಳು ಉಪಯೋಗಿಸುತ್ತಿದ್ದರು. ಉಚ್ಚ ಜಾತಿಯವರು ಊರೊಳಗೆ ಕುದುರೆ ಮತ್ತು ಎತ್ತಿನ ಗಾಡಿಗಳ ಮೇಲೆ ಮದುವೆ ಮೆರವಣಿಗೆ ತೆಗೆದರೆ ಹರಿಜನರು ಊರ ಹೊರಗೆ ಎಮ್ಮೆ ಮತ್ತು ಕೋಣಗಳ ಮೇಲೆ ಮೆರವಣಿಗೆ ತೆಗೆಯಬೇಕಾಗುತ್ತಿತ್ತು. ಇಂಥ ಸಂದರ್ಭಗಳಲ್ಲಿ ಅವರಿಗೆ ಅಗಸರ ಮತ್ತು ವಾದ್ಯಗಾರರ ಸೇವೆ ದೊರೆಯುತ್ತಿರಲಿಲ್ಲ. ಅದೇ ಹರಿಜನರು ಸವರ್ಣೀಯರಿಗೆ ಇಂಥ ಸೌಲಭ್ಯಗಳನ್ನು ಒದಗಿಸಬೇಕಾಗುತ್ತಿತ್ತು.

ನವೀನತೆಯು ಹರಿಜನರ ಜೀವನದಲ್ಲಿ ಕಾಣಿಸಿಕೊಳ್ಳುತ್ತಿರುವ ಉದಾಹರಣೆಗಳೂ ಇವೆ. ಇತ್ತೀಚೆಗೆ ಅವರಿಗೆ ನವನಾಗರಿಕತೆಯ ಮನೆಗಳೂ, ನಳದ ನೀರೂ ಮತ್ತು ವಿದ್ಯುದ್ದೀಪಗಳ ಬೆಳಕೂ ಸಿಗಹತ್ತಿವೆ. ಅವರ ಮಕ್ಕಳು ನಗರಗಳಲ್ಲಿ ಬಾಲವಾಡಿ, ಶಾಲೆ ಮತ್ತು ಕಾಲೇಜುಗಳ ಶಿಕ್ಷಣದಲ್ಲಿ ಪ್ರಗತಿಪಡೆಯುತ್ತಿದ್ದಾರೆ. ಅವರಿಗೆ ಅನೇಕ ಔದ್ಯೋಗಿಕ, ಶೈಕ್ಷಣಿಕ ಮತ್ತು ಇನ್ನಿತರ ಸೌಲಭ್ಯಗಳನ್ನು ಸರಕಾರವು ಒದಗಿಸಿದ್ದರೂ ಒಮ್ಮೊಮ್ಮೆ ಹರಿಜನರೇ ಅವುಗಳಿಗೆ ಮುಂದಾಗುವದಿಲ್ಲ.

ಹರಿಜನರು ಒಂದೆಡೆ ಸೌಲಭ್ಯಗಳನ್ನು ಪಡೆಯುತ್ತಿದ್ದರೆ ಮತ್ತೊಂದೆಡೆ ಅವರು ಈಗಾಗಲೇ ಸಾಂಪ್ರದಾಯಕ ಸೌಲಭ್ಯಗಳಿಗೆ ಹೊರತಾಗುತ್ತಿದ್ದಾರೆ. ಅವರು ದೇವದಾಸಿಯರಾದಾಗ ದೇವಸ್ಥಾನಗಳನ್ನು ಸ್ವಚ್ಛವಾಗಿಟ್ಟು, ಅಲ್ಲಿ ಕೆಲಸ ಮಾಡಿ, ಹಾಡಿ ಕುಣಿದರು. ಅವರು ಉಚ್ಚ ಜಾತಿಯವರ ಓಲೆಕಾರರಾಗಿ ಕೆಲಸ ಮಾಡಿದರು. ಅವರು ಹಲಗೆ ಮೇಳ, ವಾದ್ಯದ ಮೇಳಗಳಲ್ಲಿ ಕೆಲಸ ಮಾಡಿ. ಉಚ್ಚ ವರ್ಗಗಳ ಅಂತ್ಯಯಾತ್ರೆಗಳಲ್ಲಿಯೂ ಅವಶ್ಯವಾಗಿ ಬೇಕಾಗಿದ್ದರು. ಅವರು ದನಕಾಯುವಲ್ಲಿ, ಗುಡಿಕಾಯುವಲ್ಲಿ, ಕೋಟೆ–ಕೊತ್ತಳ, ಹೊಲ–ಮನೆ ಮುಂತಾದವುಗಳನ್ನು ಕಾಯುವ ಕೆಲಸದಲ್ಲಿಯೂ ಸಾಂಪ್ರದಾಯಕವಾಗಿ ಮಾಡಿ ಮಡಿದರು. ಬೇಸಾಯದಲ್ಲಿ ಸಹಾಯವಾಗಿ ಕೆಲಸ ಮಾಡಿದರು. ಗ್ರಾಮ ಮತ್ತು ನಗರಗಳನ್ನು ಸ್ವಚ್ಛವಾಗಿ ಇಡುವವರಲ್ಲಿ ನಿರತರಾಗಿದ್ದರು. ಬೇಸಾಯಗಾರರ ಹಗ್ಗ, ಮಿಣಿಗಳನ್ನು ಮಾಡುವದರಲ್ಲಿ ಸಹಾಯಕರಾಗಿದ್ದರು. ಒಟ್ಟಾರೆ ಹರಿಜನರಿಲ್ಲದೆ ಗ್ರಾಮದ ಕೆಲಸ ಮತ್ತು ವೈಯಕ್ತಿಕ ಕೆಲಸಗಳು ನಡೆಯುವಂತಿರಲಿಲ್ಲ. ಅವರಿಗೆ ಹಳ್ಳಿಯ ದೈನಂದಿನ ಮತ್ತು ವಾರ್ಷಿಕ ಕೆಲಸ ಕಾರ್ಯಗಳಲ್ಲಿ ವಿಶೇಷ ಹಕ್ಕುಬಾಧ್ಯತೆಗಳಿದ್ದವು. ಆದರೆ ಹರಿಜನರ ಹೆಸರಿನಲ್ಲಿ ಈಗ ಅನೇಕ ಸೌಲಭ್ಯಗಳ ಘೋಷಣೆಗಳಿದ್ದಾಗ್ಯೂ ಹರಿಜನರು ಇನ್ನೂ ಅಸ್ಪೃಶ್ಯರಾಗಿದ್ದಾರೆ, ಸಮಾಜ ಬಾಹಿರರಾಗಿ ಉಳಿದಿದ್ದಾರೆ. ಈಗಿನ ಪ್ರಜಾಪ್ರಭುತ್ವದ ಸರಕಾರವು ಅವರಿಗೆ ಮತ ಕೊಡುವ ಅಧಿಕಾರವನ್ನು ಕೊಟ್ಟಿದ್ದರೂ, ಅವರ ಪಾಲಿಗೆ ಅದು 'ಓಟು' (Vote) ಆಗಿರದೆ ಕೇವಲ ಓಟವಾಗಿದೆ! ಏಕೆಂದರೆ ಹರಿಜನರ ಮತಗಳು ಕೊಳ್ಳಲ್ಪಡುತ್ತವೆ ಅಥವಾ ಮೋಸ, ವಂಚನೆ ಮತ್ತು ಒತ್ತಾಯದಿಂದ ಕಸಿದು ಕೊಳ್ಳಲ್ಪಡುತ್ತವೆ.

ಕರ್ನಾಟಕದ ಹರಿಜನರು : ಕರ್ನಾಟಕದ ಹರಿಜನರ ಸ್ಥಾನಮಾನವು ಉಳಿದ ಭಾರತೀಯ ಹರಿಜನರಿಗಿಂತ ತಕ್ಕಮಟ್ಟಿಗೆ ಭಿನ್ನವಾದುದಾಗಿದೆ. ಏಕೆಂದರೆ ವೀರಶೈವ ಧರ್ಮವು ೧೨ನೆಯ ಶತಮಾನದಿಂದಲೂ ಹರಿಜನರ ಮೇಲೆ ಪ್ರಭಾವ ಬೀರಿ ಅವರ ಜೀವನದಲ್ಲಿ ಮಹತ್ವದ ಪಾತ್ರವನ್ನು ಆಡಿದೆ. ಕರ್ನಾಟಕದ ಬಹುತೇಕ ಹರಿಜನರು ವೀರಶೈವರಾಗಿದ್ದಾರೆ. ಇಲ್ಲವೆ ಹರಿಜನರು ವೀರಶೈವದಿಂದ ಪ್ರಭಾವಿತರಾಗಿದ್ದಾರೆ. ಕಕ್ಕಯ್ಯ, ಚನ್ನಯ್ಯ ಮತ್ತು ಹರಳಯ್ಯನಂಥ ಶಿವಶರಣರು ಸ್ವತಃ ಹರಿಜನರಾಗಿದ್ದರು. ಅವರಿಗೆ ಅನುಭವ ಮಂಟಪದಲ್ಲಿ ಒಳ್ಳೆ ಸ್ಥಾನಮಾನವನ್ನು ಕೊಡಲಾಗಿತ್ತು. ವೀರಶೈವ ಧರ್ಮದಲ್ಲಿ ಜಾತಿ ಮತ್ತು ಲಿಂಗ ಭೇದಗಳನ್ನು ಆಚರಿಸಲಿಕ್ಕೆ ಅವಕಾಶವಿಲ್ಲದ್ದರಿಂದ ಹರಿಜನರೂ ಅನುಭವ

ಮಂಟಪದಲ್ಲಿ ಸೇರಿ ವೀರಶೈವರಾದರು. ಮುಂದೆ ಕಾಲಾಂತರದಲ್ಲಿ ವೀರಶೈವ ಧರ್ಮದವರು ಸಹ ಜಾತಿ ಪದ್ಧತಿಗೆ ಅಂಟಿಕೊಂಡಿದ್ದರಿಂದ ಅವರಲ್ಲಿಯೂ ಅಸ್ಪೃಶ್ಯತೆಯನ್ನು ಕಾಣಹತ್ತಿತು. ಆದರೆ ಹರಿಜನರು ವೀರಶೈವ ಧರ್ಮದ ತತ್ತ್ವ, ಆಚರಣೆ ಮತ್ತು ನಂಬಿಕೆಗಳನ್ನು ಬಿಟ್ಟುಕೊಟ್ಟಿಲ್ಲ; ಈಗಲೂ ಆಚರಿಸುತ್ತಾರೆ. ಆದ್ದರಿಂದ ಇನ್ನುಳಿದ ಭಾರತೀಯ ಹರಿಜನರಿಗಿಂತ ಕರ್ನಾಟಕದ ಹರಿಜನರ ಸ್ಥಾನಮಾನಗಳು ಭಿನ್ನವಾಗಿರುವದು ಮತ್ತು ಪ್ರಗತಿಪರವಾಗಿರುವದು ಒಂದು ವಿಶೇಷವಾದ ಸಂಗತಿ.

— —

ಭಾರತದ ಅನುಸೂಚಿತ ಸಮುದಾಯಗಳು

● ಬ. ಹ. ಅವಾತಿ

ಮುಖ್ಯವಾಗಿ ಅಪರಾಧಿ ಚಟುವಟಿಕೆಗಳನ್ನೇ ಆನುವಂಶಿಕ ಜೀವನೋಪಾಯವನ್ನಾಗಿಸಿಕೊಂಡ, ಸಾಮಾನ್ಯ ಸಂಸ್ಕೃತಿಯನ್ನು ಹೊಂದಿದ ಮತ್ತು ಯಾವಾಗಲೂ ಕೂಡಿಕೊಂಡೇ ಬಾಳುವ ಹಲವಾರು ಸಮುದಾಯಗಳು ಭಾರತದಲ್ಲಿವೆ. ಕಳೆದ ಶತಮಾನದ ಮಧ್ಯದಲ್ಲಿ ಅನೇಕ ಕಳುವಿನ, ಲೂಟಿಯ ಮತ್ತು ದರೋಡೆಯ ಪ್ರಕರಣಗಳು ಹೆಚ್ಚಿದ್ದವು. ಕೆಲವೊಂದು ಬುಡಕಟ್ಟುಗಳಿಗೆ ಮತ್ತು ಇತರ ಸಮುದಾಯಗಳಿಗೆ ಸಂಬಂಧಿಸಿದ ಜನರೇ ಮುಖ್ಯವಾಗಿ ಈ ಅಪರಾಧಿ ಚಟುವಟಿಕೆಗಳಲ್ಲಿ ತೊಡಗಿದ್ದರೆಂದು ಕಂಡುಬಂದಾಗ ಈ ಜನರ ಅಪರಾಧಿ ಕೃತ್ಯಗಳನ್ನು ನಿಗ್ರಹಿಸಲು ಆಗಿನ ಬ್ರಿಟಿಷ ಸರಕಾರವು, ೧೮೭೧ರಲ್ಲಿ, "ಅಪರಾಧಿ ಬುಡಕಟ್ಟು ಕಾಯ್ದೆ"ಯನ್ನು ಮಾಡಿ ಆಚರಣೆಯಲ್ಲಿ ತಂದಿತು. ಈ ಕಾಯ್ದೆಯ ಪ್ರಕಾರ ಅಪರಾಧಗಳನ್ನೇ ಮುಖ್ಯವಾಗಿ ಜೀವನ ನಿರ್ವಹಣೆಯ ಸಾಧನವನ್ನಾಗಿಸಿಕೊಂಡ ಸಮುದಾಯಗಳನ್ನು ಗುರುತಿಸಿ ಅಂಥವುಗಳನ್ನು "ಅಪರಾಧಿ ಬುಡಕಟ್ಟು" ಅಥವಾ "ಅಪರಾಧಿ ಸಮುದಾಯ"ಗಳೆಂದು ಸರಕಾರವು ಸೂಚಿಸಿ ಪ್ರಕಟಿಸಿತು. ಅಂದಿನಿಂದ ೧೯೫೨ರ ವರೆಗೆ ಈ ಸಮುದಾಯಗಳು ಮುಖ್ಯವಾಗಿ ಅಪರಾಧಿ ಬುಡಕಟ್ಟು ಕಾಯ್ದೆಯ ಕಕ್ಷೆಯಲ್ಲಿ ಬಂದವಲ್ಲದೇ ಈ ಕಾಯ್ದೆಯ ಅನುಬಂಧನೆಗಳ ಪ್ರಕಾರವೇ ಇವುಗಳನ್ನು ನಡೆಸಿಕೊಳ್ಳಲಾಯಿತು. ಸ್ವಾತಂತ್ರ್ಯ ದೊರಕಿದ

ನಂತರ ಭಾರತ ಗಣರಾಜ್ಯವು ಕಲ್ಯಾಣರಾಜ್ಯದ ಧೋರಣೆಗನುಗುಣವಾಗಿ ಅಪರಾಧಿ ಬುಡಕಟ್ಟು ಕಾಯ್ದೆಯನ್ನು ೧೯೫೨ರಲ್ಲಿ ತೆಗೆದುಹಾಕಿತು. ನಂತರ ಈ ಸಮುದಾಯಗಳನ್ನು "ಮಾಜಿ ಅಪರಾಧಿ ಬುಡಕಟ್ಟು ಅಥವಾ ಸಮುದಾಯ"ಗಳೆಂದು ಕರೆಯಲಾಯಿತು. ಆದರೆ ಅವರನ್ನು ಸಂಬೋಧಿಸಲು ಉಪಯೋಗಿಸಿದ ಈ ಪದವು ಪೂರ್ಣ ಬದಲಾವಣೆಯ ಹಂತದಲ್ಲಿದ್ದ ಈ ಸಮುದಾಯಗಳಿಗೆ ಅವಮಾನಕಾರಕವಾಗಿ ಕಂಡುಬಂದಿತಲ್ಲದೇ ಅವರ ಪುನರ್ನೆಲೆಗೊಳ್ಳುವಿಕೆಯ ಮಾರ್ಗದಲ್ಲಿ ಆತಂಕವಾಗಿ ಪರಿಣಮಿಸಿತು. ಹಲವಾರು ವಿಧವಾಗಿರುವ ಈ ಬುಡಕಟ್ಟು ಅಥವಾ ಸಮುದಾಯಗಳಿಗೆ "ಮಾಜಿ ಅಪರಾಧಿ ಬುಡಕಟ್ಟು ಅಥವಾ ಸಮುದಾಯ" ಎಂಬ ಹೆಸರಿಗೆ ಬದಲಾಗಿ ಬೇರೆ ಹೆಸರನ್ನು ಅಳವಡಿಸಿಕೊಳ್ಳುವುದು ಕಠಿಣ ಕಾರ್ಯವೇ ಸರಿ. ೧೯೫೨ರ ನಂತರ ಈ ಸಮುದಾಯಗಳು ಅನುಸೂಚಿತವಾಗಿವೆಯಾದ್ದರಿಂದ ಎಲ್ಲ ಸಮುದಾಯಗಳಿಗೂ ಅನ್ವಯವಾಗುವಂತೆ "ಅನುಸೂಚಿತ ಸಮುದಾಯಗಳು" ಎಂಬ ಪದವನ್ನೇ ಅಳವಡಿಸಿಕೊಳ್ಳಲಾಯಿತು.

ಈ ಸಮುದಾಯಗಳ ಮೂಲಸ್ಥಿತಿ ಮತ್ತು ಇತಿಹಾಸವನ್ನು ಪರಿಶೋಧಿಸುವದೊಂದು ಕಠಿಣ ಕಾರ್ಯ. ಏಕೆಂದರೆ ಇವುಗಳ ಮೂಲಸ್ಥಿತಿಗೆ ಸಂಬಂಧಿಸಿದ ಹಲವಾರು ವಿಷಯಗಳು ಕೇವಲ ಊಹಾಪೋಹಗಳಿಂದ ಕೂಡಿವೆ. ಮುಖ್ಯವಾಗಿ ಇವರು ಭಾರತೀಯ ಮೂಲನಿವಾಸಿಗಳ ಪೀಳಿಗೆಯವರಿರಬೇಕೆಂದು ಭಾವಿಸಲಾಗುತ್ತದೆ. ಜನಾಂಗೀಯ ದೃಷ್ಟಿಯಿಂದ ಅವರದು ಮಿಶ್ರ ಸಂತತಿ. ಆದರೂ ಅವರಲ್ಲಿಯ ಕೆಲವರಲ್ಲಿ ಮೂಲನಿವಾಸಿಗಳ ಲಕ್ಷಣಗಳಿವೆಯೆಂದು ನಂಬಲಾಗಿದೆ. ಈ ಸಮುದಾಯಗಳು ಧಾರಾಳವಾಗಿ ಇತರ ಜಾತಿ ಮತ್ತು ಸಮೂಹಗಳಿಗೆ ಸಂಬಂಧಿಸಿದ ಸದಸ್ಯರನ್ನು ತಮ್ಮ ಸಮುದಾಯಗಳ ಸದಸ್ಯರಲ್ಲಿ ಸೇರ್ಪಡೆ ಮಾಡಿಕೊಂಡಿದ್ದು ಇವರ ಒಂದು ವೈಶಿಷ್ಟ್ಯ. ಈ ಕಾರಣದಿಂದಾಗಿ ಅವರ ಮೂಲ ಮತ್ತು ಪೂರ್ವೇತಿಹಾಸವನ್ನು ನಿಖರವಾಗಿ ತಿಳಿದುಕೊಳ್ಳುವದು ಕಠಿಣ ಕೆಲಸವಾಗಿದೆ. ಆದರೂ ಅಪರಾಧಿ ವೃತ್ತಿಗಳನ್ನು ಕೈಕೊಂಡ ವಿವಿಧ ಸಮುದಾಯಗಳ ಜನರೆಲ್ಲರೂ ಯಾವುದಾದರೊಂದು ವಿಶಿಷ್ಟ ಜನಾಂಗಕ್ಕೆ ಸೇರಿದವರಲ್ಲ. ಸಾಮಾನ್ಯವಾಗಿ ಸಾಮಾಜಿಕ ಮತ್ತು ಆರ್ಥಿಕ ಕಾರಣಗಳು ಈ ಜನರ ಅಪರಾಧಿ ವರ್ತನೆಗಳಿಗೆ ಪ್ರಚೋದಕಗಳಾಗಿದ್ದವು. ಅವರಿಗೆ ವಾಸವಾಗಿರಲು ಯಾವುದೇ ನಿಶ್ಚಿತ ವಾಸಸ್ಥಾನವಾಗಲೀ, ಬೇಸಾಯ ಮಾಡಲು ಭೂಮಿಯಾಗಲೀ ಹಾಗೂ ನಿರ್ದಿಷ್ಟ ಉದ್ಯೋಗವಾಗಲಿ ಇರಲಿಲ್ಲ. ತಮ್ಮ ಸಾಮಾನು ಮತ್ತು ಸಾಕುಪ್ರಾಣಿಗಳೊಂದಿಗೆ ಇಡೀಕುಟುಂಬದ ಸಮೇತ ದೇಶದ ತುಂಬೆಲ್ಲ ಅಲೆದಾಡುತ್ತ ಸಣ್ಣಪ್ರಮಾಣದ ವ್ಯಾಪಾರ, ಜ್ಯೋತಿಷ್ಯ, ಇಂದ್ರಜಾಲ, ದೊಂಬರಾಟ ಮುಂತಾದ ಕಸಬುಗಳನ್ನು

ಕೈಕೊಂಡರು. ಈ ಕಸಬುಗಳಿಂದ ಜೀವನನಿರ್ವಹಣೆಗೆ ಸಾಕಾಗುವಷ್ಟು ಆದಾಯ ದೊರೆಯಲಿಲ್ಲವಾದ್ದರಿಂದ ಅವರು ಕಳವು ಹಾಗೂ ಇತರ ಅಪರಾಧಗಳಿಂದ ತಮ್ಮ ಆದಾಯ ಹೆಚ್ಚಿಸಿಕೊಳ್ಳಬೇಕಾಯಿತು.

ರಾಜಸ್ಥಾನದಲ್ಲಿ ಅಪರಾಧಿ ಬುಡಕಟ್ಟುಗಳಿಗೆ ಸೇರಿದ ಕೆಲವರು ೧೩ನೆಯ ಶತಮಾನದಲ್ಲಿ ಅಲ್ಲಾಉದ್ದೀನ ಖಿಲ್ಜಿಯು ಚಿತ್ತೂರನ್ನು ಗೆದ್ದುಕೊಂಡಾಗ ತಮ್ಮ ವಾಸಸ್ಥಾನಗಳನ್ನು ಬಿಟ್ಟರು. ಚಿತ್ತೂರನ್ನು ಪುನಃ ಜಯಿಸುವವರೆಗೆ ತಾಯ್ನಾಡಿಗೆ ಮರಳಬಾರದೆಂದು ಪ್ರತಿಜ್ಞೆಗೈದರು. ಹೀಗೆ ಅಲೆಮಾರಿತನವನ್ನು ಮುಂದುವರೆಸಿದ ಅವರು ನಿಶ್ಚಿತವಾದ ಉದ್ಯೋಗವಿಲ್ಲದ ಕಾರಣ ಜೀವನ ನಿರ್ವಹಣೆಗೆ ಅಪರಾಧಗಳನ್ನಾಶ್ರಯಿಸಬೇಕಾಯಿತು. ಬಾವಾರಿಯಾ, ಸಾನ್ಸೀ, ಕಂಜಾರಾ, ಬಂಜಾರಾ, ರಾಜಪೂತ, ಭಾಮ್ಟಾ ಮುಂತಾದ ಉತ್ತರದ ದೇಶದ ಕೆಲವು ಸಮುದಾಯುಗಳು ತಾವು ರಜಪೂತ ವಂಶಾವಳಿಯವರೆಂದು ತಿಳಿಯುತ್ತಾರಲ್ಲದೇ ಕ್ಷತ್ರಿಯ ಕುಲದ ಹೆಸರುಗಳನ್ನು ಹೊಂದಿದ್ದಾರೆ. ಇವರಲ್ಲಿ ಕೆಲವರು ಮುಸಲ್ಮಾನರ ದಾಳಿಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಅಲೆಮಾರಿಗಳಾದರಲ್ಲದೇ ಜೀವನೋಪಾಯಕ್ಕಾಗಿ ಅಪರಾಧಿ ಕೃತ್ಯಗಳನ್ನು ಕೈಕೊಂಡರು. ಕೆಲವು ಬಂಜಾರಾ ಸಮುದಾಯುಗಳು ಸೈನ್ಯದಲ್ಲಿ ಆಶ್ರಯ ಪಡೆದು ಯುದ್ಧಕಾಲದಲ್ಲಿ ಸೈನ್ಯಕ್ಕೆ ಬೇಕಾಗುವ ದವಸ ಧಾನ್ಯಗಳು ಮತ್ತು ಇತರ ಸಾಮಗ್ರಿಗಳನ್ನು ಹೊತ್ತು ಸಾಗಿಸುವ ಕಾರ್ಯದಲ್ಲಿ ನಿರತರಾಗಿದ್ದರು. ಕಾಲಾಂತರದಲ್ಲಿ ಅವರು ತಮ್ಮ ಮನೆಮಂದಿಗಳ ಸಂಪರ್ಕವನ್ನು ಕಡಿದುಕೊಂಡು, ಸೈನ್ಯದ ಆಶ್ರಯವನ್ನು ಕಳೆದುಕೊಂಡು ಸಂಚಾರಿಜನರಾದರು.

ಒಂದು ಕಾಲದಲ್ಲಿ ಸಮೃದ್ಧಿಯ ಜನರಾಗಿದ್ದ ದಕ್ಷಿಣ ಭಾರತದ ಕೊರವರು ಪ್ರಾಣಿಗಳ ಮೇಲೆ ಸಾಮಾನು ಸಾಗಿಸಿ ವ್ಯಾಪಾರಮಾಡುತ್ತಿದ್ದರು. ಇದರಿಂದ ಅವರಿಗೆ ವಿವಿಧ ಸ್ಥಳಗಳ ಮತ್ತು ಜನರ ನಿಕಟ ಪರಿಚಯವಾಯಿತು. ಅವರ ಈ ವಿಶೇಷ ಜ್ಞಾನವನ್ನು ಗುರುತಿಸಿ ಆ ಕಾಲದ ಅರಸರು ಅವರನ್ನು ಗುಪ್ತಚಾರರ ಪಡೆಯಲ್ಲಿ ಸೇರಿಸಿಕೊಂಡರು. ಟಿಪ್ಪೂ ಸುಲ್ತಾನನೂ ಸಹ ಇವರನ್ನು ವೈರಿ ಸೈನಿಕರ ನೆಲೆಗಳಲ್ಲಿ ಗುಪ್ತಚಾರರ ಕೆಲಸಕ್ಕೆ ನೇಮಿಸಿಕೊಂಡಿದ್ದಾನೆಂದು ತಿಳಿದು ಬರುತ್ತದೆ. ತಮ್ಮ ಈ ಆನುವಂಶಿಕ ಉದ್ಯೋಗವನ್ನು ಕಳೆದುಕೊಂಡಮೇಲೆ ಕೊರವರು ಸುಸಂಘಟಿತರಾಗಿ ತಮ್ಮ ಜಾಣಾಕ್ಷತೆಯನ್ನುಪಯೋಗಿಸಿಕೊಂಡು ಅಪರಾಧಿ ಕೃತ್ಯಗಳಲ್ಲಿ ತೊಡಗಿ ಅದನ್ನೇ ಒಂದು ವಿಶಿಷ್ಟ ಕಲೆಯನ್ನಾಗಿ ರೂಪಿಸಿಕೊಂಡರು. ಹಿಂದೊಮ್ಮೆ ಯುದ್ಧದಲ್ಲಿ ನಿಪುಣತೆ ಪಡೆದಿದ್ದ ತಮಿಳುನಾಡಿನ ಮಧುರೈ, ರಾಮನಾಡು, ತಂಜಾವೂರ ಮತ್ತು ತಿರುಚನಾಪಳ್ಳಿ ಜಿಲ್ಹೆಗಳಲ್ಲಿ

ವಾಸವಾಗಿದ್ದ "ಕಳ್ಳಾರ" ಎಂಬುವವರು ಹಿಂದಿನ ಪಾಂಡ್ಯ ಮತ್ತು ಚೋಳ ರಾಜರ ವಂಶದವರೆಂದು ಹೇಳಿಕೊಳ್ಳುತ್ತಾರೆ. ಪುದುಕೋಟ್ಟಾಯಿಯ ಅರಸರು ಕಳ್ಳಾರ್ ಬುಡಕಟ್ಟಿಗೆ ಸೇರಿದವರಾಗಿದ್ದರು ಎಂದು ತಿಳಿದುಬರುತ್ತದೆ. ಕಳ್ಳಾರರು ತಮ್ಮ ವಿಶಿಷ್ಟ ಅಸ್ತ್ರವಾದ "ಬೂಮರಾಂಗ"ನ್ನು ಧಾರ್ಮಿಕ ಪೂಜಾವಿಧಿಗಳಲ್ಲಿ ಮತ್ತು ಸಣ್ಣಪುಟ್ಟ ಪ್ರಾಣಿಗಳ ಬೇಟೆಗಳಲ್ಲಿ ಈಗಲೂ ಉಪಯೋಗಿಸುತ್ತಾರೆ. ಕೊರವ ಸ್ತ್ರೀಯರು ದೈಹಿಕ ಕಾರ್ಯಗಳಲ್ಲಿ ಪುರುಷರಷ್ಟೇ ಗಟ್ಟಿಗರು ಎಂದು ಪ್ರಸಿದ್ಧರಾಗಿದ್ದರು. ಪ್ರಾಮಾಣಿಕ ದುಡಿಮೆಯಿಂದ ಜೀವನವು ಸಾಗದಾದಾಗ ಇವರು ಅಪರಾಧಗೈಯಲು ಪ್ರಾರಂಭಿಸಿದರೆಂದು ಕಂಡುಬಂದಿದೆ.

ಹೊಸ ಸಾರಿಗೆಸಂಪರ್ಕ ಹಾಗೂ ಇತರ ಸೌಲಭ್ಯಗಳಿಂದ ನಿರ್ಮಾಣಗೊಂಡ ಹೊಸ ಆರ್ಥಿಕ ವ್ಯವಸ್ಥೆಯಿಂದಾಗಿ ಇನ್ನೂ ಹಲವಾರು ಬುಡಕಟ್ಟು ಮತ್ತು ಇತರ ಸಮುದಾಯಗಳ ಜನರು ಕೈಕೊಂಡು ಬಂದಂತಹ ಪರಂಪರಾಗತ ಉದ್ಯೋಗಗಳಿಗೆ ಅವಕಾಶವಿಲ್ಲದಾಯಿತು. ಇದಲ್ಲದೇ ನಿರಕ್ಷರತೆ, ಹಿಂದುಳಿಯುವಿಕೆ ಮತ್ತು ತಾಂತ್ರಿಕ ಜ್ಞಾನದ ಅಭಾವದಿಂದಾಗಿ ಬದಲಾವಣೆಗೆ ಹೊಂದಿಕೊಳ್ಳಲು ಅಸಮರ್ಥರಾದರು. ಕೊನೆಗೆ ಕಷ್ಟತರವಾದ ಅಪರಾಧಿ ಜೀವನವನ್ನೇ ಅವಲಂಬಿಸಬೇಕಾಯಿತು. ಒಮ್ಮೆ ಇಂತಹ ಜೀವನದಲ್ಲಿ ಒಳಹೊಕ್ಕವರು ಹೊರಗೆ ಬರಲು ಅಸಮರ್ಥರಾದರು.

ಈ ಎಲ್ಲ ಸಮುದಾಯಗಳ ಸದಸ್ಯರು ತಮ್ಮದೇ ಆದ ಅಪರಾಧಿ ಕೃತ್ಯಗಳಲ್ಲಿ ತೊಡಗಿದ್ದುದು ಇವರ ಒಂದು ವೈಶಿಷ್ಟ್ಯ. ಪ್ರತಿಯೊಂದು ಅಪರಾಧಿ ಸಮುದಾಯವೂ ಯಾವುದಾದರೊಂದು ಅಪರಾಧಕ್ಕೆ ಅಂಟಿಕೊಂಡಿದೆಯಲ್ಲದೇ ಅಪರಾಧಗೈಯುವ ವಿಶಿಷ್ಟ ವಿಧಾನಗಳನ್ನೂ ಅಳವಡಿಸಿಕೊಂಡಿದೆ. ಅನೇಕ ಸಂದರ್ಭಗಳಲ್ಲಿ ಪೊಲೀಸರು ವಿಶಿಷ್ಟ ವಿಧಾನಗಳಿಂದ ಅಪರಾಧಗೈದ ಅಪರಾಧಿ ಸಮೂಹವನ್ನು ಪತ್ತೆಹಚ್ಚುತ್ತಾರೆ. ಸಾಮಾನ್ಯವಾಗಿ ಒಬ್ಬ ಚತುರ, ದಿಟ್ಟ ಹಾಗೂ ಸಾಹಸಿ ಮುಂದಾಳುವಿನ ಮಾರ್ಗದರ್ಶನದಲ್ಲಿ ಹತ್ತು, ಹನ್ನೆರಡು ಕುಟುಂಬಗಳು ಗುಂಪುಗೂಡಿ ಯಾವಾಗಲೂ ಒಗ್ಗಟ್ಟಿನಿಂದ ಸಂಚರಿಸುತ್ತಿರುತ್ತವೆ. ಇಂತಹ ಸಂಚಾರಿ ಗುಂಪುಗಳು ಅನೇಕ ಹಳ್ಳಿಗಳಲ್ಲಿ ಭಯವನ್ನು ಹುಟ್ಟಿಸಿವೆ. ಪ್ರತಿಯೊಂದು ತಂಡಕ್ಕೆ ಅಥವಾ ಅನೇಕ ತಂಡಗಳಿಂದ ಕೂಡಿದ ಸಮುದಾಯಕ್ಕೆ ಅಥವಾ ಬುಡಕಟ್ಟಿಗೆ ತನ್ನದೇ ಆದ ಪಂಚಾಯತಿಯು ಇರುತ್ತದೆ. ಇದೊಂದು ಬಲಿಷ್ಠವಾದ ಸಂಘಟನೆಯಾಗಿದ್ದು ಸಾಮಾನ್ಯವಾಗಿ ಪರಂಪರಾಗತವಾಗಿ ಬಂದ ಹಿರಿಯನ ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸುತ್ತವೆ.

ಇದೊಂದು ಸಮರ್ಥ ಮತ್ತು ಬಲಶಾಲಿ ವ್ಯವಸ್ಥೆಯಾಗಿರದಿದ್ದರೆ ಈ ಅಪರಾಧಿ ಸಮುದಾಯಗಳ ಒಕ್ಕಟ್ಟು ಎಂದೋ ಒಡೆದುಹೋಗಬಹುದಾಗಿತ್ತು.

ಸಾಮಾನ್ಯವಾಗಿ ಪ್ರತಿಯೊಂದು ಅಪರಾಧಿ ಸಮೂಹಕ್ಕೆ ಅದರ ಪಂಚಾಯತಿಯು ವಿಧಿಸಿದ ನೀತಿ, ನಿಬಂಧನೆ, ವಿಧಿ, ಕಟ್ಟಳೆಗಳಿವೆ. ಇವಲ್ಲದೇ ಅಪರಾಧೀ ಕೃತ್ಯಗಳಿಗೆ ಸಂಬಂಧಿಸಿದ ಸಂರಕ್ಷಣಾ ಯೋಜನೆಯು ಸಾಂಪ್ರದಾಯಕವಾಗಿ ಆಚರಣೆಯಲ್ಲಿವೆ. ಈ ಯೋಜನೆಯನ್ವಯ ಅಪರಾಧಗಳಲ್ಲಿ ತೊಡಗಿದ್ದಾಗ ಅಂಗವಿಕಲನಾದ ಯಾವುದೇ ವ್ಯಕ್ತಿಗೆ ಇಡೀ ಸಮುದಾಯವೇ ಸಂರಕ್ಷಣೆಯನ್ನೊದಗಿಸುತ್ತದೆ. ಇವಲ್ಲದೇ ಜೀವನೋಪಾಯಕ್ಕಾಗಿ ಅವನನ್ನೇ ಅವಲಂಬಿಸಿದ ವ್ಯಕ್ತಿಗಳಿಗೆ ಯೋಗ್ಯ ಪರಿಹಾರವನ್ನೂ ಒದಗಿಸುತ್ತದೆ. ಪಂಚಾಯತಿಯ ಮುಖಂಡನು ತೊಂದರೆಗೊಳಗಾದ ಕುಟುಂಬದ ಯೋಗಕ್ಷೇಮ ಮತ್ತು ರಕ್ಷಣೆಯ ಹೊಣೆಯನ್ನಲ್ಲದೇ ಇನ್ನುಳಿದ ವ್ಯಕ್ತಿಗಳಿಗೆ ಅಪರಾಧಗಳ ವಿಷಯಕ್ಕೆ ತರಬೇತಿ ನೀಡುವ ಹೊಣೆಯನ್ನೂ ಸಹ ಹೊತ್ತಿರುತ್ತಾನೆ.

ಈ ಸಮೂಹಗಳಲ್ಲಿಯ ವ್ಯಕ್ತಿಗಳಿಗೆ ಬಾಲ್ಯದಿಂದಲೇ ಅಪರಾಧಗಳ ವಿಷಯದಲ್ಲಿ ತರಬೇತಿಯನ್ನು ನೀಡಲಾಗುತ್ತದೆ. ಯೌವನವು ಪ್ರಾಪ್ತವಾಗುವ ವಯಸ್ಸಿಗೆ ಸ್ವಲ್ಪ ಹೆಚ್ಚು ಕಡಿಮೆ ತರಬೇತಿಯು ಮುಗಿಯುತ್ತದೆ. ನಂತರ ಇವರು ಹಿರಿಯರು ಕೈಗೊಳ್ಳಬಹುದಾದಂತಹ ಅಪರಾಧೀ ಕೃತ್ಯಗಳಲ್ಲಿ ಪಾಲ್ಗೊಳ್ಳುತ್ತಾರೆ. ದಕ್ಷತೆಯಿಂದ ಪರಿಣಾಮಕಾರಿಯಾಗಿ ಎಸಗಿದಂತಹ ಅಪರಾಧೀ ಕೃತ್ಯಗಳಿಗೆ ಈ ಸಮೂಹದ ಮುಖಂಡರು ಮೆಚ್ಚಿಗೆ ಸೂಚಿಸುವರಲ್ಲದೇ ಸಂಬಂಧಿಸಿದ ವ್ಯಕ್ತಿಗಳಿಗೆ ಯೋಗ್ಯ ಪುರಸ್ಕಾರ ಮತ್ತು ಸಾಮೂಹಿಕ ಮನ್ನಣೆಯನ್ನು ಕೊಡುವದು. ಇಂತಹ ಸಾಹಸದ ಕೃತಿಗಳಿಂದ ಅವಿವಾಹಿತ ವ್ಯಕ್ತಿಯು ಸಹಜವಾಗಿ ವಿವಾಹ ಯೋಗ್ಯ ವ್ಯಕ್ತಿಯೆಂದು ಪರಿಗಣಿಸಲ್ಪಡುತ್ತಾನೆ. ಇವೆಲ್ಲ ಕಾರಣಗಳಿಂದ ಈ ಸಮೂಹದಲ್ಲಿರುವ ಅಪರಾಧಿ ಸಂಸ್ಕೃತಿಯು ಮುಂದುವರಿಯಲಿಕ್ಕೆ ಸಹಾಯಕವಾಗಿದೆ. ಪ್ರತಿಯೊಂದು ಸಮೂಹವು ಕಾಲಾಂತರದಿಂದ ಬಂದಂತಹ ಅನುಭವಗಳ ಆಧಾರದ ಮೇಲೆ ರಚಿತವಾದ ಸಂಸ್ಕೃತಿಯ ರೂಪ ಹೊಂದಿರುತ್ತದೆ. ಅಪರಾಧಗಳೇ ಪ್ರಧಾನವಾದ ಈ ಸಮೂಹಗಳ ಸಂಸ್ಕೃತಿಯು ಆಕ್ರಮಣಕಾರಿ ಮನೋಭಾವನೆಯದಾಗಿದೆ. ಗುಂಪಿನ ಐಕ್ಯತೆ, ಗುಂಪಿನ ಶಿಸ್ತು ಮುಂತಾದ ಸಾಮಾನ್ಯ ಅಂಶಗಳನ್ನು ಇದು ಒಳಗೊಂಡಿರುತ್ತದೆ. ಇಂತಹ ಸಂಸ್ಕೃತಿಯಿಂದಲೇ ಈ ಸಮೂಹದ ವ್ಯಕ್ತಿಗಳಿಗೆ "ತಾವೆಲ್ಲ ಒಂದೇ ವರ್ಗಕ್ಕೆ ಸೇರಿದವರು" ಎಂಬ ಅರಿವು ಮೂಡಿ ಅಪರಾಧಿ ಕೃತ್ಯಗಳನ್ನು ಮುಂದುವರಿಸಿಕೊಂಡು ಹೋಗಲು ಕಾರಣವಾಗಿದೆ.

ಈ ಸಮೂಹಗಳನ್ನು ಪುನರ್ನಿವೇಶನಗೊಳಿಸುವ ಉದ್ದೇಶದಿಂದ ಯೋಜನೆಗಳನ್ನು ರೂಪಿಸಲು ಆಯಾ ಸಮೂಹಗಳ ಜೀವನ ರೀತಿಗನುಗುಣವಾಗಿ ಸಂಚಾರಿ (ಅಲೆಮಾರಿ), ಅರೆಸಂಚಾರಿ ಮತ್ತು ನೆಲೆನಿಂತ ಸಮೂಹಗಳೆಂದು ಮೂರು ವಿಧದಲ್ಲಿ ವರ್ಗೀಕರಿಸುತ್ತಾರೆ. "ಬಂಜಾರಾ" ಮತ್ತು "ಪಾರ್ಧಿ"ಗಳಂತಹ ಸಮೂಹಗಳು ತಮ್ಮ ಕುಟುಂಬಗಳೊಡಗೂಡಿ ಯಾವಾಗಲೂ ಅಲೆಯುತ್ತಾ ಇರುತ್ತಾರೆ. ಇವರು ಒಂದೇ ಸ್ಥಳದಲ್ಲಿ ಕೆಲವು ದಿನ ಅಥವಾ ವಾರಗಳಿಗಿಂತ ಹೆಚ್ಚು ಸಮಯ ನೆಲೆ ನಿಲ್ಲುವದಿಲ್ಲ. ರಾಜಪೂತ, ಭಾಮಾಟ, ಕೈಕಾದೀಸ, ಛಾರಾ, ಕಂಜಾರಾ, ಭಾಮಾಟ ಮುಂತಾದ ಅರೆಸಂಚಾರಿ ಸಮೂಹಗಳಿಗೆ ತಮ್ಮವೇ ಆದ ನಿರ್ದಿಷ್ಟ ನಿವಾಸಗಳಿದ್ದರೂ ಕೂಡ ವರ್ಷದ ಕೆಲವೇ ತಿಂಗಳು ಮಾತ್ರ ಅವು ಅಲ್ಲಿ ವಾಸ ಮಾಡುತ್ತವೆ. ವರ್ಷಾವಧಿಯ ಇನ್ನುಳಿದ ಸಮಯದಲ್ಲಿ ಅವು ಜೀವನೋಪಾಯಕ್ಕಾಗಿ ಕುಟುಂಬಗಳೊಳಗೂಡಿ ಸಂಚಾರ ಕೈಕೊಳ್ಳುತ್ತವೆ. ಬಾವಾರಿಯಾ, ಕೋಳಿ, ವಘ್ರಿ ಮುಂತಾದ ಸ್ಥಿರವಾಗಿ ಒಂದೇ ಕಡೆಗೆ ನೆಲೆಸಿದ ಸಮೂಹಗಳು ಆಗಾಗ್ಗೆ ಕೇವಲ ಅಪರಾಧಿ ಕೃತ್ಯಗಳಿಗಾಗಿ ಸಂಚಾರ ಕೈಕೊಳ್ಳುತ್ತವೆ.

ಇನ್ನು ಸಮೂಹಗಳ ಪುನರ್ನಿವೇಶನ ವಿಷಯವನ್ನು ಪರಿಶೀಲಿಸುವ ಪೂರ್ವದಲ್ಲಿ ಮೊದಲು ಅಪರಾಧಿ ಬುಡಕಟ್ಟು ಕಾನೂನು ಮತ್ತು ಈ ಕಾನೂನಿನ ಕಕ್ಷೆಯಲ್ಲಿ ಬಂದಂತಹ ಸಮೂಹಗಳು ಯಾವ ರೀತಿ ಜೀವನವನ್ನು ನಿರ್ವಹಿಸಿದವು ಎಂಬುದನ್ನು ಪರಿಶೀಲಿಸುವಾ.

ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ "ಥಗ" ಮತ್ತು "ಪಿಂಡಾರಿ" ಸಮೂಹಗಳೊಡನೆ ಸೆಣಸಾಡುವಾಗ ಕಳವು ಮತ್ತು ದರೋಡೆಗಳ ಮೇಲೆಯೇ ಜೀವನ ಸಾಗಿಸತಕ್ಕಂತಹ ಸಮೂಹಗಳು ಅಸ್ತಿತ್ವದಲ್ಲಿ ಇವೆ ಎಂಬುದು ಆಗಿನ ಆಂಗ್ಲ ಸರಕಾರದ ಗಮನಕ್ಕೆ ಬಂದಿತು. ೧೮೬೦ರ ಭಾರತೀಯ ದಂಡ ನೀತಿಯ (Indian Peral Code) ಕಾನೂನು ಮತ್ತು ೧೮೬೧ರ ಅಪರಾಧ ಪ್ರಕ್ರಿಯ ಕಾನೂನು(Criminal Procedure Code) ಇವುಗಳ ಸಹಾಯದಿಂದ ಈ ಸಮೂಹಗಳ ಅಪರಾಧಿ ಕಾರ್ಯಗಳನ್ನು ತಡೆಗಟ್ಟಲು ಸಾಧ್ಯವಾಗಲಿಲ್ಲ. ಈ ಕಾರಣದಿಂದ ಭಾರತ ಸರಕಾರವು ೧೮೭೧ ರ ಅಪರಾಧಿ ಬುಡಕಟ್ಟು ಕಾಯ್ದೆಯನ್ನು ಜಾರಿ ಮಾಡಿತು. ಈ ಕಾಯ್ದೆಗನುಗುಣವಾಗಿ ಸರಕಾರವು ಜೀವನೋಪಾಯಕ್ಕಾಗಿ ಅಪರಾಧಗಳನ್ನೇ ಅವಲಂಬಿಸಿಕೊಂಡಿದ್ದ ಸಮೂಹಗಳನ್ನು ಗುರುತಿಸಿ ಅವುಗಳನ್ನು ಅಪರಾಧಿ ಸಮೂಹಗಳೆಂದು ಪರಿಗಣಿಸಿತು. ಈ ಸಮೂಹಗಳ ಅಪರಾಧಿ ಚಟುವಟಿಕೆಗಳನ್ನು ನಿಗ್ರಹಿಸಲು ಸರಕಾರವು ತೆಗೆದುಕೊಂಡಂತಹ ಕ್ರಮಗಳಲ್ಲಿ ಇದು ಮೊದಲನೆಯದು. ೧೮೭೧ರಿಂದ ೧೯೫೨ರ

ವರೆಗೆ ಜಾರಿಯಲ್ಲಿದ್ದ ಈ ಕಾಯ್ದೆಯಲ್ಲಿ ಹಲವಾರು ತಿದ್ದುಪಡಿಗಳಾದವು. ಕೇವಲ ಅಪರಾಧ ಕೃತ್ಯಗಳನ್ನು ನಿಗ್ರಹಿಸುವ ಉದ್ದೇಶದಿಂದ ಈ ಕಾಯ್ದೆಯಲ್ಲಿ ಆದಂತಹ ಕೆಲವು ಬದಲಾವಣೆಗಳ ಪರಿಣಾಮವಾಗಿ ಈ ಸಮೂಹಗಳ ಇನ್ನುಳಿದ ಇತರ ಚಟುವಟಿಕೆಗಳೂ ಸಹಿತ ನಿರ್ಬಂಧಿಸಲ್ಪಟ್ಟವು. ಈ ಸಮೂಹಗಳ ದುಷ್ಕೃತ್ಯ ಗಳಿಂದ ಇನ್ನುಳಿದ ಜನರನ್ನು ರಕ್ಷಿಸುವದೇ ಈ ಕಾಯ್ದೆಯ ಉದ್ದೇಶವಾಗಿತ್ತು. ಅಪರಾಧಿ ಬುಡಕಟ್ಟು ಕಾಯ್ದೆಯಾಗಲೀ ಅಥವಾ ಈ ಕಾಯ್ದೆಯ ಆಧಾರದ ಮೇಲೆ ರಚಿಸಲ್ಪಟ್ಟ ಅಪರಾಧಿ ಸಮೂಹಗಳ ನಿವೇಶನ (ನೆಲೆ)ಗಳಾಗಲೀ ಅಪರಾಧ ಗಳನ್ನು ತಡೆಗಟ್ಟುವ ವಿಷಯದಲ್ಲಿ ಮತ್ತು ಅಪರಾಧಿಗಳನ್ನು ಶಿಕ್ಷಿಸುವಲ್ಲಿ ಸಕ್ರಿಯ ಪಾತ್ರ ವಹಿಸಿದ್ದವೇ ವಿನಹ ಅವರನ್ನು ಸುಧಾರಿಸುವ ಮತ್ತು ಶಾಂತಿಯುತವಾಗಿ ನೆಲೆಗೊಳಿಸುವ ದಿಶೆಯಲ್ಲಿ ಕಾರ್ಯವೆಸಗಲು ಸಹಾಯಕವಾಗಲಿಲ್ಲ. ಅಪರಾಧಿ ಸಮೂಹಗಳ ನಿವೇಶನ (ನೆಲೆ)ಗಳು ಈ ಜನರನ್ನು ಪುನರ್ನೆಲೆಗೊಳಿಸಲು ಪ್ರಯತ್ನಿಸಿದರೂ ಸಹಿತ ಪುನರ್ನೆಲೆಗೊಳಿಸಬೇಕೆಂಬುದೇ ಮೂಲೋದ್ದೇಶವಾಗಿ ರಲಿಲ್ಲ. ಈ ನಿವೇಶನಗಳು ಅಸ್ತಿತ್ವದಲ್ಲಿ ಬಂದ ನಂತರ ಕೆಲವೊಂದು ಅಪರಾಧಿ ಕುಟುಂಬಗಳು ಅಪರಾಧಿ ಕೃತ್ಯಗಳನ್ನು ತೊರೆದು ಸುಧಾರಣೆ ಹೊಂದಿದ ವಿಷಯ ವನ್ನು ಅಲ್ಲಗಳೆಯಲು ಬರುವಂತಿಲ್ಲ. ಆದರೆ ಇವುಗಳ ಮೇಲೆ ಖರ್ಚು ಮಾಡಿದ ಹಣ ಮತ್ತು ವರ್ಷಾನುಗಟ್ಟಲೆ ಮಾಡಿದ ಪ್ರಯತ್ನಗಳನ್ನು ಗಣನೆಗೆ ತೆಗೆದುಕೊಂಡಾಗ ಅಪರಾಧಿ ಸಮೂಹಗಳ ಜನಸಂಖ್ಯೆಯು ಕೆಲವಂಶವಷ್ಟೇ ಸುಧಾರಣೆಯಾಗಿದೆ ಎಂದು ಹೇಳಬಹುದು. ಬಹು ಅಂಶ ಜನ ಇನ್ನೂ ಅಪರಾಧಿ ಮನೋಭಾವನೆಯನ್ನೇ ಹೊಂದಿದವರಾಗಿದ್ದಾರೆ. ಅಪರಾಧಿ ಬುಡಕಟ್ಟು ಕಾಯ್ದೆ ಮತ್ತು ಅಪರಾಧಿ ನಿವೇಶನಗಳಿಂದ ಈ ಜನರ ಮೇಲಾದ ದುಷ್ಪರಿಣಾಮಗಳನ್ನು ಕುರಿತು ಬಹಳಷ್ಟು ಹೇಳಲಾಗುತ್ತಿದೆ. ಸಂಕ್ಷಿಪ್ತವಾಗಿ ಈ ವಿಷಯದ ಮುಖ್ಯಾಂಶ ಗಳನ್ನು ಇಲ್ಲಿ ಪರಿಶೀಲಿಸುವಾ.

ಅಪರಾಧಿ ನಿವೇಶನದಲ್ಲಿ ಜೀವನೋಪಾಯಕ್ಕಾಗಿ ಖಾಯಂ ಕೆಲಸ ಸಿಕ್ಕರೂ ಸಹಿತ ಇಲ್ಲಿ ಪಾಲಿಸಬೇಕಾಗಿದ್ದ ಕಠಿಣತಮ ನಿಯಮಗಳು ಮತ್ತು ಶಿಸ್ತುಗಳ ಪರಿಣಾಮದಿಂದಾಗಿ ಇಲ್ಲಿಯ ನಿವಾಸಿಗಳಿಗೆ ತೃಪ್ತಿ ಸಿಗಲಿಲ್ಲ. ಸಹಿಸಲಸಾಧ್ಯವಾದ ನಿಯಮ ಶಿಸ್ತುಗಳ ಪರಿಣಾಮದಿಂದಾಗಿ ನಿತ್ಯ ಇವರಿಗೆ ಜೀವನದಲ್ಲಿ ಬೇಸರ ಬರುವಂತಾಯಿತು. ಅಪರಾಧಿ ನಿವೇಶನಗಳ ಹೊರಗೆ ನೆಲೆಸಿದಂತಹ ಜನರ ಜೀವನವೂ ಸಹಿತ ಇದಕ್ಕಿಂತಲೂ ಕಷ್ಟತರವಾಗಿದ್ದಿತು. ಪ್ರತಿದಿನ ಮಧ್ಯ ರಾತ್ರಿ ಪೋಲೀಸರಿಗೊಪ್ಪಿಸಬೇಕಾಗಿದ್ದ ಹಾಜರಿಯಾಗಲೀ ಮತ್ತು ತಮ್ಮ ಪ್ರತಿಯೊಂದು

ಚಲನವಲನವನ್ನು ಪೋಲೀಸರಿಗಾಗಲೀ ಅಥವಾ ಅತಿ ಸಮೀಪದ ಗ್ರಾಮದ ಪಟೇಲನಿಗಾಗಲೀ ತಿಳಿಸಬೇಕಾಗಿದ್ದ ಪ್ರಸಂಗ ಒಂದು ತರಹದ ಶಿಕ್ಷೆಯಾಗಿಯೇ ಪರಿಣಮಿಸಿತು. ಹಾಜರಿ ವ್ಯವಸ್ಥೆಯು ಈ ಜನರ ಅಪರಾಧಿ ಕೃತ್ಯಗಳನ್ನು ಪ್ರತಿಬಂಧಿಸುವುದರ ಬದಲು ಹಾಜರಿ ತೆಗೆದುಕೊಳ್ಳುವ ಪೋಲೀಸ ಮತ್ತು ಪಟೇಲರು ಈ ಜನರಿಂದ ಲಂಚ ತೆಗೆದುಕೊಳ್ಳುವ ದುರ್ವ್ಯವಹಾರಕ್ಕಾಗಿ ಸಹಕಾರಿಯಾಯಿತು. ಅಪರಾಧಿ ಕೃತ್ಯಗಳಿಂದ ದೊರೆಯುವ ಆದಾಯದಲ್ಲಿ ಪಾಲುಕೊಡುವ ಬಗ್ಗೆ ಭರವಸೆ ದೊರೆತಾಗ ಅಧಿಕಾರಿಗಳು ಇವರ ಗೈರುಹಾಜರಿಯಲ್ಲಿಯೂ ಹಾಜರಿ ಕೊಡುತ್ತಿದ್ದರು. ಹೀಗಾಗಿ ಈ ಜನರಿಗೆ ತಮ್ಮ ಕಾರ್ಯದಲ್ಲಿ ಅಪ್ರತ್ಯಕ್ಷ ಪ್ರೋತ್ಸಾಹ ಸಿಗುವಂತಾಯಿತು.

ಸತತವಾಗಿ ಸುಮಾರು ೮೦ ವರ್ಷಗಳ ಕಾಲ ನಿವೇಶನ ಅಧಿಕಾರಿಗಳ ಮೇಲ್ವಿಚಾರಣೆಯಲ್ಲಿ ಮತ್ತು ಆಧೀನದಲ್ಲಿ ಅವರೊದಗಿಸಿದ ಅಲ್ಪ ಸವಲತ್ತುಗಳೊಡನೆ ಪ್ರತಿಬಂಧಿತ ಜೀವನ ನಡೆಸಿದ್ದರ ಕಾರಣದಿಂದಾಗಿ ಜೀವನದಲ್ಲಿಯ ಅವರ ಉತ್ಸಾಹವೇ ಕುಗ್ಗಿತು. ತತ್ಪರಿಣಾಮವಾಗಿ ಇವರು ಪ್ರತಿಯೊಂದಕ್ಕೂ ಸರಕಾರವನ್ನೇ ಅವಲಂಬಿಸುವಂತಾಯಿತು. ಅಪರಾಧಿ ಬುಡಕಟ್ಟು ಕಾಯ್ದೆಯು ಜಾರಿಯಲ್ಲಿದ್ದಾಗ ನಿವೇಶನ ವಾಸಿಗಳಿಗೆ ವೃತ್ತಿ, ಶಿಕ್ಷಣ, ವೈದ್ಯಕೀಯ ಉಪಚಾರ ಮತ್ತು ನೈರ್ಮಲ್ಯ ಮುಂತಾದವುಗಳನ್ನೊದಗಿಸುವದು ಅನಿವಾರ್ಯವಾಗಿತ್ತು. ಈಗ ಈ ಕಾಯ್ದೆಯು ತೆಗೆದುಹಾಕಲ್ಪಟ್ಟಿದೆ. ನಿವೇಶನಗಳ ಸುತ್ತಲೂ ಹೆಣೆದಿದ್ದ ತಂತಿಯ ಬೇಲಿಯನ್ನು ತೆಗೆದುಹಾಕಲಾಗಿದೆ. ಈಗ ಈ ಜನರಿಗೆ ದೊರೆತ ಸ್ವಾತಂತ್ರ್ಯದೊಡನೆ ಅವರ ಮೇಲೆ ಹೆಚ್ಚಿನ ಹೊಣೆಗಾರಿಕೆಯೂ ಬಿದ್ದಿದೆ. ಅವರ ಮೇಲೆ ವಿಧಿಸಿದ ನಿಯಮ ನಿಬಂಧನೆಗಳನ್ನು ತೆಗೆದುಹಾಕಲಾಗಿದೆಯಲ್ಲದೇ ಅವರಿಗೆ ಕೊಡುತ್ತಿದ್ದ ಸವಲತ್ತುಗಳನ್ನು ಸ್ಥಗಿತಗೊಳಿಸಲಾಗಿದೆ. ಬಹಳ ದಿನಗಳಿಂದಲೂ ಬೇಡಿ ಬಯಸಿದ್ದ ಮತ್ತು ಈಗ ಲಭ್ಯವಿರುವ ಸ್ವಾತಂತ್ರ್ಯವನ್ನು ಉಪಯೋಗಿಸಿ ತಮ್ಮ ಪ್ರಗತಿಗೋಸ್ಕರ ಶ್ರಮಿಸುವುದರ ಬದಲು ಇನ್ನೂ ಪ್ರತಿಯೊಂದಕ್ಕೂ ಸರಕಾರವನ್ನೇ ಅವಲಂಬಿಸುವ ಮನೋವೃತ್ತಿಯನ್ನು ಹೊಂದಿದವರಾಗಿದ್ದಾರೆ. ಪರಕೀಯ ಸರಕಾರವು ಖಾಯಂ ನವಕರಿ ಮತ್ತು ಇತರ ಸೌಲಭ್ಯಗಳನ್ನೊದಗಿಸಿರುವಾಗ ನಮ್ಮ ರಾಷ್ಟ್ರೀಯ ಸರಕಾರವು ಇವೆಲ್ಲವುಗಳನ್ನು ಏಕೆ ಒದಗಿಸಬಾರದು ಎಂಬುದೇ ಇವರು ವಾದಸರಣಿ. ತಾವು ಪುನಹ ಅಪರಾಧಿ ಕೃತ್ಯಗಳಿಗಿಳಿಯಬಾರದೆಂದು ಸರಕಾರದ ಅಭಿಲಾಷೆಯಾಗಿದ್ದರೆ ಇವೆಲ್ಲ ಅನುಕೂಲತೆಗಳನ್ನು ಸರಕಾರವು ತಮಗೆ ಒದಗಿಸಬೇಕೆಂಬುದೇ ಇವರ ತರ್ಕ. ಅನೇಕ ವರ್ಷಗಳಿಂದ ಇವರ ಮೇಲೆ ಹೇರಿದ್ದ ಕಟ್ಟಳೆ ನಿರ್ಬಂಧನೆಗಳ ಪರಿಣಾಮವಾಗಿ ಈ

ಜನರು ತಮ್ಮ ಉಪಜೀವನಕ್ಕಾಗಿ ಮತ್ತು ಸಮಸ್ಯೆಗಳನ್ನು ಎದುರಿಸಲು ಅನರ್ಹರಾಗಿದ್ದಾರೆ. ಇಲ್ಲಿಯವರೆಗೂ ಸರಕಾರದ ರಕ್ಷಣೆಯಲ್ಲಿದ್ದ ಇವರಿಗೆ ಹೊರ ಜಗತ್ತಿನ ಪರಿಸ್ಥಿತಿಯ ಬಗ್ಗೆ ಜ್ಞಾನವಾಗಲೀ ಮತ್ತು ರಾಷ್ಟ್ರದ ಜನತೆ ಎದುರಿಸುತ್ತಿರುವ ಹಲವಾರು ಸಮಸ್ಯೆಗಳ ಬಗ್ಗೆ ಕಲ್ಪನೆಯಾಗಲೀ ಇರುವದಿಲ್ಲ. ಈ ವಿಷಯಗಳ ಬಗ್ಗೆ ಜ್ಞಾನವಿದ್ದ ಅವರಲ್ಲಿಯ ಕೆಲವರೂ ಸಹ ಈ ಸಮಸ್ಯೆಗಳನ್ನು ಎದುರಿಸಲಾರದವರಾಗಿದ್ದಾರೆ. ಈ ಎಲ್ಲ ಕಾರಣಗಳಿಂದ ಇವರು ಪುನಃ ಅಪರಾಧಿ ವೃತ್ತಿಗಳನ್ನೇ ಆಶ್ರಯಿಸುವ ಸಾಧ್ಯತೆಯು ಬಹಳಷ್ಟು ಇದೆ.

ಇಂತಹ ಪ್ರಸಂಗದಲ್ಲಿ ಈ ಜನರ ಅಭ್ಯುದಯಕ್ಕೆ ಪ್ರಯತ್ನಿಸುವ ಯಾವುದೇ ಯೋಜನೆಯು ಬಾಲ–ವೃದ್ಧರನ್ನು ಸಾಕಿ–ಸಲಹುವ ಯೋಜನೆಯಂತೆ ಕೇವಲ ರಕ್ಷಣೆಯನ್ನೊದಗಿಸುವಂತಹದಾಗಿರಬಾರದು. ನಿರ್ವಿವಾದವಾಗಿ ಅವರಿಗೆ ಸಹಾಯವನ್ನೊದಗಿಸಬೇಕು. ಆದರೆ ಇಂತಹ ಸಹಾಯದ ಬೆಂಬಲದಿಂದ ಈ ಜನರು ತಮಗೆ ತಾವೇ ಸಹಾಯ ಮಾಡಿಕೊಳ್ಳುವಂತಾಗಬೇಕು. ತಮ್ಮ ಜೀವನಪರ್ಯಂತ ಇಂತಹ ಸಹಾಯ ಸೌಕರ್ಯಗಳನ್ನು ಪಡೆಯುವದು ತಮ್ಮ ಜನ್ಮಸಿದ್ಧ ಹಕ್ಕು ಎಂದು ಯಾವ ಕಾಲಕ್ಕೂ ಈ ಜನರು ಭಾವಿಸುವಂತಾಗಬಾರದು. ಅಪರಾಧಿ ಕೃತ್ಯಗಳನ್ನು ತ್ಯಜಿಸುವುದರ ಮೂಲಕ ಸರಕಾರಕ್ಕೂ ಮತ್ತು ಜನತೆಗೂ ತಾವು ಉಪಕಾರ ಮಾಡುತ್ತಿದ್ದೇವೆ ಎಂದು ಈ ಜನರು ಭಾವಿಸಬಾರದು. ಪ್ರತಿಯೊಬ್ಬರ ಹಿತದೃಷ್ಟಿಯಿಂದ ಈ ಜನರು ಸಭ್ಯಜೀವನ ನಡೆಸಿ ತಮಗೆ ಕೊಡಮಾಡಿದ ಸುವರ್ಣಾವಕಾಶಗಳನ್ನು ಸದ್ವಿನಿಯೋಗಿಸಿಕೊಂಡು ತಮ್ಮ ಪ್ರಗತಿಗಾಗಿ ಶ್ರಮಿಸುವದೊಳಿತು.

ಅಪರಾಧಿ ವರ್ತನೆಯು ದೈಹಿಕವಾಗಿ, ವಂಶಪಾರಂಪರ್ಯವಾಗಿ ಸಾಗಿಸಲ್ಪಡುತ್ತದೆ ಎನ್ನುವದನ್ನು ಅಪರಾಧಶಾಸ್ತ್ರಜ್ಞರು ಮತ್ತು ಈ ವಿಷಯಕ್ಕೆ ಸಂಬಂಧಿಸಿದ ಇತರ ತಜ್ಞರು ಒಪ್ಪಿಕೊಳ್ಳುವದಿಲ್ಲ. ಪ್ರಾಮಾಣಿಕ ಜೀವನ ಸಾಗಿಸಲು ಯೋಗ್ಯ ಅನುಕೂಲತೆಗಳ ಕೊರತೆ ಇದ್ದುದರಿಂದಲೇ ಈ ಜನರು ಅನೇಕ ವರ್ಷಗಳಿಂದ ಅಪರಾಧಿ ಜೀವನವನ್ನು ಸಾಗಿಸುತ್ತಾ ಬಂದಿದ್ದಾರೆ. ಕಾಯಂ ವೃತ್ತಿ ಮತ್ತು ಇನ್ನಿತರ ಕೆಲಸಗಳಿಂದ ಹಲವಾರು ಕುಟುಂಬಗಳು ಶಾಂತಿಯುತವಾಗಿ ನೆಲೆಸಿವೆ ಎಂಬುದನ್ನು ಕಂಡುಕೊಳ್ಳಬಹುದು. ಈ ಸಮೂಹಗಳಿಗೆ ಕಾಯಂ ಆದಾಯ ತರುವಂತಹ ಸ್ಥಿರ ಉದ್ಯೋಗಗಳನ್ನು ದೊರಕಿಸಿಕೊಡುವದು ಅತಿ ಮುಖ್ಯ ಕರ್ತವ್ಯಗಳಲ್ಲಿ ಒಂದಾಗಿದೆ. "ಅಪರಾಧಿ ಸಮೂಹಗಳು" ಎಂಬುದರ ಬದಲಾಗಿ "ಅನುಸೂಚಿತ ಸಮೂಹಗಳು" ಎಂದು ಬರಹದಲ್ಲಿ ಬದಲಾವಣೆ

ಯಾದರೂ ಸಹಿತ ಇನ್ನಿತರ ಜನರ ಮನೋಭಾವದಲ್ಲಿ ಅದರಲ್ಲಿಯೂ ಉದ್ಯೋಗ ಕೊಡುವವರ ಮನೋಭಾವದಲ್ಲಿ ಹೆಚ್ಚಿನ ಬದಲಾವಣೆಯಾಗಿಲ್ಲ. ನೌಕರಿ ಕೊಡುವವರು ಈ ಜನರ ವಿಷಯಕ್ಕೆ ಇನ್ನೂ ಸಂಶಯ ಉಳ್ಳವರಾಗಿದ್ದು ಕೆಲಸ ಕೊಡಲು ಹಿಂಜರಿಯುತ್ತಿದ್ದಾರೆ. ಇದು ಪ್ರಾಮಾಣಿಕ ಜೀವನ ಸಾಗಿಸಬೇಕೆಂದು ಇಚ್ಛೆಯುಳ್ಳವರನ್ನೂ ಸಹ ಮರಳಿ ಅಪರಾಧಿ ವೃತ್ತಿಗೆ ಹೋಗುವಂತೆ ಮಾಡಿದೆ. ಆದ್ದರಿಂದ ಪುನರ್ನೆಲೆಗೊಳಿಸುವ ಪ್ರಕ್ರಿಯೆಯಲ್ಲಿ ಅವರಿಗೆದುರಾದ ಇಂತಹ ಸಮಸ್ಯೆಗಳಲ್ಲಿ ಪ್ರವೇಶಿಸಿ ಅವರಿಗೆ ಸ್ಥಿರವಾದ ಉದ್ಯೋಗ ದೊರಕಿಸಿಕೊಡಲು ಪ್ರಯತ್ನಿಸಬೇಕು. ಪ್ರತಿಯೊಂದು ಜಿಲ್ಹೆಯಲ್ಲಿ ಕೆಲವರಿಗಾದರೂ ಇಂತಹ ಸೌಲಭ್ಯಗಳನ್ನು ಒದಗಿಸಿದರೆ ಇವರು ಇತರರಿಗೆ ಮಾದರಿಯಾಗಬಹುದು. ಇದು ಕೇವಲ ಪ್ರಚಾರಸಾಧನಕ್ಕಿಂತ ಸಮಾಜದಲ್ಲಿ ಇನ್ನುಳಿದವರ ಮೇಲೆ ಒಳ್ಳೆಯ ಪ್ರಭಾವ ಬೀರಬಲ್ಲದು.

ಇಲ್ಲಿ ಗಣನೆಗೆ ತೆಗೆದುಕೊಳ್ಳಬೇಕಾದ ಮತ್ತೊಂದು ಮುಖ್ಯ ವಿಷಯ ವೆಂದರೆ ಶಿಕ್ಷಣ. ಯಾವುದೇ ಸಮಾಜ ಸುಧಾರಣೆಯಲ್ಲಿ ಶಿಕ್ಷಣದ ಪಾತ್ರದ ಮಹತ್ವ ಸಾಮಾನ್ಯವಾಗಿ ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಇಲ್ಲಿ ಅದನ್ನೇ ಪುನರುಚ್ಚರಿಸುವದು ಅಪ್ರಾಸಂಗಿಕ. ಈ ಜನರಿಗೆ ವಿಶೇಷವಾಗಿ ತಾಂತ್ರಿಕ ಶಿಕ್ಷಣ ಮತ್ತು ವೃತ್ತಿ ಶಿಕ್ಷಣ ನೀಡುವುದರಿಂದ ಉದ್ಯೋಗ ದೊರಕಿಸಲು ಅನುಕೂಲ ವಾಗುವದು. ಈ ಜನರು ದೈಹಿಕವಾಗಿ ಮತ್ತು ಮಾನಸಿಕವಾಗಿ ಎಷ್ಟೂ ಕುಗ್ಗಿಲ್ಲ. ಅವರಲ್ಲಿ ಧೈರ್ಯ, ಸ್ಥೈರ್ಯ, ಚಾಣಾಕ್ಷತನ, ಪ್ರತಿರೋಧಕ ಶಕ್ತಿ ಮುಂತಾದ ಕೆಲವು ಅತಿ ಉತ್ಕೃಷ್ಟ ಮತ್ತು ಅಪರೂಪದ ಗುಣಗಳಿವೆ. ಅವರಲ್ಲಿ ಕೆಲವರು ಪ್ರತಿಭಾಸಂಪನ್ನರೂ ದೊರೆಯುತ್ತಾರೆ. ಆದರೆ ಈ ಎಲ್ಲ ಗುಣಗಳು ತಪ್ಪು ಮಾರ್ಗದಲ್ಲಿ ಸಾಗಲು ನಿರ್ದೇಶಿಸಲ್ಪಟ್ಟಿವೆ. ಯೋಗ್ಯ ಶಿಕ್ಷಣ ಪಡೆಯುವುದರ ಮೂಲಕ ಯೋಗ್ಯ ಮಾರ್ಗದರ್ಶನದಲ್ಲಿ ಈ ಗುಣಗಳು ದೇಶಕ್ಕೂ ಸಹಿತ ಅತೀ ಉಪಯೋಗಕರವಾಗಬಲ್ಲವು. ಮನರಂಜನಾ ಕಾರ್ಯಕ್ರಮಗಳನ್ನೇರ್ಪಡಿಸು ವುದರ ಮೂಲಕ ತಾತ್ವಿಕ ಶಿಕ್ಷಣ ಪ್ರಸಾರ ಮಾಡುವದು ಈ ಜನರಿಗೆ ಒದಗಿಸ ಬೇಕಾದ ಶಿಕ್ಷಣದ ಒಂದು ಮಹತ್ವದ ಅಂಗವೆಂಬುದನ್ನು ನಿರ್ಲಕ್ಷಿಸಲಾಗದು.

ಈ ಜನರಿಗೆ ಸಂಬಂಧಿಸಿದ ಶಿಕ್ಷಣ ವಿಷಯವನ್ನು ಪರಿಗಣಿಸುವಾಗ ಬಾಲಕರ ಶಿಕ್ಷಣದ ಸಮಸ್ಯೆಯು ಅತಿ ಮುಖ್ಯವಾಗಿದೆ. ಅಪರಾಧಿ ಕೃತ್ಯಗಳಲ್ಲಿ ತೊಡಗಿದ ಪಾಲಕರ ಮತ್ತು ಹಿರಿಯರ ತಾತ್ವಿಕರಹಿತವಾದ ಜೀವನವು ಬೆಳೆಯುವ ಮಕ್ಕಳ ಜೀವನದ ಮೇಲೆ ದುಷ್ಪರಿಣಾಮವನ್ನು ಬೀರುತ್ತದೆ. ಮಕ್ಕಳಿಗೆ ಕಡ್ಡಾಯವಾಗಿ

ಪ್ರಾಥಮಿಕ ಶಿಕ್ಷಣವನ್ನು ಶಾಲೆಯಲ್ಲಿ ಒದಗಿಸಿದರೂ ಸಹಿತ ಇದರ ಪರಿಣಾಮವು ಮಲಿನವಾದ ಕೌಟುಂಬಿಕ ಮತ್ತು ಹೊರಗಿನ ಸಮಾಜದ ಪರಿಸರದಲ್ಲಿ ಅಳಿಸಿ ಹೋಗುತ್ತದೆ. ಇಂತಹ ಸಂದರ್ಭದಲ್ಲಿ ಬೆಳೆಯುವ ಬಾಲಕರನ್ನು ಪಾಲಕರಿಂದ ತಾತ್ಪೂರ್ತಿಕವಾಗಿ ಬೇರ್ಪಡಿಸುವದು ಹೆಚ್ಚು ಸಮಂಜಸವೆಂದು ತೋರುತ್ತದೆ. ಇದರಿಂದಾಗಿ ಮುಂದಿನ ತರುಣ ಪೀಳಿಗೆಯಾದರೂ ಸುಧಾರಿಸಬಹುದು.

ಈ ಸಮೂಹಗಳಲ್ಲಿಯ ಅತಿ ಬಲಿಷ್ಠವಾದ ಸಮಾಜ ಘಟನೆಯು ಅಲ್ಲಿಯ ಜನಜೀವನವನ್ನು ನಿಯಂತ್ರಿಸಿ ದಿಗ್ದರ್ಶಿಸುತ್ತದೆ. ಈ ವ್ಯವಸ್ಥೆಗೆ ಅಲ್ಲಿಯ ಸದಸ್ಯರೆಲ್ಲರೂ ಆಜ್ಞಾಧಾರಕರಾಗಿರುತ್ತಾರೆ. ಈ ಸಂಘಟನೆಯು ಅಷ್ಟು ಬಲಿಷ್ಠವಾಗಿ ಮತ್ತು ಪರಿಣಾಮಕಾರಿಯಾಗಿ ಇರದೇ ಇದ್ದಿದ್ದರೆ ಈ ಸಮೂಹಗಳ ಸುಧಾರಣೆಯು ಸುಲಭವಾಗಿ, ತೀವ್ರಗತಿಯಿಂದ ಆಗಬಹುದಾಗಿದ್ದಿತು. ಆದ್ದರಿಂದ ಈ ಸಂಘಟನೆಯ ಬಲವರ್ಧನೆಗೆ ಸಂಬಂಧಪಟ್ಟವರೊಡನೆ ವಿಚಾರ ವಿನಿಮಯ ನಡೆಸಿ ಅಪರಾಧಿ ಕೃತ್ಯಗಳನ್ನು ತ್ಯಜಿಸುವಂತೆ ಅವರ ಮನವೊಲಿಸುವದೂ ಸಹಿತ ಪರಿಣಾಮಕಾರಿ ಉಪಾಯಗಳಲ್ಲೊಂದು. ಇದು ನಿಜವಾಗಿಯೂ ಕಠಿಣವಾದ ಕಾರ್ಯವಾಗಿದೆ.

ಈ ಸಮೂಹಗಳನ್ನು ಪುನರ್ನಿವೇಶನಗೊಳಿಸುವ ದೃಷ್ಟಿಯಿಂದ ಸಂಚಾರಿ, ಅರೆಸಂಚಾರಿ ಮತ್ತು ಸ್ಥಿರ ಸಮೂಹಗಳೆಂದು ಈಗಾಗಲೇ ವರ್ಗೀಕರಿಸಲಾಗಿದೆ. ಮೇಲೆ ವಿವರಿಸಿದ ಪ್ರಯತ್ನಗಳು ಈ ಮೂರೂ ವರ್ಗಗಳ ಸಮೂಹಗಳಿಗೆ ಅವಶ್ಯವಾಗಿ ಬೇಕಾದರೂ ಸಹಿತ ಮೊದಲನೆಯ ಮತ್ತು ಎರಡನೆಯ ವರ್ಗದಲ್ಲಿ ನಮೂದಿಸಿದ ಸಮೂಹಗಳಿಗೆ ಒಂದೇಕಡೆ ನೆಲೆನಿಲ್ಲುವಂತೆ ಮಾಡಲು ಮತ್ತು ಉದ್ಯೋಗಾವಕಾಶಗಳನ್ನು ದೊರಕಿಸಿಕೊಡಲು ವಿಶೇಷ ಪ್ರಯತ್ನಗಳು ಅತ್ಯವಶ್ಯವಾಗಿ ಬೇಕಾಗಿವೆ. ಇದಲ್ಲದೇ ಅವರು ಒಂದೇಕಡೆಗೆ ನೆಲೆನಿಲ್ಲುವಂತೆ ಆಕರ್ಷಿಸಲು ಅವರ ವಾಸಕ್ಕೆ ಒಳ್ಳೆಯ ಮನೆಗಳನ್ನು ಒದಗಿಸುವದು ಮುಖ್ಯ ವಿಷಯಗಳಲ್ಲೊಂದಾಗಿದೆ.

"ಅಪರಾಧಿ ಸಮೂಹಗಳು" ಎಂಬ ಹಿಂದಿನ ಹೆಸರೇ ಇಂದಿಗೂ ಸಹಿತ ಅವರ ಹೆಸರಿಗೆ ತಗಲಿ ಅವರ ಶ್ರೇಯೋಭಿವೃದ್ಧಿಯ ಮಾರ್ಗದಲ್ಲಿ ಅಡೆತಡೆ

ಯಾಗಿದೆ. ಆದ್ದರಿಂದ ಅವರ ಕಲ್ಯಾಣ ಬಯಸುವವರು ಅವರನ್ನು ಈ ನ್ಯೂನತೆಯಿಂದ ಪಾರುಮಾಡಬೇಕು. ಇದನ್ನು ಸಹಾನುಭೂತಿಪರ ಮತ್ತು ಮಾನವೀಯ ದೃಷ್ಟಿಯಿಂದ ಪರಿಹರಿಸಲು ಪ್ರಯತ್ನಿಸಬೇಕು. ಈ ದಿಶೆಯಲ್ಲಿ ಪ್ರಯತ್ನಿಸಿದಲ್ಲಿ ಮಾತ್ರ ಅವರಲ್ಲಿ ಆತ್ಮವಿಶ್ವಾಸ ಮೂಡುವಂತೆ ಮಾಡಬಹುದಲ್ಲದೇ ಮಾನವತೆಯಲ್ಲಿ ಶ್ರದ್ಧೆಯನ್ನು ಹೊಂದುವಂತೆ ಮಾಡಬಹುದು. ಅವರಿಗೆ ಯಾವ ಸಂಶಯವೂ ಬಾರದಂತೆ, ತಿರಸ್ಕಾರ ಭಾವನೆಯನ್ನು ಬಿಟ್ಟು ಸಹಕಾರ ಒದಗಿಸುವದು. ಅವರ ಮಧ್ಯದಲ್ಲಿಯೇ ನೆಲಸಿ ಅವರ ಅಭ್ಯುದಯಕ್ಕೆ ಶ್ರಮಿಸುವ ಪ್ರತಿಯೊಬ್ಬ ಕಾರ್ಯಕರ್ತರ ಆದ್ಯಕರ್ತವ್ಯವಾಗಿದೆ. ಆದ್ದರಿಂದ ಸೇವಾಭಾವನೆಯ, ಕಳಕಳಿಯ, ಪ್ರಾಮಾಣಿಕ ಕಾರ್ಯಕರ್ತರನ್ನು ಆರಿಸುವದೂ ಸಹಿತ ಅತಿ ಮುಖ್ಯ ಕೆಲಸಗಳಲ್ಲೊಂದಾಗಿದೆ.

ಇನ್ನುಳಿದ ಸಮಾಜವು ಈ ಜನರ ವಿಷಯಕ್ಕೆ ಹೊಂದಿದ ಭೇದಭಾವವನ್ನು ತೊರೆದು ಅವರೂ ಸಹ ತಮ್ಮ ಜನತೆಯೆಂದು ಪರಿಗಣಿಸಿದರೆ ಮಾತ್ರ ಇವರ ಸುಧಾರಣೆಯು ಸಂಪೂರ್ಣವಾಗಿ ಸಾಧ್ಯವಾಗಬಹುದೆಂದು ಹೇಳಬಹುದು. ಜನರು ಅವರನ್ನು ತಮ್ಮಿಂದ ದೂರ ಇಟ್ಟಿದ್ದಾರೆ. ಇದರ ಬದಲಾಗಿ ಈ ಜನರು ಇನ್ನುಳಿದ ಸಮಾಜದ ಬಗೆಗೆ ವಿರೋಧಭಾವವನ್ನು ತಳೆದಿದ್ದಾರೆ. ಅಪರಾಧಿ ಜನರ ಕೆಲವು ಕುಟುಂಬಗಳು ಮತ್ತು ಇನ್ನುಳಿದ ಜನರೂ ಒಂದೇಕಡೆಗೆ ನೆಲಸಿ ಸಹಜೀವನ ಸಾಗಿಸುವಂತೆ ಮಾಡಿದ ಕೆಲ ಪ್ರಯತ್ನಗಳು ಅಷ್ಟೇನೂ ಯಶಸ್ವಿಯಾಗಿ ಫಲಕಾರಿಯಾಗಿಲ್ಲ. ಅಪರಾಧಿ ಸಮುದಾಯಗಳ ಜನರು ಮುಂದಿನ ಕೆಲವು ತಲೆಮಾರುಗಳವರೆಗಾದರೂ ಅಪರಾಧಿ ಕೃತ್ಯಗಳನ್ನು ತ್ಯಜಿಸಿ ಒಳ್ಳೆಯ ಪ್ರಜೆಗಳಾಗುವವರೆಗೆ ಮತ್ತು ತಮ್ಮ ಹೆಸರಿಗೆ ತಗುಲಿದ ಕಳಂಕದಿಂದ ಮುಕ್ತವಾಗುವವರೆಗೆ ಉಳಿದ ಜನರು ಇವರಲ್ಲಿ ವಿಶ್ವಾಸವಿಡದವರಾಗಿದ್ದಾರೆ. ಇದಕ್ಕೆ ಬದಲಾಗಿ ಉಳಿದ ಸಮಾಜವು ಈ ಜನರ ಒಳ್ಳೆಯತನದಲ್ಲಿ ನಂಬಿಕೆ ಇಡುವವರೆಗೆ ಇವರು ಒಳ್ಳೆಯ ಪ್ರಜೆಗಳಾಗಿ ಬಾಳಲು ಅಷ್ಟೊಂದು ಉತ್ಸುಕರಾಗಿಲ್ಲ. ಹೀಗೆ ಇದೊಂದು ವಿಷವರ್ತುಲವಾಗಿ ಪರಿಣಮಿಸಿದೆ. ಇದನ್ನು ಎಲ್ಲಿಯಾದರೂ ಭೇದಿಸಲೇಬೇಕು.

ಆಧಾರ ಗ್ರಂಥಗಳು

1. Fuchs, Stephen : **The Aboriginal Tribes of India**, Delhi, Macmillan, 1973.

2. Majumdar, D. N. : **Races and Cultures of India**, Asia Publishing House, Bombay, 1961.

3. The Planning Commission, Government of India. : **Social Welfare in India**, 1960.

4. The Publication Division, Ministry of Education, and Broadcasting, Government of India. : **The Adivasis**, June, 1960.

5. Wadia, A. R. (Edited) : **History and Philosophy of Social Work in India**, Allied Publishers Private Limited, Bombay, 1961.

— —

ಗ್ರಾಮೀಣ ಮಗು

● ಕೆ. ಜಿ. ಗುರುಮೂರ್ತಿ

ಕಾಲ ಕಾಲಕ್ಕೆ ತಕ್ಕಂತೆ ತನ್ನ ರಚನೆ, ಕಾರ್ಯ ಮತ್ತು ರೀತಿಯಲ್ಲಿ ಬದಲಾಗುವುದು ಸಮಾಜದ ವಿಶೇಷಗುಣ. ಸಮಾಜವು ಆರಿಸಿಕೊಂಡ ಗತಿಯಲ್ಲಿಯೇ ಈ ಬದಲಾವಣೆ ನಡೆಯುವುದಾದರೂ ಅದರ ಕೆಲವೊಂದು ಗುಂಪುಗಳು ಈ ಬದಲಾವಣೆಗೆ ಹೊಂದಿಕೊಳ್ಳಲಾರದೆ ತೊಂದರೆಗೀಡಾಗುತ್ತವೆ. ಹೀಗೆ ಹೊಂದಿಕೊಳ್ಳದಿದ್ದಾಗ ಸಮಾಜದ ಕಾರ್ಯದಲ್ಲಿ ತೊಂದರೆಗಳು ಕಾಣಿಸಿಕೊಂಡು ಸಮಾಜ ಜೀವನ ಕುಂಠಿತವಾಗುತ್ತದೆ. ಅಲ್ಲದೆ ಸಮಾಜವಲ್ಲಿ ಬದಲಾವಣೆಯು ಅನಿವಾರ್ಯವಾಗಿ ಬರುತ್ತದೆ. ಆಗ ನಷ್ಟಹೊಂದಿದ ಗುಂಪು ತನ್ನಲ್ಲಾದ ಹಾನಿ ಕೇವಲ ತನ್ನದೆಂದು ಭಾವಿಸಿದರೂ ಅದು ಇಡೀ ಸಮಾಜದ್ದೇ ಆಗುತ್ತದೆ. ಇಂತಹ ಗುಂಪಿನ ತೊಂದರೆಯನ್ನು ಸರಿಪಡಿಸಲು ಮತ್ತು ಅದಕ್ಕಾದ ನಷ್ಟವನ್ನು ತುಂಬಿಕೊಡಲು ಇಡೀ ಸಮಾಜವೇ ಶ್ರಮಿಸುತ್ತದೆ. ಇಲ್ಲದಿದ್ದರೆ ಈ ನಷ್ಟವನ್ನು ಸಮಾಜವು ಶಾಶ್ವತವಾಗಿ ಅನುಭವಿಸಬೇಕಾಗುತ್ತದೆ. ಆದ್ದರಿಂದ ಸಮಾಜವನ್ನು ಒಂದು ಜೀವಿ ಎಂದು ಪರಿಗಣಿಸಿದಲ್ಲಿ ಅದರ ಯಾವುದಾದರೊಂದು ಅಂಗಕ್ಕೆ ತೊಂದರೆ ಬಂದರೂ ಸಮಾಜದಲ್ಲಿ ಅಸ್ವಸ್ಥತೆಯುಂಟಾಗುತ್ತದೆ. ಆಗ ತಕ್ಷಣ ಇಲ್ಲವೆ ಕಾಲಾನುಕ್ರಮದಲ್ಲಿ ಇಡೀ ಸಮಾಜವೇ ತೊಂದರೆಗೊಳಗಾಗಬಹುದು. ಆದ್ದರಿಂದ ಕೂಡಲೇ ಸಮಾಜವು ತನ್ನ ನಿಯಂತ್ರಣ ಶಕ್ತಿಯನ್ನು ಒಟ್ಟುಗೂಡಿಸಿ,

ತನ್ನಲ್ಲಾಗಿರುವ ತೊಂದರೆಯ ಬಗ್ಗೆ ಸೂಕ್ತಕ್ರಮ ತೆಗೆದುಕೊಳ್ಳುತ್ತದೆ. ಇಂದಿನ ಆಧುನಿಕ ಸಾರಿಗೆಸಂಪರ್ಕ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಹೊಂದಿರುವ ಸಮಾಜವಲ್ಲಿ ಯಾವುದಾದರೊಂದು ವರ್ಗದಲ್ಲಿ ತೊಂದರೆ ಕಂಡರೂ, ಮುಂದೆ ಅದರಿಂದಾಗುವ ಕೆಡಕು ಮತ್ತು ಹಾನಿಗಳನ್ನು ಕಂಡುಕೊಂಡು ಕೂಡಲೇ ಕಾರ್ಯೋನ್ಮುಖವಾಗುತ್ತದೆ. ಇಂತಹ ಕಾರ್ಯಗಳನ್ನು ಮಾಡಲೆಂದೇ ಕೆಲವೊಂದು ಕಲ್ಯಾಣ ಕಾರ್ಯ ಸಂಸ್ಥೆಗಳಿರುತ್ತವೆ. ಉದಾಹರಣೆಗೆ ನಮ್ಮ ಆಧುನಿಕ ಸಮಾಜವು ತನ್ನಲ್ಲಾಗಬಹುದಾದ ನಗರೀಕರಣ, ಔದ್ಯೋಗೀಕರಣ, ಅಥವ ನೆರೆ, ಗಾಳಿ, ಭೂಕಂಪ ಮುಂತಾದ ಪ್ರಕೃತಿಯಿಂದ ಬರಬಹುದಾದ ಹಾನಿಗಳನ್ನು ಸಾಧ್ಯವಾದರೆ ತಪ್ಪಿಸಲು, ಇಲ್ಲವೆ ಸೂಕ್ತ ರೀತಿಯಲ್ಲಿ ನಿವಾರಣೆ ಮಾಡಲು ಸಕಲ ಸಿದ್ಧತೆಗಳನ್ನು ಮಾಡಿಕೊಂಡಿರುತ್ತದೆ. ಅನೇಕ ವೇಳೆ ಸಮಾಜದ ದುರ್ಬಲ ವರ್ಗಗಳಾದ ಮಹಿಳೆಯರು, ಮಕ್ಕಳು, ವೃದ್ಧರು, ಬಡವರು, ಪ್ರಭಾವಿತರಿಂದ ತುಳಿಯಲ್ಪಟ್ಟವರು ಇತರರಂತೆ ತಾವುತಾವಾಗಿ ಶ್ರಮಿಸಿ, ಮೇಲೆ ಬರಲು ಸಾಧ್ಯವಾಗದೆ, ಇತರರೊಂದಿಗೆ ಪೈಪೋಟಿ ಮಾಡಿ ಗೆಲ್ಲಲಾರದಾದಾಗಲೂ, ಸಮಾಜವಲ್ಲಿ ತೊಡಕುಗಳು ಬರುತ್ತವೆ. ಈ ದೃಷ್ಟಿಯಿಂದ ಇಂದಿನ ಕಲ್ಯಾಣ ರಾಜ್ಯವು ಸಮಾಜದ ಒಂದಂಗವಾಗಿದ್ದು ಈ ಎಲ್ಲಾ ದುರ್ಬಲರಿಗೂ ತನ್ನ ಕಾರ್ಯಾಂಗವಾದ ಸರಕಾರದ ಸಹಾಯದಿಂದ ಕೂಡಲೇ ನಿವಾರಣೋಪಾಯಗಳನ್ನು ಹುಡುಕಿ ಸಹಾಯ ಮಾಡುತ್ತದೆ. ಆದರೆ ಸಮಾಜದ ವಿವಿಧ ಕಾರ್ಯಾಂಗಗಳಲ್ಲಿ ಸರಿಯಾದ ಒಡಂಬಡಿಕೆ, ಸಹಕಾರ, ಸೂಕ್ತ ವ್ಯವಸ್ಥೆ ಇಲ್ಲದ್ದರಿಂದ, ಅಥವಾ ಯಾವುದಾದರೊಂದು ವರ್ಗ ಇತರರನ್ನು ತುಳಿಯಲು ಶ್ರಮಿಸುತ್ತಿರುವುದರಿಂದ ಈ ಕೆಲಸ ಸರಿಯಾಗಿ ಆಗಲಾರದು. ಆಗ ತೊಂದರೆಗೀಡಾದ ಗುಂಪು ಅಪಾಯಕರ ರೀತಿಯಲ್ಲಿ ಹಾನಿಗೀಡಾಗುತ್ತದೆ. ಇದನ್ನು ನಮ್ಮ ಸದ್ಯದ ಅಭ್ಯಾಸದ ವಿಷಯವಾದ ಗ್ರಾಮೀಣ ಮಗುವನ್ನು ತೆಗೆದುಕೊಂಡು ಅಭ್ಯಾಸ ಮಾಡೋಣ. ಆಧುನಿಕತೆ, ಔದ್ಯೋಗೀಕರಣ, ಸಾಮಾಜಿಕ ಬದಲಾವಣೆ ಮುಂತಾದವು ಗ್ರಾಮೀಣ ಸಮಾಜವಲ್ಲಿ ಹೆಚ್ಚಿನ ಬದಲಾವಣೆ ತಂದು ಕುಟುಂಬ, ಕಳ್ಳುಬಳ್ಳಿ ಮತ್ತು ನೆರೆಹೊರೆ ಸಂಬಂಧಗಳನ್ನು ಕೆಡಿಸಿವೆ. ಅಲ್ಲದೆ ವ್ಯಕ್ತಿಸ್ವಾತಂತ್ರ್ಯದ ರುಚಿ ನೋಡಿದವರು ಸ್ವತಂತ್ರವಾಗಿ ಹಿರಿಯರ ಅಂಕೆ-ಆಜ್ಞೆ ಇಲ್ಲದೆ ಇರಬೇಕೆಂದಿದ್ದಾರೆ. ಇವೆಲ್ಲವೂ ವ್ಯಕ್ತಿಯ, ಅದರಲ್ಲೂ ಮಕ್ಕಳ ಮೇಲೆ ಹೆಚ್ಚಿನ ದುಷ್ಪರಿಣಾಮ ಬೀರಿವೆ. ಇಂದು ಗ್ರಾಮೀಣ ಮಕ್ಕಳು ಯಾವ ತರಹದ ಹಾನಿಗೊಳಗಾಗಿವೆ, ಈ ಪರಿಸ್ಥಿತಿಗೆ ಕಾರಣಗಳಾವವು ಮತ್ತು ಸಮಾಜವು ಯಾವ ವಿಧದ ನಿವಾರಣಾ ಕ್ರಮಗಳನ್ನು ತೆಗೆದುಕೊಂಡಿದೆ ಎಂಬುದನ್ನು ಮೊದಲು ಪರಿಶೀಲಿಸಬೇಕು.

ಈ ಲೇಖನಕ್ಕೆ ಬೇಕಾದ ಮಾಹಿತಿಯನ್ನು ಧಾರವಾಡ ಜಿಲ್ಲೆಯ ಕೊಪ್ಪ ಎನ್ನುವ ಗ್ರಾಮದಿಂದ ಪಡೆಯಲಾಗಿದೆ. ಇಲ್ಲಿ ೧೮೪ ಮನೆತನಗಳಿದ್ದು ಊರಿನ ಜನಸಂಖ್ಯೆ ೧೧೨೪. ವ್ಯವಸಾಯವೇ ಗ್ರಾಮಸ್ಥರ ಜೀವನಾಧಾರ ಕಸಬಾದರೂ ಜಮೀನಿಲ್ಲದವರು ಮುಖ್ಯವಾಗಿ ವ್ಯವಸಾಯಕ್ಕೆ ಸಂಬಂಧವಾದ ಕಸಬುಗಳಾದ ಬಡಗಿತನ, ಕಮ್ಮಾರಿಕೆ, ತೋಟಗಾರಿಕೆ, ಕೂಲಿ ಮುಂತಾದ ವೃತ್ತಿಗಳನ್ನು ಹೊಂದಿದ್ದಾರೆ. ಕೊಪ್ಪದಲ್ಲಿ ಒಟ್ಟು ಏಳು ಜಾತಿಗಳಿದ್ದು ಲಿಂಗಾಯತರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಇವರ ನಂತರ ಮುಸಲ್ಮಾನರು, ನಾಯಕರು, ಸುಣಗಾರರು ಮತ್ತು ಹರಿಜನರು ಬರುತ್ತಾರೆ. ಲಿಂಗಾಯತರಲ್ಲಿ ಮತ್ತೆ ಐದು ಪಂಗಡಗಳಿದ್ದು ಇವರನ್ನು ಜಂಗಮ, ಪಂಚಮಸಾಲಿ, ಹೂಗಾರ, ಬಡಗಿ ಮತ್ತು ಬಣಕಾರರೆಂದು ಪುನರ್ವಿಂಗಡಿಸಬಹುದು. ಇವರಲ್ಲಿ ಪಂಚಮಸಾಲಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭೂಮಿಯನ್ನು ಹೊಂದಿದ್ದು ಉಳಿದವರು ಗೇಣಿಕಾರರು ಇಲ್ಲವೆ ಕೂಲಿಕಾರರು. ಮುಸಲ್ಮಾನರಲ್ಲಿ ಕೆಲವರು ಭೂಮಿಯನ್ನು ಹೊಂದಿದ್ದಾರೆ. ಉಳಿದವರು ಗೇಣಿಕಾರರು ಮತ್ತು ಕೂಲಿಕಾರರು. ನಾಯಕರಲ್ಲಿ ಕೆಲವರು ಮಾತ್ರ ಸರಕಾರ ಅವರ ಸೇವೆಗೆಂದು ನೀಡಿರುವ ಭೂಮಿಯನ್ನು ಹೊಂದಿದ್ದಾರೆ. ಉಳಿದವರೆಲ್ಲರೂ ಕೂಲಿಗಾರರು ಮತ್ತು ಸಣ್ಣ ವ್ಯಾಪಾರಸ್ಥರು. ಹರಿಜನರಲ್ಲಿ ಮೂರು ಕುಟುಂಬಗಳು ಸಣ್ಣ ಪ್ರಮಾಣದಲ್ಲಿ ಜಮೀನು ಹೊಂದಿದ್ದು ಉಳಿಪವರು ಕೂಲಿಗಾರರು.

ಕೊಪ್ಪದಲ್ಲಿಯ ೧೮೪ ಕುಟುಂಬಗಳಲ್ಲಿ ೧೬೪ ಕುಟುಂಬಗಳು ಹಂಚಿನ ಮನೆಯಲ್ಲೂ, ೨೦ ಕುಟುಂಬಗಳು ಗುಡಿಸಿಲಿನಲ್ಲೂ ವಾಸಮಾಡುತ್ತಾರೆ. ಇವುಗಳಲ್ಲಿ ೧೪ ಮನೆಗಳು ವಾಸಿಸಲು ಯೋಗ್ಯವಾಗಿಲ್ಲ. ಇಲ್ಲಿ ೮೩ ಪ್ರಾಥಮಿಕ(Elementary) ಕುಟುಂಬಗಳೂ ೧೦೧ ವಿಕೃತ(Extenden) ಕುಟುಂಬಗಳೂ ಇವೆ. ಗ್ರಾಮ ಪ್ರದೇಶವು ಜಾತಿಯ ಆಧಾರದ ಮೇಲೆ ಓಣಿಗಳಾಗಿ ವಿಂಗಡಿಸಲ್ಪಟ್ಟಿದೆ. ಹರಿಜನರು, ನಾಯಕರು, ಮುಸಲ್ಮಾನರು ಮತ್ತು ಲಿಂಗಾಯತರು ಬೇರೆ ಬೇರೆ ಓಣಿಗಳಲ್ಲಿ ನೆಲೆಸಿದ್ದಾರೆ. ವಿಶೇಷವಾಗಿ ಮುಸಲ್ಮಾನರು ಮತ್ತು ಲಿಂಗಾಯತರು ತಮ್ಮ ಜಾತಿಯ ಓಣಿಗಳನ್ನು ಬಿಟ್ಟು ಉಳಿದ ಕಡೆಗಳಲ್ಲಿಯೂ ವಾಸವಾಗಿದ್ದಾರೆ. ಕೊಪ್ಪಗ್ರಾಮಕ್ಕಿರುವ ಅನೇಕ ತೊಂದರೆಗಳಲ್ಲಿ ವಾಸಕ್ಕೆ ಸರಿಯಾದ ಮತ್ತು ಸಾಕಷ್ಟು ಜಾಗವಿಲ್ಲದ್ದು ಒಂದು. ಊರ ಸುತ್ತಲಿನ ಹೊಲಗಳು ಪ್ರಭಾವಶಾಲಿ ಮನೆತನಗಳಿಗೆ ಸೇರಿದ್ದು ಭತ್ತ ಬೆಳೆಯಲು ಉತ್ತಮ ನೆಲವಾದ್ದರಿಂದ ಯಾರೂ ಮಾರಲು ಮುಂದೆ ಬರುವದಿಲ್ಲ. ಇವರು ಗ್ರಾಮಪಂಚಾಯತಿಯಲ್ಲಿಯೂ ಪ್ರಭಾವಶಾಲಿಗಳಾದ್ದರಿಂದ ಈ ಸಮಿತಿ ಕೂಡ ಗ್ರಾಮ ಠಾಣಕ್ಕೆ ಹೆಚ್ಚಿಗೆ ಜಾಗಪಡೆಯಲಾರ

ವಾಗಿದೆ. ಮನೆಯ ಹಿಂದೆ ಹಿತ್ತಲುಗಳಿದ್ದು ಇವು ದೊಡ್ಡದೊಡ್ಡ ರೈತರಿಗೆ ಸೇರಿದವು ಮತ್ತು ಇಲ್ಲಿ ತಿಪ್ಪೆ, ಬಣವೆ, ಕಟ್ಟಿಗೆ ಮುಂತಾದವನ್ನು ಸಂಗ್ರಹಿಸುತ್ತಾರೆ. ಆದ್ದರಿಂದ ಇವರೂ ಮಾರುವುದಿಲ್ಲವಾದ್ದರಿಂದ ಬಡವರು ಯಾರಾದರೊಬ್ಬರ ಮನೆಯ ಪಕ್ಕದಲ್ಲಿ ಕಣಕ್ಕೆ ಹತ್ತಿರದ ಸ್ವಲ್ಪ ಜಾಗದಲ್ಲಿ ವಾಸ ಮಾಡುತ್ತಾರೆ.

ಎರಡನೆಯ ತೊಂದರೆ ಎಂದರೆ, ಕುಡಿಯುವ ನೀರಿಗೆ ಸೂಕ್ತ ವ್ಯವಸ್ಥೆ ಇಲ್ಲದ್ದು. ಕೊಪ್ಪದಲ್ಲಿ ಹರಿಜನರಿಗೆಂವೇ ಪ್ರತ್ಯೇಕವಾಗಿರುವ ಒಂದು ಬಾವಿಯೂ ಸೇರಿ ಮೂರು ಬಾವಿಗಳಿವೆ. ಉಳಿದ ಎರಡರಲ್ಲಿ ಒಂದು ಬಾವಿಯ ನೀರು ಸ್ವಲ್ಪ ಉಪ್ಪು. ಮತ್ತೊಂದು ಬಾವಿಯು ಕೆರೆಯೊಂದರ ಪಕ್ಕದಲ್ಲಿರುವುದರಿಂದ ಇದರಲ್ಲಿ ನೀರು ಸಿಹಿಯಾಗಿರುತ್ತದೆ. ಬೇಸಿಗೆಯಲ್ಲಿ ಕೆರೆ ನೀರು ಬತ್ತಿದಾಗ ಬಾವಿಯಲ್ಲೂ ನೀರು ತಳ ಮುಟ್ಟುತ್ತದೆಯಾದ್ದರಿಂದ ಗ್ರಾಮಸ್ಥರು ಈ ನೀರನ್ನೇ ಮಿಗಿಸುತಂದು ಉಪಯೋಗಿಸುತ್ತಾರೆ. ಉಪ್ಪು ನೀರು ಬಾವಿಯ ನೀರನ್ನು ದನಕರುಗಳ ಉಪಯೋಗಕ್ಕೆ ತೊಳೆಯಲು ಮಾತ್ರ ಉಪಯೋಗಿಸುತ್ತಾರೆ.

ಜನರಲ್ಲಿ ವಿದ್ಯಾ ಮಟ್ಟ ಕಡಿಮೆ ಇದ್ದು ೧೧೨೪ ಜನರಲ್ಲಿ ೫೧೬ ಜನರು ಅನಕ್ಷರಸ್ಥರು ಮತ್ತು ೩೪೫ ಜನ ಕೇವಲ ಪ್ರಾಥಮಿಕ ಮಟ್ಟದವರೆಗೆ ಮಾತ್ರ ಕಲಿತಿದ್ದಾರೆ. ಇದಕ್ಕೂ ಹೆಚ್ಚಿಗೆ ಕಲಿತ ಕೆಲವರು ಊರಿಂದ ಹೊರಗೆ ನೌಕರಿ ಮಾಡುತ್ತಿದ್ದು, ಹೊರಪ್ರಪಂಚದೊಂದಿಗೆ ಸಂಪರ್ಕ ಹೊಂದಿ ತಮ್ಮ ಮನೋಭಾವನೆಯನ್ನು ವಿಶಾಲಪಡಿಸಿಕೊಂಡಿದ್ದಾರೆ. ಇವರು ಹೆಚ್ಚಿನ ವೇಳೆಯನ್ನು ಊರಿಂದ ಹೊರಗೆ ಕಳೆಯುವುದರಿಂದ ಇವರ ವಿಚಾರಗಳು ಜನರಿಗೆ ಸೇರುವುದಿಲ್ಲ. ಜನರು ಆರೋಗ್ಯ, ನೈರ್ಮಲ್ಯ ಮುಂತಾದ ವಿಷಯದ ಬಗ್ಗೆ ತಮ್ಮದೇ ಆದ ಕಲ್ಪನೆ ಮತ್ತು ಮೌಲ್ಯಗಳನ್ನು ಹೊಂದಿದ್ದಾರೆ. ಇವರ ನಂಬಿಕೆಯಂತೆ ಆರೋಗ್ಯ ಮತ್ತು ನೈರ್ಮಲ್ಯಗಳಿಗೆ ಯಾವ ಸಂಬಂಧವೂ ಇಲ್ಲ. ಅಂದರೆ ರೋಗಗಳು ಯಾವುದಾದರೂ ದೈವ ಮುನಿದಾಗ, ಮಾಯ ಮಂತ್ರದಿಂದ, ಮೈಲಿಗೆಯಿಂದ ಬರುತ್ತವೆ. ಆದ್ದರಿಂದ ದೈವಗಳನ್ನು ಮೆಚ್ಚಿಸಲು ಮಂತ್ರ-ಮಾಟವನ್ನು ಹೆಚ್ಚಿನ ಮಂತ್ರ ಶಕ್ತಿಯಿಂದ ನಿವಾರಿಸಲು ಮತ್ತು ಮೈಲಿಗೆಯನ್ನು ಮಡಿಮಾಡಿ ನಿವಾರಿಸಬಹುದೆಂಬುದೇ ಇವರ ವಾದ. ಆದ್ದರಿಂದ ಯಾರಿಗಾದರೂ ಆರೋಗ್ಯ ಕೆಟ್ಟರೆ, ಇದಕ್ಕೆ ಮೇಲಿನ ಕಾರಣಗಳನ್ನು ನೀಡಿ, ಅವುಗಳ ನಿವಾರಣೆಗೆ ಪೂಜಾರಿ, ಮಂತ್ರವಾದಿ, ನಾಟಿವೈದ್ಯ ಇವರ ಕಡೆ ಹೋಗುವರೇ ವಿನಹ ವೈದ್ಯರ ಕಡೆ ಹೋಗುವುದಿಲ್ಲ. ಇದರಿಂದ ಕೊಪ್ಪ ಗ್ರಾಮದಲ್ಲಿ ಜನಪದ ಧರ್ಮದ ಪ್ರಭಾವ ಹೆಚ್ಚಾಗಿದೆ

ಎನ್ನಬಹುದು. ಇಲ್ಲಿ ಜನರು ತಮ್ಮ ಎಲ್ಲಾ ಆಗುಹೋಗುಗಳಿಗೂ ತಮ್ಮ ಹಣೆಯಬರಹವೇ ಕಾರಣವೆಂದು ನಂಬುತ್ತಾರೆ. ಈ ಹಣೆಯ ಬರಹದ ವಾದವು ಅವರ ಜೀವನದ ಎಲ್ಲಾ ರಂಗಗಳಲ್ಲಿಯೂ ಕಂಡುಬರುತ್ತಿದ್ದು ಮನುಷ್ಯ ಪ್ರಯತ್ನ, ಮನುಷ್ಯನ ಶಕ್ತಿಯಲ್ಲಿ ಇವರಿಗೆ ನಂಬಿಕೆ ಮೂಡಿಲ್ಲ. ಈ ಕಾರಣದಿಂದ ವಿಜ್ಞಾನ ಮತ್ತು ತಾಂತ್ರಿಕ ರಂಗದಲ್ಲಿ ಯಾವ ಪ್ರಗತಿಯೂ ಆಗಿಲ್ಲವೆನ್ನಬಹುದು. ಆದರೆ ಕುರುಡಾಗಿ ಅದನ್ನು ಅನುಸರಿಸುತ್ತಾ ಬಂದಿದ್ದಾರಾದ್ದರಿಂದ ಇವುಗಳಿಂದ ಒಳಿತಿಗಿಂತ ತೊಂದರೆಗಳೇ ಹೆಚ್ಚಾಗಿವೆ.

ಕೊಪ್ಪ ಗ್ರಾಮವು ಹೊರಜಗತ್ತಿನೊಡನೆ ಸಾಕಷ್ಟು ಸಂಬಂಧವನ್ನು ಹೊಂದಿದೆ. ಈ ವರೆಗೆ ೧೨ ಜನ ಪದವೀಧರರು ಮತ್ತು ಉಳಿದ ೧೫ ಜನರು ಊರಿಂದ ಹೊರಗೆ ಕೆಲಸದಲ್ಲಿದ್ದಾರೆ. ೨೫ ಜನ ವಿದ್ಯಾರ್ಥಿಗಳು ಧಾರವಾಡದಲ್ಲಿ ಓದುತ್ತಿದ್ದಾರೆ. ಧಾರವಾಡ–ದಾಂಡೇಲಿ ಮತ್ತು ಸುಪಾದ ಬಸ್‌ಗಳು, ನೂರಾರು ಕಾರುಗಳು, ಲಾರಿಗಳು ಊರಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ರಸ್ತೆಯಲ್ಲಿ ಹೋಗುತ್ತವೆ. ೧೯೬೨ರಿಂದ ಊರಿಗೇ ಬರುವ ೪ ಸಿಟಿಬಸ್‌ಗಳಿದ್ದು ಒಂದು ರಾತ್ರಿ ಇಲ್ಲಿಯೇ ತಂಗುತ್ತದೆ. ೧೯೭೫ರಿಂದ ಊರಿಗೆ ವಿದ್ಯುಚ್ಛಕ್ತಿ ಬಂದಿದ್ದು ಇದನ್ನು ನೀರೆತ್ತಲು, ಗಿರಣಿ ಮತ್ತು ಮನೆಗಳಲ್ಲಿ ಉಪಯೋಗಿಸುತ್ತಿದ್ದಾರೆ. ಇದರ ಉಪಯೋಗದಿಂದ ೩೯ ರೇಡಿಯೋಗಳು ನಡೆಯುತ್ತವೆ. ಧಾರವಾಡದ ಮುನಿಸಿಪಲ್ ಕಮಿಟಿಯ ಸದಸ್ಯರು, ತಾಲ್ಲೂಕು ಅಭಿವೃದ್ಧಿ ಮಂಡಳಿಯ ಸದಸ್ಯರೂ ಆದ ಕೆಲವರು ಈ ಊರಲ್ಲಿದ್ದಾರೆ. ಇಲ್ಲಿ ಒಂದು ಯುವಕ ಮಂಡಳ, ಮಹಿಳಾಮಂಡಳ ಮತ್ತು ಒಂದು ಸಹಕಾರ ಸಂಘವೂ ಇದೆ. ಧಾರವಾಡದ ಅನೇಕ ಧಾರ್ಮಿಕ ಸಂಸ್ಥೆಗಳೊಂದಿಗೆ ನೇರ ಸಂಬಂಧವನ್ನಿಟ್ಟುಕೊಂಡಿರುವ ಹಿರಿಯರೂ ಇದ್ದಾರೆ. ಕೊಪ್ಪದ ಸುತ್ತಲಿನ ಕಾಡು ಮತ್ತು ಗುಡ್ಡದಲ್ಲಿನ ಕಲ್ಲಿನ ಹರೆಗಳಲ್ಲಿ ಕೆಲಸಮಾಡಲು ಮತ್ತು ಇವನ್ನು ಲಾರಿಗೆ ತುಂಬಲು ಈ ಊರಿನ ಕೂಲಿಗಳನ್ನು ತೆಗೆದುಕೊಳ್ಳುತ್ತಾರೆ. ಇಲ್ಲಿ ಮಾವು, ನೇರಳೆ ಮುಂತಾದ ಅನೇಕ ಬಗೆಯ ಹಣ್ಣುಗಳು ಬೆಳೆಯುತ್ತಿದ್ದು ಇವನ್ನು ಧಾರವಾಡದ ಪೇಟೆಯಲ್ಲಿ ಮಾರುವರು. ಭತ್ತ ಬೆಳೆಯುವ ರೈತರು ಮತ್ತು ಸಣ್ಣ ವ್ಯಾಪಾರಸ್ಥರು ಪ್ರತಿವಾರ ಸಂತೆಗೆ ಅಕ್ಕಿ ಮಾಡಿಸಿ ಮಾರಲು ಧಾರವಾಡಕ್ಕೆ ಬರುತ್ತಾರೆ. ಹೀಗೆ ಹೊರ ಜಗತ್ತಿನೊಡನೆ, ನೇರವಾದ ಸಂಪರ್ಕ ಹೊಂದಿದ್ದರೂ ಕೊಪ್ಪದ ಜನರಲ್ಲಿ ಆರೋಗ್ಯ, ನೈರ್ಮಲ್ಯ ಮುಂತಾದವುಗಳಲ್ಲಿ ಪ್ರಗತಿಯಾಗಿಲ್ಲ. ಈ ಜನರು ಪೇಟೆ ಪ್ರಪಂಚದೊಡನೆ ಸಂಬಂಧಹೊಂದಿದ್ದಾರಾದರೂ ಇವರನ್ನು ರೈತ (Peasant)

ಸಮಾಜಸಂಸ್ಕೃತಿಗೆ ಸೇರಿದವರಾದ್ದರಿಂದ, ಈ ಪೇಟೆಯ ಆಗು-ಹೋಗುಗಳು ತಮಗೆ ಸಂಬಂಧಿಸಿದವಲ್ಲವೆಂದು ತಿಳಿದು ಅವುಗಳಿಂದ ದೂರವಿರುತ್ತಾರೆ.

ಕೊಪ್ಪದಲ್ಲಿ ಐದು ವರ್ಷ ವಯಸ್ಸಿಗಿಂತ ಇರುವ ಮಕ್ಕಳ ಸಂಖ್ಯೆ ೧೬೮ ಮತ್ತು ಆರರಿಂದ ಹತ್ತು ವರ್ಷಗಳ ವಯಸ್ಸಿನವರು ಸಂಖ್ಯೆ ೧೪೫. ಸಾಮಾನ್ಯವಾಗಿ ನಾನಿದ್ದ ಕಾಲದಲ್ಲಿ ಕಂಡುಕೊಂಡ ಮಕ್ಕಳ ತೊಂದರೆಗಳೆಂದರೆ ಒಂಟಿತನ, ಅನಾರೋಗ್ಯ, ಅನ್ನಸತ್ವ ಕಡಿಮೆ ಇರುವುದು ಮುಖ್ಯವಾದವುಗಳು. ಒಂಟಿತನವು ಸಾಮಾಜಿಕ ಮತ್ತು ಮಾನಸಿಕವಾಗದ್ದು ಸಾಮಾಜಿಕ ಒಂಟಿತನಕ್ಕೆ ಅನೇಕ ಸಾಮಾಜಿಕ ಕಾರಣಗಳಿವೆ. ಹಿಂದೆ ಅವಿಭಕ್ತ ಕುಟುಂಬಗಳಿದ್ದು ಅದರಲ್ಲಿ ಅಜ್ಜ-ಅಜ್ಜಿಯರು, ತಂದೆಯ ಅಣ್ಣ-ತಮ್ಮಂದಿರು ಮತ್ತು ಅವರ ಹೆಂಡತಿಯರು ಮತ್ತು ಮಕ್ಕಳು, ಅತ್ತೆಗಳು ಹೀಗೆ ಅನೇಕ ಬಗೆಯ ಸಂಬಂಧಿಕರಿಂದ ಮನೆ ತುಂಬಿರುತ್ತಿದ್ದಿತು. ಮಗುವಿಗೆ ಆಡಲು, ಮಾತಾಡಲು ಮತ್ತು ಕೂಡಿಕೊಂಡಿರಲು ಯಾರಾದರೊಬ್ಬರು ಸಿಗುತ್ತಿದ್ದರಾದ್ದರಿಂದ ತಂದೆ-ತಾಯಂದಿರು ಹೊಲಗೆಲಸಕ್ಕೆ ಅಥವ ಹೊರಗೆಲ್ಲಾದರೂ ಹೋದರೂ ಮಗುವಿಗೆ ತಾನು ಒಂಟಿ ಎನ್ನುಸುತ್ತಿರಲಿಲ್ಲ. ಅಲ್ಲದೆ ಹಿಂದೆ ಕಳ್ಳುಬಳ್ಳಿ, ನೆರೆಹೊರೆ, ಜಾತಿ ಮುಂತಾದ ಸಂಬಂಧಗಳೂ ಹೆಚ್ಚಿನ ಪ್ರೀತಿ ಆದರಗಳಿಂದ ಉತ್ತಮವಾಗಿದ್ದವು. ಯಾರಾದರೊಬ್ಬರು ಹೊರಗೆಲ್ಲಾದರೂ ಹೋಗುವಾಗ ತಮ್ಮ ಮಕ್ಕಳನ್ನು ಇವರಲ್ಲಿ ಬಿಟ್ಟು ಹೋಗುವ ಅವಕಾಶವಾದರೂ ಇದ್ದಿತು. ಇಂದು ಹೊಸ ಸಂಬಂಧ ಮಾಡಿಕೊಳ್ಳುವುದು, ಸುಧಾರಿತ ಸಾರಿಗೆ ಮತ್ತು ಸಂಪರ್ಕ ಸಾಧನಗಳಿಂದಾಗಿ, ಆಧುನಿಕ ವಿದ್ಯೆ ಮತ್ತು ಅದು ತಂದಿರುವ ವ್ಯಕ್ತಿ ಸ್ವಾತಂತ್ರ್ಯ, ಆರ್ಥಿಕ ಸ್ವಾತಂತ್ರ್ಯ ಮುಂತಾದವು ಅವಿಭಕ್ತ ಕುಟುಂಬವನ್ನು ಒಡೆದುಹಾಕಿರುವುದರ ಜೊತೆಗೆ ಕಳ್ಳುಬಳ್ಳಿ ಸಂಬಂಧಗಳನ್ನು ಸಡಿಲಮಾಡಿವೆ. ಬೇರೆ ಬೇರೆ ಕುಟುಂಬ ಮತ್ತು ಊರುಗಳಿಂದ ಬಂದ ಸೊಸೆಯರು ತಮ್ಮ ತಮ್ಮಲ್ಲಿ ಮತ್ತು ಅತ್ತೆ-ಮಾವ ಮುಂತಾದವರೊಂದಿಗೆ ಪ್ರೀತಿ ಭಯಪೂರಿತ ಸಂಬಂಧವನ್ನು ಕಳೆದುಕೊಂಡಿದ್ದರಿಂದ ಕುಟುಂಬಗಳು ಒಡೆದವು. ಹೀಗೆ ಉದ್ಭವಿಸಿದ ಸಣ್ಣ ಕುಟುಂಬಗಳಲ್ಲಿ ಗಂಡ-ಹೆಂಡತಿ ಮತ್ತು ಅವರ ಅವಿವಾಹಿತ ಮಕ್ಕಳು ಮಾತ್ರ ವಾಸವಾಗಿದ್ದು ಅವು ಗಾತ್ರದಲ್ಲಿ, ವ್ಯಕ್ತಿ ಸಂಬಂಧದಲ್ಲಿ ಕಿರಿದಾದವು. ಅಲ್ಲದೆ, ಗ್ರಾಮೀಣ ಸನ್ನಿವೇಶದಲ್ಲಿ ಯಾವ ವೃತ್ತಿಯನ್ನೇ ಅವಲಂಬಿಸಿರುವ ಕುಟುಂಬದ ಎಲ್ಲಾ ಸದಸ್ಯರೂ ಮನೆಯಿಂದ ಹೊರಗೆ ಕೆಲಸ ಮಾಡಲು ಹೋಗಬೇಕಾಗುತ್ತದೆ. ಆಗ ತಮ್ಮ ಮಕ್ಕಳಲ್ಲೇ ದೊಡ್ಡವರಾದ ಮಗುವಿನ ರಕ್ಷಣೆಯಲ್ಲಿ ಉಳಿದ ಕಿರಿಯ ಮಕ್ಕಳನ್ನು

ಬಿಡುತ್ತಾರೆ. ಈ ದೊಡ್ಡ ಮಗುವೂ ೭–೮ ವರ್ಷದ್ದು ಮಾತ್ರವಿದ್ದು ಇದಕ್ಕಿಂತ ದೊಡ್ಡದಿದ್ದರೆ ಅವನ್ನು ಹೊಲಗೆಲಸಕ್ಕೆ, ಬಡವರಾಗಿದ್ದರೆ, ಬೇರೆಯಾರದಾದರೂ ಮನೆಯಲ್ಲಿ ದನಕಾಯಲು ಸಂಬಳದ ಮೇಲೆ ಇಡುತ್ತಾರೆ. ಈ ಚಿಕ್ಕ ಮಗು ತನ್ನ ತಂಗಿ–ತಮ್ಮಂದಿರನ್ನು ಇಡೀ ದಿನ ನೋಡಿಕೊಳ್ಳಬೇಕಾಗುತ್ತದೆ. ಮನೆಯಲ್ಲಿ ಚಿಕ್ಕಮಕ್ಕಳು ಮಾತ್ರ ಉಳಿಯುವುದರಿಂದ ಮನೆಯಲ್ಲಿಯ ವಸ್ತುಗಳ ಸಂರಕ್ಷಣೆಯ ದೃಷ್ಟಿಯಿಂದ ಅನೇಕರು ಮಕ್ಕಳನ್ನು ಹೊರಗೆ ಬಿಟ್ಟು ಬಾಗಿಲಿಗೆ ಬೀಗ ಹಾಕಿ ಹೋಗುತ್ತಾರೆ. ಇಂತಹ ಸಂದರ್ಭಗಳಲ್ಲಿ ಮಕ್ಕಳು ತಮ್ಮ ತಂದೆ ತಾಯಂದಿರು ಹಿಂತಿರುಗಿ ಬರುವವರೆಗೂ ಇಡೀ ದಿನ ಮನೆಯಿಂದ ಹೊರಗೇ ಇರಬೇಕಾಗುತ್ತದೆ.

ಎರಡನೆಯದಾಗಿ, ಕೆಲವರು ಮಕ್ಕಳನ್ನು ತಮ್ಮ ಅತ್ತೆ ಅಥವಾ ತಾಯಂದಿರ ಕಡೆ ಬಿಟ್ಟು ಹೋಗಬಹುದು. ಇವರು ಹೊಲಗೆಲಸಕ್ಕೆ ಹೋಗದೆ ಮನೆಯಲ್ಲಿರುವುದಕ್ಕೆ ಅವರ ವೃದ್ಧಾಪ್ಯ, ಅನಾರೋಗ್ಯ, ಕಣ್ಣು ಕಾಣಿಸದಿರುವುದು ಮುಂತಾದವು ಕಾರಣವಿದ್ದು ಒಂದು ವಿಧದಲ್ಲಿ ಅವರೇ ಬೇರೊಬ್ಬರ ಮೇಲೆ ಅವಲಂಬಿಗಳಾಗಬೇಕಾದವರು. ಅನೇಕ ವೇಳೆ ಈ ಎರಡು ವಯೋಗುಂಪುಗಳ ಅವಶ್ಯಕತೆಗಳು, ಕಾರ್ಯ–ಚಟುವಟಿಕೆಗಳು ಬೇರೆಯೇ. ಆದ್ದರಿಂದ ಇವರಲ್ಲಿ ಹೊಂದಾಣಿಕೆ ಇರುವುದಿಲ್ಲ. ಹಿರಿಯರು ತಮ್ಮ ವಯೋಗುಂಪಿನವರೊಡನೆ ಹರಟೆಹೊಡೆಯುತ್ತಾ, ಹಾಯಾಗಿ ಕೂಡಬೇಕು ಅಥವಾ ಮಲಗಬೇಕೆಂದರೆ, ಮಕ್ಕಳು ತಮ್ಮ ವಯಸ್ಸಿನವರೊಡನೆ ಆಡಬೇಕು, ಕುಣಿದು–ಕುಪ್ಪಳಿಸಬೇಕೆಂದು ತವಕಿಸುತ್ತವೆ. ಆಗ ಹಿರಿಯ ವ್ಯಕ್ತಿ ಅವರ ಭಾವನೆಗಳನ್ನು ತಡೆಯುತ್ತಾರೆ. ಇಂಥ ಸಂದರ್ಭಗಳಲ್ಲಿಯೂ ಮಗು ಸಾಮಾಜಿಕವಾದ ಮತ್ತು ಮಾನಸಿಕವಾದ ತೊಂದರೆಗಳನ್ನು ಅನುಭವಿಸಬಹುದು.

ಕೊಪ್ಪದ ಮಕ್ಕಳಿಗೆ ಬರುವ ರೋಗಗಳಿಗೆ ಅವರು ವಾಸವಾಗಿರುವ ವಾತಾವರಣವೇ ಕಾರಣ. ತಂದೆತಾಯಂದಿರಲ್ಲಿ, ನೆರೆಹೊರೆಯವರಲ್ಲಿ, ನೈರ್ಮಲ್ಯದ ಬಗ್ಗೆ ಸೂಕ್ತ ಮಾಹಿತಿ ಇಲ್ಲವಾದ್ದರಿಂದ ಅವನ್ನು ಲಘುವಾಗಿ ತೆಗೆದುಕೊಂಡು ದನಗಳನ್ನು ಮನೆಯಲ್ಲಿ ಅಥವಾ ಹತ್ತಿರ ಇಟ್ಟುಕೊಂಡಿದ್ದರಿಂದ ಅವುಗಳ ಸಗಣಿ, ಕಸ, ಗೊಬ್ಬರ, ಮಲಮೂತ್ರಗಳು ಎಲ್ಲೆಂದರಲ್ಲಿ ಬಿದ್ದಿರುತ್ತವೆ. ಈ ಊರಲ್ಲಿಯ ಮತ್ತೊಂದು ವಿಶೇಷವೆಂದರೆ ಸಾಮಾನ್ಯವಾಗಿ ಎಲ್ಲರೂ ಎಲೆ ಅಡಿಕೆ ಮತ್ತು ತಂಬಾಕು ತಿನ್ನುವುದು. ಹೀಗೆ ತಿಂದು ಎಲ್ಲೆಂದರಲ್ಲಿ ಉಗುಳಬಿಡುತ್ತಾರೆ. ಇದು ತುಂತುರಾಗಿ, ಗಾಳಿಯಲ್ಲಿ, ನೆಲದಮೇಲೆ ಬೀಳುತ್ತದೆ. ಅಲ್ಲಿ ಆಡುವ ಮಕ್ಕಳು

ಅವರ ಮೇಲೆ ಓಡಾಡುತ್ತವೆ, ಆಡುತ್ತವೆ ಮತ್ತು ತಮ್ಮ ಮೈ–ಕೈಗಳನ್ನು ಕೊಳೆ ಮಾಡಿಕೊಳ್ಳುತ್ತವೆ. ಇವರ ತಂದೆತಾಯಂದಿರು ದಿನವಿಡೀ ದುಡಿದು ಸಂಜೆ ಮನೆಗೆಲಸವನ್ನೂ ಮಾಡಬೇಕು. ಈ ಎಲ್ಲಾ ತೊಂದರೆಗಳ ನಡುವೆ ಅವರಿಗೆ ತಮ್ಮ ಮಕ್ಕಳ ಮೈ–ಕೈ ತೊಳೆಯಲು ಮತ್ತು ಬಟ್ಟೆ ಬದಲಾಯಿಸುವಷ್ಟು ಸಮಯ ಮತ್ತು ಸಂಯಮ ಇರುವುದಿಲ್ಲ. ಇದರಿಂದಾಗಿ ಮಕ್ಕಳ ಮುಖ ಮತ್ತು ಮೈ ಕೊಳೆಯಿಂದ ಕೂಡಿರುತ್ತದೆ.

ಈ ಊರಲ್ಲಿ ಮಕ್ಕಳಿಗೆ ಸಾಮಾನ್ಯವಾಗಿ ಬರುವ ರೋಗಗಳೆಂದರೆ ರಕ್ತಹೀನತೆ, ನಾಯಿಕೆಮ್ಮು, ಲಿವರ್ ರೋಗ, ಜ್ವರ, ಸೆಟಿಬೇನೆ, ಜಾಂಡಿಸ್ ಮುಂತಾದವು. ಇವೂ ಅಲ್ಲದೆ ಜಂತುಹುಳು, ಹಲ್ಲಿನಬೇನೆ, ಕಣ್ಣಿನಬೇನೆ, ಕೈ ಮೈ ಮೇಲಿನ ಗಾಯಗಳು ಸರ್ವಸಾಮಾನ್ಯ. ಅಲ್ಲದೆ ಈ ಊರಲ್ಲಿ ಕ್ಷಯರೋಗವು ಹೆಚ್ಚಾಗಿದ್ದು ತಂದೆತಾಯಂದಿರು ಈ ರೋಗದಿಂದ ಬಳಲುತ್ತಿದ್ದರೆ ಮಕ್ಕಳಿಗೂ ಬರುತ್ತದೆ. ನಾವು ಹಿಂದೆಯೇ ಹೇಳಿರುವಂತೆ ತಂದೆತಾಯಂದಿರಲ್ಲಿ ಮೂಢನಂಬಿಕೆಗಳು, ಆರೋಗ್ಯ, ನೈರ್ಮಲ್ಯ, ರೋಗಗಳ ಬಗ್ಗೆ ಅಜ್ಞಾನ, ರೋಗಬಂದರೆ ಅವುಗಳ ಬಗ್ಗೆ ಮುಂಜಾಗ್ರತೆ ವಹಿಸದೆ ಇರುವುದು, ಅವುಗಳ ನಿವಾರಣೋಪಾಯಗಳ ಬಗ್ಗೆ ಸರಿಯಾದ ಮಾಹಿತಿ ಇಲ್ಲದಿರುವುದು ಹೆಚ್ಚಿನ ಹಾನಿಗೆ ಎಡೆಯಾಗಿದೆ. ಯಾವುದಾದರೂ ಕಾಯಿಲೆ ಬಂದರೆ ಮೊದಲು ಮನೆಯ ವೈದ್ಯ ಕಾಯಿಲೆ ನೋಡುತ್ತಾರೆ. ಒಂದೆರಡು ದಿನಗಳವರೆಗೂ ಇದು ವಾಸಿಯಾಗದಿದ್ದರೆ ಓಣಿಯಲ್ಲಿಯ ಅಥವಾ ಊರಲ್ಲಿಯ ನಾಡಿವೈದ್ಯರ ಕಡೆ ಹೋಗುತ್ತಾರೆ. ಈ ಊರಲ್ಲಿ ಇಬ್ಬರು ಮಹಿಳೆಯರು, ಮೂರುಜನ ಪುರುಷರು ನಾಡಿ ವೈದ್ಯದಲ್ಲಿ ಪರಿಣಿತರಿದ್ದಾರೆ. ಇವರಲ್ಲದೆ ಮೂರುಜನ ಮಾಯ–ಮಂತ್ರದಲ್ಲಿ ಪರಿಣಿತರಿದ್ದಾರೆ. ಜನಸಾಮಾನ್ಯರ ನಂಬಿಕೆಯಂತೆ ಇವರು ವಾಸಿಮಾಡದ ರೋಗವಿಲ್ಲ. ಅಲ್ಲದೆ ಇವರು ತಮ್ಮ ಸೇವೆಗೆ ಮತ್ತು ಔಷಧಕ್ಕೂ ಹಣ ತೆಗೆದುಕೊಳ್ಳುವುದಿಲ್ಲವಾದ್ದರಿಂದ ಬಡವರು ಇವರನ್ನೇ ನಂಬಿದ್ದಾರೆ. ಇವರು ಸಾಕಷ್ಟು ದಿನ ವೈದ್ಯಮಾಡಿದ ನಂತರವೂ ರೋಗ ಗುಣವಾಗದಿದ್ದರೆ ಆಗಾಗ ಬರುವ ಕೆಲವೊಂದು ಗಾಂವಟಿ ವೈದ್ಯರನ್ನು ಕಾಣುತ್ತಾರೆ. ಈ ವೇಳೆಗೆ ಮಗುವಿಗೆ ವಾಸಿಯಾಗಲೂಬಹುದು ಇಲ್ಲವೆ ಅದು ಸತ್ತಿದ್ದರೂ ಆಶ್ಚರ್ಯವಲ್ಲ! ಎಲ್ಲೋ ಕೆಲವೊಬ್ಬರು ಮಾತ್ರ ಧಾರವಾಡದಲ್ಲಿಯ ವೈದ್ಯರ ಕಡೆ ಹೋಗುತ್ತಾರೆ. ಹೀಗಾಗಿ ಸರಿಯಾದ ಸಮಯದಲ್ಲಿ, ಸರಿಯಾದ ವೈದ್ಯಕೀಯ ಸಹಾಯ ದೊರಕದೆ ಸುಲಭವಾಗಿ ವಾಸಿಯಾಗಬಹುದಾದ ಸಣ್ಣಪುಟ್ಟ ಕಾಯಿಲೆಗಳು ಮಕ್ಕಳನ್ನು ಹಿಂಡಿ ಹಿಂಡಿ ಕೊಲ್ಲುತ್ತವೆ.

ಅನೇಕ ಜನಪದ ಸಮಾಜಗಳಲ್ಲಿಯಂತೆ ಕೊಪ್ಪದಲ್ಲಿಯೂ ಜನರು ತಾವು ತಿನ್ನುವ ಆಹಾರ, ಕುಡಿಯುವ ಪಾನೀಯಗಳ ಬಗ್ಗೆ ತಮ್ಮದೇ ಆದ ಮೌಲ್ಯಗಳನ್ನು ಹೊಂದಿದ್ದಾರೆ. ಉತ್ತಮವಾದ ಊಟ, ತಿಂಡಿ ಮುಂತಾದವು ಜನಸಾಮಾನ್ಯರಿಗೆ ಲಭ್ಯವಿಲ್ಲದಿದ್ದರೂ ಉತ್ತಮ ಊಟದಲ್ಲಿ ಹಾಲು, ಮೊಸರು, ತುಪ್ಪ, ಗೋದಿ ಮುಂತಾದವನ್ನು ಸೇರಿಸುತ್ತಾರೆ. ಇದಲ್ಲದೆ ಕೆಲ ಬಗೆಯ ಹಣ್ಣುಗಳು ಮತ್ತು ತರಕಾರಿಗಳನ್ನು ಸೇವಿಸುತ್ತಾರೆ. ಕೆಲವೊಂದು ಕುಟುಂಬದಲ್ಲಿ ಇವೆಲ್ಲವೂ ಇದ್ದರೂ ಮೂಢನಂಬಿಕೆಯ ಪರಿಣಾಮದಿಂದಾಗಿ ಅವರಿಗೆ ಈ ಕಡೆ ಗಮನವಿರುವುದಿಲ್ಲ. ಕೆಲವರು ಹಣದಾಸೆಗೆ ಹಾಲು ಮುಂತಾದವನ್ನು ಮಾರುತ್ತಾರೆ. ಉದಾಹರಣೆಗೆ ಈ ಊರಿಂದ ಪ್ರತಿದಿನ ೬೦ ರಿಂದ ೧೫೦ ಲೀಟರ್‌ವರೆಗೆ ಹಾಲನ್ನು ಧಾರವಾಡದ ಗೌಳಿಗಳು ಕೊಳ್ಳುತ್ತಾರೆ. ಈ ಹಾಲು ಮಾರುವ ಕುಟುಂಬಗಳು ತಮಗೆ ಉಪಯೋಗಿಸಿ ಮಿಕ್ಕಿದ್ದನ್ನು ಮಾತ್ರ ಮಾರದೆ ಆಸೆಗಾಗಿ ಎಲ್ಲವನ್ನೂ ಮಾರುತ್ತಾರೆ. ನಮ್ಮ ಅನುಭವವನ್ನೇ ಹೇಳಬೇಕೆಂದರೆ ನಾವು ಕೊಪ್ಪಕ್ಕೆ ಹೋದರೀಗ ಚಹ ಕುಡಿಯಲೆಂದು ಹಾಲಿಗೆ ಅನೇಕ ದೊಡ್ಡ ದೊಡ್ಡ ಕುಟುಂಬಗಳಿಗೆ ಕಳುಹಿಸಿದರೂ ನಮಗೆ ಹಾಲು ಸಿಗದೆ ಕರೀ ಚಹ ಕುಡಿಯಬೇಕಾಯಿತು. ಹೀಗೆ ಊರಲ್ಲಿ ಉತ್ಪತ್ತಿಯಾಗುವ ಅನೇಕ ವಸ್ತುಗಳು ಊರಜನರಿಗೆ ಸಿಗುವುದಿಲ್ಲ. ಹಣದ ವ್ಯವಹಾರ, ಕಳ್ಳುಬಳ್ಳಿ ಮತ್ತು ನೆರೆಹೊರೆ ಸಂಬಂಧಗಳು ಕೆಟ್ಟಿರುವುದರಿಂದ ಪುಕ್ಕಟೆ ಕೇಳಿದರೆ ಯಾರೂ ಹಾಲು ಕೊಡುವುದಿಲ್ಲವಾದ್ದರಿಂದ ಬಡವರ ಮಕ್ಕಳಿಗೆ ತಾಯಿಯ ಹಾಲು ಬಿಟ್ಟರೆ ಮತ್ಯಾವ ಹಾಲೂ ಸಿಗುವುದಿಲ್ಲ.

ಕೊಪ್ಪದಲ್ಲಿ ನಾವು ವಿಚಾರಿಸಿದ ಯಾವ ಕುಟುಂಬದಲ್ಲೂ ಮಕ್ಕಳಿಗೆಂದೇ ಸೂಕ್ತ ಹಾಗೂ ಬೇರೆ ಆಹಾರ ತಯಾರಿಸಿದ್ದದ್ದು ಕಂಡುಬರಲಿಲ್ಲ. ಅಂದರೆ ಪ್ರೌಢ ವಯಸ್ಕರಿಗೆ ಮಾಡಿದ ಆಹಾರವನ್ನೇ ಮಕ್ಕಳು ತಿನ್ನುತ್ತಾರೆ. ಇದು ಖಾರವಾಗಿ, ಗಟ್ಟಿಯಾಗಿದ್ದು ಮಕ್ಕಳು ಸುಲಭವಾಗಿ ತಿನ್ನಲು ಮತ್ತು ಜೀರ್ಣಿಸಿಕೊಳ್ಳಲು ಸಾಧ್ಯವಿಲ್ಲ. ಆದರೆ ಮಕ್ಕಳ ಅವಶ್ಯಕತೆಗಳನ್ನು ಗಮನಿಸಿ ಸೂಕ್ತ ಆಹಾರವನ್ನು ತಯಾರಿಸುವ ಅವಶ್ಯಕತೆ ಇವರಿಗೆ ತಿಳಿಯದು. ಅಷ್ಟೇ ಅಲ್ಲದೆ ಮಕ್ಕಳಿಗೆ ಆಹಾರವನ್ನು ಸಕಾಲಕ್ಕೆ, ಸೂಕ್ತವಾದ ರೀತಿಯಲ್ಲಿ ನೀಡಬೇಕೆಂಬುದರ ಅರಿವು ಇದ್ದಂತೆ ಕಾಣಲಿಲ್ಲ. ಮಕ್ಕಳಿಗೆ ಆಹಾರವನ್ನು ಯಾವ ಕಾಲದ ಅಂತರದಲ್ಲಿ ನೀಡುತ್ತೀರೆಂದು ಕೇಳಿದ ಪ್ರಶ್ನೆಯೊಂದಕ್ಕೆ 'ಅವು ಅತ್ತಾಗೆಲ್ಲಾ' ಎಂದು ಉತ್ತರಿಸಿದಳೊಬ್ಬ ತಾಯಿ! ಆದರೆ ಮಕ್ಕಳು ಅಳುವುದು ಹಸಿವಾದುದಕ್ಕೆ ಮಾತ್ರವಲ್ಲ ಮತ್ತು ಅತ್ತಾಗೆಲ್ಲಾ ಅವಕ್ಕೆ ಆಹಾರ, ನೀಡಬೇಕೆಂಬ ಅವಶ್ಯ

ಕತೆಯೂ ಇಲ್ಲ. ಕೊಪ್ಪ ಗ್ರಾಮದಲ್ಲಿಯ ರೂಢಿಯಂತೆ ತಂದೆ ತಾಯಂದಿರು ಊಟಕ್ಕೆ ಕೂತಾಗ ಮಕ್ಕಳನ್ನು ತಮ್ಮೊಂದಿಗೆ ಕರೆದುಕೊಳ್ಳುತ್ತಾರೆ. ಹಿರಿಯರಿಗೆ ಅವಸರವಿರುವುದರಿಂದ ಬೇಗನೇ ಉಂಡು ಮುಗಿಸಬಹುದು. ಆದರೆ ಮಕ್ಕಳು ಸರಿಯಾಗಿ ತಿನ್ನಲಾರವು. ಆದರೆ ಅವು ನಡುವೆ 'ಅತ್ತರೆ ತಿನ್ನಿಸ'ಲೆಂದು ಹೊಲಕ್ಕೆ ಹೋಗುವಾಗ ಆಹಾರ ಕೊಟ್ಟು ಹೋಗುವ ರೂಢಿಯೂ ಇದೆ. ಆದ್ದರಿಂದ ಅನೇಕ ಕುಟುಂಬಗಳಲ್ಲಿ, ಅದರಲ್ಲೂ ಕೂಲಿಗೆ ಹೋಗುವವರಲ್ಲಿ ಮಕ್ಕಳು ಬೆಳಗ್ಗೆ ಎಂಟು ಗಂಟೆಗೆ ತಯಾರಿಸಿದ ಅನ್ನವನ್ನೇ ಮಧ್ಯಾಹ್ನ ಮತ್ತು ಸಾಯಂಕಾಲ ತಿನ್ನುತ್ತಾರೆ. ಸಂಜೆಯಾದಂತೆ ಕೊಪ್ಪದ ಹಸಿದ ಮಕ್ಕಳು ಅಳುವ ಶಬ್ದ ಹೃದಯದ್ರಾವಕವಾದದ್ದು. ಆದರೆ ಅವರ ತಂದೆ ತಾಯಂದಿರು ಹೊಲಕ್ಕೆ ಹೋಗಿರುವುದರಿಂದ ಅವರು ಹಿಂತಿರುಗಿ ಬಂದು ತಿನ್ನಿಸುವವರೆಗೂ ಅವು ಗೋಳಿಡುತ್ತಾ ಇರುತ್ತವೆ. ತಂದೆ ತಾಯಂದಿರು ಮನೆಗೆ ಹಿಂತಿರುಗಿದ ಮಾತ್ರಕ್ಕೆ ಇವರಿಗೆ ಕೂಡಲೇ ಊಟ ಸಿಗುವುದಿಲ್ಲ. ಅನೇಕ ಕುಟುಂಬಗಳಲ್ಲಿ ಹೊಲದಿಂದ ಬಂದು ಅಡಿಗೆ ಮಾಡಬೇಕಾದ್ದರಿಂದ ಕಡಿಮೆ ಎಂದರೆ ರಾತ್ರಿ ೮ ಗಂಟೆಯುವರೆಗಾದರೂ ಊಟಕ್ಕೆ ಕಾಯಬೇಕು. ಆದರೆ ಈ ವೇಳೆಗಾಗಲೇ ಹಸಿದು ಬಳಲಿ ಕಂಗಾಲಾಗಿದ್ದ ಮಕ್ಕಳು ತಮ್ಮ ತಾಯಂದಿರನ್ನು ನೋಡಿದ ಆನಂದ ಮಾತ್ರದಿಂದ ನಿದ್ರೆ ಹೋಗಿ ಬಿಡುತ್ತವೆ ಅಥವ ನಿದ್ರೆಯ ಗುಂಗಿನಲ್ಲಿರುತ್ತವೆ. ಈ ಪರಿಸ್ಥಿತಿಯಲ್ಲಿ ತಂದೆತಾಯಂದಿರು ಅವರಿಗೆ ಉಣಿಸಬೇಕೆಂದರೂ ಅದು ಸಾಧ್ಯವಾಗುವುದಿಲ್ಲ. ಹೀಗೆ ಗ್ರಾಮಾಂತರ ಮಕ್ಕಳು ಸರಿಯಾದ ಊಟ-ಉಪಚಾರ ಗಳಿಲ್ಲದೆ ಕೊರಗುತ್ತವೆ.

ನಾನಿಲ್ಲಿ ಹೇಳಿರುವ ವಿಷಯಗಳು ಕೊಪ್ಪಕ್ಕೆ ಸಂಬಂಧಿಸಿದವಾದರೂ ಇವು ಭಾರತದ ಇತರೆ ಹಳ್ಳಿಗಳಿಗೆ ಹೊರತಿಲ್ಲ. ಈ ಪರಿಸ್ಥಿತಿ ಮುಂದುವರೆದರೆ ಮಕ್ಕಳು ಕೊರಗಿ ಬೇಗನೆ ಸಾಯುತ್ತವೆ ಇಲ್ಲವೆ ರೋಗಸ್ಥರಾಗಿ ಉಳಿಯುತ್ತಾರೆ. ಈ ರೋಗಸ್ಥ ಮಕ್ಕಳೇ ಮುಂದೆ ರಾಷ್ಟ್ರದ ಪ್ರಜೆಗಳಾಗುತ್ತಾರಾದ್ದರಿಂದ ದೇಶವೇ ರೋಗಗಳ ಸಂತೆಯಾಗುತ್ತದೆ. ಇದನ್ನು ಮನಗಂಡು ನಮ್ಮ ಸರಕಾರ ಈಗಾ ಗಲೇ ಕೆಲವೊಂದು ಕಾರ್ಯಕ್ರಮಗಳನ್ನು ಆಚರಣೆಯಲ್ಲಿ ತಂದಿದೆ. ಆದರೆ ಕೆಲವು ನ್ಯೂನತೆಗಳಿಂದಾಗಿ ಇವು ಸರಿಯಾಗಿ ಕಾರ್ಯ ಮಾಡುತ್ತಿಲ್ಲ. ಈ ಕಾರ್ಯ ಕ್ರಮಗಳನ್ನು ಸೂಕ್ತ ರೀತಿಯಿಂದ ಮಾಡಿ ಮಕ್ಕಳ ಕಲ್ಯಾಣ ಮಾಡುವುದರ ಮೂಲಕ ದೇಶದ ಸಂಪತ್ತನ್ನು ಹೇಗೆ ಉಳಿಸಿಕೊಳ್ಳಬಹುದೆಂಬುದರ ಬಗ್ಗೆ ಇಲ್ಲಿ ಕೆಲವೊಂದು ಸಲಹೆಗಳನ್ನು ನೀಡಲಾಗಿದೆ. ಮೊದಲನೆಯದಾಗಿ, ಸರಕಾರವು ತನ್ನ ಸಮಾಜ ಕಲ್ಯಾಣ ಸಿಬ್ಬಂದಿಯ ಸಹಾಯದಿಂದ ಗ್ರಾಮೀಣ ಜನರಲ್ಲಿ

ಆರೋಗ್ಯ ನೈರ್ಮಲ್ಯ ಮುಂತಾದ ವಿಷಯದ ಬಗ್ಗೆ ಸರಿಯಾದ ಮಾಹಿತಿ ನೀಡಿ ಜನರನ್ನು ಜಾಗೃತರನ್ನಾಗಿ ಮಾಡಬೇಕು. ಇವರು ತಮ್ಮೊಂದಿಗೆ ಸೂಕ್ಷ್ಮದರ್ಶಕ ಯಂತ್ರ, ಸಿನಿಮಾ ತೋರಿಸುವ ಸಾಧನ ಮುಂತಾದವನ್ನು ತಂದು ಜನರಿಗೆ ತಾವು ತಿನ್ನುವ ಆಹಾರ ಮತ್ತು ಕುಡಿಯುವ ನೀರನ್ನೇ ತೆಗೆದುಕೊಂಡು ಅವುಗಳಲ್ಲಿರುವ ರೋಗಾಣುಗಳನ್ನೇ ತೋರಿಸಿ ತಿಳಿಸಬೇಕು. ಎರಡನೆಯದಾಗಿ, ಜನರಲ್ಲಿರುವ ಮೂಢನಂಬಿಕೆಗಳನ್ನು ಕಳೆದು ಅವರು ಆಧುನಿಕ ವೈದ್ಯಕೀಯ ಶಾಸ್ತ್ರದ ಸಹಾಯ ಪಡೆಯುವಂತೆ ಮಾಡಬೇಕು. ಇದಕ್ಕೆ ಪರಿಹಾರವಾಗಿ ಹಳ್ಳಿಯಲ್ಲಿಯ ನಾಟಿ ವೈದ್ಯರನ್ನು ಸರಿಯಾಗಿ ದಂಡಿಸಬೇಕು. ಎರಡನೆಯದಾಗಿ, ಆಧುನಿಕ ವೈದ್ಯಕೀಯ ಅನುಕೂಲತೆಗಳು ಎಲ್ಲರಿಗೂ, ಊರಲ್ಲೇ ಸಿಗುವಂತೆ ಮಾಡಬೇಕು. ಬಡತನ ಹಾಗೂ ವೇಳೆಯ ಅಭಾವದಿಂದ ಇವರು ದೂರದ ಪೇಟೆಯ ವೈದ್ಯರ ಕಡೆ ಹೋಗಲು ಹಿಂಜರಿಯುತ್ತಾರೆ. ಆದರೆ ಪುಕ್ಕಟೆಯಾಗಿ, ಸರಿಯಾದ ಸೌಲಭ್ಯಗಳು ಊರಲ್ಲಿಯೇ ಸಿಕ್ಕರೆ ಯಾರು ಬಿಡುವುದಿಲ್ಲ. ಆದ್ದರಿಂದ ಗ್ರಾಮೀಣ ಜನರಲ್ಲಿ ಸೇವೆ ಸಲ್ಲಿಸಲು ವಿಶೇಷವಾಗಿ ತರಬೇತಿ ಪಡೆದ, ಧನ ಪಿಶಾಚಿಗಳಾಗದ ವೈದ್ಯರನ್ನು, ವೈದ್ಯಕೀಯ ಸಿಬ್ಬಂದಿಯನ್ನು ತರಬೇಕು. ಮೂರನೆಯದಾಗಿ, ನಮ್ಮಲ್ಲಿ ಸಧ್ಯ ಜಾರಿಯಲ್ಲಿರುವ ಕಡ್ಡಾಯ ಶಿಕ್ಷಣವನ್ನು ಅಕ್ಷರಶಃ ಜಾರಿಗೆ ತರಬೇಕು. ಅಂದರೆ ೧೬ ವರ್ಷಕ್ಕೆ ಕೆಳಗಿನವರೆಲ್ಲರನ್ನೂ ಕಡ್ಡಾಯವಾಗಿ ಶಾಲೆಗೆ ತರಬೇಕು. ಈ ಶಾಲೆಗಳಲ್ಲಿ ಅವರಿಗೆ ಆರೋಗ್ಯ ನೈರ್ಮಲ್ಯ ಮತ್ತು ಓಂಬರಹದ ಬಗ್ಗೆ ಕಲಿಸುವುದರ ಜೊತೆಗೆ ಸರಿಯಾದ ಊಟ, ಬಟ್ಟೆ ಮುಂತಾದುವನ್ನು ಒದಗಿಸಬೇಕು. ಆದರೆ ಇಂದು ಸಾಕಷ್ಟು ಶಾಲಾ ಕಟ್ಟಡಗಳು ಶಿಕ್ಷಕರು, ಪುಸ್ತಕ, ಹಣ ಮುಂತಾದವು ಇಲ್ಲದೆ ಇವು ಕೇವಲ ಸರಕಾರದ ಧೋರಣೆ ಮಾತ್ರವಾಗಿದೆ. ಇದರಿಂದ ಅವರ ಶಿಕ್ಷಣ ಅಷ್ಟೇ ಅಲ್ಲ ಇತರ ಕಲ್ಯಾಣ ಕಾರ್ಯಗಳೂ ಕುಂಠಿತವಾಗಿವೆ. ಇವು ಅಲ್ಲದೆ ಪ್ರತಿಊರಿಗೂ ಒಂದು, ಸಾಧ್ಯವಾದರೆ ಅದರ ಜನಸಂಖ್ಯೆಯಂತೆ ಎರಡು ಬಾಲವಾಡಿಗಳನ್ನು ತೆಗೆಯಬೇಕು. ಈ ಬಾಲವಾಡಿಗಳಿಗೆ ಎಲ್ಲಾ ಮಕ್ಕಳನ್ನು ಕಡ್ಡಾಯವಾಗಿ ತಂದು ಇಲ್ಲಿಯೇ ಅವರ ಸ್ನಾನ, ಊಟ, ವಿದ್ಯೆ ಮುಂತಾದವಕ್ಕೆ ವ್ಯವಸ್ಥೆ ಮಾಡಬೇಕು. ಈ ವಯಸ್ಸಿನ ಮಕ್ಕಳಿಗೆ ವೈದ್ಯಕೀಯ ಸವಲತ್ತೂ ಕಡ್ಡಾಯವಾಗಿ ದೊರಕಬೇಕು. ಆಗ ಮಾತ್ರ ತಂದೆತಾಯಿಗಳು ಅವರ ಆರೋಗ್ಯದ ಬಗ್ಗೆ ತಿಳಿದವರಿಲ್ಲವಾದರೂ ಮತ್ತು ಬಡವರಿದ್ದರೂ ಇವು ಮಕ್ಕಳಿಗೆ ಸಿಗುತ್ತವೆ. ತಂದೆತಾಯಂದಿರು ಹೊಲಗೆಲಸಕ್ಕೆ ಹೋದಾಗ, ಮಕ್ಕಳು ರೋಗದಿಂದ ನರಳುತ್ತಿರುವಾಗ ಇವರನ್ನು ನೋಡಿಕೊಳ್ಳಲು ಸೂಕ್ತ ತರಬೇತಿ ಹೊಂದಿದ ಶಿಕ್ಷಕ ಮತ್ತು ವೈದ್ಯಕೀಯ

ಕಾರ್ಯಕರ್ತರಿದ್ದರೆ ತಮ್ಮ ಕೆಲಸವನ್ನು ಇವರೂ ಸರಿಯಾಗಿ, ಮನಸ್ಸಿಟ್ಟು ಮಾಡಬಲ್ಲರು. ಮತ್ತು ಇವರಿಗೂ ಮಾನಸಿಕವಾದ ತೊಂದರೆ ತಪ್ಪುತ್ತದೆ. ಈ ಎಲ್ಲ ಅವಕಾಶಗಳನ್ನು ಉಪಯೋಗಿಸಿಕೊಂಡು ನಮ್ಮ ಭಾವೀ ಪ್ರಜೆ ಆದರ್ಶವಾಗಿ ಮುಂಬರುವದು. ಇಂತಹ ಒಂದು ಸಮಗ್ರ ಕಾರ್ಯಕ್ರಮದಿಂದ ಮಕ್ಕಳ, ದೇಶದ ಹಾಗೂ ಭಾವೀ ಜನಾಂಗದ ಕಲ್ಯಾಣವಾಗುತ್ತದೆ. ಆರೋಗ್ಯವಂತ ಮತ್ತು ಸುಶಿಕ್ಷಿತ ಮಕ್ಕಳೇ ರಾಷ್ಟ್ರದ ಆಸ್ತಿ. ಈ ಬಗ್ಗೆ ಅದರಲ್ಲೂ ಮುಂದಿನ ಸಮಾಜಕ್ಕೆ ಮಕ್ಕಳನ್ನು ನೀಡುತ್ತಿರುವ ಗ್ರಾಮೀಣ ಸಮಾಜದತ್ತ ಸರಕಾರ ಸರಿಯಾದ ಗಮನಹರಿಸಬೇಕು. ಏಕೆಂದರೆ ಆಧುನಿಕತೆ, ಹೆಚ್ಚಿನ ಜೀವನ ವೆಚ್ಚ ನಗರೀಕರಣದ ಪ್ರಭಾವ ಇವು ನಗರ ಸಮಾಜದ ಮೇಲೆ ಮಹತ್ವದ ಪರಿಣಾಮಬೀರಿ ಪುರಜನರು ತಮ್ಮ ಕುಟುಂಬದ ಗಾತ್ರವನ್ನು ಗಣನೀಯವಾಗಿ ಕಡಿಮೆ ಮಾಡಿ ಕೊಳ್ಳುವಂತೆ ಮಾಡಿವೆ. ಅಲ್ಲದೆ ಆಧುನಿಕ ಸಮಾಜದಲ್ಲಿ ಸಾಮಾನ್ಯವಾಗಿರುವ ಗುಪ್ತರೋಗ ಮುಂತಾದವು ಈ ಸಮಾಜದಲ್ಲಿ ಸಂತಾನ ಶಕ್ತಿಯನ್ನು ಕಳೆದಿವೆ ಅಥವಾ ಕುಂಠಿತ ಮಾಡಿವೆ. ಹೀಗೆ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಕೆಡಿಸಿಕೊಂಡ ನಗರ ಸಮಾಜದ ಕುಟುಂಬ, ಆರೋಗ್ಯವಂತ ಮಕ್ಕಳನ್ನು ಸಮಾಜಕ್ಕೆ ನೀಡಲಾರದಾಗಿದ್ದು ಈ ಹೊಣೆ ಗ್ರಾಮೀಣ ಸಮಾಜದ ಮೇಲಿದೆ. ಸರಕಾರ ಈ ವಿಷಯವನ್ನು ಗಮನದಲ್ಲಿಟ್ಟುಕೊಂಡು ತನ್ನ ಯಾವುದೇ ಮುಖ್ಯ ಹಾಗೂ ಅತ್ಯವಶ್ಯಕ ಕಾರ್ಯಗಳಲ್ಲಿ ಇದನ್ನು ಸೇರಿಸಿಕೊಂಡು ಅತ್ಯಂತ ಹೆಚ್ಚಿನ ಆಸ್ಥೆ ಯಿಂದ ಕಾರ್ಯ ಮಾಡಬೇಕು. ಇಲ್ಲದಿದ್ದರೆ ಆಧುನಿಕ ವಿಜ್ಞಾನ ಮತ್ತು ತಾಂತ್ರಿಕತೆ ತಂದಿರುವ ಸುಖ ಸಂಪತ್ತುಗಳನ್ನು ಅನುಭವಿಸಲು ಭವಿಷ್ಯದಲ್ಲಿ ಆರೋಗ್ಯವಂತ ಜನರೇ ಇಲ್ಲದಂತಾಗಬಹುದು !

——

ಬಾಲಾಪರಾಧ (Juvenile Delinquency)

● ಎಂ. ಕುಮಾರಸ್ವಾಮಿ

ಕಳೆದ ಹಲವಾರು ವರ್ಷಗಳಿಂದ ಭಾರತ ಹಾಗೂ ಮತ್ತಿತರ ಪಾಶ್ಚಾತ್ಯ ದೇಶಗಳಲ್ಲಿ ಹೆಚ್ಚಿನ ಗಮನವನ್ನು ಸೆಳೆದು ವೈಜ್ಞಾನಿಕವಾಗಿ ಅಭ್ಯಾಸ ಹಾಗೂ ವಿಶ್ಲೇಷಣೆಗೊಳಗಾಗಿರುವ ಸಾಮಾಜಿಕ ಸಮಸ್ಯೆಗಳಲ್ಲಿ ಬಾಲಾಪರಾಧವೂ ಒಂದಾಗಿದೆ. ಸಮಾಜವಿಜ್ಞಾನ ಕ್ಷೇತ್ರದಲ್ಲಿ ಅಪರಾಧ ಹಾಗೂ ಅಪರಾಧಿಗಳ ವರ್ತನೆಯ ಬಗ್ಗೆ ವೈಜ್ಞಾನಿಕವಾಗಿ ಅಭ್ಯಾಸಮಾಡತಕ್ಕಂತಹ ಒಂದು ಶಾಸ್ತ್ರವಿದೆ. ಇದೇ ಅಪರಾಧ ಶಾಸ್ತ್ರ ಅಥವಾ ಅಪರಾಧವಿಜ್ಞಾನ (Criminology). ಈ ಶಾಸ್ತ್ರ ವಯಸ್ಕರು ಮತ್ತು ಬಾಲಕರು ಮಾಡುವಂತಹ ಅಪರಾಧ, ಅದಕ್ಕೆ ಕಾರಣಗಳು, ಅವರ ಶೋಧನೆ, ಅದಕ್ಕೆ ತಕ್ಕ ಪರಿಹಾರ, ಅಪರಾಧಿಯ ವ್ಯಕ್ತಿತ್ವ ಇತ್ಯಾದಿ ವಿಷಯಗಳನ್ನು ವ್ಯವಸ್ಥಿತವಾದ ರೀತಿಯಲ್ಲಿ ಹಾಗೂ ಸಂಶೋಧನಾತ್ಮಕವಾಗಿ ವಿವೇಚಿಸಿ ಹಾಗೂ ವಿಶ್ಲೇಷಿಸಿ, ಅಪರಾಧ ನಿರೋಧ, ಅಪರಾಧಿಯ ಪರಿವರ್ತನೆಗೆ ಮಾರ್ಗ ಇತ್ಯಾದಿ ಕ್ರಮಗಳನ್ನು ಕೈಕೊಳ್ಳಲು ಸಹಾಯಮಾಡುತ್ತದೆ.

ಬಾಲಾಪರಾಧ ಮಕ್ಕಳ ಕಿಡಿಗೇಡಿತನಕ್ಕೆ ಹಾಗೂ ಅವರ ಘಾತುಕ ಚೇಷ್ಟೆಗಳಿಗೆ ಒಂದು ಉದಾಹರಣೆಯಾಗಿದೆ. ಮಕ್ಕಳ ಕಿಡಿಗೇಡಿತನವೇನೋ ಸಾಧಾರಣವಾಗಿ ಎಲ್ಲೆಲ್ಲೂ ಕಂಡುಬರುವಂತಹ ವರ್ತನೆಯಾಗಿರಬಹುದು. ಆದರೆ ಈ ಕಿಡಿಗೇಡಿತನವೇ ಸಾಮಾಜಿಕ ಕ್ರಮ-ನಿಯಮಗಳಿಗೆ, ಸಮಾಜದ ಕಾರ್ಯಕಲಾಪ

ಗಳಿಗೆ, ಸಮಾಜದ ಕ್ಷೇಮಾಭಿವೃದ್ಧಿಗೆ ಅಥವಾ ಕಾನೂನುಗಳಿಗೆ ವಿರುದ್ಧವಾಗಿ ಹೋಗುವ ಕಾರ್ಯವಾದರೆ, ಅದನ್ನೇ ಅಪರಾಧ ಅಥವಾ ಅಪರಾಧಿ ವರ್ತನೆ ಎಂದು ಕರೆಯಬಹುದು. ಈ ವಿಧವಾದ ವರ್ತನೆಯನ್ನು ಮಕ್ಕಳಲ್ಲಿ ತಡೆಯ ದಿದ್ದಲ್ಲಿ, ಅದೇ ಅವರು ದೊಡ್ಡ ಅಪರಾಧಿಗಳಾಗಲು ಅಡಿಪಾಯವಾಗುತ್ತದೆ. ಆದುದರಿಂದ ಬಾಲಾಪರಾಧವನ್ನು ತುಚ್ಛವೆಂದು ಕಡೆಗಣಿಸಲು ಬರುವುದಿಲ್ಲ. ಇದು ಜೀವಂತ ಸಮಸ್ಯೆ. ಇಂದು ಅದನ್ನು ತಡೆಯದಿದ್ದಲ್ಲಿ, ನಾಳೆ ನಾಡಿನ ಸತ್ವವನ್ನೇ ಹಾಳುಮಾಡಬಹುದು.

ಇದೇ ೨೦ನೆಯ ಶತಮಾನದ ಆದಿಭಾಗದವರೆಗೆ ಎಲ್ಲಾ ದೇಶಗಳಲ್ಲಿಯೂ ಬಾಲಾಪರಾಧಿಗಳಿಗೂ ಕೂಡ ವಯಸ್ಕ ಅಪರಾಧಿಗಳಿಗೆ ಕೊಡುವ ಶಿಕ್ಷೆಯನ್ನೇ ಕೊಡ ಲಾಗುತ್ತಿತ್ತು. ಏಕೆಂದರೆ ಆಗ ಮಕ್ಕಳ ಮತ್ತು ಅವರ ಅಪರಾಧಗಳ ಹಾಗೂ ಕಿಡಿ ಗೇಡಿತನಗಳಿಗೆ ಸಂಬಂಧಪಟ್ಟ ಕಾಯಿದೆಗಳಿರಲಿಲ್ಲ. ಉದಾಹರಣೆಗೆ ಇಂಗ್ಲೆಂಡ್ ದೇಶದಲ್ಲಿ ೧೮೩೩ ರಲ್ಲಿ ೩ ಪೆನ್ನಿ ಮೌಲ್ಯದ ಬಣ್ಣವನ್ನು ಕದ್ದುದಕ್ಕಾಗಿ ೯ ವರ್ಷದ ಬಾಲಕನೊಬ್ಬನಿಗೆ ಮರಣದಂಡನೆ ವಿಧಿಸಲಾಯಿತು. ೧೮೭೫ ರಲ್ಲಿ ೧೩ ವರ್ಷದ ಒಬ್ಬ ಬಾಲಿಕೆಗೆ, ಮಕ್ಕಳ ಕೈಗಾಡಿ (Perambulator)ಯನ್ನು ಒಂದು ಸ್ವಚ್ಛ ವಾದ ರಸ್ತೆಯ ಮೇಲೆ ಹರಿಸಿಕೊಂಡು ಹೋದುದಕ್ಕಾಗಿ, ಜೈಲು ಶಿಕ್ಷೆವಿಧಿಸ ಲಾಯಿತು.[೧] ಇಂತಹ ಉದಾಹರಣೆಗಳೆಷ್ಟೋ ಇವೆ. ೧೯೦೮ರ ತನಕ ಇಂಗ್ಲೆಂಡ್ ದೇಶದಲ್ಲಿ ನಾನಾಕೃತ್ಯಗಳಿಗೋಸ್ಕರ ಬಾಲಾಪರಾಧಿಗಳಿಗೂ ವಯಸ್ಕ ಅಪರಾಧಿ ಗಳಿಗೂ ಒಂದೇ ರೀತಿಯಾದ ಶಿಕ್ಷೆಯನ್ನು ವಿಧಿಸುತ್ತಿದ್ದರು. ಆದರೆ ಕೆಲವೇ ದಶಕಗಳ ಹಿಂದೆ ಅಪರಾಧಶಾಸ್ತ್ರ, ಸಮಾಜಶಾಸ್ತ್ರ ಹಾಗೂ ಮನೋವಿಜ್ಞಾನಗಳ ಪ್ರಭಾವದಿಂದ ಬಾಲಾಪರಾಧಿಗಳಿಗೆ ಮತ್ತು ವಯಸ್ಕ ಅಪರಾಧಿಗಳಿಗೆ ಒಂದೇ ರೀತಿಯಾದ ಶಿಕ್ಷೆವಿಧಿಸುವುದು ನೈತಿಕವಾಗಿ ಸರಿಯಲ್ಲ. ಇದು ನ್ಯಾಯ ನಿಯಮ ಗಳಿಗೆ ಹೊಂದುವುದಿಲ್ಲ. ಇದು ನಾಗರಿಕತೆಯ ಲಕ್ಷಣವಲ್ಲ ಎಂಬುದನ್ನು ಮೊದಲನೆಯಬಾರಿ ಪಾಶ್ಚಾತ್ಯ ದೇಶಗಳಲ್ಲಿ ಗ್ರಹಿಸಿ ಮಕ್ಕಳ ಕಾನೂನನ್ನು ರಚಿಸ ಲಾಯಿತು. ಅಂದಿನಿಂದ, ಮಕ್ಕಳನ್ನು ಕಠಿಣತರನಾದ ಶಿಕ್ಷೆಗೆ ಗುರಿಪಡಿಸುವು ದನ್ನು ನಿಲ್ಲಿಸಲಾಯಿತು. ಈಗ ಯಾವ ದೇಶವೂ ಬಾಲಾಪರಾಧಿಗಳನ್ನು ಶಿಕ್ಷೆ ಅನುಭವಿಸಬೇಕಾದ ಒಬ್ಬ ಹುಡುಗ ಅಥವಾ ಹುಡುಗಿ ಎಂದು ಎಣಿಸುವುದಿಲ್ಲ. ಆದರೆ ತಿದ್ದಬೇಕಾದ ಮತ್ತು ಪರಿವರ್ತಿಸಬೇಕಾದ ಒಬ್ಬ ವ್ಯಕ್ತಿ ಎಂದು ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.

---

೧. Cyril Burt: **"The Young Delinquent"**, University of London Press, Ltd., London E.C. 4-1957, P. 105

ಬಾಲಾಪರಾಧಿ ಎಂದರೆ ಯಾರು ?

ಕಾನೂನಿನ ದೃಷ್ಟಿಯಲ್ಲಿ ಮಕ್ಕಳು ಮಾಡುವ ಅಪರಾಧಗಳು ಬಾಲಾಪರಾಧಗಳಾಗುತ್ತವೆ. ಇಂತಹ ಸಂದರ್ಭದಲ್ಲಿ ಮಕ್ಕಳೆಂದರೆ ಯಾರು ? ಎಂಬುದು ಆಯಾ ಸ್ಥಳಗಳ ಕಾನೂನುಗಳು ನಿರ್ಧರಿಸುತ್ತವೆ. ನಮ್ಮ ಭಾರತ ದೇಶದಲ್ಲಿ ಪ್ರತಿಯೊಂದು ರಾಜ್ಯವೂ ತನ್ನದೇ ಆದ ಮಕ್ಕಳ ಕಾನೂನುಗಳನ್ನು ರಚಿಸಿಕೊಂಡಿದೆ. ನಮ್ಮ ರಾಜ್ಯದ ಮಕ್ಕಳ ಕಾಯಿದೆಯ ಪ್ರಕಾರ ಹದಿನಾರು ವರ್ಷ ವಯಸ್ಸಿನೊಳಗಿರುವ ಹುಡುಗರು ಮತ್ತು ಹದಿನೆಂಟು ವರ್ಷ ವಯಸ್ಸಿನೊಳಗಿರುವ ಹುಡುಗಿಯರು ಮಕ್ಕಳೆಂದು ಕರೆಯಲ್ಪಡುತ್ತಾರೆ. ಇಂತಹ ಮಕ್ಕಳು ರಾಜ್ಯದ ಕಾನೂನು ಕಟ್ಟಳೆಗಳನ್ನು ಉಲ್ಲಂಘಿಸಿದಾಗ ಬಾಲಾಪರಾಧಿಗಳಾಗುತ್ತಾರೆ. ಭಿಕ್ಷೆ ಬೇಡುವ ಮಕ್ಕಳು, ನಿರ್ಗತಿಕರಾದ ಅನಾಥ ಮಕ್ಕಳು, ತಂದೆ-ತಾಯಿ ಅಥವಾ ಪೋಷಕರು ನಿರ್ವಹಿಸಲು ಸಾಧ್ಯವಿಲ್ಲದ ಮಕ್ಕಳು, ವೇಶ್ಯಾಗೃಹಗಳಲ್ಲಿ ಅಥವಾ ವೇಶ್ಯೆಯರ ಸಂಗಡ ಇರುವ ಮಕ್ಕಳು, ದುಷ್ಟವ್ಯಕ್ತಿಗಳ ಗುಂಪಿನಲ್ಲಿರುವ ಮಕ್ಕಳು ಮತ್ತು ಕುಡುಕರು ಹಾಗೂ ನೀತಿಭ್ರಷ್ಟರೊಡನಿರುವ ಮಕ್ಕಳುಗಳೂ ಕೂಡ ಬಾಲಾಪರಾಧಿಗಳ ಪಟ್ಟಿಯಲ್ಲಿ ಸೇರುತ್ತಾರೆ.[೨]

ಬಾಲಾಪರಾಧದ ಕಾರಣಗಳು

ಅಪರಾಧದ ಕಾರಣಗಳ ವಿಷಯದಲ್ಲಿ ಹಲವಾರು ಅಪರಾಧಶಾಸ್ತ್ರಜ್ಞರು, ಸಮಾಜವಿಜ್ಞಾನಿಗಳು, ಮಾನವಶಾಸ್ತ್ರಜ್ಞರು, ಮನೋವಿಜ್ಞಾನಿಗಳು, ಮನೋವೈದ್ಯರು ಮತ್ತು ಅರ್ಥಶಾಸ್ತ್ರಜ್ಞರುಗಳು ಅಪರಾಧ ಹಾಗೂ ಅಪರಾಧಿಗಳ ಬಗ್ಗೆ ಸಂಶೋಧನೆಗಳನ್ನು ಮಾಡಿ ವಿವಿಧ ಸಿದ್ಧಾಂತಗಳನ್ನು ಮಂಡಿಸಿದ್ದಾರೆ.

(a) ಶಾರೀರಿಕ ಮತ್ತು ದೈಹಿಕ ಅಂಶಗಳು

ಹತ್ತೊಂಬತ್ತನೆಯ ಶತಮಾನದ ಅಂತ್ಯ ಭಾಗದಲ್ಲಿ ಇಟಲಿ ದೇಶದ ಮನೋವೈದ್ಯ ಹಾಗೂ ಅಪರಾಧಶಾಸ್ತ್ರ ಪಿತಾಮಹನಾದ ಲೊಂಬ್ರೋಸೋ "ಅಪರಾಧಿಯು ಹುಟ್ಟುವಾಗಲೇ ಅಪರಾಧಿಯಾಗಿ ಹುಟ್ಟುತ್ತಾನೆ. ಅಪರಾಧ ಮಾಡುವ ಪ್ರವೃತ್ತಿ ತಂದೆ ತಾಯಿಗಳಿಂದ ಅಥವಾ ಪೂರ್ವಿಕರಿಂದ ಮಕ್ಕಳಿಗೆ ಅನುವಂಶಿಕವಾಗಿ ಬರತಕ್ಕಂತಹುದು" ಎಂಬ ವಾದವನ್ನು ಮಂಡಿಸಿದ್ದಾನೆ. ಇವನು ಹಲವಾರು

---

೨. The Mysore Children Act, 1964, Government Press, Bangalore, 1964, P. 3-4

ಕೈದಿಗಳನ್ನು ಮತ್ತು ಅಪರಾಧಿಗಳಾಗಿ ಸತ್ತವರ ಎಲುಬುಗಳನ್ನು, ಅವರ ತಲೆ ಬುರುಡೆಗಳನ್ನು ವೈಜ್ಞಾನಿಕ ರೀತಿಯಿಂದ ಅಭ್ಯಾಸ ಮಾಡಿ, ಅಪರಾಧಿ ವ್ಯಕ್ತಿತ್ವವನ್ನು ಮೊದಲೇ ವ್ಯಕ್ತಿಗಳಲ್ಲಿ ಗುರುತಿಸಬಹುದೆಂದು ಸಾರಿದ್ದಾನೆ. ಇವನ ರೀತಿಯಲ್ಲಿ ಅಪರಾಧಿಗಳು ವಿಕಾಸ ಶ್ರೇಣಿಯಲ್ಲಿ ಸಾಮಾನ್ಯಮಾನವನಿಗಿಂತ ಕೆಳದರ್ಜೆಯಲ್ಲಿದ್ದು, ಕೋತಿಗಳ ಲಕ್ಷಣಗಳನ್ನು ಪಡೆದಿರುತ್ತಾರೆ.[೩] ಅಪರಾಧಿಗಳಲ್ಲಿ ಚಪ್ಪಟೆಯಾದ ಹಣೆ, ಅಗಲವಾದ ಕಿವಿಗಳು, ತಲೆಯವಿರೂಪ, ಹೊರಚಾಚಿರುವ ಹುಬ್ಬುಗಳು ಇತ್ಯಾದಿಗಳು ಇರುವುದು ಸಾಮಾನ್ಯವೆಂದೂ ಈ ಅಪಲಕ್ಷಣಗಳು ಅಪರಾಧ ವರ್ತನೆಯ ತಳಹದಿ ಎಂದೂ ಲೊಂಬ್ರೋಸೋ ಸಾರಿದ್ದಾನೆ. ಆದರೆ ಚಾರ್ಲ್ಸ್‌ಗೋರಿಂಗ್ ಎಂಬ ಇಂಗ್ಲೆಂಡ್ ದೇಶದ ಅಪರಾಧಶಾಸ್ತ್ರಜ್ಞನು, ಇಂಗ್ಲೆಂಡ್ ದೇಶದಲ್ಲಿ ಸಂಶೋಧನೆ ನಡೆಸಿ ಲೊಂಬ್ರೋಸೋ ಸಿದ್ಧಾಂತಕ್ಕೆ ವಿರುದ್ಧವಾದ ಸಿದ್ಧಾಂತವನ್ನು ಮಂಡಿಸಿದನು. ಲೊಂಬ್ರೋಸೋ ಹೇಳಿರುವ ಅಪಲಕ್ಷಣಗಳು ಅಪರಾಧಿಗಳಲ್ಲಿ ಎಷ್ಟು ಸಾಮಾನ್ಯವಾಗಿ ಕಂಡುಬರುತ್ತವೆಯೋ ಅಷ್ಟೇ ಸಾಮಾನ್ಯವಾಗಿ ಅಪರಾಧಿಗಳಲ್ಲದವರಲ್ಲಿಯೂ ಇರುತ್ತವೆಂದು ವರದಿ ಮಾಡಿದ್ದಾನೆ. ಮತ್ತೊಂದೆಡೆಯಲ್ಲಿ ರಾಲ್ಫ್ ಬಾನೇ ಎಂಬ ಸಮಾಜಶಾಸ್ತ್ರಜ್ಞನು ದೈಹಿಕ ವಿಕಾರಗಳಾದ ದೊಡ್ಡದಾದ ಮೂಗು, ಬೇರೆ ಬಣ್ಣವಿರುವ ಎರಡು ಕಣ್ಣುಗಳು, ಅಡ್ಡಗಣ್ಣುಗಳು, ಸೊಟ್ಟಗಾಲು ಮುಂತಾದವುಗಳು ಅಪರಾಧಕ್ಕೆ ಕಾರಣವಾದುವುಗಳೆಂದು ಹೇಳಿದರೆ, ಅಮೇರಿಕಾದ ಅಪರಾಧಶಾಸ್ತ್ರಜ್ಞನಾದ ಅರ್ನೆಸ್ಟ್ ಹೂಟನ್ ಅಪರಾಧಿಗಳು ಅಪರಾಧಿಗಳಲ್ಲದವರಿಗಿಂತ ದೈಹಿಕವಾಗಿ ಕೀಳು ಎಂದು ವಾದಿಸಿದ್ದಾನೆ. [೪]

(b) ಸಾಮಾಜಿಕ ಅಂಶಗಳು

ಮಗುವಿನ ವ್ಯಕ್ತಿತ್ವ ಸರಿಯಾಗಿ ಬೆಳೆಯಬೇಕಾದರೆ ಒಳ್ಳೆಯ ವಾತಾವರಣ ಅತಿ ಅವಶ್ಯಕ. ವಾತಾವರಣ ಕೆಟ್ಟದಿದ್ದರೆ ಮಗುವು ಕೆಟ್ಟಭಾವನೆ ಬೆಳೆಸಿಕೊಳ್ಳುತ್ತದೆ. ಮತ್ತೆ ಈ ಭಾವನೆಗಳೇ ಕೆಟ್ಟ ಪ್ರವೃತ್ತಿ ಮತ್ತು ಸಮಾಜಘಾತುಕ

---

೩. Edwin H. Sutherland and Donald R. Cressy : **Principles of Criminology,** Times of India Press, Bombay, 1968, P. 98

೪. H. E. Barnes and N. K. Teeters-**New Horizons in Criminology**, Printice Hall of India Ltd. NewDelhi, 1966, P. 131-132

ವರ್ತನೆಗೆ ದಾರಿ ಮಾಡಿಕೊಡುತ್ತವೆ. ಮುಖ್ಯವಾಗಿ ಬಾಲಾಪರಾಧಿಯ ಮನೆ ಮತ್ತು ಕುಟುಂಬದ ವಾತಾವರಣವೇ ಅವನ ಸಮಾಜಘಾತುಕ ವರ್ತನೆಗೆ ಕಾರಣ ವಾಗಿರುತ್ತವೆ. ಮನೆಯೇ ಮಗುವಿಗೆ ಮೊದಲ ಶಾಲೆ. ಈ ಶಾಲೆಯಿಂದ ಮಗುವಿನ ವ್ಯಕ್ತಿತ್ವವು ಬೆಳೆಯುಬಹುದು ಇಲ್ಲವೆ ಅಳಿಯುಬಹುದು. ನಡತೆ, ಸಂಸ್ಕೃತಿ ಮತ್ತು ಶೀಲಗಳಿಗೆ ಸಂಬಂಧಪಟ್ಟಂತೆ ಮೊದಲ ಪಾಠವಾಗುವುದು ಮನೆಯಲ್ಲೇ. ದಾರಿದ್ರ್ಯದಿಂದ ಕೂಡಿರುವ ಅಥವಾ ಬಹಳ ಜನರಿಂದ ಕೂಡಿರುವ ಅಥವಾ ಒಡೆದ ಕುಟುಂಬಗಳು ಮಕ್ಕಳ ಸರಿಯಾದ ವ್ಯಕ್ತಿತ್ವದ ವಿಕಾಸಕ್ಕೆ ಅವಕಾಶ ಮಾಡಿಕೊಡುವುದಿಲ್ಲ. ಈ ಕಾರಣದಿಂದ ಮಕ್ಕಳು ಸಮಾಜವಿರೋಧಿ ವ್ಯಕ್ತಿತ್ವ ವನ್ನು ಬೆಳೆಸಿಕೊಳ್ಳುತ್ತವೆ. ಇಂಗ್ಲೆಂಡ್‌ದೇಶದ ಮನೋವೈದ್ಯ ಹಾಗೂ ಅಪರಾಧ ಶಾಸ್ತ್ರಜ್ಞ ಸಿರಿಲ್ ಬರ್ಟ್ ಲೈಂಗಿಕ ಹಾಗೂ ಇನ್ನಿತರ ಅಪರಾಧಗಳಿಗೆ ಬಹಳ ಜನ ರಿಂದ, ದಾರಿದ್ರ್ಯದಿಂದ ಕೂಡಿರುವ ಮನೆ ಒಂದು ಮುಖ್ಯಕಾರಣವೆಂದು ಹೇಳು ತ್ತಾನೆ. ಈ ರೀತಿಯಾದ ಮನೆಯಲ್ಲಿ ಏನಾಗುವುದೆಂದರೆ ಸೌಕರ್ಯದ ಅಭಾವ ದಿಂದ ತಂದೆ-ತಾಯಿಗಳು ಮತ್ತಿತರ ವಯಸ್ಕರು ಮಲಗುವ ಕೋಣೆಯಲ್ಲಿಯೇ ಮಕ್ಕಳೂ ಮಲಗುತ್ತಾರೆ. ಎಷ್ಟೋ ವೇಳೆ ಮಕ್ಕಳು ನಿದ್ರೆಮಾಡುತ್ತಿರಬಹು ದೆಂಬ ತಪ್ಪುಭಾವನೆಯಿಂದ ಅಲಕ್ಷ್ಯವಾಗಿ ಹಿರಿಯರು ಲೈಂಗಿಕ ಕ್ರಿಯೆಗಳಲ್ಲಿ ತೊಡಗುತ್ತಾರೆ. ಇದರಿಂದ ಮಕ್ಕಳಿಗೆ ಲೈಂಗಿಕ ಜೀವನದ ಚಿತ್ರವನ್ನು ಅವರು ಚಿಕ್ಕವರಿದ್ದಾಗಲೇ ಕೊಟ್ಟಂತಾಗುತ್ತದೆ. ಇದು ಅವರಲ್ಲಿ ಒಂದು ಕೆಟ್ಟ ಸಂಸ್ಕಾರ ವನ್ನುಂಟುಮಾಡುವುದರಿಂದ ಮುಂದೆ ತಮ್ಮ ಇಚ್ಛೆಯನ್ನು ನೆರವೇರಿಸಿಕೊಳ್ಳಲು ದುರ್ಮಾರ್ಗಕ್ಕೆ ಇಳಿದು ಬಾಲಾಪರಾಧಿಗಳಾಗುತ್ತಾರೆ.[೫]

ಬೇರೆ ಕೆಲವರು ಅಪರಾಧಶಾಸ್ತ್ರಜ್ಞರು ಒಡೆದ ಸಂಸಾರ ಮಗುವಿನ ಅಪರಾಧ ಪ್ರವೃತ್ತಿಗೆ ಮುಖ್ಯ ಕಾರಣವೆನ್ನುತ್ತಾರೆ. ಬಾಲಾಪರಾಧಿಗಳು ಹೆಚ್ಚಿನ ಪ್ರಮಾಣದಲ್ಲಿ ತಂದೆ ಅಥವಾ ತಾಯಿ ಸಂಸಾರವನ್ನು ತೊರೆದಿರುವುದರಿಂದ ಅಥವಾ ವಿವಾಹವಿಚ್ಛೇದನದಿಂದ ಅಥವಾ ಇಬ್ಬರಲ್ಲಿ ಒಬ್ಬರು ಸಾಯುವುದರಿಂದ ಒಡೆದ ಸಂಸಾರದಲ್ಲಿ ಬೆಳೆದುಬಂದಿರುತ್ತಾರೆ ಎಂಬುದನ್ನು ಸಂಶೋಧನೆಗಳಿಂದ ನಿರೂಪಿಸಿದ್ದಾರೆ. ಇಂತಹ ಒಡೆದ ಕುಟುಂಬದಲ್ಲಿ ಬಾಲಾಪರಾಧಿಗಳು ಸಾಮಾನ್ಯ ವಾಗಿ ಪ್ರೀತಿ-ವಿಶ್ವಾಸವನ್ನು ಕಾಣದ, ಸರಿಯಾದ ಮೇಲ್ವಿಚಾರಣೆ ಇಲ್ಲದೆ ಬೆಳೆದ ಮಕ್ಕಳಾಗಿರುತ್ತಾರೆ. ಒಡೆದ ಸಂಸಾರದಲ್ಲಿ ಮಗುವು ಆರ್ಥಿಕ, ಸಾಮಾಜಿಕ

---

೫. Cyril Burt : **The Young Delinquent,** University of London Press, London, 1957, P-88-8೨.

ಹಾಗೂ ಮಾನಸಿಕ ವಿಷಯಗಳಿಗೆ ಸಂಬಂಧಪಟ್ಟ ಕೊರತೆಗಳನ್ನು ಅನುಭವಿಸ ಬೇಕಾಗುತ್ತದೆ. ಈ ಕೊರತೆಗಳು ಅವನ ವ್ಯಕ್ತಿತ್ವದ ವಿಕಾಸಕ್ಕೆ ಅಡ್ಡಿಯಾಗಿ ಅಪರಾಧಿ ವರ್ತನೆಗೆ ಕಾರಣವಾಗುತ್ತವೆ. ಮುಖ್ಯವಾಗಿ ತಂದೆ-ತಾಯಿಗಳಿಬ್ಬರೂ ಮಡಿದಿರುವ ಒಂದು ಒಡೆದ ಸಂಸಾರದಲ್ಲಿ ಮಗುವಿಗೆ ಸರಿಯಾದ ಮಾರ್ಗ ತೋರಿ ಅವನ ನಡತೆಯನ್ನು ತಿದ್ದಲು ಯಾರೂ ಇರುವುದಿಲ್ಲ. ಇದರಿಂದ ಅವನ ಮನಸ್ಸಿಗೆ ಬಂದಂತೆ ಬೆಳೆಯುತ್ತಾನೆ. ಇಲ್ಲಿ ಅವನ ವಿದ್ಯಾಭ್ಯಾಸಕ್ಕೂ ಕೂಡ ಆತಂಕ ಬರುತ್ತದೆ. ಇದರಿಂದ ಅವನು ಸಮಾಜಘಾತುಕನಾಗಲು ಅನೇಕ ಅವಕಾಶಗಳುಂಟು. ಇನ್ನೊಂದು ರೀತಿಯಲ್ಲಿ ನೋಡಿದರೆ ತಾಯಿ-ತಂದೆಗಳಿಗೆ ಬೇಡವಾದ ಮಗುವೂ ಸಮಾಜವಿರೋಧೀ ಭಾವನೆಗಳನ್ನು ಬೆಳಸಿಕೊಳ್ಳುತ್ತದೆ. ಇದಕ್ಕೆ ಕಾರಣ ತಂದೆ-ತಾಯಿಗಳ ಪ್ರೀತಿ-ವಾತ್ಸಲ್ಯಗಳಿಲ್ಲದಿರುವುದೇ. ತಂದೆ-ತಾಯಿಗಳ ಹಿಡಿತ ಸರಿಯಾಗಿಲ್ಲದಿದ್ದರೂ ಕೂಡ ಮಗುವು ಕೆಟ್ಟ ದಾರಿಗೆ ಇಳಿಯುತ್ತದೆ. ಎಷ್ಟೋ ಧನಿಕ ಕುಟುಂಬಗಳಲ್ಲಿ ತಂದೆ-ತಾಯಿಗಳ ನಿರ್ಲಕ್ಷ್ಯದಿಂದ ಮಕ್ಕಳು ಕೆಟ್ಟದಾರಿಗಿಳಿದು ಅಪರಾಧ ಮಾಡಿರುವ ನಿದರ್ಶನಗಳೆಷ್ಟೋ ಇವೆ.

ಇವುಗಳಲ್ಲದೆ, ದಾರಿದ್ರ್ಯ, ನಿರುದ್ಯೋಗವಿರುವ ಕುಟುಂಬಗಳು, ಆಟ ಮುಂತಾದ ಮನೋರಂಜನೆ ಕಾರ್ಯಕ್ರಮಗಳಿಗೆ ಅವಕಾಶವಿಲ್ಲದಿರುವುದು, ದುಷ್ಟವ್ಯಕ್ತಿಗಳೊಂದಿಗೆ ಅಂದರೆ ವೇಶ್ಯೆಯರು, ಜೂಜುಕೋರರು, ಕುಡುಕರು ಮತ್ತು ಭಿಕ್ಷುಕರು ಮುಂತಾದವರ ಸಂಪರ್ಕ, ಬಜಾರಿನ ಹೊಟೇಲುಗಳ ಆಕರ್ಷಣೆ, ಅಶ್ಲೀಲ ಸಿನಿಮಾ ಹಾಗೂ ಸಾಹಿತ್ಯಗಳ ಆಕರ್ಷಣೆ, ಅನಾನುಕೂಲವಾದ ವಿದ್ಯಾಶಾಲೆ ಇತ್ಯಾದಿ ಅಂಶಗಳೂ ಕೂಡ ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೋ ಮಕ್ಕಳಲ್ಲಿ ಅಪರಾಧಿ ವ್ಯಕ್ತಿತ್ವವನ್ನು ಬೆಳೆಸುವುದರಲ್ಲಿ ಮುಖ್ಯ ಕಾರಣಗಳಾಗಿವೆ.

(c) ಮಾನಸಿಕ ಅಂಶಗಳು

ಮಾನವನ ಪ್ರಗತಿ ಅಥವಾ ಅಧೋಗತಿಯ ಇತಿಹಾಸವನ್ನು ನಾವು ತಿಳಿಯಬೇಕಾದರೆ ಅವನ ಜೀವನದ ವಿವಿಧ ಭಾಗಗಳ ಅಭ್ಯಾಸವನ್ನು ಚೆನ್ನಾಗಿ ಮಾಡಬೇಕಾಗುತ್ತದೆ. ಇಂತಹ ಅಭ್ಯಾಸಕ್ಕೆ ಮನೋವಿಜ್ಞಾನದ ಪರಿಚಯವು ಆವಶ್ಯಕವಾಗಿ ಬೇಕು. ಮನೋವಿಜ್ಞಾನವು ಮಾನವನ ವಿವಿಧ ವರ್ತನೆಗಳ ಉಗಮ ಹೇಗಾಗುತ್ತದೆ, ಅವುಗಳ ಪರಿಣಾಮಗಳಾವುವು ಎಂಬುದನ್ನು ತಿಳಿಸುವುದರಿಂದ ಈ ಶಾಸ್ತ್ರವು ಅಪರಾಧಿಗಳ ಅಪರಾಧ ವರ್ತನೆಗಳಿಗೆ ಮಾನಸಿಕ ಕಾರಣಗಳನ್ನು ಅರಿಯಲು ಬಹಳ ಅನುಕೂಲವಾಗಿದೆ.

ರಿಚರ್ಡ್ ಡಗ್ಡೇಲ್, ಹೆನ್ರಿ ಗಾಡರ್ಡ್ ಮೊದಲಾದ ವಿಜ್ಞಾನಿಗಳು ಕೆಲವು ಕುಟುಂಬಗಳ ಮೇಲೆ ಸಂಶೋಧನೆಗಳನ್ನು ಮಾಡಿ ಅಪರಾಧಿಗಳು ದುರ್ಬಲ ಮನಸ್ಸಿನವರು ಅಥವಾ ಬುದ್ಧಿಮಾಂದ್ಯರಾಗಿರುತ್ತಾರೆ. ಅವರ ಬುದ್ಧಿಮಾಂದ್ಯತೆ ಆನುವಂಶಿಕವಾದದ್ದು ಎಂದು ಸಾರಿದ್ದಾರೆ.[೬] ಆದರೆ ಅಡ್ಲರ್, ವರ್ದಿಂಗ್‌ಟನ್ ಮುಂತಾದವರು ಅಪರಾಧಿಗಳೆಲ್ಲರೂ ದುರ್ಬಲ ಮನಸ್ಸಿನವರಲ್ಲ, ಬುದ್ಧಿಮಾಂದ್ಯರಲ್ಲ. ಮೇಲಾಗಿ ಕೆಲವು ಅಪರಾಧಿಗಳು ಹೆಚ್ಚಿನ ಬುದ್ಧಿಶಕ್ತಿಯುಳ್ಳವರಾಗಿರುತ್ತಾರೆ ಎಂಬ ವಾದವನ್ನು ತಮ್ಮ ಸಂಶೋಧನೆಗಳಿಂದ ನಿರೂಪಿಸಿದ್ದಾರೆ.

ಮತ್ತೊಂದೆಡೆಯಲ್ಲಿ ಭಾವೋದ್ರೇಕದ ಅಸ್ಥಿರತೆ ಸಮಾಜಘಾತುಕ ಕೃತ್ಯಕ್ಕೆ ಕಾರಣವಾಗುತ್ತದೆ. ಮಗುವಿನಲ್ಲಿ ಕೋಪ, ಭಯ ಅಥವಾ ಲೈಂಗಿಕಭಾವನೆ ಅತಿಯಾದಾಗ ಅಂಥವನು ಹೊಡೆಯುವುದು, ಶೀಲಭಂಗ ಮಾಡುವುದು ಇತ್ಯಾದಿ ಕೆಟ್ಟಕೆಲಸಗಳನ್ನು ಮಾಡಿ ಅಪರಾಧಿಯಾಗುತ್ತಾನೆ. ಕೆಲವು ವೇಳೆ ಆಶಾಭಂಗವು-ಕೊಲೆ, ಆತ್ಮಹತ್ಯೆ ಮುಂತಾದ ಕೃತ್ಯಗಳಿಗೆ ಕಾರಣವಾಗುತ್ತದೆ. ಮತ್ತೆ ಕೆಲವರಲ್ಲಿ ನರದೌರ್ಬಲ್ಯದಿಂದ ಉಂಟಾದ ಉನ್ಮಾದಗಳು-ಕಳುವಿನ ಉನ್ಮಾದ (Kleptomania) ಮತ್ತು ಬೆಂಕಿಯ ಉನ್ಮಾದ (Pyromania) ಸಮಾಜಘಾತುಕ ಕೃತ್ಯಗಳಿಗೆ ಕಾರಣವಾಗುತ್ತವೆ.

ಬಾಲಾಪರಾಧಿಗಳಲ್ಲನೇಕರು ಮತಿಗೇಡಿನ ವ್ಯಕ್ತಿತ್ವ Psychopathic personality)ದವರಾಗಿರುತ್ತಾರೆ. ಇವರು ಸರಾಸರಿ ಮಟ್ಟ ಅಥವಾ ಅದಕ್ಕಿಂತ ಹೆಚ್ಚು ಬುದ್ಧಿವಂತರಾಗಿದ್ದು ಯಾವ ಮನೋರೋಗವನ್ನೂ ಹೊಂದಿರದ ವ್ಯಕ್ತಿಗಳಾಗಿದ್ದು ಕೆಲವು ರೀತಿಯ ಸಮಾಜಘಾತುಕ ಕೃತ್ಯಗಳನ್ನು-ಅಂದರೆ ಸುಳ್ಳು ಹೇಳುವುದು, ಅಲೆಯುವುದು, ಕೊಲೆ ಮಾಡುವುದು, ಮಾನಭಂಗ ಮಾಡುವುದು, ಇತ್ಯಾದಿ-ಎಸಗುತ್ತಾರೆ. ಕೆಲವರು ಮತಿಗೇಡಿನ ವ್ಯಕ್ತಿಗಳು ಕಾಮವಿಕಾರಿಗಳಾಗಿರುತ್ತಾರೆ. ಅವರು ಇತರರು ಕಾಮಾನುಭವದಲ್ಲಿ ತೊಡಗಿರುವಾಗ ಹಣಕಿ ನೋಡುವುದು (Voyeurism), ಸಾರ್ವಜನಿಕ ಸ್ಥಳಗಳಲ್ಲಿ ಜನನೇಂದ್ರಿಯಗಳನ್ನು ತೋರಿಸುವುದು (Exhibitionism) ಇತ್ಯಾದಿ ಕಾರ್ಯಗಳನ್ನು ಮಾಡುತ್ತಾರೆ. ಮನೋವಿಜ್ಞಾನಿಗಳು ಮತ್ತು ಮನೋವೈದ್ಯರುಗಳು ಮನೋಬೇನೆಗಳು (Psychoneuroses) ಮತ್ತು ಮನೋವಿಕೃತಿಗಳು (Psychoses) ಕೆಲವೊಮ್ಮೆ

೬. H. E. Barnes and N. K. Teeters-**New Horizons in Criminology,** Printice Hall of India Ltd., NewDelhi, 1966, p-135.

ಅಪರಾಧ ಕೃತ್ಯಗಳಿಗೆ ಕಾರಣವಾಗುತ್ತವೆ ಎಂಬುದಾಗಿ ಹೇಳುತ್ತಾರೆ. ಮನೋಬೇನೆಯಿಂದ ನರಳುತ್ತಿರುವ ವ್ಯಕ್ತಿಗಳು ಗೀಳು ಮತ್ತು ಚಟ (Obsession and Compulsion) ಉದ್ವಿಗ್ನತೆ (Anxiety) ಖಿನ್ನತೆ (Depression) ಇವುಗಳ ಪ್ರಭಾವದಿಂದ ಕಳ್ಳತನ, ಸುಳ್ಳು ಹೇಳುವುದು, ಕೊಲೆ ಮಾಡುವುದು, ಆತ್ಮಹತ್ಯೆಗೆ ತೊಡಗುವುದು ಮುಂತಾದ ಕಾರ್ಯಗಳನ್ನು ಮಾಡಿರುವ ಉದಾಹರಣೆಗಳೆಷ್ಟೋ ಇವೆ. ತೀವ್ರತರವಾದ ಮನೋರೋಗವಾದ ಮನೋವಿಕೃತಿಯಿಂದ ಬಳಲುತ್ತಿರುವ ವ್ಯಕ್ತಿಗಳು ತಾವು ಮಾಡುತ್ತಿರುವ ಕಾರ್ಯಗಳ ಬಗ್ಗೆ ಅರಿವಿಲ್ಲದೆಯೇ ವಿಭ್ರಮೆ (Hallucination) ಮತ್ತು ಭ್ರಾಂತಿ (Delusion) ಗಳ ಪ್ರೇರಣೆಯಿಂದ ಮಾನಭಂಗ, ಕೊಲೆ ಮುಂತಾದ ಮಹಾಪರಾಧಗಳನ್ನು ಮಾಡುತ್ತಾರೆ.

ಮೇಲ್ಕಂಡ ಅಂಶಗಳನ್ನೆಲ್ಲಾ ನೋಡಿದಾಗ ಅಪರಾಧ ವರ್ತನೆಗೆ ಕೇವಲ ಒಂದೋ–ಎರಡೋ ಕಾರಣಗಳಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಅಪರಾಧಕ್ಕೆ ಅನೇಕ ಕಾರಣಗಳಿರುತ್ತವೆ. ಯಾವುದೇ ಎರಡು ಅಪರಾಧಗಳು ಒಂದೇ ತೆರನಾದ ಕಾರಣಗಳನ್ನು ಹೊಂದಿರುವುದಿಲ್ಲ. ಶಾರೀರಿಕ ಅಂಶಗಳು, ಮಾನಸಿಕ ಅಂಶಗಳು ಮತ್ತು ಸಾಮಾಜಿಕ–ಆರ್ಥಿಕ ಅಂಶಗಳು ಪ್ರತ್ಯಕ್ಷವಾಗಿಯೋ ಅಥವಾ ಪರೋಕ್ಷವಾಗಿಯೋ ಬಾಲಕರ ಅಪರಾಧ ವರ್ತನೆಗೆ ಕಾರಣವಾಗಿರುತ್ತವೆ.

ಬಾಲಾಪರಾಧದ ನಿರೋಧ

ಈ ಮೇಲೆ ಹೇಳಿರುವ ಕಾರಣಗಳು ಬಾಲಕರನ್ನು ಅಪರಾಧಿಗಳನ್ನಾಗಿ ಮಾಡುವುದರಿಂದ, ಈ ರೀತಿಯ ಅಪರಾಧದ ಪ್ರಾರಂಭದೆಶೆಯನ್ನು ಅರಿತು ಅದನ್ನು ನಿವಾರಿಸುವ ಪ್ರಯತ್ನವನ್ನು ಮೊದಲನೆಯದಾಗಿ ತಂದೆ ತಾಯಿಗಳು ಕೈಗೊಳ್ಳಬೇಕು. ಚಿಕ್ಕ ವಯಸ್ಸಿನಲ್ಲಿ ಮಕ್ಕಳ ವ್ಯಕ್ತಿತ್ವವನ್ನು ಸಾಧ್ಯವಾದಷ್ಟು ಪರಿಪೂರ್ಣವಾದ ರೀತಿಯಲ್ಲಿ ರೂಪಿಸಲು ಪ್ರಯತ್ನಿಸಬೇಕು. ಅಂದರೆ ತಾಯಿ-ತಂದೆಗಳು ಮನೆಯ ಪರಿಸರವನ್ನು ಸಂತೋಷಕರವಾಗಿಟ್ಟುಕೊಂಡು ಮಕ್ಕಳೊಡನೆ ಸ್ನೇಹ ಪೂರ್ಣವಾಗಿ ನಡೆದುಕೊಂಡು ಅವರ ನೈತಿಕ ಮಟ್ಟ ಬೆಳೆಯಲು ನೆರವಾಗುವುದರ ಮೂಲಕ ಸಮಾಜಘಾತುಕ ವರ್ತನೆಯನ್ನು ಬಹಳ ಮಟ್ಟಿಗೆ ತಡೆಗಟ್ಟಬಹುದು.

ಬಾಲಾಪರಾಧವನ್ನು ತಡೆಗಟ್ಟುವುದಕ್ಕಾಗಿ ನಮ್ಮ ದೇಶದಲ್ಲಿ ಬಹಳ ಪ್ರಯತ್ನಗಳು ನಡೆದಿವೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕಾನೂನು

ಗಳನ್ನು ಮಾಡಿ ಜಾರಿಗೆ ತಂದಿವೆ. ಮಕ್ಕಳ ಕಾನೂನುಗಳ ರಕ್ಷಣೆ, ಬಾಲಾಪರಾಧಿಗಳ ವಿಚಾರಣೆಗಾಗಿ ಬಾಲಕರ ನ್ಯಾಯಾಲಯುಗಳಿವೆ. ಬಾಲಾಪರಾಧಿಗಳ ವರ್ತನೆಯನ್ನು ತಿದ್ದುವುದಕ್ಕಾಗಿ, ಅವರನ್ನು ಒಳ್ಳೆಯ ನಾಗರಿಕರನ್ನಾಗಿ ಮಾಡುವುದಕ್ಕಾಗಿ ಸರ್ಟಿಫೈಡ್ ಶಾಲೆಗಳಂತಹ ವಿಶೇಷ ಶಾಲೆಗಳಿವೆ. ಈ ಶಾಲೆಗಳಲ್ಲಿ ಅವರಿಗೆ ಊಟ, ಬಟ್ಟೆ, ವಸತಿಗಳ ಜೊತೆಗೆ ವಿದ್ಯಾಭ್ಯಾಸ, ವೃತ್ತಿ ಶಿಕ್ಷಣ, ಶಾರೀರಿಕ ಶಿಕ್ಷಣ ಇವುಗಳನ್ನು ಕೊಡುವ ಏರ್ಪಾಡಿದೆ. ಈ ಕಾರ್ಯಗಳನ್ನು ನಿರ್ವಹಿಸಲು ವಿಶೇಷ ಅಧಿಕಾರಿಗಳಿದ್ದಾರೆ. ಇವೆಲ್ಲಾ ಪರಿಹಾರ ಕ್ರಮಗಳನ್ನು ಸರ್ಕಾರ ಕೈಗೊಂಡಿದ್ದರೂಸಹ ಬಾಲಾಪರಾಧವನ್ನು ತಡೆಗಟ್ಟಲು ಸಾಧ್ಯವಾಗಿಲ್ಲ. ಆದುದರಿಂದ ಇನ್ನೂ ಬಹಳ ಕಾರ್ಯಕ್ರಮಗಳಾಗಬೇಕು. ಅಧಿಕಾರಿಗಳು ಪ್ರಾಮಾಣಿಕತೆಯಿಂದ ಬಾಲಕರ ಪರಿವರ್ತನೆಗಾಗಿ ಕೆಲಸ ಮಾಡಬೇಕು. ತಂದೆ-ತಾಯಿ, ಉಪಾಧ್ಯಾಯರುಗಳು ಮಕ್ಕಳಿಗೆ ಆದರ್ಶರಾಗಿ ಸರಿಯಾದ ಮಾರ್ಗದರ್ಶಕರಾಗಿ ಜೀವನವನ್ನು ನಡೆಸಬೇಕು. ನಮ್ಮ ದೇಶದಲ್ಲಿ ಬಾಲಾಪರಾಧದ ಬಗ್ಗೆ ವೈಜ್ಞಾನಿಕ ಸಂಶೋಧನೆಗಳು ಅಷ್ಟಾಗಿ ಆಗಿಲ್ಲ. ಆದುದರಿಂದ ಸಮಾಜವಿಜ್ಞಾನಿಗಳು ಈ ಸಮಸ್ಯೆಯ ಬಗ್ಗೆ ಸಂಶೋಧನೆಗಳನ್ನು ಕೈಗೊಂಡು ಸೂಕ್ತಪರಿಹಾರ ಕ್ರಮಗಳನ್ನು ಕೈಗೊಳ್ಳಲು ಸರ್ಕಾರ ಹಾಗೂ ಸಮಾಜಕ್ಕೆ ನೆರವಾದರೆ ಬಾಲಾಪರಾಧವನ್ನು ಬಹಳಷ್ಟು ಮಟ್ಟಿಗೆ ತಡೆಗಟ್ಟಬಹುದೆಂಬ ವಿಷಯದಲ್ಲಿ ಸಂಶಯವಿಲ್ಲ.

——

ಗ್ರಂಥಗಳ ಪಟ್ಟಿ (Bibliography)

1. Cyril Burt : **The Young Delinquent** : University of London Press Ltd , London EC 4–1957.

2. E. H. Sutherland and D. R. Cressy : **Principles of Criminology**, Times of India Press, Bomday, 1968.

3. H. E. Barnes and N. K Teeters : **New Horizons in Criminology**, Printice Hall of India Ltd, NewDelhi, 1966.

4. The Mysore Children Act of 1964. Govt. Press, Bangalore, 1964.

ಅಭಿರುಚಿಗಳ ಅಳತೆ

● ಎ. ಎಸ್. ಧರಣೇಂದ್ರಯ್ಯ

ವ್ಯಕ್ತಿಯಲ್ಲೇ ಅಂತರ್ಗತವಾಗಿದ್ದು ಆತನನ್ನು ವಿವಿಧ ವ್ಯಕ್ತಿ, ವಸ್ತು ಅಥವಾ ಕ್ರಿಯೆಗಳತ್ತ ಆಕರ್ಷಿಸುವ ಅಥವಾ ವಿಕರ್ಷಿಸುವ ಇಷ್ಟಾನಿಷ್ಟಗಳೇ ಅಭಿರುಚಿಗಳೆನಿಸುತ್ತವೆ. ಉದಾಹರಣೆಗೆ, ಯಾವುದಾದರೂ ಚಟುವಟಿಕೆಯ ಬಗ್ಗೆ ವ್ಯಕ್ತಿಯೊಬ್ಬನು ತನ್ನ ಒಲವನ್ನು ತೋರಿಸಿದಾಗ ಅಥವಾ ಆ ಚಟುವಟಿಕೆಯನ್ನು ಸ್ವಯಂಪ್ರೇರಣೆಯಿಂದ ಆರಿಸಿಕೊಂಡು ಮನಸ್ಸಿಟ್ಟು ಅದರಲ್ಲಿ ತೊಡಗಿದಾಗ, ಆ ಚಟುವಟಿಕೆಯಲ್ಲಿ ಆ ವ್ಯಕ್ತಿಗೆ ಅಭಿರುಚಿಯಿದೆ ಎಂದು ಹೇಳಲಾಗುತ್ತದೆ. ಇಂತಹ ಆಯ್ಕಾಪ್ರತಿಕ್ರಿಯೆಗಳು ಅಭಿರುಚಿಗಳಿಗೆ ವ್ಯಾಖ್ಯೆಯನ್ನು ಕೊಡುವಲ್ಲಿ ಹೆಚ್ಚು ಉಪಯುಕ್ತ ಒರೆಗಲ್ಲುಗಳೆನಿಸುತ್ತವೆ. ಅದರಲ್ಲಿಯೂ ವಿಶೇಷವಾಗಿ ವೃತ್ತಿಮಾರ್ಗ ದರ್ಶನದಲ್ಲಿ, ಆಯ್ಕಾಪ್ರತಿಕ್ರಿಯೆಗಳು ಹೆಚ್ಚು ಅರ್ಥಪೂರ್ಣವೆನಿಸುವುದುಂಟು. ಉದಾಹರಣೆಗೆ, ಸಮಾನ ಅವಕಾಶಗಳುಳ್ಳ ಎರಡು ಅಥವಾ ಹೆಚ್ಚು ಚಟುವಟಿಕೆಗಳಲ್ಲಿ ಯಾವುದಾದರೊಂದನ್ನು ಆರಿಸಿಕೊಳ್ಳುವ ಅವಕಾಶವನ್ನು ಕೊಟ್ಟಾಗ, ತನ್ನ ಆಯ್ಕೆಯ ಮೂಲಕ ವ್ಯಕ್ತಿಯು ತನ್ನ ಅಭಿರುಚಿಯನ್ನು ಪ್ರಕಟಿಸುತ್ತಾನೆ.

ವ್ಯಕ್ತಿಯು ತನ್ನ ಜೀವನದ ವಿವಿಧ ರಂಗಗಳಲ್ಲಿ ವ್ಯವಹರಿಸುವುದರ ಮೇಲೆ ಬುದ್ಧಿಶಕ್ತಿ ಮತ್ತು ಅಭಿಕ್ಷಮತೆಗಳು (aptitudes) ಮಾತ್ರವಲ್ಲದೆ ಅಭಿರುಚಿಗಳೂ ಗಣನೀಯ ಪ್ರಭಾವ ಬೀರುತ್ತವೆ. ವ್ಯಕ್ತಿಯ ಕಾರ್ಯಸಾಫಲ್ಯದ ನಿರ್ಧಾರ

ದಲ್ಲಿ ಬುದ್ಧಿಶಕ್ತಿಯೊಂದನ್ನು ಬಿಟ್ಟರೆ ಅಭಿರುಚಿಗಳದೇ ಮೇಲುಗೈ ಎಂಬುದು ಕೆಲವರ ಅಭಿಮತ. ಒಟ್ಟಿನಲ್ಲಿ ವ್ಯಕ್ತಿಯು ವರ್ತನೆಗಳನ್ನೂ ಮತ್ತು ಅವುಗಳಿಂದ ದೊರೆಯುಬಹುದಾದ ಸಂತೃಪ್ತಿಯನ್ನೂ ನಿರ್ಧರಿಸುವಲ್ಲಿ ಅಭಿರುಚಿಗಳು ಪ್ರಮುಖ ಪಾತ್ರವಹಿಸುತ್ತವೆ ಎಂಬುದು ಗಮನಾರ್ಹ ಅಂಶ.

ಉಪಯುಕ್ತತೆ : ಶೈಕ್ಷಣಿಕ ಮತ್ತು ಔದ್ಯೋಗಿಕ (educational and vocational guidance) ಮಾರ್ಗದರ್ಶನ ಕ್ಷೇತ್ರದಲ್ಲಿ ನಡೆದಿರುವ ಆಂದೋಲನದಿಂದಾಗಿ ಶಿಕ್ಷಣತಜ್ಞರ ಮತ್ತು ಮನೋವಿಜ್ಞಾನಿಗಳ ಗಮನವು ಅಭಿರುಚಿಗಳ ಅಧ್ಯಯನದತ್ತ ಹರಿದಿದೆ. ತತ್ಫಲವಾಗಿ ರೂಪುಗೊಂಡಿರುವ ಅಭಿರುಚಿ ಪರೀಕ್ಷೆಗಳು ಶೈಕ್ಷಣಿಕ ಮತ್ತು ಔದ್ಯೋಗಿಕ ಮಾರ್ಗದರ್ಶನಗಳಿಗೆ ಮಾತ್ರವಲ್ಲದೆ, ಔದ್ಯೋಗಿಕ ಆಯ್ಕೆ (vocational selection) ಮತ್ತು ವೃತ್ತಿವರ್ಗೀಕರಣ (occupational classification) ಗಳಿಗೂ ವಿಶೇಷ ರೀತಿಯಲ್ಲಿ ಅನುಕೂಲವಾಗಿವೆ. ಮೇಲಾಗಿ ಔದ್ಯೋಗಿಕ ಜಯ (vocational success) ಕ್ಕೂ ವೃತ್ತಿಯಭಿರುಚಿಗಳಿಗೂ (vocational interests) ನೇರ ಸಂಬಂಧವಿರುವುದು ಕಂಡುಬಂದಿದೆ. ಡಿ. ಈ. ಸೂರನು ಹೇಳುವಂತೆ, ಅಭಿಕ್ಷಮತೆ ಮತ್ತು ಬಾಹ್ಯ ನಿರ್ಧಾರಕಗಳ (external determinants) ನಿಯಂತ್ರಣವಿದ್ದಾಗ ವ್ಯಕ್ತಿಯು ತನ್ನ ಕೆಲಸದಿಂದ ಪಡೆಯುವ ಸಾಫಲ್ಯದೊಂದಿಗೆ ವೃತ್ತಿಯಭಿರುಚಿಯು ನಿಕಟ ಸಂಬಂಧ ಹೊಂದಿರುತ್ತದೆಂಬುದು ಗಮನಾರ್ಹ ಅಂಶ. ಅಭಿರುಚಿ ಮತ್ತು ಔದ್ಯೋಗಿಕ ಜಯಗಳ ನಡುವೆ ಗಣನೀಯ ಸಂಬಂಧವಿರುವುದು ಟರ್ಮನ್ ಮತ್ತು ಆತನ ಅನುಯಾಯಿಗಳು ಪ್ರತಿಭಾವಂತ ವ್ಯಕ್ತಿಗಳ ಮೇಲೆ ನಡೆಸಿದ ಸುಪ್ರಸಿದ್ಧ ಅಧ್ಯಯನಗಳಿಂದಲೂ ಕಂಡುಬಂದಿದೆ. ಜಯಶಾಲೀ ಇಂಜನಿಯರು ಗಳು, ಮಾರಾಟಗಾರರು ಮತ್ತು ಕಾರಕೂನರು ತಮ್ಮ ವೃತ್ತಿಗೆ ಸರಿಹೊಂದುವ ಕಾರ್ಯಚಟುವಟಿಕೆಗಳಿಗೆ ವಿಶೇಷ ಒಲವನ್ನು ತೋರಿಸಿರುವುದನ್ನು ಬಾರ್ನೆಟ್ ಕಂಡುಹಿಡಿದಿದ್ದಾನೆ.

ನಿರ್ಧಾರಕಗಳು (Determinants) : ಸಾಮಾಜಿಕ ಆರ್ಥಿಕ ಅಂತಸ್ತು, ಬುದ್ಧಿಶಕ್ತಿ, ಅಭಿಕ್ಷಮತೆ, ಸಾಮಾಜಿಕ ಪಾತ್ರ ನಿರೀಕ್ಷಣೆ (social role expectation), ವ್ಯಕ್ತಿತ್ವ, ಅನುಭವ ಮೊದಲಾದ ನಿರ್ಧಾರಕಗಳು ಅಭಿರುಚಿಗಳೊಂದಿಗೆ ನಿಕಟ ಸಂಬಂಧಹೊಂದಿರುವುದು ಸಂಶೋಧನೆಗಳಿಂದ ತಿಳಿದುಬಂದಿದೆ. ವಿವಿಧ ಪಠ್ಯವಿಷಯ, ಕಸಬು ಮತ್ತು ಹವ್ಯಾಸಗಳ ಮೇಲಿನ ಇಷ್ಟಾನಿಷ್ಟಗಳು ಸಾಮಾಜಿಕ ಅಂತಸ್ತಿಗೆ ಅನುಗುಣವಾಗಿ ವ್ಯತ್ಯಾಸಹೊಂದುತ್ತವೆ.

ಎಂಬುವನ್ನು ಸ್ಟ್ರಾಂಗ್ ಮತ್ತು ಇತರರು ತಮ್ಮ ಅಧ್ಯಯನಗಳಿಂದ ತೋರಿಸಿದ್ದಾರೆ. ಅಲ್ಲದೆ, ಸಾಮಾಜಿಕ-ಆರ್ಥಿಕ ಅಂತಸ್ತು ಅಭಿರುಚಿಗಳ ಬೆಳವಣಿಗೆ ಮತ್ತು ವ್ಯಕ್ತತೆಗಳ ಮೇಲೂ ಪ್ರಭಾವ ಬೀರುತ್ತವೆ. ಉದಾಹರಣೆಗೆ, ಮಧ್ಯಮ ವರ್ಗ ಮತ್ತು ಉನ್ನತ ಮಧ್ಯಮ ವರ್ಗದ ಪುರುಷರು ಆಯ್ಕೆಮಾಡಬಹುದಾದ ವೃತ್ತಿಗಳ ಮುನ್ಸೂಚನೆ ಕೊಡುವುದರಲ್ಲಿ ಅಂಶಮಾಲಾಭಿರುಚಿಗಳು (inventioned interests) ಸಮರ್ಥವಾಗಿವೆ ಎಂಬುದನ್ನು ಮೆಕಾರ್ಥರ್ ಮತ್ತು ಸ್ಟೀವನ್ಸರು ಕಂಡುಹಿಡಿದಿದ್ದಾರೆ.

ಅಭಿರುಚಿಗಳ ಬೆಳವಣಿಗೆಯಲ್ಲಿ, ಅಭಿಕ್ಷಮತೆಗಳು ಪ್ರಮುಖಪಾತ್ರ ವಹಿಸುತ್ತವೆ ಎಂಬುದು ಅಭಿರುಚಿ ಪರಿಣತರ ಅಭಿಮತ. ಗೆಲವು, ಪುರಸ್ಕಾರ ಮತ್ತು ತೃಪ್ತಿಗಳನ್ನು ಪಡೆಯುವುದರಲ್ಲಿ ಶಕ್ತಿ-ಸಾಮರ್ಥ್ಯಗಳ (abilities) ಪಾತ್ರವೂ ಮಹತ್ವವಾದುದೆಂದು ಅವರು ಭಾವಿಸುತ್ತಾರೆ. ಡಾರ್ಲೆ ಮತ್ತು ಹೆಗನ್ನ ಪ್ರಕಾರ ಸರ್ವಹಿತ ಭಾವ (altruism) ಮತ್ತು ಘನತೆ (prestige) ಗಳು ಅಭಿರುಚಿಗಳ ಪ್ರಮುಖ ನಿರ್ಧಾರಕಗಳು. ಆದರೆ ವಾಸ್ತವವಾಗಿ ನೋಡಿದಾಗ, ಅಭಿರುಚಿಗಳ ನಿರ್ಧಾರದಲ್ಲಿ ಯಾವುದೇ ಒಂದು ಅಥವಾ ಮತ್ತೊಂದರ ಪಾತ್ರವಿದೆ ಎಂಬುದಕ್ಕಿಂತ, ಹಲವು ಕಾರಕಗಳ ಪಾತ್ರವಿದೆ ಎಂದು ಹೇಳುವುದು ಹೆಚ್ಚು ಸಮಂಜಸವೆನಿಸುತ್ತದೆ.

ಅಳತೆ : ಅಭಿರುಚಿಗಳ ಬಗ್ಗೆ ವಸ್ತುನಿಷ್ಠ ಜ್ಞಾನವನ್ನು ಪಡೆಯಲು, ವೈಜ್ಞಾನಿಕ ವಿಧಾನಗಳಿಂದ ಅವುಗಳನ್ನು ಅಳೆಯಬೇಕಾಗುತ್ತದೆ. ಈ ದಿಸೆಯಲ್ಲಿ ಈಗಾಗಲೇ ಹಲವು ಮನೋವಿಜ್ಞಾನಿಗಳು ಪ್ರಯತ್ನ ನಡೆಸಿ ಸ್ವಲ್ಪಮಟ್ಟಿಗೆ ಕೃತಕೃತ್ಯರಾಗಿರುವುದನ್ನು ಕಾಣಬಹುದು.

ಅಭಿರುಚಿಗಳನ್ನು ವೈಜ್ಞಾನಿಕವಾಗಿ ಅಳೆಯುವ ಕಾರ್ಯವು ಕೇವಲ ಕೆಲವು ದಶಕಗಳ ಇತಿಹಾಸವನ್ನು ಹೊಂದಿದೆಯಾದರೂ, ಆ ಕಾರ್ಯಕ್ಕೆ ಸುದೀರ್ಘ ಗತಕಾಲದ ಹಿನ್ನೆಲೆಯಿರುವಂತಿದೆ. ವ್ಯಕ್ತಿಯು ಸ್ವಯಂಪ್ರೇರಿತನಾಗಿ, ತನ್ನ ಜೀವನದ ವಿವಿಧ ರಂಗಗಳಲ್ಲಿ ತೋರಿಸುವ ಆಯ್ಕೆಗಳನ್ನು, ವಿವಿಧ ಸಮಾಜ, ಸಂಸ್ಕೃತಿಗಳು ಅನಧಿಕೃತ ರೀತಿಯಲ್ಲಿ ಬಹುಕಾಲದಿಂದಲೂ ಅಳತೆಮಾಡಿಕೊಂಡು ಬಂದಿರುವುದು ಕಂಡುಬರುತ್ತದೆ. ಆದರೆ ಈ ಕಾರ್ಯಕ್ಕಾಗಿ ಬಳಸಲಾಗುತ್ತಿದ್ದ ವಿಧಾನಗಳು ಆಕಸ್ಮಿಕವೆನಿಸಿ, ವೈಜ್ಞಾನಿಕ ನಿಯಮಗಳಿಗೆ ಅನುಗುಣವಾಗಿರದೆ, ಅನೇಕ ವೇಳೆ ವ್ಯಕ್ತಿನಿಷ್ಠ ಅಳತೆಗೋಲುಗಳಿಂದ ಪ್ರಭಾವಿತವಾಗಿರುತ್ತಿದ್ದವು. ಈ ಕಾರಣದಿಂದಾಗಿ, ೧೯೩೦ ರಿಂದ ಈಚೆಗೆ ಪ್ರಚಲಿತವಾಗಿರುವ ಅಭಿರುಚಿಗಳ

ಅಳತೆ ಹೆಚ್ಚು ವ್ಯವಸ್ಥಿತವೂ, ವೈಜ್ಞಾನಿಕವೂ ಆಗಿ ಪರಿಣತರ ಮತ್ತು ಗ್ರಾಹಕರ ಮನಸ್ಸೆಳೆದಿದೆ.

ಅಭಿರುಚಿಗಳನ್ನು ಅವುಗಳ ಅಭಿವ್ಯಕ್ತತೆ (expression), ಪ್ರಕಾಶನ (manifestation), ಪರೀಕ್ಷೆಗಳು (tests) ಮತ್ತು ಅಂಶಮಾಲೆ (inventory) ಗಳ ಮೂಲಕ ಅಳತೆ ಮಾಡಬಹುದು. ಒಬ್ಬ ವ್ಯಕ್ತಿಯು ಯಾವುದಾದರೂ ಚಟುವಟಿಕೆ, ವಿಷಯ ಅಥವಾ ವಸ್ತುಗಳ ವಿಷಯವಾಗಿ, ಭಾಷೆಯ ಮೂಲಕ ವ್ಯಕ್ತಮಾಡುವ ಇಷ್ಟಾನಿಷ್ಟಗಳೆಲ್ಲಾ ಅಭಿವ್ಯಕ್ತ ಅಭಿರುಚಿಗಳೆನಿಸುತ್ತವೆ. ಅದಕ್ಕೆ ಬದಲಾಗಿ ಅಂತಹ ಚಟುವಟಿಕೆಗಳಲ್ಲಿ ಕಾರ್ಯತಃ ನಿರತನಾಗಿರುವಾಗ ಅವುಗಳಿಂದ ಆಕರ್ಷಿತ ಅಥವಾ ವಿಕರ್ಷಿತನಾಗುವುದು ಪ್ರಕಾಶಿತ ಅಭಿರುಚಿಗಳಿಗೆ ನಿದರ್ಶನ. ಅವಧಾನ (attention), ಸ್ಮೃತಿ, ಶಬ್ದಸಂಪತ್ತು ಮೊದಲಾದವುಗಳ ಆಧಾರದ ಮೇಲೆ ನಿರ್ಮಿಸಲಾದ ಪರೀಕ್ಷೆಗಳು, ಪರೀಕ್ಷಿತ ಅಭಿರುಚಿಗಳ (tested interests)ನ್ನು ಸೂಚಿಸುತ್ತವೆ. ಕೊನೆಯದಾಗಿ ಅಂಶಮಾಲಾಭಿರುಚಿಗಳು (inventoried interests) ಅಭಿರುಚಿ ಅಂಶಮಾಲೆಗಳಿಂದ ಮಾಪಿತವಾಗಿ ಹೆಚ್ಚು ಉಪಯುಕ್ತವೆನಿಸಿವೆ.

ಅಭಿರುಚಿ ಪರೀಕ್ಷೆಗಳು ಮತ್ತು ಅಂಶಮಾಲೆ ರಚನೆ ಮತ್ತು ಪ್ರಮಾಣೀಕರಣ : ಈ ಸಾಧನಗಳ ರಚನೆ (Construction) ಮತ್ತು ಪ್ರಮಾಣೀಕರಣ (Standardisaton) ಕಾರ್ಯದಲ್ಲಿ ಇತರ ಮನೋವೈಜ್ಞಾನಿಕ ಪರೀಕ್ಷೆಗಳ ರೂಪಣೆಯಲ್ಲಿ ಅನುಸರಿಸಬೇಕಾದ ನಿಯಮಗಳನ್ನು ಸಾಮಾನ್ಯವಾಗಿ ಅನುಸರಿಸಬೇಕಾಗುತ್ತದೆ. ಪ್ರಾರಂಭದಲ್ಲಿ, ನಾವು ಅಳತೆ ಮಾಡಬೇಕೆಂದಿರುವ ಅಭಿರುಚಿ ಅಥವಾ ಅಭಿರುಚಿಗಳು ಯಾವುವು ? ಎಂಬುದನ್ನು ಸಾಧ್ಯವಾದಷ್ಟು ಸ್ಪಷ್ಟವಾಗಿ ವಿವರಿಸಬೇಕಾಗುತ್ತದೆ. ಉದಾಹರಣೆಗೆ, 'ವೃತ್ತಿಯಭಿರುಚಿ' ಎಂದಾಗ, ಅದು ಹೇಗೆ ವ್ಯಕ್ತಿಯ ವೃತ್ತಿಜೀವನಕ್ಕೆ ಸಂಬಂಧಿಸಿದೆ ಎಂಬುದನ್ನು ಹಾಗೂ ಆತನ ಇತರ ಅಭಿರುಚಿ (ಉದಾ : ಮನೋರಂಜನಾಭಿರುಚಿ)ಗಳಿಂದ ಭಿನ್ನವಾಗಿವೆ ಎಂಬುದನ್ನೂ ಸ್ಪಷ್ಟಪಡಿಸಬೇಕಾಗುತ್ತದೆ. ಅಲ್ಲದೆ, ವೃತ್ತಿಯಭಿರುಚಿ ಎಂಬ ಪದವು ಕೇವಲ ಒಂದು ಅಭಿರುಚಿಗೆ ಅನ್ವಯಿಸದೆ ಒಂದು 'ಅಭಿರುಚಿವಿನ್ಯಾಸ' (Interest Pattern)ವನ್ನು ಪ್ರತಿನಿಧಿಸುತ್ತದೆ ಎಂಬ ಅಂಶವನ್ನೂ ಸ್ಪಷ್ಟಪಡಿಸಬೇಕಾಗುತ್ತದೆ.

ನಾವು ಅಳತೆ ಮಾಡಲಿರುವ ಅಭಿರುಚಿ ಅಥವಾ ಅಭಿರುಚಿಗಳ ಒಂದು ಸ್ಥೂಲ ಕಲ್ಪನೆ ಪಡೆದ ಮೇಲೆ, ಅವುಗಳ ಪ್ರತ್ಯೇಕಕ್ರಿಯೆಗಳನ್ನು ಪ್ರತಿನಿಧಿಸು

ವಂತಹ ಪರೀಕ್ಷಾಂಶ (item)ಗಳನ್ನು ರೂಪಿಸಬೇಕಾಗುತ್ತದೆ. ಈ ಕಾರ್ಯಕ್ಕೆ ಅಗತ್ಯವಿರುವ ಪ್ರಮುಖ ಸಂಪನ್ಮೂಲಗಳೆಂದರೆ, ವ್ಯಕ್ತಿಗಳು ತಮ್ಮ ನಿತ್ಯಜೀವನ ದಲ್ಲಿ ತೋರಿಸುತ್ತಿರುವ ಇಷ್ಟಾನಿಷ್ಟಗಳ ಅವಲೋಕನ, ಅಭಿರುಚಿಗಳ ಅಳತೆಗೆ ಸಂಬಂಧಿಸಿದಂತೆ ಈಗಾಗಲೇ ಬೆಳೆದಿರುವ ಸಾಹಿತ್ಯದ ಅಧ್ಯಯನ, ಪ್ರಚಲಿತ ಅಭಿರುಚಿ ಅಂಶಮಾಲೆಗಳಲ್ಲಿರುವ ಪರೀಕ್ಷಾಂಶಗಳ ಪರಿಶೀಲನೆ, ಈ ಕ್ಷೇತ್ರದಲ್ಲಿ ಪರಿಣತರೆನಿಸಿದವರೊಡನೆ ರಚನಾತ್ಮಕ ಚರ್ಚೆ ಮತ್ತು ಅಂಶಮಾಲೆ ಅಥವಾ ಪರೀಕ್ಷೆಯನ್ನು ರೂಪಿಸುತ್ತಿರುವ ಮನೋವಿಜ್ಞಾನಿಯ ಅನುಭವ ಮತ್ತು ವಿವೇಚನೆಗಳು- ಈ ರೀತಿಯ ಸಂಪನ್ಮೂಲಗಳ ಶೋಧನೆಯಿಂದ ನಮಗೆ ದೊರೆ ಯುವ ಮಾಹಿತಿಗಳು ನಾವು ಅಳತೆ ಮಾಡಲಿರುವ ಅಭಿರುಚಿಕ್ಷೇತ್ರದ ಸೂಕ್ತ ಪ್ರತಿದರ್ಶ (Sample)ವಾಗಿರಬೇಕಾಗುತ್ತದೆ. ಈ ಮಾಹಿತಿಗಳನ್ನು ಪರೀಕ್ಷಾಂಶ ಗಳಾಗಿ ಪರಿವರ್ತಿಸುವ ಕಾರ್ಯವು ಅಪ್ರತ್ಯಹತವಾಗಿ ನಡೆಯಬೇಕಾಗುತ್ತದೆ. ಪರೀಕ್ಷಾಂಶ ರೂಪಕನು ಅದರ ರೂಪ ಮತ್ತು ಅರ್ಥಗಳಿಗೆ ಆದ್ಯಗಮನ ಕೊಡ ಬೇಕಾಗುತ್ತದೆ. ಪ್ರತಿಯೊಂದು ಪರೀಕ್ಷಾಂಶವೂ ಗೊತ್ತಾದ ಅಭಿರುಚಿಯ ಒಂದಲ್ಲ ಒಂದು ಕ್ರಿಯೆಯನ್ನು ವಿವರಿಸುವಂತಿರಬೇಕು. ಅಲ್ಲದೆ ಇದಕ್ಕಾಗಿ ಬಳಸುವ ಭಾಷೆಯು ಸರಳವಾಗಿಯೂ, ದ್ವಂದ್ವಾರ್ಥರಹಿತವೂ ಆಗಿರಬೇಕು.

ಹೀಗೆ ರೂಪಿಸಲಾದ ಪರೀಕ್ಷಾಂಶಗಳನ್ನು ಪದೇಪದೆ ಅನೇಕ ಸಂಸ್ಕಾರಗಳಿಗೆ ಒಳಪಡಿಸಬೇಕಾಗುತ್ತದೆ. ಪರೀಕ್ಷಾಂಶ ವಿಮರ್ಶೆಯಿಂದ ಮೊದಲ್ಗೊಂಡು, ಪರೀಕ್ಷಾಂಶ ವಿಶ್ಲೇಷಣೆ (item analysis) ಆಯ್ಕೆ (selection) ಮತ್ತು ವಿಶ್ವ- ಸನೀಯತೆ ಹಾಗೂ (reliability) ಸಿಂಧುತ್ವ (validity)ಗಳ ನಿರ್ಧಾರದ ಜೊತೆಗೆ ಪ್ರಮಾಣಕ (norm)ಗಳ ರೂಪಣದವರೆಗೆ ಅನೇಕ ವಿಧಿವತ್ತಾದ ಪ್ರಕ್ರಿಯೆಗಳಿಂದ ಅಂಶಮಾಲೆ ಅಥವಾ ಪರೀಕ್ಷೆಯ ಸಂಸ್ಕಾರವಾಗುತ್ತದೆ. ಮೇಲೆ ಪ್ರಸ್ತಾಪಿಸಲಾದ ಪ್ರಕ್ರಿಯೆಗಳಲ್ಲಿ ಒಂದೊಂದೂ ಮಹತ್ವಪೂರ್ಣವಾದುದು ಯಾವುದೇ ಪ್ರಕ್ರಿಯೆಯು ವೈಧಾನಿಕವಾಗಿ ನಡೆಯದಿದ್ದಲ್ಲಿ ಪ್ರಮಾಣಿತ ಅಂಶ ಮಾಲೆಯು ದೊರೆಯುವುದು ದುರ್ಲಭ. ಇಷ್ಟಲ್ಲದೆ, ವಿವಿಧ ಅಭಿರುಚಿ ವಿನ್ಯಾಸ ಗಳನ್ನು ಅಳೆಯಲು ಅನುಕೂಲವಾಗುವಂತೆ ಅಂಕನಕುಂಜಿ (scoring key) ಗಳನ್ನೂ ನಿರ್ಮಿಸಬೇಕಾಗುತ್ತದೆ. ಒಟ್ಟಿನಲ್ಲಿ, ಒಂದು ಪ್ರಮಾಣಿತ ಅಂಶಮಾಲೆಯ ರೂಪಣವೆಂದರೆ, ಸಾಕಷ್ಟು ಚಿಂತನೆ ಮತ್ತು ಪರಿಶ್ರಮಗಳ ಬಂಡವಾಳ ಹೂಡ ಬೇಕಾಗುತ್ತದೆ. ಅಲ್ಲದೆ ಇದಕ್ಕೆ ಸಾಕಷ್ಟು ಹಣ ಮತ್ತು ಸಮಯಗಳ ಅಗತ್ಯವೂ ಇರುತ್ತದೆ. ಅಂಶಮಾಲೆಯ ವ್ಯಾಪಕತೆ ಮತ್ತು ಅಭಿರುಚಿಯಳತೆಯ ಅಗತ್ಯ

ಗಳಿಗೆ ಅನುಗುಣವಾಗಿ ಹಣ ಮತ್ತು ಸಮಯಗಳಲ್ಲಿ ವ್ಯತ್ಯಾಸವಾಗುವುದಾದರೂ, ಸಾಮಾನ್ಯವಾಗಿ ಒಂದು ಉತ್ತಮವೆನಿಸುವಂತಹ ಅಂಶಮಾಲೆಯ ರೂಪಣೆಗೆ ಕೆಲವು ವರ್ಷಗಳ ಕಾಲಾವಕಾಶವೂ ಹಾಗೂ ಕೆಲವು ಲಕ್ಷ ರೂಪಾಯಿಗಳೂ ಬೇಕಾಗುತ್ತವೆ. ಉದಾಹರಣೆಗೆ ನಮ್ಮ ದೇಶದಲ್ಲೇ ರೂಪಗೊಂಡಿರುವ ಎನ್. ಸಿ. ಇ. ಆರ್. ಟಿ. ಅಭಿರುಚಿ ಅಂಶಮಾಲೆಯ ರೂಪಣೆಗೆ ಸಹಕಾರ ಪರಿಶ್ರಮವಿದ್ದಾಗಲೂ ಹಲವು ಲಕ್ಷ ರೂಪಾಯಿಗಳ ವೆಚ್ಚದ ಜೊತೆಗೆ ಸುಮಾರು ಆರು ವರ್ಷಗಳ ಕಾಲಾವಧಿ ಬೇಕಾಯಿತೆಂಬುದು ಗಮನಿಸಬೇಕಾದ ವಿಷಯ.

ಕಾರಕ ವಿಶ್ಲೇಷಣೆ (factor analysis) : ಅಭಿರುಚಿಗಳ ಅಳತೆಯಲ್ಲಿ ಕಾರಕ ವಿಶ್ಲೇಷಣೆಯು ಒಂದು ಉಪಯುಕ್ತಪ್ರವಿಧಿ (technique) ಎನಿಸಿದೆ. ಉದಾಹರಣೆಗೆ, ವೃತ್ತಿಯಭಿರುಚಿಗಳಲ್ಲಿ ಅಂತರ್ಗತವಾಗಿರುವ ವೈವಿಧ್ಯತೆಯನ್ನು ಅರ್ಥಮಾಡಿಕೊಳ್ಳುವಲ್ಲಿ ಹಾಗೂ ಅವುಗಳ ನಡುವಣ ಕಾರ್ಯಾತ್ಮಕ ಸಾಮರಸ್ಯ (functional unity)ವನ್ನು ಗುರುತಿಸುವಲ್ಲಿ ಈ ಪ್ರವಿಧಿಯು ಬಹು ನೆರವಾಗಬಲ್ಲದು. ವೃತ್ತಿಯಭಿರುಚಿ ಕಾರಕಗಳು ನೈಜ ಮಾನಸಿಕ ಸಾಮರಸ್ಯಗಳಾಗಿವೆ ಎಂಬ ನಂಬುಗೆಯನ್ನು ಗಿಲ್‌ಫೋರ್ಡ್ ಮತ್ತು ಸಂಗಡಿಗರ ಸಂಶೋಧನೆಗಳು ಸ್ಥಿರಪಡಿಸುತ್ತವೆ. ಒಟ್ಟಿನಲ್ಲಿ, ಇಲ್ಲಿಯವರೆಗೆ ನಡೆದಿರುವ ಕಾರಕ ವಿಶ್ಲೇಷಣಾಧ್ಯಯನಗಳ ಆಧಾರದ ಮೇಲೆ, ಬಹುಮುಖ್ಯವಾಗಿ, ಹೊರಾಂಗಣ, ತಾಂತ್ರಿಕ, ವೈಜ್ಞಾನಿಕ, ಸಾಮಾಜಿಕ ಕಲ್ಯಾಣ, ಸೌಂದರ್ಯಾತ್ಮಕ, ಗುಮಾಸ್ತೆ, ವಾಣಿಜ್ಯ-ವ್ಯವಹಾರ ಮೊದಲಾದ ಅಭಿರುಚಿ ಕಾರಕಗಳನ್ನು ಗುರುತಿಸಲಾಗಿದೆ.

ಅಭಿರುಚಿ ಅಂಶಮಾಲೆಗಳು : ಅಭಿರುಚಿಗಳ ಅಳತೆಯಲ್ಲಿ ಅಂಶಮಾಲೆಗಳ ಪಾತ್ರ ಬಹು ವಿಶಿಷ್ಟವಾದುದು. ಇಂತಹ ಸಾಧನಗಳಲ್ಲಿ, ದಿನನಿತ್ಯದ ಜೀವನಕ್ಕೆ ಸಂಬಂಧಪಟ್ಟ ವಿಷಯಗಳನ್ನು ಪ್ರತಿನಿಧಿಸುವ ಅನೇಕ ಪರೀಕ್ಷಾಂಶಗಳಿರುತ್ತವೆ. ಅವುಗಳಿಗೆ ಪರೀಕ್ಷಾರ್ಥಿಯು ತನ್ನ ಒಲವು (Preference)ಗಳನ್ನು ವ್ಯಕ್ತಪಡಿಸುತ್ತಾನೆ. ಆತನ ಅನುಕ್ರಿಯೆಗಳ ಪಾರಿಮಾಣಿಕ ವಿಶ್ಲೇಷಣೆ (quantitative analysis) ಮಾಡುವುದರ ಮೂಲಕ ವಿವಿಧ ವೃತ್ತಿ ಅಥವಾ ಕಾರ್ಯಕ್ಷೇತ್ರಗಳಲ್ಲಿ ಆತನಿಗೆ ಇರಬಹುದಾದ ಅಭಿರುಚಿಗಳನ್ನು ಸಾಪೇಕ್ಷವಾಗಿ ತಿಳಿಸುವ ಪ್ರಾಪ್ತಾಂಕಗಳ ಸರಣಿಯೊಂದನ್ನು ಪಡೆಯಲು ಸಾಧ್ಯವಾಗುತ್ತದೆ. ಹೀಗೆ ಪಡೆಯಲಾದ ಪ್ರಾಪ್ತಾಂಕಗಳನ್ನು ಪಾರ್ಶ್ವರೇಖೆ (Profile) ಮೂಲಕ ಪ್ರತಿನಿಧಿಸಿದರೆ, ಗೊತ್ತಾದ ವ್ಯಕ್ತಿಯ ಅಭಿರುಚಿ ವಿನ್ಯಾಸ (interest pattern)ವೇನೆಂಬು

ದನ್ನು ಮೊದಲ ನೋಟಕ್ಕೇ ಗ್ರಹಿಸಬಹುದು. ಒಟ್ಟಿನಲ್ಲಿ, ಅಭಿರುಚಿಗಳ ಸ್ವಭಾವ ಮತ್ತು ಮಹತ್ವವನ್ನು ತಿಳಿಯುವುದರಲ್ಲಿ ಅಭಿರುಚಿ ಅಂಶಮಾಲೆಗಳು ಬಹು ಮಟ್ಟಿಗೆ ಉಪಯುಕ್ತವಾಗಿವೆ. ಅವುಗಳ ಮೂಲಕ ಅಧಿಕ ಸಂಖ್ಯೆಯಲ್ಲಿ ಅಧ್ಯಯನಗಳು ನಡೆದಿವೆಯಲ್ಲದೆ, ಗಣನೀಯ ಸಾಧನೆಯೂ ಆಗಿದೆ.

ಅಂಶಮಾಲೆಗಳ ಹಿನ್ನೆಲೆ : ಅಭಿರುಚಿಗಳ ವಿಷಯವಾಗಿ ೧೯೧೯–೨೦ರಲ್ಲಿ ಅಮೆರಿಕಾ ಸಂಯುಕ್ತಸಂಸ್ಥಾನಗಳ ಕಾರ್ನಿ ತಾಂತ್ರಿಕ ಸಂಸ್ಥೆಯಲ್ಲಿ ನಡೆದ ವಿಚಾರಗೋಷ್ಠಿಯ ಫಲವಾಗಿ, ಅನೇಕ ಅಭಿರುಚಿ ಅಂಶಮಾಲೆಗಳ ರಚನೆಯಾಯಿತು. ಇವುಗಳ ರಚನೆಯಲ್ಲಿ ಬಹುಮುಖ್ಯವಾಗಿ ಎರಡು ಅಂಶಗಳಿಗೆ ಗಮನ ಕೊಡಲಾಯಿತು. ಮೊದಲನೆಯದಾಗಿ, ಅಂಶಮಾಲೆಯಲ್ಲಿರಬೇಕಾದ ಪರೀಕ್ಷಾಂಶಗಳಿಗೆ, ಪರೀಕ್ಷಾರ್ಥಿಯ ಜೀವನದ ವಿವಿಧ ರಂಗಗಳ ಚಟುವಟಿಕೆಗಳನ್ನು ಪ್ರತಿನಿಧಿಸುವ ಸಾಮರ್ಥ್ಯವಿರಬೇಕು. ಅಂದರೆ, ಆತನು ತನ್ನ ದಿನನಿತ್ಯದ ಜೀವನದಲ್ಲಿ ಸಾಮಾನ್ಯವಾಗಿ ಪಡೆಯಬಹುದಾದ ಅನುಭವಗಳಿಗೆ ಈ ಪರೀಕ್ಷಾಂಶಗಳು ಅನುಗುಣವಾಗಿರಬೇಕು. ಎರಡನೆಯದಾಗಿ, ಪರೀಕ್ಷಾರ್ಥಿಯು ವ್ಯಕ್ತಪಡಿಸಿದ ಅನುಕ್ರಿಯೆಗಳಿಗೆ ಅನುಭವಜನ್ಯ (empirical) ಅಂಕನಕುಂಜಿಗಳನ್ನು ರೂಪಿಸುವಂತಿರಬೇಕು. ಇದು ಸಾಧಿತವಾಗಬೇಕಾದರೆ, ಒಂದು ವೃತ್ತಿಯಲ್ಲಿರುವ ಜನರ ಅಭಿರುಚಿಗಳಲ್ಲಿ ಸಾಮ್ಯವೂ ಮತ್ತು ಇತರ ವೃತ್ತಿಗಳಲ್ಲಿರುವ ಜನರ ಅಭಿರುಚಿಗಳಿಂದ ಭಿನ್ನತೆಯೂ ಇರಬೇಕಾದುದು ಆವಶ್ಯಕ. ಅಲ್ಲದೆ, ವಿವಿಧ ವೃತ್ತಿ ಸಮೂಹಗಳ ಅಭಿರುಚಿಗಳಲ್ಲಿರುವ ಪರಸ್ಪರ ವ್ಯತ್ಯಾಸವು, ಕೇವಲ ವೃತ್ತಿ ಚಟುವಟಿಕೆಗಳಿಗೆ ಸೀಮಿತವಾಗಿರದೆ, ವ್ಯಕ್ತಿಯ ಜೀವನದ ಇತರ ರಂಗಗಳಾದ, ಹವ್ಯಾಸಗಳು, ಕ್ರೀಡೆಗಳು, ಸಾಮಾಜಿಕ ಸಂಬಂಧಗಳು ಇವೇ ಮೊದಲಾದವುಗಳಲ್ಲೂ ಕಂಡುಬರಬೇಕು.

ಪ್ರಮುಖ ಅಭಿರುಚಿ ಅಂಶಮಾಲೆಗಳು : ಮೇಲ್ಕಂಡ ನಿಯಮಗಳು ಮತ್ತು ಅಗತ್ಯಗಳನ್ನು ಅನುಸರಿಸಿ ಈಗಾಗಲೇ ರೂಪುಗೊಂಡು ಪ್ರಸಿದ್ಧಿಗೆ ಬಂದಿರುವ ಕೆಲವು ಅಂಶಮಾಲೆಗಳನ್ನು ಇಲ್ಲಿ ಪ್ರಸ್ತಾಪಿಸಬಹುದು. ಉದಾಹರಣೆಗೆ ಸ್ಟ್ರಾಂಗನ ವೃತ್ತಿಯಭಿರುಚಿಸೂಚಿ, ಕ್ಯೂಡರನ ಆದ್ಯಾಕಬಂಧ, ಕ್ಲೀಟನನ ಅಭಿರುಚಿ ಅಂಶಮಾಲೆ, ಮಿನೆಸೋಟಾ ವೃತ್ತಿಯಭಿರುಚಿ ಅಂಶಮಾಲೆ ಮತ್ತು ಇತ್ತೀಚೆಗೆ ನಮ್ಮ ದೇಶದಲ್ಲಿ ರೂಪಗೊಂಡಿರುವ ಎನ್.ಸಿ.ಇ.ಆರ್.ಟಿ. ಅಭಿರುಚಿ

ಅಂಶಮಾಲೆ.* ಈ ಅಂಶಮಾಲೆಗಳು, ರಚನಾ ವಿಧಾನ, ಉದ್ದೇಶ ಮುಂತಾದವುಗಳಲ್ಲಿ, ತಮ್ಮದೇ ಆದ ವೈಶಿಷ್ಟ್ಯವನ್ನು ಪಡೆದಿರುವುದರಿಂದ, ಸ್ವಲ್ಪ ವಿವರವಾದ ಪರಿಶೀಲನೆ ಅಗತ್ಯವೆನಿಸುತ್ತದೆ.

ಸ್ಟ್ರಾಂಗನ ವೃತ್ತಿಯಭಿರುಚಿ ಸೂಚಿ (Strong's Vocational Interest Blank) : ಅಭಿರುಚಿಗಳ ಅಳತೆಯಲ್ಲಿ ಸ್ಟ್ರಾಂಗನ ಹೆಸರು ಚಿರಸ್ಥಾಯಿಯಾದುದು. ಈ ಕಾರ್ಯಕ್ಕಾಗಿ ಆತನು ನೀಡಿದ ಆಧಾರ ಕಲ್ಪನೆಗಳು (assumptions) ಮತ್ತು ಈ ಕ್ಷೇತ್ರದಲ್ಲಿ ಆತನು ನಡೆಸಿದ ಉತ್ತಮ ವ್ಯವಸಾಯಗಳು, ಅಭಿರುಚಿ ಅಳತೆಗೆ ಭದ್ರಬುನಾದಿಗಳಾಗಿ ಪರಿಣಮಿಸಿದವೆಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಬುದ್ಧಿಶಕ್ತಿ ಪರೀಕ್ಷೆಗಳಿಗೆ ಆಲ್‌ಫ್ರೆಡ್ ಬೀನೆ ಇದ್ದಂತೆ, ಅಭಿರುಚಿ ಅಂಶಮಾಲೆಗಳಿಗೆ ಸ್ಟ್ರಾಂಗ್.

ಯಾವುದೇ ಸಮಾಜದಲ್ಲಿ, ಸ್ತ್ರೀ ಪುರುಷರ ಜೀವನ ಸನ್ನಿವೇಶದಲ್ಲಿ ವ್ಯಾಪಕ ವ್ಯತ್ಯಾಸಗಳಿರುವುದರಿಂದ ಅವರ ಅಭಿರುಚಿಗಳಲ್ಲಿ ಭೇದವಿರುವುದು ಸಹಜವೆಂಬುದು ಸ್ಟ್ರಾಂಗನ ಅಭಿಮತ. ಈ ಕಾರಣದಿಂದಾಗಿ ಆತನು ತಾನುರಚಿಸಿದ ಅಭಿರುಚಿ ಅಂಶಮಾಲೆಯಲ್ಲಿ, ಸ್ತ್ರೀಪುರುಷರಿಗೆ ಪ್ರತ್ಯೇಕ ರಚನಾಬಂಧ (form)ಗಳನ್ನು ರೂಪಿಸಿದ್ದಾನೆ. ಪುರುಷರಿಗಾಗಿರುವ ರಚನಾಬಂಧದಲ್ಲಿ ಒಟ್ಟು ೪೦೦ ಪರೀಕ್ಷಾಂಶಗಳಿವೆ. ಇವುಗಳನ್ನು ವೃತ್ತಿಗಳು, ಪಠ್ಯವಿಷಯಗಳು, ಮನೋರಂಜನೆಗಳು ಎಂದು ಮುಂತಾಗಿ ವಿಭಾಗಿಸಲಾಗಿದೆ. ಇಲ್ಲಿರುವ ಪ್ರತಿಯೊಂದು ಪರೀಕ್ಷಾಂಶಕ್ಕೂ, ಪರೀಕ್ಷಾರ್ಥಿಯು ತನ್ನ ಅನುಕ್ರಿಯೆಯನ್ನು ಸೂಚಿಸಬೇಕು. ಇದಕ್ಕೆ ಅನುಕೂಲವಾಗುವಂತೆ, ಮೂರು ಅನುಕ್ರಿಯಾ ರೀತಿಗಳನ್ನು ಕೊಡಲಾಗಿದೆ— ಸಂಬಂಧಪಟ್ಟ ಚಟುವಟಿಕೆಯು ಆತನಿಗೆ ಇಷ್ಟವಾದುದಾದರೆ 'ಪ್ರಿಯ'ವೆಂದೂ, ಇಷ್ಟವಿಲ್ಲದುದಾಗಿದ್ದರೆ 'ಅಪ್ರಿಯ'ವೆಂದೂ ಮತ್ತು ಅವರ ಬಗ್ಗೆ ಆತನಿಗೆ ಉದಾಶೀನಭಾವವಿದ್ದರೆ 'ನಿರ್ಲಿಪ್ತ'ನೆಂದೂ ತಿಳಿಸಬೇಕಾಗುತ್ತದೆ. ಈ ರೀತಿಯ ಅನುಕ್ರಿಯೆಗಳಿಗೆ ಹೊರತಾದ ಮೂರು ವಿಭಾಗಗಳೂ ಈ ಅಂಶಮಾಲೆಯಲ್ಲುಂಟು : ಅವು, ಚಟುವಟಿಕೆಗಳು, ಜೊತೆಗೂಡಿರುವ ಅಂಶಗಳು ಮತ್ತು

* ಈ ಅಂಶಮಾಲೆಯ ರೂಪಣ ಕಾರ್ಯವು ಪ್ರಾರಂಭವಾದಂದಿನಿಂದ, ರಚನಾಕಾರ್ಯ ಮುಗಿಯುವ ವರೆಗೂ ಸುಮಾರು ಮೂರುವರ್ಷಗಳವರೆಗೆ (೧೯೬೬–೬೯), ಈ ಲೇಖಕರು, ಈ ಅಖಿಲ ಭಾರತ ಪರೀಕ್ಷಾ ರಚನಾ ಯೋಜನೆಯ ಹಿರಿಯ ಸಂಶೋಧಕರಾಗಿ ಸೇವೆಸಲ್ಲಿಸಿದ್ದಾರೆ.

ಶಕ್ತಿಸಾಮರ್ಥ್ಯ ಹಾಗೂ ಲಕ್ಷಣಗಳು. ಇವುಗಳಿಗೆ ಮೊದಲನೆಯ ವಿಭಾಗದ ಅಂಶಗಳಿಗೆ ಪರೀಕ್ಷಾರ್ಥಿಯು ತನ್ನ ಇಷ್ಟಾನುಸಾರ ಶ್ರೇಣ್ಯಂಕ (rank) ಗಳನ್ನು ಬರೆಯಬೇಕು. ಎರಡನೆಯ ವಿಭಾಗದ ಅಂಶಗಳಲ್ಲಿ ಪ್ರತಿಯೊಂದು ಜೋಡಿಯನ್ನೂ ಪರಸ್ಪರ ಹೋಲಿಸಿ, ಆ ಎರಡರಲ್ಲಿ ತನಗೆ ಯಾವುದು ಹೆಚ್ಚು ಪ್ರಿಯವಾದುದು ಎಂದು ಸೂಚಿಸಬೇಕು ಮತ್ತು ಮೂರನೆಯ ವಿಭಾಗದಲ್ಲಿರುವ ಶಕ್ತಿಸಾಮರ್ಥ್ಯಗಳು ಹಾಗೂ ಇತರ ಲಕ್ಷಣಗಳಿಗೆ, ಅವು ತನಗೆ ಹೇಗೆ ಅನ್ವಯಿಸುತ್ತವೆ ಎಂಬುದರ ಆಧಾರದ ಮೇಲೆ ಬೆಲೆಕಟ್ಟಬೇಕು.

ಸ್ಟ್ರಾಂಗನ ವೃತ್ತಿಯಭಿರುಚಿ ಸೂಚಿ (ಪುರುಷರ ಆಯ್ಕಾಬಂಧ)ಯಲ್ಲಿರುವ ಪರೀಕ್ಷಾಂಶಗಳು ಮತ್ತು ಅವುಗಳಿಗೆ ಉತ್ತರಿಸುವ ವಿಧಾನದ ಮಾದರಿಯನ್ನು ಇಲ್ಲಿ ಕಾಣಬಹುದು.

ಪರೀಕ್ಷಾಂಶಗಳು :	(L) ಪ್ರಿಯ (ಪ್ರಿ)	(I) ನಿರ್ಲಿಪ್ತ (ನಿ)	(D) ಅಪ್ರಿಯ (ಅ)
ವೃತ್ತಿಗಳು :			
೧. ನಟ	○	○	○
೨. ಜಾಹೀರಾತುಗಾರ	○	○	○
ಚಟುವಟಿಕೆಗಳು :			
೧. ಆಗಂತುಕನೊಂದಿಗೆ ಸಂಭಾಷಣೆ ಪ್ರಾರಂಭಿಸುವುದು	○	○	○
೨. ಮಕ್ಕಳಿಗೆ ಕಲಿಸುವುದು	○	○	○

ಪರೀಕ್ಷಾಂಶಗಳಿಗೆ ದೊರೆಯುವ ಉತ್ತರಗಳಿಗೆ ಪೂರ್ವಸಿದ್ಧ ಅಂಕನಕುಂಜಿಗಳ ಮೂಲಕ ಬೆಲೆಕಟ್ಟಿ ಪ್ರಾಪ್ತಾಂಕ (raw scores) ಗಳನ್ನು ನಿರ್ಧರಿಸಲಾಗುತ್ತದೆ. ಹೀಗೆ ದೊರೆತ ಪ್ರಾಪ್ತಾಂಕಗಳಿಗೆ ಪ್ರಮಾಣಿತ ಅಂಕ (standard score) ಗಳು ಮತ್ತು ಅಕ್ಷರವರ್ಗ (letter grade) ಗಳನ್ನು ಆಧರಿಸಿ ಅರ್ಥವಿವರಣೆ ಕೊಡಲಾಗುತ್ತದೆ. ಇದರಿಂದ ಸಂಬಂಧಪಟ್ಟ ವ್ಯಕ್ತಿಯ ವೃತ್ತಿಯಭಿರುಚಿ ವಿನ್ಯಾಸ ಹೇಗಿದೆ ಎಂಬುದು ತಿಳಿದುಬರುತ್ತದೆ. ಅಲ್ಲದೆ, ಪ್ರಮಾಣಿತ ಅಂಕಗಳ ಒಂದು ಪಾರ್ಶ್ವರೇಖೆಯನ್ನು ಎಳೆದಾಗ ಅಭಿರುಚಿ ವಿನ್ಯಾಸವು ಸ್ಪಷ್ಟವಾಗಿ ಗೋಚರಿಸುತ್ತದೆ.

ಅಭಿರುಚಿಗಳ ವೈಜ್ಞಾನಿಕ ಅಳತೆಗಾಗಿ ಸ್ಟ್ರಾಂಗನು ಸಲ್ಲಿಸಿರುವ ಸೇವೆಯು ಮಹತ್ವಪೂರ್ಣವಾಗಿರುವುದರ ಜೊತೆಗೆ, ಬೃಹತ್ತಾದುದೂ ಹೌದು. ಸುಮಾರು ೪೦ ವರ್ಷಗಳಿಗಿಂತ ಹೆಚ್ಚು ಕಾಲದ ವರೆಗೆ ಅವಿರತವಾಗಿ ಈ ಕ್ಷೇತ್ರದಲ್ಲಿ ದುಡಿದಿರುವ ಈತನು, ಅಭಿರುಚಿಗಳ ಅಳತೆಗೆ ಸಂಬಂಧಿಸಿದಂತೆ ಅನೇಕ ಸಮಸ್ಯೆಗಳನ್ನು ಬಿಡಿಸಲು ಯತ್ನಿಸಿರುವುದು ಗಮನಾರ್ಹ ಅಂಶ. ಸ್ಟ್ರಾಂಗನ ಕೊಡುಗೆ ವ್ಯಾಪಕವಾದುದು ಎಂಬುದಕ್ಕೆ ಒಂದು ಸ್ಪಷ್ಟ ನಿದರ್ಶನವೆಂದರೆ ಆತನು ಹಾಗೂ ಅವನ ಅನುಯಾಯಿಗಳು ರೂಪಿಸಿರುವ ಅಂಕನಕುಂಜಿಗಳು. ಅನೇಕ ವೃತ್ತಿಗಳ ವಿಶಿಷ್ಟ ಅಭಿರುಚಿ ವಿನ್ಯಾಸಗಳನ್ನು ತಿಳಿಯಲು ಅನುಕೂಲವಾಗುವಂತೆ, ಅವರು ಸುಮಾರು ೫೦ಕ್ಕೂ ಹೆಚ್ಚು ವೃತ್ತಿಯಂಕನಕುಂಜಿ (occupational scale) ಗಳನ್ನು ನಿರ್ಮಿಸಿದ್ದಾರೆ. ಇಂದು, ಈ ಕುಂಜಿಗಳು ಜಗತ್ತಿನಾದ್ಯಂತ ಪ್ರಚಲಿತವಾಗಿವೆ. ವೃತ್ತಿಯಂಕನಕುಂಜಿಗಳ ಜೊತೆಗೆ ಇರುವ ಇತರ ನಾಲ್ಕು ವಿಶೇಷ ಅಂಕನಕುಂಜಿಗಳೆಂದರೆ, ಅಭಿರುಚಿ ಪಕ್ವತೆ (interest maturity), ಪುರುಷತ್ವ–ಸ್ತ್ರೀತ್ವ (masculinity–famininity), ವೃತ್ತಿಯಂತಸ್ತು (occupational status) ಮತ್ತು ವಿಶೇಷಜ್ಞತೆಯ ಮಟ್ಟ (specialization level).

ಉತ್ತಮ ವಿಶ್ವಸನೀಯತೆ ಮತ್ತು ಸಿಂಧುತ್ವಗಳಿಂದ ಕೂಡಿರುವ ಈ ಅಂಶಮಾಲೆಯು ಅಬೌದ್ಧಿಕ ವ್ಯಕ್ತಿತ್ವ ಪರಿವರ್ತ್ಯಗಳನ್ನು ಅಳೆಯುವುದರಲ್ಲಿ ಜಯಪ್ರದ ವಿಧಾನಗಳಲ್ಲಿ ಒಂದೆನಿಸಿದೆ. ಯಾವುದೇ ಮನೋವೈಜ್ಞಾನಿಕ ಪರೀಕ್ಷೆಯ ಸಿಂಧುತ್ವವು ಅದರ ಉಪಯುಕ್ತತೆಯಲ್ಲೇ ಅಡಕವಾಗಿರುತ್ತವೆ. ಅನೇಕ ದಶಕಗಳ ವರೆಗೆ, ಉಳಿದುಬಂದು, ವೃತ್ತಿಮಾರ್ಗದರ್ಶನ ಹಾಗೂ ವೃತ್ತಿಪರಾಮರ್ಶನ ಕಾರ್ಯಗಳಿಗೆ ಉಪಯುಕ್ತಸಾಧನವೆನಿಸಿರುವ ಸ್ಟ್ರಾಂಗನ ವೃತ್ತಿಯಭಿರುಚಿ ಸೂಚಿಯ ಸಿಂಧುತ್ವದ ಬಗ್ಗೆ ಎರಡಭಿಪ್ರಾಯಕ್ಕೆ ಎಡೆಯಿಲ್ಲ.

ಕ್ಯೂಡರನ ಆಯ್ಕಾಬಂಧ (Kuder's Preference Record) : ಇದು ವ್ಯಾಪ್ತ ಉಪಯುಕ್ತತೆಯುಳ್ಳ ಮತ್ತೊಂದು ಅಭಿರುಚಿ ಅಂಶಮಾಲೆ. ಸ್ಟ್ರಾಂಗನ ಅಂಶಮಾಲೆಯಲ್ಲಿ ಪ್ರತಿನಿಧಿತವಾಗಿರುವ ವಿಶಿಷ್ಟವೃತ್ತಿಗಳಿಗೆ ಬದಲಾಗಿ, ಕೆಲವು ವಿಶಾಲ ಕಾರ್ಯಕ್ಷೇತ್ರಗಳಲ್ಲಿ ವ್ಯಕ್ತಿಗೆ ಇರಬಹುದಾದ ಅಭಿರುಚಿಗಳನ್ನು ಸಾಪೇಕ್ಷವಾಗಿ ಸೂಚಿಸುವುದೇ ಇದರ ಪ್ರಮುಖ ಉದ್ದೇಶ. ಮೂಲತಃ ಇದರ ಅಂಶಗಳು ತರ್ಕಸಿಂಧುತ್ವ (logial validity)ದ ಆಧಾರದ ಮೇಲೆ ರೂಪಿತವಾಗಿವೆ. ಪ್ರೌಢಶಾಲಾ ವಿದ್ಯಾರ್ಥಿ ಮತ್ತು ವಯಸ್ಕ ಸಮೂಹಗಳ ಅನುಕ್ರಿಯೆಗಳ ಆಧಾರದ

ಮೇಲೆ ವ್ಯಾಪಕವಾಗ ಪರೀಕ್ಷಾಂಶ ವಿಶ್ಲೇಷಣೆ ನಡೆದಿದೆ. ಹಿರಿಯ ಮಟ್ಟದ ಆಂತರ ಸ್ಥಾಯಿತ್ವ (internal consistency) ಮತ್ತು ವಿವಿಧ ಸಮೂಹಗಳ ನಡುವೆ ಪರಸ್ಪರ ಕನಿಷ್ಠ ಮಟ್ಟದ ಸಂಬಂಧವನ್ನು ತೋರಿಸುವ ಪರೀಕ್ಷಾಂಶ ಗಳನ್ನು ರೂಪಿಸುವುದೇ ಈ ವಿಶ್ಲೇಷಣೆಯ ಉದ್ದೇಶ.

ಈ ಅಂಶಮಾಲೆಯಲ್ಲಿ ನಿರ್ಬಂಧಿತ ಆಯ್ಕೆ (forced choice) ಅಂಶ ಗಳಿವೆ. ಒಂದೊಂದು ಅಂಶದಲ್ಲಿಯೂ ಮೂರುಮೂರು ಚಟುವಟಿಕೆಗಳನ್ನು ಕೊಡಲಾಗಿದೆ. ಉದಾಹರಣೆಗೆ :

ಲಲಿತಕಲೆಗಳ ಸಂಗ್ರಹಾಲಯಕ್ಕೆ ಭೇಟಿ ಕೊಡುವುದು

ಕೊಳೆಕೇರಿ (slum) ವಾಸಿಗಳಿಗಾಗಿರುವ ಮನೋರಂಜನಾ ಕೇಂದ್ರಕ್ಕೆ ಭೇಟಿ ಕೊಡುವುದು.

ಪ್ರಸಿದ್ಧ ವೈದ್ಯಕೀಯ ಸಂಶೋಧನಾ ಪ್ರಯೋಗಾಲಯಕ್ಕೆ ಭೇಟಿ ಕೊಡು ವುದು.

ಮೇಲಿನ ಅಂಶದಲ್ಲಿರುವ ಚಟುವಟಿಕೆಗಳು ಒಂದೊಂದೂ ಒಂದೊಂದು ಅಭಿರುಚಿಯನ್ನು ವ್ಯಕ್ತಪಡಿಸುತ್ತವೆ. ಪರೀಕ್ಷಾರ್ಥಿಯು ಸಾಪೇಕ್ಷವಾಗಿ ತನ್ನ ಇಷ್ಟಾನಿಷ್ಟಗಳನ್ನು ವ್ಯಕ್ತಪಡಿಸಬೇಕು. ಈ ಮೂರರಲ್ಲಿ ತನಗೆ ಹೆಚ್ಚು ಪ್ರಿಯ ವಾದ ಚಟುವಟಿಕೆಗೆ ೭ ಅಂಕಗಳನ್ನೂ, ಹೆಚ್ಚು ಅಪ್ರಿಯವಾದುದಕ್ಕೆ ೦ ಅಂಕ ವನ್ನೂ ಮತ್ತು ಉಳಿದುದಕ್ಕೆ, ಅಂಕವನ್ನೂ ಕೊಡಲಾಗುತ್ತದೆ. ಪ್ರತಿಯೊಂದು ಚಟುವಟಿಕೆಗೂ ಇತರ ಚಟುವಟಿಕೆಗಳೊಂದಿಗಿರುವ ಎಲ್ಲಾ ಹೋಲಿಕೆಗಳಿಂದ ದೊರೆತ ಅಂಕಗಳ ಮೊತ್ತವೇ ಪ್ರಾಪ್ತಾಂಕವಾಗುತ್ತದೆ. ಈ ರೀತಿಯ ಪ್ರಾಪ್ತಾಂಕ ಗಳನ್ನು ಪ್ರಮಾಣಿತ ಅಂಕಗಳನ್ನಾಗಿ ಮಾರ್ಪಡಿಸಲಾಗುತ್ತದೆ. ಇದಲ್ಲದೆ, ಪ್ರೌಢ ಶಾಲೆ, ಕಾಲೇಜು ಮತ್ತು ವಯಸ್ಕಸಮೂಹಗಳ ಸ್ತ್ರೀಪುರುಷರಿಗೆ ಪ್ರತ್ಯೇಕವಾದ ಪ್ರಮಾಣಕ (norms)ಗಳು ಸಿದ್ಧವಾಗಿವೆ. ಇವುಗಳ ಬಳಕೆಯಿಂದ ವ್ಯಕ್ತಿಯಲ್ಲಿ ರುವ ಅಭಿರುಚಿಗಳ ಸಮಗ್ರ ವಿನ್ಯಾಸವನ್ನು ಸೂಚಿಸುವ ಪಾರ್ಶ್ವಚಿತ್ರಗಳನ್ನು ರೂಪಿಸಲು ಸಾಧ್ಯವಿದೆ.

ಈ ಅಂಶಮಾಲೆಗೆ ರೂಪಿತವಾಗಿರುವ ವೃತ್ತಿಯಂಕನ ಕುಂಜಿಗಳು ಈ ಕೆಳಗಿನ ಕ್ಷೇತ್ರಗಳಿಗೆ ಸಂಬಂಧಿಸಿವೆ :

ತಾಂತ್ರಿಕ	ವೈಜ್ಞಾನಿಕ	ಸಾಹಿತ್ಯಕ	ಗುಮಾಸ
ಗಣನಾತ್ಮಕ	ಪ್ರೇರಕಾತ್ಮಕ	ಸಂಗೀತಾತ್ಮಕ	ಹೊರಾಂಗ
(computational)	(persuasive)	ಸಮಾಜಸೇವಾತ್ಮಕ	
	ಕಲಾತ್ಮಕ		

ಈ ಅಂಶಮಾಲೆಯ ವಿಶ್ವಸನೀಯತೆ ಮತ್ತು ಸಿಂಧುತ್ವಗಳು ಸಾಪೇಕ್ಷವಾ ಸಿದ್ಧವಾಗಿವೆ ಎಂದು ಹೇಳಬಹುದು. ಆದರೆ ಔದ್ಯೋಗಿಕ ಜಯದ ಮುನ್ನೂಚ ಕೊಡುವಲ್ಲಿ ಈ ಅಂಶಮಾಲೆಯು ಅಷ್ಟಾಗಿ ಭರವಸೆ ಕೊಡದು ಎಂಬುದ ಕೆಲವರ ಅಭಿಮತ.

ಎನ್. ಸಿ. ಇ. ಆರ್. ಟಿ. ಅಭಿರುಚಿ ಅಂಶಮಾಲೆ : ನವದೆಹಲಿ ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿಯು ರೂಪಿಸಿರು ಈ ಅಂಶಮಾಲೆಯು ಕನ್ನಡ, ಹಿಂದಿ, ಮರಾಠಿ ಮತ್ತು ಇಂಗ್ಲಿಷ ಭಾಷೆಗಳ ಈಗಾಗಲೇ ಸಿದ್ಧವಾಗಿದೆ. ಪ್ರೌಢಶಾಲೆ ಮತ್ತು ಕಾಲೇಜು ಮಟ್ಟಗಳಿಗೆಂದು ಅಂಶಮಾಲೆಯ ಎರಡು ರೂಪಗಳು ದೊರೆಯುತ್ತವೆ. ಅಖಿಲ ಭಾರತ ಮಟ್ಟದ ಸುಮಾರು ಆರು ವರ್ಷಗಳ ವರೆಗೆ ನಡೆದ ಈ ಪರೀಕ್ಷಾ ನಿರ್ಮಾಣ ಕಾರ್ಯದ ಸಹಕರಿಸಲು ನವದೆಹಲಿ, ಮೈಸೂರು,* ಬೊಂಬಾಯಿ, ಪಾಟ್ನಾ ಮತ ಅಲಿಘಡಗಳಲ್ಲಿ ಪ್ರಾದೇಶಿಕ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದಿತು. ಬೃಹತ್ಪ್ರಮಾ ದಲ್ಲಿ ನಡೆದ ಈ ಸಹಕಾರೀ ಪರೀಕ್ಷಾರೂಪಣ ಯೋಜನೆ (Cooperative Te Development Project)ಯ ಫಲಶ್ರುತಿ ಈ ಅಂಶಮಾಲೆ. ಸಾವಿರಾ ಪರೀಕ್ಷಾಂಶಗಳನ್ನು ಬರೆದು ಪುನಃ ಪುನಃ ಪ್ರಯೋಗಿಸಿ ನೋಡಿದ ಅನಂತರ ಕೊ ಯಲ್ಲಿ ಅತ್ಯುತ್ತಮವೆನಿಸಿದವುಗಳನ್ನು ಆರಿಸಿಕೊಂಡು, ಮೇಲ್ಕಂಡ ಎರಡು ರೂ ಗಳನ್ನು ರಚಿಸಲಾಗಿದೆ. ಪ್ರತಿಯೊಂದು ರೂಪದಲ್ಲಿಯೂ ನಾಲ್ಕು ಬಗೆ ಪರೀಕ್ಷಾಂಶಗಳಿವೆ. ಸನ್ನಿವೇಶಾತ್ಮಕ (situational) ಪರೀಕ್ಷಾಂಶಗಳು, ಪ್ರಮಾ (point scale) ಪರೀಕ್ಷಾಂಶಗಳು, ಜೊತೆಗೂಡಿದ ಸಹಯೋಗಿ (pair (associates) ಪರೀಕ್ಷಾಂಶಗಳು ಮತ್ತು ಆಯ್ಕೆ ಪಟ್ಟಿ.

ಕಾಲೇಜು ವಿದ್ಯಾರ್ಥಿಗಳಿಗಾಗಿರುವ ಅಂಶಮಾಲೆಯಿಂದ ಆಯ್ದ ಕೆಲ ಮಾದರಿ ಪರೀಕ್ಷಾಂಶಗಳನ್ನು ಇಲ್ಲಿ ಕಾಣಬಹುದು :

* ಮೈಸೂರು ಮಾನಸಗಂಗೋತ್ರಿಯ ಮನೋವಿಜ್ಞಾನ ವಿಭಾಗ ಈ ಲೇಖಕರ ಕಾ ಸ್ಥಾನವಾಗಿದ್ದಿತು.

ಭಾಗ I–ಸನ್ನಿವೇಶಾತ್ಮಕ ಪರೀಕ್ಷಾಂಶಗಳು (ಉತ್ತರಿಸುವ ವಿಧಾನ–ಬಹುವರಣ multiple choice.)

ಪರೀಕ್ಷಾಂಶ ೪೫

ಬಿಡುವಿದ್ದಾಗ, ಯಾವ ಕಾರ್ಯದಲ್ಲಿ ನೀವು ಹೆಚ್ಚು ಆಸಕ್ತಿಯಿಂದ ನಿರತರಾಗಿರುತ್ತೀರಿ ?

೧) ಸಣ್ಣ ಕಥೆಗಳನ್ನು ಬರೆಯುವುದು
೨) ಹೂ ಗಿಡಗಳನ್ನು ಬೆಳೆಸುವುದು
೩) ಬಂದೂಕು ತರಬೇತಿ ತರಗತಿಗಳಿಗೆ ಹೋಗುವುದು
೪) ಸಣ್ಣ ಪುಟ್ಟ ಪ್ರಯೋಗಗಳನ್ನು ಮಾಡುವುದು.

ಭಾಗ II–ಪ್ರಣಾಲಿ ಪರೀಕ್ಷಾಂಶಗಳು(ಉತ್ತರಿಸುವ ರೀತಿಪ್ರಿಯ‘+’; ಅಪ್ರಿಯ‘–’ ಮತ್ತು ‘?’)

ಪರೀಕ್ಷಾಂಶಗಳು :

೫೧ ಕ್ರೀಡಾಪಟುಗಳೊಂದಿಗೆ ಪತ್ರವ್ಯವಹಾರ ನಡೆಸುವುದು
೬೨ ಸಾಂಕ್ರಾಮಿಕ ರೋಗಗಳ ಹಳೆಯ ದಾಖಲೆಗಳನ್ನು ಓದುವುದು
೬೮ ಸಸಿಗಳಿಗೆ ಕಸಿ ಮಾಡುವುದು.
೨೩೧ ಭಾಷಣಗಳ ಟಿಪ್ಪಣಿಗಳನು ಬರೆದುಕೊಳ್ಳುವುದು.

ಭಾಗ III–ಜೊತೆಗೂಡಿದ ಸಹಯೋಗಿಗಳು (ಉತ್ತರಿಸುವ ರೀತಿ : ಒಂದನ್ನು ಆರಿಸುವುದು ಅಥವ ‘?’ ಚಿಹ್ನೆ ಹಾಕುವುದು).

ಪರೀಕ್ಷಾಂಶಗಳು :

೨೫೫ ಒಂಟಿಯಾಗಿ ಕೆಲಸ ಮಾಡುವುದು
ಗುಂಪಿನಲ್ಲಿ ಕೆಲಸ ಮಾಡುವುದು.

೨೭೧ ಮಹತ್ವಾಕಾಂಕ್ಷಿ
ಸಂತೃಪ್ತ

ಭಾಗ IV–ಆಯ್ಕೆ ಪಟ್ಟಿ(ಉತ್ತರಿಸುವ ರೀತಿ; ಇಷ್ಟವಾದ ಎರಡನ್ನು ಆರಿಸುವುದು ‘+’; ಇಷ್ಟವಲ್ಲದ ಎರಡನ್ನು ಆರಿಸುವುದು‘–’)

ಪರೀಕ್ಷಾಂಶ : ಹವ್ಯಾಸಗಳು

೧) ಹಕ್ಕಿಗಳನ್ನು ಸಾಕುವುದು
೨) ನಾಟಕವಾಡುವುದು
೩) ತೋಟಗಾರಿಕೆ ಮಾಡುವುದು
೪) ಯಂತ್ರ ರಿಪೇರಿ ಮಾಡುವುದು
೫) ವರ್ಣಚಿತ್ರ ಬರೆಯುವುದು
೬) ಛಾಯಾ ಚಿತ್ರಣ.

ಈ ಅಂಶಮಾಲೆಯ ಎರಡು ರೂಪಗಳಲ್ಲಿಯೂ ಇರುವ ಪರೀಕ್ಷಾಂಶಗಳ ಸಂಖ್ಯೆಯನ್ನು ಈ ಕೆಳಗಿನ ಕೋಷ್ಟಕದಲ್ಲಿ ಕೊಡಲಾಗಿದೆ.

ಎನ್.ಸಿ.ಇ.ಆರ್.ಟಿ. ಅಭಿರುಚಿ ಅಂಶಮಾಲೆಯಲ್ಲಿರುವ ಪರೀಕ್ಷಾಂಶಗಳು:

ರೂಪಗಳು	ಭಾಗ I	ಭಾಗ II	ಭಾಗ III	ಭಾಗ IV
ಪ್ರೌಢಶಾಲಾ ರೂಪ	೫೦	೨೦೦	೨೫	೫
ಕಾಲೇಜು ರೂಪ	೫೦	೨೦೦	೨೫	೫

ಈ ಅಂಶಮಾಲೆಯಲ್ಲಿ, ಕರಣಿಕ, ಆರ್ಥಿಕ, ನ್ಯಾಯ ಮತ್ತು ಆಡಳಿತ, ಶೈಕ್ಷಣಿಕ, ವೈದ್ಯಕೀಯ, ವೈಜ್ಞಾನಿಕ ಮುಂತಾದ ಹದಿಮೂರು ಅಭಿರುಚಿ ಕ್ಷೇತ್ರಗಳಿಗೆ ಸಂಬಂಧಿಸಿದ ಪರೀಕ್ಷಾಂಶಗಳಿವೆ. ಇವುಗಳನ್ನು ಅನುಭವಿಕ ನಿಕಷ (empirical criterion)ಗಳ ಆಧಾರದ ಮೇಲೆ ಆಯ್ಕೆಮಾಡಲಾಗಿದೆ. ಇದಕ್ಕಾಗಿ ದೇಶದಾದ್ಯಂತ, ವಿವಿಧ ವೃತ್ತಿಗಳಲ್ಲಿ ಪರಿಣತರಾದವರ ಅನುಕ್ರಿಯೆಗಳನ್ನು ಸಂಗ್ರಹಿಸಿ ಪರೀಕ್ಷಾಂಶ ಸಿಂಧುತ್ವ (item validity) ವನ್ನು ನಿರ್ಧರಿಸಲಾಗಿದೆ. ಈಗಾಗಲೇ ಹೆಚ್ಚು ಉಪಯುಕ್ತ ಕ್ಷೇತ್ರಗಳೆನಿಸಿರುವ ಕರಣಿಕ, ನ್ಯಾಯ ಮತ್ತು ಆಡಳಿತ, ತಾಂತ್ರಿಕ, ವೈದ್ಯಕೀಯ, ವೈಜ್ಞಾನಿಕ ವೃತ್ತಿಕ್ಷೇತ್ರಗಳ ಅಂಕನಕುಂಜಿಗಳು ಸಿದ್ಧವಾಗಿವೆ. ಇವುಗಳ ಜೊತೆಗೆ ಪ್ರತಿಯೊಂದು ಕ್ಷೇತ್ರದಲ್ಲಿಯೂ ವಿಭೇದಾತ್ಮಕ (differential) ಅಂಕನಕುಂಜಿಗಳನ್ನು ರಚಿಸುವ

ಅಗತ್ಯವಿದೆ. ಇದಕ್ಕೆ ಸಂಬಂಧಿಸಿದಂತೆ ಈಗಾಗಲೇ ಪ್ರಯತ್ನಗಳು ನಡೆದಿರುವುದು ಗಮನಾರ್ಹ ಅಂಶ.*

ವೈವಿಧ್ಯಪೂರ್ಣವೂ, ಉತ್ತಮ ವಿಭೇದನ ಸಾಮರ್ಥ್ಯವುಳ್ಳವುಗಳೂ ಆದ ಪರೀಕ್ಷಾಂಶಗಳಿಂದ ಕೂಡಿರುವ ಈ ಅಂಶಮಾಲೆಯು ಒಂದು ಉತ್ತಮ ವ್ಯಾವಹಾರಿಕ ಹಾಗೂ ಸಂಶೋಧನಾತ್ಮಕ ಸಾಧನವಾಗುವುದೆಂದು ನಿರೀಕ್ಷಿಸಲಾಗಿದೆ. ಈಗಾಗಲೇ ಪ್ರಮಾಣೀಕರಣ ಕಾರ್ಯವು ಸಂಪೂರ್ಣವಾಗಿರುವುದರ ಜೊತೆಗೆ, ಈ ಅಂಶಮಾಲೆಯ ವಿಶ್ವಸನೀಯತೆ ಮತ್ತು ಸಿಂಧುತ್ವಗಳ ಪರಿಶೀಲನೆಯೂ ಪ್ರಾಥಮಿಕವಾಗಿ ಮುಗಿದಿದೆ. ಇದರಲ್ಲಿ ಹೆಚ್ಚು ಆಶಾದಾಯಕ ತಥ್ಯಾಂಶಗಳು ಬೆಳಕಿಗೆ ಬಂದಿವೆ. ಇಷ್ಟು ಮಾತ್ರವಲ್ಲದೆ ವೃತ್ತಿಯಭಿರುಚಿಗಳು ಮತ್ತು ಇತರ ಅನೇಕ ವರ್ತನಾ ಸಂಗತಿಗಳ ನಡುವೆ ಇರುವ ಸಂಬಂಧವನ್ನು ಪರಿಶೀಲಿಸಲು ಈ ಅಂಶಮಾಲೆಯನ್ನು ಬಳಸಲಾಗುತ್ತಿದೆ. ಉದಾಹರಣೆಗೆ, ಈ ಲೇಖಕರ ಮಾರ್ಗದರ್ಶನದಲ್ಲಿ ಕೆಲವು ಎಂ.ಎ. ವಿದ್ಯಾರ್ಥಿ ವಿದ್ಯಾರ್ಥಿನಿಯರು, ಈ ಅಂಶಮಾಲೆಯನ್ನು ಉಪಯೋಗಿಸಿಕೊಂಡು, ಅಭಿರುಚಿಗಳು ಮತ್ತು ಇತರ ಕೆಲವು ವರ್ತನಾರೀತಿಗಳ ನಡುವಣ ಸಂಬಂಧಗಳ ಬಗ್ಗೆ ಸಂಶೋಧನೆ ನಡೆಸಿದ್ದಾರೆ.§ ಅಭಿರುಚಿ ನಿರ್ಧಾರಕಗಳಿಗೆ

* ಉದಾಹರಣೆಗೆ, ಈ ಲೇಖಕರು ವೈಜ್ಞಾನಿಕ ಅಭಿರುಚಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ವಿಭೇದಾತ್ಮಕ ಅಂಕನಕುಂಜಿಗಳನ್ನು ರಚಿಸಲು ಸಂಶೋಧನೆ ನಡೆಸುತ್ತಿದ್ದಾರೆ.

§ Kum. Indira Patil : **A Study of the Relationship between Vocational Interests and Intelligence among 10th grade children,** 1975.

Kum. R. Shyamala : **A Study of Relationship between Creativity and Vocational Interests of High School Boys,** 1975.

Shri. S. R. Kumbar : **A Study of Vocational Interests of Artists and Non-artists,** 1976

Shri K. S. Kulkarni : **A Study of Vocational Interests and Creatinity of High Achieving and Law. Achieving Pre-University students.**

(All Unpublished Master's Dissertation).

ಸಂಬಂಧಿಸಿದಂತೆ ಇಲ್ಲಿಯವರೆಗೆ ದೊರೆತಿರುವ ತಥ್ಯಾಂಶಗಳನ್ನು ಬಹುಮಟ್ಟಿಗೆ ಸಮರ್ಥಿಸುವ ತಥ್ಯಾಂಶಗಳು ಮೇಲಿನ ಸಂಶೋಧನೆಗಳಿಂದ ಹೊರಬಿದ್ದಿರುವುದು ಈ ಅಂಶಮಾಲೆಯ ಸಂಶೋಧನಾ ಉಪಯುಕ್ತತೆಗೆ ಒಂದು ನಿದರ್ಶನ. ಒಟ್ಟಿನಲ್ಲಿ, ನಮ್ಮ ದೇಶದ ಸಾಂಸ್ಕೃತಿಕ ರೀತಿನೀತಿಗಳಿಗೆ ಅನುಗುಣವಾಗಿ ರೂಪಿತವಾಗಿರುವ ಈ ಅಂಶಮಾಲೆಯು ವೃತ್ತಿ ಮತ್ತು ಶಿಕ್ಷಣ ಮಾರ್ಗದರ್ಶನ ಹಾಗೂ ಸಂಶೋಧನೆಗಳಿಗೆ ಒಂದು ಅತ್ಯುಪಯುಕ್ತ ಸಾಧನವಾಗಿ ಪರಿಣಮಿಸುವುದರಲ್ಲಿ ಸಂಶಯವಿಲ್ಲ.

ವ್ಯಕ್ತಿಯ ಜೀವನಕ್ಕೆ ಸಂತೃಪ್ತಿಯ ತನಿಸೇಚನೆಯನ್ನು ಎರೆಯುವ ಶಕ್ತಿ ಅಭಿರುಚಿಗಳಿಗಿದೆ. ಇದರಿಂದಾಗಿ, ನಮ್ಮಲ್ಲಿರುವ ಅಭಿರುಚಿಗಳನ್ನು ನಿಖರವಾಗಿ ತಿಳಿದು, ನಮ್ಮ ವೈಯಕ್ತಿಕ, ಸಾಮಾಜಿಕ ಹಾಗೂ ಔದ್ಯೋಗಿಕ ಜೀವನರಂಗಗಳಲ್ಲಿ ಸಮರ್ಪಕ ಸಾಧನೆ-ಸಂತೃಪ್ತಿಗಳನ್ನು ಗಳಿಸಿಕೊಳ್ಳಲು ಅಭಿರುಚಿಗಳ ಅಳತೆ ಅತ್ಯಗತ್ಯ. ಇದರ ಬಗ್ಗೆ ಈಗಾಗಲೇ ಸಾಪೇಕ್ಷ ಪ್ರಗತಿಯಾಗಿದ್ದು, ಉತ್ತಮ ಗುಣಮಟ್ಟವುಳ್ಳ ಕೆಲವು ಅಳತೆಗೋಲುಗಳು ರೂಪಗೊಂಡಿರುವುದು ಸಂತೋಷದ ಸಂಗತಿ. ಆದರೂ, ಈ ಕ್ಷೇತ್ರದಲ್ಲಿ ಆಗಬೇಕಾಗಿರುವ ವ್ಯವಸಾಯ ಅಪಾರ.

ಆಧಾರ ಗ್ರಂಥಗಳು ಮತ್ತು ಲೇಖನಗಳು

Anastasi, A., **Psychological Testing,** New York : Crowell Collier and Macmillan, 1968.

Clark, K. E., **Vocational Interests of Non-Professional Men,** University of Minnesota Press, Minneapolis, 1961.

Darley & Hageneh., **Vocational Interest Measurement : Theory and Practice.**

Guilford, J. P., **Interests by Empirical Approach.**

Kuppuswamy, B., **Investigations Regarding Vocational Interests.**

Strong, E. K., **Vocational Interests of Men & Women,** Stanford Uni. Press, California, 1943.

Super, D. E., **Appraising Vocational fitness.**

Notes : by the author on the construction of N.C.E.R.T., Interest Inventory.

Records : Relating to the N.C.E.R.T., Interest Inventory kept in the Mysore & N.C.E.R.T., Centres.

ಧರಣೇಂದ್ರಯ್ಯ, ಎ. ಎಸ್., **ಅಭಿರುಚಿಗಳು : ಸಾಮಾನ್ಯ ಮನೋವಿಜ್ಞಾನ,** ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು.

ಗ್ರಾಮೀಣ ಜನತೆಗೆ ಕೌಶಲ್ಯ ಹಾಗೂ ವೃತ್ತಿ ತರಬೇತಿ*

● ಎಸ್. ಎಫ್. ಪೂಜಾರ

‘ಉದ್ಯೋಗಂ ಪುರುಷ ಲಕ್ಷಣಂ’ ಎಂದು ಹೇಳುತ್ತಾ ಬಂದದ್ದಾಗಿದೆ. ಈಗ ಉದ್ಯೋಗವು ಮಾನವನ (ಪುರುಷ ಸ್ತ್ರೀಯರಿಬ್ಬರಿಗೂ) ಲಕ್ಷಣವೆಂದು ಹೇಳಬೇಕು. ಪುರುಷರಷ್ಟೇ ಉದ್ಯೋಗದಲ್ಲಿ ತೊಡಗಿದರಾಗದು. ಸ್ತ್ರೀಯರೂ ಉದ್ಯೋಗಸ್ಥರಾಗಬೇಕು. ಕೂಲಿಕಾರವರ್ಗದಲ್ಲಿ ಸ್ತ್ರೀ-ಪುರುಷರಿಬ್ಬರೂ ದುಡಿಯುತ್ತಾ ಬಂದಿದ್ದಾರೆ. ಈಗ ಮಧ್ಯಮವರ್ಗದವರೇ ಆಗಲಿ, ಮೇಲಿನವರ್ಗದವರೇ ಇರಲಿ ಸ್ತ್ರೀ-ಪುರುಷರಿಬ್ಬರೂ ದುಡಿಯಬೇಕಾಗಿದೆ. ಆದರೆ ಓದುವ ಸಾಮರ್ಥ್ಯವಿಲ್ಲದವರೂ, ವೃತ್ತಿಯಲ್ಲಿ ಸಾಮರ್ಥ್ಯವಿದ್ದವರೂ, ಓದಿ ಒಳ್ಳೆಯ ಅಧಿಕಾರ, ಶ್ವೇತಪೋಷಾಕದ (White-Collar) ಉದ್ಯೋಗ ಮಾಡಬೇಕೆನ್ನುತ್ತ ನಿರುದ್ಯೋಗಕ್ಕೆ ನಾಂದಿ ಹಾಡಿ ಅದನ್ನು ಭೂತಾಕಾರವಾಗಿ ಬೆಳೆಯಿಸಿ ಬಿಟ್ಟಿದ್ದಾರೆ. ಓದದವನೂ ಶ್ವೇತ ಪೋಷಾಕದ ಕೆಲಸವನ್ನೇ ಬಯಸುತ್ತಾನೆ. ಶ್ರಮಜೀವನವನ್ನು ಗೌರವಿಸದ್ದಕ್ಕೆ ಬಹುಮಟ್ಟಿಗೆ ಬಡತನವನ್ನು ಬರಮಾಡಿಕೊಂಡಂತಾಗಿದೆ. ಕಾರಣ ಶಿಕ್ಷಣ, ಉದ್ದಿಮೆ, ವಾಣಿಜ್ಯ, ತಾಂತ್ರಿಕ, ಕೂಲಿಕಾರ ಇತ್ಯಾದಿ ರಂಗಗಳು ಈಗ ವೃತ್ತಿ ತರಬೇತಿಯ ಬಗೆಗೆ ತೀಕ್ಷ್ಣವಾಗಿ ವಿಚಾರ ಮಾಡಬೇಕಾಗಿದೆ.

* ಕರ್ನಾಟಕ ವಿಶ್ವವಿದ್ಯಾಲಯದ ಸಮಾಜಕಾರ್ಯ ವಿಭಾಗವು ಏರ್ಪಡಿಸಿದ “ಸಾಮಾಜಿಕ ಪ್ರಜ್ಞೆ ಹಾಗು ಧುರೀಣತ್ವ ತರಬೇತಿ” ಶಿಬಿರದಲ್ಲಿ ಸಾದರಪಡಿಸಿದ ಪ್ರಬಂಧ.

ವಿಜ್ಞಾನ ಮತ್ತು ತಾಂತ್ರಿಕತೆಯ ಬೆಳವಣಿಗೆಯಿಂದಾಗಿ ಹೊಸ ಹೊಸ ವೃತ್ತಿಗಳು, ಆದಾಯ ನೀಡುವ ಉದ್ಯೋಗಗಳು ಜನ್ಮವೆತ್ತಿವೆ. ದುರ್ದೈವದಿಂದ ನಮ್ಮ ಜನರ ಅದರಲ್ಲೂ ಗ್ರಾಮೀಣ ಜನರ ದೃಷ್ಟಿ ಆ ಕಡೆಗೆ ಹರಿಯುತ್ತಿಲ್ಲ. ಇದರಿಂದಾಗಿ ನಿರುದ್ಯೋಗವು ಜ್ವಲಂತ ಸಮಸ್ಯೆಯಾಗಿ ಬಾಧಿಸುತ್ತಿವೆ. ಜನಸಂಖ್ಯಾ ಸಮಸ್ಯೆಯು ಅದಕ್ಕೆ ಎಣ್ಣೆ ಸುರಿದಿದೆ. ಇದೂ ಅಲ್ಲದೆ ಉದ್ಯೋಗ ಮಾಡುವವರು ಸಂಪ್ರದಾಯಕ್ಕೆ ಶರಣಾಗಿ ಅದರಲ್ಲಿ ತಾಂತ್ರಿಕತೆ, ಯಾಂತ್ರಿಕತೆ, ಕುಶಲತೆಗಳನ್ನು ಅಳವಡಿಸಿಲ್ಲವಾದ್ದರಿಂದ ಅದು ಗೊಡ್ಡು ಬೀಳಹತ್ತಿದೆ. ಕಾರಣ ಇವುಗಳನ್ನು ಅಳವಡಿಸಬೇಕಾದರೆ ಯಾವದೇ ವೃತ್ತಿಗೂ ತರಬೇತಿ ಅತ್ಯವಶ್ಯ.

ರ್‍ಯಾಂಡಮ್ ಹೌಸ್ ಶಬ್ದಕೋಶವು (Random House Dictionary ವೃತ್ತಿ ತರಬೇತಿಯ ಅರ್ಥವನ್ನು ಈ ಕೆಳಗಿನಂತೆ ಮಾಡಿದೆ— 'ಯಾವದೊಂದು ವಿಶೇಷ ವೃತ್ತಿಯಲ್ಲಿ ವಿದ್ಯಾರ್ಥಿಗೆ ಪ್ರಾಯೋಗಿಕ ಅನುಭವವನ್ನು ನೀಡುವ ತರಬೇತಿಗೆ ವೃತ್ತಿ ತರಬೇತಿ' ಎನ್ನುವರು. ("A training that provides a student with practical experience in a particular occupational field.")[೧] ಅಂತರ್ರಾಷ್ಟ್ರೀಯ ಸಮಾಜವಿಜ್ಞಾನಗಳ ವಿಶ್ವಕೋಶದಲ್ಲಿ ವೃತ್ತಿ ತರಬೇತಿಯ ವ್ಯಾಖ್ಯೆಯನ್ನು ಒಂದು ವಿಶಾಲ ಅರ್ಥದಲ್ಲಿ ಹೀಗೆ ಮಾಡಲಾಗಿದೆ— ಸುಸಮರ್ಥವಾಗಿ, ಯಾವದೇ ಆದಾಯ ಬರುವ ಉದ್ಯೋಗವನ್ನು ನೇರವಾಗಿ ಕೈಕೊಳ್ಳಲು, ವ್ಯಕ್ತಿಯನ್ನು ತಯಾರುಮಾಡುವ ತರಬೇತಿಗೆ "ವೃತ್ತಿ ತರಬೇತಿ" ಎನ್ನುವರು. ("The term vocational training may broadly be applied to any training that prepares an individual for the efficient pursuit of a remunerative occupation".)[೨]

ಸಂಶೋಧನೆ ಮತ್ತು ಪ್ರಕಟನೆಗಾಗಿ ರಚಿಸಿದ ಅಮೇರಿಕೆಯ ವೃತ್ತಿಸಂಘದ ಸಮಿತಿಯು ವೃತ್ತಿತರಬೇತಿಯ ಉದ್ದೇಶವನ್ನು ಈ ಕೆಳಗಿನಂತೆ ವಿವರಿಸಿದೆ— 'ತರಬೇತಿಯು, ವೃತ್ತಿಯಲ್ಲಿ ಕೌಶಲ್ಯ, ಸಾಮರ್ಥ್ಯ, ತಿಳುವಳಿಕೆ ವೃತ್ತಿಮನೋಭಾವ ದುಡಿಯುವ ಹವ್ಯಾಸ ಮತ್ತು ಅದರ ಪ್ರಶಂಸೆಯನ್ನು ಬೆಳಸಲಿಕ್ಕಲ್ಲದೆ, ಉಪಯುಕ್ತವಾಗಿ, ಉತ್ಪಾದನಾತ್ಮಕವಾಗಿ ಶ್ರಮಜೀವಿಗಳು ಉದ್ಯೋಗದಲ್ಲಿ ಪ್ರವೇಶಿಸಲಿಕ್ಕೆ ಮತ್ತು ಪ್ರಗತಿ ಸಾಧಿಸಲಿಕ್ಕೆ ಅವರಿಗೆ ಅವಶ್ಯವಿರುವ ವಿಷಯ

---

೧. Jess Stein **Random House Dictionary,** Random House, New York, 1967.

೨. International Encyclopaedia of Social Sciences.

ಮತ್ತು ಜ್ಞಾನದ ಬಗ್ಗೆ ಅರಿವು ಮಾಡಿಕೊಡುವದಕ್ಕಾಗಿಯೂ ಅದು ರೂಪಿತವಾಗಿದೆ (Vocational training is a training designed to develop skills, abilities, understandings, attitudes, work habits and appreciations encompassing knowledge and information needed by workers to enter and make progress on employment on a useful and productive basis).[೩] ಇನ್ನೂ ಮುಂದುವರಿದು ಈ ಸಮಿತಿಯು. ವೃತ್ತಿ ತರಬೇತಿಯು ಶಿಕ್ಷಣ ಕಾರ್ಯಕ್ರಮದ ಒಂದು ಅವಿಭಾಜ್ಯ ಅಂಗ ಮತ್ತು ಅದು ಅಭ್ಯರ್ಥಿಗಳ ಭೌತಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಸಾಮರ್ಥ್ಯವನ್ನು ಹೆಚ್ಚಿಸಿ ಅವರನ್ನು ಒಳ್ಳೆಯ ನಾಗರಿಕರನ್ನಾಗಿ ಮಾಡಲು ಸಹಾಯಕವಾಗುತ್ತದೆ ಎಂದು ನಿರೂಪಿಸುತ್ತದೆ. ಅಲ್ಲದೆ ಅವರು ಸ್ಪರ್ಧಾತ್ಮಕವಾದ ಸಮಾಜದಲ್ಲಿ ಸ್ವಸಾಮರ್ಥ್ಯದಿಂದ ತಮ್ಮ ಕಾಲಮೇಲೆ ತಾವು ನಿಲ್ಲಲಿಕ್ಕೆ ಬಲ ನೀಡುತ್ತದೆ.

ಈ ಕಾರಣಗಳಿಂದಾಗಿ ವೃತ್ತಿತರಬೇತಿಯು ಸುವ್ಯವಸ್ಥಿತವಾಗಿ ಸಂಘಟಿಸಲ್ಪಡುವದು ಅವಶ್ಯ. ಅದಕ್ಕಾಗಿ ಯೋಜನೆಯನ್ನೂ ಹಾಕಿಕೊಳ್ಳಬೇಕು. ಆ ಯೋಜನೆಯಲ್ಲಿ ಸಿಬ್ಬಂದಿ, ವೃತ್ತಿಮಾರ್ಗದರ್ಶನ, ಸಲಹೆ, ಆಯ್ಕೆಮಾಡುವ ವಿಧಾನ, ಪಠ್ಯಕ್ರಮ, ಪ್ರಾತ್ಯಕ್ಷಿಕೆ, ವರ್ಗ, ಸಲಕರಣೆ ಪ್ರಗತಿಯ ಬಗ್ಗೆ ವರದಿ, ಮೌಲ್ಯಮಾಪನ, ಪರೀಕ್ಷೆ ಮುಂತಾದವುಗಳನ್ನು ಮುಖ್ಯವಾಗಿ ಲಕ್ಷಿಸಬೇಕು.

ವೃತ್ತಿತರಬೇತಿ ಯೋಜನೆಯ ಉದ್ದೇಶವನ್ನು ಈ ಕೆಳಗಿನಂತೆ ಹೇಳಬಹುದು:

೧. ವೃತ್ತಿಧರ್ಮ, ಮೌಲ್ಯ, ವೃತ್ತಿಯ ತಾತ್ವಿಕ ಜ್ಞಾನ ಮತ್ತು ಪ್ರಾತ್ಯಕ್ಷಿಕೆ, ಸರಕು, ಸಲಕರಣೆ, ಉಪಕರಣ ಮತ್ತು ಯಂತ್ರಗಳ ಬಗ್ಗೆ ಅಲ್ಲದೆ ಅದರಲ್ಲಿಯ ಪ್ರಕ್ರಿಯೆ, ನಡೆಸುವಿಕೆ ಮತ್ತು ವಿವಿಧ ಹಂತಗಳು, ಕೌಶಲ್ಯ ಮತ್ತು ತಾಂತ್ರಿಕತೆ, ವಸ್ತುಗಳ ಬೆಲೆಕಟ್ಟುವಿಕೆ, ಮಾರುಕಟ್ಟೆ ಜ್ಞಾನ ಮತ್ತು ಇದಕ್ಕೆ ಸಂಬಂಧಪಟ್ಟ ಇನ್ನುಳಿದ ವಿಧಾನಗಳ ಬಗ್ಗೆ ತರಬೇತಿ ನೀಡುವದು.

---

೩. Ray, W. Roberststs - Vocational and Practical Arts Education, Harper & Raw & John Weather Hill, Tokyo (2nd Ed) 1965.

೨. ಅಭ್ಯರ್ಥಿಗಳಗೆ, ಉದ್ಯೋಗ ಪ್ರವೃತ್ತಿ, ಮನೋಭಾವ, ಕಾರ್ಯ ಕುಶಲತೆ, ಕಾರ್ಯತತ್ಪರತೆ, ಉದ್ಯೋಗ ಜಾಣ್ಮೆಗಳೊಂದಿಗೆ ಅವರ ಕರಕುಶಲ ಕೈಗಾರಿಕೆಗಳನ್ನು ಸುಧಾರಿಸುವದು ಮತ್ತು ಮುಖ್ಯವಾಗಿ ಉದ್ಯೋಗ ಮಾರು ಕಟ್ಟೆಯಲ್ಲಿ ಬೇಡಿಕೆ ಇರುವಂತೆ ಅವರನ್ನು ಸಜ್ಜು ಮಾಡುವದು.

೩. ಉದ್ಯೋಗವಲ್ಲಿ ಒಳ್ಳೆಯ ಅಭಿರುಚಿ ಹುಟ್ಟಿಸುವದು.

೪. ವೃತ್ತಿಯಲ್ಲಿ ಆತ್ಮವಿಶ್ವಾಸ ಮತ್ತು ಅಭಿಮಾನ ಬೆಳೆಯುವಂತೆ ಮಾಡುವದು.

೫. ತರಬೇತಿ ಪಡೆದ ಅಭ್ಯರ್ಥಿಗಳನ್ನು ಒಗ್ಗೂಡಿಸಿ ಉದ್ಯೋಗ ಮುಂದು ವರಿಸಲೂಬಹುದು.

೬. ವೃತ್ತಿಯಲ್ಲಿ ಹೊಂದಿಕೊಂಡುಹೋಗುವಂತೆ ಅಭ್ಯರ್ಥಿಗಳನ್ನು ಸಜ್ಜು ಮಾಡುವದು ಇತ್ಯಾದಿ.

ವೃತ್ತಿತರಬೇತಿ ನೀಡುವಲ್ಲಿ ಕಿಶೋರರಿಗೆ, ತರುಣರಿಗೆ ಮತ್ತು ಇದರಿಂದ ಪ್ರಯೋಜನ ಪಡೆಯುವ ಇನ್ನಿತರರಿಗೆ ಮಹತ್ವ ಕೊಡುವದವಶ್ಯ.

ತರಬೇತಿ ಯೋಜನೆ

ಯಾರಿಗೆ ವೃತ್ತಿ ಸಾಮರ್ಥ್ಯವಿದೆಯೋ ಮತ್ತು ಯಾರಿಗೆ ಈ ಅವಕಾಶಗಳಿಂದ ಪ್ರಯೋಜನವಿದೆಯೋ ಅಂಥವರಿಗೆ ತರಬೇತಿ ಬೇಕೆಂದಂತಾಯಿತು. ಇದಕ್ಕೆ ವೃತ್ತಿ ಅಭಿರುಚಿಯ ಪರೀಕ್ಷೆಗಳು ಬೇಕು. ಅಂದರೆ ಅಭ್ಯರ್ಥಿಯ ಸಾಮರ್ಥ್ಯ, ಬೌದ್ಧಿಕ ಮಟ್ಟ ಮತ್ತು ಜಾಣ್ಮೆ, ವೃತ್ತಿ ಒಲವುಗಳನ್ನು ತಿಳಿಯಲು ಬೌದ್ಧಿಕ ಪರೀಕ್ಷೆ, ವೃತ್ತಿ ಅಭಿರುಚಿ–ಪರೀಕ್ಷೆಗಳನ್ನು ಇಡಬೇಕು.

ವೃತ್ತಿಮಾರ್ಗದರ್ಶನ

ವೃತ್ತಿ ಆಯ್ಕೆ ಮಾಡುವದರಿಂದ ಪ್ರಾರಂಭಿಸಿ, ಅಭ್ಯರ್ಥಿಗಳಿಗೆ ಅವರ ಬೇಡಿಕೆ, ಮತ್ತು ಸಾಮರ್ಥ್ಯಗಳ ಬಗ್ಗೆ, ತರಬೇತಿ ಯೋಜನೆ ಸೌಲಭ್ಯ ಅಲ್ಲದೆ ತರಬೇತಿ ಪಡೆದು ಬಂದ ನಂತರ ಸ್ವಂತ ಉದ್ಯೋಗ ಮಾಡಲು ಬಯಸುವವರಿಗೆ, ನೌಕರಿ ಮಾಡಲು ಇಚ್ಛಿಸಿದವರಿಗೆ ಅವರಿಗೆ ಬೇಕಾಗುವ ನೆರವು, ಭಂಡವಲು ಸೌಲಭ್ಯ, ಉದ್ಯೋಗ ಸೌಲಭ್ಯ ಅಲ್ಲದೆ ವೃತ್ತಿಯೊಡನೆ ಹೊಂದಿಕೊಳ್ಳಲು

ಬೇಕಾಗುವ ವಿಷಯಗಳವರೆಗೂ ಮಾರ್ಗದರ್ಶನ, ಸಲಹೆ ನೀಡಬೇಕಾಗು ವದು.

ತರಬೇತಿ ಆಧಾರ

ಅಭ್ಯರ್ಥಿಗಳ ಆಯ್ಕೆ ಬಗೆಗೆ ಯೋಜನೆ ಮಾಡುವಾಗ ಕೆಲವೊಂದು ಅಂಶ ಗಳ ಅವಗಾಹನೆ ಅವಶ್ಯ. ಅವು ಯಾವುವೆಂದರೆ ೧) ಭದ್ರತೆ ಮತ್ತು ಶಿಸ್ತು ೨) ವಯಸ್ಸು ೩) ತರಬೇತಿಗಾಗಿ ಇರುವ ಅವಧಿ ೪) ಭೌತಿಕ ಮತ್ತು ಬೌದ್ಧಿಕ ಸಾಮರ್ಥ್ಯ ೫) ಬೌದ್ಧಿಕ ಪರೀಕ್ಷೆ ಮತ್ತು ವೃತ್ತಿ ಅಭಿರುಚಿ ಪರೀಕ್ಷೆ ಗಳ ಪರಿಣಾಮ ೬) ಪೂರ್ವಭಾವಿ ವೃತ್ತಿ ಅನುಭವ ೭) ಶೈಕ್ಷಣಿಕ ಹಿನ್ನೆಲೆ ೮) ಇಂಥ ತರಬೇತಿ ಯೋಜನೆಗಳಿಂದ ಪ್ರಯೋಜನ ಪಡೆಯುವ ಸಾಮರ್ಥ್ಯ. ೯) ವೃತ್ತಿ ಒಲವು ೧೦) ನಗರದ ಇಲ್ಲವೆ ಗ್ರಾಮೀಣ ಕ್ಷೇತ್ರದಲ್ಲಿ ಅಭ್ಯರ್ಥಿಯು ಉದ್ಯೋಗ ಪ್ರಾರಂಭಿಸುತ್ತಿದ್ದರೆ ಅಲ್ಲಿಯ ಉದ್ಯೋಗಾವಕಾಶಗಳು ಮತ್ತು ೧೧) ಉದ್ಯೋಗಕ್ಕೆ ಇರುವ ಬೇಡಿಕೆ ಮಾನವ ಶಕ್ತಿ, ಸಂಪನ್ಮೂಲಗಳು ಇತ್ಯಾದಿ ಗಳ ಆಧಾರದ ಮೇಲೆ ವೃತ್ತಿ ತರಬೇತಿ ಯೋಜನೆ ಹಾಕಿಕೊಳ್ಳಬೇಕು.

ಈ ವೃತ್ತಿ ತರಬೇತಿ ಯೋಜನೆಯನ್ನು ೫-೬ ಕ್ಷೇತ್ರಗಳಲ್ಲಿ ವಿಂಗಡಿಸ ಬಹುದು.

೧) ಯಾಂತ್ರಿಕ ಉದ್ದಿಮೆ ೨) ಸಣ್ಣ ಪ್ರಮಾಣದ ಉದ್ದಿಮೆ ೩) ಕುಟೀರ ಹಾಗೂ ಗ್ರಾಮೋದ್ಯೋಗ ೪) ಕರಕುಶಲ ಕೈಗಾರಿಕೆ ೫) ಕೃಷಿ ಅದಕ್ಕೆ ಸಂಬಂಧಪಟ್ಟ ಕ್ಷೇತ್ರಗಳು ೬) ಆವಶ್ಯಕ ಸೇವಾಭಾಗ, (ಹೋಟಲ್, ಸಲೂನ್ ಇತ್ಯಾದಿ) ಮತ್ತು ಕಟ್ಟಡ, ಬಾವಿ ರಿಪೇರಿ ಇತ್ಯಾದಿ.

ವಿಷಯಸೂಚಿ

ವೃತ್ತಿ ತರಬೇತಿ ಯೋಜನೆಗಳಿಗೆ ಅಧ್ಯಯನಕ್ರಮ, ಅವಧಿ ಮತ್ತು ವೇಳಾ ಪತ್ರಿಕೆಗಳು ಅಭ್ಯರ್ಥಿಗಳ ವೃತ್ತಿ ಸಾಮರ್ಥ್ಯ ಮತ್ತು ಶೈಕ್ಷಣಿಕ ಹಿನ್ನೆಲೆಗಳಿಗೆ ಯೋಗ್ಯವಾದ ರೀತಿಯಲ್ಲಿ ರೂಪಿತವಾಗಬೇಕು.

ತರಬೇತಿಗೆ, ತಾತ್ವಿಕ ಸಲಹೆ ನೀಡಲು ವರ್ಗ, ಪ್ರಾತ್ಯಕ್ಷಿಕೆಯ ಮಾರ್ಗ ದರ್ಶನ, ದಾರ್ಶನಿಕ ಶಿಕ್ಷಣ ಮುಂತಾದವುಗಳ ವ್ಯವಸ್ಥೆ ಬೇಕು. ಇವಕ್ಕೆ, ಪ್ರಯೋಗಶಾಲೆ, ವರ್ಗಕೋಣೆ (Class-room) ಉಪಕರಣ, ಸಾಧನ ಸಲಕರಣೆ, ಸಿಬ್ಬಂದಿಯು ಅವಶ್ಯ.

ಪ್ರಗತಿಯ ಬಗ್ಗೆ ವರದಿ

ವೃತ್ತಿ ತರಬೇತಿಗೆ ಸಂಬಂಧಪಟ್ಟ ತಾಂತ್ರಿಕ ಸಿಬ್ಬಂದಿಯು ಪ್ರತಿಯೊಬ್ಬ ಅಭ್ಯರ್ಥಿಯ ಪ್ರಗತಿಯ ಬಗ್ಗೆ ವರದಿ ಇಡಬೇಕು. ಇದನ್ನು ಆಗಾಗ ಪುನರ್ವೀಕ್ಷಣೆ ಮಾಡುವದವಶ್ಯ.

ಪರೀಕ್ಷೆಗಳು

ಆಯಾ ಸಂಸ್ಥೆಗಳು, ವೃತ್ತಿ ತರಬೇತಿಯ ಕೊನೆಗೆ ಪರೀಕ್ಷೆಗಳನ್ನು ಇಟ್ಟು ತೇರ್ಗಡೆ ಹೊಂದಿದವರಿಗೆ ಪ್ರಮಾಣ ಪತ್ರ, ಶಿಫಾರಸು ಪತ್ರ ಕೊಡಬೇಕು. ಪ್ರಗತಿ ಪರರಿಗೆ ಬಹುಮಾನ ಕೊಡಬೇಕು ಅಲ್ಲದೆ ಎಲ್ಲರಿಗೂ ಸ್ಕಾಲರ್‌ಶಿಪ್, ಸ್ಟೈಪೆಂಡು ಗಳನ್ನು ಕೊಡಬೇಕು.

ವೃತ್ತಿ ತರಬೇತಿಯಲ್ಲಿ ಸಮುದಾಯದ ಎಲ್ಲ ಸಂಬಂಧಪಟ್ಟ ಸಂಸ್ಥೆಗಳ ಸಹಕಾರ ಅವಶ್ಯ. ಇಲ್ಲಿ ಒಂದು ಸ್ಥಾನಿಕ ಸಮಿತಿ ಇರಬೇಕು. ಅಂದರೆ ಇದು ತಾಂತ್ರಿಕ ತರಬೇತಿ ಸಂಸ್ಥೆ, ಶೈಕ್ಷಣಿಕಸಂಸ್ಥೆ, ಕೃಷಿ ವಿಭಾಗ, ವಾಣಿಜ್ಯ, ಉದ್ದಿಮೆ ಸಂಸ್ಥೆಗಳು ಅಲ್ಲದೆ ವೃತ್ತಿ ಮಾರ್ಗದರ್ಶನ ಸಂಸ್ಥೆ, ಉದ್ಯೋಗವಿನಿಮಯ ಕಚೇರಿ ಮತ್ತು ಧನ ಸಹಾಯ ಸಂಸ್ಥೆಗಳ ನಡುವೆ ಕೊಂಡಿಯಾಗಿ ಕೆಲಸ ಮಾಡಿದರೆ, ತರಬೇತು ನೀಡಲು ಅಲ್ಲದೆ ಉದ್ಯೋಗ ಕೈಕೊಳ್ಳಲು, ಸಹಾಯ ವಾಗುತ್ತದೆ.

ಇದೇ ರೀತಿ ಉಮೇದುವಾರಿಕೆ, ವೃತ್ತಿಯಲ್ಲಿರುವಾಗಲೇ ತರಬೇತಿ ನೀಡು ವಲ್ಲೂ ಸೌಲಭ್ಯಗಳು ಬೇಕು. ವೃತ್ತಿಯನ್ನು ಮುಂದುವರಿಸಲಿಕ್ಕೆ ಅದರ ಪ್ರಯೋಜನ ಪಡೆಯಲಿಕ್ಕೆ ತರಬೇತಿಯೊಂದೇ ಸಾಲದು. ಶ್ರದ್ಧೆ, ಶ್ರಮಗೌರವ, ಪ್ರಾಮಾಣಿಕತೆ, ಉತ್ಸಾಹ, ಉತ್ಪನ್ನ ಹೆಚ್ಚಿಸುವ ಗುಣಮಟ್ಟ ಎತ್ತರಿಸುವ ಕಾರ್ಯ ದಕ್ಷತೆಯೂ ಬೇಕು. ಮಾರಾಟ ಮಾಡುವಕಲೆ, ಕೌಶಲ್ಯ,ಮಾರುಕಟ್ಟೆಯ ವಿಜ್ಞಾನ ಇವೆಲ್ಲವು ಅಷ್ಟೇ ಅವಶ್ಯ. ತರಬೇತು ಇವೆಲ್ಲವುಗಳನ್ನು ಒಳಗೊಂಡಿರುತ್ತದೆ.

ವೃತ್ತಿ ಕೌಶಲ್ಯ

ವೃತ್ತಿ ಕೌಶಲ್ಯ ಅಂದರೆ ತರಬೇತು ಪಡೆವ ವೃತ್ತಿಯಲ್ಲಿ ಅಥವಾ ಆಯ್ದು ಕೊಂಡ ವೃತ್ತಿಯಲ್ಲಿ ನೈಪುಣ್ಯತೆ ಪಡೆಯುವದು ಎಂದರ್ಥ. ಆಧುನಿಕ ಯುಗದಲ್ಲಿ ಪ್ರತಿವೃತ್ತಿಗೂ ನೈಪುಣ್ಯತೆಬೇಕು. ಉದಾಹರಣೆಗೆ ಟ್ರ್ಯಾಕ್ಟರ ನಡೆಸುವಲ್ಲಿ

ಸ್ಟೇರಿಂಗ್, ಬ್ರೆಕ್‌ಗೇರ್‌ಗಳ ಮೇಲೆ ಕೆಲಸ ಮಾಡುವಾಗ ಕೈಗಳು ಕಾಲುಗಳು ಸಮಯಕ್ಕೆ ಸರಿಯಾಗಿ ಕೆಲಸ ಮಾಡಬೇಕಾಗುವದು. ಕೈಗಳು ತಮ್ಮ ಕೆಲಸ ಮಾಡಿ ಕಾಲುಗಳು ನಿಂತರೆ ಸರಿಯಲ್ಲ. ಕಾಲುಗಳು ಕೆಲಸ ಮಾಡಿ ಕೈಗಳು ನಿಂತರೂ ಸರಿಯಲ್ಲ. ಇಲ್ಲಿ ನೈಪುಣ್ಯತೆಯು ಅವಶ್ಯಕತೆ ಇದೆ. ಇದರಂತೆ ಮೆಕ್ಯಾನಿಕ್, ರೇಡಿಯೊ, ಟ್ರಾನ್ಸಿಸ್ಟರ್ ರಿಪೇರಿ ಇತ್ಯಾದಿಗಳಲ್ಲೂ ಕೌಶಲ್ಯಬೇಕು. ಕೆಲವು ವೃತ್ತಿಗಳಲ್ಲಿ ಎರಡೂ ಕೈಗಳೂ ಕೆಲಸ ಮಾಡಬೇಕಾಗುತ್ತದೆ. ಉದಾಹರಣೆಗೆ ಪಿಯಾನೋ ನುಡಿಸುವದು, ಇಲ್ಲಿ ಸಂಗೀತಗಾರನು ಒಂದು ಕೈಯಿಂದ ತಿದಿ ಹಾಕುತ್ತ ಇನ್ನೊಂದು ಕೈಯಿಂದ ಸೂರುಗಳ ಪಟ್ಟಿಗಳ ಮೇಲೆ ಕೆಲಸ ಮಾಡಬೇಕು. ಅಂದರೆ ಒಳ್ಳೆಯ ನಾದ, ಮಾಧುರ್ಯ ಬರಲು ಸಾಧ್ಯ. ಒಂದು ಕೈ ನಿಂತರಾಗಲಿ ಎರಡೂ ಕೈಗಳೂ ಬೇಕಾದ ಹಾಗೆ ಚಲಿಸಿದರಾಗಲಿ ಮಾಧುರ್ಯ ಬರುವದಿಲ್ಲ. ಕಾರಣ ಇಲ್ಲಿ ನೈಪುಣ್ಯತೆ ಅವಶ್ಯ.

ಕಾಲಕ್ಕೆ ತಕ್ಕಂತೆ, ಬೇಡಿಕೆಗೆ ತಕ್ಕಂತೆ ವೃತ್ತಿಗಳು ಅವುಗಳಲ್ಲಿ ತರಬೇತು ಬೇಕು. ಕಾರಣ ಒಂದಕ್ಕಿಂತ ಹೆಚ್ಚು ವೃತ್ತಿಗಳಲ್ಲಿ ತರಬೇತು ಪಡೆಯುವದು ಒಳಿತು. ಒಂದರಲ್ಲಿ ಬೇಡಿಕೆ ಇಲ್ಲದಿರುವಾಗ ಬೇಡಿಕೆ ಇರುವ ಇನ್ನೊಂದು ವೃತ್ತಿಯನ್ನು ಅನುಸರಿಸಬಹುದು.

ವೃತ್ತಿಯಲ್ಲಿ ನೈಪುಣ್ಯತೆಯಿದ್ದರೆ, ಬೇಡಿಕೆಗೆ ತಕ್ಕಂತೆ ಫ್ಯಾಶನ್ನಿಗೆ ತಕ್ಕಂತೆ ವಸ್ತುಗಳನ್ನು ಉತ್ಪಾದಿಸಬಹುದು. ಉದಾಹರಣೆಗೆ ಹೊಲಿಗೆಯಲ್ಲಿ ನೈಪುಣ್ಯತೆ ಇದ್ದರೆ ಫ್ಯಾಶನ್ನಿಗೆ ತಕ್ಕಂತೆ ಉಡುಗೆಗಳನ್ನು ಹೊಲಿಯಬಹುದು; ಹೊಸ ಹೊಸ ಮಾದರಿಗಳನ್ನು ನಿರ್ಮಿಸಲೂಬಹುದು. ಇದರಂತೆ ಚಮ್ಮಾರಿಕೆ ಇತ್ಯಾದಿಗಳಲ್ಲೂ ನೈಪುಣ್ಯತೆ ಪಡೆಯಬೇಕು.

ಯಾವ ಉದ್ಯೋಗವೂ ಕೀಳಾದುದಲ್ಲ. "ಚೌರಿ ಹಿಡಿದರೆ ಮೇಲೇ? ಪೊರಕೆ ಹಿಡಿದರೆ ಕೀಳೇ?" ಎಂದು ರಾಷ್ಟ್ರಕವಿ ಕುವೆಂಪು ಅವರು ಕೇಳಿದ್ದಾರೆ. ಕಾರಣ ಚೌರಿ, ಪೊರಕೆಗಳೆರಡನ್ನೂ ಸಮಯಾನುಸಾರವಾಗಿ ಹಿಡಿದರೆ ಜೀವನ ಹಸನಾಗುತ್ತದೆ; ನೆಮ್ಮದಿ ನೆಲೆಸುತ್ತದೆ. ಇವೆರಡರಲ್ಲಿ ತಾರತಮ್ಯ ಕಲ್ಪಿಸಿಕೊಂಡು ಮೇಲಾದುದೆಂದು ಯಾವದೊಂದನ್ನು ಹಿಡಿದು ಓಡಿ ದೇಶದ ಆರ್ಥಿಕ ಅಭಿವೃದ್ಧಿಗೆ ಅಡ್ಡಿಯಾದದ್ದು ಉಂಟು. ನಮ್ಮ ದೇಶದಲ್ಲಿ ಜಾತೀಯತೆ, ಮೂಢ ನಂಬಿಕೆಗಳೂ ಎಷ್ಟೋ ಮಾರಕವಾಗಿವೆ ಎಂದು ಅರ್ಥಶಾಸ್ತ್ರಜ್ಞರು, ಸಮಾಜ ಶಾಸ್ತ್ರಜ್ಞರು ಹೇಳುತ್ತಾ ಬಂದಿದ್ದಾರೆ. ಜಾತಿಯ ಆಧಾರದ ಮೇಲೆ ಉದ್ಯೋಗಗಳನ್ನು ಆಯ್ಕೆ ಮಾಡಿದರೆ ಹಿತವಲ್ಲ. ಅಲ್ಲದೆ ಅಪ್ಪ ವೈದ್ಯನಾದರೆ ಮಗನೂ

ವೈದ್ಯನಾಗಬೇಕೆಂದರೆ ನಿರುದ್ಯೋಗವೆಂಬ ಸಾಮಾಜಿಕ ವ್ಯಾಧಿ ಇನ್ನೂ ಬಾಧಿಸುತ್ತದೆ. ಓದಿ ಒಳ್ಳೆಯ ಕೆಲಸ ಪಡೆಯಲಾರದವನೂ ಏನಕೇನ ಪ್ರಕಾರೇಣ ಅದನ್ನು ದೊರಕಿಸಲು ಹೋಗುತ್ತಾನೆ. ಇದಾಗದ ದುರ್ದೈವಿಗಳು ಹಾಗೇ ಅಲೆಯಬೇಕಾಗುತ್ತದೆ. ಹಲಕೆಲ ಕಾರಣಗಳಿಂದ ಓದುವ ಅಭಿರುಚಿ ಇಲ್ಲದವರು, ಅವಕಾಶವಿಲ್ಲದವರು ವೃತ್ತಿ ತರಬೇತಿ ಪಡೆದು ಉದ್ಯೋಗಸ್ಥರಾಗುವದು ಒಳ್ಳೆಯದು. ಶ್ರಮಿಕ ವೃತ್ತಿಯಲ್ಲೂ ಹೆಚ್ಚು ಆದಾಯ ತೆಗೆಯಬಹುದು.

ಇತ್ತಿತ್ತಲಾಗಿ ವೃತ್ತಿ ಒಲವುಳ್ಳ ಶಿಕ್ಷಣ ಖಂಡಿತವಾಗಿ ಬೇಕಾಗಿದೆ. ಇಂದು ಇಡೀ ಜಗತ್ತಿನಲ್ಲಿಯೇ ವೃತ್ತಿ ಶಿಕ್ಷಣದ ಬಗ್ಗೆ ಅಭ್ಯರ್ಥಿಗಳನ್ನು ಹುರಿದುಂಬಿಸಬೇಕಾಗಿದೆ. ಪ್ರತಿಯೊಬ್ಬ ವ್ಯಕ್ತಿಯು ತನ್ನ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಮಟ್ಟವನ್ನು ತನ್ನ ಶಕ್ತ್ಯಾನುಸಾರ ಸುಧಾರಿಸಿಕೊಳ್ಳುವ ಬಗ್ಗೆ ಎಚ್ಚತ್ತಿರಬೇಕಾಗಿದೆ. ಮತ್ತು ತರಬೇತಿಯ ಮಹತ್ವವನ್ನು ತಿಳಿದು ರಾಷ್ಟ್ರದ ಸ್ಥಿತಿಯ ಸುಧಾರಣೆಗೆ ಒಳ್ಳೆಯ ತರಬೇತು ಪಡೆದ ಶ್ರಮಜೀವಿಗಳನ್ನು ನೀಡಬೇಕಾಗಿದೆ. ಕಾರಣ ಇಂದು ತರುಣನು ತನ್ನ ಜೀವನೋಪಾಯಕ್ಕೆ, ಸಾಮಾಜಿಕ ಸಾಂಸ್ಕೃತಿಕ ಆರ್ಥಿಕ ಮಟ್ಟವನ್ನು ಎತ್ತರಿಸಲಿಕ್ಕೆ ವೃತ್ತಿತರಬೇತಿಯ ಬಗ್ಗೆ ವಿಚಾರಿಸುವದು ಅವಶ್ಯವಾಗಿದೆ.

ವೃತ್ತಿಗಳಿಗೆ ಶೈಕ್ಷಣಿಕ ಹಿನ್ನೆಲೆ ಇದ್ದರೆ ಒಳಿತು. ಕೆಲ ವೃತ್ತಿಗಳಿಗೆ ಕುಶಲತೆ, ಕರಕುಶಲತೆಗಳು ಬೇಕು. ಮತ್ತೆ ಕೆಲವಕ್ಕೆ ಜಾಣ್ಮೆ ಬೇಕು. (ಒಟ್ಟಾರೆ ಎಲ್ಲ ವೃತ್ತಿಗೂ ನೈಪುಣ್ಯತೆ ಬೇಕು.) ಕೆಲವು ಸಾಮೂಹಿಕವಾಗಿ ನಡೆಸುವ ಉದ್ಯೋಗಗಳಿವೆ. ಇನ್ನು ಕೆಲವು ವೈಯಕ್ತಿಕವಾಗಿ ನಡೆಸಬಹುದಾದವು. ಈ ಪ್ರಕಾರವಾಗಿ ವೃತ್ತಿವರ್ಗೀಕರಣ ಮಾಡಿ ಈ ವರ್ಗೀಕರಣಕ್ಕೆ ಸಮಾಂತರವಾಗಿ ಅವಕ್ಕೆ ಬೇಕಾಗುವ ಹಿನ್ನೆಲೆಗಳನ್ನೊಳಗೊಂಡ ಅಭ್ಯರ್ಥಿಗಳ, ಮಾನವಶಕ್ತಿ ಜಾಣ್ಮೆಯ ಪಟ್ಟಿಯೂ ತಯಾರಾಗಬೇಕು. ನಂತರ ಯಾವುದರಲ್ಲಿ ಬೇಡಿಕೆ ಇದೆಯೋ ಅದರಲ್ಲಿ ತರಬೇತಿ ವ್ಯವಸ್ಥೆ, ಅಲ್ಲದೆ ಅದಕ್ಕೆ ತಕ್ಕ ತಾಂತ್ರಿಕ ಸಿಬ್ಬಂದಿ, ಉಪಕರಣ, ಇತರ ಸೌಲಭ್ಯಗಳನ್ನು ಅಣಿಗೊಳಿಸುವದು ಅವಶ್ಯ. ಸ್ವಯಂ ಉದ್ಯೋಗ ಕೈಕೊಳ್ಳಬಹುದು ಇಲ್ಲವೇ ನೌಕರಿಯನ್ನೂ ಮಾಡಬಹುದು. ಸ್ವಯಂ ಉದ್ಯೋಗ ಕೈಕೊಂಡರೆ ಕಚ್ಚಾ ಸರಕು ಮಾರುಕಟ್ಟೆಗೆ ಕಳಿಸುವ ಸೌಲಭ್ಯ ಇತ್ಯಾದಿಗಳನ್ನು ಅನುಲಕ್ಷಿಸಬೇಕು.

ಇದರಲ್ಲಿ ಪ್ರಾಥಮಿಕ, ಮಾಧ್ಯಮಿಕ ಶಾಲೆಗಳು, ತಾಂತ್ರಿಕ ಹಾಗು ವೃತ್ತಿ ತರಬೇತಿ ಸಂಸ್ಥೆಗಳು, ಶಿಕ್ಷಣಾಧಿಕಾರಿಗಳು, ವೃತ್ತಿಮಾರ್ಗದರ್ಶನ ಕೇಂದ್ರ

ಗಳು, ನೌಕರ ಮತ್ತು ಕೂಲಿಕಾರ ಸಂಘಗಳು ಮತ್ತು ವಾಣಿಜ್ಯ ಉದ್ದಿಮೆ ಸಂಘಗಳು ಉದ್ಯೋಗ ಪಡೆಯಲಿಕ್ಕೆ, ತರಬೇತಿ ಪಡೆಯಲಿಕ್ಕೆ ಜ್ಞಾನ ನೀಡುವ ಸೌಲಭ್ಯಗಳ ಬಗ್ಗೆ ಮಾರ್ಗದರ್ಶನ ಮಾಹಿತಿಯನ್ನು ಒದಗಿಸಬೇಕು. ಅಂದರೆ ಈ ಸಂಘ–ಸಂಸ್ಥೆಗಳು ತಮ್ಮ ತಮ್ಮ ದೃಷ್ಟಿಗನುಸಾರವಾಗಿ ಯಾವುದೇ ಉದ್ಯೋಗಕ್ಕೆ ಅವಶ್ಯವೆನಿಸಿದ ತರಬೇತಿಗಳ ಬಗ್ಗೆ, ಅಭ್ಯರ್ಥಿಗಳ ಸ್ಥಳದಲ್ಲಿ ಇದಕ್ಕೆ ಸೌಲಭ್ಯಗಳೇನಿವೆ ಎನ್ನುವ ಬಗ್ಗೆ ಮತ್ತು ಅಭ್ಯರ್ಥಿಗಳಿಗೆ ದೊರೆಯುವ ಆರ್ಥಿಕ ಇನ್ನಿತರ ನೆರವಿನ ಬಗ್ಗೆ ಮಾಹಿತಿ ಒದಗಿಸಬೇಕು. ಹೀಗೆ ದೊರೆಯುವ ವಿಷಯ ಸಕಾಲಿಕವಾಗಿರಬೇಕು, ಸವಿಸ್ತಾರವಾಗಿರಬೇಕು. ಆ ಬಗ್ಗೆ ವಿಷಯ ಸಂಗ್ರಹಣೆಯು ಅಚ್ಚುಕಟ್ಟಾಗಿ, ಸತತವಾಗಿ ನಡೆಯುತ್ತಿರಬೇಕು. ಅಂದರೆ ಆಗಾಗ ಸಮೀಕ್ಷೆ ನಡೆದು ಹೊಸ ಹೊಸ ಬೇಡಿಕೆಗಳಿಗೆ ತಕ್ಕಂತೆ ಹೊಸ ಹೊಸ ವೃತ್ತಿಗಳಲ್ಲಿ ತರಬೇತಿ ನೀಡುವ ವ್ಯವಸ್ಥೆ ಮಾಡಲು ಸಾಧ್ಯ. ಮನುಷ್ಯಶಕ್ತಿ ವೃತ್ತಿ ಬೇಡಿಕೆಗಳ ಸಮೀಕ್ಷೆ ನಡೆಯಬೇಕು. ಫ್ರಾನ್ಸ ಮತ್ತು ಇನ್ನಿತರ ರಾಷ್ಟ್ರಗಳು ಈ ರೀತಿ ಮಾಡುತ್ತವೆ.

ಭಾರತದಲ್ಲಿ ತರಬೇತಿಸೌಲಭ್ಯ

ಈಗ ನಮ್ಮ ದೇಶದಲ್ಲಿ ಎಸ್. ಎಸ್. ಎಲ್. ಸಿ. ಪಾಸಾದ ನಂತರ ಅನೇಕ ವೃತ್ತಿತರಬೇತಿ ನೀಡುವ ಸಂಸ್ಥೆಗಳಿವೆ. ಉದಾಹರಣೆಗೆ ಔದ್ಯೋಗಿಕ ತರಬೇತಿ ಸಂಸ್ಥೆ (I. T. I.), ಪಾಲಿಟೆಕ್ನಿಕ್ ಸಂಸ್ಥೆ, ಅಲ್ಲದೆ, ದಾಯಿ, ಕೃಷಿ, ಉದ್ದಿಮೆ ತರಬೇತಿ ಸಂಸ್ಥೆಗಳು. ಇವಲ್ಲದೆ, ಹೊಸ ಹೊಸ ಬೇಡಿಕೆಗಳಿಗನುಸಾರವಾಗಿ ಹೆಚ್ಚಿನ ವೃತ್ತಿಗಳಲ್ಲಿ ತರಬೇತಿ ಸೌಲಭ್ಯ ನೀಡಲು ದೇಶದಲ್ಲಿ ಕೆಲವು ಪ್ರಾಯೋಗಿಕ (Pilot) ಯೋಜನೆಗಳು ಬಂದಿವೆ.

ವೃತ್ತಿಪೂರ್ವ ತರಬೇತಿಗೆಂದು ಪಂಚವಾರ್ಷಿಕ ಯೋಜನೆಯಲ್ಲಿ ೩೦ಕ್ಕೂ ಮಿಕ್ಕಿ ತರಬೇತಿ ಕೇಂದ್ರಗಳನ್ನು ಸರಕಾರ ಸ್ಥಾಪಿಸಿದೆ. ಇಲ್ಲಿ ೧೧ ರಿಂದ ೧೪ ವರ್ಷದೊಳಗಿನ ಮಕ್ಕಳು, ಯಾರು ಶಾಲೆ ಬಿಟ್ಟು ಶಿಕ್ಷಣ ನಿಲ್ಲಿಸಿರುತ್ತಾರೋ ಅವರಿಗೆ ತರಬೇತಿ ಇದೆ. ಅವರಿಗೆ ಸಾಮಾನ್ಯ ಶಿಕ್ಷಣವನ್ನೊಳಗೊಂಡು ಮೂರು ವರ್ಷದ ಅವಧಿಯ ವೃತ್ತಿತರಬೇತಿ ವ್ಯವಸ್ಥೆ ಇದೆ. ಇಲ್ಲಿ ಏಳು ವೃತ್ತಿಗಳಲ್ಲಿ ತರಬೇತಿ ಪಡೆಯಬಹುದು. ಅವು ಯಾವವೆಂದರೆ ಫಿಟ್ಟಿಂಗ್, ಶೀಟ್ ಮೆಟಲ್ ವರ್ಕ್, ಗ್ಯಾಸ್ ವೆಲ್ಡಿಂಗ್, ಕಮ್ಮಾರಿಕೆ, ಬಡಿಗತನ, ಮೌಲ್ಡಿಂಗ್ ಹಾಗು ಟರ್ನಿಂಗ್.

ಇನ್ನು, ಗ್ರಾಮೀಣ ಪ್ರದೇಶದಲ್ಲಿ, ನೂರಕ್ಕೆ ೭೦ ರಷ್ಟು ಜನ ಒಕ್ಕಲುತನವನ್ನು ಅವಲಂಬಿಸಿದ್ದರು. ಈಗ ೧೯೭೬ ರ ಸುಮಾರಿಗೆ ನೂರಕ್ಕೆ ೬೦ ರಷ್ಟು ಇರಬಹುದೆಂದು ಲೆಕ್ಕ ಮಾಡಲಾಗಿದೆ. ಏನೇ ಆದರೂ ಇಲ್ಲಿ ಪೂರ್ಣ ಉದ್ಯೋಗವಿಲ್ಲ, ಅಂದರೆ ಹನ್ನೆರಡು ತಿಂಗಳೂ ಕೆಲಸವಿಲ್ಲ. ಅಲ್ಲದೆ ಒಕ್ಕಲುತನಕ್ಕೆ ಅವಶ್ಯವಿರುವವಕ್ಕಿಂತ ಹೆಚ್ಚು ಜನರು ಇಲ್ಲಿ ಇದ್ದಾರೆ. "ಕೋಟಿ ವಿದ್ಯೆಯಲ್ಲಿ ಮೇಟಿ ವಿದ್ಯೆಯೇ ಮೇಲು" ಎಂದು ಮೇಟಿ ಹಿಡಿದು ಸುತ್ತು ಹಾಕುತ್ತಿದ್ದಾರೆ. ಈಗ ಅಲ್ಲಲ್ಲಿ ಸ್ವಲ್ಪ ಎಚ್ಚತ್ತಿದ್ದಾರೆ. ಒಕ್ಕಲುತನಕ್ಕೆ ಮಿಕ್ಕಿ ಉಳಿದವರು ಎಲ್ಲಿಗೆ ಹೋಗಬೇಕು ? ನಗರಗಳಿಗೆ ಹೋಗಬೇಕೇ ? ಅದೂ ಸರಿಯಲ್ಲ, ಹಾಗಾದರೆ ಹಳೆಯ ಪದ್ಧತಿಯಂತೆ ಮೇಟಿ ಹಿಡಿಯಬೇಕೇ, ಅದೂ ಆಗದು. ಹಾಗಾದರೆ ಗ್ರಾಮೀಣ ಪ್ರದೇಶದಲ್ಲಿ ಏನು ಮಾಡುವದು ? ಹಳ್ಳಿಯಲ್ಲಿ ಹತ್ತಿ ಬೆಳೆದು ನಗರಗಳಲ್ಲಿ ಬಟ್ಟೆ ಹುಡುಕಬೇಕೇ ? ಹಳ್ಳಿಯಲ್ಲಿ ಕುಸುಬಿ, ಸೇಂಗಾ ಬೆಳೆದು ಒಳ್ಳೆಣ್ಣೆಯನ್ನು ನಗರದಿಂದ ತರಿಸುವಂತಾಗಬೇಕೇ ? ಓದಿ ಹಳ್ಳಿಯಲ್ಲಿದ್ದವನು ಹೇರ್‌ಡ್ರೆಸ್ಸಿಂಗಿಗೆ ದೊಡ್ಡ ನಗರಕ್ಕೆ ಹೋಗಬೇಕೇ ? ಹಾಗಾದರೆ ಇವಕ್ಕೆ ಉತ್ತರ ಇವೆಯೇ ? ಕೈಯಲ್ಲಿ ಬೆಣ್ಣೆ ಇಟ್ಟುಕೊಂಡು ತುಪ್ಪಕ್ಕೆ ಪರಊರಿಗೆ ಹೋಗುವಂತಾಗಬಾರದು. ನಮ್ಮ ಗ್ರಾಮೀಣ ಪ್ರದೇಶಗಳಲ್ಲಿ ಕರಕುಶಲ ಕೈಗಾರಿಕೆ, ಕುಟೀರ ಕೈಗಾರಿಕೆ, ಗ್ರಾಮೋದ್ಯೋಗ, ಕೃಷಿ ಉದ್ದಿಮೆ, ಹತ್ತಿ, ರೇಶಿಮೆ, ಉಣ್ಣೆ, ನೇಯುವದು, ಕುಟೀರ ಕಡ್ಡಿಪೆಟ್ಟಿಗೆ ತಯಾರು ಮಾಡುವದು, ವಿದ್ಯುತ್ ಚಾಲಿತ ಮಗ್ಗ ಇತ್ಯಾದಿಗಳು ಇವೆ. ಇವಲ್ಲದೆ, ಕಮ್ಮಾರಿಕೆ, ಕುಂಬಾರಿಕೆ, ಬಡಿಗತನ, ಅಕ್ಕಸಾಲಿ, ಚಮ್ಮಾರಿಕೆ, ಕ್ಷೌರಿಕೆ, ಗೌಂಡೀ ಕೆಲಸ, ಗಾಣಿಗತನ ಒಂದೇ ಎರಡೇ ಹಲವಾರು ಉದ್ಯೋಗಗಳಿವೆ. ಆದರೆ ಇವುಗಳಲ್ಲಿ ಬಹಳಷ್ಟು ಉದ್ಯೋಗಗಳಿಗೆ ಇಲ್ಲಿ ಬೇಡಿಕೆ ಇಲ್ಲ. ಏಕೆಂದರೆ ಇಲ್ಲಿ ಸಾಂಪ್ರದಾಯಿಕವಾದ ಪದ್ಧತಿಯಲ್ಲಿ ವಸ್ತುಗಳು ಉತ್ಪಾದಿಸಲ್ಪಡುತ್ತವೆ. ಇವುಗಳನ್ನು ಸುಧಾರಿಸಲೂ ಮತ್ತೆ ಕೈಕೊಳ್ಳಲೂ ಅವಕಾಶವಿದೆ. ಈಗ ಹೆಚ್ಚಿನ ಹಳ್ಳಿಗಳಿಗೆ ವಿದ್ಯುತ್ ಶಕ್ತಿಯನ್ನು ಒದಗಿಸಲಾಗಿದೆ. ವಿದ್ಯುತ್ ಚಾಲಿತ ಯಂತ್ರಗಳನ್ನು ಕೆಲವು ಉದ್ಯೋಗಗಳಿಗೆ ಉಪಯೋಗಿಸಬೇಕು. ಉದಾ: ಕುಂಬಾರಿಕೆ, ನೇಕಾರಿಕೆ, ಗಾಜ ಹೊಡೆಯುವಿಕೆ ಇತ್ಯಾದಿ ವೃತ್ತಿಗಳನ್ನು ಸುಧಾರಿಸಲು ಪ್ರತಿ ಜಿಲ್ಲೆಗೂ ಒಂದೊಂದು ತರಬೇತಿ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಇಲ್ಲಿ ಕುಂಬಾರಿಕೆ, ಅಕ್ಕಸಾಲಿ ಮುಂತಾದ ಕುಶಲಕರ್ಮಿಗಳಿಗೆ ತರಬೇತಿ ಕೊಡಲಾಗುತ್ತಿದೆ. ಏಳನೇ ಇಯತ್ತೆ ಇಲ್ಲವೆ ಎಸ್. ಎಸ್. ಎಲ್. ಸಿ. ಪಾಸಾದವರೂ ಇಲ್ಲಿ ಸೇರಬಹುದು. ಇವರಿಗೆ ಇಲ್ಲಿ ಸಹಾಯ ಧನ ಕೊಡಲಾಗುತ್ತದೆ. ಕುಂಬಾರಿಕೆ ತೆಗೆದುಕೊಂಡರೆ, ಹಳೆಯ ಚಕ್ರದ ಬದಲು ವಿದ್ಯುತ್ ಚಾಲಿತ ಚಕ್ರದ ಮೇಲೆ

ಕೆಲಸ ಮಾಡಲು ಕಲಿಯುತ್ತಾರೆ. ಅಲ್ಲದೆ ಅರಲು ಹದಮಾಡುವ ಹೊಸ ವಿಧಾನವನ್ನೂ ಕಲಿಯುತ್ತಾರೆ. ಮಡಿಕೆಗಳಿಗೆ ಬಣ್ಣ ಹಾಕುವ ಕಲೆಯನ್ನು ತಿಳಿದುಕೊಂಡು, ಜನತೆಗೆ ಬೇಕಾಗುವ ರೀತಿಯಲ್ಲಿ ಅದರ ತಯಾರಿಕೆ ಮಾಡಲು ಕಲಿಯುತ್ತಾರೆ. ಒಳ್ಳೆಯ ಹೂಜಿಗಳನ್ನು ಮಾಡಿ ಹಳ್ಳಿಯಲ್ಲೂ ಮಾರಬಹುದು, ನಗರಕ್ಕೂ ಸಾಗಿಸಬಹುದು. ಇದರಂತೆ ಅಕ್ಕಸಾಲಿ, ಕಮ್ಮಾರಿಕೆ, ಬಡಿಗತನಗಳಲ್ಲೂ, ಚಮ್ಮಾರಿಕೆಯಲ್ಲೂ ತರಬೇತಿ ವ್ಯವಸ್ಥೆಗಳಿವೆ. ಚಮ್ಮಾರಿಕೆಯಲ್ಲಿ ಚರ್ಮ ಹದ ಮಾಡುವ ರೀತಿ ಕಲಿತು, ಪಾದರಕ್ಷೆಗಳಿಗೆ ರಬ್ಬರ್ ಹಾಗೂ ಪ್ಲ್ಯಾಸ್ಟಿಕ್ ಅಟ್ಟೆ ಮತ್ತು ಹೊದಿಕೆಗಳನ್ನು ಆಕರ್ಷಣೀಯ ಮತ್ತು ಬಾಳಿಕೆ ಬರುವ ರೀತಿಯಲ್ಲಿ ಮಾಡಿದರೆ ಹಳ್ಳಿಯ ಬಂಧುಗಳು ನಗರದಲ್ಲಿ ಕೊಳ್ಳುವದನ್ನೇ ಬಿಡುತ್ತಾರೆ.

ಇನ್ನು ಕ್ಷೌರಿಕೆಯನ್ನು ತೆಗೆದುಕೊಂಡರೆ ಇದು ಒಂದು ಸೇವಾವೃತ್ತಿ. ಇಲ್ಲಿ ಹಳ್ಳಿಗಳಿಂದ ಅನೇಕರು ನಗರಕ್ಕೆ ಬಂದು ಹೇರ್‌ಡ್ರೆಸಿಂಗ್ ಮಾಡಿಸಿಕೊಳ್ಳುತ್ತಿದ್ದಾರೆ. ಯಾಕೆಂದರೆ ಈಗಿನ ಜನರು ಆಧುನಿಕತೆ, ಸ್ವಚ್ಛತೆಗಳಕಡೆಗೆ ಗಮನಕೊಡುತ್ತಿದ್ದಾರೆ. ಆದರೆ ಹಳ್ಳಿಯಲ್ಲಿ ಮನೆಮನೆಗೆ ಹೋಗಿ ಕ್ಷೌರಿಕನು ಜನರನ್ನು ನೆಲದಮೇಲೆ ಕೂಡಿಸಿ ಮೊಂಡಗತ್ತಿಯಿಂದ ನೆತ್ತಿ ಉರಿಸಿದರೆ, ಯಾವಾಗ ಇವನ ಕೈಯಿಂದ ಪಾರಾದೇವೋ ಎಂದು ಜನ ಯೋಚಿಸುತ್ತಿರುತ್ತಾರೆ. ಇಲ್ಲಿಯೇ ಒಳ್ಳೆಯ ಖುರ್ಚಿ, ಕನ್ನಡಿ, ರೇಜರ್ ಸೆಟ್ಟುಗಳನ್ನಿಟ್ಟು, ಹೇರ್ ಕಟಿಂಗ್ ಸಲೂನೆಂದು ಸುಧಾರಿಸಿದ ರೀತಿಯಲ್ಲಿ ನಡೆಸಿದರೆ ಗ್ರಾಮೀಣ ವಿದ್ಯಾವಂತರೂ ಬರಬಹುದು. (ಹಿಪ್ಪಿಗಳನ್ನು ಬಿಟ್ಟು !) ಇದರಂತೆ ದರ್ಜಿ, ದೋಭಿಗಳ ವೃತ್ತಿಯೂ ಆಗಬಹುದು. ದರ್ಜಿಗಳು ಜೊತೆಗೆ ಒಂದು ರೆಡಿಮೇಡ್ ಅಂಗಡಿಯನ್ನೂ ನಡೆಸಬಹುದು. ಮಿಲ್ಲುಗಳಲ್ಲಿ ತುಂಡುಬಟ್ಟೆ ತಂದು ಸುಧಾರಿತ ರೀತಿಯಲ್ಲಿ ಹಳ್ಳಿಗರ ಅಭಿರುಚಿಗನುಗುಣವಾಗಿ ಹೊಲಿದು ಅಂಗಡಿಯನ್ನೂ ನಡೆಸಬಹುದು. ಇವೂ ಅಲ್ಲದೆ ಈಗ ಹಳ್ಳಿಗಳಲ್ಲಿ ರೇಡಿಯೋ ಹಾಗೂ ಟ್ರಾನ್ಸಿಸ್ಟರುಗಳ ಬಳಕೆ ಬಹಳ. ಅವುಗಳ ರಿಪೇರಿ ಕೆಲಸವನ್ನೂ ಹಳ್ಳಿಯವರೇ ಕಲಿಯಬಹುದು. ಇದಕ್ಕೆ ಅಂಚೆ ಮುಖಾಂತರ ತರಬೇತಿ ನೀಡುವ ವ್ಯವಸ್ಥೆಯೂ ಇದೆ. ಇವೆಲ್ಲಕ್ಕೂ ಶ್ರದ್ಧೆ, ಶ್ರಮ, ಮುನ್ನುಗ್ಗುವಿಕೆ, ಭಂಡವಲು ಬೇಕು.

ಕೃಷಿ ಉದ್ದಿಮೆಗಳಲ್ಲಿ ನೀರಾವರಿ, ವಿದ್ಯುದ್ದೀಕರಣ, ಯಾಂತ್ರೀಕರಣದಿಂದಾಗಿ ಕೆಲವು ತಾಂತ್ರಿಕ ಮತ್ತು ಇತರ ಹೊಸ ಉದ್ಯೋಗಾವಕಾಶಗಳೂ ಇವೆ. ಉದಾ: ಟ್ರ್ಯಾಕ್ಟರ್ ಆಪರೇಟರ್, ಮೆಕ್ಯಾನಿಕ್. ವಾಯರ್‌ಮನ್, ಫೀಲ್ಡ್‌ಮನ್ ಇತ್ಯಾದಿ. ಈಗ ಕೃಷಿಯಲ್ಲಿ ಟ್ರ್ಯಾಕ್ಟರ್ ಬಳಕೆಯಾಗುತ್ತಿದ್ದುದರಿಂದ ಆದಕ್ಕೆ

ಡ್ರೈವ್ಹರ್ ಬೇಕು. ಮತ್ತು ನೀರಾವರಿಗೆ, ವಿದ್ಯುತ್‌ಚಾಲಿತ ಮೋಟರ್, ಪಂಪ್ ಸೆಟ್ಟುಗಳನ್ನು ಒದಗಿಸಿದ್ದರಿಂದ, ಗ್ರಾಮಗಳ ಮನೆಗಳಲ್ಲಿ,ಬೀದಿಗಳಲ್ಲಿ ವಿದ್ಯುದ್ದೀಪ ಉರಿಸುತ್ತಿರುವದರಿಂದ ವಾಯರ್‌ಮನ್, ಫಿಟರ್‌ಗಳೂ ಬೇಕು. ಇವರನ್ನು ಹೊರಗಿನಿಂದ ಕರೆಸಿಕೊಳ್ಳುವದಕ್ಕಿಂತ ಗ್ರಾಮದವರಿಗೇ ತರಬೇತಿಕೊಡುವ ದೊಳಿತು. ಈ ವೃತ್ತಿಗಳಿಗೆ ರಾಯಚೂರು, ಬಳ್ಳಾರಿ ಔದ್ಯೋಗಿಕ ತರಬೇತಿ ಸಂಸ್ಥೆಗಳು ಸುಮಾರು ನೂರಕ್ಕೆ ೫೦ ರಷ್ಟು ಎಸ್. ಎಸ್. ಎಲ್. ಸಿ. ಓದಿದ ಹಳ್ಳಿಗರನ್ನೇ ಆಯ್ದು ಅಲ್ಪಾವಧಿ ತರಬೇತಿಯನ್ನು ಕೊಡುತ್ತವೆ. ಅಲ್ಲದೆ ಗೌಂಡಿಗಳಿಗೂ ಇಲ್ಲಿ ತರಬೇತಿ ವ್ಯವಸ್ಥೆ ಇದೆ. ಇನ್ನು ಫೀಲ್ಡ್‌ಮನ್ ವೃತ್ತಿ ಯಲ್ಲಿ ತರಬೇತು ನೀಡಲು ಒಕ್ಕಲುತನ ತರಬೇತಿ ಕೇಂದ್ರಗಳು ಪ್ರತಿ ಜಿಲ್ಹೆಗೂ ಇವೆ. ಇಲ್ಲಿ ಏಳನೆಯ ಇಯತ್ತೆ ಅಥವಾ ಅದಕ್ಕೂ ಹೆಚ್ಚು ಓದಿದವರು ಎರಡು ವರ್ಷಗಳವರೆಗೆ ತರಬೇತಿ ಪಡೆಯಬಹುದು. ಇದಕ್ಕೂ ಸ್ಟೈಪೆಂಡ್ ಕೊಡು ತ್ತಾರೆ. ಕೃಷಿ ಶಾಲೆ, ಗ್ರಾಮೀಣ ಅಭಿವೃದ್ಧಿ ತರಬೇತಿ ಕೇಂದ್ರ ಹಾಗು ಕೃಷಿ ಕಾಲೇಜುಗಳೂ, ಕೃಷಿ ಉದ್ದಿಮೆಗಳಾದ ಆಕಳು, ಎಮ್ಮೆ-ಕೋಳಿ ಸಾಕಾಣಿಕೆ, ಜೇನು ಸಾಕಾಣಿಕೆ ಇತ್ಯಾದಿಗಳಲ್ಲಿ ಗ್ರಾಮೀಣ ಜನರಿಗೆ ಕನಿಷ್ಠ ಒಂದು ವಾರದ ತರಬೇತು ಕೊಡುತ್ತಾರೆ. ಆಕಳು, ಎಮ್ಮೆ ಸಾಕುವ ತರಬೇತಿ ಪಡೆದವರು ಡೇರೀ ಉದ್ಯೋಗವನ್ನು ಒಂದು ಪೂರ್ಣವೇಳೆ ವೃತ್ತಿಯನ್ನಾಗಿ ನಡೆಸಬಹುದು. ಇದರಲ್ಲಿ ಹೆಚ್ಚಿನ ಉತ್ಪನ್ನ ಕೊಡುವ ದನಗಳನ್ನು ಸಾಕಬೇಕು. ಉದಾ- ಜರ್ಸಿ ಆಕಳು, ಹೋಲಸ್ಟಿನ್ ಆಕಳು (ಡೆನ್ಮಾರ್ಕ್) ಮರೆ ಎಮ್ಮೆ, ಪಂಢರಪುರ ಜಾತಿ ಇತ್ಯಾದಿಗಳು ಹೆಚ್ಚಿನ ಇಳುವರಿ ಕೊಡುವಂತೆ ಇವುಗಳಲ್ಲಿ ಆಯಾ ಊರಿಗೆ ನೆಲ, ಹವಾಗುಣಕ್ಕೆ ಯಾವುದು ಸರಿ ಎಂಬುದನ್ನು ಸ್ಥಳೀಯ ಸ್ಟಾಕ್‌ಮನ್‌ನನ್ನು ವಿಚಾರಿಸಿ ಹೆಚ್ಚು ಉತ್ಪನ್ನ ಕೊಡುವ ಉತ್ತಮ ತಳಿಯ ದನಗಳನ್ನು ಪಡೆಯ ಬಹುದು. ಹಾಲು ಜಾಸ್ತಿ ಬಂದರೆ ಸಮೀಪದ ಸರಕಾರೀ ಡೇರಿಗೂ ಕೊಡ ಬಹುದು. ಇನ್ನು ಕೋಳಿ ಸಾಕಾಣಿಕೆಯೂ ಒಂದು ವೃತ್ತಿ. ಇತ್ತಿತ್ತಲಾಗಿ ಹಳ್ಳಿಯಲ್ಲೂ ನಗರದಲ್ಲೂ ಕೋಳಿಮೊಟ್ಟೆಗಳ ಬಳಕೆ ಬಹಳ. ಕಾರಣ ಈ ವೃತ್ತಿ ಯನ್ನು ನಡೆಸಬಹುದು.

ಎಣ್ಣೆ ತೆಗೆಯುವ ಉದ್ದಿಮೆಯಂತೂ ಹಳ್ಳಿಗಳಲ್ಲಿ ಹಾಳಾಗಿಹೋಗಿದೆ. ಗ್ರಾಮೀಣ ಪ್ರದೇಶದಲ್ಲಿ ಎಣ್ಣೆಕಾಳುಗಳನ್ನು ವಿದ್ಯುತ್‌ಚಾಲಿತ ಯಂತ್ರಗಳಲ್ಲಿ ಹಾಕಿ ಎಣ್ಣೆ ತೆಗೆದು ಮಾರಬಹುದು. ಶಿಕ್ಷಣ ಪಡೆದವರು ಅಂಗಡಿ, ಹೋಟಲು ಗಳನ್ನು ಸುಧಾರಿತ ರೀತಿಯಲ್ಲಿ ನಡೆಸಬಹುದು. ಈಗ ಹಳ್ಳಿಗಳಿಗೆ ಬರ

ಹೋಗುವ ಜನ ಬಹಳ. ಅಲ್ಲದೆ ಸ್ತ್ರೀ ಪುರುಷರಿಬ್ಬರೂ ಹಳ್ಳಿಯಲ್ಲಿ ದುಡಿಯ ಬೇಕಾಗಿದೆ. ಒಮ್ಮೊಮ್ಮೆ ಮನೆಗಳಲ್ಲಿ ತಿಂಡಿ ಮಾಡಲಿಕ್ಕಾಗುವದಿಲ್ಲ. ಒಳ್ಳೆಯ ತಿನಸು ಮಾಡಿ ಯೋಗ್ಯ ಬೆಲೆಗೆ ಮಾರಿದರೆ ಈ ವೃತ್ತಿಯಲ್ಲೂ ಸಾಕಷ್ಟು ಲಾಭ ವಾಗಬಹುದು.

ಇವಲ್ಲದೆ ಹೆಣ್ಣುಮಕ್ಕಳು ಕಸೂತಿ, ಬೆತ್ತದ ಪುಟ್ಟಿ, ಪ್ಲ್ಯಾಸ್ಟಿಕ್ ಚೀಲ ಹೆಣೆಯುವದು, ಬಿದಿರಿನ ಕೆಲಸ ಇವುಗಳನ್ನು ಮಾಡಬಹುದು. ನೆಲ್ಲಿ, ಮಾವಿನ ಕಾಯಿಗಳಿಂದ, ಜಾಮು, ಉಪ್ಪಿನಕಾಯಿ ತಯಾರಿಸಬಹುದು. ಹಪ್ಪಳ ಮಾಡು ವದು, ಮುತ್ತಲ ಎಲೆಗಳಿಂದ ಊಟದೆಲೆಗಳನ್ನು ತಯಾರಿಸಬಹುದು. ಪುರುಷರು ಹೂವಿನ ತೋಟ, ಪೇರಲ, ಮಾವು, ಚಿಕ್ಕು, ತೆಂಗು, ದ್ರಾಕ್ಷೆ ತೋಟಗಳನ್ನು ಮಾಡಬಹುದು. ಕಾಯಿಪಲ್ಲೆಯನ್ನೂ ಬೆಳೆಯಬಹುದು.

ಶಿಕ್ಷಣ ಪಡೆದವರು ಇವೆಲ್ಲವುಗಳನ್ನು ಮಾರುಕಟ್ಟೆಗೆ ಸಾಗಿಸುವ ಕೆಲಸ ಕೈಕೊಳ್ಳಬಹುದು. ಉದ್ಯೋಗಕ್ಕೆ ಭಂಡವಲು ಬೇಕು. ಸಾಲದ ಹಣ ಇಲ್ಲವೇ ಸ್ವಂತ ಹಣ ತೊಡಗಿಸಿ ಬೆಳೆಗೆ ಔಷಧ ಹೊಡೆಯುವ ಸಾಧನ, ಸಲಕರಣೆಗಳನ್ನು ಕೊಂಡು ಹಳ್ಳಿಯಲ್ಲಿ ಒಬ್ಬನಿಗೆ ತರಬೇತು ಕೊಟ್ಟು ರೈತರಿಗೆ ಬಾಡಿಗೆಯಂತೆ ಆ ಸಲಕರಣೆಯನ್ನು ಉಪಯೋಗಿಸಲು ಕೊಡಬಹುದು. ಎಷ್ಟೋಸಲ ಹಳ್ಳಿಗರಿಗೆ ಔಷಧ ಹೊಡೆಯುವ ವಿಧಾನ ಗೊತ್ತಿರುವದಿಲ್ಲ. ಕಾರಣ ಇಲ್ಲಿ ತರಬೇತಿ ಪಡೆದು ಒಬ್ಬಿಬ್ಬರು ಬಾಡಿಗೆಯಂತೆ ಕೆಲಸ ಮಾಡಬಹುದು. ಇದೂ ಅಲ್ಲದೆ ರಾಷ್ಟ್ರೀಯ, ರಾಜ್ಯದ ಉತ್ತಮ ಬೀಜಗಳನ್ನು ಒದಗಿಸುವ ಕಚೇರಿಗಳಿಂದ ಬೀಜಗಳನ್ನು ಕೊಂಡು ಹಳ್ಳಿಗರಿಗೆ ಒದಗಿಸಲು ಅಲ್ಲಿಯ ಶಿಕ್ಷಣ ಪಡೆದು ಉದ್ಯೋಗವಿಲ್ಲದವರು ಮುಂದಾಗಬೇಕು.

ಕುರುಡರೂ, ಕಿವುಡ, ಮೂಕರೂ ಕೂಡ ಕೆಲವು ವೃತ್ತಿಗಳಲ್ಲಿ ತರಬೇತಿ ಪಡೆದು ಸ್ವಾವಲಂಬಿಗಳಾಗುತ್ತಿದ್ದಾರೆ. ಅವರಿಗೂ ತರಬೇತಿಗೆ ವಿಶೇಷ ಸಂಸ್ಥೆ ಗಳಿವೆ. ಹಾಗೆ ನೋಡಿದರೆ ಅಪರಾಧಿಗಳೂ ಸೆರೆಮನೆಯಲ್ಲಿ ವೃತ್ತಿತರಬೇತಿಯನ್ನು ಪಡೆಯುತ್ತಿದ್ದಾರೆ.

ವಿವಿಧೋದ್ದೇಶ ಸಹಕಾರಿ ಸಂಘಗಳನ್ನು ನಡೆಸಲು ಶಿಕ್ಷಣ ಪಡೆದವರು ಮುಂದಾಗಬೇಕು. ಮಲಗಿರುವಂಥ ಈ ಸಂಸ್ಥೆಗಳನ್ನು ಸರಕಾರದ ನೆರವಿನಿಂದ ಚೇತರಿಸಬೇಕು. ಇನ್ನು ಪರಿಶಿಷ್ಟ ಜಾತಿ, ಜನಾಂಗದವರಿಗೆ ವೃತ್ತಿತರಬೇತಿಗೆ ಹೆಚ್ಚಿನ ಸೌಲಭ್ಯವಿದೆ; ಸಾಲ ಸಿಗುತ್ತಿದೆ. ಇಪ್ಪತ್ತು ಅಂಶಗಳ ಆರ್ಥಿಕ

ಯೋಜನೆಯಲ್ಲಿಯೂ ಅನೇಕ ವೃತ್ತಿಸೌಲಭ್ಯ, ಸಾಲಸೌಲಭ್ಯಗಳನ್ನು ಒದಗಿಸಲಾಗಿವೆ. ಇವುಗಳ ಉಪಯೋಗ ಪಡೆದು ತರಬೇತಿ ಹೊಂದಬೇಕು.

ವೃತ್ತಿತರಬೇತಿಯ ಮಾರ್ಗದರ್ಶನವನ್ನು ಸ್ಥಳೀಯ ಶಾಲೆ, ಹೈಸ್ಕೂಲುಗಳಲ್ಲೂ ಒದಗಿಸಬೇಕು. ಪ್ರಸಿದ್ಧಿ ಶಾಖೆಗಳು, ವರ್ತಮಾನ ಪತ್ರಿಕೆಗಳು, ಆಕಾಶವಾಣಿ, ಟೆಲಿವಿಜನ್ನುಗಳು ಸಾಕಷ್ಟು ಮಾಹಿತಿ ಕೊಡಬೇಕು. ಅಲ್ಲದೆ ಗ್ರಾಮೀಣ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಈ ಬಗ್ಗೆ ಅವಕಾಶವಿರಬೇಕು. ವಿಶ್ವವಿದ್ಯಾಲಯಗಳಲ್ಲೂ, ಉದ್ಯೋಗವಿನಿಮಯ ಕಚೇರಿಗಳಲ್ಲೂ ಮಾರ್ಗದರ್ಶನ ವ್ಯವಸ್ಥೆ ಮಾಡಲಾಗಿವೆ.

ಹಳ್ಳಿಗಳಲ್ಲಿ, ಗ್ರಾಮಸೇವಕರ ಮತ್ತು ಸಂಬಂಧಪಟ್ಟ ಇನ್ನಿತರ ಅಧಿಕಾರಿಗಳ ಹಾಗು ಜನರ ನಡುವೆ ಸಾಕಷ್ಟು ಅಂತರವಿದೆ. ಈ ಅಂತರ ತೊಲಗಬೇಕು. ಅಲ್ಲದೆ ಸಾರಿಗೆ ಸಂಪರ್ಕ, ಕಚ್ಚಾ ಸರಕುಗಳ ವ್ಯವಸ್ಥೆ ಸುಧಾರಿಸಬೇಕು.

ಅಜ್ಜ ಹಾಕಿದ ಆಲದಮರ ಬಿದ್ದಿದೆ. ಬೇರೆ ಮರ ನೆಡಬೇಕು. ಪುರಾತನ, ಪರಂಪರಾಗತವಾಗಿ ಬಂದ ಉದ್ಯೋಗಕ್ಕೇ ಟಾಂಗಾದ ಕುದುರೆಯಾಗಬಾರದು. ಆ ಜಾಡ್ಯವನ್ನು ಕಿತ್ತೊಗೆದು, ಯಾವ ವೃತ್ತಿಯೂ ಕೀಳಲ್ಲವೆಂದು, ಅಭಿರುಚಿ, ಸಾಮರ್ಥ್ಯ, ಸದವಕಾಶಗಳಿದ್ದಮೇಲೆ ಅದರಲ್ಲಿ ತರಬೇತು ಪಡೆದು ಕಾಯಕದಲ್ಲಿ ನಿರತರಾಗಬೇಕು. ಅದೇ ಕೈಲಾಸವಾಗುವದು. ಸುಖ, ನೆಮ್ಮದಿ, ತೃಪ್ತಿ ಲಭಿಸುವದು.

ಆಧಾರ ಸಾಹಿತ್ಯ

1. Samuel M. Burt : **Industry and Vocational Technical Education**, Mc-Graw Hill Book Company, New York, 1967.

2. Govt. of India Publication : **Model Prison Manual**, 1970.

3. Ika Paul Pont : **Child Welfare in India**, Ministry of Education, Govt. of India, 1963.

4. International Encyclopaedia of Social Sciences.

5. Jess Stein : **Random House Dictionary**, Random House, New York, 1967.

6. Ray W. Roberts : **Vocational of Practical Arts Education**, Harper & Row and John Weather Hill, Tokyo, (2nd Ed.), 1965.

ಶಾಂತಿಗ್ರಾಮದ ಹಿಂದೂ ಉತ್ಸವಗಳು ಮತ್ತು ಹಬ್ಬಗಳು*

● ಎಸ್. ಎ. ಅವರಾದಿ

ಮಾನವನು ವಾನರ ಮಟ್ಟವನ್ನು ದಾಟಿ ಚಿಂತನಶಾಲಿಯಾದಾಗಿನಿಂದಲೂ ಅವನನ್ನು, ತಾನು ಯಾರು? ತನ್ನ ಅಸ್ತಿತ್ವವೇನು? ತನ್ನ ಕರ್ಮವೇನು? ತನ್ನ ಉದ್ದೇಶವೇನು? ಎಂಬ ಜಟಿಲ ಪ್ರಶ್ನೆಗಳು ಬಾಧಿಸುತ್ತಲೇ ಬಂದಿವೆ. ಅವನ ವಿಚಾರಶಕ್ತಿ ಬೆಳೆದಂತೆ ತನ್ನ ಪರಿಸರ, ಪ್ರಕೃತಿ ಶಕ್ತಿ. ಹಾಗೂ ಇವುಗಳಲ್ಲಿನ ಬದಲಾವಣೆಗಳನ್ನು ಕುರಿತು ಚಿಂತಿಸತೊಡಗಿದನು. ತನ್ನ ಬುದ್ಧಿಮಟ್ಟಕ್ಕೆ ಅನುಗುಣವಾಗಿ ಸೃಷ್ಟಿಯ ಕೆಲವು ನಿಯಮ ಮತ್ತು ವ್ಯವಹಾರಗಳನ್ನು ಅರಿತುಕೊಂಡನು. ಪ್ರಕೃತಿಯ ನಿಯಮಬದ್ಧತೆ ಹಾಗೂ ಪ್ರಕೋಪಗಳನ್ನು ಕಂಡ ಆದಿಮಾನವನು, ಮೊದಲಿಗೆ ಈ ಎಲ್ಲ ನೈಸರ್ಗಿಕ ವ್ಯವಹಾರಗಳು ಯಾವದೋ ಒಂದು ಶಕ್ತಿ ಪ್ರೇರಣೆಯಿಂದ ನಡೆಯುತ್ತಿವೆ ಮತ್ತು ಈ ಸೃಷ್ಟಿ ಶಕ್ತಿಯನ್ನು ಸಾಂತ್ವನಗೊಳಿಸಿದರೆ ಪ್ರಕೋಪಗಳನ್ನು ತಡೆಯಬಹುದೆಂಬ ನಂಬಿಕೆಯನ್ನು ಬೆಳೆಸಿಕೊಂಡನು. ಹೀಗೆ ಪ್ರಾರಂಭದಲ್ಲಿ ಮಾಟ (**Magic**), ಎಂದರೆ ಶಕ್ತಿ ವಶೀಕರಣ ಮೊದಲುಗೊಂಡು ಮುಂದೆ ಪ್ರಕೃತಿ ಅಧ್ಯಯನದ ಅನುಭವಗಳಿಂದ

---

* ಈ ಲೇಖನಕ್ಕೆ ಬೇಕಾದ ವಿಷಯವನ್ನು ಕಲೆಹಾಕುವಲ್ಲಿ ನೆರವಾದ ಡಾ|| (ಶ್ರೀಮತಿ) ಪಿ. ವಾಯ್. ಮಹಾಲಿಯವರಿಗೂ ಮತ್ತು ಈ ಲೇಖನವನ್ನು ಬರೆಯುವಲ್ಲಿ ನೆರವಾದ ಡಾ. ಕೆ. ಜಿ. ಗುರುಮೂರ್ತಿ ಇವರಿಗೂ ನಾನು ಆಭಾರಿಯಾಗಿದ್ದೇನೆ.

ಆದಿಮಾನವನು ಸೃಷ್ಟಿಯ ಕೆಲವು ವ್ಯವಹಾರ ಕುರಿತು ಭವಿಷ್ಯ ಮತ್ತು ಕಾರ್ಯ ಕಾರಣಗಳನ್ನು ವಿವರಿಸತೊಡಗಿದನು. ಈ ವಿವರಣೆಗಳು ತಪ್ಪಾದಾಗ, ಶಕ್ತಿಯ ಪೂಜಾ ಪದ್ಧತಿಯಲ್ಲಿ ಅಥವಾ ಜನರ ಆಚಾರ-ವಿಚಾರಗಳಲ್ಲಿ ದೋಷ ತೋರಿಸಿ, ಶಕ್ತಿಯು ಅಸಂತೃಪ್ತಳಾದುದರಿಂದ ಸೃಷ್ಟಿಯ ನಿಯಮದಲ್ಲಿ ಬದಲಾವಣೆ ಮತ್ತು ಉಗ್ರತೆಗಳು ತಲೆದೋರಿದವು ಎಂಬ ಹಗುರಾದ ವಿವರಣೆಗಳನ್ನು ಕೊಡುತ್ತ ಬಂದನು. ಅಲ್ಲದೆ ಪ್ರಕೃತಿಯ ಚಟುವಟಿಕೆಗಳು ಆದಿಮಾನವನ ಬುದ್ಧಿಶಕ್ತಿಗೆ ನಿಲುಕದಾದಾಗ, ಅಲೌಕಿಕ ಶಕ್ತಿ (Supernatural Power)ಯನ್ನು ಮೊರೆ ಹೊಕ್ಕು, ಭಯಭಕ್ತಿಯಿಂದ ಪೂಜಾವ್ರತಗಳನ್ನು ಮಾಡತೊಡಗಿದನು. ಅಂದಿನಿಂದಲೇ ಆದಿಮಾನವನ ನಡವಳಿಕೆಯಲ್ಲಿ ಸದ್ವರ್ತನೆ, ಮತ್ತು ಸದ್ವಿಚಾರಗಳು ಮೂಡತೊಡಗಿದವು. ಇದೇ "ಧರ್ಮ"ದ ತಳಹದಿಯಾಯಿತು. ಹೀಗೆ ಮಾಟ ಅಥವಾ ಶಕ್ತಿ ವಶೀಕರಣದಿಂದ ಧರ್ಮ (ಶಕ್ತಿಯ ವ್ರತ) ಬೆಳೆಯಿತು ಎನ್ನಬಹುದು.

ಆಧುನಿಕ ಮಾನವನು ಇನ್ನೂ ಮುಂದೆ ಹೋಗಿ ವಿಜ್ಞಾನವನ್ನು ಬೆಳೆಸಿಕೊಂಡನು. ಭೌತಿಕ ವಿಜ್ಞಾನದ ಸಹಾಯದಿಂದ ಪ್ರಕೃತಿಯ ನಿಯಮಗಳನ್ನು ನಿಖರವಾಗಿ ಅರ್ಥ ಮಾಡಿಕೊಳ್ಳುವದರ ಜೊತೆಗೆ ಲೌಕಿಕ ಭಾಷೆಯಲ್ಲಿ ವಿವರಿಸಬಲ್ಲನು. ಈ ರೀತಿಯಾಗಿ ತನ್ನ ಸುತ್ತಲಿನ ವಿಶ್ವದ ವ್ಯವಹಾರಗಳ ಚಿಂತನೆಯಲ್ಲಿ ಮಾಟ (magic), ಧರ್ಮ (religion) ಮತ್ತು ವಿಜ್ಞಾನ (Science)ಗಳ ವಿಚಾರ ಮೀಮಾಂಸೆಯನ್ನು (Ideology) ಹಂತಹಂತವಾಗಿ ಬೆಳೆಸಿಕೊಂಡು ಬಂದನು. ಇಂದು ಜನರಲ್ಲಿ ಮಾಟ, ಮಂತ್ರ ಹಾಗೂ ಧರ್ಮಗಳಲ್ಲಿ ಶ್ರದ್ಧೆ ಕಡಿಮೆಯಾಗಿ, ಅವರ ಮೇಲೆ ವಿಜ್ಞಾನದ ಪ್ರಭಾವ ಹೆಚ್ಚಾಗಿರುವದನ್ನು ಕಾಣುತ್ತೇವೆ. ಹಿಂದೂ ಧರ್ಮದ ವಿಸ್ತಾರ, ಶಕ್ತಿ ಎಷ್ಟೆಂದರೆ, ವಿಶ್ವದ ಪ್ರತಿಯೊಂದು ಅಣುಪ್ರಾಣಿಯಿಂದ ಹಿಡಿದು ಪ್ರಕೃತಿಯ ಎಲ್ಲ ವ್ಯವಹಾರಗಳನ್ನು 'ಧರ್ಮ'ಎಂಬ ಶಬ್ದದಿಂದ ವಿವರಿಸಲಾಗಿದೆ. ಇದು ನಮ್ಮ ಪುರಾತನ ಋಷಿ, ಮಹರ್ಷಿಗಳ ಚಿಂತನ ಮತ್ತು ತಪಸ್ಸಿನ ಫಲ.

ಆದರೆ ಇಂದಿನ ಆಧುನಿಕತೆಯ ದಾಳಿಗೆ ಸಿಕ್ಕು ಹಳೆಯ ಸಂಪ್ರದಾಯಗಳು, ಧಾರ್ಮಿಕ ಹಾಗೂ ಸಾಮಾಜಿಕ ಆಚಾರಗಳು ಮಾಯವಾಗುತ್ತಿವೆ. ಈ ಸ್ಥಿತಿ ಹೀಗೇ ಮುಂದುವರಿದರೆ, ಮುಂದಿನ ಶತಮಾನದ ಜನರು ಹಬ್ಬ ಹರಿದಿನ, ಜಾತ್ರೆ ಮತ್ತು ಉತ್ಸವಗಳ ಬಗ್ಗೆ ತಿಳಿದುಕೊಳ್ಳಲು ಗ್ರಂಥಗಳ ಮೊರೆ ಹೋಗಬೇಕಾಗುವದು. ಕಾರಣ ತ್ವರಿತಗತಿಯಿಂದ ಕಣ್ಮರೆಯಾಗುತ್ತಿರುವ, ಪ್ರಾಚೀನ ಕಾಲ

ದಿಂದಲೂ ಬಂದ ಸಂಪ್ರದಾಯಗಳನ್ನು ಮತ್ತು ಸಂಸ್ಕೃತಿಯನ್ನು ಕಾಗದದಲ್ಲಿಯಾದರೂ ಹಿಡಿದಿಡಲು ಮಾನವಶಾಸ್ತ್ರಜ್ಞರು ಶ್ರಮಿಸುತ್ತಿದ್ದಾರೆ. ಈ ಲೇಖನವು ಈ ದಿಶೆಯಲ್ಲಿ ಮಾಡಿದ ಅಭ್ಯಾಸವೊಂದರ ಫಲ. ಇಲ್ಲಿಯ ವಿಷಯವನ್ನು ಹಾಸನ ಜಿಲ್ಲೆಯ ಶಾಂತಿಗ್ರಾಮ ಎಂಬ ಹಳ್ಳಿಯಿಂದ ಪಡೆಯಲಾಗಿದೆ. ಶಾಂತಿಗ್ರಾಮವು ಬೆಂಗಳೂರು–ಮಂಗಳೂರು ಹೆದ್ದಾರಿಯ ಮೇಲೆ, ಹಾಸನದಿಂದ, ಹದಿಮೂರು ಕಿ.ಮೀ. ದೂರದಲ್ಲಿದೆ. ಈ ಗ್ರಾಮವು ವಿಷ್ಣುವರ್ಧನನ ಪಟ್ಟದ ರಾಣಿ ಶಾಂತಲಾ ದೇವಿಯಿಂದ ಕಟ್ಟಲ್ಪಟ್ಟದ್ದರಿಂದ ಇದಕ್ಕೆ ಶಾಂತಿಗ್ರಾಮ ಎಂಬ ಹೆಸರು ಬಂದಿದೆ, ಎಂಬುದು ಜನರ ನುಡಿಯಿಂದಲೂ, ಶಾಸನಗಳಿಂದಲೂ ತಿಳಿದು ಬರುತ್ತವೆ. ಇಂದು ತನ್ನ ಗಾತ್ರದಿಂದಾಗಿ ಶಾಂತಿಗ್ರಾಮವು ಸುತ್ತಮುತ್ತಲಿನ ಹಳ್ಳಿಗಳಿಗೆ ಧಾರ್ಮಿಕ, ಸಾಮಾಜಿಕ, ಆರ್ಥಿಕ ಚಟುವಟಿಕೆಗಳಿಗೆ ಕೇಂದ್ರ ಬಿಂದುವಾಗಿದೆ. ಶಾಂತಿಗ್ರಾಮದಲ್ಲಿ, ಬ್ರಾಹ್ಮಣ, ಒಕ್ಕಲಿಗ, ಜೈನ, ಲಿಂಗಾಯತ, ಶೆಟ್ಟಿಗ, ಗಾಣಿಗ, ಕುರುಬ, ಬೆಸ್ತ, ಮಡಿವಾಳ; ಆದಿಕರ್ನಾಟಕ ಹಾಗೂ ಹೊಲೆಯ ಮೊದಲಾದ ಜಾತಿಗಳಿವೆ. ಬೇಸಾಯವು ಹಳ್ಳಿಯ ಮುಖ್ಯ ಕಸಬು. ಶೆಟ್ಟರು ವ್ಯಾಪಾರ ಉದ್ಯೋಗಗಳಿಂದ, ಆದಿಕರ್ನಾಟಕಿಯರು ಮತ್ತು ಹೊಲೆಯರು ಚರ್ಮದ ಉದ್ಯೋಗಗಳಿಂದ ಜೀವನ ಸಾಗಿಸುತ್ತಾರೆ. ಆಡಳಿತ ದೃಷ್ಟಿಯಿಂದ ಶಾಂತಿಗ್ರಾಮವು ಹೋಬಳಿಸ್ಥಳವಾಗಿದ್ದು, ಮಾದರಿಯ ಪಂಚಾಯಿತಿಯನ್ನು ಹೊಂದಿದೆ. ಶಾಂತಿಗ್ರಾಮವು ಆರ್ಥಿಕ ಮತ್ತು ರಾಜಕೀಯ ರಂಗಗಳಲ್ಲಿಯೂ ಸ್ಥಿರತೆಯನ್ನು ಪಡೆದಿದೆ ಎನ್ನಬಹುದು.

ಊರಿನ ಎಲ್ಲಾ ಜನರು, ಕೆಲವು ಸಮಯದಲ್ಲಿ ನೆರೆಹೊರೆ ಹಳ್ಳಿಯ ಜನರೊಂದಿಗೆ ಕೂಡಿಕೊಂಡು, ದೇವ ಕಾರ್ಯಗಳನ್ನು ಆಚರಿಸಿ, ಭಕ್ತಿ ಸಮರ್ಪಿಸುವ ಸಂದರ್ಭಗಳಿಗೆ ನಾವು ಜಾತ್ರೆ ಅಥವಾ ಉತ್ಸವಗಳೆಂದು ಕರೆಯಬಹುದು. ಇವುಗಳಿಗೆ ದಕ್ಷಿಣ ಕರ್ನಾಟಕದಲ್ಲಿ 'ಉತ್ಸವ' ಎಂದೂ, ಉತ್ತರ ಕರ್ನಾಟಕದಲ್ಲಿ ಜಾತ್ರೆ ಎಂದೂ ಕರೆಯುವ ರೂಢಿ ಇದೆ. ಜಾತ್ರೆ ಎಂದರೆ ಸಾಮಾನ್ಯವಾಗಿ ದೇವರ ಪೂಜೆ ಉತ್ಸವ, ಮೆರವಣಿಗೆಗಳಿಂದಲೂ, ಜನರ ಗದ್ದಲ, ಅನೇಕ ತರಹದ ಅಂಗಡಿಗಳಿಂದಲೂ, ನಾಟಕ, ಬೈಲಾಟ, ಸೋಗು, ಸರ್ಕಸ್, ಜೂಜು ಮುಂತಾದ ಮೋಜುಗಳಿಂದಲೂ ರಮ್ಯವಾಗಿ ಕಾಣುವ ಉತ್ಸವ. ಕೆಲವು ಜಾತ್ರೆಗಳಲ್ಲಿ ಜಾನುವಾರುಗಳ ವ್ಯಾಪಾರ ಕೂಡ ನಡೆಯುವದು. ಆದುದರಿಂದ ದೂರದೂರದಿಂದಲೂ ರೈತರು ತಮಗೆ ಬೇಕಾದ ಜಾನುವಾರುಗಳನ್ನು ಮಾರಲು ಮತ್ತು ಕೊಳ್ಳಲು ಬರುತ್ತಾರೆ. ಹೀಗೆ ಜಾತ್ರೆ–ಉತ್ಸವಗಳು ಧಾರ್ಮಿಕ, ಸಾಮಾಜಿಕ ಹಾಗೂ ಆರ್ಥಿಕ ವ್ಯವಹಾರಗಳ ಸಂಗಮವಾಗಿರುತ್ತದೆ.

ಹಬ್ಬವೆಂದರೆ ಸಂತೋಷದ ಸಮಾರಂಭ. ಸಂಸ್ಕೃತ ಪರ್ವನ್ (ಪರ್ವ) ಶಬ್ದದ ತದ್ಭವವೇ ಹಬ್ಬ. ಮನುಷ್ಯನ ಮೇಲಿರುವ, ದೇವ ಋಣ, ಪಿತೃಋಣ, ಋಷಿಋಣಗಳನ್ನು ತೀರಿಸುವ ವಿಧಾನಗಳೇ ಈ ಹಬ್ಬಗಳು. ಹಿಂದೂಗಳಿಗೆ ಹಬ್ಬವೆಂದರೆ ಬಲು ಉಬ್ಬು. ಪ್ರತಿಯೊಂದು ಹಬ್ಬವೂ ಒಂದೊಂದು ಸತ್‌ಸಂಪ್ರದಾಯವನ್ನು ಹೊಂದಿದೆ. ಅವುಗಳ ಸುತ್ತಲೂ ಅನೇಕ ದಂತಕಥೆ ಅಥವಾ ಪೌರಾಣಿಕ ಹಿನ್ನೆಲೆಗಳು ಹೆಣೆದುಕೊಂಡಿವೆ. ಮಾನವನು ತನ್ನ ಸೌಖ್ಯಕ್ಕಾಗಿ, ಮನರಂಜನೆಗಾಗಿ ಬಾಳಿನ ಬದಲಾವಣೆಗಾಗಿ, ಸಾಧನೆಯಿಂದ ಸಿದ್ಧಿಗಾಗಿ ಸಂಸಾರದಿಂದ ಸನ್ಮಾರ್ಗಕ್ಕಾಗಿ, ಆತ್ಮೀಯರನ್ನು ಕೂಡಿಕೊಳ್ಳುವದಕ್ಕಾಗಿ ಮತ್ತು ಸಂಘಟನೆಗಾಗಿ ಈ ಹಬ್ಬಗಳನ್ನು ಆಚರಣೆಯಲ್ಲಿ ತಂದಿದ್ದಾನೆ. ಮಾನವನು ನಿತ್ಯದ ಲೌಕಿಕ ಜೀವನದಿಂದ ಪಾರಮಾರ್ಥಿಕ ಜೀವನದತ್ತ ಮುನ್ನಡೆಯಲು ಸನಾತನವಾಗಿ ಆಚರಣೆಯಲ್ಲಿರುವ ಹಬ್ಬಗಳು ಸಾಧನಗಳಾಗಿರುವವು. ಹಬ್ಬಗಳೆಂದರೆ ಕೇವಲ ಉಂಡು, ಉಟ್ಟು, ತೇಗಿ ನಲಿದಾಡುವದಲ್ಲ. ವ್ರತ ನಿಯಮಗಳನ್ನು ಎಲ್ಲ ದಿನಗಳಲ್ಲಿಯೂ ಆಚರಿಸಲು ಅಸಾಧ್ಯವಾಗಿರುವದರಿಂದ ನಿಯಮಿತ ದಿನಗಳಲ್ಲಾದರೂ ಕಡ್ಡಾಯವಾಗಿ, ದೇಹ ದಂಡನೆಯ ಮೂಲಕ ನಮಗೆ ನಾವೇ ಆತ್ಮ ಸಂಗಾತಿಗಳಾಗುವ ಕೆಲಸ ಮಾಡಬೇಕು. ಜೀವನಕ್ಕೆ ನೆಮ್ಮದಿ ಬೇಕಾದರೆ ಬಾಳಿನಲ್ಲಿ ನಂಬಿಕೆ ಇರಬೇಕು. ನೆಮ್ಮದಿ ಇಲ್ಲದ ಜೀವನ ಮರಳುಗಾಡು. ಜೀವನವು ಕೇವಲ ಯಾಂತ್ರಿಕ ರೀತಿಯದಲ್ಲ. ನಮ್ಮ ನಿತ್ಯದ ಆಚರಣೆ ಮತ್ತು ಕರ್ತವ್ಯಗಳು ನಮ್ಮ ನಂಬಿಕೆಯನ್ನು ಅನುಸರಿಸಿವೆ. ಹಬ್ಬಗಳನ್ನು ಆಚರಿಸುವದು ವಿಶೇಷವಾಗಿ ಸಾಂಪ್ರದಾಯಿಕವಾಗಿ ಬಂದಿದೆ. ಭಾರತೀಯರು ಸಂಪ್ರದಾಯ ಶರಣರು. ಭಾರತೀಯ ಹಬ್ಬಗಳು ಭಕ್ತಿ, ಜ್ಞಾನ, ಕರ್ಮಗಳ ತ್ರಿವೇಣಿ ಸಂಗಮವು (ಕೃಷ್ಣಶರ್ಮ, ೧೯೬೯).

ಅನೇಕ ಸಂಸ್ಕೃತಿಗಳ ತವರುಮನೆಯಾದ ಭಾರತದಲ್ಲಿ ಪ್ರಾಚೀನ ಪರಂಪರೆಯನ್ನು ನಾವು ಸುಲಭವಾಗಿ ಕಾಣಬಹುದು. ಇಂತಹ ಅಮೂಲ್ಯ ಸಂಸ್ಕೃತಿಯನ್ನು ಪೀಳಿಗೆಯಿಂದ ಪೀಳಿಗೆಗೆ ಜೀವಂತವಾಗಿ ಕೊಂಡೊಯ್ಯುವ ವಾಹನಗಳೆಂದರೆ ನಮ್ಮ ಹಬ್ಬಗಳು. ಪುರಾತನ ಸಂಸ್ಕೃತಿಯ ಬೀಡಾದ ಕನ್ನಡ ನಾಡಿನಲ್ಲಿ ಹಬ್ಬಗಳಿಗೇನೂ ಕೊರತೆಯಿಲ್ಲ. ಚಂದ್ರಮಾನ ವರ್ಷದ ಪ್ರತಿಮಾಸದಲ್ಲೂ ಒಂದಿಲ್ಲೊಂದು ಹಬ್ಬಗಳ ಆಚರಣೆಯನ್ನು ಕಾಣುತ್ತೇವೆ. ಯುಗಾದಿಯಿಂದ ಉಪಕ್ರಮಿಸಿದ ಹಬ್ಬಗಳ ಸಾಲು ಹೋಳಿ ಹುಣ್ಣಿಮೆಯವರೆಗೆ ಒಂದು ಚಕ್ರವಾಗಿ ಉರುಳುತ್ತವೆ. ಹಬ್ಬ ಕೇವಲ ಆಮೋದವಲ್ಲ, ದೇವ ಪೂಜೆಯೂ ಅಹುದು. ಬೇಸಾಯ ಪ್ರಧಾನವಾದ ನಮ್ಮ ನಾಡಿನಲ್ಲಿ ಹಬ್ಬ ಹರಿದಿನಗಳು ಒಂದೊಂದು ರೀತಿಯಲ್ಲಿ ಮಳೆರಾಯ

ನಿಗೆ, ಭೂಮಿ ತಾಯಿಗೆ, ಸೂರ್ಯನಿಗೆ ಸಂಬಂಧಿಸಿದ ವಿಧಾನ ವ್ರತಗಳನ್ನೊಳಗೊಂಡಿವೆ.

ಹಬ್ಬಗಳ ನಿಜವಾದ ಅರ್ಥ, ಮೂಲ, ಮತ್ತು ಬದಲಾವಣೆಗಳ ಬಗ್ಗೆ ನಿಖರವಾಗಿ ಹೇಳಲು ಪಂಡಿತ-ಪಾಮರರಿಗೂ ದುಃಸಾಧ್ಯ. ಕವಿ ಕಾಲ್ಪನಿಕ ದೃಷ್ಟಿಯಿಂದಲೂ ಧಾರ್ಮಿಕ, ಸಾಮಾಜಿಕ ಪ್ರಜ್ಞೆಯುಳ್ಳ ವಿಭೂತಿಪುರುಷರ ದೃಷ್ಟಿಕೋನಗಳಿಂದಲೂ ಹಬ್ಬಗಳ ಮೂಲ ಹಾಗೂ ನಿಜವಾದ ಅರ್ಥಗಳನ್ನು ಕುರಿತು ವಾದವಿವಾದಗಳಿವೆ. ಆದರೆ ಹಬ್ಬಗಳಿಗೆ ನಿಖರವಾದ ಅರ್ಥಗಳುಂಟು ಎಂಬ ವಾದವು ಮಾತ್ರ ದಿಟ. ಕೆಲವು ಹಬ್ಬಗಳು ವೇದ-ಪುರಾಣಗಳಿಂದಲೂ, ಹಲವಾರು ಜಾನಪದದಿಂದಲೂ, ಇನ್ನೂ ಕೆಲವು ಪುರಾಣ ಮತ್ತು ಜಾನಪದ ಎರಡರಿಂದಲೂ ತಮ್ಮ ಮೂಲಗಳನ್ನು ಹೊಂದಿವೆ. ಅನಕ್ಷರತೆ ಬಹುಸಂಖ್ಯೆಯಲ್ಲಿರುವ ನಮ್ಮ ನಾಡಿನ ಜನರಲ್ಲಿ ಧಾರ್ಮಿಕ ಸಾಂಸ್ಕೃತಿಕ ಆಚರಣೆಗಳ ವಿಚಾರದಲ್ಲಿ, ಕಾರ್ಯಕಾರಣ ಮತ್ತು ವಿಮರ್ಶಾತ್ಮಕದೃಷ್ಟಿಯು ಕಡಿಮೆ ಎನ್ನಬಹುದು. ಮದುವೆಯ ಸಮಯದಲ್ಲಿ ಕರಿಬೆಕ್ಕೊಂದು ಹಾಲು, ಪೂಜಾಫಲಗಳನ್ನು ಮುಟ್ಟಿ ತೊಂದರೆಕೊಡುತ್ತಿದ್ದಾಗ ಪುರೋಹಿತನು ಬಾಳೆಯ ನಾರಿನಿಂದ ಮಂಚದ ಕಾಲಿಗೆ ಅದನ್ನು ಕಟ್ಟಿದನು. ಕಾಲಾಂತರದಲ್ಲಿ ಈ ಪ್ರಾಸಂಗಿಕ ಘಟನೆಯು ಒಂದು ಆಚರಣೆಯಾಗಿಯೇ ಪರಿಣಮಿಸಿತು. ಮದುವೆಯ ಕಾಲಕ್ಕೆ ಕರಿಬೆಕ್ಕನ್ನು ಬಹು ಪ್ರಯಾಸದಿಂದ ಎಲ್ಲಿಂದಲೋ ತಂದು ಮಂಚದ ಕಾಲಿಗೆ ಕಟ್ಟುವ ರೂಢಿ ಬೆಳೆದು ಬಿಟ್ಟಿತು. ಈ ರೀತಿಯಾಗಿ ಜನರಲ್ಲಿ ಕಾರ್ಯಕಾರಣ ವಿಮರ್ಶಾತ್ಮಕ ಮನೋಭಾವ ಇಲ್ಲದ್ದರಿಂದ ಎಷ್ಟೋ ಆಚಾರ ವಿಚಾರಗಳು ಕುರುಡು ರೀತಿಯಿಂದಲೇ ಬೆಳೆದುಬಂದಿವೆ.

ಹಬ್ಬಗಳನ್ನು ಅವುಗಳ ಉದ್ದೇಶ ಹಾಗೂ ಆಚರಣೆಯ ಪದ್ಧತಿಗಳಿಗನುಗುಣವಾಗಿ, ಊರಮಟ್ಟದ, ಜಾತಿಮಟ್ಟದ ಮತ್ತು ಕುಟುಂಬಮಟ್ಟದ ಹಬ್ಬಗಳೆಂದು ವಿಂಗಡಿಸಬಹುದು. ಬಹುಸಂಖ್ಯಾತ ಹಬ್ಬಗಳು ಏಕದೇಶೀಯವಾಗಿರುವವು. ಅಂದರೆ ಅವು ಸಮಾಜದ ಒಂದೊಂದು ವಿಶಿಷ್ಟ ಜಾತಿ ಪಂಗಡಗಳಿಗೆ ಸಂಬಂಧಿಸಿರುವವು. ಇನ್ನು ಕೆಲವು ವ್ರತೋಪಾಸನೆಯ ಹಬ್ಬಗಳು. ಒಂದೊಂದು ಕುಟುಂಬಕ್ಕೆ, ಒಂದೊಂದು ವ್ಯಕ್ತಿಗೆ ಸಂಬಂಧವಾಗಿರುವವು. ಗ್ರಾಮಮಟ್ಟದ ಹಬ್ಬಗಳಿಂದ ಸಾಮಾಜಿಕ ಸಂಘಟನೆಯೂ, ಸಮುದಾಯ ಮನೋಭಾವನೆಯು ಬೆಳೆಯಬಹುದಲ್ಲದೆ, ಹಳ್ಳಿಯ ತುರುಸು ಜಗಳಗಳೂ ಕೂಡ ಸಂಭವಿಸಬಹುದು. ಹಬ್ಬ ಉತ್ಸವಗಳ ಸಂದರ್ಭಗಳಲ್ಲಿ ಹಳೆಯ ಒಡಕು,

ವೈಮನಸ್ಸು ಮಾಯವಾಗಿ ಊರಿನ ಜನರಲ್ಲಿ ಐಕ್ಯಭಾವನೆಗಳು ಮೂಡಬಹುದು. ಅದರಂತೆಯೇ ಊರಿನ ಒಮ್ಮತಕ್ಕೆ ಧಕ್ಕೆ ಕೂಡ ಸಂಭವಿಸಬಹುದು.

ಹಬ್ಬಗಳು ಸಂಸ್ಕೃತಿ, ಧರ್ಮ ಆಚಾರ ವಿಚಾರಗಳ ಸಂಕೇತಗಳಲ್ಲದೇ ಅವು ಗಳ ವಾಹಕಗಳೂ ಕೂಡ. ಹಿಂದು ಹಬ್ಬಗಳು ವೇದ ಪುರಾಣಗಳಲ್ಲಿಯ ಘಟನೆಗಳ ಮತ್ತು ಮಹಾಪುರುಷರ ನೆನಪನ್ನು ಜನರಿಗೆ ಸಾರಿಹೇಳುತ್ತವೆ. ಮಹಾಪುರುಷರ ಕೃತಿ, ಚರಿತ್ರೆಗಳು ಯುವಜನ ಪೀಳಿಗೆಗೆ ಭವಿತವ್ಯವನ್ನು ಪ್ರೇರೇಪಿಸುವವು. ಯಾವದೇ ಸಮಾಜವಾಗಲಿ ಐತಿಹಾಸಿಕ ಅಡಿಗಲ್ಲು ಇಲ್ಲವೆ ಬಹು ಮುಂದೆ ಹೋಗ ಲಾರದು. ಆದುದರಿಂದಲೇ ವೇದ, ಪುರಾಣ, ಖುರಾನ, ಬೈಬಲ್‌ಗಳಿಗೆ ಮಹತ್ವ ವಿರುವದು. ಇವು ತಪ್ಪು-ಒಪ್ಪು, ಯೋಗ್ಯ-ಅಯೋಗ್ಯ, ಧರ್ಮ-ಅಧರ್ಮ ಕುರಿತು ಸಮಾಜಕ್ಕೆ ಸರಿಯಾದ ಶಿಕ್ಷಣ ಕೊಡುವವು. ಹಬ್ಬಗಳು ಪಂಡಿತರಿಂದ ಪಾಮರರಿಗೂ ನೀತಿಬೋಧೆಯನ್ನು ಮಾಡುವವು. ಇವು ಅನಕ್ಷರಸ್ಥ ಜನರಿಗೆ ನಾಡಿನ ಇತಿಹಾಸ, ವೈಭವ ಮತ್ತು ಸಂಸ್ಕೃತಿಯನ್ನು ಅರುಹುವವದರಲ್ಲಿ ಅತಿ ಮುಖ್ಯವಾದ ಸಾಧನೆಗಳಾಗಿವೆ.

ಕಾಲಾನುಕ್ರಮದಿಂದ ಸಮಾಜದಲ್ಲಿ ಬದಲಾವಣೆಗಳು ಸಂಭವಿಸುವದು ಅಸಾಮಾನ್ಯವೇನಲ್ಲ. ಈ ಬದಲಾವಣೆಗಳಿಗೆ ವಿವಿಧ ರೀತಿಯ ಕಾರಣಗಳಿರ ಬಹುದು. ಆಯಾ ಕಾಲದ ಆರ್ಥಿಕ, ಸಾಮಾಜಿಕ, ರಾಜಕೀಯ ಧೋರಣೆಗಳು ಮಹತ್ವದ ಪಾತ್ರವಹಿಸುವವು. ಹದಿನೆಂಟನೆಯ ಶತಮಾನದಿಂದೀಚೆಗೆ ಏಶಿಯಾದ ನಾಡುಗಳಲ್ಲಿ ಬಿಳಿಯರ ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಪ್ರಭಾವಗಳು ಪ್ರಾದೇಶಿಕ ಸಂಸ್ಕೃತಿಯನ್ನು ಹಿಂದೂಡಿವೆ. ಆದರೆ ನಿರಕ್ಷರ ಹಳ್ಳಿಗರೇ ಬಹು ಸಂಖ್ಯಾತರಿರುವ ನಮ್ಮ ನಾಡಿನಲ್ಲಿ ದಿಢೀರ ಮೂಲಭೂತ ಬದಲಾವಣೆಗಳು ಬರದಿದ್ದರೂ, ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ ಸ್ವಲ್ಪಮಟ್ಟಿಗಾದರೂ ಪರಿಣಾಮ ಬೀರಿರುವದು. ಪಾಶ್ಚಾತ್ಯರ ಅಂಧ ಅನುಕರಣೆಯ ಸುಶಿಕ್ಷಿತ ಜನರು ಹಬ್ಬ-ಹರಿದಿನಗಳನ್ನು ಮರೆತುಬಿಡುತ್ತಿದ್ದಾರೆ. ಪಟ್ಟಣಗಳ ಯಾಂತ್ರಿಕ ಜೀವನದಲ್ಲಿ ಇಂತಹ ಆಚಾರ ವಿಚಾರಗಳ ನೆನಪು ಬರುವದು ಅಪರೂಪ. ಹೀಗಾಗಿ ಇಂದು ನಾವು ನಮ್ಮ ಸಂಸ್ಕೃತಿ, ಪರಂಪರೆ, ಸಂಪ್ರದಾಯಗಳನ್ನು ಹಳ್ಳಿಗಳಲ್ಲಿಯೇ ಸಾಮಾನ್ಯವಾಗಿ ನೋಡಬಹುದು.

ಶಾಂತಿಗ್ರಾಮದ ಉತ್ಸವಗಳು

ಇಡೀ ಹಳ್ಳಿ, ಅಲ್ಲದೆ ಸುತ್ತುಮುತ್ತಲಿನ ಹಳ್ಳಿಗಳ ಮಟ್ಟದ ಉತ್ಸವ ಗಳನ್ನು ಗಣನೆಗೆ ತೆಗೆದುಕೊಂಡರೆ, ಗ್ರಾಮದಮ್ಮನ ಉತ್ಸವ, ಸೌಮ್ಯಕೇಶವ

ಉತ್ಸವ, ವರದ ಯೋಗಭೋಗ ನರಸಿಂಹನ ಉತ್ಸವ ಮೊದಲಾದವುಗಳನ್ನು ಹೆಸರಿಸಬಹುದು. ಗ್ರಾಮದಮ್ಮ ಊರಿನ ಮಹತ್ವದ ಹಾಗೂ ಉಗ್ರದೇವತೆಯಾಗಿದ್ದು ಆಕೆಯ ಉತ್ಸವವು ಬಹು ವಿಜೃಂಭಣೆಯಿಂದ ನಡೆಯುವದು. ಅಮ್ಮನ ಉತ್ಸವವನ್ನು ಎಲ್ಲ ಜಾತಿಯ ಜನರು ಬಹಳ ಉತ್ಸಾಹದಿಂದಲೂ ಭಯ, ಭಕ್ತಿಯಿಂದಲೂ ಆಚರಿಸುತ್ತಾರೆ. ಈ ಉತ್ಸವಕ್ಕೆ ನೆರೆಯ ಹಳ್ಳಿಗಳಾದ ಅಮ್ಮನ ಗುಡಿ ಕೊಪ್ಪಲು, ಕೆರೆಮುಂದಿನ ಕೊಪ್ಪಲು, ವಡ್ಡರ ಕೊಪ್ಪಲು ಹಾಗೂ ಬಂಡಿಹಳ್ಳಿ ಮೊದಲಾದ ಊರುಗಳಿಂದ ಜನರು ಬಂದು ಪಾಲ್ಗೊಳ್ಳುತ್ತಾರೆ. ಹಿಂದಿನ ಕಾಲದಲ್ಲಿ ಜನರು ಪ್ಲೇಗು, ಕಾಲರಾ, ಸಿಡುಬು ಇತ್ಯಾದಿ ಭಯಂಕರ ಪಿಡುಗುಗಳಿಂದ ತುತ್ತಾದಾಗ ಗ್ರಾಮದಮ್ಮನ ಮೊರೆಹೊಕ್ಕು ಹರಕೆಹೊತ್ತರೆ ಮಾತ್ರ ಉಳಿದು ಬದುಕಿಕೊಳ್ಳಬಹುದೆಂಬ ನಂಬಿಕೆ ಇತ್ತು. ಆದುದರಿಂದಲೇ ಸುತ್ತುಮುತ್ತಲಿನ ಹಳ್ಳಿಗಳ ಜನರು ಮಾರಿದೇವಿಯ ಜಾತ್ರೆಯಲ್ಲಿ ಭಾಗವಹಿಸಿ ತಮ್ಮತಮ್ಮ ಹರಕೆಗಳನ್ನು ಪೂರೈಸುತ್ತಾ ಬಂದಿದ್ದಾರೆ.

ಗ್ರಾಮದಮ್ಮನ ಉತ್ಸವ

ಶಾಂತಿಗ್ರಾಮದಲ್ಲಿ ಅಮ್ಮನ ಉತ್ಸವಮೂರ್ತಿ ಮಾತ್ರ ಇದ್ದು ಉದ್ಭವಮೂರ್ತಿಯು ಅಮ್ಮನ ಗುಡಿ ಕೊಪ್ಪಲದ ಅಮ್ಮನ ಗುಡಿಯಲ್ಲಿದೆ. ಆದುದರಿಂದ ಈ ಹಳ್ಳಿಗೆ "ಅಮ್ಮನ ಗುಡಿ ಕೊಪ್ಪಲು" ಎಂಬ ಹೆಸರು ಬಂದಿದೆ. ಜನರು ಅಮ್ಮನ ಗುಡಿ ಕೊಪ್ಪಲನ್ನು ಗ್ರಾಮದಮ್ಮನ ತವರುಮನೆ ಎಂದೂ ಸಂಬೋಧಿಸುತ್ತಾರೆ. ಪ್ರತಿವರ್ಷ ಯುಗಾದಿ ಹಬ್ಬವಾದ ಹದಿನೈದು ದಿನಗಳ ನಂತರ ಅಮ್ಮನ ಉತ್ಸವವನ್ನು ಆಚರಿಸಲಾಗುವದು. ಸಾಮಾನ್ಯವಾಗಿ ಉತ್ಸವವು ಶಾಂತಿಗ್ರಾಮದಲ್ಲಿ ಸೋಮವಾರ ದಿನ ಪ್ರಾರಂಭವಾಗುವದು. ಅಂದು ಉತ್ಸವಮೂರ್ತಿಯನ್ನು ರಥದಲ್ಲಿ ಅವರೋಹಿಸಿ ಹಳ್ಳಿಯ ವಾದ್ಯಸಮೇತವಾಗಿ ಮೆರವಣಿಗೆ ಹೊರಡುವದು. ಉತ್ಸವದ ಮುಂದೆ ಮೂರುಜನ "ದೇವರ ಕಟ್ಟುವರು" ಕುಣಿಯುತ್ತಿರುತ್ತಾರೆ. ಇವರು ಕೆಂಪುಬಣ್ಣದ ಜುಬ್ಬ, ಪಂಚೆ ಹಾಗೂ ಬಣ್ಣದ ರುಮಾಲು ಧರಿಸಿ ಕೈಯಲ್ಲಿ ಥಳಥಳಿಸುವ ಖಡ್ಗವನ್ನು ಹಿಡಿದಿರುತ್ತಾರೆ. ಸೊಂಟದ ಪಟ್ಟಿಗೆ ವೀರಭದ್ರದೇವರ ಕಂಚಿನ ವಿಗ್ರಹವನ್ನು ಕಟ್ಟಿರುತ್ತಾರೆ. ಮೆರವಣಿಗೆಯ ಮುಂದೆ ನರ್ತಿಸುವಾಗ ಗ್ರಾಮದಮ್ಮ ಅವರ ಮೈಯಲ್ಲಿ ಪ್ರವೇಶಿಸುತ್ತಾಳೆಂಬ ನಂಬಿಕೆ. ಆಗ ದೇವರ ಕಟ್ಟುವರು ಕಲ್ಲಿನ ಮೂರ್ತಿಯಂತೆ ನಿಂತು ಬಿಡುವರು. ಕೂಡಲೆ ಭಕ್ತರು ಅವರಿಗೆ ಟೆಂಗಿನಕಾಯಿಗಳನ್ನು ನಿವಾಳಿಸಿ ನೆಲಕ್ಕೆ ಹೊಡೆಯುವರು. ಈ ಮೆರವಣಿಗೆಯು ಶಾಂತಿಗ್ರಾಮದಿಂದ ಅಮ್ಮನ ಗುಡಿ

ಕೊಪ್ಪಲವನ್ನು ತಲುಪುವ ಕಾಲಕ್ಕೆ ಜನರು ಸುಮಾರು ೨೫೦೦-೩೦೦೦ ತೆಂಗಿನ ಕಾಯಿಗಳನ್ನಾದರೂ ದೇವಿಗೆ ಅರ್ಪಿಸುವರು. ಹಳ್ಳಿಗರು ಇಷ್ಟು ಹಣ ವ್ಯಯ ಮಾಡಲು ಅವರಿರುವ ಭೌಗೋಲಿಕ ಪರಿಸರವೇ ಕಾರಣ. ಅಂದರೆ ತೋಟ ಗಳಿದ್ದವರು ಇಲ್ಲಿ ಸಾಕಷ್ಟು ಪ್ರಮಾಣದಲ್ಲಿ ತೆಂಗನ್ನು ಬೆಳೆಯಿಸುತ್ತಾರೆ. ದೇವಿಗೆ ಅರ್ಪಿಸಿದ ತೆಂಗಿನಕಾಯಿಗಳನ್ನು ಬಡಜನರ ಮಕ್ಕಳು ಆರಿಸಿಕೊಳ್ಳುವದರಿಂದ ಅವರಿಗೆ ಅಮ್ಮನ ಉತ್ಸವವು ಒಂದು ಹಿಗ್ಗಿನ ಸುಗ್ಗಿಯೇ ಸರಿ.

ಸೋಮವಾರ ರಾತ್ರಿ ಒಂಬತ್ತುಗಂಟೆಗೆ ಮೆರವಣಿಗೆಯು ಅಮ್ಮನ ಗುಡಿ ಕೊಪ್ಪಲನ್ನು ತಲುಪುವದು. ಮಂಗಳವಾರದಿಂದ ಪ್ರಾರಂಭವಾದ ರಥದ ಉತ್ಸವವು ನೆರೆಯ ಹಳ್ಳಿಗಳಾದ ಒಡ್ಡರಕೊಪ್ಪಲು, ಕೆರೆಮುಂದಿನ ಕೊಪ್ಪಲು, ಅಡ್ಡಿ ಹಳ್ಳಿ, ಬಂಡಿಹಳ್ಳಿ ಹಾಗೂ ರಂಗನಾಥಪೂರಗಳಿಗೆ ದರ್ಶನಕೊಟ್ಟು ಶುಕ್ರವಾರ ಸಂಜೆಗೆ ಮರಳಿ ಅಮ್ಮನಗುಡಿ ಕೊಪ್ಪಲನ್ನು ತಲುಪುವದು. ಅದೇ ದಿವಸ ಬರಿದಾದ ಅಮ್ಮನ ರಥವು ಬಂಡಿಹಳ್ಳಿಯಿಂದ ಅಮ್ಮನಗುಡಿ ಕೊಪ್ಪಲಕ್ಕೆ ಬರುವದು. ಶನಿವಾರ ಮುಂಜಾನೆ ಎಲ್ಲ ಹಳ್ಳಿಯ ಜನರು ಅಮ್ಮನಗುಡಿ ಕೊಪ್ಪಲದಲ್ಲಿ ಸೇರುವರು. ಉತ್ಸವಮೂರ್ತಿಯನ್ನು ಮೊದಲು ಶಾಂತಿಗ್ರಾಮದ ಅಮ್ಮನ ರಥದಲ್ಲಿ ಕೂಡ್ರಿಸಿ ಗುಡಿಯನ್ನು ಒಂದು ಸುತ್ತು ಮೆರವಣಿಗೆಯೊಂದಿಗೆ ಸುತ್ತುವರು, ನಂತರ ಅಮ್ಮನಗುಡಿ ಕೊಪ್ಪಲದ ರಥದಲ್ಲಿ, ತದನಂತರ ಬಂಡಿ ಹಳ್ಳಿಯ ರಥದಲ್ಲಿ ಕೂಡ್ರಿಸಿ ಮೆರವಣಿಗೆ ತೆಗೆಯುವರು. ಈ ಜಾತ್ರೆಯ ಸಮಯದಲ್ಲಿ ಸಾರ್ವಜನಿಕ ಅನ್ನಪ್ರಸಾದದ ವ್ಯವಸ್ಥೆ ಇರುವದಿಲ್ಲ. ಶನಿವಾರ ಮಧ್ಯರಾತ್ರಿ ಸುಮಾರಿಗೆ ಅಮ್ಮನಗುಡಿಯ ಮುಂದೆ ಅಗ್ನಿಕುಂಡವನ್ನು ಹೊತ್ತಿ ಸುವರು. ರವಿವಾರ ಸೂರ್ಯೋದಯದ ವೇಳೆಗೆ ಕೆಂಡೋತ್ಸವವು ಜರುಗುವದು. ಮೊದಲು ವೀರಭದ್ರದೇವರು, ನಂತರ ಇನ್ನುಳಿದ ದೇವರ ಕಟ್ಟುವರು ಕೆಂಡ ವನ್ನು ಹಾಯುವರು. ಕೊನೆಯಲ್ಲಿ ಆದಿಕರ್ನಾಟಕ ಜಾತಿಯ ವಾದ್ಯಮೇಳ ದವರು ಕೆಂಡವನ್ನು ದಾಟುವರು. ಈ ಕೆಂಡೋತ್ಸವವನ್ನು ನೋಡಿದ ಎಂತಹ ನಾಸ್ತಿಕನು ಸ್ತಂಭೀಭೂತನಾಗುವನೆಂಬುದು ಹಳ್ಳಿಗರ ಭಾವನೆ. ಕೇವಲ ವೈಜ್ಞಾ ನಿಕ ದೃಷ್ಟಿಕೋನದಿಂದ ಇಂತಹ ಪವಾಡಗಳನ್ನು ಅಳೆಯುವದು ತಪ್ಪು, ಇದರ ಹಿಂದೆ ದೈವೀಪ್ರೇರಣೆ ಇದೆ ಎಂಬುದು ಅವರ ನಂಬಿಕೆ. ಕೆಂಡೋತ್ಸವ ಮುಗಿದ ನಂತರ ಜನರು ತಮ್ಮ ತಮ್ಮ ಊರುಗಳಿಗೆ ಹಿಂತಿರುಗುವರು. ಮುಂದೆ ಬರುವ ರವಿವಾರ (ಎಂಟು ದಿನಗಳ ನಂತರ) ಅಮ್ಮನಗುಡಿ ಕೊಪ್ಪಲದಲ್ಲಿ ಜರುಗಿದ ಕೆಂಡೋತ್ಸವದ ರೀತಿಯಲ್ಲಿಯೇ ಶಾಂತಿಗ್ರಾಮದಲ್ಲಿಯೂ ಕೆಂಡದ ಉತ್ಸವ ನಡೆಯುವದು.

ಗ್ರಾಮದಮ್ಮನ ಉತ್ಸವವನ್ನು ಸಂಶೋಧನಾತ್ಮಕ ದೃಷ್ಟಿಯಿಂದ ವಿಶ್ಲೇಷಿಸಿದಾಗ ಶಾಂತಿಗ್ರಾಮಕ್ಕೆ ಸುತ್ತಮುತ್ತಲಿನ ಹಳ್ಳಿಗಳು ಅನೇಕ ರೀತಿಯಿಂದ ಸಂಬಂಧ ಹೊಂದಿವೆ ಎಂಬುದು ಕಂಡುಬರುವದು. ಅಮ್ಮನ ಗುಡಿಕೊಪ್ಪಲು ಗ್ರಾಮದಮ್ಮನ ತವರೂರು ಎಂದು ಜನರು ಹೇಳುತ್ತಾರೆ. ಉಳಿದ ಹಳ್ಳಿಗಳು ಶಾಂತಿಗ್ರಾಮಕ್ಕೆ ಅತಿ ಸಮೀಪದಲ್ಲಿ ಇರುವದರಿಂದ ಬಹುಕಾಲದ ಹಿಂದೆ ಇವು ಶಾಂತಿಗ್ರಾಮದ ಜನರಿಂದಲೇ ಸ್ಥಾಪಿತವಾಗಿರಬೇಕು. ಶಾಂತಿಗ್ರಾಮದ ಒಕ್ಕಲಿಗರ ಹೊಲಗಳಲ್ಲಿಯ ವಸತಿಗಳು ಕಾಲಾನುಕ್ರಮದಲ್ಲಿ ಸಣ್ಣಸಣ್ಣ ಹಳ್ಳಿಗಳಾಗಿ ಮಾರ್ಪಟ್ಟಿರಬೇಕು. ಉದಾಹರಣೆಗಾಗಿ ಕೆರೆ ಮುಂದಿನ ಕೊಪ್ಪಲದ ಜನರಿಗೆ ಮಳೆಗಾಲದಲ್ಲಿ ಹಳ್ಳದಲ್ಲಿ ಮಹಾಪೂರ ಬಂದು ಶಾಂತಿಗ್ರಾಮಕ್ಕೆ ಬಂದುಹೋಗುವದು ಸಾಧ್ಯವಿಲ್ಲ. ಈ ಭೌಗೋಲಿಕ ಅಡಚಣೆಯಿಂದ ನಾವು ಹೇಳಬಹುದೇನಂದರೆ—ಶಾಂತಿಗ್ರಾಮದ ಜನರು ತಮ್ಮ ಹೊಲಗಳಲ್ಲಿ ತಾತ್ಪೂರ್ತಿಕವಾಗಿ ಕಟ್ಟಿಕೊಂಡ ಗುಡಿಸಲುಗಳಲ್ಲಿಯೇ ಮಳೆಗಾಲದ ತೊಂದರೆಯಿಂದ ವಾಸಿಸಬೇಕಾಗಿ ಬಂದು ಕ್ರಮೇಣ ಇವೇ ಹಳ್ಳಿಯಾಗಿ ಬೆಳೆದು, ಕೆರೆಯ ಮುಂದೆ ಇರುವದರಿಂದ ಕೆರೆಮುಂದಿನ ಕೊಪ್ಪಲು ಎಂದು ಕರೆಯಲ್ಪಟ್ಟಿರಬೇಕು. ಅಥವಾ ಈ ನೆರೆಯ ಹಳ್ಳಿಗಳು ಮೊದಲಿನಿಂದಲೂ ಬೇರೆಯೇ ನೆಲೆಸಿದ್ದು, ಗ್ರಾಮದಮ್ಮನ ಪ್ರಭಾವಕ್ಕೊಳಗಾಗಿ, ಅಮ್ಮನ ರಥವು ತಮ್ಮ ಊರಿಗೆ ಬಂದರೆ ರೋಗರುಜಿನಗಳಿಂದ ತಾವು ರಕ್ಷಿಸಿಕೊಳ್ಳಬಹುದೆಂಬ ನಂಬಿಕೆಯಿಂದ ಜನರು ತಮ್ಮ ಹಳ್ಳಿಗಳಿಗೆ ಗ್ರಾಮದಮ್ಮನ ರಥವನ್ನು ಆಮಂತ್ರಿಸುವ ಪದ್ಧತಿಯನ್ನು ಬೆಳೆಸಿಕೊಂಡಿರಬೇಕು.

ಸೌಮ್ಯಕೇಶವ ಉತ್ಸವ

ಸೌಮ್ಯಕೇಶವನು ಮುಖ್ಯವಾಗಿ ಬ್ರಾಹ್ಮಣರಿಗೆ ಸೇರಿದ್ದರೂ ಹಳ್ಳಿಯ ಎಲ್ಲ ಜಾತಿಯ ಜನರೂ ಉತ್ಸವದಲ್ಲಿ ಉತ್ಸಾಹದಿಂದ ಭಾಗವಹಿಸುವರು. ಉತ್ಸವದ ಪೂರ್ವದಲ್ಲಿ ಹಳ್ಳಿಯ ಹಿರಿಯ ಗಣ್ಯವ್ಯಕ್ತಿಗಳು ಸಭೆಸೇರಿ ಉತ್ಸವದ ಕಾರ್ಯಕಲಾಪಗಳನ್ನು ಕುರಿತು ಚರ್ಚಿಸಿ ಕಾರ್ಯ ಕೈಕೊಳ್ಳುವರು. ಉತ್ಸವದ ಮೊದಲನೆಯ ದಿನ ದೇವರ ವಿಗ್ರಹಕ್ಕೆ ಪಂಚಾಮೃತದ ಅಭಿಷೇಕ ಮಾಡುವರು. ತೀರ್ಥದ ನೀರನ್ನು ಗುಡಿಯ ಸುತ್ತಲೂ ಸಿಂಪಡಿಸುವರು. ಅದೇ ದಿನ ಸಂಜೆಯಲ್ಲಿ ಉತ್ಸವ ಮೂರ್ತಿಯನ್ನು ಸಣ್ಣ ರಥದಲ್ಲಿ ಕೂಡ್ರಿಸಿ ವಾದ್ಯಮೇಳದೊಂದಿಗೆ "ವರದ ಯೋಗ ಭೋಗ ನರಸಿಂಹ" ದೇವರ ಗುಡಿಗೆ ಸಮೀಪವಿರುವ ಅಶ್ವತ್ಥ ಮರಕ್ಕೆ ತರುವರು. ಈ ಮರದ ಬಳಿಯಲ್ಲಿರುವ ಸ್ವಲ್ಪ "ಮಣ್ಣನ್ನು" ತೆಗೆದು

ಕೊಂಡು ಮತ್ತೆ ಮೆರವಣಿಗೆಯಲ್ಲಿ ಸೌಮ್ಯಕೇಶವ ದೇವಾಲಯಕ್ಕೆ ಹಿಂತಿರುಗುವರು. ಸೌಮ್ಯಕೇಶವ ಮಂದಿರದ ಯೋಗಾಲಯವನ್ನು ತೀರ್ಥದಿಂದ ಪವಿತ್ರಗೊಳಿಸಲಾಗುವದು. ಅನಂತರ ಒಂದು ಕಂಚಿನ ಕಳಸವನ್ನು ಮಧ್ಯದಲ್ಲಿಯೂ, ಎಂಟು ಕಳಸಗಳನ್ನು ಎಂಟು ದಿಕ್ಕುಗಳಲ್ಲಿಯೂ ಇಡಲಾಗುವದು. ಮಧ್ಯದಲ್ಲಿರುವ ಕಳಸವು ಬ್ರಹ್ಮನನ್ನು ಉಳಿದ ಅಷ್ಟದಿಕ್ಪಾಲಕರನ್ನು ಪ್ರತಿನಿಧಿಸುವವು. ಈ ರೀತಿಯಾಗಿ ಸೌಮ್ಯಕೇಶವ ಉತ್ಸವಕ್ಕೆ ದೇವ ದೇವತೆಗಳನ್ನು ಆಮಂತ್ರಿಸಲಾಗುವದು. ಎಂಟು ಕಳಸಗಳ ಸುತ್ತಲೂ ಹನ್ನೆರಡು ಮಡಿಕೆಗಳನ್ನು ಇರಿಸಿ, ಅವುಗಳಲ್ಲಿ ಅಶ್ವತ್ಥ ಮರದ ಬುಡದಿಂದ ತಂದ ಪವಿತ್ರ ಮಣ್ಣನ್ನು ಹಾಕಿ, ಹಾಲಿನಲ್ಲಿ ನೆನೆಯಿಸಿದ ನವಧಾನ್ಯಗಳನ್ನು ಬಿತ್ತಲಾಗುವದು. ಉತ್ಸವದ ಕೊನೆಯ ವರೆಗೂ ಇವಕ್ಕೆ ಸರಿಯಾಗಿ ನೀರುಣ್ಣಿಸಲಾಗುವದು. ಈ ಮೊದಲನೆಯ ದಿನದ ಉತ್ಸವಕ್ಕೆ "ಅಂಕುರಾರ್ಪಣ" ಎಂದು ಕರೆಯುವರು. ಬಿತ್ತಿಗೆಯ ನಂತರ ಸಸ್ಯಗಳು ಯಾವ ದಿಕ್ಕಿಗೆ ಹುಲುಸಾಗಿ ಬೆಳೆಯುವವೋ ಆ ದಿಕ್ಕಿನ ಜನರ ಸುಗ್ಗಿಯು ಬಲು ಹುಲುಸಾಗಿ ಬರುವದೆಂದು ಜನರು ನಂಬುವರು.

ಉತ್ಸವ ಮುಗಿಯುವ ವರೆಗೆ ಪ್ರತಿದಿನ ಪ್ರಾತಃಕಾಲದಲ್ಲಿ ದೇವರಿಗೆ ಅಭಿಷೇಕ, ಪೂಜೆ ಮತ್ತು ಪ್ರಸಾದಗಳು ಸಾಂಗವಾಗಿ ಜರುಗುವವು. ಅಲ್ಲದೆ ಪ್ರತಿದಿನ ಸಂಜೆ ರಥದಲ್ಲಿ ಮೆರವಣಿಗೆ ನಡೆಯುವದು. ಎರಡನೆಯ ದಿನ ಗುಡಿಯಲ್ಲಿ ಅಗ್ನಿಕುಂಡವನ್ನು ಸ್ಥಾಪಿಸಲಾಗುವದು. ಈ ಅಗ್ನಿಯು ಉತ್ಸವದ ಕೊನೆಯ ವರೆಗೂ ಇರುವದು. ಯಜ್ಞದ ಸಲುವಾಗಿ ಅಗ್ನಿದೇವನಿಗೆ ಹೋಮವನ್ನು ಅರ್ಪಿಸುವರು. ಎರಡನೆಯ ದಿನವೇ ಪತಾಕೆಯನ್ನು ಗರುಡಗಂಬದ ಮೇಲೆ ಹಾರಿಸಲಾಗುವದು. ಈ ಗರುಡ ಪತಾಕೆಯು ಉತ್ಸವ ನಡೆಯುವದರ ಸಂಕೇತವಾಗಿರುವದು. ಇದೇ ದಿನ ಸಂಜೆಗೆ ಉತ್ಸವಮೂರ್ತಿಯನ್ನು ಹಂಸ ಪಕ್ಷಿಯ ವಿಗ್ರಹದ ಮೇಲೆ ಕೂಡ್ರಿಸಿ ಮೆರವಣಿಗೆ ತೆಗೆಯುವರು; ಕಾರಣ ಇದಕ್ಕೆ ಹಂಸೋತ್ಸವ ಎಂದು ಹೆಸರು. ಮೂರನೆಯ ದಿನ ಸಿಂಹವಾಹನೋತ್ಸವ, ನಾಲ್ಕನೆಯ ದಿನ ಚಂದ್ರಮಂಡಲೋತ್ಸವ, ನಂತರ ಶೇಷವಾಹನೋತ್ಸವ ಜರುಗುವವು. ಐದನೆಯ ದಿನ ಕೋದಂಡರಾಮನ ಉತ್ಸವ (ರಾಮ, ಸೀತೆ ಹಾಗೂ ಲಕ್ಷ್ಮಣರ ಅಲಂಕಾರ); ಲಕ್ಷ್ಮೀಕಲ್ಯಾಣ, ಗರುಡೋತ್ಸವಗಳನ್ನು ನೆರವೇರಿಸಲಾಗುವದು. ರಾತ್ರಿ ಪ್ರಲ್ಹಾದ ಪಾರಾಯಣ ನಡೆಯುವದು. ಎಂಟನೆಯ ದಿನ ಮಹಾ ರಥೋತ್ಸವ ನಡೆಯುವದು. ಅಂದು ಸುತ್ತಮುತ್ತಲಿನ ಹಳ್ಳಿಯ ಜನರು ಬರುವರು. ದೊಡ್ಡ ರಥದಲ್ಲಿ ಉತ್ಸವಮೂರ್ತಿಯನ್ನು ಕೂಡಿಸಲಾಗುವದು. ರಥವನ್ನು ಹೊರಡಿಸಲು ವಡ್ಡರಕೊಪ್ಪಲದಿಂದ ವಡ್ಡರು ಬರಲೇಬೇಕು. ಕೀಳು

ಜಾತಿಯವರೆಂದು ಪರಿಗಣಿಸಲಾದ ಈ ಜನರಿಗೆ ವರ್ಷದಲ್ಲಿ ಈ ಒಂದು ದಿನ ಮಹತ್ವದ ಸ್ಥಾನವಿರುವದು. ರಥೋತ್ಸವವು ವಾದ್ಯಗಳಿಂದ, ವಿದ್ಯುತ್ ಪ್ರಕಾಶ ದಿಂದ ಮತ್ತು ಬಹಳ ಜನರು ಸೇರುವದರಿಂದ ಬಲು ಸೊಗಸಾಗಿ ನಡೆಯುವದು.

ಒಂಬತ್ತನೆಯ ದಿನ ದವನ ಮಂಟಪೋತ್ಸವ ನಡೆಯುವದು. ಹತ್ತನೆಯ ದಿನ ಸೌಮ್ಯಕೇಶವನು, ರಾತ್ರಿಯೆಲ್ಲ ಕಾಡುಮೃಗಗಳಿಂದ ತೊಂದರೆಗೊಳಗಾಗಿದ್ದ ಋಷಿಗಳನ್ನು ರಕ್ಷಿಸಲು ಕಾಡಿಗೆ ಹೋಗುವನು. ಆಗ ಅರಮನೆಯಲ್ಲಿ ಲಕ್ಷ್ಮೀ ದೇವಿ ಒಬ್ಬಳೇ ಉಳಿಯುವಳು. ದೇವನು ಮರಳಿ ಬಂದು ದೇವಿಯನ್ನು ಬಾಗಿಲು ತೆಗೆಯಲು ಕೇಳಿದಾಗ ಲಕ್ಷ್ಮೀ ದೇವಿಯು ತನ್ನೊಬ್ಬಳನ್ನೇ ರಾತ್ರಿಯಲ್ಲಿ ತೊರೆದು ಹೋದುದಕ್ಕೆ ಹುಸಿ ಮುನಿಸಿಕೊಂಡು ಮೊದಲಿಗೆ ಬಾಗಿಲು ತೆಗೆಯುವದಿಲ್ಲ. ಈ ಸಂದರ್ಭವನ್ನು ಉಪಯೋಗಿಸಿಕೊಂಡು ಗುಡಿಯ ಒಳಗೆ ಲಕ್ಷ್ಮಿಯ ಪರ ಕೆಲವು ಜನ, ಮತ್ತು ಹೊರಗೆ ನಾರಾಯಣನ ಪರ ಕೆಲವು ಜನ ನಿಂತು ಬಲು ಸೊಗಸಾದ ವಾದ–ವಿವಾದ ಮಾಡಿತೋರಿಸುವರು. ಇದರ ನಂತರ ಕೆರೆಯ ಏರಿಯ ಮೇಲೆ ಜನರು ದೇವರೊಂದಿಗೆ ಓಕಳಿ ಆಡುವರು. ಉತ್ಸವದ ಕೊನೆಯ ಹಂತದಲ್ಲಿ ಅಗ್ನಿಯನ್ನು ನಂದಿಸುವರು, ಮತ್ತು ಗರುಡ ಪತಾಕೆಯನ್ನು ಇಳಿಸುವರು. ಇಲ್ಲಿಗೆ ವಿಧಿವತ್ತಾಗಿ ನಡೆಯಬೇಕಾದ ಉತ್ಸವವು ಮುಗಿಯುತ್ತದೆ. ಬೇಡಿಕೊಂಡು ಹರಕೆ ಹೊತ್ತವರು ತಮಗೆ ಬೇಕಾದ ಉತ್ಸವವನ್ನು ತಮ್ಮ ಸ್ವಂತ ಖರ್ಚಿನಲ್ಲಿ ಹದಿನೈದು ದಿನಗಳ ವರೆಗೂ ನಡೆಯಿಸಿಕೊಂಡು ಹೋಗುವರು. ಸೌಮ್ಯಕೇಶವ ಉತ್ಸವಕ್ಕೆ ಶಾಂತಿಗ್ರಾಮದ ಜನರು ತಮ್ಮ ಬಂಧುಮಿತ್ರರನ್ನು ಆಮಂತ್ರಿಸುವರು. ಅಲ್ಲದೆ ಬೆಂಗಳೂರ, ಮುಂಬಯಿ, ಮದ್ರಾಸ ಮುಂತಾದ ದೂರದ ಪಟ್ಟಣಗಳಲ್ಲಿ ನೆಲೆಸಿರುವ, ಈ ಊರಿನ ಜನರು ತಪ್ಪದೆ ಈ ಉತ್ಸವಕ್ಕೆ ಬರುವರು.

ಸೌಮ್ಯಕೇಶವನ ಉತ್ಸವದ ರೀತಿಯಲ್ಲಿಯೇ ವರದ ಯೋಗ ಭೋಗ ನರಸಿಂಹ ದೇವರ ಉತ್ಸವವನ್ನು ಪ್ರತಿವರ್ಷ ಮೇ ತಿಂಗಳಲ್ಲಿ ಆಚರಿಸಲಾಗುವದು. ಈ ಉತ್ಸವದ ಬಗ್ಗೆ ವಿಚಾರಿಸಿದಾಗ ಕೆಲವೇ ವರ್ಷಗಳ ಹಿಂದಿನಿಂದ ಇದನ್ನು ಆಚರಿಸಲು ಪ್ರಾರಂಭಿಸಲಾಗಿದೆ ಎಂಬುದು ತಿಳಿದುಬಂದಿತು. ಜನರಿಗೆ ಸುಖ, ನೆಮ್ಮದಿ ದೊರೆಯಲಿ ಎಂಬ ಭಾವನೆಯಿಂದ ಈ ಉತ್ಸವವನ್ನು ಆಚರಿಸುತ್ತಾರೆ.

ಶ್ರೀ ರಾಮನವಮಿ

ಶ್ರೀ ರಾಮನವಮಿಯನ್ನು (ಕುರುವಿನಶೆಟ್ಟಿ) ಶೆಟ್ಟರ ಜಾತಿಗೆ ಸೇರಿದ ಎರಡು ಉಪಜಾತಿಗಳಾದ ಮಗ್ಗದ ಮತ್ತು ದೇವಾಂಗ ಶೆಟ್ಟರುಗಳು ಆಚರಿಸುತ್ತಾರೆ.

ಭಕ್ತರು ಬಿದಿರಿನಿಂದ ಅಡ್ಡೆಯನ್ನು ಕಟ್ಟಿ ಬಾಳೆಯ ಗಿಡಗಳಿಂದ ಶೃಂಗರಿಸಿ ಅವರ ಮೇಲೆ ಶ್ರೀ ರಾಮನ ಫೋಟೋವನ್ನಿಟ್ಟು ಮೆರವಣಿಗೆ ತೆಗೆಯುವರು. ಆಗ ಗ್ರಾಮದಲ್ಲಿಯ ಇತರ ಭಕ್ತರು ಟೆಂಗಿನಕಾಯಿ, ಬಾಳೇಹಣ್ಣು ಮತ್ತು ಹಣದ ಕಾಣಿಕೆಗಳನ್ನು ಅರ್ಪಿಸುವರು. ಊರೆಲ್ಲ ಸುತ್ತಿ, ಮೆರವಣಿಗೆಯು ಶ್ರೀ ರಾಮದೇವರ ಗುಡಿಯ ಮುಂದೆ ಬಂದಾಗ ಭಕ್ತರಿಗೆಲ್ಲಾ ಪಾನಕವನ್ನು ನೀಡಲಾಗುವದು. ಈ ರೀತಿಯಾಗಿ ೯ ಅಥವಾ ೧೫ ದಿನಗಳ ವರೆಗೆ ದಿನವೂ ಉತ್ಸವವನ್ನು ಆಚರಿಸುವರು.

ಶ್ರೀ ರಾಮನವಮಿಯ ಕೊನೆಯ ದಿನ ಓಕಳಿ. ಇದರ ನಂತರ ಶ್ರೀ ರಾಮದೇವರ ಮೆರವಣಿಗೆಯು ಊರಲ್ಲಿ ಹೊರಡುವದು. ಮೆರವಣಿಗೆಯು ತಮ್ಮ ಮನೆಗಳ ಮುಂದೆ ಬಂದಾಗ ಭಕ್ತರು ತಾವೂ ಅದನ್ನು ಕೂಡಿಕೊಂಡು ಮುಂದೆ ನಡೆಯುವರು. ಕೊನೆಯಲ್ಲಿ ಮೆರವಣಿಗೆಯು ಊರ ಮುಂದಿನ ತಿಮ್ಮನ ಬಾವಿಗೆ ಬರುವದು. ದೇವರ ಅಡ್ಡೆಯನ್ನು ಬಾವಿಯ ದಡದಲ್ಲಿ ಬಿಟ್ಟು ಭಕ್ತರು ತಮ್ಮ ಮನೆಗಳಿಗೆ ಹೋಗಿ ಸ್ನಾನಮಾಡಿ ಬರುವರು. ನಂತರ ಸುಮಾರು ೧೧ ಘಂಟೆಗೆ, ಮೆರವಣಿಗೆ ಮತ್ತೆ ಪ್ರಾರಂಭವಾಗಿ ಊರೆಲ್ಲ ಸುತ್ತಾಡಿ ಕೊನೆಗೆ ಶ್ರೀ ರಾಮದೇವರ ಗುಡಿಗೆ ಬರುವದು. ಇಲ್ಲಿಗೆ ಶ್ರೀ ರಾಮನವಮಿಯು ಮುಗಿಯುವದು.

ಮಾರಿಯಮ್ಮನ ಉತ್ಸವ

ಮಾರಿಯಮ್ಮನ ಮಂದಿರವು ಊರಿನ ಮಧ್ಯದಲ್ಲಿದೆ. ಆದಿಕರ್ನಾಟಕ ಜಾತಿಗೆ ಸೇರಿದ ಪೂಜಾರಿ ಪ್ರತಿದಿನ ಮಧ್ಯಾಹ್ನ ಪೂಜೆಮಾಡಲು ಮಾರಿಯಮ್ಮನ ಗುಡಿಗೆ ಬರುತ್ತಾನೆ. ಮಾರಿಯಮ್ಮ ಆದಿಯಲ್ಲಿ ಕುಲದಿಂದ ಬ್ರಾಹ್ಮಣಿಯಾಗಿದ್ದು, ಆದಿಕರ್ನಾಟಕರ ಜಾತಿಯವನೊಬ್ಬ ಮೋಸದಿಂದ ಆಕೆಯನ್ನು ಮದುವೆಯಾದ ಕಾರಣ ಅವಳನ್ನು ಜಾತಿಯಿಂದ ಹೊರಗೆ ಹಾಕಲಾಯಿತು, ಎಂದು ಜನರು ದಂತಕಥೆ ಹೇಳುತ್ತಾರೆ. ಪ್ರತಿವರ್ಷ ಯುಗಾದಿಯ ಹಬ್ಬಕ್ಕೆ ಒಂದು ವಾರ ಮುಂಚೆ ಮಾರಿಯಮ್ಮನ ಉತ್ಸವ ಜರಗುವದು. ಭಕ್ತರು ತಂಬಿಟ್ಟು ಮತ್ತು ದುಡ್ಡನ್ನು ಕಾಣಿಕೆಯಾಗಿ ನೀಡುವರು. ಉತ್ಸವದ ಸಮಯದಲ್ಲಿ ಮಡಿವಾಳ ಶೆಟ್ಟರು ದೀವಟಿಗೆಯನ್ನು, ಬೆಸ್ತರು ಕೊಡೆಯನ್ನೂ ಮಾರಿಯಮ್ಮನ ಮೇಲೆ ಹಿಡಿದಿರುತ್ತಾರೆ. ಪೂಜಾರಿಯು ಸೇರಿ ಈ ಮೂವರೂ ತಂಬಿಟ್ಟನ್ನು ತಮ್ಮಲ್ಲಿ ಹಂಚಿಕೊಳ್ಳುವರು. ನಂತರ ಭಕ್ತರು, ಕೋಣ,

ಕುರಿ, ಕೋಳಿ ಮೊದಲಾದ ಸುಮಾರು ೫೦ ಪ್ರಾಣಿಗಳನ್ನು ದೇವಿಗೆ ಬಲಿ ಕೊಡುವರು. ಬಲಿಯ ಮಾಂಸವನ್ನು ಕೇವಲ ಆದಿಕರ್ನಾಟಕ ಜಾತಿಯ ಎಲ್ಲಾ ಜನರು ಕೂಡಿಕೊಂಡು ಊಟಮಾಡುವರು. ಮಾರಿಬೇನೆ, ಕಾಲರಾ, ಪ್ಲೇಗ ಮುಂತಾದ ಪಿಡುಗುಗಳು ಹಬ್ಬಿದಾಗ ಮಾರಿಯಮ್ಮನಿಗೆ ವಿಶೇಷ ಉತ್ಸವವನ್ನು ಆಚರಿಸುವದರಿಂದ ಇವು ನಿವಾರಣೆಯಾಗುವವು ಎಂದು ಜನರು ನಂಬುತ್ತಾರೆ. ಇದು ಮಾಂಸಾಹಾರಿಗಳಿಗೆ ಅದರಲ್ಲೂ ಕೆಳಗಿನ ಜಾತಿಯವರಿಗೆ ಸೇರಿದ ಹಬ್ಬವಾದ್ದರಿಂದ, ಉಳಿದ ಜಾತಿಯವರು ನೇರವಾಗಿ ಈ ಹಬ್ಬದಲ್ಲಿ ಭಾಗವಹಿಸುವದಿಲ್ಲ. ಆದಿಕರ್ನಾಟಕಿಯರೇ ಪೂಜಾರಿ ಇರುವದರಿಂದ ಇಲ್ಲಿ ಆಚರಿಸುವ ಪದ್ಧತಿಗಳು, ರೀತಿ-ನೀತಿಗಳು, ಬ್ರಾಹ್ಮಣ ಪದ್ಧತಿಗಿಂತ ಭಿನ್ನವಾಗಿವೆ. ಕಾರಣ ಇದನ್ನು ಜನಪದ ಹಬ್ಬವೆಂದು ಕರೆದರೂ ಸೂಕ್ತವೆನಿಸುತ್ತದೆ. ಜನಪದ ಮಾದರಿಯಲ್ಲಿ ಈ ಹಬ್ಬವನ್ನು ಆಚರಿಸದಿದ್ದರೆ ದೇವಿಯು ಮುನಿಯುವದರಿಂದ ತಮಗೇ ತೊಂದರೆಯಾಗುವದೆಂದು ಭಾವಿಸಿ, ಎಲ್ಲರೂ ಕೂಡಿ ಒಗ್ಗಟ್ಟಿನಿಂದ ಹಬ್ಬವನ್ನು ಆಚರಿಸುವದರಿಂದ, ಗುರುಮೂರ್ತಿ (೧೯೭೩-III) ಹೇಳುವಂತೆ, ಊರಲ್ಲಿ ಒಗ್ಗಟ್ಟು ಒಮ್ಮತಗಳು ಬರುತ್ತವೆ.

ಹಬ್ಬಗಳು

ಶಾಂತಿಗ್ರಾಮದಲ್ಲಿ ಆಚರಿಸುವ ಹನ್ನೆರಡು ಹಬ್ಬಗಳಲ್ಲಿ, ಯುಗಾದಿ, ನಾಗರ ಪಂಚಮಿ, ಗಣೇಶ ಚತುರ್ಥಿ, ಗೋಕುಲಾಷ್ಟಮಿ, ಗೌರಿ ಹಬ್ಬ, ಮಹಾನವಮಿ, ದೀಪಾವಳಿ, ಶಿವರಾತ್ರಿ ಮುಖ್ಯವಾದವುಗಳು.

ಯುಗಾದಿ

ಋತುಗಳಲ್ಲಿ ವಸಂತವಿದ್ದಂತೆ ಹಬ್ಬಗಳಲ್ಲಿ ಯುಗಾದಿ ಹಬ್ಬ. ಯುಗಾದಿ ಅಂದರೆ 'ವರ್ಷದ ಆದಿ' ಎಂದು ಹೇಳಬಹುದು. ಉತ್ತರಾಯಣ, ದಕ್ಷಿಣಾಯಣ ಎಂಬ ಎರಡು ಅಯಣಗಳನ್ನು ಹೊಂದಿರುವ ವರ್ಷದ ಆದಿಗೆ ಯುಗಾದಿ ಎಂಬ ಅರ್ಥ ಸೂಕ್ತ ಎನಿಸುವದು. ಯುಗಾದಿಯು ಶುಭದಿನವಾಗಿದ್ದು, ಅಂದು- ಎಂತಹ ಮಂಗಲಕಾರ್ಯಗಳನ್ನೂ ಆಚರಿಸಬಹುದು. ಜನರು ಹಬ್ಬದ ದಿನದಂದು ಬೇವನ್ನು ಹಾಕಿದ ನೀರಿನಿಂದ ಸ್ನಾನಮಾಡುವರು. ಬೇವಿನ ಸೊಪ್ಪಿನಿಂದ ಕೂಡಿದ ನೀರು ಚರ್ಮರೋಗಗಳನ್ನು ನಿವಾರಿಸುವದಲ್ಲದೆ ಮೈಯಲ್ಲಿಯ ಹೆಚ್ಚಿನ ಉಷ್ಣತೆಯನ್ನು ಕಳೆಯುತ್ತದೆ. ಮನುಷ್ಯ ಕಷ್ಟಗಳಿಗೆ ಕುಗ್ಗದೆ ಸುಖಗಳಿಗೆ ಹಿಗ್ಗದೆ ಎರಡನ್ನೂ ಸಮವೆಂದು ಬಗೆದು ಅವೆರಡರ

ಹೊಂದಾಣಿಕೆಯೇ ಸಂಸಾರವೆಂದು ತಿಳಿದು ಮುಕ್ತಿಯನ್ನು ಪಡೆಯಲು ಪ್ರಯತ್ನಿಸಬೇಕು, ಎಂಬ ಅರ್ಥದಿಂದ ಜನರು ಯುಗಾದಿಯ ದಿನ ಬೇವು ಬೆಲ್ಲವನ್ನು ಸೇವಿಸುವರು. ಬೇವನ್ನು ತಿನ್ನುವದಕ್ಕೆ ಸಂಬಂಧವಾಗಿ ಶಾಂತಿಗ್ರಾಮದಲ್ಲಿ ಒಂದು ದಂತಕಥೆಯು ಇದೆ. ಇದರ ಪ್ರಕಾರ ಬಾಲಕೃಷ್ಣನು ತನ್ನ ಓರಗೆಯವರೊಂದಿಗೆ ಚೆಂಡನ್ನು ಆಡುತ್ತಿದ್ದಾಗ, ಅವರ ಚೆಂಡು ಪಾತಾಳ ಲೋಕಕ್ಕೆ ಹೋಗಿ ಬೀಳುವದು. ಆಗ ಕೃಷ್ಣನು ಧೈರ್ಯದಿಂದ ಪಾತಾಳಕ್ಕೆ ಇಳಿದಾಗ, ಅಲ್ಲಿಯ ಕಾಳಿಂಗ ಸರ್ಪದೊಂದಿಗೆ ಹೋರಾಡಿ ಚೆಂಡನ್ನು ಹಿಂದಕ್ಕೆ ತಂದನು. ಆಗ ಅವನ ತಾಯಿಯು ಕಾಳಸರ್ಪನ ವಿಷ ಮಗನನ್ನು ಬಾಧಿಸಬಾರದೆಂದು ಕೃಷ್ಣನಿಗೆ ಬೇವನ್ನು ಕೊಟ್ಟಳು. ಅದೇ ಅರ್ಥದಲ್ಲಿ ತಾವೂ ವಿಷಕ್ಕೆ ತುತ್ತಾಗಬಾರದೆಂಬ ಉದ್ದೇಶದಿಂದ ಬೇವನ್ನು ಇಂದಿಗೂ ಜನರು ಸೇವಿಸುವರು.

ಉತ್ತರ ಕರ್ನಾಟಕದಲ್ಲಿ ಬಲು ಸೊಗಸಾಗಿ ಆಚರಿಸಲ್ಪಡುವ ಕಾರಹುಣ್ಣಿವೆಯನ್ನು ಶಾಂತಿಗ್ರಾಮದಲ್ಲಿ ಆಚರಿಸುವದಿಲ್ಲ. ಪಾಡ್ಯದಿಂದ ಯುಗಾದಿ ಹಬ್ಬದ ನಂತರ ಶ್ರಾವಣ ಬರುವದು. ಹಿಂದೂ ವರ್ಷದ ಹನ್ನೆರಡು ತಿಂಗಳಲ್ಲಿ ಶ್ರಾವಣ ಮಾಸದ ಹಿರಿಮೆ ದೊಡ್ಡದು. ತಿಂಗಳ ಮೂವತ್ತೂ ದಿನಗಳು ಒಂದೊಂದು ಬಗೆಯ ಪೂಜೆ, ವ್ರತಗಳ ಪರ್ವದಿನಗಳೇ ಆಗಿರುವವು. ಶುಕ್ಲ ಪ್ರತಿಪದ ತಿಥಿಯಿಂದ ಅಮಾವಾಸ್ಯೆಯ ವರೆಗಿನ ಪ್ರತಿಯೊಂದು ತಿಥಿಯು ದೇವ ದೇವತೆಗಳ ಉಪಾಸನಾ ದಿನವಾಗಿರುವದು. ಶ್ರಾವಣಮಾಸದ ಪ್ರತಿಯೊಂದು ರವಿವಾರವೂ ಸೂರ್ಯ ವ್ರತದ ದಿನವಾಗಿರುವದು. ಅಂದು ವ್ರತಿಯು ಸಂಪೂರ್ಣ ಮೌನಿಯಾಗಿದ್ದು ಬೆಳಗಿನಲ್ಲಿ ಸೂರ್ಯನನ್ನು ಪೂಜಿಸುವನು. ಶ್ರಾವಣ ಸೋಮವಾರವು ಶಿವೋಪಾಸಕರ ವ್ರತದಿನವಾಗಿರುವದು. ಅಂದು ವ್ರತಿಯು ಪ್ರದೋಷ ಕಾಲದವರೆಗೂ ಉಪವಾಸಿಯಾಗಿದ್ದು ಜಪತಪಗಳಿಂದ ಶಿವನನ್ನು ಉಪಾಸಿಸಬೇಕಾಗುವದು. ಬಳಿಕ ವಿದ್ಯುಕ್ತವಾಗಿ ಶಿವಪೂಜೆಯನ್ನು ಮಾಡಿ ಪ್ರಸಾದವನ್ನು ಸ್ವೀಕರಿಸುವನು. ಮಂಗಳವಾರವು ಮಂಗಳಗೌರಿಯ ವ್ರತದಿನವಾಗಿರುವದು. ಈ ವ್ರತವು ಸುಮಂಗಲೆಯರಿಗೆ ಸಂಬಂಧಿಸಿದೆ. ಮಂಗಲಗೌರಿಯ ವ್ರತ ಮಾಡಿದ ಒಬ್ಬ ಪುಣ್ಯವಧುವು ಅಲ್ಪಾಯುಷಿಯಾದ ತನ್ನ ಪತಿಯನ್ನು ಬದುಕಿಸಿ ಸುಖಜೀವಿಯಾದ ಕಥೆಯುಂಟು. ಶ್ರಾವಣ ಮಾಸದ ಬುಧವಾರ ಗುರುವಾರಗಳಂದು ಕುಟುಂಬದ ಯಜಮಾನನು ಕ್ರಮವಾಗಿ ಬುಧ-ಬೃಹಸ್ಪತಿಯನ್ನು ಪೂಜಿಸಿ ನೈವೇದ್ಯ ಸಲ್ಲಿಸುವನು. ಶ್ರಾವಣದ ಶುಕ್ರವಾರ, ಶನಿವಾರಗಳು ಸಂಪತ್ ಶುಕ್ರವಾರ ಮತ್ತು ಸಂಪತ್ ಶನಿವಾರ ಎಂದು ಹೆಸರು ಪಡೆದಿವೆ.

ನಾಗರಪಂಚಮಿ

ಶ್ರಾವಣ ಶುಕ್ಲ ಪಂಚಮಿಗೆ ನಾಗಪಂಚಮಿ ಎಂದು ಕರೆಯುವರು. ನಾಗ ಪೂಜೆಯೇ ನಾಗರ ಪಂಚಮಿಯ ವೈಶಿಷ್ಟ್ಯ. ದ್ರಾವಿಡರು ನಾಗಪ್ಪನನ್ನು ಅಗ್ರ ದೇವನನ್ನಾಗಿ ಸ್ವೀಕರಿಸಿದ್ದರು. ಶಿವನಿಗೆ ಆಭರಣವಾಗಿ, ವಿಘ್ನೇಶ್ವರನ ಒಡಲಿಗೆ ಕಟ್ಟಾಗಿ, ವಿಷ್ಣುವಿಗೆ ಹಾಸಿಗೆಯಾಗಿ, ಒಕ್ಕಲಿಗನ ಆಪ್ತಮಿತ್ರನಾಗಿ ಸೇವೆ ಸಲ್ಲಿ ಸುತ್ತಿರುವ ನಾಗನ ನಿಷ್ಠೆ ಅನುಪಮ. ಮಹಾಭಾರತದಲ್ಲಿ ನಾಗರ ಉಲ್ಲೇಖ ಹೀಗೆ ಬಂದಿದೆ— ನಾಗರಿಗೂ, ಆರ್ಯರಿಗೂ ವೈರತ್ವ ಬೆಳೆದು ನಾಗರಾಜ ತಕ್ಷಕ ಪರೀಕ್ಷಿತನನ್ನು ಕಚ್ಚಿ ಕೊಲ್ಲಲಾಗಿ, ಆತನ ಮಗ ಜನಮೇಜಯನು ಸರ್ಪಯಾಗ ಮಾಡಿ ನಾಗವಂಶ ಹಾಳು ಮಾಡಲು ಪಣತೊಡುತ್ತಾನೆ. ಆಗ ಆಸ್ತಿಕ ಋಷಿಯು ಮಧ್ಯಸ್ತಿಕೆ ವಹಿಸುತ್ತಾನೆ. ಅವನ ಮಧ್ಯಸ್ತಿಕೆಯಿಂದ ನಾಗರಾಜನು ಒಡಂಬಟ್ಟು ರಾಜನಲ್ಲಿದ್ದ ಎಲ್ಲ ವಿಷ ಹೀರಿ ಬದುಕಿಸುತ್ತಾನೆ. ಮುಂದೆ ಆರ್ಯರು ನಾಗನಿಗೆ ಮನ್ನಣೆ ಕೊಡಹತ್ತಿದರು. ಈ ಮನ್ನಣೆಯೇ ನಾಗಪೂಜೆಯಾಗಿದೆ. ಶಾಂತಿಗ್ರಾಮದಲ್ಲಿ ಓಣಿಯ ಜನರು ಕೂಡಿಕೊಂಡು ಸಮೀಪದ ಹಾವಿನ ಹುತ್ತಕ್ಕೆ ಹೋಗಿ ಹಾಲು ತುಪ್ಪವನ್ನು ಹುತ್ತದಲ್ಲಿ ಸುರಿಯುವರು. ಹುತ್ತದ ಸುತ್ತಲು ಭಜನೆ, ಪ್ರಾರ್ಥನೆಗಳನ್ನು ಮಾಡುವರು. ಆದಿಕರ್ನಾಟಕ ಜಾತಿಯವರು ಅಂದು ಹುತ್ತದ ಹತ್ತಿರವೇ ಹೊಸ ಪಾತ್ರೆಗಳಲ್ಲಿ ಅಡಿಗೆ ಮಾಡಿ ಸಾಮೂಹಿಕ ವಾಗಿ ಊಟಮಾಡುವರು. ಶಾಂತಿಗ್ರಾಮದಲ್ಲಿ ಈ ಹಬ್ಬಕ್ಕೆ ಜೋಕಾಲಿಯನ್ನು ಕಟ್ಟುವದಿಲ್ಲ.

ಗಣೇಶ ಚತುರ್ಥಿ

ಈ ಹಬ್ಬವನ್ನು ಭಾದ್ರಪದಮಾಸದ ಶುಕ್ಲ ಚತುರ್ಥಿಯಂದು ಆಚರಿಸ ಲಾಗುವದು. ಇದು ಸಾರ್ವಜನಿಕ ಹಬ್ಬವಿದ್ದು ಭಾರತದ ಎಲ್ಲ ಜನರು ವಿವಿಧ ರೀತಿಯಲ್ಲಿ ಆಚರಿಸುತ್ತಾರೆ. ಸಂಪ್ರದಾಯವಂತರ ಮನೆಗಳಲ್ಲಿ ಸಿದ್ಧಿವಿನಾಯಕ ವ್ರತ ಪೂಜೆಗಳನ್ನು ನಡೆಯಿಸಲಾಗುತ್ತದೆ. ಭಾರತೀಯ ಇದು ಪ್ರಮುಖ ಉಪಾಸ್ಯ ದೇವತೆಗಳಲ್ಲಿ ಗಣಪತಿಯೂ ಒಬ್ಬ. ವಿಷ್ಣು, ಶಿವ, ಸೂರ್ಯದೇವತೆ ಗಳಂತೆ ಗಣೇಶನು ಸರ್ವೋತ್ತಮ ದೇವನೆಂಬ ಉಪಾಸನೆ ಒಂದು ಕಾಲದಲ್ಲಿ ವಿಶೇಷ ಪ್ರಚಾರವಲ್ಲಿತ್ತು. ಹರಿ-ಹರರ ಉಪಾಸನೆಗಳಿಗೆ ವಿಶೇಷ ಪ್ರಾಮುಖ್ಯ ದೊರೆಯುತ್ತಾಹೋದಂತೆಲ್ಲಾ, ಗಣಪತಿಯು ಗೌಣಸ್ಥಾನಕ್ಕೆ ಇಳಿದು ನಿಂತು ಕೊಂಡ. ಆದರೂ ಯಾವುದೇ ಲೌಕಿಕ ಕಾರ್ಯದ ಪ್ರಾರಂಭದಲ್ಲಿಯೂ, ಧಾರ್ಮಿಕ ಕರ್ಮ ಪ್ರಾರಂಭದಲ್ಲಿಯೂ ಮೊದಲ ಪೂಜೆ ಸಲ್ಲಬೇಕಾದುದು

ಈತನಿಗೆಯೇ. ವಸ್ತುತಃ ಗಣೇಶ ಪೂಜೆ ಒಂದೇ ದಿನವಿದ್ದರೂ ರೂಢಿಯಲ್ಲಿ ಗಣಪತಿಯ ಪೂಜಾ ವಿಜೃಂಭಣೆ ಅನೇಕ ದಿನಗಳ ವರೆಗೆ ನಡೆಯುತ್ತದೆ. ಕೆಲವರು ಗಣಪತಿಯನ್ನು ಐದನೆಯ ದಿನವೇ ವಿಸರ್ಜಿಸುವರು, ಇನ್ನೂ ಕೆಲವರು ಅನಂತ ಚತುರ್ದಶಿಯಂದು ವಿಸರ್ಜಿಸುವರು. ಗಣಪತಿಯ ಪೂಜೆಗೂ, ಪಟಾಕಿಗಳಿಗೂ ಇರುವ ಸಂಬಂಧ ಎಂದಿನಿಂದ ಕೂಡಿಬಂದಿದೆ ಎಂಬುದನ್ನು ನಿಖರವಾಗಿ ಹೇಳಲು ಇನ್ನೂ ಸಾಧ್ಯವಾಗಿಲ್ಲ.

ಗೋಕುಲಾಷ್ಟಮಿ

ಶ್ರಾವಣಮಾಸದ ವದ್ಯ ಅಷ್ಟಮಿಯೇ ಗೋಕುಲಾಷ್ಟಮಿ. ಧರ್ಮಸಂಸ್ಥಾಪನೆಗಾಗಿ ಶ್ರೀಹರಿಯು ಕೃಷ್ಣನ ರೂಪದಿಂದ ಭೂಮಿಗೆ ಅವತರಿಸಿದ ದಿನವಿದು. ಶ್ರೀ ಹರಿಯ ಉಪಾಸಕರಾದ ಬ್ರಾಹ್ಮಣರಿಗೆ ಇದು ವಿಶಿಷ್ಟವಾದ ಹಬ್ಬ. ಮನೆಗಳಲ್ಲಿಯೂ, ಮಠ-ಮಂದಿರಗಳಲ್ಲಿಯೂ ಜನ್ಮಾಷ್ಟಮಿಯ ವ್ರತ-ಪೂಜೆಗಳು ವಿದ್ಯುಕ್ತವಾಗಿ ಜರಗುವವು. ನಿಜವಾದ ಸಂಪ್ರದಾಯವಂತ ಭಕ್ತರಿಗೆ ಅಂದು ಉಪವಾಸ ದಿನ. ಮರುದಿನ ನವಮಿ ಪಾರಣೆಯ ಹಬ್ಬ. ನೈವೇದ್ಯಕ್ಕಾಗಿ ಅಂದು ವಿಧವಿಧದ ಮಧುರ ಖಾದ್ಯಗಳನ್ನೂ, ಲಡ್ಡುಗೆ-ಚಕ್ಕುಲಿಗಳನ್ನು ಮಾಡುವರು. ಶ್ರೀ ಕೃಷ್ಣನ ದೇವಸ್ಥಾನಗಳಲ್ಲಿ ವಿಶೇಷ ಪೂಜೆ ಸೇವೆಗಳು ನಡೆಯುವವು. ಶಾಂತಿಗ್ರಾಮದ ಬ್ರಾಹ್ಮಣರು ಹಬ್ಬಕ್ಕೆ ಒಂದು ತಿಂಗಳ ಪೂರ್ವದಿಂದಲೇ ತಿಂಡಿ-ತಿನಿಸುಗಳನ್ನು ಮಾಡಲು ಪ್ರಾರಂಭಿಸುವರು. ಅವರು ಹಬ್ಬ ಮುಗಿದ ಬಹು ದಿನಗಳ ವರೆಗೆ ತಮ್ಮ ಮನೆಗಳಲ್ಲಿಯೇ ತಿಂಡಿಯ ಉಪಹಾರ ಮಾಡುವರು.

ಗೌರಿ ಹಬ್ಬ

ಗೌರಿಹಬ್ಬಕ್ಕೆ ಜನರು ಗೌರಿ-ಗಣಪನ ವಿಗ್ರಹಗಳನ್ನು ತಮ್ಮ ಮನೆಗಳಲ್ಲಿ ಸ್ಥಾಪಿಸುವರು. ದೇವಾಂಗ ಶೆಟ್ರು ಜಾತಿಯವರು ತಮ್ಮ ಮನೆಗಳಲ್ಲಿ ಮೂರ್ತಿಯನ್ನು ಕೂಡ್ರಿಸುವ ಪದ್ಧತಿ ಇಲ್ಲವಾದ್ದರಿಂದ ಅವರು ಪೂಜಾಫಲಗಳೊಂದಿಗೆ ಬ್ರಾಹ್ಮಣರ ಮನೆಗಳಿಗೆ ಹೋಗಿಬರುತ್ತಾರೆ. ಗೌರಿಹಬ್ಬಕ್ಕೆ ಹೊಸದಾಗಿ ಮದುವೆಯಾದ ಮಗಳು-ಅಳಿಯಂದಿರನ್ನು ವಿಶೇಷವಾಗಿ ಆಮಂತ್ರಿಸಲಾಗುವದು. ಅನೇಕ ವಿಧವಾದ ತಿಂಡಿ ತಿನಿಸುಗಳನ್ನು ಮನೆಗಳಲ್ಲಿ ತಯಾರಿಸುವರು. ಯಾವದೇ ಪ್ರಸಂಗದಿಂದ ಮಗಳು-ಅಳಿಯಂದಿರೂ ಗೌರಿಹಬ್ಬಕ್ಕೆ ಬರದಿದ್ದರೆ ತಿಂಡಿ-ತಿನಿಸು, ಬಟ್ಟೆ-ಬರೆಗಳನ್ನು 'ಬಾಗಿಣ'ದೊಂದಿಗೆ ಕಳಸಿಕೊಡಲಾಗುವದು. ಬ್ರಾಹ್ಮಣರು ತಮ್ಮ ಮನೆಗಳಲ್ಲಿ ಗೌರಿ ಪೆಟ್ಟಿಗೆಗಳನ್ನು ಸ್ಥಾಪಿಸಿ ಅವರಲ್ಲಿ ಗೊಂಬೆ ಇತ್ಯಾದಿ ಸಾಮಾನುಗಳನ್ನು, ಮಗಳು ಜನಿಸಿದಾಗಿ

ನಿಂದಲೂ ತುಂಬುತ್ತಾ ಬರುವರು. ಹುಡಿಗೆಯು ಗಂಡನ ಮನೆಗೆ ಹೋಗುವಾಗ ಈ ಗೌರಿಪೆಟ್ಟಿಗೆಯನ್ನು ಆಕೆಗೆ ಕೊಡುತ್ತಾರೆ.

ಮಹಾನವಮಿ

ಅಶ್ವಿನಿಮಾಸದ ಶುಕ್ಲನವಮಿಯೇ ಮಹಾನವಮಿ. ಇದಕ್ಕೆ ಖಂಡೆಯ ನವಮಿ ಎಂದೂ ಕರೆಯುವರು. ಖಂಡೆ ಅಂದರೆ ಶಸ್ತ್ರ. ಇಂದು ಶಸ್ತ್ರಾಸ್ತ್ರಗಳನ್ನು ಪೂಜಿಸುವರು. ಕ್ಷತ್ರಿಯರಲ್ಲದ ಜನರು ಶಸ್ತ್ರಾಸ್ತ್ರಗಳ ಬದಲಾಗಿ ತಮ್ಮ ವ್ಯವಸಾಯ–ವ್ಯವಹಾರಗಳಲ್ಲೆಲ್ಲಾ ಬಳಸಲಾಗುವ ಉಪಕರಣಗಳನ್ನು ಪೂಜಿಸುವ ರೂಢಿ ಇದೆ. ಶಸ್ತ್ರಾಸ್ತ್ರಗಳ ಪೂಜೆಗೆ ಸಜೀವ ಪಶುಬಲಿಯನ್ನು ಅರ್ಪಿಸಬೇಕಾಗುತ್ತದೆ. ಆದರೆ ನಮ್ಮ ನಾಡಿನಲ್ಲಿ ಪಶುಬಲಿಯ ಅಣಕ ನಡೆಯುವದು. ಬಲಿಯ ಮಂತ್ರಗಳನ್ನು ಹೇಳುತ್ತಾ ಬೂದುಗುಂಬಳಕಾಯಿಯನ್ನು ಒಡೆದು ಅದರಲ್ಲಿ ಓಕಳಿ, ಕುಂಕುಮವನ್ನು ಹಾಕಿ ರಕ್ತದ ಆಭಾಸವನ್ನು ಹುಟ್ಟಿಸಲಾಗುವದು. ಜೀವ ಹಿಂಸೆ ಪಾಪವೆಂಬ ವಾದ ಪ್ರಚಾರದಲ್ಲಿ ಬಂದಾಗ ಪ್ರತ್ಯಕ್ಷ ಪ್ರಾಣಿವಧೆ ಅಹಿತವಾದರೂ, ಬಲಿಯ ಸಂಪ್ರದಾಯವನ್ನು ಬಿಟ್ಟುಕೊಡಬಾರದೆಂಬ ಭಾವನೆಯಿಂದ ಈ ಬಲಿಯ ಪರ್ಯಾಯವನ್ನು ಮಾಡಿರಬಹುದು. ಅಶ್ವಿನಿ ಶುಕ್ಲ ದಶಮಿಯಂದು ದಸರೆ ಜರುಗುವದು. ನಾಡನ್ನಾಳುವ ರಾಜಮನೆತನದವರಿಗಾಗಿ ದಸರೆಯು ವಿಶೇಷ ಸಂಬಂಧವಿದ್ದರೂ, ಶಿಷ್ಟರ ಆಚರಣೆಯನ್ನು ಇತರರೂ ಅನುಸರಿಸುವ ಲೋಕನಿಯಮದಂತೆ, ರಾಜರ ಪ್ರಜೆಗಳು, ಶಮಿಪೂಜೆಯ ಆಚಾರವನ್ನು ತಮ್ಮಲ್ಲಿ ಆಚರಿಸಬಹುದು. ದಸರೆಯ ದಿನ ಹಳ್ಳಿಯ ಗೌಡನೇ ದೊರೆಯ ಪ್ರತಿನಿಧಿಯಾಗಿ ಊರ ಹಿರಿಯರನ್ನು ಕರೆದುಕೊಂಡು, ದೇವರ ಪಲ್ಲಕ್ಕಿಗಳೊಂದಿಗೆ ಬನ್ನಿಮುಡಿಯಲು ಊರ ಸೀಮೆಯನ್ನು ದಾಟಿ ಹೋಗುವನು. ಬನ್ನಿಗಿಡದ ಪೂಜೆ ಆದಮೇಲೆ ಎಲ್ಲರೂ ಬನ್ನಿ ಎಲೆಯನ್ನು ದೇವರುಗಳಿಗೆ ಸಲ್ಲಿಸಿ ಆಮೇಲೆ ಪರಸ್ಪರರು 'ಬಂಗಾರ'ವೆಂಬ ಹೆಸರಿನಿಂದ ಕೊಡುವರು ಮತ್ತು ಕೊಳ್ಳುವರು.

ದೀಪಾವಳಿ

ಮನೆ ಮನೆಗಳನ್ನು ದೀಪಗಳ ಸಾಲು ಬೆಳಗುತ್ತಿರುವದರಿಂದ ದೀಪಾವಳಿಯು ಹಬ್ಬವೆನಿಸಿದೆ. ಪಾಂಡವರು ತಮ್ಮ ಒಂದು ವರ್ಷದ ಅಜ್ಞಾತವಾಸ ಮುಗಿಸಿ ಕೌರವರಿಂದ ಒಯ್ಯಲ್ಪಟ್ಟ ಗೋವುಗಳನ್ನು ಗೆದ್ದು ಅಂದೇ ಎಲ್ಲರೂ ವಿರಾಟರಾಜನಲ್ಲಿ ಕಾಣಿಸಿಕೊಂಡ ಐಕ್ಯತೆಯ ಸಂಕೇತವಾಗಿ 'ಪಾಂಡವರು' ಎಂದು ಶಗಣಿ

ಯನ್ನಿಟ್ಟು ಪೂಜಿಸುವರು. ಜನರು ದೀಪಾವಳಿಯ ಬಗ್ಗೆ ಒಂದು ದಂತಕಥೆಯನ್ನು ಹೇಳುತ್ತಾರೆ. ಹಿಂದೆ ಹೈಮ ಎಂಬ ಅರಸನಿಗೆ ಒಬ್ಬ ಮಗನಿದ್ದ. ಮಗನ ಮದುವೆಯಾಗಿ ನಾಲ್ಕನೆಯ ದಿನವೇ ಸರ್ಪದೋಷದಿಂದ ಅವನ ಮರಣವಾಯಿತು. ಆತನ ಹೆಂಡತಿ ಗಂಡನ ಅಕಾಲಮರಣದಿಂದ ಗೋಳಿಟ್ಟಳು. ಯಮದೂತರು ಅವಳ ದುಃಖವನ್ನು ನೋಡಲಾರದೇ ಯಮರಾಯನಲ್ಲಿ ಹೇಳಲು ಆತ ದೀವಳಿಗೆ ಹಬ್ಬದೊಳಗೆ ಧನತ್ರಯೋದಶಿಯಿಂದ ಐದು ದಿನಗಳ ವರೆಗೆ ಯಾರ ಮನೆಯಲ್ಲಿ ಸಾಲು ದೀಪಗಳು ಬೆಳಗುವವೋ ಅಂಥವರಿಗೆ ಅಪಮೃತ್ಯುವಿಲ್ಲವೆಂದು ಹೇಳಿದ ಕಾರಣ ಈ ದೀಪಗಳನ್ನು ಹಚ್ಚುವ ರೂಢಿ ಬಂದಿದೆ. ದೀಪಾವಳಿಯು ಬಹು ಪುರಾತನ ಹಬ್ಬ. ಶಾಸನಗಳಲ್ಲಿ ಇದರ ಉಲ್ಲೇಖ ದೊರೆಯುತ್ತದೆ. ನರಕಾಸುರನ ಸಂಹಾರೋತ್ಸವ, ಬಲೀಂದ್ರ ಪೂಜೆ, ಗೋಪೂಜೆಗಳು ಇಲ್ಲಿ ಮುಖ್ಯವಾದವು. ಬಲಿ ಚಕ್ರವರ್ತಿ ಮಹಾಭಕ್ತನಲ್ಲದೆ ದಾನಶೀಲ. ಅಂತಹ ಭಕ್ತನ ಸ್ಮರಣೆ ಮತ್ತು ಹಿಂದೂಗಳಿಗೆ ಪೂಜ್ಯವಾದ ಗೋವಿನ ಅರ್ಚನೆ ದೀಪಾವಳಿಯಲ್ಲಿ ನಡೆಯುವವು. ದೀಪಾವಳಿಯ ಮೂರು ದಿನದ ಹಬ್ಬದ ಪ್ರಥಮದಿನ ನರಕ ಚತುರ್ದಶಿ. ಅಂದು ನರಕಾಸುರನ ವಧೆಯಾಗಿರುವದರಿಂದ ಹರಿಭಕ್ತರಿಗೆ ಹಬ್ಬವೆನಿಸಿದೆ. ಅಂದು ಮನೆಗಳಲ್ಲಿ ಆರತಿಯನ್ನು ಮುತ್ತೈದೆಯರು ಗಂಡಸರಿಗೆ ಮಾಡುವರು. ಅಮಾವಾಸ್ಯ–ಇದು ಎರಡನೆಯ ದಿನದ ಆಚರಣೆ. ವ್ಯಾಪಾರಿಗಳು ಅಂದು ಲಕ್ಷ್ಮಿ, ಸರಸ್ವತಿ ಪೂಜೆ ಮಾಡುವರು. ದೀಪಾವಳಿ ವರ್ತಕರ ವ್ಯವಹಾರಕ್ಕೆ ಶುಭದಿನ.

ಮಹಾಶಿವರಾತ್ರಿ

ಮಾಘ ಬಹುಳ ೧೪ನೆಯ ತಿಥಿಯೇ ಮಹಾಶಿವರಾತ್ರಿ. ಶಿವನಿಗೆ ಇಂದು ವಿಶೇಷ ಭಕ್ತಿ ಸಲ್ಲಿಸಲಾಗುವದು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಸ್ತ್ರೀ ಪುರುಷ, ಬಾಲಕ, ತರುಣ ಹಾಗೂ ವೃದ್ಧ ಎಲ್ಲರೂ ಈ ವ್ರತವನ್ನು ಆಚರಿಸಬಹುದು. ಸಕಲ ಪ್ರಾಣಿಗಳಲ್ಲಿ ದಯೆಯನ್ನು ತೋರಿಸುವ ಸಿದ್ಧಾಂತವನ್ನು ಈ ಹಬ್ಬದಲ್ಲಿ ಕಾಣಬಹುದು. ಇಂದು ಅಭಿಷೇಕ, ಅರ್ಚನೆ, ಉಪವಾಸ, ಜಾಗರಣೆಗಳು ನಡೆಯುತ್ತವೆ. ಶಿವಪುರಾಣದ ಪ್ರಕಾರ ಶಿವರಾತ್ರಿಯಂದು ಯಾರು ಪೂರ್ತಿ ರಾತ್ರಿ ಶಿವನಾಮ ಜಪಿಸುತ್ತಾ ಎಚ್ಚರದಿಂದಿರುವರೋ ಅವರಿಗೆ ಮುಕ್ತಿ ಸಿಕ್ಕೇ ತೀರುವದೆಂದು ಉಲ್ಲೇಖವಿದೆ. ಮಹಾಶಿವರಾತ್ರಿಯಂದು ಭಕ್ಷ್ಯ, ಭೋಜ್ಯಗಳ ವೈಭವವಿಲ್ಲ. ಈ ವ್ರತವನ್ನು ಶೈವರು ಬಲು ವಿಧಿಪೂರ್ವಕವಾಗಿ ಭಕ್ತಿಯಿಂದ ರಿಆಚಸುವರು. ಹಬ್ಬದ ದಿನ ಉಪವಾಸವಿದ್ದು ಇಡೀ ರಾತ್ರಿ ಶಿವಭಜನೆಯಲ್ಲಿ

ಕಳೆಯುವರು. ಮರುದಿವಸ ಮುಂಜಾನೆ ಸ್ನಾನ, ವಂದನೆಗಳನ್ನು ಮಾಡಿ ಹೊಸ ಅಡಿಗೆಯ ಪ್ರಸಾದ ಸೇವಿಸುವರು. ಮಾಂಸಾಹಾರಿಗಳೂ ಇಂದು ಮಾಂಸವನ್ನು ಸೇವಿಸುವದಿಲ್ಲ. ಒಂದು ದಿನವಾದರೂ ಉಪವಾಸ ಆಚರಿಸುವದು ಆರೋಗ್ಯದ ದೃಷ್ಟಿಯಿಂದ ಉತ್ತಮ. ಶಿವಭಜನೆ, ಚಿಂತನೆಗಳಿಂದ ಚಿತ್ತಶುದ್ಧಿಯಾಗುವದು. ಜೈನರು ಶಿವರಾತ್ರಿಯ ರೀತಿಯಲ್ಲಿಯೇ ಜಿನರಾತ್ರಿಯನ್ನು ಆಚರಿಸುವರು.

ಜಯಂತಿಗಳು

ಜಯಂತಿಗಳನ್ನು ಮಹಾಪುರುಷರ ಸ್ಮರಣೆಯ ನಿಮಿತ್ಯ ಆಚರಿಸಲಾಗುವದು. ಇಂತಹ ಸಂದರ್ಭಗಳಲ್ಲಿ ವಿಭೂತಿ ಪುರುಷರ ಚರಿತ್ರೆ, ಕತೆ ಹಾಗೂ ಅವರ ಬೋಧನೆಗಳ ಕುರಿತು ಚಿಂತನೆ ನಡೆಯುವದು. ಯುವಜನರಿಗೆ ಮಹಾಪುರುಷರ ಜಯಂತಿ, ಚರಿತ್ರೆಗಳು ದಾರಿದೀಪಗಳಾಗಿವೆ.

ಬಸವಜಯಂತಿ

ಶಿವನ ಪ್ರಿಯವಾಹನ ನಂದಿಯ ಅವತಾರವೇ ಭಕ್ತಿಭಂಡಾರಿ ಬಸವಣ್ಣನೆಂಬ ಪ್ರತೀತಿಯಿದೆ. ೧೨ನೆಯ ಶತಮಾನದಲ್ಲಿ ವೈಶಾಖ ಶುದ್ಧ ತೃತೀಯದಂದು ಈತ ಜನಿಸಿದ್ದನೆಂಬ ನಂಬಿಕೆಯಿದೆ. ಜಾತಿ ವೈಷಮ್ಯ, ಧರ್ಮದ ಅಂಧಾನು ಕರಣೆ, ವರ್ಣಕಲಹ, ಮೇಲುಕೀಳುಗಳನ್ನು ಪ್ರತಿಭಟಿಸಿ ವೀರಶೈವ ಧರ್ಮಕ್ಕೆ ಹೊಸ ಮೂರ್ತಸ್ವರೂಪ, ವಿಶಾಲರೂಪ ಕೊಟ್ಟು ಕ್ರಾಂತಿಯನ್ನು ಎಸಗಿದ ಬಸವಣ್ಣನವರ ಜಯಂತಿಯನ್ನು ಕನ್ನಡಿಗರು ಬಲು ವಿಜೃಂಭಣೆಯಿಂದ ಆಚರಿಸುವರು.

ಹೀಗೆ ಶಾಂತಿಗ್ರಾಮದಲ್ಲಿ ಮುಖ್ಯವಾದ ಎಲ್ಲಾ ಹಬ್ಬಗಳನ್ನು ಮತ್ತು ಉತ್ಸವಗಳನ್ನು ಕಾಲಕಾಲಕ್ಕೆ ಆಚರಿಸಲಾಗುವದು. ನಾವು ಕಂಡಂತೆ ಈ ಎಲ್ಲಾ ಆಚರಣೆಗಳಿಗೂ ಮೂಲವಾಗಿ ಹಿಂದೂ ಸಂಸ್ಕೃತಿ ಇದೆ. ಅನೇಕ ಹಬ್ಬಗಳಲ್ಲಿ ಜನಪದ ಸಂಸ್ಕೃತಿ ಅಥವಾ ಅದರ ಅವಶೇಷಗಳು ಇನ್ನೂ ಉಳಿದುಕೊಂಡಿರುವದು ಕಂಡುಬರುತ್ತದೆ.

ಉಪಸಂಹಾರ

ಮಾನವಶಾಸ್ತ್ರವು ಮಾನವನ ಹುಟ್ಟು, ಬೆಳವಣಿಗೆ, ವೈವಿಧ್ಯತೆ ಮತ್ತು ಸಂಸ್ಕೃತಿಯ ಕುರಿತು ಚಿಂತಿಸುವದು. ಮಾನವ ಸಂಸ್ಕೃತಿಯು ಅವನ ಜೀವಿಕ

ವಿಕಾಸ (Biological Evolution) ದಲ್ಲಿ ಮಹತ್ವದ ಭಾಗವಹಿಸಿದೆ. ಮಾನವನ ಸಮಾಜ ಜೀವನ, ಆಚಾರ, ವಿಚಾರ, ರೂಢಿ, ಪದ್ಧತಿಗಳು ಅಂದರೆ ಮದುವೆ ಮುಂಜವಿ ಮೊದಲು ಆಚಾರ ಪದ್ಧತಿಗಳು, ಅವನ ವಿಕಾಸದಲ್ಲಿ ಮಹತ್ವದ ಕಾರ್ಯ ಮಾಡುತ್ತವೆ. ಹಬ್ಬ, ಜಾತ್ರೆ, ಉತ್ಸವಗಳು, ಸಂಸ್ಕೃತಿಯ ಪ್ರಮುಖ ಅಂಗಗಳಾಗಿದ್ದುದರಿಂದ ಮಾನವಶಾಸ್ತ್ರಜ್ಞರು ಅವುಗಳನ್ನು ಕುರಿತು ಸಂಶೋಧನೆ, ಅಭ್ಯಾಸಗಳಲ್ಲಿ ಉತ್ಸುಕರಾಗಿರುವರು.

ಪ್ರಾಚೀನ ಕಾಲದಿಂದಲೂ ಸಾಂಪ್ರದಾಯಕವಾಗಿ ಬಂದ ಆಚರಣೆ, ನೀತಿ ನಿಯಮಗಳು, ಪೂಜೆ ವ್ರತಗಳು, ಉಡಿಗೆಗಳು, ಜಾತ್ರೆ ಉತ್ಸವಗಳು, ಜಯಂತಿ-ಪುಣ್ಯತಿಥಿಗಳು, ಭಾರತೀಯ ಸಂಸ್ಕೃತಿ, ಧಾರ್ಮಿಕ ನೆಲೆಗಟ್ಟು, ದೇವಿದರ್ಶನ, ಮನ ತೃಪ್ತಿ, ಸಾಮಾಜಿಕ ಜೀವನದಲ್ಲಿಯ ಬದಲಾವಣೆ, ಸಂಘ ಶಕ್ತಿ, ಇಹದಿಂದ ಪರಕ್ಕೆ ಹೋಗುವ ಮಾರ್ಗಗಳ ಸೂಕ್ಷ್ಮದರ್ಶನಗಳನ್ನು ಇಲ್ಲಿ ಕಾಣಬಹುದು. ಇಂದಿನದು ವಿಜ್ಞಾನಯುಗ. ದ್ವಾಪರ ಯುಗದ ರಾಮಾಯಣ, ಮಹಾಭಾರತ, ಭಗವದ್ಗೀತೆಗಳನ್ನು ನಂಬುವ ಕಾಲವಲ್ಲ ಅನೇಕರು, ಅವು ತಮ್ಮ ಬುದ್ಧಿಗೆ ನಿಲುಕದಾದಾಗ ಅವುಗಳನ್ನು ತಿರಸ್ಕರಿಸುವರು. ಈ ಯುಗವು ಹಳೆಯ ಹೊಸದರ ಸಂಕ್ರಮಣ ಕಾಲವು. ಎಲ್ಲವನ್ನು ಒರೆಗಲ್ಲಿಗೆ ಹಚ್ಚಿ ಅವುಗಳಲ್ಲಿ ಶುದ್ಧವಾಗಿರುವದನ್ನು ಮಾತ್ರ ಸ್ವೀಕರಿಸುವ ಕಾಲ. ನಮ್ಮ ಹಿರಿಯ ಸತ್‌ಸಂಪ್ರದಾಯದಿಂದ ಬಂದಿರುವ ಹಬ್ಬ ಹುಣ್ಣಿವೆ, ವ್ರತ ನಿಯಮಗಳು ನೈಜವೆಂದು ನೆರೆನಂಬಿ ಜನ್ಮವನ್ನು ಸಾರ್ಥಕಮಾಡಿಕೊಳ್ಳಬಹುದು. ಇಂದಿನ ಚಮತ್ಕಾರಿಕ ಯುಗದ "ನಾಗರೀಕರಣ" ಎಂಬ ಹುಚ್ಚು ಹೊಳೆಯಲ್ಲಿ ತದ್ದೇಶಿಯ ಸಂಸ್ಕೃತಿಯು ಕೊಚ್ಚಿಕೊಂಡು ಹೊರಟಿದೆ. ಧಾರ್ಮಿಕತೆಯು ಹಿಂದೋಡಹತ್ತಿದೆ. ಆದರೆ ಭೌತಿಕ ವಿಜ್ಞಾನದಲ್ಲಿ ನಾವು ದಿನೇ ದಿನೇ ಭರದಿಂದ ಪ್ರಗತಿಯನ್ನು ಸಾಧಿಸುತ್ತಿದ್ದೇವೆ. ಭೌತಿಕ ವಿಕಾಸವು ಮನುಷ್ಯನ ಪ್ರಕೃತಿ ವಿಜಯವೆಂದು ಘೋಷಿಸಬಹುದು. ಆದರೆ ಮಾನವತೆಯ ರಕ್ಷಕನೆಂದು ಹೇಳಲು ಬಾರದು. ಒಂದು ವೇಳೆ ಸಂಸ್ಕೃತಿ ಮತ್ತು ಧರ್ಮ ವಿಜ್ಞಾನದಿಂದ ತುಂಡರಿಸಲ್ಪಟ್ಟರೆ, ಮಾನವನಲ್ಲಿರುವ ಸದ್ಗುಣಗಳ ನಾಶ ಖಂಡಿತ. ಇವುಗಳ ಅಭಾವದಿಂದ ಸಮಾಜ ನಾಶವಾಗುತ್ತದೆ. ಇದಕ್ಕೆ ಇತಿಹಾಸವೇ ಸಾಕ್ಷಿ. ಭಾರತೀಯ ಸಮಾಜ ಜೀವನದ ತುಂಬು ವಿಸ್ತಾರಕ್ಕೂ, ಗಹನವಾದ ಆಳಕ್ಕೂ ತನ್ನ ಬೇರು ಬಿಟ್ಟಿರುವ ಹಿಂದೂ ಸಂಸ್ಕೃತಿಯನ್ನು, ಭವಿಷ್ಯತ್ತಿನಲ್ಲಿ ಅಲ್ಲಗಳೆಯುವದು ಅಸಮಂಜಸ. ಭೌತಿಕ ವಿಕಾಸದೊಂದಿಗೆ ಉಚ್ಚ ಮಾನವೀಯ ಗುಣಗಳನ್ನು ಅಳವಡಿಸಿಕೊಂಡು ನಡೆದದ್ದಾದರೆ ಮಾನವತೆ ಚಿರಸ್ಥಾಯಿಯಾಗಿ ಉಳಿಯಬಲ್ಲದು.

ಈ ಹಿನ್ನೆಲೆಯಲ್ಲಿ ಶಾಂತಿಗ್ರಾಮದ ಹಬ್ಬಗಳನ್ನು, ಜಾತ್ರೆಗಳನ್ನು ಅಭ್ಯಾಸ ಮಾಡುವದರಿಂದ ತಿಳಿದುಬಂದ ವಿಷಯವೇನೆಂದರೆ— ಇಲ್ಲಿ ಜನರು ಆಚರಿಸುವ ಎಲ್ಲಾ ಹಬ್ಬಗಳು ತಮ್ಮ ಜನಪದ ಹಿನ್ನೆಲೆಯನ್ನು ಅಥವಾ ಸಂಪ್ರದಾಯವಾಗಿ ಬಂದ ರೀತಿ ನೀತಿಗಳನ್ನು ಕಳೆದುಕೊಂಡು ಶುದ್ಧ ವೈದಿಕ ಅಥವಾ ಬ್ರಾಹ್ಮಣ ರೀತಿಯಲ್ಲಿ ಆಚರಿಸಲ್ಪಡುತ್ತವೆ. ಈ ಹಬ್ಬಗಳ ಬಗ್ಗೆ ಜನರನ್ನು ವಿಚಾರಿಸಿದಾಗಲೂ ಅವರಲ್ಲಿ ವೇದ ಪುರಾಣಗಳಲ್ಲಿ ನಿವೇದಿಸಲಾದ ವಿವರಣೆಗಳು ಬಂದವೇ ಹೊರತು ನಾಡ ಅಥವಾ ಜನಪದ ವಿವರಣೆಗಳು ಬರಲಿಲ್ಲ. ಇದಕ್ಕೆ ಈ ಗ್ರಾಮದಲ್ಲಿ ಬ್ರಾಹ್ಮಣರು ಹೆಚ್ಚಿನ ಸಂಖ್ಯೆಯಲ್ಲಿರುವದು ಮತ್ತು ಇವರು ಎಲ್ಲಾ ಕುಲಗಳಲ್ಲಿ ನಡೆಯುವ ಪ್ರತಿಯೊಂದು ವಿಧಿಕಾರ್ಯಗಳಿಗೆ ಮತ್ತು ಧರ್ಮಕಾರ್ಯಗಳಿಗೆ ಇವರನ್ನೇ ಪುರೋಹಿತರನ್ನಾಗಿ ಕರೆಯುವದರಿಂದ ಈ ಎಲ್ಲ ಕಾರ್ಯಗಳು ಶುದ್ಧ ಬ್ರಾಹ್ಮಣಿಕ ರೀತಿಯಲ್ಲಿ ಅಚರಿಸಲ್ಪಡುತ್ತಿವೆ. ಆದ್ದರಿಂದ ನಿಜವಾದ ಜನಪದ ರೀತಿ ನೀತಿಗಳು ಕಳೆದುಹೋಗಿವೆ. ಇಂಥ ಪರಿಸ್ಥಿತಿ ಸಾಮಾಜಿಕಶಾಸ್ತ್ರಜ್ಞನಿಗೆ ಉತ್ತಮವಾದ ವಿಷಯವಾಗಿದ್ದು, ಇದರ ಅಭ್ಯಾಸವು ನಮ್ಮ ಜ್ಞಾನಕ್ಕೆ ಒಂದು ವಿಶೇಷವಾದ ಕೊಡುಗೆಯಾಗಬಹುದು. ಏಕೆಂದರೆ. ದಕ್ಷಿಣಭಾರತದ ಯಾವದೇ ಹಳ್ಳಿಯ ಹಬ್ಬಗಳನ್ನು, ಜಾತ್ರೆಗಳನ್ನು ಗಣನೆಗೆ ತೆಗೆದುಕೊಂಡರೆ, ಇವುಗಳಲ್ಲಿ ಅನೇಕವು ಜನಪದ ಸಂಸ್ಕೃತಿಗೆ ಸೇರಿರುತ್ತವೆ. ಉಳಿದವುಗಳು ಕೂಡ ಜನಪದ ಮತ್ತು ಸಾಂಸ್ಕೃತಿಕ ಹಬ್ಬಗಳ ಮಿಶ್ರಣವಾಗಿರುತ್ತವೆ. ಆದರೆ ಶಾಂತಿಗ್ರಾಮದಲ್ಲಿ ನಾವು ನೋಡುವಂತೆ ಇದಕ್ಕೆ ವಿರುದ್ಧವಾದ ಪರಿಸ್ಥಿತಿಯು ಕಂಡುಬರುವದು.

ಗ್ರಂಥಋಣ

1. Ayyar Jagadish — **South Indian Festivals** Higginbothams Madras, 1921.

2. Gurumurthy K. G. — "Role of factions in the Community Development projects in a Mysore Village" Ph.D. Thesis, Submitted to KUD., 1972.

3. E. Adamson Hoebel — Man in the Primitive World : Mc-Graw Hill Book Company INC., 1958.

4. ಕೆರಿಮನಿ ಸಿ. ವಿ., ಭಾರತೀಯ ಹಬ್ಬಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1974.

5. ಕೃಷ್ಣಶರ್ಮ ಬೆಟಗೇರಿ 'ನಮ್ಮ ಸಂಸ್ಕೃತಿಯ ಪರಂಪರೆ' ಸಮಾಜ ಪುಸ್ತಕಾಲಯ, ಧಾರವಾಡ, 1969.

6. Seligman Edwin R. A. (Editor-in-Chief) **Encyclopaedia of Social Sciences,** Vol. V, MacMillan Company, New York, 1937.

7. Gurumurthy K. G. "Fertility Festivals and Unity in a Mysore Village" **Society and Culture,** Vol. IV, No. 1. 1973, pp. 111–120.

——

ಕೊಂಡಗುಳಿ: ಒಂದು ವಿದ್ಯಾಕೇಂದ್ರ

● ಎಸ್. ಎಲ್. ಶಾಂತಕುಮಾರಿ

ಈಗಿನಂತೆ ಪ್ರಾಚೀನಕಾಲದಲ್ಲಿಯೂ ವಿದ್ಯೆಗೆ ಪ್ರಾಧಾನ್ಯವಿತ್ತು. ವಿದ್ಯಾದಾನ ಒಂದು ಪುಣ್ಯಕಾರ್ಯವೆಂದು ಪರಿಗಣಿಸಲ್ಪಡುತ್ತಿದ್ದುದರಿಂದ ವಿದ್ಯಾದಾನಕ್ಕೆ ಹೇರಳವಾಗಿ ದಾನ, ದತ್ತಿಗಳನ್ನು ಬಿಟ್ಟ ಸಂಗತಿ ಇತಿಹಾಸದುದ್ದಕ್ಕೂ ತಿಳಿದು ಬರುತ್ತದೆ. ಕರ್ನಾಟಕದಲ್ಲಿ ಅಧಿಕ ಸಂಖ್ಯೆಯಲ್ಲಿ ದೊರೆಯುವ ಶಾಸನಗಳಿಂದ, ಈ ದಾನ ದತ್ತಿಗಳಿಂದ ಅನೇಕ ವಿದ್ಯಾಕೇಂದ್ರಗಳು ಸ್ಥಾಪಿಸಲ್ಪಟ್ಟು ಪ್ರಸಿದ್ಧಿ ಪಡೆದಿದ್ದ ವಿಷಯ ತಿಳಿದುಬರುತ್ತದೆ. ಇಂಥ ಶಾಸನಗಳ ಆಧಾರದಿಂದ ಸಂಪೂರ್ಣ ವಾಗಲ್ಲದಿದ್ದರೂ ತಕ್ಕಮಟ್ಟಿಗೆ ಆಗಿನ ಕಾಲದ ವಿದ್ಯಾಭ್ಯಾಸ ಪದ್ಧತಿಯ ಬಗೆಗೆ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಅರಸರು, ಅಧಿಕಾರಿಗಳು, ಶ್ರೀಮಂತ ನಾಗರಿಕರು ಪುಣ್ಯಾರ್ಜನೆಗೆಂದು ಹೇರಳವಾಗಿ ಭೂಮಿ, ಹಣ, ಮುಂತಾದವು ಗಳನ್ನು ವಿದ್ಯಾರ್ಥಿಗಳು ಹಾಗೂ ಶಿಕ್ಷಕರ ಜೀವನೋಪಾಯಕ್ಕೆಂದು ಕೊಡು ತ್ತಿದ್ದರು. ಇಂಥ ದಾನಗಳಿಂದ ಶಿಕ್ಷಕರು, ವಿದ್ಯಾರ್ಥಿಗಳು ನಿಶ್ಚಿಂತೆಯಿಂದ ತಮ್ಮ ಕಾರ್ಯದಲ್ಲಿ ನಿರತರಾಗಲು ಸಾಧ್ಯವಾಗುತ್ತಿತ್ತು. ಹಲವಾರು ಬಾರಿ ಇಡೀ ಗ್ರಾಮಗಳನ್ನೇ ಹೀಗೆ ದಾನಕೊಡುತ್ತಿದ್ದುದೂ ಉಂಟು. ಹೀಗೆ ದಾನಕೊಟ್ಟ ಗ್ರಾಮಗಳನ್ನು ಅಗ್ರಹಾರವೆಂದೂ, ಗ್ರಾಮದ ಭಾಗಗಳನ್ನು ಬ್ರಹ್ಮಪುರಿಗಳೆಂದೂ ಕರೆಯಲಾಗುತ್ತಿತ್ತು. ಕರ್ನಾಟಕದಲ್ಲಿ ಅಸ್ತಿತ್ವಕ್ಕೆ ಬಂದ ಇಂಥ ಅಗ್ರಹಾರ,

ಬ್ರಹ್ಮಪುರಿಗಳು ಹೇರಳವಾಗಿದ್ದುವೆಂದು ಶಾಸನಗಳು ತಿಳಿಸುತ್ತವೆ. ಇಂಥ ಅಗ್ರಹಾರಗಳಲ್ಲೊಂದು ಈ ಕೊಂಡಗುಳಿ.

ಕೊಂಡಗುಳಿ ಈಗಿನ ಬಿಜಾಪುರ ಜಿಲ್ಲೆಯ ಸಿಂದಗಿ ತಾಲೂಕಿನ ಒಂದು ಗ್ರಾಮ, (ಅದರ ಪ್ರಾಚೀನ ಹೆಸರು ಕೊಂಡಗುಳಿ). ಅಲ್ಲಿ ದೊರೆತಿರುವ ಹಲವು ಶಾಸನಗಳಿಂದ ಈ ಗ್ರಾಮ ೧೦-೧೨ನೇ ಶತಮಾನದ ಸುಮಾರಿನಲ್ಲಿ ಒಂದು ಪ್ರಮುಖ ವಿದ್ಯಾಕೇಂದ್ರವಾಗಿತ್ತೆಂದು ತಿಳಿದುಬರುತ್ತದೆ. ಅಲ್ಲಿದ್ದ ಅನೇಕ ಶಿವಾಲಯಗಳ ಅಸ್ತಿತ್ವದ ಬಗ್ಗೆ ಈ ಶಾಸನಗಳು ವಿವರಿಸುತ್ತವೆ. ಕೇಶಿರಾಜ ದಂಡನಾಯಕನೆಂಬ ಒಬ್ಬ ಅಧಿಕಾರಿ ಕ್ರಿ. ಶ. ೧೧೦೭ ರಲ್ಲಿ ಅಲ್ಲಿದ್ದ ಸೋಮೇಶ್ವರ ದೇವಾಲಯವನ್ನು ಕಟ್ಟಿಸಿದನೆಂದು ಒಂದು ಶಾಸನವು ತಿಳಿಸಿದರೆ[೧] ಜ್ಯೋತೀಶ್ವರ ಎಂಬ ಮತ್ತೊಂದು ದೇವಾಲಯವನ್ನು ಇವೇ ಅಧಿಕಾರಿ ಕಟ್ಟಿಸಿದನೆಂದು ಇನ್ನೊಂದು ಶಾಸನವು ವಿವರಿಸುತ್ತದೆ.[೨] ಮಲ್ಲಿಕಾರ್ಜುನ[೩] ಹಾಗೂ ಕೇಶವದೇವ[೪] ಎಂಬ ಇತರ ದೇವಾಲಯಗಳಿಗೂ ದತ್ತಿಗಳನ್ನು ಬಿಟ್ಟ ವಿಷಯ ಇಲ್ಲಿ ದೊರೆತಿರುವ ಶಾಸನಗಳಿಂದ ತಿಳಿಯಬಹುದಾಗಿದೆ.

ಈ ಗ್ರಾಮದ ಹನುಮಾನ್ ದೇವಾಲಯದಲ್ಲಿರುವ ಒಂದು ಶಾಸನದಿಂದ ಆ ಗ್ರಾಮದಲ್ಲಿ ನಾಲ್ಕು ಬೀದಿಗಳಿದ್ದುವೆಂದು ವಿಷದವಾಗುತ್ತದೆ.[೫] ಶಾಸನಗಳು ಈ ರೀತಿ ಒಂದು ಗ್ರಾಮದ ಬಗ್ಗೆ ವಿವರಗಳನ್ನು ನೀಡುವುದು ಅಪರೂಪವಾದುದರಿಂದ ಈ ಶಾಸನ ಗಮನಾರ್ಹ. ಇದೇ ಊರಿನ ಹೊರವಲಯದಲ್ಲಿ ದೊರೆತಿರುವ ಒಂದು ಶಾಸನದಿಂದ[೬] ಈ ಬೀದಿಗಳ ಹೆಸರುಗಳು ಈ ರೀತಿ ಇವೆ: ಸೂರ್ಯವೀದಿ, ಸೋಮವೀದಿ, ಶಾಲೆಯ ಕೇರಿ ಮತ್ತು ಗೊರವಗೇರಿ. ಇವರಲ್ಲಿ ಕೆಲವು ಹೆಸರುಗಳು ಅರ್ಥಪೂರ್ಣವಾಗಿವೆ. ಉದಾಹರಣೆಗೆ: ಬಹುಶಃ ಶಾಲೆಯಿದ್ದ ಕೇರಿ ಶಾಲೆಯ ಕೇರಿ ಎಂದೂ ಗೊರವರು ವಸತಿ ಇದ್ದ ಕೇರಿ ಗೊರವಗೇರಿ ಎಂದೂ ಹೆಸರಾಗಿರಬಹುದೆನ್ನಬಹುದು.

ಕೊಂಡಗುಳಿ ಒಂದು ವಿದ್ಯಾಕೇಂದ್ರವಾಗಿದ್ದು ಅಲ್ಲಿದ್ದ ವಿದ್ಯಾಭ್ಯಾಸದ ಪದ್ಧತಿಯ ಬಗೆಗೆ ಶಾಸನಗಳು ಹಲವಾರು ವಿವರಗಳನ್ನು ನೀಡುತ್ತವೆ. ೧೨ನೇ ಶತಮಾನದ ಎರಡು ಶಾಸನಗಳು ಅಲ್ಲಿ ಒಂದು ಶಾಲೆಯಿದ್ದುದನ್ನು ತಿಳಿಸುವುದಲ್ಲದೆ ಅಲ್ಲಿದ್ದ ವಿದ್ಯಾಭ್ಯಾಸದ ಕ್ರಮದ ಬಗೆಗೂ ಹೇಳುತ್ತವೆ. ೧೧೩೨ರ ಒಂದು ಶಾಸನದಿಂದ[೭] ತಿಳಿದುಬರುವಂತೆ ಈ ಶಾಲೆಯ ಬಗೆಗಿನ ವಿವರಗಳು ಹೀಗಿವೆ: ಶಾಲೆಯಲ್ಲಿ ಮೂರು ಜನ ಉಪಾಧ್ಯಾಯರಿದ್ದು ಅವರು ಪ್ರಾಥಮಿಕ ಹಾಗೂ ಉಚ್ಚಶಿಕ್ಷಣ ಕೊಡು

ತ್ತಿದ್ದರು. ಒಬ್ಬ ಉಪಾಧ್ಯಾಯ ಸೂತ್ರ ಸಂಹಿತೆ ಮತ್ತು ಹಿರಿಯ ಗ್ರಂಥ ಬೋಧಿಸುತ್ತಿದ್ದರೆ ಇನ್ನೊಬ್ಬ ಉಪಾಧ್ಯಾಯ ಸಂಹಿತೆ (ಯಾಜ್ಞವಲ್ಕ್ಯ ಸಂಹಿತೆ) ಮತ್ತು ಕಿರಿಯ ಗ್ರಂಥಗಳನ್ನು ಕಲಿಸುತ್ತಿದ್ದನು. ಇಲ್ಲಿ ಸೂತ್ರ ಸಂಹಿತೆಯು ಸ್ಕಂದ ಪುರಾಣದ ಒಂದು ಭಾಗ. ಆದರೆ ಹಿರಿಯ ಗ್ರಂಥದ ಅರ್ಥ ಹೇಳುವುದು ಕಠಿಣಸಾಧ್ಯ. ಬಹುಶಃ ಅದು ಧರ್ಮಶಾಸ್ತ್ರದ ಒಂದು ಭಾಗವಾಗಿರಬಹುದೆಂದು ಹೇಳಬಹುದು. ಹಾಗೆಯೇ ಕಿರಿಯ ಗ್ರಂಥದ ಬಗೆಗೂ ವಿವರಣೆ ಕೊಡುವುದು ಸುಲಭವಲ್ಲವಾದರೂ ಅದು ಬಹುಶಃ ಕಾವ್ಯ–ನಾಟಕಗಳ ಅಧ್ಯಯನವಿರಬಹುದೆಂದು ಸೂಚಿಸಬಹುದು. ಈ ಮೇಲಿನ ವಿಷಯಗಳನ್ನು ಬೋಧಿಸುತ್ತಿದ್ದ ಇಬ್ಬರು ಉಪಾಧ್ಯಾಯರುಗಳಿಗೆ ತಲಾ (೨೦ ಲೊಕ್ಕಿ ಗದ್ಯಾಣಗಳಿಂದ ಬಂದ ಆದಾಯ) ೪ ವರ್ತಕ ಲೊಕ್ಕಿ ಗದ್ಯಾಣಗಳನ್ನು ಕೊಡಲಾಗುತ್ತಿತು. ಆ ಶಾಲೆಯ ಮತ್ತೊಬ್ಬ ಉಪಾಧ್ಯಾಯ ಅಕ್ಷರ, ವ್ಯಾಕರಣ, ರೂಪಾವತಾರ ಮುಂತಾದ ವಿಷಯಗಳನ್ನು ಹೇಳುತ್ತಿದ್ದ. ರೂಪಾವತಾರ ವ್ಯಾಕರಣದ ಒಂದು ಭಾಗವಾಗಿದ್ದು ಇದು ದಕ್ಷಿಣಭಾರತದಲ್ಲಿ ಹೆಚ್ಚು ಪ್ರಚಲಿತವಾಗಿತ್ತೆಂದು ತಿಳಿದುಬರುತ್ತದೆ. ಚೋಳ ವೀರಕೇಸರಿವರ್ಮನ ಕಾಲದ ಒಂದು ಶಾಸನ[೮] ಮತ್ತು ಕರ್ನಾಟಕದ ತಾಳಗುಂದದ ಒಂದು ಶಾಸನವು ಈ ವಿಷಯದ ಬಗೆಗೆ ತಿಳಿಸುತ್ತವೆ.

ಈ ಮೇಲಿನ ವಿವರಗಳಿಂದ ಕೊಂಡಗುಳಿಯಲ್ಲಿ ಪ್ರಾಥಮಿಕ ಹಾಗೂ ಉಚ್ಚ ಶಿಕ್ಷಣ ಪದ್ಧತಿಗಳ ಬಗ್ಗೆ ಸಾಕಷ್ಟು ವಿವರಗಳು ದೊರಕುತ್ತವೆ. ಇದರಂತೆ ಪ್ರಾಥಮಿಕ ಮತ್ತು ಉಚ್ಚ ಶಿಕ್ಷಣಪದ್ಧತಿಯಲ್ಲಿ ಅಂತರ ಕಂಡುಬಂದರೂ ಅವುಗಳನ್ನು ಹೇಳಿಕೊಡುತ್ತಿದ್ದ ಉಪಾಧ್ಯಾಯರುಗಳಿಗೆ ಕೊಡುತ್ತಿದ್ದ ವೃತ್ತಿ (ಅಥವಾ ವೇತನ) ಒಂದೇ ತೆರನಾಗಿದ್ದುದು ತಿಳಿದುಬರುತ್ತದೆ. ಅಂದರೆ ಅವರಿಗೆ ತಿಂಗಳಿಗೆ ಸಂದಾಯವಾಗುತ್ತಿದ್ದ ವೇತನ ೪ ವರ್ತಕ ಲೊಕ್ಕಿ ಗದ್ಯಾಣ. ಆದರೆ ಮತ್ತೊಂದು ವಿದ್ಯಾಕೇಂದ್ರವಾದ ಕೂಟುಉವಾಚಗೆಯಲ್ಲಿ ಬಾಲ್ಯ ಮತ್ತು ಉಚ್ಚಶಿಕ್ಷಣ ಪದ್ಧತಿಗಳಲ್ಲಿ ಅಂತರ ಕಂಡುಬಂದರೂ ಅವುಗಳನ್ನು ಬೋಧಿಸುತ್ತಿದ್ದ ಉಪಾಧ್ಯಾಯರುಗಳ ಸ್ಥಾನಮಾನಗಳಲ್ಲಿ ವ್ಯತ್ಯಾಸವಿದ್ದು ಅವರು ಪಡೆಯುತ್ತಿದ್ದ ವೇತನದಲ್ಲಿಯೂ ವ್ಯತ್ಯಾಸವಿದ್ದುದು ಕಂಡುಬರುತ್ತದೆ. ಪ್ರಾಥಮಿಕ ವಿದ್ಯಾಭ್ಯಾಸ ಮಾಡುತ್ತಿದ್ದ ಉಪಾಧ್ಯಾಯನಿಗೆ ಅಕ್ಕರಿಗನೆಂತಲೂ ಉಚ್ಚ ಶಿಕ್ಷಣ ಕೊಡಿಸುತ್ತಿದ್ದ ಬೋಧಕನಿಗೆ ಭಟ್ಟನೆಂತಲೂ ನಿರ್ದೇಶನವಿದ್ದು ಅಕ್ಕರಿಗನಿಗೆ ೨೫ ಮತ್ತರು ಭೂಮಿಯನ್ನೂ ಭಟ್ಟನಿಗೆ ೫೦ ಮತ್ತರು ಭೂಮಿಯನ್ನೂ ಪ್ರತಿಫಲವಾಗಿ ಕೊಡಲಾಗಿತ್ತು. ಅಲ್ಲದೆ ಅಕ್ಕರಿಗನು ತನ್ನ ವಿದ್ಯಾರ್ಥಿಗಳಿಗೆ ದಿನದಲ್ಲಿ ಒಂದು ಹೊತ್ತು ಊಟವನ್ನೂ ವರ್ಷ

ಕ್ಕೊಮ್ಮೆ ಅವರಿಗೆ ಉಡುಗೆಗಳನ್ನು ಕೊಡಬೇಕಾಗಿತ್ತು. ಆದರೆ ಉಚ್ಚ ಶಿಕ್ಷಣ ಪಡೆಯುತ್ತಿದ್ದ ವಿದ್ಯಾರ್ಥಿಗಳಿಗೆ ಈ ಸೌಲಭ್ಯದ ಬದಲು ಒಟ್ಟಾರೆ ಅವರಿಗೆ ೨೫ ಮತ್ತರು ಭೂಮಿಯನ್ನು ಬಿಡಲಾಗಿತ್ತು.

ಕೊಂಡಗುಳಿಯ ಶಾಲೆಯಲ್ಲಿ ಕಲಿಸುತ್ತಿದ್ದ ವಿಷಯಗಳ ಬಗೆಗೆ ಮತ್ತು ಶಿಕ್ಷಣ ಪದ್ಧತಿಯ ಬಗೆಗೆ ಅಷ್ಟು ನಿರ್ದಿಷ್ಟವಾಗಿ ವಿವರಗಳು ತಿಳಿದುಬರುವುದಿಲ್ಲ.

ಆದರೂ ಕೊಂಡಗುಳಿ ಗ್ರಾಮ ಒಂದು ಸುಪ್ರಸಿದ್ಧವಾದ ವಿದ್ಯಾಕೇಂದ್ರವಾಗಿ ಮಧ್ಯಯುಗದ ಕರ್ನಾಟಕದ ಇತಿಹಾಸದಲ್ಲಿ ಪ್ರಾಮುಖ್ಯತೆ ಪಡೆದಿತ್ತೆಂದು ಹೇಳಬಹುದು.

ಟಿಪ್ಪಣಿಗಳು

1) South Indian Inscriptions XX, No. 67.
2) Ibid.
3) Ibid. No. 302.
4) Epigraphia Indica, XXXVII, PP. 189 ff.
5) South Indian Inscriptions, XX, No. 302.
6) Ibid. No. 319.
7) Epigraphia Indica, XXXVII, PP. 189 ff.
8) Ibid.
9) Epigraphia Karnatica, VII, Sk. 185.

ಬಾದಾಮಿಯ ಕೆಳಗಣ ಶಿವಾಲಯವು ಮೂಲತಃ ಗಣೇಶ ದೇವಾಲಯವೇ ?

● ಅ. ಸುಂದರ

ಬಾದಾಮಿ ಊರಿನ ಉತ್ತರಬದಿಯ ಕಡಿದಾದ ಗುಡ್ಡದ ಮೇಲಿರುವ "ಕೆಳಗಣ ಮತ್ತು ಮೇಲಣ ಶಿವಾಲಯಗಳು" ಎಂದು ಈಗ ಕರೆಯಿಸಿಕೊಳ್ಳುತ್ತಿರುವ ಎರಡು ದೇವಾಲಯಗಳು ಈಗಾಗಲೇ ಸುಪ್ರಸಿದ್ಧವಷ್ಟೇ? ಇವೆರಡೂ ಬಾದಾಮಿ ಚಾಲುಕ್ಯ ಕಾಲದ ಅಂದರೆ ಎರಡನೇ ಪುಲಕೇಶಿ ಮತ್ತು ನರಸಿಂಹ ವರ್ಮನ ಯುದ್ಧ ಕಾಲಕ್ಕಿಂತಲೂ ಪೂರ್ವದ್ದೆಂದು ಮತ್ತು ಪೂರ್ವಭಾವಿ ವಿಮಾನ ಶೈಲಿಯದೆಂದು ಪ್ರಾಚೀನ ಭಾರತ ಶಿಲ್ಪತಜ್ಞರ ಅಭಿಪ್ರಾಯ. ಸಾಮಾನ್ಯ ತಿಳುವಳಿಕೆಯಲ್ಲಿ ಇವನ್ನು ಶಿವಾಲಯಗಳೆಂದು ಕರೆಯಲಾಗಿದ್ದರೂ, ನಿಜಕ್ಕೂ ಮೇಗಣ ಶಿವಾಲಯ ಮೂಲತಃ ವೈಷ್ಣವ ದೇವಾಲಯವೆಂದು ಹೇಳಲಾಗಿದೆ. ಈ ದೇವಾಲಯದ ಅಧಿಷ್ಠಾನದಲ್ಲಿ ರಾಮ, ಲಕ್ಷ್ಮಣ ಮತ್ತು ಸೀತೆಯರಿದ್ದಲ್ಲಿ ಶೂರ್ಪನಖಿಯ ಆಗಮನ; ಲಕ್ಷ್ಮಣನೊಡನೆ ಶೂರ್ಪನಖಿಯ ಸಲ್ಲಾಪ; ಲಕ್ಷ್ಮಣನು ಅವಳ ಕಿವಿ, ಮೂಗುಗಳನ್ನು ಕತ್ತರಿಸುವಿಕೆ; ರಾಮನು ಖರ-ದೂಷಣರೊಡನೆ ಯುದ್ಧ ಮಾಡುತ್ತಿರುವುದು; ರಾವಣನ ಸಭೆ, ರಾವಣನು ಮಾರೀಚನನ್ನು ಸಂಧಿಸುವಿಕೆ; ರಾವಣನ ಋಷಿವೇಷದಲ್ಲಿ ರಾಮಾಶ್ರಮಕ್ಕೆ ಆಗಮನ; ರಾಮನು ಮಾರೀಚನನ್ನು ಕೊಲ್ಲುವಿಕೆ; ಸೀತಾಪಹರಣ; ಅಶೋಕ ವನದಲ್ಲಿ ಸೀತೆ; ಹನುಮಂತನಿಂದ

ರಾಕ್ಷಸ ಸಂಹಾರ; ಕುಂಭಕರ್ಣನನ್ನು ನಿದ್ರೆಯಿಂದ ಎಬ್ಬಿಸುತ್ತಿರುವುದು; ರಾಮ-ರಾವಣರ ಯುದ್ಧ; ಕೃಷ್ಣನು ಧೇನುಕಾಸುರ, ಖರಾಸುರ ಮುಂತಾದ ರಾಕ್ಷಸರನ್ನು ಕೊಲ್ಲುತ್ತಿರುವುದು; ಕೃಷ್ಣನು ಕುವಲಯಾಪೀಡ ಎಂಬ ಮದ ಗಜವನ್ನು ಮರ್ದಿಸುತ್ತಿರುವುದು; ಕೃಷ್ಣನು ಮುಷ್ಟಿಚಾಣೂರ ಮಲ್ಲರೊಡನೆ ಕುಸ್ತಿಯಾಡುತ್ತಿರುವುದು; ವಸುದೇವ-ದೇವಕಿಯರು ಸಿಂಹಾಸನಾರೂಢರಾಗಿರುವುದು; ದೇವಕಿ ಒಂದು ಚಿಕ್ಕ ಮಗುವಿನೊಡನಿರುವುದು; ಕಂಸನು ಮಗುವನ್ನೆತ್ತಿಕೊಂಡು ಹೋಗುತ್ತಿರುವುದು; ಆ ಮಗುವು ದುರ್ಗೆಯಾಗಿ ಕಾಣಿಸಿಕೊಂಡದ್ದು; ವಸುದೇವನು ಕೃಷ್ಣನನ್ನು ನಂದಗೋಕುಲಕ್ಕೆ ಒಯ್ಯುತ್ತಿರುವುದು; ಪೂತನೀ ಸಂಹಾರ ಇವೇ ಮೊದಲಾದ ರಾಮಾಯಣ, ಭಾಗವತದ ಚಿತ್ರಗಳಿವೆ. ಮತ್ತು ಗೋಡೆಗಳ ಮೇಲಿನ ದೇವಕೋಷ್ಠಗಳಲ್ಲಿ ಕೃಷ್ಣನು ಗೋವರ್ಧನ ಗಿರಿಯನ್ನು ಎತ್ತಿರುವ, ಕಾಳಿಂಗಮರ್ದನನ, ನರಸಿಂಹ ಹಿರಣ್ಯಕಶಿಪುವನ್ನು ಸಂಹಾರಮಾಡುತ್ತಿರುವ ಸುಂದರ ಉಬ್ಬುಶಿಲ್ಪಗಳಿವೆ. ಗರ್ಭಗುಡಿಯಲ್ಲಿ ಈಗ ಯಾವ ವಿಗ್ರಹವಿಲ್ಲದಿದ್ದರೂ ಇದು ಮೂಲತಃ ವೈಷ್ಣವ ದೇವಾಲಯವೆಂದು ತರ್ಕಿಸಬಹುದು.

ಕೆಳಗಣ ಶಿವಾಲಯ : ವಾಸ್ತುಶಿಲ್ಪ

ಕೆಳಗಣ ಶಿವಾಲಯವು ಕೆಲವೊಂದು ವಿಶಿಷ್ಟ ವಾಸ್ತುಶಿಲ್ಪ ಲಕ್ಷಣಗಳಿಂದ ಕೂಡಿದೆ. ಈಗ ಶಿಖರ ಸಹಿತ ಗರ್ಭಗೃಹ ಮಾತ್ರ ಉಳಿದಿದ್ದರೂ (ಚಿತ್ರ 1; ೧) ಮೊದಲು ಗರ್ಭಗೃಹದ ಸುತ್ತಲೂ ಮುಚ್ಚಿದ ಪ್ರದಕ್ಷಿಣಪಥ ಮುಂಭಾಗದಲ್ಲಿ ಮುಖಮಂಟಪವಿದ್ದ ಲಕ್ಷಣಗಳಿವೆ. ಗರ್ಭಗುಡಿಯ ಮಾಡಿನ ಹಂತದಲ್ಲಿ ಮುಂಚಾಚಿದ ಒಡೆದ ಕಲ್ಲುಹಲಗೆಗಳು ಹಾಗೂ ಮುಂಭಾಗದಲ್ಲಿ ಉಳಿದ ಒಂದೇ ಒಂದು ಕಂಬದ ಮೇಲಿರುವ ಚಿತ್ರಿತ ಕಲ್ಲಿನ ತೊಲೆ ಪ್ರದಕ್ಷಿಣಪಥದ ಮೇಲಿನ ಮಾಡಿನದಾಗಿದ್ದಿರಬೇಕು (ಚಿತ್ರ 2; 2). ಈ ದೇವಾಲಯದ ಅನತಿ ದೂರದಲ್ಲೇ ಬಿದ್ದಿರುವ ಚೆಲುವಾದ ಸೂಕ್ಷ್ಮ ಕುಸುರಿನ ಕೆತ್ತನೆಯುಳ್ಳ ಒಂದು ಕಂಬವು ಮತ್ತು ಸರಳವಾದ ಮತ್ತೊಂದು ಅರ್ಧಗಂಬ (ಚಿತ್ರ 3; 2, ೪) ಮುಖಮಂಟಪದ್ದು ಮತ್ತು ಒಳಗಿನ ಬಾಗಿಲಿನ ಬದಿಯದಾಗಿರಬೇಕು. ಗರ್ಭಗುಡಿಯ ಬಾಗಿಲು ಚೌಕಟ್ಟಿನಲ್ಲಿ ನಾಲ್ಕು ಶಾಖೆಗಳಿವೆ. (ಚಿತ್ರ 2; ೧) ಈ ಶಾಖೆಗಳಲ್ಲಿ ಹೊರಬದಿಯಿಂದ ಕ್ರಮವಾಗಿ ಮೂರು ಪದ್ಮಪುಷ್ಪ, ಬಳ್ಳಿ ಮತ್ತು ಪುಷ್ಪ ಮಾಲೆಯ ಚಿತ್ರಗಳಿಂದ ಅಲಂಕೃತವಾಗಿದೆ. ನಾಲ್ಕನೆಯದರಲ್ಲಿ ಏನೂ ಕೆತ್ತನೆಯಿಲ್ಲದೆ ಸರಳವಾಗಿದೆ. ಮೊದಲನೆ ಎರಡು ಶಾಖೆಗಳ ಬುಡದಲ್ಲಿ ಒಬ್ಬೊಬ್ಬ ಕುಬ್ಜ ದ್ವಾರಪಾಲಕನು ದಂಡಪಾಣಿಯಾಗಿ ನಿಂತಿದ್ದಾನೆ (ಚಿತ್ರ 3; ೧).

ಸಾಮಾನ್ಯವಾಗಿ ದೇವಾಲಯದ ಬಾಗಿಲು ಚೌಕಟ್ಟಿನ ಮೇಲಿನ ಅಡ್ಡಪಟ್ಟಿಗಳ ಮಧ್ಯದಲ್ಲಿ ದೇವರ ಅಥವಾ ತೀರ್ಥಂಕರರ ಮೂರ್ತಿಸಹಿತ ಲಲಾಟಬಿಂಬ ವಿರುತ್ತದೆಯಷ್ಟೇ? ಆದರೆ ಈ ದೇವಾಲಯದ ಬಾಗಿಲು ಚೌಕಟ್ಟಿನಲ್ಲಿ ಇಂಥ ಲಲಾಟಬಿಂಬವಾಗಲಿ ಅಥವಾ ಯಾವುದೇ ಚಿತ್ರವಾಗಲಿ ಇಲ್ಲದಿರುವುದು ಗಮನಾರ್ಹ.

ಗರ್ಭಗುಡಿಯೊಳಗೆ ಈಗ ದೇವರ ಮೂರ್ತಿ ಇಲ್ಲದಿದ್ದರೂ ಅದರ ಪೀಠ ಮಾತ್ರ ದೈವವಶಾತ್ ಉಳಿದಿದೆ. ಈ ಕಾಲದ ಹಾಗೂ ಅನಂತರ ಕಾಲದ ದೇವರ ಪೀಠಗಳು ಚೌಕೋನವಾಗಿ ಅಥವಾ ವೃತ್ತಾಕಾರವಾಗಿರುತ್ತವೆ. ಆದರೆ ಇಲ್ಲಿಯ ಪೀಠವು ಹಿಗ್ಗಿದ ವೃತ್ತದಂತೆ ಅಂದರೆ ಅಂಡಾಕೃತಿಯಂತೆ ಇದೆ (ಚಿತ್ರ 2; ೨). ಮತ್ತು ಇದರ ಬದಿಯ ಮೇಲೆ ಅರಳಿದ ಕಮಲಪುಷ್ಪದ ಚಿತ್ರಗಳಿವೆ. ಅಂದರೆ ಇದು ಪದ್ಮಪೀಠ. ಇದರ ಮೇಲೆ ರೇಖಾಚಿತ್ರವಿದೆ. ಇದರ ಮೇಲೆ ಅರ್ಧವೃತ್ತಾಕೃತಿಯ ತಗ್ಗನ್ನು ಕ್ರಮವಾಗಿ ತೆಗೆದು ಈ ತಗ್ಗಿನ ಮಧ್ಯದಲ್ಲಿ ಮತ್ತೆ ಕೆಳಗೆ ಚೌಕೋನದ ಗುಂಡಿಯನ್ನು ತೆಗೆಯಲಾಗಿದೆ.

ಗರ್ಭಗುಡಿಯ ಮೇಲಿನ ಏಕತಲ ದ್ರಾವಿಡ ವಿಮಾನ ಶೈಲಿಯ ಶಿಖರವಿದೆ. ಇದರ ತಲವು ಗರ್ಭಗುಡಿಗಿಂತ ಉದ್ದಗಲ ಮತ್ತು ಎತ್ತರದಲ್ಲಿ ಸ್ವಲ್ಪ ಕಿರಿದಾಗಿದ್ದು, ಒಂದು ಕೋಣೆಯ ಹಾಗಿದೆ. ತಲದ ಮೇಲೆ ಶಾಲ ಮತ್ತು ಕೂಟಗಳ ಹಾರವಿದೆ. ಇದರ ಮೇಲೆ ಅಷ್ಟಭುಜದ ಸ್ತೂಪಿಯಿದೆ. ಸ್ತೂಪಿಯ ಬದಿಯಲ್ಲಿ ಎಂಟು ದಿಕ್ಕುಗಳಿಗೆದುರಾಗಿ ಒಂದೊಂದು ಕೂಟವಿದೆ. ಈಶಾನ್ಯ, ಆಗ್ನೇಯ ಮತ್ತು ನೈಋತ್ಯಕೂಟದ ಮುಂಭಾಗದ ಎರಡು ಬದಿಗಳಲ್ಲಿ ಕುಳಿತ ಭಂಗಿಯಲ್ಲಿರುವ ಒಂದೊಂದು ಪುರುಷದೇವತೆಯ ವಿಗ್ರಹವಿದೆ (ಚಿತ್ರ 1; ೨). ಸ್ತೂಪಿಯ ಮೇಲ್ಭಾಗದಲ್ಲಿ ಅರಳಿದ ಕಮಲಪುಷ್ಪವಿದ್ದು ಇದರ ಮೇಲೆ ಆಮಲಕದಂಥ ಕಲಶವಿದೆ. ಗರ್ಭಗುಡಿಯ ಮುಂಭಾಗದಲ್ಲಿರುವ ಜಂತಿಯ ಒಂದು ಬದಿಯಲ್ಲಿ ವಿವಿಧ ಭಂಗಿಗಳಲ್ಲಿರುವ ಕುಬ್ಜಗಣಗಳ ಚಿತ್ರಪಟ್ಟಿಕೆಯಿದೆ. ಇದರ ಹೊರತು ಗೋಡೆಗಳ ಮೇಲೆ ಎಲ್ಲಿಯೂ ಚಿತ್ರಗಳಿಲ್ಲ.

ವಿಶಿಷ್ಟ ಲಕ್ಷಣ

ಬಾದಾಮಿ, ಮಹಾಕೂಟ, ಐಹೊಳೆ ಮತ್ತು ಪಟ್ಟದಕಲ್ಲುಗಳಲ್ಲಿಯ ಬಾದಾಮಿ ಚಾಲುಕ್ಯಕಾಲದ ಹಲವಾರು ಕಟ್ಟಿದ ದೇವಾಲಯಗಳಿದ್ದು ಆ ಕಾಲದ ಶಿಲ್ಪಕಲೆಯ ಕೇಂದ್ರವಾಗಿದೆಯಷ್ಟೇ? ಕೆಳಗಣ ಶಿವಾಲಯವನ್ನು ಉಳಿದ ಈ

ದೇವಾಲಯಗಳೊಡನೆ ಹೋಲಿಸಿದಾಗ ಮೊದಲನೆಯದರ ವೈಶಿಷ್ಟ್ಯ ಸ್ಪಷ್ಟವಾಗುತ್ತದೆ.

i) ಕುಸುರಿನ ಕೆತ್ತನೆಯುಳ್ಳ ಕಂಬದ ಮಾದರಿ ಯಾವುದೇ ಕಟ್ಟಿದ ದೇವಾಲಯದಕ್ಕಿಂತ ಭಿನ್ನವಾಗಿದೆ. ಸ್ವಲ್ಪಮಟ್ಟಿಗೆ ಬಾದಾಮಿಯ ೩ನೆಯ ವೈಷ್ಣವ ಗುಹಾದೇವಾಲಯದ ಒಂದೆರಡು ಕಂಬಗಳ ಮಾದರಿಗೆ ಸಮೀಪವಾಗಿದೆ.

ii) ಬೇರೆ ದೇವಾಲಯಗಳ ಬಾಗಿಲು ಚೌಕಟ್ಟಿನಲ್ಲಿ ಲಲಾಟಬಿಂಬವಿದ್ದು ಅದರಲ್ಲಿ ಅಥವಾ ಅದರ ಮೇಲೆ ಸಾಮಾನ್ಯವಾಗಿ ಸರ್ಪಗಳ ಬಾಲಗಳನ್ನು ಹಿಡಿದ ಗರುಡ ಅಥವಾ ಅಪರೂಪವಾಗಿ ನಂದಿ ಸಮೇತ ಶಿವಪಾರ್ವತಿ, ನಟರಾಜ, ಗರುಡ ವಾಹನನಾಗಿ ವಿಷ್ಣು, ಗಜಲಕ್ಷ್ಮಿಯ ಮೂರ್ತಿ ಇರುತ್ತದೆ. ಆದರೆ ಈ ದೇವಾಲಯದಲ್ಲಿ ಮೂರ್ತಿ ಹೋಗಲಿ, ಲಲಾಟಬಿಂಬವೇ ಇಲ್ಲ.

iii) ಬಾಗಿಲು ಶಾಖೆಗಳ ಬುಡದಲ್ಲಿ (ವೀರಭದ್ರ, ನಂದಿ) ದ್ವಾರಪಾಲಕರ ಹಾಗೂ ಅವರೊಡನೆ ಗಂಗೆ, ಯಮುನೆ, ಶಂಖನಿಧಿ. ಪದ್ಮನಿಧಿ, ಕುಬ್ಜರೊಡನೆ, ಸತಿಪತಿಯರ ಅಥವಾ ಕಲಶಧಾರಿಣಿಯಾದ ಸ್ತ್ರೀಯರ ಉಬ್ಬುಶಿಲ್ಪಗಳಿರುತ್ತವೆ. ಆದರೆ ಈ ದೇವಾಲಯದಲ್ಲಿ ಕೇವಲ ಒಬ್ಬೊಬ್ಬ ಕುಬ್ಜನಷ್ಟೇ ದಂಡಧಾರಿಯಾಗಿ ನಿಂತಿರುವುದು ಗಮನಾರ್ಹ.

iv) ಶಿಖರದ ತಳವು ಗರ್ಭಗುಡಿಯಂತೆ ಒಂದು ಕೋಣೆಯಾಗಿರುವುದು. ಉಳಿದ ಬಹಳಷ್ಟು ದೇವಾಲಯಗಳಲ್ಲಿ ಕಂಡುಬರುವುದಿಲ್ಲ. ಮೇಗಣ ಶಿವಾಲಯ, ಹೊಸ ಮಹಾಕೂಟದ ಗುಡ್ಡದ ದೇವಾಲಯದ ಶಿಖರದ ಮೊದಲನೆ ತಳ ಇದೇ ರೀತಿಯದೆ. ಪ್ರಾಯಶಃ ಹೊಸ ಮಹಾಕೂಟದ ದೇವಾಲಯವು ಹಾಗೆಯೇ ಇರಬಹುದು. ಆದರೆ ಎಂಟನೆಯ ಶತಮಾನದಿಂದ ಜೈನ ಬಸದಿಗಳ ಶಿಖರಗಳಲ್ಲಿ ಈ ಲಕ್ಷಣವು ಅಲ್ಲಲ್ಲಿ ಇದೆ. ಉದಾ:— ಪಟ್ಟದಕಲ್ಲಿನ ಜೈನ ದೇವಾಲಯ.

v) ಸ್ತೂಪಿಯ ಬದಿಯಲ್ಲಿ ಕೂಟಗಳಿರುವುದು, ಕೂಟಗಳಲ್ಲಿ ದೇವತೆಗಳ ವಿಗ್ರಹಗಳನ್ನು ತೋರಿಸಿರುವುದು, ಸ್ತೂಪಿಯ ಮೇಲೆ ಅರಳಿದ ಕಮಲವನ್ನು ತೋರಿಸಿರುವುದು ಮತ್ತು ಇವರ ಮೇಲಿನ ಕಲಶವನ್ನು ಆಮಲಕದಂತೆ ತೋರಿಸಿರುವುದು, ಈ ದೇವಾಲಯದ ವೈಶಿಷ್ಟ್ಯವೆಂದೇ ಹೇಳಬೇಕು. ಇದೇ ಊರಿನ ಮಾಲೆಗಿತ್ತಿ ಶಿವಾಲಯದ ಸ್ತೂಪಿಯ ಸುತ್ತಲೂ ಅಸ್ಪಷ್ಟವಾಗಿ ಕೂಟ

ಗಳಷ್ಟೇ ಇದ್ದ ಲಕ್ಷಣವಿದೆ. ಇದರ ಹೊರತು ಬೇರೆ ಯಾವ ದೇವಾಲಯದಲ್ಲೂ ಈ ಯಾವ ಲಕ್ಷಣಗಳೂ ಇಲ್ಲ.

vi) ಸಾಮಾನ್ಯವಾಗಿ ಈ ಕಾಲದ ಎಲ್ಲ ದೇವಾಲಯಗಳಲ್ಲಿ ಕನಿಷ್ಟ ಗರ್ಭಗೃಹ, ಸಭಾಮಂಡಪ ಮತ್ತು ಮುಖಮಂಡಪ ಇದ್ದೇ ಇರುತ್ತವೆ. ಮೇಲೆ ಉದ್ಧರಿಸಿದ ಹೊಸ ಮಹಾಕೂಟದ ಗುಡ್ಡದ ದೇವಾಲಯ ಹಾಗೂ ಅಲ್ಲಿಯ ಇನ್ನಿತರ ಸಣ್ಣ ದೇವಾಲಯಗಳಲ್ಲಿ ಸಭಾಮಂಡಪವಿಲ್ಲ. ಈ ದೇವಾಲಯಗಳು ಬಹಳ ಸಣ್ಣಪ್ರಮಾಣದವಾಗಿದ್ದು ಸಾಮಾನ್ಯ ಭಕ್ತಾದಿಗಳಿಂದ ಕಟ್ಟಲ್ಪಟ್ಟಿದ್ದರಿಂದ ಸಭಾಮಂಡಪವಿಲ್ಲದಿರುವದು ವಿಶೇಷವಲ್ಲ. ಇವುಗಳಲ್ಲಿ ಪ್ರದಕ್ಷಿಣಪಥವೂ ಇಲ್ಲ. ಆದರೆ ಕೆಳಗಣ ಶಿವಾಲಯವು ಪ್ರದಕ್ಷಿಣಪಥದಿಂದ ಕೂಡಿದ್ದರೂ ಇದಕ್ಕೆ ಸಭಾ ಮಂಡಪವಿಲ್ಲ. ಇದರ ಸನ್ನಿವೇಶವನ್ನು ಗಮನಿಸಿದಾಗ, ಸ್ಥಳಾಭಾವ ಇದಕ್ಕೆ ಕಾರಣವಿರಬಹುದೇನೋ ಎಂದು ತೋರುವುದು.

vii) ಕೊನೆಯದಾಗಿ ಗರ್ಭಗುಡಿಯಲ್ಲಿರುವ ಪದ್ಮಪೀಠದ ಮಾದರಿ. ಉಳಿದೆಲ್ಲ ದೇವಾಲಯಗಳಲ್ಲಿ ಪೀಠವು ಹೆಚ್ಚಾಗಿ ಚೌಕೋನವಾಗಿಯೂ, ಅಪ ರೂಪವಾಗಿ ವರ್ತುಳಾಕಾರವಾಗಿಯೂ ಇರುತ್ತದೆ. ಮತ್ತು ಯಾವ ಚಿತ್ರಗಳಿಲ್ಲದೆ ಸರಳವಾಗಿರುತ್ತದೆ. ವೃತ್ತಾಕಾರದ ಪೀಠವು ಹಳೇ ಮಹಾಕೂಟದ ಗಜಪೃಷ್ಠಾ ಕೃತಿಯ ಶಿವದೇವಾಲಯದಲ್ಲೂ ಮತ್ತು ಐಹೊಳೆಯ ದುರ್ಗದ ದೇವಾಲಯ ದಲ್ಲೂ ಇದೆ. ಆದರೆ ಕೆಳಗಣ ಶಿವಾಲಯದ ಹಾಗೆ ಹಿಗ್ಗಿದ ವೃತ್ತದಂತೆ ಎಲ್ಲಿಯೂ ಇಲ್ಲ. ರಾಷ್ಟ್ರಕೂಟರ ಕಾಲದಿಂದ ಭಿತ್ತಿಚಿತ್ರಗಳಲ್ಲಿ, ಉಬ್ಬುಶಿಲ್ಪಗಳಲ್ಲಿ ಮೂರ್ತಿ ಗಳನ್ನು ಪದ್ಮದ ಮೇಲೆ ನಿಂತ ಅಥವಾ ಕುಳಿತ ಹಾಗೆ ತೋರಿಸಿರುವದು ಸಾಮಾನ್ಯವಾಗಿದೆ. ಆದರೆ ಗರ್ಭಗುಡಿಯಲ್ಲಿ ಮೂರ್ತಿಯನ್ನಿಡುವ ಪೀಠವನ್ನು ಮಾತ್ರ ಪದ್ಮದಂತೆ ಕೆತ್ತಿರುವುದಿಲ್ಲ. ಸಿಂಹ, ಆನೆ ಇಂಥ ಪೀಠವನ್ನು ಹೊತ್ತ ಹಾಗೆ ತೋರಿಸಿರಬಹುದು. ಅಥವಾ ಆಯಾಯ ದೇವರ ವಾಹನವನ್ನು ಮುಂಭಾಗದಲ್ಲಿ ಕೆತ್ತಿರಬಹುದು. ಆದ್ದರಿಂದ ಕೆಳಗಣ ಶಿವಾಲಯದ ಪೀಠವು ನಿಜಕ್ಕೂ ಅದ್ವಿತೀಯವೆಂದೇ ಹೇಳಬಹುದು.

ಈ ದೇವಾಲಯವು ಮೂಲತಃ ಗಣೇಶ ದೇವಾಲಯವೆ ?

ಮೇಲೆ ಹೇಳಿದಂತೆ, ಈಗ ಗರ್ಭಗುಡಿಯಲ್ಲಿ ದೇವರ ಮೂರ್ತಿಯಿಲ್ಲ. ಆದರೂ ಇಲ್ಲಿಯ ಅಪೂರ್ವ ಪದ್ಮಪೀಠದ ಆಕಾರ, ಸುಳಿಯ ಚಿತ್ರ ಮತ್ತು ಇದರೊಳಗಿನ ತಗ್ಗು, ಬಹುಮಟ್ಟಿಗೆ ಇಲ್ಲಿ ಮೂಲತಃ ಯಾವ ದೇವರ ಮೂರ್ತಿ

ಯಿದ್ದಿರಬಹುದೆಂದು ತರ್ಕಿಸಲು ಎಡೆಮಾಡಿಕೊಡುತ್ತವೆ. ನಡೆದುಬಂದ ಧಾರ್ಮಿಕ ವಿಧಿಗಳ ಸಂಕಲನವುಳ್ಳ ಶಿಲ್ಪಶಾಸ್ತ್ರಗ್ರಂಥಗಳು ವರ್ತುಳಾಕಾರದ ಅಥವಾ ಹಿಗ್ಗಿದ ವೃತ್ತಾಕಾರದ ಪೀಠವನ್ನು ವಿಷ್ಣು ಅಥವಾ ವೈಷ್ಣವ ದೇವತೆಗಳ ಮೂರ್ತಿಗಳಿಗೆ ಸಾಮಾನ್ಯವಾಗಿ ಅನುಮೋದಿಸಿಲ್ಲ. ಶಿವಲಿಂಗ ಹಾಗೂ ಶೈವ ಹಾಗೂ ಶಕ್ತಿಸಂಬಂಧವಾದ ದೇವತೆಗಳ ಮತ್ತು ಬ್ರಹ್ಮನ ಮೂರ್ತಿಗಳಿಗೆ ಈ ವಿಧದ ಪೀಠವಿರಬಹುದೆಂದು ತಿಳಿಸಿವೆ. ಚೌಕೋನಪೀಠ ವಿಷ್ಣು ಹಾಗೂ ವೈಷ್ಣವ ದೇವತೆಗಳ ಮೂರ್ತಿಗಳಿಗೆ ನಿಗದಿಮಾಡಿದ್ದರೂ, ಶಿವಲಿಂಗಕ್ಕೆ, ಬ್ರಹ್ಮನ, ಶೈವ ಮತ್ತು ಶಕ್ತಿಯ ಮೂರ್ತಿಗಳಿಗೂ ಈ ವಿಧದ ಪೀಠಗಳಿರುವುದು ಸಾಮಾನ್ಯ. ಬಾದಾಮಿ ಚಾಲುಕ್ಯಕಾಲದ ಬಹಳಷ್ಟು ಶೈವ ದೇವಾಲಯಗಳ ಗರ್ಭಗುಡಿಯಲ್ಲಿರುವ ಶಿವಲಿಂಗಕ್ಕೆ ಚೌಕೋನದ ಪೀಠವಿದೆ. ಹಳೆಯ ಮಹಾಕೂಟದ ಗಜಪೃಷ್ಠಾಕೃತಿಯ ಶಿವದೇವಾಲಯದಲ್ಲೂ ಮತ್ತು ಹೊಸ ಮಹಾಕೂಟದ ಗುಡ್ಡದ ಇಳಕಲಿನಲ್ಲಿರುವ ಕೆಲವು ಶಿವಲಿಂಗಗಳಿಗೆ ವೃತ್ತಾಕಾರದ ಪೀಠವಿದೆ. ಆದ್ದರಿಂದ ಕೆಳಗಣ ಶಿವಾಲಯದ ಪೀಠವು ಶಿವಲಿಂಗದ್ದೋ ಅಥವಾ ಶೈವ ಶಕ್ತಿ ದೇವತೆಯದ್ದೋ ಆಗಿರಬೇಕು. ಆದರೆ ಪೀಠದೊಳಗಿನ ಅರ್ಧವೃತ್ತಾಕಾರದ ತಗ್ಗು ಮತ್ತು ಅದರೊಳಗಿನ ಚೌಕೋನ ಗುಂಡಿಯನ್ನು ಗಮನಿಸಿದಾಗ ಇದು ಕೆಳಗಡೆ ಬೂಚುವುಳ್ಳ ಒಂದು ಮೂರ್ತಿಯನ್ನು ಭದ್ರವಾಗಿ ಇಡುವುದಕ್ಕೋಸ್ಕರವೇ ಎಂಬುದು ಸುಸ್ಪಷ್ಟ. ಅಂದರೆ ಮೂರ್ತಿಯ ಬೂಚು ಗುಂಡಿಯೊಳಗೆ ಮತ್ತು ಅದರ ಅರ್ಧವೃತ್ತಾಕಾರದ ಪೀಠವು ತಗ್ಗಿನಲ್ಲಿ ಸರಿಯಾಗಿ ಹಿಡಿಯುವ ಹಾಗೆ ಮಾಡಿ ಅದನ್ನು ಭದ್ರವಾಗಿ ಕೂಡಿಸಲು ಆಗುವುದು. ಶಿವಲಿಂಗವನ್ನು ಸ್ಥಾಪಿಸಲು ಪೀಠದಲ್ಲಿ ಅರ್ಧವೃತ್ತಾಕಾರದ ತಗ್ಗು ಅನವಶ್ಯಕ. ಚೌಕೋನದ ವೃತ್ತಾಕಾರದ ಗುಂಡಿ ಸಾಕಾಗುತ್ತಿತ್ತು. ಮತ್ತು ಪೀಠವೂ ವೃತ್ತಾಕಾರದಲ್ಲಿರುತ್ತಿತ್ತು. ಮೂರ್ತಿಶಿಲ್ಪಕ್ಕೆ ಅರ್ಧವೃತ್ತಾಕಾರದ ಪೀಠ ಸರಿಹೋಗುತ್ತದೆ. ಆದ್ದರಿಂದ ಈ ದೇವಾಲಯದ ಪೀಠದ ಆಕಾರವು ಮೂರ್ತಿಯ ಪೀಠದ ಆಕಾರಕ್ಕನುಗುಣವಾಗಿದೆ.

ಮೂರ್ತಿಶಿಲ್ಪ ಗ್ರಂಥಗಳಲ್ಲಿ, ಗಣೇಶನಿಗೆ ಪದ್ಮಪೀಠವಿರಬೇಕೆಂಬ ನಿಯಮವಿದೆ. ಆದ್ದರಿಂದ ಈ ದೇವಾಲಯದ ಪೀಠವು ಗಣೇಶನ ಮೂರ್ತಿಯದ್ದಾಗಿರಬೇಕೆಂದು ಅನುಮಾನವಾಗುವುದು. ಜೊತೆಗೆ ಕೇವಲ ಒಬ್ಬೊಬ್ಬ ದಂಡಧಾರಿ ಕುಬ್ಜ ಪುರುಷನೇ ದ್ವಾರಪಾಲಕನಾಗಿರುವುದನ್ನು ಅನುಲಕ್ಷಿಸಿದಾಗ ಈ ಅನುಮಾನ ಬಲವಾಗುವುದು. ಸಾಮಾನ್ಯವಾಗಿ ಶಿವಶಕ್ತಿ ದೇವಾಲಯಗಳಲ್ಲಿ ವೀರಭದ್ರ

ನಂದಿ ದ್ವಾರಪಾಲಕರಿರುತ್ತಾರೆ. ಕೇವಲ ಕುಬ್ಜ ದ್ವಾರಪಾಲಕರೇ ಇಲ್ಲಿ ಇರುವುದರಿಂದ ಕುಬ್ಜನ ಲಕ್ಷಣಗಳುಳ್ಳ ಅಂದರೆ ಸ್ಥೂಲದೇಹಿ, ಗಿಡ್ಡ ಕೈಕಾಲು, ಡೊಳ್ಳುಹೊಟ್ಟೆಯುಳ್ಳ ಗಣೇಶನೇ ಇಲ್ಲಿ ಇದ್ದಿರಬೇಕೆಂಬುದು ಸಮಂಜಸವಾಗಿ ತೋರುವುದು.

ರೂಪಮಂಡನದ ಪ್ರಕಾರ

ಗಣೇಶನ ಮೂರ್ತಿಯ ಸುತ್ತಲೂ ಎಂಟು ದಿಕ್ಕುಗಳಲ್ಲಿ ಪೂರ್ವದ ಕಡೆಯಿಂದ ಕ್ರಮವಾಗಿ, ಅವಿಘ್ನ ಮತ್ತು ವಿಘ್ನರಾಜ, ಸುವಕ್ತ್ರ ಮತ್ತು ಬಲವಾನ್, ಗಜಕರ್ಣ ಮತ್ತು ಗೋಕರ್ಣ ಹಾಗೂ ಸುಸೌಮ್ಯ ಮತ್ತು ಶುಭದಾಯಕ ಇರಬೇಕೆಂದು ನಿಯಮವಿದೆ. ಕೆಳಗಣ ಶಿವಾಲಯದ ಶಿಖರದ ಸ್ತೂಪಿಯ ಸುತ್ತಲೂ ಇರುವ ಕೂಟಗಳಲ್ಲಿರುವ ಎಂಟು ದೇವತೆಗಳ ಮೂರ್ತಿಗಳು ಈ ನಿಯಮಕ್ಕನುಗುಣವಾಗಿಯೇ ಇದೆಯೇನೋ ಅಥವಾ ಈ ನಿಯಮದ ಪೂರ್ವಭಾವಿ ಪ್ರಯತ್ನವೇನೋ ಎಂಬ ಸಂದೇಹ ಬರುತ್ತದೆ.

ತಮಿಳುನಾಡಿನಲ್ಲಿರುವ ಒಂದು ದಂತಕಥೆ

ತಿರುಚಿನಾಪಳ್ಳಿ ಹತ್ತಿರದ ಗುಡ್ಡದ ಮೇಲೆ ಗಣೇಶ ದೇವಾಲಯವಿರುವದು ಸುಪ್ರಸಿದ್ಧ. ಈ ಗಣೇಶನ ಮೂರ್ತಿಯ ಬಗೆಗೆ ಒಂದು ದಂತಕಥೆಯಿದೆ. ಪಲ್ಲವ ಇಮ್ಮಡಿ ನರಸಿಂಹವರ್ಮನು ಇಮ್ಮಡಿ ಪುಲಕೇಶಿಯನ್ನು ನಿಗ್ರಹಿಸಿ ಬಾದಾಮಿಯನ್ನು ಸೂರೆಗೊಂಡು ಹಿಂತಿರುಗಿ ಹೋಗುವಾಗ ಅಲ್ಲಿಂದ ಒಂದು ಗಣೇಶವಿಗ್ರಹವನ್ನು ತೆಗೆದುಕೊಂಡು ಹೋದನಂತೆ. ಅದೇ ಈ ವಿಗ್ರಹವಂತೆ. ಆದ್ದರಿಂದಲೇ ಸುಪ್ರಸಿದ್ಧ ಗಾಯನವಿಶಾರದ ಮುತ್ತುಸ್ವಾಮಿ ದೀಕ್ಷಿತರು (೧೭೭೬–೧೮೩೫) ಅವರು ಈ ಗಣೇಶನ ದರ್ಶನ ಮಾಡಿದಾಗ ಭಕ್ತಿಭಾವದಿಂದ "**ವಾತಾಪಿ** ಗಣಪತಿಂ ಭಜೇ" ಎಂದು ಹಾಡು ಕಟ್ಟಿದರಂತೆ.

ತಮಿಳು ನಾಡಿನ ಪ್ರಾಚೀನ ಮೂರ್ತಿ ಶಿಲ್ಪವನ್ನು ಚೆನ್ನಾಗಿ ಬಲ್ಲ ಪಂಡಿತರ ಪ್ರಕಾರ, ತಮಿಳು ನಾಡಿನಲ್ಲಿ ಗಣೇಶ ಶಿಲ್ಪಜ್ಞಾನ ಮತ್ತು ಪೂಜೆ, ಪಲ್ಲವ-ಚಾಲುಕ್ಯರ ಸಾಂಸ್ಕೃತಿಕ ಸಂಬಂಧ ಪೂರ್ವದಲ್ಲಿ ಇರಲಿಲ್ಲವೆಂದೂ ಮತ್ತು ಈ ಸಂಬಂಧದಿಂದ ಇವು ಕರ್ನಾಟಕದಿಂದ ಬಂತೆಂದೂ ಹೇಳುತ್ತಾರೆ. ಮತ್ತು ತಮಿಳು ನಾಡಿನಲ್ಲಿ ಪಲ್ಲವ-ಚಾಲುಕ್ಯ ಸಂಬಂಧದ ಪೂರ್ವದ ಶಿಲ್ಪದಲ್ಲಿ ಎಲ್ಲಿಯೂ ಗಣೇಶ ಶಿಲ್ಪವಿಲ್ಲ. ಈ ಸಂಬಂಧ ಪ್ರಾರಂಭವಾದ ಮೇಲೆ ಪ್ರಪ್ರಥಮವಾಗಿ ಈ ಮೂರ್ತಿ ಪಲ್ಲವ ಶಿಲ್ಪದಲ್ಲಿ ಕಾಣಿಸಿಕೊಳ್ಳುತ್ತದೆ.

ಬಾದಾಮಿ ಮಹಾಕೂಟದಲ್ಲಿ ಚಾಲುಕ್ಯ ಪೂರ್ವದ ಶಿಲ್ಪ

ಬಾದಾಮಿಯು ಚಾಲುಕ್ಯರ ರಾಜಧಾನಿಯಾಗುವುದಕ್ಕಿಂತ ಮುಂಚೆಯೇ ಅಂದರೆ ಕ್ರಿಸ್ತಶಕೆ ಆರಂಭ ಸಮಯದಲ್ಲಿಯೇ ಒಂದು ಹೆಸರುವಾಸಿಯಾದ ನಗರವಾಗಿತ್ತೆಂದು ಟಾಲೆಮಿ (ಸು. ಕ್ರಿ. ಶ. ೧೫೦) ಉಲ್ಲೇಖದಿಂದಲೂ, ಇಲ್ಲಿ ಇತ್ತೀಚೆಗೆ ಕೆಳಗಣ ಶಿವಾಲಯವುಳ್ಳ ಗುಡ್ಡದ ಮೇಲೆ ತೋರಿಬಂದ ಇತಿಹಾಸ ಪ್ರಾರಂಭಕಾಲದ ನೆಲೆಯಿಂದಲೂ ಹೇಳಬಹುದು. ಮತ್ತು ಚಾಲುಕ್ಯರ ಕಾಲಕ್ಕಿಂತ ಮೊದಲೇ ಬಾದಾಮಿ–ಮಹಾಕೂಟ ಒಂದು ಶೈವ ಕೇಂದ್ರವಾಗಿದ್ದಿತು. ಮಂಗಳೇಶನ ಮಹಾಕೂಟ ಸ್ತಂಭ ಶಾಸನದಲ್ಲಿ ಮಹಾಕೂಟದ ಮಕುಟೇಶ್ವರನಿಗೆ ತನ್ನ ಯುದ್ಧಗಳಲ್ಲಿ ಗಳಿಸಿದ ದ್ರವ್ಯವನ್ನು ತನ್ನ ಅಣ್ಣನ ಹೆಂಡತಿ ದುರ್ಲಭದೇವಿಯ ಇಚ್ಛೆಯಂತೆ ದಾನ ಮಾಡಿದನೆಂದು ಹೇಳಿದೆ. ಕೆಳಗಣ ಶಿವಾಲಯದ, ತುಲನಾತ್ಮಕವಾಗಿ, ವಾಸ್ತುಶಿಲ್ಪ ಲಕ್ಷಣಗಳನ್ನು ಪರಿಶೀಲಿಸಿದಾಗ ಇದನ್ನು ೫ ನೇ ಶತಮಾನದ ಅಂತ್ಯ ಭಾಗದಲ್ಲಿ ಅಥವಾ ೬ ನೇ ಶತಮಾನದ ಪ್ರಾರಂಭದಲ್ಲಿಯೇ ಕಟ್ಟಿದ್ದಾಗಿರಬೇಕೆಂದು ತೋರುತ್ತದೆ. ಮೇಲಣ ಶಿವಾಲಯವನ್ನು ಬಿಟ್ಟು, ಬಾದಾಮಿಯಲ್ಲಿಯ ಕಟ್ಟಿದ ದೇವಾಲಯಗಳೆಲ್ಲವೂ ಇಮ್ಮಡಿ ಪುಲಕೇಶಿಯ ಕಾಲದನಂತರದವು. ಕೆಳಗಣ ಮತ್ತು ಮೇಲಣ ಶಿವಾಲಯಗಳಿರುವ ಗುಡ್ಡದಲ್ಲಿಯೇ ಗಿರಿದುರ್ಗವನ್ನು ಕಟ್ಟಿಸಿದ ವಿಷಯವುಳ್ಳ ಒಂದನೇ ಪುಲಕೇಶಿಯ ಶಾಸನವಿರುವುದು. ಈ ಗುಡ್ಡದ ಬುಡದಲ್ಲೇ "ವಾತಾಪಿಕೊಂಡ" ಎಂದಿರುವ ಇಮ್ಮಡಿ ನರಸಿಂಹವರ್ಮನ ಶಾಸನವಿರುವುದು. ಆದ್ದರಿಂದ ತಮಿಳು ನಾಡಿನಲ್ಲಿ ಪ್ರಚಲಿತ ದಂತಕಥೆಯಲ್ಲಿ ಐತಿಹಾಸಿಕ ಸತ್ಯವಿದ್ದರೆ ಪಲ್ಲವ ಅರಸನು ಚಾಲುಕ್ಯರ ವಾಸ್ತವ್ಯದ ನೆಲೆಯಲ್ಲೇ ಇದ್ದ ಮತ್ತು ಅವರ ಪ್ರತಿಷ್ಠೆಯ ದೇವಾಲಯಗಳಲ್ಲಿ ಒಂದಾದ ಕೆಳಗಣ ಶಿವಾಲಯದ (ಪಲ್ಲವರಿಗೆ) ಅಪೂರ್ವವಾದ ಮೂರ್ತಿಯನ್ನೇ ತೆಗೆದುಕೊಂಡು ಹೋಗಿರಬೇಕು. ಈ ದೃಷ್ಟಿಯಿಂದಲೂ ಕೆಳಗಿನ ಶಿವಾಲಯ ಗಣೇಶನದೆಂದು ತೋರುತ್ತದೆ. ತಿರುಚಿನಾಪಳ್ಳಿಯಲ್ಲಿರುವ ಮೂರ್ತಿಯು ಕರ್ನಾಟಕದ ಭಾಗದಲ್ಲಿದ್ದ ೫–೬ನೇ ಶತಮಾನದ ಶಿಲ್ಪ ಶೈಲಿಯಲ್ಲಿದ್ದರೆ ಮತ್ತು ಅದು ಈ ಪೀಠಕ್ಕೆ ಸರಿಹೊಂದುವುದಾದರೆ ತಮಿಳು ನಾಡಿನ ದಂತಕಥೆಗೆ ಐತಿಹಾಸಿಕ ಪುಷ್ಟಿ ದೊರೆಯುತ್ತದೆ. ಹಾಗಲ್ಲದಿದ್ದಲ್ಲಿ ಅದು ದಂತಕಥೆಯೇ. ನರಸಿಂಹವರ್ಮನ ಪ್ರತಿಷ್ಠೆಯನ್ನು ಬೆಳೆಸಲು ಒಂದು ಕಾಲ್ಪನಿಕ ಪ್ರಾದೇಶಿಕ ಕಥೆಯಿಂದಷ್ಟೇ ಹೇಳಲೂ ಸಾಧ್ಯ.

ಇದು ಹೇಗೂ ಇರಲಿ, ಕೆಳಗಣ ಶಿವಾಲಯದ ವಾಸ್ತುಶಿಲ್ಪ ಲಕ್ಷಣಗಳೇ ಹೆಚ್ಚು ನಂಬಲರ್ಹವಾದ ಆಧಾರ. ಮುಂದಿನ ಸಂಶೋಧನೆಗಳಿಂದ ಈ ಆಧಾರಗಳ



೧. ಬಾದಾಮಿ : ಕೆಳಗಣ ಶಿವದೇವಾಲಯ



೨. ದೇವಾಲಯದ ಶಿಖರದ ಮೂಲೆಯಲ್ಲಿರುವ ದೇವತೆಗಳು.



೧. ದೇವಾಲಯದ ಬಾಗಿಲು ಚೌಕಟ್ಟು.



೨. ಗರ್ಭಗುಡಿಯಲ್ಲಿಯ ಪೀಠ




೩. ಜಂತಿಯಲ್ಲಿರುವ ಚಿತ್ರಪಟ್ಟಿಕೆ.



೧. ಕುಬ್ಜ ದ್ವಾರಪಾಲ.



೨. ಶೈವ ದ್ವಾರಪಾಲ(ದೇವಾಲಯದ ಸಮೀಪದಲ್ಲಿದೆ).



೩.



೪. ಸ್ತಂಭಗಳು.

ಮೇಲೆ ಮಂಡಿಸಿದ ಅಭಿಪ್ರಾಯ ಸರಿ ಕಂಡುಬಂದಲ್ಲಿ, ಕರ್ನಾಟಕದಲ್ಲಿಯೇ ಏಕೆ, ದಕ್ಷಿಣ ಭಾರತದಲ್ಲಿಯೇ ಉಳಿದಿರುವ ಕಟ್ಟಿದ ಗಣೇಶ ದೇವಾಲಯಗಳಲ್ಲಿ ಕೆಳಗಣ ಶಿವಾಲಯವು ಪ್ರಾಚೀನತಮ ಗಣೇಶ ದೇವಾಲಯವೆಂದಾಗುತ್ತದೆ.

ಟಿಪ್ಪಣಿಗಳು

೧. Gopinatha Rao, T. A., 1968 (Reprint) : **The Elements of Hindu Iconography** Vol. 1, pt. 1, P. 49.

೨. Ibid, P. 48.

೩. ಕೇಂದ್ರ ಸರ್ಕಾರದ ಪುರಾತತ್ವ ಸರ್ವೇಕ್ಷಣ ಶಾಖೆಯ ದಕ್ಷಿಣ ಭಾರತ ದೇವಾಲಯಗಳ ಸರ್ವೇಕ್ಷಣ ಯೋಜನೆಯಲ್ಲಿ ನಿರ್ದೇಶಕರಾಗಿ ಹಲವಾರು ವರ್ಷಗಳವರೆಗೆ ಸೇವೆ ಸಲ್ಲಿಸಿ ನಿವೃತ್ತರಾದ ಶ್ರೀ ಕೆ. ಆರ್. ಶ್ರೀನಿವಾಸನ್ ಅವರೊಡನೆ ತಮಿಳುನಾಡಿನಲ್ಲಿ ಗಣೇಶನ ಶಿಲ್ಪದ ಬಗ್ಗೆ ಚರ್ಚಿಸುತ್ತಿದ್ದಾಗ ಈ ವಿಷಯವನ್ನು ತಿಳಿಸಿದರು. ಅವರಿಗೆ ಕೃತಜ್ಞತೆಗಳು.

೪. ಸುಂದರ, ಅ : ೧೯೭೫ : "ಇತ್ತೀಚಿನ ಕೆಲವು ಮುಖ್ಯ ಪುರಾತತ್ವ ಶೋಧನೆಗಳು", **ಕರ್ನಾಟಕ ಭಾರತಿ,** ಸಂಪುಟ ೮, ಸಂಚಿಕೆ ೨, ಪು. ೧೨.

೫. Srikanthasastry, S., 1940 : **Sources of Karnataka History,** PP. 36–37.

ಪ್ರಾಚೀನ ಕರ್ನಾಟಕದ ಸ್ಥಾನಿಕ ಆಡಳಿತ ಪದ್ಧತಿ

● ಸಿ. ವ್ಹಿ. ರಂಗಸ್ವಾಮಿ

ಪ್ರಾಚೀನ ಹಾಗೂ ಮಧ್ಯಕಾಲೀನ ಕರ್ನಾಟಕದ ರಾಜ್ಯಗಳಲ್ಲಿ ರಾಜಪ್ರಭುತ್ವವೇ ಪ್ರಧಾನ ಸರಕಾರ ಪದ್ಧತಿಯಾಗಿತ್ತು. ಆದರೆ ಅರಸನು ಎಷ್ಟೇ ಪ್ರಬಲನಾಗಿದ್ದರೂ ಆತನ ಆಳ್ವಿಕೆಯು ಸ್ವೇಚ್ಛಾಪ್ರವೃತ್ತಿಯದಾಗಿರಲಿಲ್ಲ. ಏಕೆಂದರೆ ರಾಜಕೀಯ ಮತ್ತು ಸಾಮಾಜಿಕ ಪದ್ಧತಿಗಳು, ಧರ್ಮಶಾಸ್ತ್ರಗಳು, ಜನಾಭಿಪ್ರಾಯ ಇವುಗಳ ಅರಿವು ಮತ್ತು ಕಟ್ಟುಪಾಡುಗಳಿಂದ ಅರಸನ ಅಧಿಕಾರವು ನಿಯಂತ್ರಣದಲ್ಲಿತ್ತು.[೧] ಅಲ್ಲದೆ ಅರಸನ ಮುಖ್ಯ ಕರ್ತವ್ಯವು ದುಷ್ಟನಿಗ್ರಹ, ಶಿಷ್ಟಪರಿಪಾಲನೆ[೨] ಹಾಗೂ ಪ್ರಜಾಕ್ಷೇಮ ಇವುಗಳಿಗೇ ಮೀಸಲಾಗಿತ್ತು. ಇಂದಿನ 'ಪಂಚಾಯತಿ ರಾಜ್ಯಪದ್ಧತಿಯ' ಪೂರ್ವದಲ್ಲಿದ್ದ ಕರ್ನಾಟಕದ ಸ್ಥಾನಿಕ ಆಡಳಿತ ಪದ್ಧತಿಯ ರೂಪರೇಷೆಗಳನ್ನು ಈ ಪುಟಗಳಲ್ಲಿ ವಿವೇಚಿಸಲಾಗಿದೆ.

ರಾಜ್ಯವು ವಿಸ್ತಾರವಾಗಿದ್ದುದರಿಂದ ಆಡಳಿತ ಅನುಕೂಲಕ್ಕಾಗಿ ಸಣ್ಣ ಸಣ್ಣ ವಿಭಾಗಗಳಾಗಿ ರಚಿಸಲ್ಪಟ್ಟವು. ಈ ವಿಭಾಗಗಳಿಗೆ ನಾಡು,[೩] ಮಂಡಲ,[೪] ವಿಷಯ[೫] ಎಂಬ ಹೆಸರುಗಳಿದ್ದವು. ಪ್ರತಿಯೊಂದು ವಿಭಾಗದಲ್ಲಿ ಸಮಾವೇಶಗೊಂಡ ಗ್ರಾಮಗಳ ಸಂಖ್ಯೆಯನ್ನು[೬] ನಿರ್ದಿಷ್ಟಪಡಿಸಲು ಆ ವಿಭಾಗಗಳ ಮುಂದೆ ಸಂಖ್ಯಾವಾಚಕ ಪದಗಳನ್ನು ಕೂಡಿಸುವ ಪದ್ಧತಿ ರೂಢಿಯಲ್ಲಿತ್ತು. ಉದಾ: ಗಂಗವಾಡಿ ೯೬,೦೦೦;[೭] ಬನವಾಸಿ ೧೨,೦೦೦;[೮] ನೊಳಂಬವಾಡಿ ೩೨,೦೦೦;[೯] ತರ್ದವಾಡಿ ೧,೦೦೦;[೧೦]

ಇತ್ಯಾದಿ. ಇಂತಹ ವಿಭಾಗದ ಆಡಳಿತದಲ್ಲಿ ಪ್ರಜೆಗಳೂ ಭಾಗವಹಿಸಿ ಸರಕಾರಕ್ಕೆ ಸಹಾಯವನ್ನೊದಗಿಸುತ್ತಿದ್ದರು. ಇದು ಕರ್ನಾಟಕ ರಾಜ್ಯಗಳ ಸ್ಥಾನಿಕ ಪದ್ಧತಿಯ ಮುಖ್ಯಾಂಶವಾಗಿದೆ.

ಗ್ರಾಮ ಪಂಚಾಯತಿಯು ಭಾರತ ದೇಶದಲ್ಲಿಯಂತೆಯೇ ಕರ್ನಾಟಕದಲ್ಲಿಯೂ ಬೆಳೆದುಬಂದ ಬಹು ಪ್ರಾಚೀನ ಸಂಸ್ಥೆ. ಪಂಚಾಯತಿಯು ಸ್ಥಾನಿಕ ಸಂಸ್ಥೆ. ಗ್ರಾಮಾಡಳಿತವು ಸಾಮಾನ್ಯವಾಗಿ ಐವರ ಸಭೆಯಿಂದ ನಡೆಸಲ್ಪಡುತ್ತಿದ್ದುದರಿಂದ ಈ ಸಭೆಗೆ ಸಾಮಾನ್ಯವಾಗಿ 'ಪಂಚಾಯತಿ' ಎಂಬ ಹೆಸರೇ ವಾಡಿಕೆಯಲ್ಲಿ ಬಂದಿತು. ಆದರೆ ಪ್ರಾಚೀನ ಕಾಲದಲ್ಲಿ ಈ ಸಭೆಗಳಲ್ಲಿ ಐವರೇ ಸಹಕರಿಸಬೇಕೆಂಬ ನಿಯಮವಿರಲಿಲ್ಲ. ಗ್ರಾಮದ ಆಡಳಿತ, ಅಲ್ಲಿನ ನ್ಯಾಯನಿರ್ಣಯ, ಮತ್ತು ಲೋಕೋಪಯೋಗಿ ಕಾರ್ಯಗಳನ್ನು ನೆರವೇರಿಸಲು ಪ್ರತಿಯೊಂದು ಗ್ರಾಮಕ್ಕೂ ಒಂದೆರಡು ಸಭೆಗಳಿದ್ದವು[೧೧]. ಆ ಸಭೆಗಳೇ ಗ್ರಾಮದ ಆಧಾರ ಸ್ತಂಭಗಳೆನಿಸಿದ್ದವು. ಕುಟುಂಬದ ಎಲ್ಲ ಗೃಹಸ್ಥರೂ ಗ್ರಾಮಸಭೆಯ ಸದಸ್ಯರಾಗಿದ್ದರು. ಕೇಂದ್ರ ಸರಕಾರವು ಎಷ್ಟೇ ಪ್ರಬಲವಾಗಿದ್ದರೂ ಗ್ರಾಮ ಸಭೆಗಳಿಗೆ ಗ್ರಾಮಾಡಳಿತದಲ್ಲಿ ಸ್ವಾತಂತ್ರ್ಯವಿತ್ತು. ಈ ಸಭೆಗಳು ಗ್ರಾಮದ ಕಲ್ಯಾಣಕ್ಕಾಗಿ ಶ್ರಮಿಸುತ್ತಿದ್ದವು. ಶಾಲೆಗಳನ್ನು ತೆರೆಯುವುದು, ಧರ್ಮಶಾಲೆಗಳನ್ನು ಸ್ಥಾಪಿಸುವುದು, ದೇವಾಲಯಗಳ ಆಸ್ತಿಯ ಆಡಳಿತವನ್ನು ನೋಡಿಕೊಳ್ಳುವದು, ಗ್ರಾಮದ ಕೆರೆ ಕಟ್ಟೆಗಳ ಮೇಲ್ವಿಚಾರಣೆ ನಡೆಸುವದು, ಗ್ರಾಮನಿವಾಸಿಗಳಿಂದ ಧನ ಸಂಗ್ರಹಿಸಿ ಸಾರ್ವಜನಿಕ ಕಾರ್ಯಗಳಿಗಾಗಿ ವಿನಿಯೋಗಿಸುವದು, ಇವು ಗ್ರಾಮ ಸಭೆಯ ಮುಖ್ಯ ಕಾರ್ಯಗಳಾಗಿದ್ದವು[೧೨]. ಕೆಲವು ಸಂದರ್ಭಗಳಲ್ಲಿ ಗ್ರಾಮ ಸಭೆಗಳು ಕೇಂದ್ರ ಸರಕಾರಕ್ಕೆ ಪ್ರಜಾಭಿಪ್ರಾಯವನ್ನು ತಿಳಿಯಪಡಿಸುತ್ತಿದ್ದವು. ಈ ಸಭೆಗಳಿಗೆ ಸಾಕಷ್ಟು ಅಧಿಕಾರವಿದ್ದುದರಿಂದ ದೇವಾಲಯ, ಕಟ್ಟಡಗಳ ಜೀರ್ಣೋದ್ಧಾರ ಕಾರ್ಯಗಳನ್ನು ಮತ್ತು ರೈತರ ಮೇಲಿನ ತೆರಿಗೆಗಳ ಸಂಗ್ರಹಣ ಕಾರ್ಯಗಳನ್ನು ನೆರವೇರಿಸುತ್ತಿದ್ದವು. ಆದ್ದರಿಂದ ಸ್ಥಾನಿಕ ಸಭೆಗಳು ಆಡಳಿತ ಅನುಕೂಲಕ್ಕಾಗಿಯೂ, ವಿಶೇಷ ಕೇಂದ್ರಿಕೃತ ಆಡಳಿತವನ್ನು ತಪ್ಪಿಸುವುದಕ್ಕಾಗಿಯೂ, ಆಡಳಿತ ದಕ್ಷತೆಯನ್ನು ಹೆಚ್ಚಿಸಿ ಸ್ಥಾನಿಕ ಉತ್ಸಾಹವನ್ನು ಬೆಳಸಿ ಮಿತವ್ಯಯಕ್ಕೆ ಪ್ರಾಮುಖ್ಯತೆ ನೀಡಿ ಪ್ರಜಾಪ್ರಭುತ್ವ ತತ್ವಗಳಲ್ಲಿ ಶಿಕ್ಷಣವನ್ನೊದಗಿಸುವುದಕ್ಕಾಗಿಯೂ ಏರ್ಪಟ್ಟಿದ್ದವು. ಈ ಸಭೆಗಳ ಪ್ರಮುಖ ಪಾತ್ರವನ್ನು ಲಾರ್ಡ ಬ್ರೈಸರ ಮಾತಿನಲ್ಲಿ ಹೇಳಬಹುದಾದರೆ, "Town Meetings are to liberty what Primary Schools are to Science."[೧೩] ಇದೇ ಅಭಿಪ್ರಾಯವನ್ನು ಡಾ. ಬೇಣೀಪ್ರಸಾದರು "They are the Fountain-heads of Democracy"[೧೪]

ಎಂದು ವ್ಯಕ್ತಪಡಿಸಿರುವರು. ಗ್ರಾಮವೇ ಅದರ ಪ್ರಾದೇಶಿಕ ಪರಿಮಿತಿ. ಇತರ ಸ್ಥಾನಿಕ ಸಂಸ್ಥೆಗಳು ಉದಯಿಸಿದರೂ ಕೂಡ ಗ್ರಾಮ ಪಂಚಾಯತಿಯೇ ಮೂಲ ಘಟಕ. ಇದು ಗಣರಾಜ್ಯದ ಪ್ರತೀಕ. ಗಣರಾಜ್ಯದಲ್ಲಿ ಯಾವ ಸ್ಥಿತ್ಯಂತರವಾದರೂ ಸ್ಥಾನಿಕ ರಾಜ್ಯದಲ್ಲಿ ಅದರ ಪರಿಣಾಮ ಏನೂ ಆಗುತ್ತಿರಲಿಲ್ಲ. ಕೇಂದ್ರ ಸರಕಾರವು ಪಂಚಾಯತಿಯನ್ನು ಅಲಕ್ಷಿಸುವಂತಿರಲಿಲ್ಲ. ಅವು ಸ್ವಾಯತ್ತ ಸ್ಥಾನಿಕ ಸಂಸ್ಥೆಗಳಾಗಿದ್ದವು.[೧೫] ಈ ಸಂಸ್ಥೆಗಳು ಪ್ರಾಚೀನ, ಮಧ್ಯಕಾಲೀನ ರಾಜ್ಯಗಳಲ್ಲಿ ಸಮರ್ಪಕವಾಗಿ ನಡೆದು ಬಂದು ಬ್ರಿಟಿಷರ ಆಡಳಿತ ದಲ್ಲಿ ತಮ್ಮ ಸ್ಥಾನವನ್ನು ಕಳೆದುಕೊಂಡಿದ್ದವು. ಸರಕಾರವು ಜಮೀನುದಾರ ರೊಂದಿಗೆ ನೇರ ವ್ಯವಹಾರ ನಡೆಸಲು ಪ್ರಾರಂಭಿಸಿದುದರಿಂದಲೂ ಮತ್ತು ಕೇಂದ್ರೀಕೃತ ಆಡಳಿತ ವ್ಯವಸ್ಥೆಯಿಂದಲೂ ಲಾರ್ಡ ರಿಪನ್‌ರವರ ಆಳ್ವಿಕೆಯ ವರೆಗಾದರೂ ಗ್ರಾಮಸಭೆಗಳಲ್ಲಿ ಆಂತರಿಕ ಭಿನ್ನಾಭಿಪ್ರಾಯಗಳು ತಲೆದೋರಿ ದುದೂ ಅದರ ಪ್ರಾಬಲ್ಯ ಕುಗ್ಗಲು ಕಾರಣವಾಯಿತು. ಆದರೆ ೧೯೨೦ ರ ನಂತರ ಗ್ರಾಮಪಂಚಾಯತ ಪದ್ಧತಿಯನ್ನು ಪುನಃ ಸ್ಥಾಪಿಸಲು ಭಾರತದ ಎಲ್ಲ ಪ್ರಾಂತ್ಯಗಳಲ್ಲಿಯೂ ತೀವ್ರ ಪ್ರಯತ್ನಗಳು ನಡೆದವು. ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರದಲ್ಲಿ ಈ ಸ್ಥಾನಿಕ ಸಂಸ್ಥೆಗಳನ್ನು ಪ್ರಬಲಗೊಳಿಸಲಾಯಿತು. ಡಾ. ಎ. ಎಸ್. ಅಳತೇಕರರು ಇವೇ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು.[೧೬] ದೇಶದ ಸರ್ವಾಂಗೀಣ ಪ್ರಗತಿಗೆ ನೆರವೇರಿಸಬೇಕಾಗಿದ್ದ ಕಾರ್ಯಗಳನ್ನು ಗ್ರಾಮ ಸಭೆಗಳು ಕಾರ್ಯಗೊಳಿಸಿದ ಸಂದರ್ಭಗಳನ್ನು ಪರಿಶೀಲಿಸಿದಾಗ ಅವುಗಳಿಗೆ ಸಾಕಷ್ಟು ಧನ ಸೌಕರ್ಯಗಳಿದ್ದುವೆಂದೂ, ಕೊರತೆ ಬಿದ್ದಾಗ ಮಾತ್ರ ರಾಜ್ಯ ಸರಕಾರದ ನೆರವನ್ನು ಅಪೇಕ್ಷಿಸುತ್ತಿದ್ದುವೆಂದೂ ಡಾ. ಆರ್. ಕೆ. ಮುಖರ್ಜಿ ಅವರು ಹೇಳಿದ್ದಾರೆ.[೧೭]

ಸ್ಥಾನಿಕ ಸಂಸ್ಥೆಗಳಿಗೆ ಕರ್ನಾಟಕ ರಾಜ್ಯಗಳಲ್ಲಿ ವಿವಿಧರೂಪದ ಹೆಸರು ಗಳಿದ್ದವು. ಕೆಲವು ರಾಜ್ಯಗಳಲ್ಲಿ ಗ್ರಾಮಸಭೆಗಳಿಗೆ ಊರು[೧೮], ಮಹಾಜನ[೧೯], ಒಕ್ಕಲು[೨೦], ಹಿಟ್ಟು, ಸಮುದಾಯ, ಜಗತ್ತು, ಜನನಿ, ಹಲಬರು, ಗಾವುಂಡ ಎಂಬ ಹೆಸರುಗಳಿದ್ದವು. ಧಾರವಾಡ ಜಿಲ್ಲೆಯ ತಾಮ್ರಗುಂಡಿ ಅಗ್ರಹಾರವನ್ನು ಉಲ್ಲೇಖಿಸುವ ಶಾಸನದಲ್ಲಿ ಗ್ರಾಮಸಭೆಗೆ ಊರು ಹಾಗೂ ಮಹಾಜನ ಎಂಬ ಹೆಸರುಗಳು ಹೇಳಲ್ಪಟ್ಟಿವೆ.

ಸ್ಥಾನಿಕ ಸಭೆಗಳನ್ನು ಅದರಲ್ಲಿಯೂ ಮಹಾಜನವನ್ನು, ಅದರ ಕಾರ್ಯ ವನ್ನು ಉಲ್ಲೇಖಿಸುವ ಹಲವಾರು ಶಾಸನಗಳಲ್ಲಿ ಕೆಲವನ್ನು ಇಲ್ಲಿ ಕೊಡಲಾಗಿದೆ.

ಧಾರವಾಡ ಜಿಲ್ಲೆಯ ಗದುಗಿನ ತ್ರಿಕೂಟೇಶ್ವರ ದೇವಾಲಯದ ಪ್ರಾಕಾರದಲ್ಲಿರುವ (೯೧೯ ರ ಕ. ಚಾ. ಇರಿವೆ ಬೆಡಂಗನ) ಶಾಸನವು ಬೆಳ್ವಲದ ಅಧಿಕಾರಿಯಾದ ಮಹಾ ಶ್ರೀಮಂತ ಹಾಗೂ ಮಹಾಜನರ ನಡುವೆ ಆದ ಭಟ್ಟಕೆರೆಯ ತೆರಿಗೆಯ ಒಪ್ಪಂದವನ್ನು ಉಲ್ಲೇಖಿಸುತ್ತದೆ. ಇದೇ ತಾಲೂಕಿನ ಕೋನೇರಿ ತೀರ್ಥದ ಹನುಮಂತದೇವರ ಗುಡಿಯ ಹಿಂದೆ ಇರುವ ಶಾಸನವು ಲೊಕ್ಕಿಗುಂಡಿಯ ಸಾವಿರ ಮಹಾಜನರನ್ನು ಉಲ್ಲೇಖಿಸುತ್ತದೆ. ಚಿಂಚಿಲದ ಐವತ್ತಾರು ಮಹಾ ಜನರ ಸಮ್ಮುಖದಲ್ಲಿ ವೀರಗಲ್ಲನ್ನು ನಿಲ್ಲಿಸಿದ ವಿಷಯವನ್ನು ಚಿಂಚಲಿಯ (ಗದಗ ತಾಲೂಕು) ೮೯೭ ರ ರಾಷ್ಟ್ರಕೂಟ ಅರಸು ಎರಡನೆಯ ಕೃಷ್ಣನ ಶಾಸನವು ಹೇಳುತ್ತವೆ. ಲಕ್ಕುಂಡಿಯ (ಗದಗ ತಾಲೂಕು) ವಾಸುದೇವಭಟ್ಟರ ಮನೆಯ ಗಣಪತಿ ವಿಗ್ರಹದಲ್ಲಿನ ಕ. ಚಾಲುಕ್ಯರ ೪ನೆಯ ಸೋಮೇಶ್ವರನ ಶಾಸನವು ಊರೊಡೆಯ ಪ್ರಮುಖ ಮಹಾಜನರಿಂದ ಕೊಡಲ್ಪಟ್ಟ ದಾನವನ್ನು ತಿಳಿಸು ತ್ತವೆ. ಇವೇ ಗ್ರಾಮದ ಲಿಂಗಾಯತ ಮಠದ ಮುಂದಿನ ಗೋಡೆಯಲ್ಲಿರುವ ೧೨ನೆಯ ಶತಮಾನದ ಶಾಸನವು ಮಹಾಜನರಿಂದ ನಗರೇಶ್ವರ ದೇವಾಲಯಕ್ಕೆ ಅಂಗಡಿ ದಾನ ನೀಡಿದ ವಿಷಯವನ್ನು ಹೇಳುತ್ತದೆ. ಈ ರೀತಿ ಸೊರಟೂರ ಐವತ್ತು ಮಹಾಜನರ, ಹೊಂಬಳದ ನೂರಿಪತ್ತು ಮಹಾಜನರ, ಸವಣೂರ ಅಗ್ರಹಾರದ ಇನ್ನೂರು ಮಹಾಜನರ, ಹಾವೇರಿಯ ನಾನೂರು ಮಹಾಜನರ, ತಿಳವಳ್ಳಿಯ ಅಗ್ರಹಾರದ ಮಹಾಜನರ, ಪಿರಿಯಕೆರೆಯ ಮಹಾಜನಸಾಸೀರ್ವರ, ರಟ್ಟಿಹಳ್ಳಿಯ ಸಾಸಿರ ಮಹಾಜನರ ಉಲ್ಲೇಖಗಳು, ಅವುಗಳ ಸೌಕರ್ಯಗಳು ಶಾಸನಗಳಲ್ಲಿ ಬರುತ್ತವೆ. ಸೂಡಿ (ರೋಣ)ಯ ಶಾಸನಗಳು ಬ್ರಹ್ಮಪುರಿಯ ಹಾಗೂ ಅದಕ್ಕೆ ಮಹಾಜನರಿಂದ ಧಾನ್ಯ ಕೊಟ್ಟ ವಿವರಣೆಯನ್ನು ನೀಡುತ್ತವೆ. ಸವಣೂರು (ಸಿಗ್ಗಾಂವ) ಶಾಸನವು, ೨೦೦ ಮಹಾಜನರು ಸವಣೂರಿನ ಗಡಿ ಸಂರಕ್ಷಕನೆಂದು ಮಧುಸೂಧನನನ್ನು ಆಯ್ಕೆಮಾಡಿದ್ದನ್ನು ತಿಳಿಸುತ್ತವೆ. ಹಾನಗಲ್ಲ ತಾಲೂಕಿನ ನರೇಗಲ್ಲ ಶಾಸನವು ಅಚಲೇಶ್ವರ ದೇವಾಲಯದ ವೃತ್ತಿಯ ಬಗ್ಗೆ ಎದ್ದ ವ್ಯಾಜ್ಯವು ನಿರ್ಣಯವಾದದ್ದನ್ನು ಉಲ್ಲೇಖಿಸುತ್ತದೆ. ಗಂಗ, ಕದಂಬ, ಬಾದಾಮಿ ಚಾಲಕ್ಯರು ಮತ್ತು ರಾಷ್ಟ್ರಕೂಟರಿಗೆ ಸಂಬಂಧಿಸಿದ ಶಾಸನ ಗಳು ಮತ್ತು ತಾಮ್ರಪಟಗಳು ಇನ್ನೂ ಹೆಚ್ಚಿನ ವಿವರಗಳನ್ನು ಒದಗಿಸುತ್ತವೆ. ಈ ಸಭೆಯ ಪ್ರಮುಖನಿಗೆ ಊರೊಡೆಯ ಎಂಬ ಹೆಸರಿತ್ತು. ಊರೊಡೆಯ, ಪ್ರಮುಖ ಮಹಾಜನ ಎಂಬ ಮಾತು ಬಳಕೆಯಲ್ಲಿತ್ತು.[೨೧] ರಾಷ್ಟ್ರಕೂಟರಲ್ಲಿ ಸ್ಥಾನಿಕ ಸಭೆಗಳಿಗೆ ಗ್ರಾಮಕೂಟ[೨೨], ಮತ್ತು ಕಲ್ಯಾಣಿಚಾಲುಕ್ಯರ ಕಾಲದಲ್ಲಿ ಗ್ರಾಮಮಹತ್ತರ ಹಾಗೂ ವಿಷಯಮಹತ್ತರ[೨೩] ಎಂಬ ಹೆಸರುಗಳಿದ್ದವು.

ಹೀಗೆ ಕರ್ನಾಟಕ ರಾಜ್ಯಗಳಲ್ಲಿ ಒಂದೊಂದು ಗ್ರಾಮಕ್ಕೆ ಒಂದೊಂದು ಸ್ಥಾನಿಕ ಸಭೆಯಿತ್ತು. ಜಿಲ್ಲೆಯಲ್ಲಿ ಮಹಾನಾಡು[೨೪], ನಗರಗಳಲ್ಲಿ ನಾಡು ಎಂಬುದು ಸ್ಥಾನಿಕ ಸಭೆಯಾಗಿತ್ತು. ನಾಡು ಅಥವಾ ಮಹಾನಾಡಿನ ಅಧಿಕಾರಿಗಳಲ್ಲಿ ನಾಳ್ಗಮುಂಡ (ನಾಡಗೌಡ)ನು ಪ್ರಮುಖನು. ಧಾರವಾಡ ಜಿಲ್ಲೆಯ ಮುಗುದ ಗ್ರಾಮದ ಜೈನ ಬಸದಿಯಲ್ಲಿರುವ ಶಾಸನವು ಮುಗುದ ಮೂವತ್ತರ ನಾಳ್ಗವುಂಡ ಸಾಮಂತ ಮಾರ್ತಾಂಡನಿಂದ ಸಮ್ಯಕ್ತ್ವ ರತ್ನಾಕರ ಬಸದಿಯ ಜೀರ್ಣೋದ್ಧಾರ ಹಾಗೂ ನಾಟಕಶಾಲೆಯ ನಿರ್ಮಾಣವನ್ನು ತಿಳಿಸುತ್ತದೆ. ಇದೇ ಗ್ರಾಮದ ಮತ್ತೊಂದು ಶಾಸನವು ಸಾಮಂತ ನಾಕರಸನ ವಂಶಾವಳಿ ಹಾಗೂ ಬಮ್ಮರಸನಿಂದ ಕೆರೆಗೆ ಕೊಡಲ್ಪಟ್ಟ ದಾನವನ್ನು ತಿಳಿಸುತ್ತದೆ. ರಾಯಪುರದ (ಧಾರವಾಡ) ಬಸಯ್ಯ ಮಲ್ಲಯ್ಯ ಮಠಪತಿಯಿಂದ ದೊರೆತಿರುವ ತಾಮ್ರಪಟವು ಉದಯಗಾವುಂಡನಿಂದ ಕಲಿದೇವಸ್ವಾಮಿ ದೇವಾಲಯಕ್ಕೆ ಭೂದಾನ ಕೊಟ್ಟ ಅಂಶವನ್ನು ಹೇಳುತ್ತದೆ. ಇವಲ್ಲದೆ ಸಿದ್ಧಾಪುರ, ನೂಲ್ವಿ, ಬೆಳಗಲಿ ಮತ್ತು ಸುಳ್ಳ ಶಾಸನಗಳು ಗಾವುಂಡನ ಬಗ್ಗೆ ವಿವರಣೆ ನೀಡುತ್ತವೆ. ಬೆಳಗಲಿ (ಹುಬ್ಬಳ್ಳಿ ತಾಲೂಕು) ಶಾಸನವು ಗಾವುಂಡ ಹಾಗೂ ಪಿಟ್ಟುಗಳು ಮರಣಹೊಂದಿದ ವೀರನಿಗೆ ನೀಡಿದ ದಾನವನ್ನು, ಬ್ಯಾಹಟ್ಟಿಯ (ಹುಬ್ಬಳ್ಳಿ) ಶಾಸನವು ೧೨ ಜನ ಗಾವುಂಡರಿಂದ ಜಿನಾಲಯಕ್ಕೆ ತೆರಿಗೆ ದಾನವನ್ನು ನೀಡಿದ ವಿಷಯವನ್ನು ಮತ್ತು ಸುಳ್ಳದ ಶಾಸನವು (ರಾ. ಅಮೋಘವರ್ಷ) ಗುರುವಿನ ಪಾದುಕೆಗಳ ಪೂಜೆ ಮತ್ತು ಉಣಕಲ್ಲು ೫೦ ರ ಗಾವುಂಡನ ಉಲ್ಲೇಖವನ್ನು ಹೇಳುತ್ತವೆ.

ಧಾರವಾಡ ಜಿಲ್ಲೆಯ ನವಲಗುಂದ ತಾಲೂಕಿನ ಶಿರುವಿನಹಳ್ಳಿಯಲ್ಲಿ ದೊರೆತಿರುವ ೧೩ನೆಯ ಶತಮಾನದ ಶಾಸನವು ಮಹಾನಾಡು ಹಾಗೂ ಹದಿನೆಂಟು ಮಠಗಳು ಮಲ್ಲಯ್ಯನೆಂಬವನಿಗೆ ದಾನಕೊಟ್ಟರೆಂದು ತಿಳಿಸುತ್ತವೆ. ಈ ಸಭೆಗಳಿಗೆ ಸದಸ್ಯರನ್ನು ಹಾಗೂ ಸಭೆಗಳ ಪ್ರಮುಖ ಕಾರ್ಯಕರ್ತರನ್ನು ನಾಮಕರಣ ಮಾಡುವ ಪದ್ಧತಿ ಇತ್ತೆಂದೂ, ಹಾಗೆ ನಾಮಕರಣವಾದವರು ಆ ಭಾಗದ ಅತ್ಯಂತ ಗಣ್ಯವ್ಯಕ್ತಿಗಳೂ ಮತ್ತು ನಿಷ್ಠಾವಂತರೂ ಆಗಿದ್ದರೆಂದು ತಿಳಿಸುತ್ತವೆ. ಸಭೆಗಳು ತಮ್ಮ ತಮ್ಮ ಸ್ಥಾನಿಕ ಆಡಳಿತವನ್ನು ನಡೆಸುವುದಲ್ಲದೆ, ದತ್ತಿ ಬಿಟ್ಟಿದ್ದ ಭೂಮಿಯ ಮೇಲ್ವಿಚಾರಣೆ ಹಾಗೂ ದೇವಾಲಯದ ಆಡಳಿತವನ್ನು ನಿರ್ವಹಿಸುವುದರಲ್ಲಿ ವಿಶ್ವಸ್ಥ ಪ್ರತಿನಿಧಿಯಂತೆ (Trustee) ಇದ್ದು ಯಾರೊಬ್ಬರ ಬಲಾತ್ಕಾರಕ್ಕೂ ಮಣಿಯದೆ ಆಡಳಿತ ನಡೆಸುತ್ತಿದ್ದವೆಂದು ಹೇಳಬಹುದು. ಪಟ್ಟಣಗಳಲ್ಲಿ 'ನಗರ'[೨೫] ಅಥವಾ ಪೌರಸಭೆಗಳಿದ್ದುವು. ಮುಂಡರಗಿ ತಾಲೂಕಿನ

ಮೇವುಂಡಿಯಲ್ಲಿ ವೆಂಕಟೇಶ್ವರ ಗುಡಿ ಎದುರು ಸಿಕ್ಕಿರುವ (೧೨ನೆಯ ಶತಮಾನ ರಾಷ್ಟ್ರಕೂಟರ ಎರಡನೆಯ ಕೃಷ್ಣನ) ಶಾಸನವು ನಖರರು ಹಾಗೂ ಮುಮ್ಮುರಿ ದಂಡಗಳು ದೇಹುತಗೆರೆಯ ಬಿಲ್ಲೇಶ್ವರ ದೇವರಿಗೆ ನೀಡಿದ ದಾನವನ್ನು ಉಲ್ಲೇಖಿಸುತ್ತದೆ. ಅದೇ ಕಲ್ಲಿನಲ್ಲಿರುವ ಮತ್ತೊಂದು ಶಾಸನವು (ಹೊಯ್ಸಳ ವೀರಬಲ್ಲಾಳನ) ಅಯ್ಯಾವೊಳೆಯ ಐನೂರ್ವರು ದೇಹುತಗೆರೆಯ ಬಿಲ್ಲೇಶ್ವರ ದೇವರಿಗೆ ಸುಂಕಬಿಟ್ಟ ಉಲ್ಲೇಖನವನ್ನು ನೀಡುತ್ತದೆ. ಹೀಗೆ ಕರ್ನಾಟಕದ ರಾಜ್ಯಗಳಲ್ಲಿ ಪೌರಸಭೆಗಳಿಗೆ ಮಹತ್ವದ ಸ್ಥಾನವಿತ್ತು.

ಸ್ಥಾನಿಕ ಸಂಸ್ಥೆಗಳು ಸಂಘ ಸಂಸ್ಥೆಗಳಾಗಿದ್ದವು. ಕಂಚುಗಾರ, ತೆಲ್ಲಿಗ ಮೊದಲಾದ ಶ್ರೇಣಿಗಳು ಸ್ಥಾನಿಕ ಆಡಳಿತದಲ್ಲಿ ಪಾಲುಗೊಳ್ಳುತ್ತಿದ್ದವು.[೨೬] ಬೆಳಗಾವಿಯ ಕಲ್ಲೋಳಿ ಶಾಸನದಲ್ಲ ಎಲ್ಲ ಶ್ರೇಣಿ ಪ್ರಮುಖರಿಂದ ವ್ಯವಸ್ಥೆಗೊಂಡಿದ್ದ ಮಹಾನಾಡಿನ ಉಲ್ಲೇಖವಿದೆ. ಉದ್ದಿಮೆಗಳು, ಸ್ಥಳೀಯ ಸಂಸ್ಥೆಗಳ ಅಧಿಕಾರಕ್ಕೊಳಪಟ್ಟದ್ದವು. "ರಾಜಸ್ವ" (King's share) ಮತ್ತು ಉತ್ಪಾದಿತ ವಸ್ತುಗಳ ಮೇಲೆ ವಿಧಿಸುವ ತೆರಿಗೆಗಳನ್ನು ಸಂಗ್ರಹಿಸುವ ಅಧಿಕಾರವಿತ್ತು. ಮತ್ತು ವ್ಯಾಪಾರ ಶ್ರೇಣಿಗಳನ್ನು ತಮ್ಮ ಕಕ್ಷೆಯಲ್ಲಿ ಅಳವಡಿಸಿಕೊಂಡಿದ್ದರು. ಮತ್ತು ಎರಡು ಗ್ರಾಮಸಭೆಗಳ ಮಧ್ಯೆ ಇದ್ದ ಪರಸ್ಪರ ಸಹಕಾರವನ್ನು ಹುಬ್ಬಳ್ಳಿಯ ಶಾಸನವೊಂದು ತಿಳಿಸುತ್ತದೆ. ಎಲೆಯ ಪೂರ್ವದವಳ್ಳಿ (ಇಂದಿನ ಹುಬ್ಬಳ್ಳಿ) ಯ ಮಹಾಜನರೂ ಮತ್ತು ನವಿಲೂರಿನ (ಹುಬ್ಬಳ್ಳಿಗೆ ವಾಯುವ್ಯದಲ್ಲಿ ೯ ಮೈಲು) ಕುರುಬ ಸಂಘದವರೂ ಕೂಡಿಕೊಂಡು ನವಿಲೂರಿನಲ್ಲಿ ಶಾಲೆಯನ್ನು ತೆಗೆಯಲು ಭೂದಾನ ಮಾಡಿದರು.[೨೭] ಸ್ಥಳೀಯ ಸಂಸ್ಥೆಗಳು ಮತ ಭೇದವಿಲ್ಲದೆ ದ್ವೇಷ ಅಸೂಯೆಗಳಿಂದ ಕೂಡಿರದೆ ಕರ್ತವ್ಯ ಹಾಗೂ ಸೇವಾಬದ್ಧವಾಗಿದ್ದುವೆಂದು ಶಾಸನಗಳಿಂದ ತಿಳಿಮುಬರುತ್ತದೆ. ಬಾದಾಮಿ ಚಾಲುಕ್ಯರ ಕಾಲದಲ್ಲಿ ಐಹೊಳೆಯ ೫೦೦ ಸ್ವಾಮಿಗಳು ಅಥವಾ ವೀರಬಣಂಜುಗಳು ಸ್ಥಾನಿಕ ಆಡಳಿತದಲ್ಲಿ ಪ್ರಧಾನ ಪಾತ್ರವನ್ನು ವಹಿಸಿದ್ದರೆಂದು ಅವರ ಶಾಸನಗಳಿಂದ ತಿಳಿದು ಬರುತ್ತದೆ.[೨೮]

ಇಂತಹ ಸಂಘ ಸಂಸ್ಥೆಗಳು ಕೇಂದ್ರ ಪ್ರಭುತ್ವಕ್ಕೂ ಮತ್ತು ಪ್ರಜೆಗಳಿಗೂ ನಡುವೆ ಮಧ್ಯಸ್ಥ ಪ್ರಭು ವಿಧಾನಾತ್ಮಕ ಸಂಸ್ಥೆಗಳಾಗಿದ್ದವು. ಈ ಸಂಸ್ಥೆಗಳು ಕೇವಲ ಉದ್ದಿಮೆಯ ಅಭಿವೃದ್ಧಿಗಾಗಿಯಲ್ಲದೆ ಕಲೆ, ವ್ಯಾಪಾರ, ಲೋಹ, ಕರ್ಮಾದಿಗಳು, ಶಸ್ತ್ರ ಕವಚಾದಿ ಯುದ್ಧ ಸಾಮಗ್ರಿಗಳ, ಹಾಗೂ ಹತ್ತಿ ಮತ್ತು ಉಣ್ಣೆಯ ವಸ್ತ್ರಗಳ ಅಭಿವೃದ್ಧಿಗಾಗಿಯೂ ಶ್ರಮಿಸುತ್ತಿದ್ದವು.

ಇನ್ನು ಸ್ಥಾನಿಕ ಅಧಿಕಾರಿಗಳ ಬಗೆಗೆ ಒಂದೆರಡು ವಿಷಯಗಳನ್ನು ಹೇಳೋಣ. ಕದಂಬರಲ್ಲಿ ಪುರಸಭೆಯ ಆಡಳಿತವು ಪಟ್ಟಣಸೆಟ್ಟಿ[೨೯] ಅಥವಾ ಪಟ್ಟಣಾಧಿಕಾರಿ ಅಥವಾ ಪಟ್ಟಣಸ್ವಾಮಿ ಅಥವಾ ಪಟ್ಟಣಾಧಿಪತಿ[೩೦] ಎಂಬವನು ಪ್ರಮುಖ ವರ್ತಕನು. ಗಂಗ ಅರಸರ ಕಾಲದಲ್ಲಿ ಪಟ್ಟಣದ ಆಡಳಿತವು ವರ್ತಕರ ಶ್ರೇಣಿಯ ಅಧೀನದಲ್ಲಿತ್ತು.[೩೧] ಸವಣೂರಿನ (ಸಿಗ್ಗಾಂವ) ಊರಹೊರಗಿನ ಕಲ್ಯಾಣಿಚಾಲುಕ್ಯರ ಆರ್ವಡಿ ವಿಕ್ರಮಾದಿತ್ಯ (೧೦೮೧)ರ ಶಾಸನವು ಬಂಕಾಪುರ ಪಟ್ಟಣಾಧಿಪತಿ ಸವಣೂರಿನ ಇನ್ನೂರು ಮಹಾಜನರಿಗೆ ಬಿಟ್ಟ ವೃತ್ತಿಯ ವಿಚಾರ ತಿಳಿಸುತ್ತದೆ. ಮತ್ತೊಂದು ಶಾಸನದ ಪ್ರಕಾರ ಗಂಗರ ಅರಸನೊಬ್ಬನು ಶೆಟ್ಟಿಯೊಬ್ಬನಿಗೆ (ಪಟ್ಟಣಸ್ವಾಮಿಗೆ) ಸೇರಿದ್ದ ಭೂಮಿಯನ್ನು ಉಂಬಳಿಯಾಗಿ ಪಡೆಯಲು ಆತನ ಪಾದಗಳನ್ನು ತೊಳೆದು ಗೌರವಿಸಿ ಸಭೆಯಲ್ಲಿ ನೆರೆದಿದ್ದ ಪುರೋಹಿತರ ಒಪ್ಪಿಗೆಪತ್ರವನ್ನು, ಜನರ ಅನುಮತಿಯನ್ನು ಪಡೆದನೆಂದೂ ಶಾಸನ ಉಲ್ಲೇಖವಿದೆ.[೩೨] ಅರಸರು ಪಟ್ಟಣಗಳಿಗೆ ಕಾನೂನುಗಳನ್ನು ವಿಧಿಸಿ ಘೋಷಣೆ ಹೊರಡಿಸುವ ವಾಡಿಕೆ ಇತ್ತು. ಬಾದಾಮಿ ಚಾಲುಕ್ಯರ ಕಾಲದಲ್ಲಿ ಯುವರಾಜ ವಿಕ್ರಮಾದಿತ್ಯನು ಪುಲಿಗೆರೆಯ (ಇಂದಿನ ಲಕ್ಷ್ಮೇಶ್ವರ) ಮಹಾಜನರಿಗೆ ಪಟ್ಟಣದ ಸೌಕರ್ಯಗಳನ್ನು ಒದಗಿಸುವ ದೆಸೆಯಿಂದ ರಾಜಾಜ್ಞೆಯನ್ನು ಹೊರಡಿಸಿದ್ದನೆಂದು ಆತನ ಶಾಸನಗಳಲ್ಲಿ ಹೇಳಲ್ಪಟ್ಟಿದೆ.[೩೩] ರಾಷ್ಟ್ರಕೂಟರ ಕಾಲದಲ್ಲಿ ಪಟ್ಟಣದ ಆಗುಹೋಗುಗಳನ್ನು ನೋಡಿಕೊಳ್ಳಲು "ಪುರಪತಿ" ಅಥವಾ "ನಗರಪತಿ"[೩೪] ಎಂಬ ಪ್ರಮುಖನಿದ್ದನು. ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಈ ಅಧಿಕಾರಿಗೆ 'ಪೆರ್ಗಡೆ' ಎಂತಲೂ ಹೊಯ್ಸಳರ ಕಾಲದಲ್ಲಿ 'ನಾಡಹೆಗ್ಗಡೆ' ಎಂತಲೂ ಹೆಸರುಗಳಿದ್ದವು. ಹೀಗೆ ಕರ್ನಾಟಕದ ರಾಜ್ಯಗಳಲ್ಲಿ ಕದಂಬರ ಸ್ಥಾನಿಕ ಆಡಳಿತ ಪದ್ಧತಿಗಳನ್ನೇ ಮುಂದೆ ಆಳಿದ ಅರಸುಮನೆತನಗಳು ಕಾರ್ಯರೂಪಕ್ಕೆ ತಂದು ತಮ್ಮ ತಮ್ಮ ಕೆಲವು ವಿಶಿಷ್ಟ ಅಂಶಗಳನ್ನು ಕೂಡಿಸಿದ್ದರು. ವರ್ತಕ ಶ್ರೇಣಿಗಳು ತಮ್ಮ ಕಾರ್ಯಕಾರಿ ಮಂಡಲಿಯ ಮೂಲಕ ಪಟ್ಟಣಗಳ ಆರ್ಥಿಕ ಜೀವನ, ವ್ಯಾಪಾರ, ಉದ್ದಿಮೆ ಹಾಗೂ ಅಧಿಕಾರಿಗಳಿಗೆ ಆಡಳಿತದಲ್ಲಿ ಸಹಾಯ ನೀಡುತ್ತಿದ್ದರು.

ಗ್ರಂಥಸೂಚಿ ಮತ್ತು ವಿಷಯವಿವರಣೆ

೧ ಅರ್ಥಶಾಸ್ತ್ರ, ಭಾಗ ೧, ಅಧ್ಯಾಯ ೧೯; ೧೬ ಪು. ೩೯.
೨ K. P. Jayaswal : **Hindu Polity,** P. 342-343.
೩ G. S. Dikshit : **Local SelfGovernment in Medieval Karnataka,** P. 20.

೪ ಅದೇ, ಪು. ೨೧, ೨೨, ೨೩.

೫ ಅದೇ, ಪು. ೨೧, ೨೨, ೨೩.

೬ ಆಡಳಿತ ವಿಭಾಗಗಳೊಡನೆ ಸೂಚಕ ಸಂಖ್ಯಾಪದಗಳ ಅರ್ಥವಿವರಣೆಗೆ ಸಂಬಂಧಿಸಿರುವ ಭಿನ್ನಾಭಿಪ್ರಾಯಗಳ ಪರಿಶೀಲನೆಯು ಇಲ್ಲಿ ಪ್ರಸ್ತುತವಲ್ಲದಿದ್ದರೂ ಆ ಸಂಖ್ಯೆಯು ಆ ವಿಭಾಗದಲ್ಲಿರುವ ಗ್ರಾಮಗಳ ಸಂಖ್ಯೆಯನ್ನು ಸೂಚಿಸುವುದೆಂದು ಅನೇಕರ ಅಭಿಪ್ರಾಯವಾಗಿದೆ.

೭ G. S. Dikshit : **Local SelfGovernment in Medieval Karnataka,** P. 19.

೮ ಅದೇ, ಪು. ೧೯.

೯ ಅದೇ, ಪು. ೧೯.

೧೦ **Karnataka Through the Ages,** 516, Bombay Karnatak Inscriptions No. 169.

೧೧ John Mathai : **Village Government in British India.**

೧೨ Ratanlal Khanna : **Panchayat Raj in India,** P. 6.
“ನಮ್ಮ ದೇಶದ ಸಂಸ್ಕೃತಿಗೆ ಧಕ್ಕೆಯನ್ನು ತಂದಂತಹ ಮಾರಕ ರಾಜಕೀಯ ಹಾಗೂ ಜಾಗತಿಕ ಮಾರ್ಪಾಟುಗಳ ಘಟನೆಗಳು ಎಷ್ಟೊಂದು ರೀತಿಯಲ್ಲಿ ಉದ್ಭವಿಸಿದರೂ ಕೂಡ ಆ ಸಂಸ್ಕೃತಿ, ಪ್ರಜೆಗಳ ಸ್ವಾವಲಂಬನೆ, ವ್ಯಕ್ತಿತ್ವವನ್ನು ಕಾಪಾಡಿಕೊಂಡು ಬಂದಿರುವ ಅತ್ಯಂತ ವಿಸ್ತೃತವಾದ ಸ್ಥಾನಿಕ ಆಡಳಿತ ಸಂಸ್ಥೆಗಳಿಗೆ ನಾವು ಯಾವತ್ತೂ ಋಣಿಯಾಗಿದ್ದೇವೆ.” (R. K. Mukherji: **Local Government in Ancient India**) ಇದೇ ರೀತಿಯಲ್ಲಿ ಸರ್ ಚಾರ್ಲ್ಸ್ ಮೆಟ್‌ಕಾಫರು “...ಅರಸುಮನೆಗಳು ಒಂದಾಗುತ್ತಲೊಂದು ಭಾರತದ ರಾಜಕೀಯ ರಂಗದಲ್ಲಿ ಪತನಗೊಂಡಿರಬಹುದು. ಕ್ರಾಂತಿಯು ಮತ್ತೊಂದು ಕ್ರಾಂತಿಗೆ ನಾಂದಿಯಾಗಿರಬಹುದು; ಆದರೆ ಗ್ರಾಮೀಣ ಸ್ಥಾನಿಕ ಸಂಸ್ಥೆಗಳು ಬದಲಾಗದೆ ಅದೇ ಸ್ಥಿತಿಯಲ್ಲಿ ಉಳಿದಿವೆ” ಎಂದು ಹೇಳಿರುವರು.

೧೩ **Modern Democracies.**

೧೪ **The State in Ancient India.**

೧೫ ರಂಗನಾಥ ನೆಗಳೂರ : ಮೈಸೂರು ಪಂಚಾಯತ-ಲೋಕಲ್‌ಬೋರ್ಡ ಕಾಯಿದೆ, ೧೯೫೯ ಪು. ೨.

೧೬ "ಈ ವಿಧವಾದ ಸ್ಥಾನಿಕ ಸಂಸ್ಥೆಗಳು ಗ್ರಾಮಕಲ್ಯಾಣಕ್ಕೆ ಅಸಂಖ್ಯಾತ ಆಡಳಿತ ಕಾರ್ಯಗಳನ್ನು ನೆರವೇರಿಸಲು ಸತತವಾಗಿ ಪ್ರಯತ್ನಿಸುತ್ತಿದ್ದವು; ಇದರಿಂದ ಕೇಂದ್ರಸರಕಾರವು ವಿಶೇಷ ಹೊಣೆಗಾರಿಕೆ ಹಚ್ಚಿಸಿಕೊಳ್ಳದೆ ಸ್ಥಳೀಯ ಆಡಳಿತದಲ್ಲಿ ಹೆಚ್ಚಿನ ಸ್ವಾಯತ್ತತೆಯನ್ನು ಬಿಟ್ಟುಕೊಡಲು ಸಹಾಯವಾಯಿತು. ಸಾಂಕುಶ ರಾಜಪ್ರಭುತ್ವ ಹೇಗೋ ಹಾಗೇ ಈ ಸ್ಥಾನಿಕ ಸಂಸ್ಥೆಗಳು ಜನಸಮುದಾಯದ ಆಶೋತ್ತರಗಳನ್ನೂ ಮತ್ತು ಯೋಗಕ್ಷೇಮವನ್ನೂ ಈಡೇರಿಸುವ ಹೊಣೆಗಾರಿಕೆಯನ್ನು ವಹಿಸಿಕೊಂಡವು."

State and Government in Ancient India.

C. Rajgopalachari—"ಗ್ರಾಮವು ನಮ್ಮ ಚಟುವಟಿಕೆಗಳ ರಂಗಸ್ಥಳವಾಗಬೇಕು..."

"ಗ್ರಾಮವೇ ಒಂದು ಕುಟುಂಬವಾಗಬೇಕು. ವೈಯಕ್ತಿಕ ಒಡೆತನವು ಹೋಗಬೇಕು. ಸಾಮೂಹಿಕ-ಸಹಕಾರಿಕ ಒಡೆತನವು ಬರಬೇಕು. ಅಂದರೆ ಪಂಚಾಯತವು ಅಂತಃಸ್ಸತ್ವಪೂರಿತವಾಗುವದು"—ಆಚಾರ್ಯ ವಿನೋಬಾ.

೧೭ **Local Government in Ancient India**.

೧೮, ೧೯, ೨೦ G. S. Dikshit : **Local SelfGovernment in Medieval Karnataka,** pp. 68–74.

೨೦ S. I. I. xii–ii Nos. 127, 137, 134.

೨೨ A. S. Altekar : " Rashtrakutas and their Times. " **Karnataka Through the Ages,** P. 515.

೨೩ ಅದೇ, ಪು. ೫೧೬.

೨೪ **ಧಾರವಾಡ ಜಿಲ್ಲಾ ಶಾಸನಸೂಚಿ** : (ಸಂ.)ಡಾ. ಎಂ. ಎಂ. ಕಲಬುರ್ಗಿ, ಪು. ೨೨. S. I. I. xv. No. 638.

೨೫ ಅದೇ, ಪು. ೪೧—೧೮/೪೯ ಮತ್ತು ೧೮/೫೦.

೨೬ G. S. Dikshit : **Local SelfGovernment in Medieval Karnataka**, pp. 44–46.

೨೭ G. M. Moraes : **Kadamba Kula,** Appendix No. 22 P. 473.

೧೮ Rangaswami C. V. : **Government and Administration Under the Chalukyas of Badami** 1971 Unpublished thesis K. U. Dharwar P. 301.

೧೯ E. I. XV. P. 131.

೨೦ ಧಾ. ಶಾ. ಸೂಚಿ, ಪು. ೨೦. ೪೮/೧೧೪.

೨೧ M. A. R. 1920, P. 35, E. C. XII, T.P. 48.

೨೨ **Karnataka Through the Ages.**

೨೩ E. I. XIV P. 190 ff.

೨೪ A. S. Altekar : **Rashtrakutas and their Times.**

ಸ್ವತಂತ್ರ ನಿಯಂತ್ರಣ ಆಯೋಗಗಳು
(Independent Regulatory Commissions)

● ಮೂಲಿ ಮುದ್ದಣ್ಣ

ಸಾರ್ವಜನಿಕ ಆಡಳಿತ ಕಾರ್ಯವು ಪ್ರಮುಖವಾಗಿ ಕಾರ್ಯಕಾರಿ ಘಟಕಗಳಿಂದ ನಿರ್ವಹಿಸಲ್ಪಡುತ್ತದೆ. ಕಾರ್ಯಕಾರಿ ಘಟಕಗಳು ಮುಖ್ಯವಾಗಿ ಮೂರು ರೀತಿಯಲ್ಲಿ ವ್ಯವಸ್ಥಿತವಾಗಿವೆ. ಅವುಗಳೆಂದರೆ ಸಾರ್ವಜನಿಕ ಇಲಾಖೆಗಳು, ಸಾರ್ವಜನಿಕ ಕಾರ್ಪೊರೇಷನ್ನುಗಳು ಮತ್ತು ಸ್ವತಂತ್ರ ನಿಯಂತ್ರಣ ಆಯೋಗಗಳು. ಸರ್ಕಾರದ ಹೆಚ್ಚಿನ ಕೆಲಸವು ಕಾರ್ಯಾಂಗದ ಮುಖ್ಯಾಧಿಕಾರಿಗೆ ಜವಾಬ್ದಾರವಾಗಿರುವ ಇಲಾಖೆಗಳ ಮೂಲಕವೇ ನಡೆಯುತ್ತದೆ. ಅಂವರೆ ಸರ್ಕಾರಿ ಆಡಳಿತವು ಇನ್ನಿತರ ಸಂಸ್ಥೆಗಳಾದ ಸ್ವತಂತ್ರ ನಿಯಂತ್ರಣ ಆಯೋಗಗಳು ಮತ್ತು ಸಾರ್ವಜನಿಕ ಕಾರ್ಪೊರೇಷನ್ನುಗಳ ಮೂಲಕವೂ ನಡೆಯುತ್ತದೆ. ಸಾರ್ವಜನಿಕ ಆಡಳಿತಕ್ಕೆ ಸ್ವತಂತ್ರ ನಿಯಂತ್ರಣ ಆಯೋಗಗಳು ಅಮೇರಿಕಾದ ವಿಶಿಷ್ಟ ಕೊಡುಗೆಯಾಗಿವೆ.

ಈ ಆಯೋಗಗಳನ್ನು ಸ್ವತಂತ್ರ ಆಯೋಗಗಳೆಂದು ಕರೆಯಲಾಗಿದೆ. ಕಾರಣವೆಂದರೆ ಅವುಗಳು ಇಲಾಖೆಯ ನಿಯಂತ್ರಣಕ್ಕೆ ಒಳಪಟ್ಟಿಲ್ಲ. ಇಲಾಖೆಯ ಶ್ರೇಣಿ ವ್ಯವಸ್ಥೆಯ ವ್ಯಾಪ್ತಿಯೊಳಗೆ ಬರುವುದಿಲ್ಲ. ಇವು ಬಹುಮಟ್ಟಿಗೆ ಕಾರ್ಯಾಂಗದ ಮುಖ್ಯಾಧಿಕಾರಿಯಿಂದಲೂ ಸ್ವತಂತ್ರವಾಗಿವೆ. ಆಯೋಗದ

ತೀರ್ಮಾನವು ಕಾರ್ಯಾಂಗದ ಮುಖ್ಯಾಧಿಕಾರಿಯ ಪ್ರಭಾವಕ್ಕೆ ಸಂಬಂಧಿಸಿದಂತೆ, ಅಂತಿಮ ತೀರ್ಮಾನ. ಆಯೋಗದ ತೀರ್ಮಾನಗಳನ್ನು ಶ್ವೇತಭವನಕ್ಕೆ ಸಲ್ಲಿಸುವುದಿಲ್ಲ; ಶ್ವೇತಭವನದಲ್ಲಿ ಅವುಗಳ ಚರ್ಚೆಯಿಲ್ಲ, ರಾಷ್ಟ್ರಾಧ್ಯಕ್ಷ ಅವುಗಳನ್ನು ಪುನರ್ವಿಮರ್ಶಿಸುವಂತಿಲ್ಲ, ವೀಟೋ ಅಧಿಕಾರ ಚಲಾಯಿಸುವಂತಿಲ್ಲ. ಏನಿದ್ದರೂ ನೇರವಾಗಿ ಕಾಂಗ್ರೆಸ್ಸಿಗೆ ಜವಾಬ್ದಾರವಾಗಿವೆ. ನ್ಯಾಯಾಂಗ ಇವುಗಳ ವಿರುದ್ಧ ಬರುವ ದೂರಿನ ವಿಚಾರಣೆ ಮಾಡಬಹುದು. ಇವುಗಳನ್ನು ನಿಯಂತ್ರಣ ಆಯೋಗಗಳೆಂದು ಕರೆಯಲಾಗಿದೆ. ಕಾರಣವೆಂದರೆ ಪ್ರಜೆಗಳ ಕೆಲವೊಂದು ಚಟುವಟಿಕೆಗಳನ್ನು ನಿಯಂತ್ರಿಸುತ್ತವೆ. ಇವು ರಾಜ್ಯವು ನಿರ್ವಹಿಸುವಂತಹ ಅಥವಾ ರಾಜ್ಯವು ನಿರ್ವಹಿಸುತ್ತಿರುವ ಕರ್ತವ್ಯಗಳನ್ನು ಕೈಗೊಳ್ಳುವುದಿಲ್ಲ, ಬದಲಾಗಿ ಸಾರ್ವಜನಿಕ ಹಿತದೃಷ್ಟಿಯಿಂದ ಹಲವು ಚಟುವಟಿಕೆಗಳನ್ನು ಮಾತ್ರ ನಿಯಂತ್ರಿಸುತ್ತವೆ. ಈ ಸ್ವತಂತ್ರ ನಿಯಂತ್ರಣ ಸಂಸ್ಥೆಗಳು ಆಯೋಗದ ರೂಪದಲ್ಲಿರುತ್ತವೆ, ಅಂದರೆ ಸಾಮಾನ್ಯವಾಗಿ ಮೂವರು ಅಥವಾ ಐದುಮಂದಿ ಅಥವಾ ಇನ್ನೂ ಹೆಚ್ಚಿನ ಸದಸ್ಯರನ್ನು ಹೊಂದಿರುತ್ತವೆ. ಭಾರತದ ಹಲವು ಸ್ವತಂತ್ರ ನಿಯಂತ್ರಣ ಆಯೋಗಗಳೆಂದರೆ ಲೋಕಸೇವಾ ಆಯೋಗ, ಚುನಾವಣಾ ಆಯೋಗ, ಪ್ರವಾಹ ನಿಯಂತ್ರಣ ಮಂಡಲಿ, ಕೇಂದ್ರ ಜಲ ವಿದ್ಯುತ್ ಆಯೋಗ. ಭಾರತದ ಸ್ವತಂತ್ರ ನಿಯಂತ್ರಣ ಆಯೋಗಗಳು ಅಮೇರಿಕಾದ ಆಯೋಗಗಳಷ್ಟು ಸ್ವತಂತ್ರವಲ್ಲ. ಇಲ್ಲಿಯ ಸಾಂಪತ್ತಿಕ ಸರ್ಕಾರವು ಸಹ ಅದಕ್ಕೆ ಒಂದು ಕಾರಣ.

ಸ್ವತಂತ್ರ ನಿಯಂತ್ರಣ ಆಯೋಗಗಳ ಸ್ಥಾಪನೆಗೆ ಕಾರಣಗಳು

ಹಲವಾರು ಪರಿಸ್ಥಿತಿಗಳು, ಇಲಾಖಾ ಪದ್ಧತಿಯಿಂದ ಭಿನ್ನವಾದಂತಹ ಸಂಸ್ಥೆಗಳನ್ನು ಸ್ಥಾಪಿಸಲು ಒತ್ತಡವನ್ನು ಸರ್ಕಾರದ ಮೇಲೆ ತರುತ್ತವೆ. ಅಂತಹ ಕೆಲವು ಸಂದರ್ಭಗಳಲ್ಲಿ ಸರ್ಕಾರವು ಸ್ವತಂತ್ರ ನಿಯಂತ್ರಣ ಆಯೋಗಗಳನ್ನು ಸ್ಥಾಪಿಸಿದೆ. ಅಂಥ ವಿಶೇಷ ಅಂಶಗಳನ್ನು ಗಮನಿಸೋಣ.

೧) ನೂತನ ಕಾರ್ಯವೊಂದು ಅರೆ-ಶಾಸಕಾಂಗ ಅಥವಾ ಅರೆ-ನ್ಯಾಯಾಂಗ ಸ್ವರೂಪದ್ದಾಗಿದ್ದರೆ ಆ ಕಾರ್ಯವನ್ನು ಕಾರ್ಯಾಂಗದ ವ್ಯಾಪ್ತಿಯಿಂದ ಹೊರಗಿಟ್ಟು ಸ್ವತಂತ್ರ ನಿಯಂತ್ರಣ ಆಯೋಗವೊಂದಕ್ಕೆ ವಹಿಸಬೇಕಾಗುತ್ತದೆ. ಈಗಾಗಲೇ ಶಾಸಕಾಂಗ ಮತ್ತು ನ್ಯಾಯಾಂಗಗಳ ಕೆಲಸದ ಹೊರೆ ಅಸದಳವಾಗಿರುವುದರಿಂದ ಅವು ಹೊಸ ಜವಾಬ್ದಾರಿಗಳನ್ನು ಸಂಪೂರ್ಣವಾಗಿ ಹೊರುವ ಸ್ಥಿತಿಯಲ್ಲಿರುವುದಿಲ್ಲ. ಆದರೆ ಆಡಳಿತ ಇಲಾಖೆಗೆ ಆ ಕಾರ್ಯವನ್ನು ವಹಿಸುವುದು ಸೂಕ್ತವಾಗಿರುವುದಿಲ್ಲ. ಭಾರತದ ರೇಲ್ವೆ ಮಂಡಳಿಯು ರೇಲ್ವೆ ಇಲಾಖೆಯ ಆಡಳಿತವನ್ನು ನೋಡಿಕೊಳ್ಳುವುದಲ್ಲದೆ ಇಲಾಖೆಯ ನಿಯಮಗಳನ್ನೂ ರೂಪಿಸುತ್ತದೆ. ಜೊತೆಗೆ ರೇಲ್ವೆ

ಮಂಡಳಿ ಮತ್ತು ಖಾಸಗಿ ಪ್ರಜೆಗಳ ರೇಲ್ವೆ ಉದ್ಯೋಗಿಗಳ ಮತ್ತು ಖಾಸಗಿ ಪ್ರಜೆಗಳ ನಡುವೆ ಉದ್ಭವಿಸುವ ವಿವಾದಗಳನ್ನು ಬಗೆಹರಿಸುತ್ತದೆ. ಅಂದರೆ ಆಡಳಿತ ಕಾರ್ಯದ ಜೊತೆಗೆ ಅರೆ-ಶಾಸಕಾಂಗ ಮತ್ತು ಅರೆ-ನ್ಯಾಯಾಂಗ ಕಾರ್ಯಗಳನ್ನೂ ರೇಲ್ವೆ ಮಂಡಳಿಯು ನಿರ್ವಹಿಸುತ್ತದೆ.

೨) ಯಾವುದಾದರೂ ಒಂದು ಜವಾಬ್ದಾರಿ ಅತಿ ಪ್ರಾಮುಖ್ಯದ್ದಾಗಿದ್ದರೆ, ಅದು ಎಲ್ಲರ ವಿಶ್ವಾಸವನ್ನು ಗಳಿಸಬೇಕಾದರೆ ರಾಜಕೀಯದ ಚದುರಂಗದಿಂದ ಅದನ್ನು ದೂರವಿಡಬೇಕು. ಅಂದರೆ ಆ ಒಂದು ಕಾರ್ಯನಿರ್ವಹಣೆಯು ಇಲಾಖೆಯ ಶ್ರೇಣಿಪದ್ಧತಿಯಿಂದ ಹೊರಗುಳಿಯಬೇಕು. ಕಾರ್ಯಾಂಗದ ಶ್ರೇಷ್ಠಾಧಿಕಾರಿಯ ಮಧ್ಯ ಪ್ರವೇಶ ಅಥವಾ ನಿಯಂತ್ರಣಕ್ಕೆ ಅವಕಾಶವಿರಬಾರದು. ಅಂತಹ ಸಂದರ್ಭಗಳಲ್ಲಿ ಸ್ವತಂತ್ರ ನಿಯಂತ್ರಣ ಆಯೋಗಗಳನ್ನು ಸ್ಥಾಪಿಸಲಾಗಿದೆ. ಉದಾಹರಣೆಗೆ ಸೇವಾವರ್ಗದ ಆಯ್ಕೆ ಮತ್ತು ನಿಷ್ಪಕ್ಷಪಾತ ಚುನಾವಣೆಗಳು ಎರಡು ಪ್ರಮುಖ ಸ್ವರೂಪದ, ಸರ್ವರ ವಿಶ್ವಾಸಗಳಿಸಬೇಕಾದ ಕಾರ್ಯಗಳು. ಅದಕ್ಕಾಗಿ ಸಂವಿಧಾನದ ಮೂಲಕ ಲೋಕಸೇವಾ ಆಯೋಗ ಮತ್ತು ಚುನಾವಣಾ ಆಯೋಗಗಳ ಸ್ಥಾಪನೆಯಾಗಿದೆ.

೩) ಸಾರ್ವಜನಿಕ ಆಡಳಿತದ ಹಲವು ಕರ್ತವ್ಯಗಳು ತಾಂತ್ರಿಕ ಸ್ವರೂಪದವಾಗಿದ್ದು ತಜ್ಞರ ಸೇವೆಯನ್ನು, ಆಡಳಿತ ನಿರ್ವಹಣೆಗೆ ಮಾತ್ರವಲ್ಲದೆ ನೀತಿ ನಿರೂಪಣೆಗೂ ಅವಶ್ಯವಿರುತ್ತವೆ. ಅಂತಹ ಕಾರ್ಯಗಳನ್ನು, ಕಾರ್ಯಾಂಗದ ಒತ್ತಡ ಮತ್ತು ಮಧ್ಯ ಪ್ರವೇಶದ ಆತಂಕವಿಲ್ಲದ ಸ್ವತಂತ್ರ ನಿಯಂತ್ರಣ ಆಯೋಗಗಗಳಿಗೆ ವಹಿಸಲಾಗುತ್ತದೆ. ಉದಾಹರಣೆಗೆ ಭಾರತದ ಕೇಂದ್ರ ಜಲ ಮತ್ತು ವಿದ್ಯುತ್ ಆಯೋಗ, ಕೇಂದ್ರ ನೀರಾವರಿ ಆಯೋಗ ಮತ್ತು ಪ್ರವಾಹ ನಿಯಂತ್ರಣ ಮಂಡಳಿಗಳು ಆ ಸ್ವರೂಪದವು. ಪ್ರವಾಹ ನಿಯಂತ್ರಣವು ಭಾರತದಲ್ಲಿ ಒಂದು ರಾಷ್ಟ್ರೀಯ ಸಮಸ್ಯೆ. ಕಾರಣವೆಂದರೆ ಹೆಚ್ಚಿನ ನದಿಗಳು ಹಲವಾರು ರಾಜ್ಯಗಳ ಮೂಲಕ ಹರಿಯುತ್ತವೆ. ಆದ್ದರಿಂದ ಪ್ರವಾಹದ ಸ್ವರೂಪ ಮತ್ತು ಸಮಸ್ಯೆಗಳಿಗನುಗುಣವಾಗಿ ನೀತಿ, ಧೋರಣೆ ಮತ್ತು ಕಾರ್ಯಕ್ರಮಗಳನ್ನು ರೂಪಿಸಲು ಪ್ರವಾಹ ನಿಯಂತ್ರಣ ಮಂಡಳಿಯನ್ನು ಒಂದು ಸ್ವತಂತ್ರ ನಿಯಂತ್ರಣ ಆಯೋಗವಾಗಿ ಸ್ಥಾಪಿಸಲಾಗಿದೆ.

೪) ಸರ್ಕಾರವು ನೂತನ ಕಾರ್ಯ ಅಥವಾ ಜವಾಬ್ದಾರಿಯನ್ನು ನಿರ್ವಹಿಸಬೇಕಾಗಿ ಬಂದಾಗ, ಆ ಒಂದು ಜವಾಬ್ದಾರಿಯನ್ನು ಯಾವೊಂದು ಇಲಾಖೆಗೂ ವಹಿಸಲಾಗದೇ ಹೋದಾಗ, ಸ್ವತಂತ್ರ ಆಯೋಗವೊಂದನ್ನು ರಚಿಸಿ ಅದಕ್ಕೆ ಆ ಜವಾಬ್ದಾರಿಯನ್ನು ವಹಿಸಲಾಗುತ್ತದೆ. ಭಾರತ ಸರ್ಕಾರವು ರಾಷ್ಟ್ರೀಯ

ಯೋಜನೆಯ ದಿಕ್ಕಿನಲ್ಲಿ ಚಿಂತಾಮಗ್ನವಾದಾಗ ಈ ಒಂದು ಸಮಸ್ಯೆಯು ಕಾಣಿಸಿಕೊಂಡಿತು. ಕಾರಣವೆಂದರೆ ಯೋಜನೆಯು ಎಲ್ಲಾ ಇಲಾಖೆಗಳನ್ನು ಒಳಗೊಳ್ಳುತ್ತದೆ. ಆದ್ದರಿಂದ ಯಾವೊಂದು ಇಲಾಖೆಗೂ ಒಳಪಡದ, ನೇರವಾಗಿ ಸಚಿವ ಸಂಪುಟಕ್ಕೆ ಜವಾಬ್ದಾರವಾದ ಯೋಜನಾ ಆಯೋಗದ ಸ್ಥಾಪನೆಯಾಯಿತು.

ಆಯೋಗದ ಸ್ವಾತಂತ್ರ್ಯ ರಕ್ಷಣಾ ವಿಧಾನಗಳು

೧. **ಆಯೋಗದ ಉಗಮದ ಸ್ವರೂಪ:** ಸ್ವತಂತ್ರ ನಿಯಂತ್ರಣ ಆಯೋಗದ ಸ್ಥಾಪನೆಯ ಮೂಲವು ಬಹುಮಟ್ಟಿಗೆ ಆಯೋಗದ ಸ್ವಾತಂತ್ರ್ಯವನ್ನು ನಿರ್ಧರಿಸುತ್ತದೆ. ಭಾರತದ ಸಂವಿಧಾನವು ಹಣಕಾಸಿನ ಆಯೋಗ, ಲೋಕಸೇವಾ ಆಯೋಗ, ಚುನಾವಣಾ ಆಯೋಗ, ಹಿಂದುಳಿದ ವರ್ಗಗಳ ಆಯೋಗ ಮತ್ತು ಅಧಿಕೃತ ಭಾಷಾ ಆಯೋಗಗಳಿಗೆ ಅವಕಾಶ ಮಾಡಿಕೊಟ್ಟಿದೆ. ಇವುಗಳ ಸದಸ್ಯರನ್ನು ರಾಷ್ಟ್ರಾಧ್ಯಕ್ಷರು ನೇಮಿಸುತ್ತಾರೆ; ಸಂವಿಧಾನಾತ್ಮಕ ಆಯೋಗಗಳು ಯಾವೊಬ್ಬ ಮಂತ್ರಿ ಅಥವಾ ಇಲಾಖೆಗೆ ಒಳಪಟ್ಟಿಲ್ಲ. ಅತಿ ಹೆಚ್ಚಿನ ಆಡಳಿತ ಸ್ವಾತಂತ್ರ್ಯವನ್ನು ಪಡೆದಿವೆ.

ಕೆಲವು ಆಯೋಗಗಳನ್ನು ಸಂಸತ್ತು ಸ್ಥಾಪಿಸಿದೆ. ಉದಾಹರಣೆಗೆ ರೇಲ್ವೆ ಮಂಡಳಿ, ವಿಶ್ವವಿದ್ಯಾಲಯ ಧನಸಹಾಯ ಆಯೋಗ, ಅಣುಶಕ್ತಿ ಆಯೋಗ, ಪ್ರವಾಹ ನಿಯಂತ್ರಣ ಮಂಡಳಿ ಇತ್ಯಾದಿ. ಶಾಸನಾತ್ಮಕ ಆಯೋಗಗಳು ಸಂಬಂಧಪಟ್ಟ ಮಂತ್ರಿಯ ಸಾಮಾನ್ಯ ಆಡಳಿತ ನಿಯಂತ್ರಣಕ್ಕೆ ಒಳಗಾಗಿರುತ್ತವೆ. ಅಂದರೆ ಇಲಾಖಾ ವಿಧಾನಗಳ ಇಕ್ಕಟ್ಟಿನೊಳಗೆ ಸಿಕ್ಕಿಕೊಂಡಿರುವುದಿಲ್ಲ. ಇವುಗಳ ಅಧಿಕಾರ, ಕಾರ್ಯನಿರ್ವಹಣೆ ಇತ್ಯಾದಿ ಅಂಶಗಳನ್ನು ಸಂಸತ್ತು ನಿರ್ಧರಿಸಿ ನಿಯಂತ್ರಿಸುತ್ತದೆ.

ಮತ್ತೆ ಕೆಲವು ಆಯೋಗಗಳು ಕಾರ್ಯಾಂಗದ ಒಂದು ಆಜ್ಞೆಯ ಅನುಸಾರ ಸ್ಥಾಪಿಸಲ್ಪಟ್ಟಿರುತ್ತವೆ. ಸಾಮಾನ್ಯವಾಗಿ ಅವುಗಳ ಅಸ್ತಿತ್ವ ಮತ್ತು ಕಾರ್ಯವ್ಯಾಪ್ತಿ ಸಂಬಂಧಪಟ್ಟ ಮಂತ್ರಿಯ ಇಚ್ಛೆಯನ್ನು ಅವಲಂಬಿಸಿರುತ್ತವೆ. ಸಾಮಾನ್ಯವಾಗಿ ಅವುಗಳ ಅಧಿಕಾರಾವಧಿಯು ನಿರ್ದಿಷ್ಟಗೊಳಿಸಲ್ಪಟ್ಟಿರುತ್ತದೆ. ಮತ್ತೊಂದು ಕಾಲಾವಧಿಯವರೆಗೆ ನವೀಕರಿಸಬಹುದು. ಅಂತಹ ಆಯೋಗಗಳೆಂದರೆ ಕೇಂದ್ರ ಸಮಾಜಕಲ್ಯಾಣ ಮಂಡಳಿ, ಕೇಂದ್ರ ಜಲ ವಿದ್ಯುತ್ ಆಯೋಗ, ಅಖಿಲಭಾರತ ಖಾದಿ ಮಂಡಳಿ, ಕೈಮಗ್ಗದ ಮಂಡಲಿ ಇತ್ಯಾದಿ. ಇವುಗಳನ್ನು ಇಲಾಖೆಯೊಂದಕ್ಕೆ ಸಂಬದ್ಧಗೊಳಿಸಲಾಗಿರುತ್ತದೆ. ಆದ್ದರಿಂದ ಅವುಗಳನ್ನು ಸಂಬದ್ಧ ಮಂಡಳಿಗಳು (Attached Boards) ಎಂದು ಕರೆಯು

ಲಾಗುತ್ತದೆ. ಮೂರನೇ ವರ್ಗದ ಮಂಡಳಿಗಳನ್ನು ಸ್ವತಂತ್ರ ನಿಯಂತ್ರಣ ಆಯೋಗಗಳೆಂದು ಪಿವರಿಸುವದು ಕಷ್ಟವೇ ಸರಿ.

೨. **ಸಂಘಟನೆ** : ಈ ಆಯೋಗಗಳು ಸಾಮಾನ್ಯವಾಗಿ ಮಂಡಳಿಯ ಸ್ವರೂಪದ್ದಾಗಿರುತ್ತವೆ. ಅಂದರೆ ಸಾಮಾನ್ಯವಾಗಿ ಮೂವರು ಅಥವಾ ಹೆಚ್ಚಿನ ಸದಸ್ಯರನ್ನು ಒಳಗೊಂಡಿರುತ್ತವೆ. ಉದ್ದೇಶವೆಂದರೆ, ಒಬ್ಬ ಸದಸ್ಯನಿದ್ದಲ್ಲಿ ಕಾರ್ಯಾಂಗದ ಪ್ರಭಾವಕ್ಕೊಳಗಾಗಬಹುದು. ಹೆಚ್ಚಿನ ಸದಸ್ಯರಿದ್ದರೆ ಕಾರ್ಯಾಂಗದ ಪ್ರಭಾವಕ್ಕೊಳಗಾಗುವುದಿಲ್ಲ. ಆದರೆ ಭಾರತದ ಚುನಾವಣಾ ಆಯೋಗ ಏಕ ಸದಸ್ಯ ಆಯೋಗವಾಗಿದೆ. ಅದನ್ನು ಬಹು ಸದಸ್ಯ ಆಯೋಗವಾಗಿ ಮಾಡಬೇಕಾದ್ದು ಅತ್ಯಗತ್ಯ.

೩. **ಸರದಿ ತತ್ವದ ಅಧಿಕಾರಾವಧಿ** (Staggered Term Arrangement): ಇದರ ಉದ್ದೇಶವೆಂದರೆ ಯಾವೊಬ್ಬ ಕಾರ್ಯಾಂಗದ ಶ್ರೇಷ್ಠಾಧಿಕಾರಿಗಾಗಲೀ ಆಯೋಗದ ಎಲ್ಲಾ ಸದಸ್ಯರನ್ನು ನೇಮಿಸುವಂತಹ ಅವಕಾಶವನ್ನು ಒದಗಿಸದಿರುವುದಾಗಿದೆ. ಯಾರಾದರೂ ಒಬ್ಬ ಕಾರ್ಯಾಂಗದ ಮುಖ್ಯಾಧಿಕಾರಿಗೆ ಈ ಅವಕಾಶ ದೊರೆತಲ್ಲಿ ಆತನು ತನ್ನ ರಾಜಕೀಯ ಮತ್ತು ಆಡಳಿತ ನೀತಿ ಬೆಂಬಲಿಸುವವರನ್ನು ಮಾತ್ರವೇ ಆಯೋಗದ ಸದಸ್ಯರನ್ನಾಗಿ ನೇಮಿಸಿ ಅದನ್ನು ಕಾರ್ಯಾಂಗದ ಬಾಹುವನ್ನಾಗಿ ಮಾಡಿಕೊಳ್ಳುತ್ತಾನೆ. ಅಂತಹ ಪರಿಸ್ಥಿತಿಯನ್ನು ತಪ್ಪಿಸುವುದಕ್ಕಾಗಿ ಸದಸ್ಯರ ಅಧಿಕಾರಾವಧಿಯು ಅತಿವ್ಯಾಪ್ತ (Overlap) ಲಕ್ಷಣವನ್ನು ಹೊಂದಿರುತ್ತದೆ. ಸದಸ್ಯರ ಅಧಿಕಾರಾವಧಿಯು ಕಾರ್ಯಾಂಗದ ಅಧಿಕಾರಾವಧಿಗಿಂತ ಒಂದೆರಡು ವರ್ಷಗಳಷ್ಟು ಜಾಸ್ತಿ ಇರುತ್ತದೆ. ಎಲ್ಲಾ ಸದಸ್ಯರೂ ಒಟ್ಟಿಗೆ ನಿವೃತ್ತರಾಗುವುದಿಲ್ಲ.

೪. **ಸದಸ್ಯರನ್ನು ತೆಗೆಯುವ ವಿಧಾನ** : ಯಾವ ಒಂದು ಆಯೋಗವೇ ಆಗಲಿ ಸ್ವತಂತ್ರವಾಗಿ ಕಾರ್ಯನಿರ್ವಹಿಸಬೇಕಾಗಿದ್ದಲ್ಲಿ ಈ ಆಯೋಗದ ಸದಸ್ಯರ ಸಂಬಳ, ಅಧಿಕಾರಾವಧಿ ಇತ್ಯಾದಿ ಸೇವಾನಿಯಮಗಳು ಕಾರ್ಯಾಂಗದ ಇಷ್ಟಾನಿಷ್ಟಗಳನ್ನವಲಂಬಿಸಿರಬಾರದು. ಅದಕ್ಕಾಗಿ ಅಧಿಕಾರಾವಧಿಗೆ ಮೊದಲೇ ಸದಸ್ಯರನ್ನು ತೆಗೆಯುವ ವಿಧಾನವನ್ನು ಕ್ಲಿಷ್ಟಗೊಳಿಸಲಾಗಿದೆ. ಶಾಸಕಾಂಗವು ಮಹಾಭಿಯೋಗದ ಮೂಲಕ ಮಾತ್ರವೇ ಸದಸ್ಯರನ್ನು ಆಯೋಗದಿಂದ ಬೇರ್ಪಡಿಸಬಹುದು. ಅಥವಾ ಸದಸ್ಯರು ತಾವಾಗಿಯೇ ರಾಜೀನಾಮೆ ನೀಡಬಹುದು. ಈ ಒಂದು ಸಂವಿಧಾನಾತ್ಮಕ ರಕ್ಷಣೆಯು ಆಯೋಗಗಳ ಸ್ವಾತಂತ್ರ್ಯವನ್ನು ರಕ್ಷಿಸುವುದರಲ್ಲಿ ಪರಿಣಾಮಕಾರಿಯಾಗಿದೆ.

೫. ಕಾರ್ಯಾಂಗದ ಮುಖ್ಯಾಧಿಕಾರಿ ಮತ್ತು ಆಯೋಗದ ನಡುವೆ ನೇರ ಸಂಬಂಧವಿಲ್ಲದಿರುವುದು : ಸಂವಿಧಾನಾತ್ಮಕ ಆಯೋಗಗಳ ಕಾರ್ಯದ ಬಗ್ಗೆಯೂ ಸಹ ಕಾರ್ಯಾಂಗದ ಮುಖ್ಯಾಧಿಕಾರಿಯು ಆಸಕ್ತನಾಗಿರುತ್ತಾನೆ. ಆದರೂ ಸಹ ಆಯೋಗ ಮತ್ತು ಕಾರ್ಯಾಂಗದ ಮುಖ್ಯಾಧಿಕಾರಿಯ ನಡುವೆ ಪ್ರತ್ಯಕ್ಷ ಸಂಬಂಧಕ್ಕೆ ಅವಕಾಶ ಮಾಡಿಕೊಟ್ಟಿಲ್ಲ. ಕಾರಣವೆಂದರೆ ಆತನು ಆಯೋಗದ ಆಡಳಿತ ನೀತಿ, ಕಾರ್ಯವಿಧಾನಗಳ ಬಗ್ಗೆ ಅಹಿತ ಪ್ರಭಾವ ಬೀರ ಬಹುದೆಂದು. ಆದರೆ ಅವುಗಳ ಸದಸ್ಯರನ್ನು ನೇಮಿಸುವವನು ಕಾರ್ಯಾಂಗದ ಮುಖ್ಯಾಧಿಕಾರಿ ಎಂಬುದನ್ನು ತಿಳಿದಿರಬೇಕು. ನೂತನ ರಾಷ್ಟ್ರಾಧ್ಯಕ್ಷ ಅಧಿಕಾ ರಕ್ಕೆ ಬಂದಾಗ ಮತ್ತೊಂದು ಕಾಲಾವಧಿಯ ನವೀಕೃತಕ್ಕಾಗಿ ಆಯೋಗದ ಸದಸ್ಯನು ನೂತನ ಕಾರ್ಯಾಂಗಾಧಿಕಾರಿಯನ್ನು ಹಿಂಬಾಲಿಸಬಹುದು.

೬. ಆರ್ಥಿಕ ಸ್ವಾತಂತ್ರ್ಯ : ಹಣವು ಆಡಳಿತದ ಕಾಲೆಣ್ಣೆಯಾದ್ದರಿಂದ ಆರ್ಥಿಕ ಸ್ವಾತಂತ್ರ್ಯವಿಲ್ಲದೆ ಯಾವೊಂದು ಆಯೋಗವೂ ಸಹ ಸ್ವತಂತ್ರ ಕಾರ್ಯಾಚರಣೆಯಲ್ಲಿ ತೊಡಗಲು ಸಾಧ್ಯವಿಲ್ಲ. ಆದ್ದರಿಂದ ಆಯೋಗಗಳ ವೆಚ್ಚವನ್ನು ಸಂಚಿತ ನಿಧಿಯಿಂದ ಭರಿಸಲಾಗುತ್ತದೆ. ಆಗ ಶಾಸಕಾಂಗವು ಸಹ ಹಣವನ್ನು ನಿರಾಕರಿಸಲಾಗದು. ಆದರೆ ಆಯೋಗವು ಹೆಚ್ಚಿನ ಹಣ ಕೇಳಿ ದಾಗ, ತನ್ನ ಕ್ಷೇತ್ರವನ್ನು ವಿಸ್ತಾರಪಡಿಸಿಕೊಳ್ಳಬೇಕೆಂದು ಇಚ್ಛಿಸಿದಾಗ ಶಾಸ ಕಾಂಗದ ನಿಯಂತ್ರಣ ವ್ಯಾಪ್ತಿಯೊಳಗೆ ಬರುತ್ತದೆ.

ಸ್ವತಂತ್ರ ನಿಯಂತ್ರಣ ಆಯೋಗಗಳ ಹಲವು **ಅನುಕೂಲತೆಗಳು** ಕೆಳಗಿನ ರೀತಿ ಇವೆ :

೧) ಅರೆ-ಶಾಸಕಾಂಗ ಮತ್ತು ಅರೆ-ನ್ಯಾಯಾಂಗ ಚಟುವಟಿಕೆಗಳನ್ನು ಆಡಳಿತಾಂಗಕ್ಕೆ ಒಪ್ಪಿಸಬೇಕಾದ ಪರಿಸ್ಥಿತಿಯನ್ನು ತಪ್ಪಿಸಿವೆ. ಅದರಿಂದಾಗಿ ಈ ಸೇವೆಗಳು ಅಧಿಕಾರಶಾಹಿಯ ವಿಳಂಬ ನೀತಿಯಿಂದ ಮುಕ್ತವಾಗಿವೆ. ಈ ಕಾರ್ಯಗಳ ದಕ್ಷ ನಿರ್ವಹಣೆಗೆ ಅವಕಾಶವಾಗಿದೆ.

೨) ಸ್ವತಂತ್ರ ನಿಯಂತ್ರಣಾ ಆಯೋಗಗಳಿಗೆ ಅರೆ-ಶಾಸಕಾಂಗ ಮತ್ತು ಅರೆ-ನ್ಯಾಯಾಂಗ ಕಾರ್ಯಗಳನ್ನು ವಹಿಸುವುದರಿಂದ ಶಾಸಕಾಂಗ ಮತ್ತು ನ್ಯಾಯಾಂಗಗಳ ಕಾರ್ಯಹೊರೆಯನ್ನು ಹಗುರಗೊಳಿಸಿವೆ. ಕನಿಷ್ಟಪಕ್ಷಕ್ಕೆ ಹೇಳುವುದಾದರೆ ಅವುಗಳ ಕಾರ್ಯಜವಾಬ್ದಾರಿ ಹೆಚ್ಚಾಗುವುದನ್ನು ಸ್ವಲ್ಪಮಟ್ಟಿಗೆ ತಪ್ಪಿಸಿವೆ.

೩) ಇಲಾಖೆಯ ಅಧಿಕಾರ ಶ್ರೇಣಿಗೆ ಒಳಪಟ್ಟಿಲ್ಲದಿರುವುದರಿಂದ, ಅಧಿಕಾರ ಶಾಹಿಯ ಅನಗತ್ಯ ವಿಧಾನಗಳ ತೊಡಕಿನಿಂದ ಮುಕ್ತವಾಗಿರುವುದರಿಂದ ಆಯೋಗಗಳ ಆಡಳಿತವು ದಕ್ಷತೆಯಿಂದ ಕೂಡಿರುತ್ತದೆ.

೪) ಪರಿಣತರ ಸೇವೆಯನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಅದರಲ್ಲಿಯೂ ಆಡಳಿತ ನೀತಿ ನಿರೂಪಿಸುವಲ್ಲಿಯೂ ಅವರ ಸೇವೆಯನ್ನು ಬಳಸಿ ಕೊಳ್ಳಲು, ಅವಕಾಶವೊದಗಿಸುವುದರಿಂದ ಸಹಜವಾಗಿಯೇ ಅತ್ಯಲ್ಪ ಖರ್ಚಿನಲ್ಲಿ ಉದ್ದೇಶದ ಸಾಧನೆಯಾಗುತ್ತದೆ. ಇವು ಮಿತವ್ಯಯಕ್ಕೆ ಕಾರಣವಾಗಿವೆ.

೫) ರಾಷ್ಟ್ರೀಯ ಪ್ರಾಮುಖ್ಯತೆ ಪಡೆದಿರುವ ಕಾರ್ಯಗಳು ಎಲ್ಲರ ವಿಶ್ವಾಸವನ್ನು ಗಳಿಸಬೇಕು. ಪ್ರಜಾಪ್ರಭುತ್ವದ ತಿರುಳಾದ ಚುನಾವಣೆಗಳು ನಿಷ್ಪಾಕ್ಷಿಕವಾಗಿ ನಡೆಸಲ್ಪಡಬೇಕು. ಸೇವಾವರ್ಗದ ದಕ್ಷತೆಯನ್ನು ನಿರ್ಧರಿಸುವ ಒಂದು ಪ್ರಮುಖ ಅಂಶವಾದ ಪ್ರತಿಭಾ ಸೂತ್ರದನ್ವಯ, ನೇಮಕವು ಕಾರ್ಯಾಂಗದ ವ್ಯಾಪ್ತಿಗೊಳಪಡದ, ರಾಜಕೀಯ ಜಂಜಾಟದಿಂದ ವಿಮುಕ್ತಿ ಪಡೆದಿರುವ ಸ್ವತಂತ್ರ ಸಂಸ್ಥೆಯಿಂದ ಮಾತ್ರವೇ ಸಾಧ್ಯ. ಈ ದಿಸೆಯಲ್ಲಿ ಚುನಾವಣಾ ಆಯೋಗ ಮತ್ತು ಲೋಕಸೇವಾ ಆಯೋಗಗಳ ಸೇವೆ ಅತಿ ಮಹತ್ವದ್ದು.

೬) ಆಯೋಗಗಳು ಹಲವು ಸದಸ್ಯರಿಂದ ಕೂಡಿರುತ್ತವೆ. ಆದರಿಂದಾಗಿ ಕಾರ್ಯಾಂಗದ ಶ್ರೇಷ್ಠಾಧಿಕಾರಿಯಾಗಲಿ, ಇತರ ರಾಜಕೀಯ ವ್ಯಕ್ತಿಗಳಾಗಲಿ ಎಲ್ಲರ ಮೇಲೆಯೂ ಪ್ರಭಾವ ಬೀರುವುದು, ಒತ್ತಡ ತರುವುದು ಸಾಧ್ಯವಾಗು ವುದಿಲ್ಲ. ನ್ಯಾಯ, ದಕ್ಷತೆ ಮತ್ತು ಮಿತವ್ಯಯಕ್ಕನುಗುಣವಾಗಿ ನಿರ್ದಿಷ್ಟ ಉದ್ದೇಶದ ಸಾಧನೆಯಾಗುತ್ತದೆ.

೭) ವಿವಿಧ ದೃಷ್ಟಿಕೋನಗಳನ್ನು, ಭಿನ್ನಹಿತಾಸಕ್ತಿಗಳನ್ನು ರಾಷ್ಟ್ರೀಯ ಸಮಸ್ಯೆಯೊಂದಕ್ಕೆ ಪರಿಹಾರ ಕಾಣುವಲ್ಲಿ ಒಟ್ಟೊಟ್ಟಿಗೆ ತರುವ ಸಾಧನವಾಗಿವೆ. ಯೋಜನಾ ಆಯೋಗವು ಪಂಚವಾರ್ಷಿಕ ಯೋಜನೆಗೆ ಅಂತಿಮ ರೂಪಕೊಡುವ ಮೊದಲು ಆಸಕ್ತ ವ್ಯಕ್ತಿಗಳೊಡನೆ ವಿವಿಧ ಹಿತಾಸಕ್ತಿಗಳೊಡನೆ ವಿಚಾರ ವಿನಿಮಯ ನಡೆಸುತ್ತದೆ. ಅದೇ ರೀತಿ ಹಣಕಾಸಿನ ಆಯೋಗವು ಕೇವಲ ರಾಜ್ಯ ಮತ್ತು ಕೇಂದ್ರ ಸರಕಾರಗಳ ಅಭಿಪ್ರಾಯಗಳನ್ನು ಕೇಳಿ ತೃಪ್ತಿಪಟ್ಟು ಕೊಳ್ಳುವ ಬದಲು ಆಸಕ್ತ ವ್ಯಕ್ತಿಗಳು ಮತ್ತು ವಿವಿಧ ಹಿತಾಸಕ್ತಿಗಳೊಡನೆ ವಿಚಾರವಿನಿಮಯ ನಡೆಸಿ ತನ್ನ ವರದಿಯನ್ನು ಸಲ್ಲಿಸುತ್ತದೆ.

ಸ್ವತಂತ್ರ ನಿಯಂತ್ರಣ ಆಯೋಗಗಳಿಂದಾಗುವ ಅನಾನುಕೂಲಗಳನ್ನೂ ನಾವು ಗಮನಿಸಬೇಕು:

೧) ಅಮೇರಿಕಾದ ಸ್ವತಂತ್ರ ನಿಯಂತ್ರಣ ಆಯೋಗಗಳು ಹೊಂದಿರುವಷ್ಟು ಸ್ವಾತಂತ್ರ್ಯವನ್ನು ಭಾರತದ ಆಯೋಗಗಳು ಹೊಂದಿಲ್ಲ. ಭಾರತದ ಕೆಲವು ಮಂಡಳಿಗಳನ್ನು ಸ್ವತಂತ್ರ ನಿಯಂತ್ರಣ ಆಯೋಗಗಳು ಎಂದು ಕರೆಯುವ ಮೊದಲು ಸ್ವಲ್ಪ ವಿಚಾರಿಸಬೇಕಾಗುತ್ತದೆ.

೨) ಈ ಆಯೋಗಗಳು ಆಡಳಿತ ಸ್ವಾತಂತ್ರ್ಯವನ್ನು ಹೊಂದಿರುವುದರಿಂದ ಆಡಳಿತ ವ್ಯವಸ್ಥೆಯನ್ನು ವಿಘಟಿಸಿವೆ. ರಾಷ್ಟ್ರೀಯ ನೀತಿಯ ನಿರೂಪಣೆಗೆ ಅಡ್ಡಿಯಾಗಿವೆ.

೩) ಇಲಾಖೆಯ ಶ್ರೇಣಿ ಸೂತ್ರಕ್ಕೆ ಹೊರತಾಗಿರುವುದರಿಂದ ಸಮನ್ವಯವು ಅಸಾಧ್ಯವಾಗಿದೆ.

೪) ಶಾಸಕಾಂಗವು ಇವುಗಳ ಕಾರ್ಯನಿರ್ವಹಣೆಯನ್ನು ಸೂಕ್ಷ್ಮವಾಗಿ ಗಮನಿಸುವುದಿಲ್ಲ, ಸೂಕ್ತ ಮೇಲ್ವಿಚಾರಣೆಯಿಲ್ಲ, ಅಗತ್ಯ ನಿಯಂತ್ರಣವಿಲ್ಲ. ಆದ್ದರಿಂದ ಹೇಳು ಕೇಳುವವರಿಲ್ಲದ, ಮನಬಂದಂತೆ ನಡೆಯುವ ಸಂಸ್ಥೆಗಳಾಗಿವೆ. ಆದ್ದರಿಂದ ಅಮೇರಿಕಾದಲ್ಲಿ ಅವುಗಳನ್ನು 'ಜವಾಬ್ದಾರಿ ರಹಿತ ಪ್ರದೇಶಗಳು', 'ಬೇಜವಾಬ್ದಾರಿಯುತ ಆಯೋಗಗಳು' ಮತ್ತು 'ತಲೆಯಿಲ್ಲದ ಆಯೋಗಗಳು' ಎಂದು ಟೀಕಿಸಲಾಗಿದೆ.

೫) ಇಂದಿಗೂ ಸಹ ಅವು ಸರಿಯಾದ ರೀತಿ ಸಂಸತ್ತಿಗೆ ಜವಾಬ್ದಾರವಾಗಿರುವಂತೆ ಕಾರ್ಯವಿಧಾನವನ್ನು ರೂಪಿಸಿಲ್ಲ. ಉದಾಹರಣೆಗೆ, ಲೋಕ ಸೇವಾ ಆಯೋಗಗಳು ವಾರ್ಷಿಕ ವರದಿಯನ್ನು ತಡವಾಗಿ ಸಲ್ಲಿಸುತ್ತವೆ. ಅನಂತರ ಎರಡು ಮೂರು ವರ್ಷಗಳ ನಂತರ ಆ ಹಳೆಯ ವಾರ್ಷಿಕ ವರದಿಗಳನ್ನು ಶಾಸಕಾಂಗದ ಚರ್ಚೆ ಶುಷ್ಕ ಚರ್ಚೆಯಾಗುತ್ತದೆ.

೬) ಹೆಚ್ಚಿನ ಆಯೋಗಗಳು ನಿರ್ವಹಿಸುವ ಕಾರ್ಯಗಳನ್ನು ಇಲಾಖಾ ಪದ್ಧತಿಯೊಳಗೆ ಅಳವಡಿಸಿಕೊಳ್ಳಲು ಸಾಧ್ಯವಿದೆ. ಇವುಗಳ ಸ್ಥಾಪನೆಯು ದುಬಾರಿ ವೆಚ್ಚ ಮತ್ತು ಸಿಬ್ಬಂದಿಯ ದ್ವಿಗುಣದ ದೋಷಗಳಿಂದ ಕೂಡಿದೆ.

೭) ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಅಂಶಗಳನ್ನು ಒಳಗೊಂಡ ಕಾರ್ಯಗಳನ್ನು ಒಂದೇ ಸಂಸ್ಥೆಗೆ ವಹಿಸುವುದು ಅಧಿಕಾರ ವಿಭಜನಾ ಸಿದ್ಧಾಂತಕ್ಕೆ ಅಪಚಾರವಾಗಿದೆ. ವ್ಯಕ್ತಿ ಸ್ವಾತಂತ್ರ್ಯಕ್ಕೆ ತೊಂದರೆ ತಪ್ಪಿದ್ದಲ್ಲ; ಸಮಾನತೆಯು ಭಂಗವಾಗುತ್ತದೆ. ಒಟ್ಟಿನಲ್ಲಿ ಪ್ರಜಾರಾಜ್ಯದಲ್ಲಿ ಸರ್ವಾಧಿಕಾರದ ಸ್ಥಾಪನೆಯಾಗಿದೆ.

ಇಷ್ಟು ಟೀಕೆಗಳಿದ್ದರು ಸಹ ಸ್ವತಂತ್ರ ನಿಯಂತ್ರಣ ಆಯೋಗಗಳು ಸಾರ್ವಜನಿಕ ಆಡಳಿತದ ಅವಿಭಕ್ತ ಅಂಗಗಳಾಗಿವೆ.

— —

ಪುಸ್ತಕ ವಿಮರ್ಶೆ :

"ಭಾರತೀಯ ದರ್ಶನ ಸಮೀಕ್ಷೆ" ಭಾಗ-೧

● ವಸಂತ ಪಾಟೀಲ

ಲೇಖಕರು : ಪಂಡಿತ ನಾಗಭೂಷಣ ಶಾಸ್ತ್ರಿಗಳು,
ಮೃತ್ಯುಂಜಯ ಪ್ರಕಾಶನ-೨;

ಪ್ರಕಾಶಕರು : ಎಸ್. ಬಸವರಾಜ, ಮೃತ್ಯುಂಜಯ ನಿಲಯ, ಧಾರವಾಡ,
ಮಹಾಂತ ಮುದ್ರಣಾಲಯ, ಧಾರವಾಡ-೬, ೧೯೭೫
ಪುಟ ೧೨೦, ಬೆಲೆ ರೂ. ೧೦-೦೦

ಇಂದಿನ ಲಘು ಸಾಹಿತ್ಯದ ರಭಸದಲ್ಲಿ ಸನಾತನ ಧರ್ಮದ ನಿಜಮೌಲ್ಯಗಳು ಎಲ್ಲಿ ಕೊಚ್ಚಿಹೋಗುವವೋ ? ! ಎಂಬ ಸಂಶಯದ ನಿಸ್ಸಹಾಯಕ ಪರಿಸ್ಥಿತಿಯಲ್ಲಿ "ಭಾರತೀಯ ದರ್ಶನ ಸಮೀಕ್ಷೆ" ಎಂಬ ಆಧ್ಯಾತ್ಮಿಕ ಆಶಾಕಿರಣವು ಸಾಹಿತ್ಯಸಭದಲ್ಲಿ ತೂರಿಬಂದಿರುವದು ಸಂತಸದ ಸಂಗತಿ. ಆಗಾಗ್ಗೆ ಇಂಥ ಆಧ್ಯಾತ್ಮಿಕ ಅಮರ ಕೊಡುಗೆಗಳು ಮೂಡಿಬಂದರೆ ಭಾರತೀಯ ವೈವಿಧ್ಯಮಯ ಧರ್ಮದ ಸಾರ ಜನತೆಗೆ ಸಿಕ್ಕೀತು.

"ಭಾರತೀಯ ದರ್ಶನ ಸಮೀಕ್ಷೆ"ಯನ್ನು ಪಂ. ನಾಗಭೂಷಣಶಾಸ್ತ್ರಿಗಳು ಆಧ್ಯಾತ್ಮಿಕ, ವೈಜ್ಞಾನಿಕ, ವ್ಯಾವಹಾರಿಕ ಒರೆಗಲ್ಲುಗಳಿಗೆ ಹಚ್ಚಿ ತಿಕ್ಕಿ ಅವುಗಳ ನಿಜಬಣ್ಣ, ನಿಜಮೌಲ್ಯಗಳನ್ನು ತಿಳಿಸಲು ಪ್ರಯತ್ನಿಸಿರುವರು. ಈಶ್ವರ, ಜೀವ,

ಜಗತ್ತು- ಈ ತ್ರಿಕೂಟಗಳ ಒಡಪು ತಿಳಿದಷ್ಟು ಕಠಿಣವೆನಿಸುತ್ತದೆ, ಕೈಗೆ ಸಿಕ್ಕಿತೆನ್ನು ವಷ್ಟರಲ್ಲಿ ಕೈಕೊಸರಿಕೊಂಡು ದೂರ, ಬಹುದೂರ ಹೋಗಿರುತ್ತದೆ. ಮಾನವ ಭೂಮಿಯ ಮೇಲೆ ಅವತರಿಸಿದಂದಿನಿಂದ ಇಂದಿನವರೆಗೆ ಅವ್ಯಾಹತವಾಗಿ ಈ ಒಡಪನ್ನು ಮುಡುಪಾಗಿಟ್ಟುಕೊಂಡು ಬಂದಿರುವನು. ಅದನ್ನು ಸರಿಯಾಗಿ ಒಡೆದು ಹೇಳುವವರು ಬಹುಶಃ ಇನ್ನೂ ಹುಟ್ಟಿರಲಿಕ್ಕಿಲ್ಲ. ಆದರೆ ಒಡಪನ್ನು ಬಿಡಿಸುವ ಪ್ರಯತ್ನದಲ್ಲಿ ಹುಟ್ಟಿದ ಹಲವು ದರ್ಶನಗಳನ್ನು ಪಂ. ನಾಗಭೂಷಣಶಾಸ್ತ್ರಿಗಳು ಸರಿಯಾಗಿ ಗ್ರಹಿಸಿ ಸರಳ ಶೈಲಿಯಲ್ಲಿ ಸಾಮಾನ್ಯನಿಗೂ ತಿಳಿಯುವಂತೆ ಪ್ರಯತ್ನಿಸಿ ದುದು ಅವರ ಪಾಂಡಿತ್ಯ, ಆಳವಾದ ಅಭ್ಯಾಸ, ಸಂಶೋಧನಾ ಪರಿಣತಿಗಳನ್ನು ಎತ್ತಿತೋರಿಸುವದು. ಇದೊಂದೇ ಕೃತಿ ಸಾಕು ಅವರನ್ನು ಸಾಹಿತ್ಯ ಪ್ರಪಂಚದಲ್ಲಿ ಅಮರರನ್ನಾಗಿ ಮಾಡಲು.

ವಿರಾಟ್‌ವಿಶ್ವದಲ್ಲಿ ಮಾನವನ ಪಾತ್ರವನ್ನು ಸೂಕ್ಷ್ಮವಾಗಿ ಪರೀಕ್ಷಿಸಿರುವರು. ಅಣು-ಆತ್ಮ ಸಣ್ಣದಾದರೂ ಪರಮಾಣು ಪರಮಾತ್ಮನ ಶಕ್ತಿಯನ್ನು ಪಡೆದಿರುವದು. "ವಿಜ್ಞಾನಿಗಳಿಗೆ ತಿಳಿಯದ ಸಂಗತಿಯು ಆತ್ಮಜ್ಞಾನಿಗಳಿಗೆ ಸುಲಭವಾಗಿಯೇ ತಿಳಿದುಬರುವದು" (ಪುಟ ೧೧)-ಎಂಬಲ್ಲಿ ಆತ್ಮಜ್ಞಾನಿಯ ನಿಜಮಹಿಮೆಯನ್ನು ನಿರೂಪಿಸಿರುವರು.

ಆಸ್ತಿಕ, ನಾಸ್ತಿಕ ವಾದವನ್ನು ಈಶ್ವರ, ನಿರೀಶ್ವರ ವಾದಕ್ಕೆ ತೆಕ್ಕೆ ಹಾಕುವದು ಸಾಮಾನ್ಯ ವಿಷಯ. ಪಂ. ನಾಗಭೂಷಣಶಾಸ್ತ್ರಿಯವರು ಇದಕ್ಕೆ ಹೊಸ ತಿರುವನ್ನು ಕೊಟ್ಟಿರುವರು. "ವೇದ ಪ್ರಾಮಾಣ್ಯವನ್ನು ಒಪ್ಪಿಕೊಳ್ಳದ ದರ್ಶನಗಳು ನಾಸ್ತಿಕ ದರ್ಶನಗಳು, ಒಪ್ಪಿಕೊಳ್ಳುವ ದರ್ಶನಗಳು ಆಸ್ತಿಕ ದರ್ಶನಗಳು ಎಂದು ಹೇಳುವುದೇ ಉಚಿತ" (ಪು. ೧೨)-ಎಂದು ವಾದಕ್ಕೆ ಪೂರ್ಣ ವಿರಾಮ ಇತ್ತಿರುವರು. ಈ ಅರ್ಥದ ಅನುಸಾರವಾಗಿ ಚಾರ್ವಾಕ, ಜೈನ, ಬೌದ್ಧ ದರ್ಶನಗಳು ನಾಸ್ತಿಕ, ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ, ಪೂರ್ವ ಮೀಮಾಂಸೆ ಮತ್ತು ಉತ್ತರ ಮೀಮಾಂಸೆಗಳೆಂಬ ಷಡ್ದರ್ಶನಗಳು ಆಸ್ತಿಕವೆಂದು ವರ್ಗೀಕರಿಸಿರುವರು.

ಇಲ್ಲಿ ಭಾರತೀಯ ಎಲ್ಲ ಮುಖ್ಯ ದರ್ಶನಗಳನ್ನು ಒಂದೊಂದನ್ನಾಗಿ ವಿವೇಚಿಸಿ ವಿಮರ್ಶಿಸಿರುವರು. ಅವುಗಳ ಉತ್ಪತ್ತಿ, ಬೆಳವಣಿಗೆ, ಅವುಗಳಲ್ಲಿಯ ತಿರುಳು ಹಾಗೂ ಅವುಗಳಲ್ಲಿಯ ಗುಣಾವಗುಣಗಳನ್ನು ವಿಶದೀಕರಿಸಿರುವರಲ್ಲದೆ ಅಲ್ಲಲ್ಲಿ ಅವುಗಳ ತುಲನಾತ್ಮಕ ಅಭ್ಯಾಸವನ್ನು ಕೊಟ್ಟಿರುವರು. ಒಟ್ಟಿನಲ್ಲಿ ಭಾರತೀಯ ದರ್ಶನಗಳ ಹೂಗೊಂಚಲನ್ನು ಪ್ರತ್ಯಕ್ಷವಾಗಿ ಇಲ್ಲಿಟ್ಟಿರುವರು.

ಚಾರ್ವಾಕರ ದರ್ಶನದ ತಥ್ಯ—"ಸುಖವೆಂಬುದೇ ಸ್ವರ್ಗ, ದುಃಖ ವೆಂಬುದೇ ನರಕ". ಅವರು ಭೌತಿಕವಾದಿಗಳು, ಲೌಕಿಕವಾದಿಗಳು, ಒಟ್ಟಿನಲ್ಲಿ ವ್ಯವಹಾರಸ್ಥರು. ಆಧ್ಯಾತ್ಮಿಕ, ಯೋಗಿಕ, ಪರಲೋಕ ಮುಂತಾದ ಕಾಣದ್ದರ ಬಗೆಗೆ ತಲೆ ಕೆಡಿಸಿಕೊಳ್ಳಲು ಅವರ ಒಪ್ಪಿಗೆಯಿಲ್ಲ. ಅದಕ್ಕೆಂತಲೇ ಅವರು ವೇದಗಳ ಅವಹೇಳನ ಮಾಡಿರುವರು. "ತ್ರಯೋ ವೇದಸ್ಯಕರ್ತಾರೋ ಭಂಡ ಧೂರ್ತನಿಶಾಚರಾ" (ಪು. ೨೩). ಚಾರ್ವಾಕರಿಗೆ ಪ್ರತ್ಯಕ್ಷ ಪ್ರಮಾಣ ಬೇಕು. ಪ್ರತ್ಯಕ್ಷವಿದ್ದ ಜೀವ, ಜಗತ್ತಿನ ಚಿಂತೆ ಅವರಿಗೆ. ಅಪ್ರತ್ಯಕ್ಷನಾದ ಈಶ್ವರನ ಬಗೆಗೆ ಇಲ್ಲ. ಆದರೆ "ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡಬೇಕು"—ಎನ್ನುವ ಮಾತು, ಪಾಪ, ಅವರಿಗೆ ಗೊತ್ತಿಲ್ಲದುದೇ ಆ ದರ್ಶನದ ಕೊರತೆ.

"ಅಹಿಂಸಾ ಪರಮೋಧರ್ಮಃ"—ಎಂಬ ಗೀತಾರ್ಥವು ಜೈನದರ್ಶನದಲ್ಲಿ ಸಾರ್ಥಕ ಪಡೆದಿದೆ. ವೇದವನ್ನು ಒಪ್ಪಿಕೊಳ್ಳದಿದ್ದರೂ ಅದರ ಸಾರಸರ್ವಸ್ವ ವನ್ನು ಹೀರಿಕೊಂಡಂತಿದೆ ಜೈನಧರ್ಮ. ಸರ್ವಪ್ರಾಣಿದಯೆ ಇಲ್ಲಿದೆ. ವಿವಿಧತೆ, ಏಕತೆ ಎರಡೂ ಸತ್ಯ. ಜೈನರು ಐದು ಪ್ರಕಾರದ ಜ್ಞಾನ (ಮತಿ, ಶೃತಿ, ಅವಧಿ, ಮನಃಪರ್ಯಾಯ, ಕೇವಲ) ಮತ್ತು ಮೂರು ಪ್ರಕಾರದ ಪ್ರಮಾಣ (ಪ್ರತ್ಯಕ್ಷ, ಅವಮಾನ, ಶಬ್ದ)ಗಳನ್ನು ಒಪ್ಪಿರುವರು. ಇವರು ದ್ವೈತವಾದಿಗಳು. ಮುಕ್ತಿ ಜೀವನದ ಗುರಿ. ಸರ್ವತ್ಯಾಗಕ್ಕೂ ಸಿದ್ಧವಾದಾಗ ಮುಕ್ತಿ; ಇಲ್ಲದಿದ್ದರೆ ಪುನ ರುಕ್ತಿ. ದಿಗಂಬರ ಪಂಥವಾದಿ ಹೆಣ್ಣು—ದಿಗಂಬರಳಾಗದಿದ್ದರೆ—ಅವಳಿಗೆ ಮುಕ್ತಿ ಇಲ್ಲ. ಒಟ್ಟಿನಲ್ಲಿ ಹೆಣ್ಣಿಗೆ ಈ ಪಂಥದನ್ವಯ ಮುಕ್ತಿಯೇ ಇಲ್ಲ. "ಜೈನ ದರ್ಶನವು ಮುಖ್ಯವಾಗಿ ಮೋಕ್ಷದರ್ಶನವಾಗಿದೆ. ತತ್ವಾಲೋಚನೆಯು ಇದರ ಮುಖ್ಯೋದ್ದೇಶವಾಗಿಲ್ಲ" (ಪು. ೪೯).

ಜಗದ ಪೂರ್ವಾರ್ಧದ ಮೇಲೆ ಇಂದಿಗೂ ತನ್ನ ಧಾರ್ಮಿಕ ಸಾಮ್ರಾಜ್ಯ ಪಡೆದ ಬೌದ್ಧಧರ್ಮ ಸದ್ಯಕ್ಕೆ ತನ್ನ ತವರುಮನೆಯಲ್ಲಿಯೇ ಹೇಳಹೆಸರಿಲ್ಲ ದಂತಾದುದು ಅದರ ಹಣೆಯ ಬರಹ! ವೈದಿಕ ಧರ್ಮದ ವಿರುದ್ಧ ಹೋದು ದಕ್ಕೆ ಈ ಮರಣಾಂತಿಕ ಪೆಟ್ಟು ತಿಂದಿರಬಹುದೆ? ಈ ವಿಷಯಕ್ಕೆ ಲೇಖಕರು ಕೈಹಾಕದೇ ಉಳಿದುದೇ ಉತ್ತಮ. ಏಕೆಂದರೆ "ನ ಭ್ರೂಯಾತ್ ಸತ್ಯಂ ಅಪ್ರಿಯಮ್".

ಜಗವಿನ್ನೂ ಅಜ್ಞಾನದ ನಿದ್ರೆಯಲ್ಲಿದ್ದಾಗ ಬುದ್ಧನು ಎದ್ದನು—ಎನ್ನುವ ಮಾತು ಸತ್ಯ. ಆತನ ನಂತರವೇ ಅಲ್ಲವೇ ಜಗದ ಇನ್ನುಳಿದ ಮುಖ್ಯ ಧರ್ಮ ಸಂಸ್ಥಾಪಕರಾದ ಏಸುಕ್ರಿಸ್ತ ಮತ್ತು ಪೈಗಂಬರ ಮುಂತಾದವರು ಅವತರಿ

ಸಿದ್ದು ? "ಏಸುಕ್ರಿಸ್ತನು ಕೂಡ ಅಹಿಂಸೆಯ ದೀಕ್ಷೆಯನ್ನು ಭಾರತದ ಬೌದ್ಧ ಮಹಾವಿದ್ಯಾಲಯದಲ್ಲಿಯೇ ಪಡೆದುದು ಎಂದು ಕೆಲವು ಇತಿಹಾಸತಜ್ಞರು ಹೇಳುವರು". (ಪು. ೫೩). ಬುದ್ಧನ ಮುಖ್ಯ ತತ್ವಗಳು: "ಸರ್ವಂ ಅನಾತ್ಮಂ", "ಸರ್ವಂ ಅನಿತ್ಯಂ", "ಸರ್ವಂ ದುಃಖಂ". ಬಹುಶಃ ಬುದ್ಧನು ಚಾರ್ವಾಕರ ಅತಿ ಭೌತಿಕಕ್ಕೆ ಹಾಗೂ ವೈದಿಕರ ಅತಿ ಮೂಢನಂಬಿಕೆಗೆ ಬೇಸತ್ತಿರಬಹುದು. ಬುದ್ಧನಿಗೆ ಬೇಕಾದುದು ಮಾನವತೆ. 'ಒಳ್ಳೆಯವನಾಗಿರು, ಒಳ್ಳೆಯದನ್ನೇ ಮಾಡು'—ಇದೇ ಅವರಿತ್ತ ಪರಮೋಪದೇಶ. "ಗುಡ್ಡದಷ್ಟು ತಾತ್ವಿಕ ವಿಚಾರ ಮಾಡುವುದಕ್ಕಿಂತ ಸಾಸವೆಯಷ್ಟು ಸಾತ್ವಿಕಾಚಾರದಲ್ಲಿ ತೊಡಗಿಕೊಳ್ಳುವುದೇ ಮೇಲೆಂಬುವೇ ಬುದ್ಧನ ವಿಚಾರಸರಣಿ" (ಪು. ೫೭). ಪ್ರಾಣಿದಯಾಪರನಾದ ಬುದ್ಧ ನಿರೀಶ್ವರವಾದಿಯಲ್ಲ—ಎಂದು ಲೇಖಕರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿರುವರು. ಇಷ್ಟೇ ಅಲ್ಲ, ಬುದ್ಧ ಶೂನ್ಯಸಿದ್ಧಾಂತಿಯೂ ಎನ್ನುವರು. ಆತನ ಪೂರ್ವದ ಕಾಶ್ಯಪ, ಕನಕಮುನಿಗಳನ್ನು ಉದಾಹರಿಸಿರುವರು.

ಬುದ್ಧನ ತರುವಾಯ ಬಂದ ತ್ರಿಪಿಟಕಗಳ ಪೈಕಿ ಒಂದಾದ ಅಭಿಧರ್ಮದ ಯೋಗಾಚಾರ ಮತ್ತು ಮಾಧ್ಯಮಿಕರು—ಮಹಾಯಾನ ಪಂಥದವರು. ಇವರು ಈಶ್ವರವಾದಿಗಳು. ಇನ್ನುಳಿದ ಸೂತ್ರಪಿಟಕದ ಸೌತಾಂತ್ರಿಕರು ಮತ್ತು ವಿನಯ ಪಿಟಕದ ವೈಭಾಷಿಕರು ಹೀನಯಾನದವರು. ಇವರು ನಿರೀಶ್ವರವಾದಿಗಳಂತಿರುವರು.

ಒಟ್ಟಿನಲ್ಲಿ ಬುದ್ಧ ಪ್ರಪಂಚದ ಪ್ರಥಮ ಕ್ರಾಂತಿಕಾರಿ ಸಮಾಜಸುಧಾರಕ. ಅನಂತರ ಸ್ಪಷ್ಟವಾಗಿ ಎದ್ದುಕಾಣುವ ವ್ಯಕ್ತಿ ಜಗಜ್ಯೋತಿ ಬಸವಣ್ಣ—ಎಂಬ ವಿಚಾರಗಳಿಗೂ ಇಲ್ಲಿ ಆಸ್ಪದವಿದೆ.

ಇನ್ನು ಆಸ್ತಿಕ ಷಡ್ದರ್ಶನಗಳ ವಿಮರ್ಶಾತ್ಮಕ ಪರಿಚಯವನ್ನೂ ಇಲ್ಲಿ ಕಾಣಬಹುದು. ಗೌತಮನ ನ್ಯಾಯದರ್ಶನವು—ಪ್ರತ್ಯಕ್ಷ, ಅನುಮಾನ, ಉಪಮಾನ ಮತ್ತು ಶಬ್ದಪ್ರಮಾಣಗಳನ್ನು ಒಪ್ಪುವದು. ಈತ ಕನ್ನಡಿಗ ಎಂದು ಲೇಖಕರು ಅಭಿಮಾನದಿಂದ ಎತ್ತಿತೋರಿಸಿರುವರು. ಶ್ರೀಹರ್ಷ ತನ್ನ "ಖಂಡನ ಖಂಡನ ಖಾದ್ಯ"ದಲ್ಲಿ "ಅತಿಶಯೇನ ಗೌ ಗೌತಮಃ" ಎಂದು ಮೂದಲಿಸಿರುವನು. ಕಣಾದ ಮುನಿಯ ವೈಶೇಷಿಕ ದರ್ಶನವು ಪ್ರತ್ಯಕ್ಷ ಮತ್ತು ಅನುಮಾನ—ಎರಡೇ ಪ್ರಮಾಣಗಳನ್ನು ಸ್ವೀಕರಿಸುವದು. ಕಪಿಲರ ಸಾಂಖ್ಯದರ್ಶನ ೨೫ ಸಂಖ್ಯೆ(ತತ್ವ)ಗಳನ್ನಾಧರಿಸಿದೆ. ಈ ದರ್ಶನದ "ಪ್ರಕೃತಿ-ಪುರುಷ", ದ್ವೈತಭಾವ ಮತ್ತು ತ್ರಿವಿಧ ದುಃಖಗಳಾದ ಆಧ್ಯಾತ್ಮಿಕ, ಆದಿಭೌತಿಕ ಮತ್ತು ಆದಿದೈವಿಕಗಳು

ಹೆಚ್ಚು ಪ್ರಚಲಿತದಲ್ಲಿವೆ. ಇದು ಪ್ರತ್ಯಕ್ಷ, ಅನುಮಾನ ಶಬ್ದಪ್ರಮಾಣಗಳನ್ನು ನಂಬಿದೆ.

ಪತಂಜಲಿಯ ಯೋಗದರ್ಶನ ಶಿವಯೋಗ ದರ್ಶನ. ಯಾಜ್ಞವಲ್ಕ್ಯನ ಪ್ರಕಾರ ಹಿರಣ್ಯಗರ್ಭ ಪ್ರಥಮ ಯೋಗದರ್ಶನಕಾರ. ಇಲ್ಲಿ ದ್ವೈತ (ಇಷ್ಟ ಲಿಂಗ), ಅದ್ವೈತ (ಭಾವಲಿಂಗ) ಮತ್ತು ದ್ವೈತಾದ್ವೈತ (ಪ್ರಾಣಲಿಂಗ) ಗಳ ತ್ರಿವೇಣಿ ಸಂಗಮವಿದೆ. "ಜ್ಯೋತಿಯಿದ್ದ ಮನೆಯಲ್ಲಿ ಕತ್ತಲೆಯುಂಟೆ? ಲಿಂಗ ವಿದ್ದಂಗದಲ್ಲಿ ಅಜ್ಞಾನವುಂಟೆ?" ಎಂಬ ಜಗದ್ಗುರು ತೋಂಟದ ಸಿದ್ಧಲಿಂಗ ಶಿವಯೋಗಿಗಳ ವಚನವನ್ನು ಮತ್ತು "ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ" ಎಂಬ ಗೀತೋಕ್ತಿಯನ್ನಿತ್ತು ಸರಿಯಾಗಿ ಸ್ಪಷ್ಟೀ ಕರಿಸಿರುವರು— ಲೇಖಕರು.

ಜೈಮಿನಿಯ (ವೇದದ) ಪೂರ್ವ ಮೀಮಾಂಸವು ಕರ್ಮಕಾಂಡವನ್ನು ಮತ್ತು ಬಾದರಾಯಣನ ಉತ್ತರ ಮೀಮಾಂಸವು ಜ್ಞಾನಕಾಂಡವನ್ನು ಒಳಗೊಂಡಿ ರುವವು. ವೇದಾಂತ (ಬ್ರಹ್ಮ) ಸೂತ್ರಗಳ ಮೇಲೆ ಹಲವಾರು ಭಾಷ್ಯಗಳು ಬಂದಿವೆ. ಶಂಕರಾಚಾರ್ಯರ ಪೂರ್ವಿಕ ಭಾಷ್ಯಕಾರರಲ್ಲಿ ಮುಖ್ಯರು ಭರ್ತೃಹರಿ ಮತ್ತು ಮಂಡನಮಿಶ್ರ. ಶಂಕರಾಚಾರ್ಯರ (ಕ್ರಿ. ಶ. ೭೮೮) "ಶಾರೀರಿಕ ಭಾಷ್ಯ" ನಿರ್ವಿಶೇಷಾದ್ವೈತವನ್ನು, ಭಾಸ್ಕರಾಚಾರ್ಯರ (ಕ್ರಿ. ಶ. ೧೦೦೦) "ಭಾಸ್ಕರ ಭಾಷ್ಯವು" ಭೇದಾಭೇದವನ್ನು, ರಾಮಾನುಜಾಚಾರ್ಯರ (ಕ್ರಿ. ಶ. ೧೧೪೦) "ಶ್ರೀ ಭಾಷ್ಯ"ವು ವಿಶಿಷ್ಟಾದ್ವೈತವನ್ನು ಮತ್ತು ಮಧ್ವಾಚಾರ್ಯರ "ಪೂರ್ಣಪ್ರಜ್ಞಭಾಷ್ಯ"ವು ದ್ವೈತವನ್ನು ಪ್ರತಿಪಾದಿಸುವವು. ಶಂಕರಾಚಾರ್ಯರ "ಅಹಂ ಬ್ರಹ್ಮಾಸ್ಮಿ", "ಏಕಮೇವಾದ್ವಿತೀಯಂ ಬ್ರಹ್ಮಂ" ಮತ್ತು "ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಜೀವೋಬ್ರಹ್ಮೈವನಾಪರಃ" ಎಂಬ ಉಕ್ತಿಗಳು ಹೆಚ್ಚು ಪ್ರಚಲಿತದಲ್ಲಿವೆ.

"ಭಾರತೀಯ ದರ್ಶನ ಸಮೀಕ್ಷೆ"ಯು ಒಟ್ಟಿನಲ್ಲಿ ಒಂದು ಮೇರುಕೃತಿ. ರಾಜ್ಯ, ಕೇಂದ್ರ ಎಲ್ಲ ಅಕ್ಯಾಡೆಮಿಗಳು ಇದರಲ್ಲಿಯ ಗುಣಗ್ರಹಿಸಿ ಪುರಸ್ಕಾರ ನೀಡಬೇಕು. ಇಷ್ಟೇ ಅಲ್ಲ ಇದರ ಮುಂದಿನ ಭಾಗಗಳು ತ್ವರಿತಗತಿಯಿಂದ ಬೆಳಕು ಕಂಡು ಮಾನವತೆಗೆ ದಾರಿತೋರಿಸಲು ನೆರವು ನೀಡಬೇಕು. ಕಾಲೇಜ ಮತ್ತು ವಿಶ್ವವಿದ್ಯಾಲಯಗಳಲ್ಲಿ ಇದನ್ನು ಪಠ್ಯಪುಸ್ತಕವನ್ನಾಗಿ ಮಾಡಿ ಯುವಕರಿಗೆ ಭಾರತೀಯ ದರ್ಶನಗಳ ಜ್ಞಾನನೀಡಿ ಅವರ ಆತ್ಮೋದ್ಧಾರ

ಮಾಡುವಲ್ಲಿ ಸಂಬಂಧಪಟ್ಟವರು ಬೇಗ ಈ ದಿಶೆಯಲ್ಲಿ ಕಾರ್ಯಪ್ರವೃತ್ತರಾಗ ಬೇಕೆಂದು ನಮ್ರವಿನಂತಿ. ಅಂದರೆ ಮಾತ್ರ ಲೇಖಕರ ಶ್ರಮ ಸಫಲವಾಗುವದು.

ಚಿತ್ತರಗಿ-ಇಲಕಲ್ಲ ಪೀಠದ ಲಿಂ. ಶ್ರೀ ವಿಜಯ ಮಹಾಂತ ಶಿವಯೋಗಿಗೆ ಈ ಸಮೀಕ್ಷೆಯ ಪುಷ್ಪವನ್ನು ಅರ್ಪಿಸಿದ್ದು ಎಷ್ಟು ಸಮಂಜಸ. ಗ್ರಂಥರಚನೆಗೆ ಪ್ರೇರಕ ಶಕ್ತಿಗಳಾಗಿ ನಿಂತ ಬೆಂಗಳೂರು ಸರ್ಪಭೂಷಣ ಮಠದ ಶ್ರೀಮಹಾದೇವ ಸ್ವಾಮಿಗಳಿಗೆ ಮತ್ತು ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಆರ್. ಸಿ. ಹಿರೇಮಠ ಅವರಿಗೆ ಲೇಖಕರು ನೆನಕೆ ಸಲ್ಲಿಸಿರುವರಲ್ಲದೆ, ಆರ್ಥಿಕ ಶಕ್ತಿನೀಡಿದ ಪೂಜ್ಯ ಮಹಾಸ್ವಾಮಿಗಳೆಲ್ಲರ (ಹುಬ್ಬಳ್ಳಿಯ ಮೂರುಸಾವಿರಮಠದ ಜಗದ್ಗುರುಗಳು, ಇಲಕಲ್ಲ ವಿಜಯ ಮಹಾಂತಸ್ವಾಮಿಗಳು, ಮುರುಘಾಮಠದ ಮಹಾಂತಸ್ವಾಮಿಗಳು, ಹಾನಗಲ್ಲ ಸ್ವಾಮಿಗಳು, ಚಿಂಚಲಿಯ ಸ್ವಾಮಿಗಳು) ಸ್ಮರಣೆಮಾಡಿ ಅವರ ಋಣ ತೀರಿಸಿರುವರು.

——

ಇಪ್ಪತ್ತಂಶ ಕಾರ್ಯಕ್ರಮಗಳ ಸಾಧನೆ: ಒಂದು ವಿಚಾರ ಸಂಕಿರಣ

[ಕರ್ನಾಟಕ ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರ ವಿಭಾಗ, ಲಿಂಕನ್ ಸಾಮಾಜಿಕ ಸಂಶೋಧನೆ ಮತ್ತು ಲೋಕಾಭಿಪ್ರಾಯ ಸಂಸ್ಥೆ, ಧಾರವಾಡ- ಇವುಗಳ ಆಶ್ರಯದಲ್ಲಿ]

ಇಪ್ಪತ್ತಂಶ ಕಾರ್ಯಕ್ರಮದ ಬಗೆಗೆ ವಿಚಾರ ಸಂಕಿರಣವನ್ನು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ವಿದ್ಯಾರ್ಥಿಧಾಮದಲ್ಲಿ ೧೯೭೬ನೇ ಜುಲೈ ೪, ರವಿವಾರ, ಮುಂಜಾನೆ ೯ ಗಂಟೆಗೆ ಏರ್ಪಡಿಸಲಾಗಿತ್ತು. ಸಮಾಜಕಾರ್ಯ ವಿಭಾಗದ ಶ್ರೀ ಎಸ್. ಎಫ್. ಪೂಜಾರರು ಇಪ್ಪತ್ತಂಶ ಕಾರ್ಯಕ್ರಮಗಳ ಬಗ್ಗೆ ಸ್ವರಚಿತ ನಾಂದಿ ಪದ್ಯವನ್ನು ಹಾಡಿದರು. ಲಿಂಕನ್ ಸಂಸ್ಥೆಯ ಸಹಕಾರ್ಯದರ್ಶಿಯವರಾದ ಡಾ. ಕೆ. ರಾಘವೇಂದ್ರರಾವ್‌ರು ಸಭಿಕರಿಗೆ ಸ್ವಾಗತ ಕೋರಿ ಸಂಸ್ಥೆಯ ಹಿನ್ನೆಲೆ ಮತ್ತು ಗೊತ್ತುಗುರಿಗಳ ಬಗೆಗೆ ಸಂಕ್ಷಿಪ್ತ ಮಾಹಿತಿ ಮಾಡಿಕೊಟ್ಟರು. ಈ ಸಂದರ್ಭದಲ್ಲಿ, ಈ ಸಂಸ್ಥೆಯ ಮೂಲ ಪ್ರವರ್ತಕರೂ ಹಾಗೂ ಅದರ ಪ್ರಥಮ ನಿರ್ದೇಶಕರೂ ಆದ ದಿವಂಗತ ಪ್ರೊ. ಜಿ. ಎಸ್. ಹಾಲಪ್ಪನವರನ್ನು ಅವರು ಸ್ಮರಿಸಿದರು. ಇಪ್ಪತ್ತಂಶ ಕಾರ್ಯಕ್ರಮಗಳ ಬಗೆಗೆ ಏರ್ಪಡಿಸಿದ ವಿಚಾರ ಸಂಕಿರಣದ ಉದ್ದೇಶ, ಲೇಖನಗಳು ಮತ್ತು ಅದರಲ್ಲಿ ಭಾಗವಹಿಸುವವರ ಬಗೆಗೆ ಸಂಕ್ಷಿಪ್ತ ಪರಿಚಯ ಮಾಡಿಕೊಟ್ಟರು.

ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಯವರಾದ ಡಾ. ಆರ್. ಸಿ. ಹಿರೇಮಠರು ವಿಚಾರಸಂಕಿರಣವನ್ನು ಉದ್ಘಾಟಿಸುತ್ತಾ, ಹಲವು ವರ್ಷಗಳ ಹಿಂದೆ ಲಿಂಕನ್ ಸಂಸ್ಥೆಯು ಪ್ರಾರಂಭವಾದಾಗ ಅದರೊಡನೆ ತಮಗಿದ್ದ ನಿಕಟ ಸಂಬಂಧವನ್ನು ಅವರು ಸ್ಮರಿಸಿದರು. ಬುದ್ಧಿಜೀವಿಗಳು ತಮ್ಮ ಶಿಲಾಗೋಪುರ ಗಳಿಂದ ಹೊರಬಂದು ದೇಶದ ಬಹುಮುಖ ಬೆಳವಣಿಗೆಯತ್ತ ಜನತೆಯೊಂದಿಗೆ ಒಗ್ಗೂಡಬೇಕೆಂದು ಅವರು ಅಭಿಪ್ರಾಯಪಟ್ಟರು. ಇಪ್ಪತ್ತಂಶ ಕಾರ್ಯಕ್ರಮ ಗಳ ವಿವಿಧ ಅಂಗಗಳ ಬಗೆಗೆ ಹಾಗೂ ಅವು ನಮ್ಮ ದೇಶದಲ್ಲಿ ಸರಿಯಾಗಿ ಕಾರ್ಯ ರೂಪದಲ್ಲಿ ಬರುವ ಮಾರ್ಗಗಳ ಬಗೆಗೆ ಲಿಂಕನ್ ಸಂಸ್ಥೆಯ ಆಶ್ರಯದಲ್ಲಿ ಪ್ರಾಧ್ಯಾಪಕರುಗಳು ಹಾಗೂ ವಿದ್ಯಾರ್ಥಿಗಳು ತಮ್ಮ ವಿಚಾರಗಳನ್ನು ಮತ್ತು ಭಾವನೆಗಳನ್ನು ವ್ಯಕ್ತಪಡಿಸಲು ಕೂಡಿದುದಕ್ಕೆ ಅವರು ಸಂತಸಪಟ್ಟರು.

ಲಿಂಕನ್ ಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ ವಿಚಾರಸಂಕಿರಣವು ಮಹತ್ವಪೂರ್ಣ ದಿನದಂದು, ಅಂದರೆ ಅಮೇರಿಕಾ ಸ್ವಾತಂತ್ರ್ಯದ ವಾರ್ಷಿಕೋತ್ಸವ ದಿನವಾದ ಜುಲೈ ೪ ರಂದು ನಡೆಯುತ್ತಿದೆ ಎಂಬುದನ್ನು ಸಂಸ್ಥೆಯ ನಿರ್ದೇಶಕ ರಾದ ಡಾ. ಎ. ಎಮ್. ರಾಜಶೇಖರಯ್ಯನವರು ಎಲ್ಲರ ಗಮನಕ್ಕೆ ತಂದುದಲ್ಲದೆ ಇಪ್ಪತ್ತಂಶ ಕಾರ್ಯಕ್ರಮದ ವಿವಿಧ ಅಂಗಗಳ ಬಗೆಗೆ ಮತ್ತು ನಮ್ಮ ದೇಶದ ರಾಜಕಾರಣ ಮತ್ತು ಸಮಾಜ ಪರಿವರ್ತನೆಯ ಬೆಳವಣಿಗೆ ಮತ್ತು ಅದರ ಮುಖ್ಯ ಸಮಸ್ಯೆಗಳ ಸಂದರ್ಭಗಳಲ್ಲಿ ಮಹಾತ್ಮಾ ಗಾಂಧಿ, ಜವಾಹರಲಾಲ ನೆಹರು ಮತ್ತು ಶ್ರೀಮತಿ ಇಂದಿರಾ ಗಾಂಧಿಯವರು ನಿರ್ವಹಿಸಿದ ಪಾತ್ರಗಳ ಬಗೆಗೆ ಸಂಕ್ಷಿಪ್ತ ಪರಿಚಯ ಮಾಡಿಕೊಟ್ಟರು.

ವಿಚಾರ ಸಂಕಿರಣದ ಪ್ರಥಮ ಲೇಖನವಾದ "ಸಾಮಾಜಿಕ ನ್ಯಾಯ ಮತ್ತು ಇಪ್ಪತ್ತಂಶ ಕಾರ್ಯಕ್ರಮ"ವನ್ನು ಡಾ. ವ್ಹಿ. ಎಸ್. ದೇಶಪಾಂಡೆಯವರು ಮಂಡಿಸಿದರು. ಇಪ್ಪತ್ತಂಶ ಕ್ರಾರ್ಯಕ್ರಮದ ಅನುಷ್ಠಾನದಲ್ಲಿ ಸಾಮಾಜಿಕ ನ್ಯಾಯದ ಸ್ವರೂಪ ಮತ್ತು ಅರ್ಥದ ಬಗೆಗೆ ಅವರು ವಿವರಣೆಯನ್ನಿತ್ತರು. ರಾಜಕೀಯ ಸಂಸ್ಥೆಗಳು ಮತ್ತು ದೇಶದ ಸಂವಿಧಾನವೂ ಸೇರಿದಂತೆ ವಿವಿಧ ಸಾಮಾಜಿಕ ಸಂಸ್ಥೆಗಳ ಪ್ರಥಮ ಗುಣವೆಂದರೆ 'ನ್ಯಾಯ' (justice) ಎಂಬು ದಾಗಿ ಅವರು ಅಭಿಪ್ರಾಯ ಪಟ್ಟರು. ನ್ಯಾಯದ ತಳಹದಿ, ಬೇಡಿಕೆ ಮತ್ತು ಆ ಬೇಡಿಕೆಗೆ ಸಮಾಜದಲ್ಲಿರುವ ಸಾಮಗ್ರಿಗಳು, ಸಾಮಾಜಿಕ ನ್ಯಾಯದ ಚೌಕಟ್ಟಿ

ನಲ್ಲಿ ಸೇರುತ್ತವೆ. ಅವರು ಸಮಾನತೆಯ ಗ್ರಹಿಕೆಗಳ ಬಗೆಗೆ ಮತ್ತು ಸಾಧಕ ಬಾಧಕಗಳ ಬಗೆಗೆ ಸಾಮಾಜಿಕ ನ್ಯಾಯದ ಹಿನ್ನೆಲೆಯಲ್ಲಿ ವಿಚಾರಿಸಿದರು. ಅವರು ಆಸ್ತಿಯ ಸಮಸ್ಯೆಗಳು, ಪರಾವಲಂಬನೆ ಹಾಗೂ ಸಮಾಜದಲ್ಲಿಯ ಶೋಷಣೆ ಮತ್ತು ಆಸ್ತಿಯ ವಿಚಾರಕ್ಕೆ ಸಂಬಂಧಿಸಿದ ಸಮಾಜವಾದದ ಅರ್ಥ ಇವುಗಳ ಬಗ್ಗೆ ಹೇಳಿದರು. ಮಾರ್ಕ್ಸ್ ಮತ್ತು ಮಾವೋರನ್ನೊಳಗೊಂಡು ಹಲವು ಮೂಲಗಳಿಂದ ಉದ್ಧರಿಸಿದರಲ್ಲದೆ ಹಂಚುವಿಕೆಯ ನ್ಯಾಯದ ತಳಹದಿಯ ಅವಶ್ಯಕತೆಯ ಬಗೆಗೂ ಹೇಳಿದರು. ಇಪ್ಪತ್ತಂಶ ಕಾರ್ಯಕ್ರಮವನ್ನು ಬಡತನದ ಆಹ್ವಾನವನ್ನು ಎದುರಿಸಲು ಅದರಲ್ಲಿಯೂ ಮುಖ್ಯವಾಗಿ ಭಾರತದ ಹಳ್ಳಿಗಾಡಿನ ಬಡತನವನ್ನು ಎದುರಿಸುವತ್ತ ಉಪಯೋಗಿಸಬೇಕೆಂದು ಪ್ರತಿಪಾದಿಸಿದರು. ಹಳ್ಳಿಯ ಬಡವರ ಜೀವನದ ಬಗ್ಗೆ ನಡೆಸಲಾದ ಒಂದು ಅಧ್ಯಯನವನ್ನು ಅವರು ಸಾದರ ಪಡಿಸಿದರು. ಈ ಸಂದರ್ಭದಲ್ಲಿ, ಅವರು ಹಲವಾರು ಮುಖ್ಯ ವಿಷಯಗಳಾದ ಭೂ ಸುಧಾರಣೆ, ಹಳ್ಳಿಗರ ಋಣವಿಮೋಚನೆ, ಕೃಷಿ ಉತ್ಪನ್ನ, ಕೃಷಿಕರಿಗೆ ಬೇಕಾಗುವಂಥ ಬಂಡವಾಲ ಮತ್ತು ಗೊಬ್ಬರ ಮುಂತಾದವುಗಳ ಬಗೆಗೆ ಹೇಳಿದರು. ಸಾಮಾಜಿಕ ನ್ಯಾಯ ಮತ್ತು ಆರ್ಥಿಕ ಬೆಳವಣಿಗೆಯ ಮಧ್ಯದಲ್ಲಿ ಕಾಣಬಹುದಾದ ವಿರೋಧವನ್ನು ಅವರು ವಿವೇಚಿಸಿದರಲ್ಲದೆ ತಮ್ಮ ಅಭಿಪ್ರಾಯದಲ್ಲಿ ಅವುಗಳಲ್ಲಿ ಅಂಥ ವಿರೋಧಾಭಾಸ ಕಂಡು ಬರುವುದಿಲ್ಲವೆಂದು ಹೇಳಿದರು. ತಮ್ಮ ವಿಚಾರವನ್ನು ವಿವರಿಸಲೋಸುಗ ಅವರು ಗುನ್ನಾರ ಮಿರಡಾಲ ಮತ್ತು ಪಿ. ಸಿ. ಜೋಷಿಯವರ ಅಭಿಪ್ರಾಯಗಳನ್ನು ಉದ್ಧರಿಸಿದರು. ತಮ್ಮ ಚರ್ಚೆಯನ್ನು ಕೊನೆಗೊಳಿಸುತ್ತಾ ಡಾ. ದೇಶಪಾಂಡೆಯವರು ನಾಲ್ಕು ವಿಚಾರಗಳನ್ನು ಮುಂದಿಟ್ಟರು. ಅವು ಭಾರತೀಯರ ಹಲವು ಗುಂಪುಗಳಿಂದ ಮತ್ತು ಹಲವು ರಾಜಕೀಯ ಪಕ್ಷಗಳಿಂದ ಬಂದಂಥ ವಿಚಾರಧಾರೆಗಳಾಗಿವೆ. ಮೊದಲನೆಯದಾಗಿ, ಇಪ್ಪತ್ತಂಶ ಕಾರ್ಯಕ್ರಮವನ್ನು ಕಾರ್ಯರೂಪದಲ್ಲಿ ತೊಡಗಿಸುವಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಆಸ್ಥೆಹೊಂದಬೇಕು. ಎರಡನೆಯದಾಗಿ, ಅಧಿಕಾರಿಗಳಲ್ಲಿ ಆಸಕ್ತಿ ಮನೋ ಇದೆ. ಇಪ್ಪತ್ತಂಶ ಕಾರ್ಯಕ್ರಮವನ್ನು ಕಾರ್ಯರೂಪದಲ್ಲಿ ತರಬೇಕೆನ್ನುವದರಲ್ಲಿ ನಂಬುಗೆಯೂ ಇದೆ. ಆದರೆ ಕಾರ್ಯರೂಪದಲ್ಲಿ ತರುವಲ್ಲಿ ಮತ್ತು ನಂಬುಗೆಯಲ್ಲಿ ಸ್ವಲ್ಪ ಅಂತರವಿರುವುದು. ಮೂರನೆಯದಾಗಿ, ಸರಕಾರಕ್ಕೆ ಇಪ್ಪತ್ತಂಶ ಕಾರ್ಯಕ್ರಮವನ್ನು ಕಾರ್ಯರೂಪದಲ್ಲಿ ತರಲು ತೀವ್ರ ಆತುರವಿದೆ ಮತ್ತು ಅದು ಭಾರತೀಯ ಎಲ್ಲ ವರ್ಗಗಳ ನೆರವು ಮತ್ತು ಸಹಾನುಭೂತಿ ಪಡೆಯತಕ್ಕದ್ದಾಗಿದೆ. ಈ ವಿಚಾರವು ಸಾಮಾನ್ಯವಾಗಿ ಆಳುವ ಕಾಂಗ್ರೆಸು, ಹಲವು ಬಗೆಯ ಸಮಾಜವಾದಿ

ಪಕ್ಷಗಳು ಹಾಗೂ ಭಾರತೀಯ ಸಾಮ್ಯವಾದಿ ಪಕ್ಷದ್ದಾಗಿದೆ. ನಾಲ್ಕನೆಯದಾಗಿ ಭಾರತೀಯ ಸಮಾಜದ ವರ್ಗವ್ಯೂಹ ರಚನೆ ಸಂಪೂರ್ಣ ಪುನರ್ಘಟಿಸದಿದ್ದಲ್ಲಿ ಇಪ್ಪತ್ತಂಶ ಕಾರ್ಯಕ್ರಮ ಪರಿಣಾಮಕಾರಿಯಾಗುವುದಿಲ್ಲ. ಇದು ಸಾಮಾನ್ಯವಾಗಿ ಮಾರ್ಕ್ಸ್‌ವಾದಿ ಭಾರತೀಯ ಸಾಮ್ಯವಾದಿ ಪಕ್ಷದ ವಿಚಾರ. ಮುಂದುವರಿದ ಚರ್ಚೆಯಲ್ಲಿ ಡಾ. ಎಸ್. ಎಸ್. ರೂಡ್ಗಿ, ಡಾ. ಬಿ. ಆರ್. ಪಾಟೀಲ, ಡಾ. ಶಂಕರ ಮೊಕಾಶಿ ಪುಣೇಕರ, ಡಾ. ಎ. ಎಮ್. ರಾಜಶೇಖರಯ್ಯ ಮತ್ತು ಡಾ. ಎನ್. ಎ. ಪಾಟೀಲರು ಭಾಗವಹಿಸಿದರು. ಇಪ್ಪತ್ತಂಶ ಕಾರ್ಯಕ್ರಮವು ಸರಿಯಾದುದೆಂದು, ಅದನ್ನು ಕಾರ್ಯಾಚರಣೆಯಲ್ಲಿ ಕಟ್ಟುನಿಟ್ಟಾಗಿ ತರಬೇಕೆಂದು ಮತ್ತು ಭಾರತೀಯ ಎಲ್ಲ ವರ್ಗಗಳ ಬೆಂಬಲಕ್ಕೆ ಯೋಗ್ಯವಾದುದೆಂದೂ ಅಭಿಪ್ರಾಯ ಪಡಲಾಯಿತು. ಇದಲ್ಲದೆ, ಭಾರತೀಯ ಸಾಮ್ಯವಾದಿ ಪಕ್ಷದ ಬೆಂಬಲಿಗರು ಇಪ್ಪತ್ತಂಶ ಕಾರ್ಯಕ್ರಮ ಕಾರ್ಯರೂಪದಲ್ಲಿ ತರುವಲ್ಲಿ ಇನ್ನುಳಿದ ಪ್ರಗತಿಪರ ಶಕ್ತಿಗಳೊಡನೆ ಕೈಗೂಡಿಸಬೇಕು, ಅಂದರೆ ಭಾರತೀಯ ಸಮಾಜದ ಮೂಲ ತಳಹದಿಯು ಕೆಲ ಅವಧಿಯಲ್ಲಿ ಸ್ವಾಭಾವಿಕವಾಗಿ ಪುನರ್ಘಟಿಸಲ್ಪಡುವುದು– ಎಂದು ಹೇಳಲಾಯಿತು.

ಚಹಾ ಬಿಡುವಿನ ನಂತರ ಎರಡನೆಯ ಲೇಖನ "ಇಪ್ಪತ್ತಂಶ ಕಾರ್ಯಕ್ರಮ: ರಾಜಕೀಯ ಮುನ್ನೋಟ"ವನ್ನು ಡಾ. ಕೆ. ರಾಘವೇಂದ್ರರಾವ್‌ರು ಸಾದರಪಡಿಸಿದರು. ಡಾ. ರಾಘವೇಂದ್ರರಾವ್‌ರು ಇಪ್ಪತ್ತಂಶ ಕಾರ್ಯಕ್ರಮದ ಸತ್ಯತೆ ಮತ್ತು ಉಪದೇಶಪರತೆಯನ್ನು ಒಪ್ಪಿಕೊಂಡು–ಕಾರ್ಯಕ್ರಮದ ವಿಚಾರಗಳನ್ನು ಮತ್ತು ಪರಿಣಾಮಗಳನ್ನು ವಿವರಿಸಿದರು. ಸಾಮಾನ್ಯವಾಗಿ ಗ್ರಹಿಸಿದ್ದಕ್ಕಿಂತ ಹೆಚ್ಚಾಗಿ ಈ ವಿಚಾರಗಳು ಮತ್ತು ಪರಿಣಾಮಗಳು ಹೆಚ್ಚು ವ್ಯಾಪಕವಾಗಿವೆ ಎಂದು ವಾದಿಸಿದರು. ಕೆಲಕಾಲಾನಂತರ ಈ ವಿಚಾರಗಳು ಮತ್ತು ಪರಿಣಾಮಗಳು ಸುಸ್ಪಷ್ಟವಾಗುವವಲ್ಲದೆ ಹೆಚ್ಚೆಚ್ಚು ವ್ಯಾಪಕವಾಗುವವು ಎಂದು ಅಭಿಪ್ರಾಯಪಟ್ಟರು. ಈ ಇಪ್ಪತ್ತಂಶಗಳು ಭಾರತೀಯ ನಾಗರಿಕರಿಗೆ, ಅದರಲ್ಲಿಯೂ ದುರ್ಬಲ ವರ್ಗದವರಿಗೆ ರಾಜಕಾರಣವಲ್ಲದ ರಾಜಕೀಯ ಪ್ರಜ್ಞೆಯನ್ನೊದಗಿಸುವವೆಂದು ಅವರು ಹೇಳಿದರು. ಈ ಕಾರ್ಯಕ್ರಮವು ಅನಿಷ್ಟ ರಾಜಕಾರಣದಿಂದ ಭಿನ್ನವಾದ ಒಳ್ಳೆಯ ಬಗೆಯ ರಾಜಕಾರಣವನ್ನು ಒಳಗೊಂಡಿದೆ. ಇಪ್ಪತ್ತಂಶ ಕಾರ್ಯಕ್ರಮದಿಂದ ಉಪಯೋಗ ಹೊಂದುವವರು ಮತ್ತು ಕಳೆದುಕೊಳ್ಳುವವರು ಎಂದು ಜನರಲ್ಲಿ ಎರಡು ವರ್ಗೀಕರಣ ಮಾಡಬಹುದೆಂದು ಅವರು ಹೇಳಿದರು. ಕಳೆದುಕೊಳ್ಳುವವರು ಸ್ವಾಭಾವಿಕವಾಗಿ, ಮಧ್ಯಮ ತರಗತಿಯ ಕೃಷಿಕರು, ವ್ಯಾಪಾರಸ್ಥರು, ಹಲವು ಬಗೆಯ ಕಳ್ಳವ್ಯಾಪಾರಸ್ಥರು ಮತ್ತು ಲಾಭ

ಬಡಕರು ಮತ್ತು ಸ್ಫುಟ್ನಿಕ್ ರೀತಿಯಲ್ಲಿರುವ ಇನ್ನಿತರ ಸಮಾಜ ವಿರೋಧಿ ಅಂಗಗಳು. ಉಪಯೋಗಹೊಂದುವವರು–ಸಮಾಜದ ದುರ್ಬಲವರ್ಗದವರನ್ನೊಳಗೊಂಡು ಬಹುಸಂಖ್ಯಾತ ಸಾಮಾನ್ಯ ಜನತೆ, ಪರಿಶಿಷ್ಟ ಜಾತಿಯವರು ಮತ್ತು ಪರಿಶಿಷ್ಟ ಜನಾಂಗದವರು ಮುಂತಾದವರು. ಇಪ್ಪತ್ತಂಶ ಕಾರ್ಯಕ್ರಮದಿಂದ ಆಗಬಹುದಾದ ಒಂದು ಪರಿಣಾಮವೆಂದರೆ–ದಲಿತವರ್ಗದ ಮತದಾರರನ್ನು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಬಲಗೊಳಿಸುವುದು, ಅಂದರೆ ಅವರು ರಾಜಕಾರಣದಲ್ಲಿ ತಮ್ಮ ಮತಗಳನ್ನು ಪರಿಣಾಮಕಾರಿಯಾಗಿ ಉಪಯೋಗಿಸುವರು, ಮತ್ತು ಈ ದಿಶೆಯಲ್ಲಿ ಸ್ವಲ್ಪೇ ಅವಧಿಯಲ್ಲಿ ಅಂದರೆ ಸುಮಾರು ಹತ್ತು ವರ್ಷಗಳಲ್ಲಿ ಬದಲಾವಣೆಯನ್ನು ಕಾಣಬಹುದಾಗಿದೆ ಎಂದು ಅವರು ಹೇಳಿದರು. ಇಪ್ಪತ್ತಂಶ ಕಾರ್ಯಕ್ರಮ ಸಾಧಿಸುವಲ್ಲಿ ನಮಗೆ ಯಾವುದೇ ಬಗೆಯ ಎರಡನೆಯ ವಿಚಾರ ಇರಬಾರದು ಎಂದು ಅಭಿಪ್ರಾಯಪಟ್ಟರು. ಈ ವಿಷಯದಲ್ಲಿ ನಾವು ಎರಡು ಭಾಷೆಗಳನ್ನಾಡಬಾರದು. ಪ್ರಗತಿಗಾಮಿ ನಿರ್ಣಯಗಳನ್ನು ಮತ್ತು ಪ್ರಗತಿಗಾಮಿ ನೀತಿಗಳನ್ನು ಘೋಷಿಸಿದ ಮೇಲೆ ಅವುಗಳ ಕಾರ್ಯಾಚರಣೆಯಲ್ಲಿ ಯಾವುದೇ ರೀತಿಯಲ್ಲಿ ಕುಂಠಿತವಾಗಬಾರದು. ಪ್ರಗತಿಗಾಮಿಯ ಸ್ತರ ಮತ್ತು ಎತ್ತರವನ್ನು ನಾವು ಕಾಯ್ದುಕೊಳ್ಳಬೇಕಲ್ಲದೆ ಇಪ್ಪತ್ತಂಶದ ಕಾರ್ಯಕ್ರಮದ ಬಲ ಮತ್ತು ಶುದ್ಧಿಗಳು ಅವುಗಳನ್ನು ಕಾರ್ಯಗೊಳಿಸುವಾಗ ಕರಗಿ ನೀರಾಗದಂತೆ ನೋಡಿಕೊಳ್ಳಬೇಕು. ಡಾ. ಎನ್. ಎ. ಪಾಟೀಲ, ಡಾ. ವ್ಹಿ. ಎನ್. ದೇಶಪಾಂಡೆ, ಡಾ. ಆರ್. ಟಿ. ಜಂಗಮ, ಡಾ. ಎಮ್. ಎಫ್. ಕರೆಣ್ಣವರ, ಡಾ. ಎಸ್. ಕೆ. ಕಡೆತೋಟದರು ಮುಂದುವರಿದ ಚರ್ಚೆಯಲ್ಲಿ ಭಾಗವಹಿಸಿದರು. ಇಪ್ಪತ್ತಂಶದ ಕಾರ್ಯಕ್ರಮದಿಂದ ಆಡಳಿತದಲ್ಲಿ ಏನಾದರೂ ಬದಲಾವಣೆಯಾಗುವದೇ ಎಂದು ಡಾ. ಎನ್. ಎ. ಪಾಟೀಲರು ವಿಚಾರಿಸಿದರು. ಡಾ. ಎಮ್. ಎಫ್. ಕರೆಯಣ್ಣವರು ಮರೇವಾಡ ಗ್ರಾಮದ ತಮ್ಮ ವಿಶೇಷ ಅಧ್ಯಯನದ ಅನುಭವವನ್ನು ಉದ್ಧರಿಸಿದರು. ಡಾ. ಎಸ್. ಕೆ. ಕಡೆತೋಟದರು ಕಾರ್ಯಕ್ರಮದ ಪರಿಣಾಮವು ಎಲ್ಲಾ ಕಡೆ ಅಥವಾ ಎಲ್ಲಾ ಹಳ್ಳಿಗಳಲ್ಲಿ ಒಂದೇ ತೆರನಾಗಿ ಇರಲಾರದೆಂದು ಹೇಳಿದರು. ಡಾ. ಕೆ. ರಾಘವೇಂದ್ರರಾವ್‌ರು ಈ ಎಲ್ಲ ಅಂಶಗಳನ್ನು ಗ್ರಹಿಸಿ ಇಪ್ಪತ್ತಂಶ ಕಾರ್ಯಕ್ರಮವನ್ನು ನಂಬುಗೆಯ ರೀತಿಯಲ್ಲಿ ಕಟ್ಟುನಿಟ್ಟಾಗಿ ಕಾರ್ಯರೂಪದಲ್ಲಿ ತರುವ ಅವಶ್ಯಕತೆಯನ್ನು ಒತ್ತಿಹೇಳಿದರು, ಅಂದರೆ ಅದು ನಿಜವಾದ ಕ್ರಾಂತಿಯತ್ತ ಧಾವಿಸುವದು, ಕೇವಲ ಸುಧಾರಣೆಯೆಡೆಗಲ್ಲ.

ಮೂರನೆಯ ಲೇಖನ : "ಇಪ್ಪತ್ತಂಶದ ಆರ್ಥಿಕ ಕಾರ್ಯಕ್ರಮ ಮತ್ತು ರಾಷ್ಟ್ರದ ಆರ್ಥಿಕತೆ"ಯನ್ನು ಪ್ರೊ. ಎಮ್. ಸಿ. ಕೊಡ್ಲಿ ಮತ್ತು ಶ್ರೀ ಎಮ್.

ಬಸವನಗೌಡರು ಸಾದರಪಡಿಸಿದರು. ಪ್ರೊ. ಎಂ. ಸಿ. ಕೊಡ್ಲಿಯವರು ಅಂಕಿ ಸಂಖ್ಯೆಗಳೊಂದಿಗೆ ತುರ್ತುಪರಿಸ್ಥಿತಿಯ ಘೋಷಣೆ ಮತ್ತು ಇಪ್ಪತ್ತಂಶ ಕಾರ್ಯ ಕ್ರಮಗಳಿಂದ ಇಡೀ ರಾಷ್ಟ್ರದ ಆರ್ಥಿಕತೆಯ ಮೇಲುಂಟಾಗುವ ಬಲಸಂವರ್ಧಕ ಪರಿಣಾಮವನ್ನು ವಿವೇಚಿಸಿದರು. ಇದರಿಂದ ರಾಷ್ಟ್ರೀಯ ಆದಾಯ ಶೇಕಡಾ ಏಳರಷ್ಟು (೭%) ಹೆಚ್ಚಿದೆ. ೧೯೭೬ ರ ಪ್ರಥಮ ಕಾಲು ಭಾಗದಲ್ಲಿ ಔದ್ಯೋಗಿಕ ರಂಗದಲ್ಲಿಯ ಬೆಳವಣಿಗೆಯು ಶೇಕಡಾ ಹತ್ತರಷ್ಟು (೧೦%) ಆಗಿದ್ದಿತು. ಇದು ಲೈಸೆನ್ಸ್ ನೀಡುವ ವಿಧಾನದ ಬದಲಾವಣೆಯಿಂದುಂಟಾಗಿದೆ. ಕಲ್ಲಿದ್ದಲಿಯ ಉತ್ಪಾದನೆಯು ತೊಂಬತ್ತೆಂಟು ಮಿಲಿಯನ್ ಟನ್‌ಗೆ ಏರಿದೆ. ಪೆಟ್ರೋಲಿಯಮ್ ಉತ್ಪಾದನೆಯಲ್ಲಿ ಏಳು ಮಿಲಿಯನ್ ಟನ್‌ನ ಗುರಿಮುಟ್ಟಿದೆ. ಮುಂಬಯಿ ಅಖಾತದ ಪೆಟ್ರೋಲಿಯಮ್ ಉತ್ಪಾದನೆಯು ಮುಂದಿನ ಹಲವು ವರ್ಷಗಳಲ್ಲಿ ಸ್ವಯಂ ಪರಿಪೂರ್ಣತೆ ಮುಟ್ಟುವ ನಿರೀಕ್ಷೆಯಿದೆ. ಕೃಷಿ ಉತ್ಪಾದನೆ ಅಂದರೆ ಆಹಾರ ಉತ್ಪಾದನೆ ನೂರಾಹದಿನೈದು ಮಿಲಿಯನ್ ಟನ್‌ನ ಉತ್ಕೃಷ್ಟ ಅಂಕಿಯನ್ನು ಮುಟ್ಟಿದೆ. ಇದು ಇಲ್ಲಿಯವರೆಗೆ ಅತಿ ಹೆಚ್ಚಿನ ದಾಖಲೆಯಾಗಿದೆ. ನಿರ್ಯಾತ ಮತ್ತು ಹಣಕಾಸಿನ ಸಮತೋಲನ ಸ್ಥಿತಿ ಚೆನ್ನಾಗಿದೆ. ರೂಪಾಯಿಯ ಮೌಲ್ಯ ಏರಿದೆ ಮತ್ತು ಬೆಲೆಗಳು ಸರಿಯಾದ ಸ್ಥಾನದಲ್ಲಿ ಸ್ಥಿರಗೊಂಡಿವೆ. ಸಾಕಷ್ಟು ಪ್ರಮಾಣದಲ್ಲಿ ಕಪ್ಪುಹಣ ಬೈಲಿಗೆ ಬಂದಿದೆ ಮತ್ತು ಅದನ್ನು ಆರ್ಥಿಕತೆಯ ಹಲವು ರಂಗಗಳಲ್ಲಿ ಸರಿಯಾಗಿ ತೊಡಗಿಸಲಾಗಿದೆ. ಒಟ್ಟಿನಲ್ಲಿ ಇಪ್ಪತ್ತಂಶ ಕಾರ್ಯಕ್ರಮದ ಪ್ರಭಾವದಿಂದ ಭಾರತದ ಆರ್ಥಿಕತೆಯು ನಿಜವಾಗಿಯೂ ಸರಿಯಾಗಿ ಆರೋಗ್ಯಕರವಾಗಿದ್ದು ನೈಪುಣ್ಯವಾಗಿಯೂ ಮತ್ತು ಉತ್ಪಾದಕರವಾಗಿಯೂ ಇರುವುದು. ಮುಂದುವರೆದ ಚರ್ಚೆಯಲ್ಲಿ ಡಾ. ಕೆ. ರಾಘವೇಂದ್ರರಾವ್, ಡಾ. ಎಚ್. ಎಫ್. ಕರೆಣ್ಣವರ, ಡಾ. ವ್ಹಿ. ಎನ್. ದೇಶಪಾಂಡೆ, ಡಾ. ಬಿ. ಆರ್. ಪಾಟೀಲ, ಡಾ. ಶಂಕರ ಮೊಕಾಶಿ ಪುಣೇಕರ, ಪ್ರೊ. ಸಿ. ಬಿ. ತಿಗಡಿ, ಮತ್ತು ಡಾ. ಆರ್. ಟಿ. ಜಂಗಮ ಭಾಗವಹಿಸಿದರು. ಡಾ. ವ್ಹಿ. ಎನ್. ದೇಶಪಾಂಡೆಯವರು ರಾಷ್ಟ್ರದ ಆರ್ಥಿಕತೆಯ ಬೆಳವಣಿಗೆಯ ಮತ್ತು ಆ ಬೆಳವಣಿಗೆಯನ್ನು ಕಾಯ್ದುಕೊಳ್ಳುವ ಅವಶ್ಯಕತೆಯ ಪ್ರಾಮುಖ್ಯತೆಯನ್ನು ವಿವರಿಸಿದರು. ಯಾವುದೇ ದೇಶದಲ್ಲಿಯಾದರೂ ತುರ್ತುಪರಿಸ್ಥಿತಿಯ ಪ್ರಥಮ ಪ್ರಭಾವವು ಉತ್ಪಾದನೆಯನ್ನು ಮತ್ತು ಆರ್ಥಿಕತೆಯ ಗುಣಮಟ್ಟವನ್ನು ಸುಧಾರಿಸುವುದು ತದನಂತರ, ಸುಧಾರಣೆ ಅಥವಾ ವೇಗದಲ್ಲಿ ಸ್ವಾಭಾವಿಕವಾಗಿ ಇಳಿತರವಾಗುವುದೆಂದು ವಾದಿಸಲಾಯಿತು. ಆ ಕಾರಣದಿಂದ ಇಪ್ಪತ್ತಂಶ ಕಾರ್ಯಕ್ರಮದ ಆರ್ಥಿಕತೆಯಿಂದುಂಟಾದ ಈ ಉಚ್ಛ ವೇಗವನ್ನು ಆರ್ಥಿಕ

ಮತ್ತು ಔದ್ಯೋಗಿಕ ಬೆಳವಣಿಗೆಯು ಭಾರತದ ರಾಷ್ಟ್ರೀಯ ಜೀವನದಲ್ಲಿ ಸ್ಥಿರವಾಗುವವರೆಗೆ ಕಡಿಮೆಯಾಗದಂತೆ ನೋಡಿಕೊಳ್ಳಬೇಕು.

ಸ್ವಾರ್ಟಿರೀತಿಯ ಸರಳ ಭೋಜನದ ನಂತರ, ನಾಲ್ಕನೆಯ ಲೇಖನ: "ಹೊಸ ಹಂಚುವಿಕೆ ಮತ್ತು ಔದ್ಯೋಗಿಕ ಸಂಬಂಧಗಳು" ಇದನ್ನು ಡಾ.ಬಿ. ಆರ್. ಪಾಟೀಲರು ಸಾದರಪಡಿಸಿದರು. ಅವರು ಔದ್ಯೋಗಿಕ ಸಂಬಂಧಗಳ ಚಿತ್ರಣ ಮತ್ತು ಕಾರ್ಮಿಕ ಕಲ್ಯಾಣವನ್ನು ತುರ್ತುಪರಿಸ್ಥಿತಿ ಮತ್ತು ಇಪ್ಪತ್ತಂಶ ಕಾರ್ಯಕ್ರಮದ ಹಿನ್ನೆಲೆಯಲ್ಲಿ ವಿವರಿಸಿದರು. ಇಪ್ಪತ್ತಂಶ ಕಾರ್ಯಕ್ರಮದ ಅಂಗವಾಗಿ ಕಾರ್ಮಿಕ ಕಲ್ಯಾಣದಲ್ಲಿ ತನಗೆ ಸಾಕಷ್ಟು ಆಸಕ್ತಿ ಇರುವುದಾಗಿ ಸರಕಾರವು ಸ್ಪಷ್ಟಪಡಿಸಿದೆ. ಮತ್ತು ಕಾರ್ಮಿಕರು ಪಡೆಯುವ ಹಲವು ವಿಧದ ವೇತನಗಳಲ್ಲಿ ಅಸಮತೆಯಿರುವುದನ್ನು ಕಂಡುಕೊಂಡಿದೆ. ಗರಿಷ್ಠ ಕಾರ್ಮಿಕ ಕಲ್ಯಾಣ ಮತ್ತು ವೇತನಗಳಲ್ಲಿಯ ಅಸಮತೆಯನ್ನು ಕಡಿಮೆಗೊಳಿಸಲು ಹಲವು ಕ್ರಮಗಳನ್ನು ಕೈಗೊಳ್ಳುವುದಾಗಿ ಆಶ್ವಾಸನೆಯಿತ್ತಿದೆ. ಔದ್ಯೋಗಿಕ ಶಾಂತತೆಯ ಖಚಿತದತ್ತ, ಒಳ್ಳೆಯ ಆಡಳಿತ ಮತ್ತು ಕಾರ್ಮಿಕ ಸಂಬಂಧಗಳತ್ತ, ಹೆಚ್ಚು ಉತ್ಪಾದನಾ ಸಾಮರ್ಥ್ಯ ಮತ್ತು ಉತ್ಪಾದನೆಯತ್ತ ಕಾರ್ಮಿಕ ಶ್ರಮವು ತನ್ನ ಸರಿಯಾದ ಪಾತ್ರವನ್ನಾಡುವಂತೆ ಕೇಳಿಕೊಳ್ಳಬೇಕು. ತನ್ನ ತೊಂದರೆಗಳನ್ನು ಮತ್ತು ಬೇಡಿಕೆಗಳನ್ನು ನಿರ್ಧರಿಸುವಲ್ಲಿ ಅಸಂವೇದನಾತ್ಮಕ ಪದ್ಧತಿಗಳಾದ ಹರತಾಳಗಳನ್ನು, ಅಕ್ರಮಗಳನ್ನು, ಬಂದುಮಾಡುವುದು ಮುಂತಾದವುಗಳನ್ನು ಬಿಟ್ಟುಕೊಡಲು ಅದನ್ನು ಕೇಳಿಕೊಳ್ಳಬೇಕು. ಭಾರತದಲ್ಲಿ ಕಾರ್ಮಿಕ ಸಂಘದ ಚಳುವಳಿಯ ಇತಿಹಾಸವನ್ನು ವಿವರಿಸುತ್ತಾ ಡಾ. ಪಾಟೀಲರು ಅದು ಮುಖ್ಯವಾಗಿ ಸಾಮ್ರಾಜ್ಯಶಾಹಿ ಮತ್ತು ಬಂಡವಾಳಶಾಹಿ ಲಕ್ಷಣ ಹೊಂದಿದೆ ಎಂದು ಹೇಳಿದರು. ಕಾರ್ಮಿಕ ಸಂಘ ಚಳುವಳಿಯು ಹಲವು ರಾಜಕೀಯ ಪಕ್ಷಗಳ ಕಾರ್ಮಿಕರ ಅಂಗವಾಗಿ ಬೆಳೆದುಬಂದಿದೆ. ಡಾ. ಪಾಟೀಲರು ಭಾರತ ರಾಷ್ಟ್ರೀಯ ಕಾರ್ಮಿಕ ಸಂಘ ಪರಿಷತ್ತನ್ನೊಳಗೊಂಡು ಹಲವು ಕಾರ್ಮಿಕ ಸಂಘಗಳ ಉದಾಹರಣೆಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿದರು. ಹಲವು ತೊಂದರೆಗಳನ್ನು ನಿವಾರಿಸಲು ಮತ್ತು ಆಡಳಿತವರ್ಗ ಮತ್ತು ಕಾರ್ಮಿಕರ ಮಧ್ಯದಲ್ಲಿ ಉತ್ತಮ ಸಂಬಂಧಗಳನ್ನು ಕಲ್ಪಿಸಲು ಸರ್ಕಾರವು ಹಲವು ಸಂಘ ಸಂಸ್ಥೆಗಳನ್ನು ಸ್ಥಾಪಿಸಿದುದನ್ನು ಅವರು ಸಕ್ಷಿಪ್ತವಾಗಿ ವಿವರಿಸಿದರು. ಅದರಲ್ಲಿಯೂ ಮುಖ್ಯವಾಗಿ ಕಾರ್ಮಿಕ ಸಂಘಗಳ ಹೊರಗಿನ ವೃತ್ತಿ ಮುಖಂಡರನ್ನುಳಿದು ಆಡಳಿತ ಮತ್ತು ಕಾರ್ಮಿಕರಿಂದ ಬಂದ ಸಮ ಸಂಖ್ಯೆಯ ಪ್ರತಿನಿಧಿಗಳಿದ್ದ ಜಂಟಿ ಮತ್ತು ಸಹಕಾರಿ ಮಂಡಳಗಳ ಬಗೆಗೆ ಅವರು ವಿವೇಚಿಸಿದರು. ಈ ಮಂಡಳಿಗಳ ಕೆಲಸವು

ಯೋಜನೆ ಮತ್ತು ಸಹಕಾರಗಳೆರಡೂ ಮಟ್ಟಗಳಲ್ಲಿ ಹಲವು ನಿರ್ಣಯಗಳನ್ನು ಕೈಕೊಂಡು ಕಾರ್ಯರೂಪದಲ್ಲಿ ತರುವುದಾಗಿದೆ. ಈ ನಿರ್ಣಯಗಳು, ಶ್ರಮಿಕರ ತೊಂದರೆಗಳು ಅಥವಾ ಸಮಸ್ಯೆಗಳ ಬಗೆಗೆ, ಉತ್ಪಾದನಾ ಗಾತ್ರ, ಗುಣ ನಿಯಂತ್ರಣ, ಗೈರುಹಾಜರಿ ಮತ್ತು ಈ ರೀತಿಯ ಇನ್ನುಳಿದ ಸಮಸ್ಯೆಗಳಿಗೆ ಸಂಬಂಧಿಸಿರುವವು. ಇಪ್ಪತ್ತಂಶ ಕಾರ್ಯಕ್ರಮದಂಗವಾಗಿ ಕಳೆದ ಒಂದು ವರ್ಷದಲ್ಲಿ ಸರ್ಕಾರ, ಕಾರ್ಮಿಕ ಶಾಸನದ ಸಂಬಂಧ ಕೈಕೊಂಡ ಹಲವು ಕ್ರಮ ಗಳ ಸಂಕ್ಷಿಪ್ತ ವಿಮರ್ಶೆಯನ್ನು ಡಾ. ಪಾಟೀಲರು ಕೊಟ್ಟರು. ಕಾರ್ಮಿಕ ಕಾಯ್ದೆಗಳಿಗೆ ಹಲವು ತಿದ್ದುಪಡಿಗಳನ್ನು ಸೂಚಿಸಲಾಗಿದೆ. ಕಾರ್ಮಿಕ ಶಾಸನದ ಒಂದು ಪ್ರಮುಖ ಅಂಶವೆಂದರೆ–ಬೋನಸ್ಸು ಉತ್ಪಾದನೆಗೆ ಸಂಬಂಧಿಸಿರು ವುದು, ವೇತನಕ್ಕೆ ಅಲ್ಲ ಎಂಬುದನ್ನು ಘೋಷಿಸುವುದು. ಇದನ್ನೇ ಬೇರೆ ಮಾತಿನಲ್ಲಿ ಹೇಳಬೇಕಾದರೆ, ಬೋನಸ್ಸು ಒಂದು ರೀತಿಯ ಹಕ್ಕಿನ ವೇತನ ವೆಂದು ತಿಳಿಯಬಾರದೆಂದು ಕಾರ್ಮಿಕರಿಗೆ ತಿಳಿಸಲಾಗಿದೆ. ಅದನ್ನು ಲಾಭ ಹಂಚುವಿಕೆಯ ಅಂಶವೆಂದು ಅವರು ಭಾವಿಸಬೇಕು. ಅವರು ಹೆಚ್ಚು ಉತ್ಪಾದನಾ ಸಾಮರ್ಥ್ಯ ಮತ್ತು ಹೆಚ್ಚು ಉತ್ಪನ್ನ ಸಾಧಿಸಿದರೆ ಮಾತ್ರ ಅವರಿಗೆ ಬೋನಸ್ಸು ಲಾಭಾಂಶವಾಗಿ ಸಿಗುವಂತಿರಬೇಕು ಮತ್ತು ಆ ಮುಖಾಂತರ ಇಡೀ ಯೋಜನೆಯು ಲಾಭ ಪಡೆಯುವಂತಿರಬೇಕು. ಶಾಸನದ ಇನ್ನೊಂದು ಅಂಶ ವೆಂದರೆ, ಮಾಲೀಕರು ಮುಖ್ಯವಾಗಿ ಬಹುಸಂಖ್ಯಾತ ಕಾರ್ಮಿಕರನ್ನು ನೇಮಿಸಿ ಕೊಳ್ಳುವವರು–ಯಾವುದೇ ಕಾರಣಗಳಿಂದ ತಮ್ಮ ಯೋಜನೆಗಳನ್ನು ಅಥವಾ ಕಾರ್ಖಾನೆಗಳನ್ನು ಮುಚ್ಚುವ ಮೊದಲು ಸರಕಾರಕ್ಕೆ ಮತ್ತು ಕಾರ್ಮಿಕರಿಗೆ ಮುಂಗಡ ಸೂಚನೆ ಕೊಡಬೇಕಾಗುವುದು. ಈ ಶಾಸನವು ಉದಾಹರಣಾರ್ಥ ವಾಗಿ ಮೂರುನೂರು ಅಥವಾ ಹೆಚ್ಚು ಕಾರ್ಮಿಕರನ್ನು ನೇಮಿಸಿಕೊಳ್ಳುವ ಕಾರ್ಖಾನೆ ಮಾಲೀಕರಿಗೆ ಸಂಬಂಧಿಸಿರುವುದು. ಮೊದಲಿಗೆ ಯಂತ್ರಗಳ ರಿಪೇರಿ ಅಥವಾ ಯಾಂತ್ರಿಕ ದೋಷಗಳ ಕಾರಣದಿಂದ ಕಾರ್ಖಾನೆಯು ಬಂದಾದರೆ ಪರಿ ಹಾರವೆಂದು ಕಾರ್ಮಿಕರಿಗೆ ಸುಮಾರು ಅರ್ಧದಷ್ಟು ಅವರ ವೇತನ ಕೊಡಲಾ ಗುತ್ತಿತ್ತು. ಈಗ ಅಂಥ ಸಂದರ್ಭಗಳಲ್ಲಿ ಕಾರ್ಮಿಕರಿಗೆ ಪೂರ್ತಿ ವೇತನ ಕೊಡಬೇಕಾಗುವುದು. ಡಾ. ಪಾಟೀಲರು ರಾಜ್ಯದಲ್ಲಿಯ ಮಾಲೀಕರ ಇನ್ನುಳಿದ ಹಲವು ಜವಾಬ್ದಾರಿಗಳ ಬಗೆಗೆ ಮತ್ತು ಜೀತ ಪದ್ಧತಿಗಳ ಬಗೆಗೆ ಹೇಳಿದರು. ಡಾ. ಎಮ್. ಎಫ್. ಕರೆಣ್ಣವರ ಮತ್ತು ಇತರರು, ಮುಂದುವರೆದ ಚರ್ಚೆ ಯಲ್ಲಿ ಭಾಗವಹಿಸಿದರು ಮತ್ತು ಡಾ. ಪಾಟೀಲರು ಚರ್ಚೆಯಲ್ಲಿ ಎತ್ತಿದ ವಿಷಯ ಗಳಿಗೆ ವಿವರಣೆಯನ್ನಿತ್ತರು.

ಐದನೇ ಲೇಖನ : "ಇಪ್ಪತ್ತಂಶ ಕಾರ್ಯಕ್ರಮದ ಆಡಳಿತಾತ್ಮಕ ಸಮಸ್ಯೆಗಳು". ಇದನ್ನು ಡಾ. ಆರ್. ಟಿ. ಜಂಗಮ್ ಸಾದರಪಡಿಸಿದರು. ಡಾ. ಕೆ. ರಾಘವೇಂದ್ರರಾವ್‌ರಂತೆ ಡಾ. ಆರ್. ಟಿ. ಜಂಗಮರು, ಇಪ್ಪತ್ತಂಶ ಕಾರ್ಯಕ್ರಮದ ಸತ್ಯತೆ ಮತ್ತು ಉಪದೇಶಪರತೆಯನ್ನು ಒಪ್ಪಿಕೊಂಡು, ಈ ಇಪ್ಪತ್ತಂಶ ಕಾರ್ಯಕ್ರಮದ ಮುಂದುವರಿಕೆಯ ಮತ್ತು ಉತ್ತಮ ಕಾರ್ಯದತ್ತ ಹಲವು ಮುಖ್ಯ ಕಾರ್ಯಕ್ರಮಗಳನ್ನು ವಿವರಿಸುವತ್ತ ಮುಂದುವರೆದರು. ಆಡಳಿತಗೆ ಕಾರ್ಮಿಕರ ಸಂಬಂಧಿಸಿದ ವರ್ಗೀಕೃತ ಮಂಡಳಿ ಇರಬೇಕು. ಅದು ಇಪ್ಪತ್ತಂಶ ಕಾರ್ಯಕ್ರಮಕ್ಕೆ ಸಂಬಂಧಪಟ್ಟ ಹಲವಾರು ಅವಶ್ಯಕ ಕಾರ್ಯಗಳನ್ನು ನೆರವೇರಿಸುವುದೆಂದು ಅವರು ಹೇಳಿದರು. ಈಗಿರುವ ಆಡಳಿತವು ಇಪ್ಪತ್ತಂಶ ಕಾರ್ಯಕ್ರಮದ ವಿಶೇಷ ಹೊಣೆಯನ್ನು ನಿರ್ವಹಿಸಲು ಸಫಲವಾಗಿಲ್ಲ. ಮೊದಲನೆಯದಾಗಿ, ಇದು ಬ್ರಿಟೀಷರಿಂದ ಬಳುವಳಿಯಾಗಿ ಬಂದ ವಸಾಹತು ಆಡಳಿತವಾಗಿದೆ. ಎರಡನೆಯದಾಗಿ, ಸಾರ್ವಜನಿಕ ಆಡಳಿತದಲ್ಲಿ ಒಂದು ಬಗೆಯ ಸುಧಾರಣೆಯಾಗಿದೆ. ಆದರೆ ಪುನರ್ಘಟನೆಯಲ್ಲಿ ಮತ್ತು ಹೊಂದಾಣಿಕೆಯಲ್ಲಿ ನಿಜವಾದ ಕ್ರಾಂತಿಯಾಗಿಲ್ಲ. ಮೂರನೆಯದಾಗಿ, ಆಡಳಿತಗಾರರಲ್ಲಿ ಒಂದು ರೀತಿಯ ಕಾರ್ಯತತ್ಪರತೆಯ ಕೊರತೆಯಿದೆ ಮತ್ತು ಕಾರ್ಯನಿರ್ವಹಿಸುವಲ್ಲಿ ಪರಾವಲಂಬನೆ ಇದೆ. ಈ ಗುಣಗಳು ಭಾರತದ ಕೆಲ ಜನತೆಯಲ್ಲಿ ಮತ್ತು ಸೈನಿಕರಲ್ಲಿ ಕಂಡುಬಂದಿರುವುದು ದುರದೃಷ್ಟಕರ. ಆದರೆ ಈ ಗುಣಗಳು ಭಾರತೀಯ ಆಡಳಿತೆಯ ಬಹು ಪ್ರಮಾಣದ ಸಿಬ್ಬಂದಿಯಲ್ಲಿ ಇಲ್ಲ. ಆದಕಾರಣ ಶಿಸ್ತು, ನಂಬಿಗೆ ಮತ್ತು ನೈಪುಣ್ಯತೆಯತ್ತ ಸಿಬ್ಬಂದಿಗೆ ತರಬೇತಿ ನೀಡಿ ಅಣಿಗೊಳಿಸುವುದು ಅವಶ್ಯವಿದೆ. ಅಂದರೆ ಇಪ್ಪತ್ತಂಶ ಕಾರ್ಯಕ್ರಮವನ್ನು ಕಾರ್ಯಗೊಳಿಸಲು ಅವರು ಸಶಕ್ತರಾಗುವರು. (೧) ದೇಶದ ನಾನಾ ಭಾಗಗಳಲ್ಲಿ ಹಲವಾರು ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ, ವಿಶೇಷ ಸಂಘ ಸಂಸ್ಥೆಗಳಲ್ಲಿ ಅವಶ್ಯಕ ತರಬೇತಿಯನ್ನು ಸಂಘಟಿಸಿ ನೀಡಬೇಕೆನಿಸಿದೆ. (೨) ನಂತರದ ಹಂತಗಳಲ್ಲಿ ಸಾರ್ವಜನಿಕ ಆಡಳಿತದ ಅಂಗದಲ್ಲಿ ನವ್ಯ ಮತ್ತು ಗರಿಷ್ಠ ದುಡಿಯುವ ವೇಳೆಯನ್ನು ಸಂಘಟಿಸಿ ಪಡೆಯಬೇಕಾಗಿದೆ. ಆಡಳಿತವನ್ನು ಗುರಿಗಳು ಮತ್ತು ಸಾಧನೆಯತ್ತ ಅಣಿಗೊಳಿಸಬೇಕಾಗಿದೆ. ಆಡಳಿತೆಯಲ್ಲಿಯ ಹಲವಾರು ಅನಾವಶ್ಯಕಗಳ ಬಗೆಗೆ ಯಾಂತ್ರಿಕ ಅಥವಾ ಇನ್ನಿತರ ಅನಿಷ್ಟಗಳ ಬಗೆಗೆ ವ್ಯಯವಾಗುವ ಉತ್ಪನ್ನಗಳ ಬಗೆಗೆ ಲಕ್ಷವೇ ಇಲ್ಲವೆಂದು ವಾದಿಸಲಾಯಿತು. ಆಡಳಿತೆ ಮತ್ತು ಸಿಬ್ಬಂದಿಯು, ಆಡಳಿತೆಯ ಮೂಲ ಕರ್ತವ್ಯಗಳ ಸಂಬಂಧ ಒಂದು ಒಪ್ಪಂದಕ್ಕೆ ಬರಬೇಕು ಮತ್ತು ಅವರು ಅವನ್ನು ಅತಿ ನೈಪುಣ್ಯ ಮತ್ತು ಮಿತವ್ಯಯ ರೀತಿಯಲ್ಲಿ

ಕೈಗೊಳ್ಳಬೇಕು. ಈ ಸಂದರ್ಭದಲ್ಲಿ ಅವರು ಪಶ್ಚಿಮ ಜರ್ಮನಿಯ ಹಲವು ಸಂಸ್ಥೆಗಳಲ್ಲಿ ಮತ್ತು ಮುಂಬಯಿಯ ಹಲವು ಕಂಪನಿಗಳಲ್ಲಿ ಪ್ರಯೋಗಿಸಿದ ಕೆಲಸದ ವೇಳೆಯಲ್ಲಿಯ ಬದಲಾವಣೆಯ ವಿಧಾನವನ್ನೊಳಗೊಂಡು ಹಲವಾರು ಸುಧಾರಣೆಗಳನ್ನು ಮತ್ತು ವಿಧಾನಗಳನ್ನು ಸೂಚಿಸಿದರು. ಅಂಥ ನವ್ಯ ಮತ್ತು ಗರಿಷ್ಠ ವೇಳೆಯನ್ನು ಹಲವು ಸಂದರ್ಭಗಳಲ್ಲಿ ಭಾರತ ಆಡಳಿತೆಯ ಸಿಬ್ಬಂದಿ ಅಳವಡಿಸಿಕೊಂಡಿದ್ದನ್ನು ಒತ್ತಿ ಹೇಳಲಾಯಿತು. ಭಾರತ ಆಡಳಿತಕ್ಕೆ ಇದೇನು ಹೊಸದಲ್ಲ. ಸಾರ್ವಜನಿಕ ಆಡಳಿತರಂಗದಲ್ಲಿ ಈ ನವ್ಯ ಮತ್ತು ಗರಿಷ್ಠ ಕಾರ್ಯವೇಳಾಪದ್ಧತಿಯನ್ನು ಸ್ಥಿರವಾಗಿ ಮತ್ತು ಸಾರ್ವತ್ರಿಕವಾಗಿ ಕೈಕೊಳ್ಳುವುದು ಅವಶ್ಯ. (೩) ಮೂರನೆಯ ಸೂಚನೆ ಎಂದರೆ ವಿವಿಧ ಕರ್ತವ್ಯ ಮತ್ತು ಕೆಲಸಗಳನ್ನು ಸಮರ್ಪಕವಾಗಿ ವಿಂಗಡಿಸಬೇಕು ಮತ್ತು ಆಡಳಿತೆಯಲ್ಲಿಯ ವಿವಿಧ ಸಿಬ್ಬಂದಿಯವರು ಮತ್ತು ಇಪ್ಪತ್ತಂಶ ಕಾರ್ಯಕ್ರಮದಲ್ಲಿ ತೊಡಗಿದವರು ಬೇರೆ ಕಡೆಗೆ ತಿರುಗಾಡದೇ, ತಮಗೆ ಸಂಬಂಧವಿಲ್ಲದ ಇನ್ನುಳಿದವರ ಕಾರ್ಯದಲ್ಲಿ ತೊಡಗದೇ ತಮ್ಮದೇ ಆದ ಕರ್ತವ್ಯನಿರ್ವಹಣೆಯಲ್ಲಿ ನಿರತರಾಗಿರಬೇಕು. ಉದಾಹರಣಾರ್ಥವಾಗಿ ವಿದ್ಯಾರ್ಥಿಗಳು ಮತ್ತು ಪ್ರಾಧ್ಯಾಪಕರು ತಮ್ಮ ಪಾಠ, ಸಂಶೋಧನೆ ಮತ್ತು ತಮ್ಮ ವಿಚಾರ ಹಾಗೂ ಪ್ರಭಾವಗಳ ಮುಖಾಂತರ ಸಮಾಜವನ್ನು ಕಟ್ಟುವತ್ತ ಗಮನವೀಯಬೇಕು. ಅದರ ಬದಲು ವಿಚಾರಹೀನರಾಗಿ ಬಾವಿ ತೋಡುವುದು, ಕೊಳಚೆ ನಿವಾರಣೆಮಾಡುವುದು, ಅಥವಾ ಪ್ರೌಢ ಶಿಕ್ಷಣ ವರ್ಗಗಳನ್ನು ಕೈಕೊಳ್ಳುವುದನ್ನು ಮಾಡಬಾರದು. ಅವನ್ನು ಕೈಕೊಳ್ಳಲು ಪ್ರತ್ಯೇಕ ಸರ್ಕಾರಿ ವಿಭಾಗಗಳು ಅಥವಾ ಸಂಸ್ಥೆಗಳಿರುವವು. ಅವಶ್ಯವೆನಿಸಿದಲ್ಲಿ ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳು ವಿವಿಧ ಬಗೆಯ ಸಾಮಾಜಿಕ ಕಾರ್ಯಗಳನ್ನು ಕೈಕೊಳ್ಳಬಹುದು. ಸರ್ಕಾರಿ ವಿಭಾಗಗಳು ಮತ್ತು ಇತರ ಅಂಗಗಳನ್ನೊಳಗೊಂಡ ಸಂಯೋಜಿತ ಕಾರ್ಯಕ್ರಮಗಳಲ್ಲಿ ಅವರ ಪಾತ್ರ ಮತ್ತು ಚಟುವಟಿಕೆಗಳು ಸರಿಹೋಗುತ್ತಿದ್ದರೆ ಅವರಿಗೆ ಸ್ವಾಭಾವಿಕವಾಗಿ ಸ್ವಾಗತವಿದೆ. ೪) ನಾಲ್ಕನೆಯ ಸೂಚನೆ ಎಂದರೆ ಇಪ್ಪತ್ತಂಶ ಕಾರ್ಯಕ್ರಮದ ವೇಳೆ ಅಪವ್ಯಯ ಮಾಡುವವರನ್ನು ಮತ್ತು ವಿರೋಧಿಸುವವರನ್ನು ನಿಶ್ಚಿತವಾಗಿ ದಂಡಿಸಬೇಕು. ಚಿಕ್ಕ ಮೀನುಗಳನ್ನು ಹಿಡಿದು ದಂಡಿಸಬಹುದು ಆದರೆ ಇಪ್ಪತ್ತಂಶ ಕಾರ್ಯಕ್ರಮ ಕೈಗೊಳ್ಳುವುದು ಹೆಚ್ಚು ಪರಿಣಾಮಕಾರಿಯಾಗಲಾರದೆಂಬುದನ್ನು ವಿವರಿಸಲಾಯಿತು. ಮುಖ್ಯ ನೀತಿಗಳನ್ನು ಮತ್ತು ಮುನ್ನಡೆಗಳನ್ನು ಆಡಳಿತೆಯಲ್ಲಿಯ ಉಚ್ಚ ಶ್ರೇಣಿಯ ಮುಖಂಡರು ಅಥವಾ ಅಧಿಕಾರಿಗಳು ಕೈಕೊಳ್ಳುವರು. ಇವರು ಹಲವಾರು ನೀತಿಗಳಿಗೆ ಮೂಲರು ಅಥವಾ

ಮುಖ್ಯಸ್ಥರು. ಇಂಥವರು ತಿರುಗಿಬಿದ್ದರೆ ಅವರನ್ನು ತಪ್ಪದೇ ಹಿಡಿದು ಶಿಕ್ಷಿಸಬೇಕು. ಅಂದರೆ ಆಡಳಿತೆಯಲ್ಲಿ ಸಾರ್ವಜನಿಕರ ನಂಬಿಗೆಯನ್ನು ಸ್ಥಿರಗೊಳಿಸಲು, ಇಪ್ಪತ್ತಂಶ ಕಾರ್ಯಕ್ರಮ ಕೈಗೊಳ್ಳಲು, ಸಾರ್ವಜನಿಕ ಬೆಂಬಲವನ್ನು ಹೆಚ್ಚಿಚ್ಚು ಪಡೆಯಲು ಮತ್ತು ಇಪ್ಪತ್ತಂಶ ಕಾರ್ಯಕ್ರಮದ ವಿರೋಧಿಗಳ ಮತ್ತು ತಪ್ಪಿತಸ್ಥರ ವಿರುದ್ಧ ಕ್ರಮಕೈಕೊಳ್ಳಲು ಸರ್ಕಾರಕ್ಕೆ ನೆರವು ಸಿಗುವಲ್ಲಿ ಅನುಕೂಲವಾಗುವುದು. ೫) ಐದನೆಯ ಸೂಚನೆ ಎಂದರೆ ತುರ್ತು ಪರಿಸ್ಥಿತಿ ಮತ್ತು ಇಪ್ಪತ್ತಂಶ ಕಾರ್ಯಕ್ರಮಗಳು ದೀರ್ಘಾವಧಿಯ ವರೆಗೆ ಮುಂದುವರೆಯಬೇಕು, ಅಂದರೆ ಶಿಸ್ತು, ನಂಬಿಗೆ, ಮತ್ತು ನೈಪುಣ್ಯತೆಗಳು ಜನತೆಯಲ್ಲಿ ಒಗ್ಗೂಡಿದ ಅಂಗಗಳಾಗಿ ಸ್ಥಿರವಾಗಿ ಉಳಿಯುವವು. ತುರ್ತು ಪರಿಸ್ಥಿತಿಯನ್ನು ಮುಂದುವರಿಸಬೇಕೆಂದು ಕೇಳಿಕೊಳ್ಳುವಲ್ಲಿ ಏನೂ ತಪ್ಪಿಲ್ಲ ಅಥವಾ ಆಶ್ಚರ್ಯವೇನಲ್ಲ. ಏಕೆಂದರೆ ಈ ಗುಣಗಳನ್ನು ಅಳವಡಿಸಿಕೊಳ್ಳುವುದು ಮತ್ತು ಸ್ಥಿರಗೊಳಿಸುವದು ಕೇವಲ ತುರ್ತುಪರಿಸ್ಥಿತಿಯಲ್ಲಿ ಮತ್ತು ಇಪ್ಪತ್ತಂಶ ಕಾರ್ಯಕ್ರಮದಲ್ಲಿ ಮಾತ್ರ ಶಕ್ಯ.

ಅನಂತರ ಮುಂದುವರೆದ ಚರ್ಚೆಯಲ್ಲಿ ಡಾ. ಕೆ. ರಾಘವೇಂದ್ರರಾವ್‌ರು, ಪ್ರೊ. ಚಂದ್ರಶೇಖರ ಬಂಗ್ಗಿಯವರು, ಮತ್ತು ಇನ್ನಿತರರು ತಮ್ಮ ವಿಚಾರಗಳನ್ನು, ಸೂಚನೆಗಳನ್ನು ಮಂಡಿಸಿದರು.

ಆರನೇ ಲೇಖನ: "ಇಪ್ಪತ್ತಂಶ ಕಾರ್ಯಕ್ರಮದ ಸಂಪರ್ಕದ ಅಂಗಗಳು ವಿವರಣೆ ಮತ್ತು ಸೂಚನೆಗಳು". ಇದನ್ನು ಪ್ರೊ. ಬಿ. ಬಿ. ಹುನಗುಂದ ಮತ್ತು ಡಾ. ಆರ್. ಟಿ. ಜಂಗಮರು ಸಾದರ ಪಡಿಸಿದರು. ಇಪ್ಪತ್ತಂಶ ಕಾರ್ಯಕ್ರಮ ಕೈಕೊಳ್ಳುವಲ್ಲಿ ಸಂಪರ್ಕವು ಜಂಜಾಟವಾದ್ದಾದರೂ ಅತ್ಯವಶ್ಯಕವಾದ ಒಂದು ವಿಧಾನವಾಗಿದೆ ಎಂದು ಪ್ರೊ. ಬಿ. ಬಿ. ಹುನಗುಂದರು ಹೇಳಿದರು. ಈ ಸಂಪರ್ಕ ವಿಧಾನವನ್ನು ಸರ್ಕಾರ ಮತ್ತು ಆಡಳಿತೆಯಲ್ಲಿ ಮತ್ತು ಒಂದೆಡೆ ಸರ್ಕಾರ ಮತ್ತು ಆಡಳಿತೆ ಹಾಗೂ ಮತ್ತೊಂದೆಡೆ ಸಾರ್ವಜನಿಕ ಸದಸ್ಯರ ಮಧ್ಯದಲ್ಲಿ ಈ ರೀತಿ ಎರಡೂ ಕಡೆ ಉಪಯೋಗಿಸಬಹುದು. ಕಾರ್ಯಕ್ರಮವನ್ನು ಕೈಕೊಳ್ಳುವಲ್ಲಿ ತಿಳಿದೋ ತಿಳಿಯದೆಯೋ ಆಡಳಿತದಲ್ಲಿದ್ದವರೇ ಯಾವುದೇ ರೀತಿಯಲ್ಲಿ ವಿರೋಧ ಒಡ್ಡುವವರನ್ನು ಗಮನಿಸಬೇಕು. ಏಕೆಂದರೆ ಈ ಕಾರ್ಯವು ಅವರ ಕೆಲ ಮುಖ್ಯ ಹಿತಾಸಕ್ತಿಗಳಿಗೆ ವಿರೋಧವಾಗಿ ಪರಿಣಮಿಸಬಹುದು. ಇಪ್ಪತ್ತಂಶ ಕಾರ್ಯಕ್ರಮವನ್ನು ಕಾರ್ಯಗತಗೊಳಿಸುವಲ್ಲಿ ಜಾಹೀರಾತು ಮತ್ತು ಪ್ರಚಾರಗಳನ್ನು ದೊಡ್ಡ ಪ್ರಮಾಣದಲ್ಲಿ ಮುಂದುವರೆಸುವುದು ಅತ್ಯ

ವಶ್ಯವಾಗಿದೆ ಎಂದು ಹೇಳಲಾಯಿತು. ಆಡಳಿತ ವಿಷಯಕ್ಕೆ ಸಂಬಂಧಿಸಿದ ಲೇಖನದಲ್ಲಿ ಹೇಳಿದಂತೆ ಇಲ್ಲಿಯೂ ಕೇವಲ ಸಣ್ಣ ಮೀನುಗಳನ್ನಷ್ಟೇ ಅಲ್ಲ ದೊಡ್ಡ ತಪ್ಪಿತಸ್ಥರೂ ಅಥವಾ ವಿರೋಧಿಗಳನ್ನು ಸಹ ಸರ್ಕಾರವು ಗಮನಿಸುವ ದೆಂಬ ವಿಷಯವನ್ನು ಸಾಕಷ್ಟು ಪ್ರಮಾಣದಲ್ಲಿ ಪ್ರಚಾರಗೊಳಿಸಬೇಕು. ಇದು ಸರ್ಕಾರದಲ್ಲಿಯ ಸಾರ್ವಜನಿಕ ನಂಬಿಗೆಯನ್ನು ಪ್ರಚೋದಿಸುವುದು ಮತ್ತು ವೃದ್ಧಿಗೊಳಿಸುವುದು. ಕಾರ್ಯಕ್ರಮದಲ್ಲಿ ತಪ್ಪಿತಸ್ಥರು ಅಥವಾ ಅದಕ್ಕೆ ವಿರೋಧಿಯಾದವರ ವಿರುದ್ಧ ಸರ್ಕಾರವು ಕೈಕೊಳ್ಳುವ ಕ್ರಮಕ್ಕೆ ದೊಡ್ಡ ಪ್ರಮಾಣದಲ್ಲಿ ಸಾರ್ವಜನಿಕರು ನೆರವನ್ನು ನೀಡುವರು. ಸರ್ಕಾರವು ಎಲ್ಲ ವಿಧಧ ಪ್ರಚಾರದ ಅಂಗವಿನ್ಯಾಸಗಳನ್ನು ಸಂಪೂರ್ಣ ಉಪಯೋಗಿಸಿಕೊಳ್ಳಬೇಕು. ಮತ್ತು ಹೆಚ್ಚೆಚ್ಚು ಭಾಗಗಳಿಗೆ ರೇಡಿಯೋ ಮತ್ತು ಟೆಲಿವಿಜನ್‌ಗಳ ಸೌಕರ್ಯಗಳನ್ನು ವಿಸ್ತರಿಸುವತ್ತ ವಿಚಾರಿಸಬೇಕು. ಅಂದರೆ ಇಪ್ಪತ್ತಂಶ ಕಾರ್ಯಕ್ರಮಕ್ಕೆ ಅನುಕೂಲವಾಗುವಂತೆ ಹೆಚ್ಚೆಚ್ಚು ಜನತೆಯನ್ನು ಪ್ರಸಿದ್ಧಿ ಮತ್ತು ಪ್ರಚಾರದ ವ್ಯಾಪ್ತಿಯಲ್ಲಿ ತರಬಹುದು ಎಂದು ವಾದಿಸಲಾಯಿತು. ಪ್ರೊ. ಹುನಗುಂದರವರು ಸಾರ್ವಜನಿಕ ಗ್ರಂಥಾಲಯಗಳ ಮತ್ತು ಇಪ್ಪತ್ತಂಶ ಕಾರ್ಯಕ್ರಮಕ್ಕೆ ಪ್ರಸಿದ್ಧಿ ಕೊಡುವಂಥ ವಿಶಿಷ್ಟವಾದವುಗಳನ್ನೊಳಗೊಂಡ ಎಲ್ಲ ತರದ ಇನ್ನಿತರ ಗ್ರಂಥಾಲಯಗಳ ಪದ್ಧತಿಯನ್ನು ಕಾರ್ಯರೂಪದಲ್ಲಿ ತರುವ ಅವಶ್ಯಕತೆಯನ್ನು ಮತ್ತು ಇಪ್ಪತ್ತಂಶ ಕಾರ್ಯಕ್ರಮದ ಕಾರ್ಯದಲ್ಲಿ ವಿಸ್ತರಣಾ ಯೋಜನೆಗಳನ್ನು ಉಪಯೋಗಿಸಿಕೊಳ್ಳುವುದನ್ನು ಸಹ ಹೇಳಿದರು. ಆ ಸಂದರ್ಭದಲ್ಲಿ ಅವರು ಭಾರತ ಸರಕಾರದ ವಾರ್ತಾಶಾಖೆಯ ಜಾಹೀರಾತು ಮತ್ತು ದರ್ಶನ ಪ್ರಸಿದ್ಧಿ ವಿಭಾಗದಿಂದ ಮತ್ತು ಹಲವಾರು ರಾಜ್ಯ ಸರ್ಕಾರಗಳ ಮತ್ತು ಕೇಂದ್ರಾಡಳಿತ ಪ್ರದೇಶಗಳ ಪ್ರಸಿದ್ಧಿ ವಿಭಾಗಗಳಿಂದ ತರಿಸಿದ ಹಲವಾರು ಪ್ರಕಟನೆಗಳನ್ನು ಉಲ್ಲೇಖಿಸಿದರು. ಈ ಪ್ರಕಟನಾ ಯೋಜನೆಗಳ ವ್ಯಾಪಕ ವಿತರಣೆ ಮತ್ತು ಮಾರಾಟದ ಬಗೆಗೆ ಅವರು ಸೂಚಿಸಿದರು. ಪುಸ್ತಕಗಳನ್ನು ಕೇವಲ ಪ್ರಕಟಿಸಿ ಸರ್ಕಾರಿ ಭಂಡಾರದಲ್ಲಿ ಕೂಡಿ ಹಾಕಬಾರದೆಂದು ಅವರು ಹೇಳಿದರು. ಹೆಚ್ಚೆಚ್ಚಾಗಿ ಇವು ಸಾಮಾನ್ಯ ಜನತೆಯ ಕೈಸೇರಬೇಕು, ದೇಶದ ಮೂಲೆ ಮೂಲೆಗೂ ಇವು ಮುಟ್ಟಬೇಕು. ಅದಕ್ಕಾಗಿ ಪ್ರಚಾರಾಂಗ ವಿಭಾಗಗಳು, ಗ್ರಂಥಾಲಯ ಪದ್ಧತಿಗಳು ಮತ್ತಿನ್ನಿತರ ಸಂಸ್ಥೆಗಳು ಒಗ್ಗೂಡಿ ಸಂಯೋಜಿತ ಕಾರ್ಯಕ್ರಮಗಳನ್ನು ನಿರೂಪಿಸಿ, ಈ ಗ್ರಂಥಗಳಲ್ಲಿ ಅಡಗಿದ ಮಾಹಿತಿಗಳನ್ನು ನೈಪುಣ್ಯತೆಯಿಂದ ವಿತರಿಸಿ ಪ್ರಸಾರಗೊಳಿಸಬೇಕು ಎಂದು ಅವರು ಅಭಿಪ್ರಾಯಪಟ್ಟರು.

ಏಳನೇ ಲೇಖನ : "ಹಳ್ಳಿಗಾಡಿನ ಮೇಲೆ ಇಪ್ಪತ್ತಂಶ ಕಾರ್ಯಕ್ರಮದ ಪ್ರಭಾವ : ಮರೇವಾಡ–ಒಂದು ವಿಶೇಷ ಅಧ್ಯಯನ." ಇದನ್ನು ಡಾ. ಎಮ್. ಎಫ್. ಕರೆಣ್ಣವರು ಸಾದರಪಡಿಸಿದರು. ಇಪ್ಪತ್ತರ ಪೈಕಿ ಹದಿನೇಳು ಅಂಶ ಗಳು ಹಳ್ಳಿಗಾಡಿನ ಬೆಳವಣಿಗೆಯ ಪ್ರಶ್ನೆಗಳಿಗೆ ಸಂಬಂಧಿಸಿವೆ ಎಂದು ಡಾ. ಕರೆಣ್ಣವರು ಹೇಳಿದರು. ಅವರು ಹಳ್ಳಿಗೆ ಸಂಬಂಧಿಸಿದ ಕೆಲವು ವಿಶಿಷ್ಟವಾದ ವಿವರಣೆಗಳನ್ನಿತ್ತರು. ಮರೇವಾಡದಲ್ಲಿ ಭೂ ಹೀನರ ೯ ಜನ ಹಳ್ಳಿಗರಿಗೆ ಭೂ ವಿತ ರಣೆಯ ಯೋಜನೆಯಲ್ಲಿ ಭೂಮಿಗಳನ್ನು ಕೊಡಲಾಗಿದೆ. ಚಹಾದಂಗಡಿಗಳನ್ನು ತೆರೆಯಲು ನಾಲ್ವರಿಗೆ ತಲಾ ನಾಲ್ಕುನೂರು ರೂಪಾಯಿಗಳಂತೆ ಕೊಡಲಾಗಿದೆ. ಮೀನುಗಾರಿಕೆ ಯೋಜನೆಗೆ ಮುನ್ನೂರು ಜಾತಿಯ ಮೀನುಗಳನ್ನು ಒದಗಿಸ ಲಾಗಿದೆ. ಎರಡು ಗರಡೀಮನೆಗಳನ್ನು ಒಂದು ಬಾಲವಾಡಿಯನ್ನು ತೆರೆಯಲು ಅನುಕೂಲಮಾಡಿಕೊಡಲಾಗಿದೆ. ಕೋಳಿಸಾಕಣಿಕೆಗಳಿಗೆ ೧೨೫ ಕೋಳಿಗಳನ್ನು ಒದಗಿಸಲಾಗಿದೆ. ಹಳ್ಳಿಯಲ್ಲಿ ನೆಡಲೆಂದು ವಿಶೇಷ ತೆಂಗಿನಕಾಯಿ ಸಸಿಗಳನ್ನು ಒದಗಿಸಲಾಗಿದೆ. ತಮ್ಮ ವೃತ್ತಿಯನ್ನು ಸುಧಾರಿಸಲೋಸುಗ ಇಬ್ಬರು ಬಡಿಗರಿಗೆ ಸಾಲ ಕೊಡಲಾಗಿದೆ. ಆರು ಜನರನ್ನು ಸಾಲದಿಂದ ವಿಮುಕ್ತಗೊಳಿಸಲಾಗಿದೆ. ಏಳು ಜೀತದಾಳುಗಳನ್ನು ಜೀತಪದ್ಧತಿಯಿಂದ ಬಿಡುಗಡೆ ಮಾಡಲಾಗಿದೆ. ಇಪ್ಪತ್ತಂಶ ಕಾರ್ಯಕ್ರಮಕ್ಕೆ ಬಹುಸಂಖ್ಯಾತ ಜನರು ಬೆಂಬಲಿಸಿರುವರು ಮತ್ತು ಅವರಲ್ಲಿ ಹಲವರು ಶ್ರೀಮತಿ ಇಂದಿರಾ ಗಾಂಧಿಯವರ ವೈವಿಧ್ಯಮಯ ನಾಯ ಕತ್ವವನ್ನು ಹೆಚ್ಚಾಗಿ ಹೊಗಳುವರು. ಇಪ್ಪತ್ತಂಶ ಕಾರ್ಯಕ್ರಮದ ಒಳ್ಳೇ ಕಾರ್ಯದೃಷ್ಟಿಯಿಂದ ಅವರು ಹಲವು ಸೂಚನೆಗಳನ್ನು ಮಾಡಿದರು. ಪ್ರೊ. ಚಂದ್ರಶೇಖರ ಬಗ್ಗಿ ಮತ್ತು ಡಾ. ಎಲ್. ಎಸ್. ಬನಾಪೂರವರು ಎತ್ತಿದ ವಿಚಾರಗಳನ್ನು ಅವರು ಪರಿಶೀಲಿಸಿ ವಿವರಿಸಿದರು.

ಎಂಟನೆಯ ಲೇಖನ : "ಒಂದು ಹಳ್ಳಿಗೆ ಸಂಬಂಧಿಸಿದಂತೆ ಹೊಸ ಯೋಜನೆಗಳ ಸ್ವೀಕಾರ ಮತ್ತು ಅಸ್ವೀಕಾರ". ಇದನ್ನು ಡಾ. ಎನ್. ಕೆ. ಕಡೆತೋಟದವರು ಸಾದರಪಡಿಸಿದರು. ಅವರು ಮತ್ತು ಅವರ ವಿದ್ಯಾರ್ಥಿವೃಂದವು ಧಾರವಾಡದ ಸಮೀಪದ ಬಾಡ ಎಂಬ ಹಳ್ಳಿಯಲ್ಲಿ ಉಳಿದುಕೊಂಡು, ಅದಕ್ಕೆ ಸಂಬಂಧಿಸಿದ ಈ ಮುಂದಿನ ಮುಖ್ಯ ಅಂಕಿಸಂಖ್ಯೆಗಳನ್ನು ಸಂಪಾದಿಸಿರುವರು. ಮುಸ್ಲಿಂ ಭೂಮಾಲೀಕರ ಸ್ಥಾನದಲ್ಲಿ ಲಿಂಗಾಯತ ಭೂಮಾಲೀಕರು ಬಂದಿರು ವರು. ಏಕೆಂದರೆ ಮುಸ್ಲೀಮರು ಚೆನ್ನಾದ ಅವಕಾಶಗಳನ್ನು ಹುಡುಕಲೋಸುಗ ಮುಂಬೈ, ಹುಬ್ಬಳ್ಳಿ, ಧಾರವಾಡದಂತಹ ಸ್ಥಳಗಳಿಗೆ ಹೋಗಿರುವರು. ಮೊದಲಿಗೆ ಲಿಂಗಾಯತರಿಗೂ ಸಾಲದ ಬಾಧೆ ಇದ್ದಿತು. ಈಗ ಅವರು ಭೂಮಾಲೀಕರಾದಾಗಿ

ನಿಂದ ಈ ಸಮಸ್ಯೆಯು ಮುಖ್ಯವಾಗಿ ಹಿಂದೂ ಕೆಳವರ್ಗಗಳಾದ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಜನಾಂಗಗಳಿಗೆ ಸೀಮಿತವಾಗಿದೆ. ಆಭರಣ ಮತ್ತು ಭಾಂಡೇ ಸಾಮಾನುಗಳನ್ನು ಒತ್ತಿ ಇಡುವುದು ಹಿಂದಿನ ತರಹ ಈಗಲೂ ಮುಂದುವರೆದಿದೆ. ಈ ಸಂಬಂಧ ಪೋಲೀಸರಿಗೆ ವರದಿ ಮಾಡಿಲ್ಲ. ಏಕೆಂದರೆ, ಹಾಗೆ ಮಾಡಿವರೆ ಸಾಲ ಬೇಕಾದವನಿಗೆ ಮುಂದೆ ಸಾಲ ದೊರಕುವದಿಲ್ಲವೆಂಬ ಅಂಜಿಕೆಯಿದೆ. ಹಳ್ಳಿಯ ಕೆಲವೇ ಬಡಜನರಿಗೆ ಕೆಲ ಮನೆಗಳನ್ನು ಸರ್ಕಾರವು ಕಟ್ಟಿಸಿ ಕೊಟ್ಟಿದೆ. ಅವುಗಳ ಕಿಡಕಿಗಳು ಮಳೆ ಛಳಿಗಳನ್ನು ಧಾರಾಳವಾಗಿ ಒಳಗೆ ಬರಮಾಡಿಕೊಳ್ಳುವಷ್ಟು ದೊಡ್ಡವಿವೆ. ಬಡನಿವಾಸಿಗಳೂ ಹಿಂದಿನ ತರಹ ಬೆಚ್ಚನೆಯ ಅರಿವೆಗಳಿಲ್ಲದ್ದಕ್ಕೆ ಸ್ವಲ್ಪಮಟ್ಟಿಗೆ ತೊಂದರೆಗೊಳಗಾದರು. ಹಿಂದಿನಂತೆ ಜೀತಪದ್ಧತಿ ಮತ್ತು ಆಯದ ಪದ್ಧತಿಗಳು ಮುಂದುವರೆದಿವೆ. ಈ ಸಂಬಂಧ ಪೋಲೀಸರಿಗೆ ತಿಳಿಸಲಾಗಿಲ್ಲ. ಜೀತ ಪದ್ಧತಿಯಿಂದ ಬಿಡುಗಡೆ ಮಾಡುವುದು ಅಷ್ಟೊಂದು ಕಠಿಣಕರವಲ್ಲ. ಆದರೆ ಬಿಡುಗಡೆ ಮಾಡಿದ ಮೇಲೆ ಬದಲೀ ವ್ಯವಸ್ಥೆಯಿಲ್ಲದೇ ಅವರು ನಿರುದ್ಯೋಗಿಗಳಾಗಿ ಉಳಿಯಬೇಕಾಗುವದೆಂಬ ಭಯವಿದೆ. ಇನ್ನಿತರ ವಿಧಾನಗಳಾದ ಕೊಡಕೊಳ್ಳುವಿಕೆ ಮತ್ತು ಹೊಸ ಕಾರ್ಯಗಳಾದ ಪಂಪುಸೆಟ್ಟುಗಳನ್ನು ಹಾಕುವುದು, ಸರಕಾರದಿಂದ ನೀರಾವರಿ ಸೌಲಭ್ಯ ಮತ್ತು ಹಳ್ಳಿಗಳಲ್ಲಿ ಭೂಸುಧಾರಣೆಗಳನ್ನು ಕೈಕೊಳ್ಳುವುದರ ಬಗೆಗೂ ಅವರು ಹೇಳಿದರು. ಮುಂದುವರೆದ ಚರ್ಜೆಯಲ್ಲಿ ಪ್ರೊ. ಚಂದ್ರಶೇಖರ ಬುಗ್ಗಿ, ಡಾ. ಎಲ್. ಎಸ್. ಐನಾಪೂರ, ಡಾ. ಎ. ಎಮ್. ರಾಜಶೇಖರಯ್ಯ, ಡಾ. ವ್ಹಿ. ಎನ್. ದೇಶಪಾಂಡೆ ಮತ್ತು ಡಾ. ಆರ್. ಟಿ. ಜಂಗಮರು ಭಾಗವಹಿಸಿದರು. ಇಬ್ಬರು ಪರಿಣಿತರು ಎರಡು ಹಳ್ಳಿಗಳ ಬಗೆಗೆ ಮಾಡಿದ ಅಭ್ಯಾಸಗಳಲ್ಲಿ ಹೆಚ್ಚು ಅಂತರವಿದ್ದುದು ಕಂಡುಬಂದಿತು. ಇದಕ್ಕೆ ಕಾರಣವೆಂದರೆ ಡಾ. ಕರೆಣ್ಣವರು ಅಭ್ಯಸಿಸಿದ ಹಳ್ಳಿಯು ಹಲವಾರು ಸರಕಾರಿ ಸಂಸ್ಥೆಗಳಿಂದ ಆದರ್ಶ ಗ್ರಾಮವೆಂದು ಉಪಯೋಗ ಪಡೆದಿದೆ. ಆದರೆ ಡಾ. ಕಡೆತೋಟದರು ಅಭ್ಯಸಿಸಿದ ಹಳ್ಳಿಯು ತುಲನಾತ್ಮಕವಾಗಿ ಒಂದು ಬಡಹಳ್ಳಿಯು ಮತ್ತು ಸರ್ಕಾರವಿತ್ತ ಹಲವಾರು ರೀತಿಯ ಬೆಳವಣಿಗೆಯ ಸಹಕಾರದ ಸಹಾಯವನ್ನು ಅದು ಹೆಚ್ಚಾಗಿ ಪಡೆದಿಲ್ಲ. ಈ ರೀತಿ ಅತಿ ಹೆಚ್ಚಿನ ಅಂತರಗಳಿಗೆ ಕಾರಣವೆಂದರೆ ಎರಡು ಅತಿ ಭಿನ್ನವಿರುವ ಹಳ್ಳಿಗಳ ಎರಡು ಸಣ್ಣ ಪ್ರಮಾಣದ ಅಭ್ಯಸನಗಳಾಗಿವೆ ಎಂದು, ಅಭಿಪ್ರಾಯ ಪಡಲಾಯಿತು.

ಒಂಬತ್ತನೆಯ ಲೇಖನ: "ಇಪ್ಪತ್ತಂಶ ಕಾರ್ಯಕ್ರಮದ ಕಾರ್ಯ ಕೈಕೊಳ್ಳುವಲ್ಲಿ ವಿಜ್ಞಾನದ ಪಾತ್ರ"—ಎಂಬುದನ್ನು ಡಾ. ಎಸ್. ಎಸ್. ರೂಡ್ಗಿ

ಯವರು ಸಾದರಪಡಿಸಿದರು. ಇಪ್ಪತ್ತಂಶ ಕಾರ್ಯಕ್ರಮವನ್ನು ಕೈಕೊಳ್ಳುವಲ್ಲಿ ಸಮಾಜ ವಿಜ್ಞಾನಿಗಳನ್ನಷ್ಟೇ ಅಲ್ಲದೆ, ಪ್ರಕೃತಿ ವಿಜ್ಞಾನಿಗಳನ್ನು ಸಮೀಪವರ್ತಿಗಳನ್ನಾಗಿ ಮಾಡಿಕೊಳ್ಳಬೇಕೆಂದು ಡಾ. ರೂಡ್ರಿಯವರು ವಾದಿಸಿದರು. ಬಿಳಿಯ ಅರಿವೆ ಧರಿಸುವ ಜನರಿಗೆ ದೇಶದ ಸಾಮಾನ್ಯ ಜನತೆಯಲ್ಲಿ ಬೆರೆತು, ಇಪ್ಪತ್ತಂಶ ಕಾರ್ಯಕ್ರಮ ಸರಿಯಾಗಿ ಕೈಕೊಳ್ಳುವಲ್ಲಿ ಜನರಿಗೆ ತಮ್ಮ ಜ್ಞಾನ, ಅನುಭವ ಮತ್ತು ಪರಿಣತೆಯನ್ನು ನೀಡುವಂತೆ ಚೆನ್ನಾಗಿ ಉಪದೇಶಿಸಬೇಕೆಂಬ ತತ್ವವನ್ನು ಅವರು ಹೇಳಿದರು. ಇಪ್ಪತ್ತಂಶ ಕಾರ್ಯಕ್ರಮದ ಕಾರ್ಯಕರ್ತರು ಮತ್ತು ಆಡಳಿತಗಾರರು ಪ್ರಕೃತಿ ವಿಜ್ಞಾನಿಗಳು ಕೈಕೊಂಡ ಆವಿಷ್ಕಾರ ಮತ್ತು ಸಂಶೋಧನೆಗಳಿಂದ ಹೇಗೆ ಹೆಚ್ಚು ಲಾಭಪಡೆಯುವರೆಂಬುದನ್ನು ಅವರು ಸ್ಪಷ್ಟಪಡಿಸಿದರು. ಹಲವಾರು ವಿಧಗಳ ಬ್ಯಾಕ್ಟೀರಿಯಾ ಮುಂತಾದ ವಿಷಯಗಳಲ್ಲಿ ಕೈಕೊಂಡ ಸಂಶೋಧನೆಗಳು, ಒಕ್ಕಲುತನದ ಅಭಿವೃದ್ಧಿ ಕಾರ್ಯಗಳಲ್ಲಿ ಕ್ರಿಮಿನಾಶಕಗಳನ್ನು ಸಿಂಪಡಿಸುವುದು ಮತ್ತು ಗೊಬ್ಬರಗಳನ್ನು ಉಪಯೋಗಿಸುವುದು ಮುಂತಾದವುಗಳು ಈ ಕಾರ್ಯಕ್ರಮದಲ್ಲಿ ಹೇಗೆ ಪರಿಣಾಮ ಬೀರಬಲ್ಲವೆಂಬುದನ್ನು ಅವರು ವಿವರಿಸಿ ಹೇಳಿದರು.

ಪ್ರೊ. ಸಿ. ಬಿ. ತಿಗಡಿ, ಡಾ. ವ್ಹಿ. ಎನ್. ದೇಶಪಾಂಡೆ, ಡಾ. ಶಂಕರ ಮೊಕಾಶಿ ಪುಣೇಕರರು ವಿಚಾರ ಸಂಕಿರಣದ ವಿವಿಧ ಸಭೆಗಳಿಗೆ ಅಧ್ಯಕ್ಷರುಗಳಾಗಿದ್ದರು. ಸಂಸ್ಥೆಯ ಸಹಕಾರ್ಯದರ್ಶಿಗಳಾದ ಡಾ. ಕೆ. ರಾಘವೇಂದ್ರರಾವ್‌ರು ವಿಚಾರ ಸಂಕಿರಣದ ಕಾರ್ಯಕಲಾಪಗಳು ರಚನಾತ್ಮಕವಾಗಿ ಮತ್ತು ಫಲಪ್ರದಾಯಗಳಾಗುವಂತೆ ಸಹಾಯ ನೀಡಿದವರಿಗೆಲ್ಲರಿಗೂ ವಂದನೆಗಳನ್ನು ಅರ್ಪಿಸಿದರು. ಲಿಂಕನ್ ಸಂಸ್ಥೆಯ ನಿರ್ದೇಶಕರು ಮತ್ತು ಕರ್ನಾಟಕ ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರು ಆದ ಡಾ. ಎ. ಎಮ್. ರಾಜಶೇಖರಯ್ಯನವರು ವಿಚಾರ ಸಂಕಿರಣದಲ್ಲಿ ಹೊರಹೊಮ್ಮಿದ ಮುಖ್ಯ ಅಂಶಗಳನ್ನು ಸಾರಾಂಶಿಸಿದರು. ಅವರ ಅಭಿಪ್ರಾಯದಲ್ಲಿ ವಿಚಾರ ಸಂಕಿರಣದ ಮುಖ್ಯ ಅಂಶಗಳು ಮತ್ತು ಸೂಚನೆಗಳು :

(೧) ಇಪ್ಪತ್ತಂಶ ಕಾರ್ಯಕ್ರಮ ಎಂದೋ ಬರಬೇಕಿತ್ತು. ಸುಮಾರು ಎರಡು ದಶಕಗಳಷ್ಟು ತಡಮಾಡಿ ಬಂದಿದೆಯಾದರೂ, ಕಾಯಿದೆ ಬದ್ಧವಾಗಿ ಇದನ್ನೀಗ ಘೋಷಿಸಿರುವದರಿಂದ, ಇದನ್ನು ಅಚ್ಚುಕಟ್ಟಾಗಿ ಮತ್ತು ಹೆಚ್ಚು ನಿಷ್ಠೆಯಿಂದ ಕೈಕೊಳ್ಳುವುದು ಸರ್ಕಾರದ ಮತ್ತು ಜನತೆಯ ಕರ್ತವ್ಯವಾಗಿದೆ.

(೨) ಇಪ್ಪತ್ತಂಶ ಕಾರ್ಯಕ್ರಮವು ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ತಾತ್ವಿಕಾಂಶಗಳ ಆಧಾರದ ಭದ್ರ ಮತ್ತು ಸೈದ್ಧಾಂತಿಕ ಬುನಾದಿಯನ್ನು ಹೊಂದಿದೆ.

(೩) ಇಪ್ಪತ್ತಂಶಗಳ ಆಹ್ವಾನಗಳನ್ನೆದುರಿಸಲು ಆಡಳಿತ ಯಂತ್ರವನ್ನು ಚುರುಕುಗೊಳಿಸಬೇಕು.

(೪) ಕಾರ್ಯಕ್ರಮದ ವಿವಿಧ ಅಂಶಗಳನ್ನು ಇನ್ನಷ್ಟು ವಿಸ್ತರಿಸಲು, ಹುಡುಕಿ ತೆಗೆಯಲು, ಮತ್ತು ಬಲಯುತಗೊಳಿಸಲು ಸಾಕಷ್ಟು ಅವಕಾಶವಿದೆ. ಮುಖ್ಯವಾಗಿ ಕಾರ್ಯಕ್ರಮದ ಎಲ್ಲಾ ಗುರಿಗಳು ಪರಿಣಾಮಕಾರಿಯಾಗುವಂತೆ ಮಾಡಲು ಇನ್ನಷ್ಟು ಅಂಶಗಳನ್ನು ಸೇರಿಸುವ ಅವಶ್ಯಕತೆಯಿದೆ. ಉದಾ : ರಾಷ್ಟ್ರೀಯ ಶಿಸ್ತನ್ನು ಬೆಳೆಸುವುದು ಮತ್ತು ಒಕ್ಕಲುತನದ ಬೆಳವಣಿಗೆಯಲ್ಲಿ ವೈಜ್ಞಾನಿಕ ಮತ್ತು ಯಾಂತ್ರಿಕ ಸಾಧನೆಗಳ ಬಳಕೆ.

(೫) ಕಾರ್ಯಕ್ರಮ ಕೈಗೊಳ್ಳುವುದರಿಂದುಂಟಾಗುವ ಪರಿಣಾಮಗಳನ್ನು, ಉದಾ: ಜೀತ ಪದ್ಧತಿ ನಿವಾರಣೆ, ಭೂ ಹೀನರಿಗೆ ಭೂ ವಿತರಣೆ, ಹಳ್ಳಿಗಾಡಿನ ಜನರಿಗೆ ಸಾಲ ನೀಡುವಿಕೆ ಮತ್ತು ಋಣವಿಮೋಚನೆ ಮುಂತಾದವುಗಳನ್ನು ಸರಿಯಾಗಿ ಅಭ್ಯಸಿಸಬೇಕು ಮತ್ತು ವೀಕ್ಷಿಸಬೇಕು. ಮುಖ್ಯವಾಗಿ ಸಧ್ಯದ ಸಾಮಾಜಿಕ, ಆರ್ಥಿಕ ತರಗಳು ಬದಲಿಯಾದಮೇಲೆ ಅವುಗಳ ಸ್ಥಳದಲ್ಲಿ ಬದಲೀ ವ್ಯವಸ್ಥೆ ಮಾಡುವ ಅವಶ್ಯಕತೆಯತ್ತ ಹೆಚ್ಚು ಗಮನ ನೀಡಬೇಕು.

(೬) ನಿರ್ದಿಷ್ಟ ಅಭ್ಯಸನಗಳಲ್ಲಿ ಹೇಳಿದಂತೆ ಕಾರ್ಯಕ್ರಮದ ಲಾಭಗಳು ಮುಟ್ಟಬೇಕಾದವರಿಗೆ ಮುಟ್ಟದೇ ಇದ್ದ ಪ್ರತ್ಯಕ್ಷ ನಿದರ್ಶನಗಳಿವೆ. ರಾಜಕೀಯ ಮತ್ತು ಸರ್ಕಾರಿ ಮುಖಂಡತ್ವವು ಇಪ್ಪತ್ತಂಶ ಕಾರ್ಯಕ್ರಮವು ಸಾಮಾನ್ಯ ಜನತೆಗೆ ಹಿಂದೆಂದೋ ದೊರೆಯಬೇಕಾಗಿದ್ದ ಅವಶ್ಯಕತೆಗಳನ್ನು ದೊರಕಿಸಿ ಕೊಡುವಲ್ಲಿ ವಿಶೇಷವಾದ ಜವಾಬ್ದಾರಿಯನ್ನು ವಹಿಸಬೇಕು.

(೭) ಇಪ್ಪತ್ತಂಶ ಕಾರ್ಯಕ್ರಮದ ಲಾಭಗಳು ಸಾಮಾಜಿಕ ಮತ್ತು ಆರ್ಥಿಕ ಬೆಳವಣಿಗೆಯಲ್ಲಿ ಮುಖ್ಯ ಅಂಶಗಳಾಗಿದ್ದಂತೆ ಕುಟುಂಬಯೋಜನಾ ಕಾರ್ಯಕ್ರಮಗಳ ಮುಖಾಂತರ ಜನಸಂಖ್ಯಾ ಬೆಳವಣಿಗೆಯನ್ನು ನಿಯಂತ್ರಿಸುವದು ಅತ್ಯವಶ್ಯವಾಗಿದೆ. ಕುಟುಂಬಯೋಜನಾ ಕಾರ್ಯಕ್ರಮಗಳನ್ನು ಆರೋಗ್ಯವರ್ಧಕ ಯೋಜನೆಗಳೊಂದಿಗೆ ಒಗ್ಗೂಡಿಸಬೇಕು.

ಮೂಲ : ಇಂಗ್ಲೀಷಿನಲ್ಲಿ : **ಆರ್. ಟಿ. ಜಂಗಮ ಮತ್ತು ಬಿ. ಬಿ. ಹುನಗುಂದ.**

ಕನ್ನಡಾನುವಾದ: **ವಸಂತ ಪಾಟೀಲ.**

ಕರ್ನಾಟಕ ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರ ವಿಭಾಗದ ಲಿಂಕನ್ ಸಂಸ್ಥೆಯ ಅಂಗವಾಗಿ ೪-೭-೧೯೭೬ರಂದು ಏರ್ಪಡಿಸಿದ ಇಪ್ಪತ್ತಂಶ ಕಾರ್ಯಕ್ರಮ ವಿಚಾರ ಸಂಕಿರಣ

ಕುಲಪತಿ ಡಾ. ಆರ್. ಸಿ. ಹಿರೇಮಠ ಅವರ ಉದ್ಘಾಟನಾ ಭಾಷಣ

ಲಿಂಕನ್ ಸಂಸ್ಥೆಯು ಸಣ್ಣ ಪ್ರಮಾಣದಲ್ಲಿ ಪ್ರಾರಂಭವಾಗಿದ್ದರೂ, ಆಗ್ಗೆ ಇದರ ಪ್ರಭಾವವು ಸರಕಾರದ ಮೇಲೆ ಹಾಗೂ ಸಾರ್ವಜನಿಕರ ಮೇಲೆ ಬಹಳವಾಗಿತ್ತು. ಹಲವಾರು ಉದ್ದೇಶಗಳತ್ತ ಈ ಸಂಸ್ಥೆಯು ಚೆನ್ನಾಗಿ ಕೆಲಸ ಮಾಡಿದೆ. ನನ್ನ ಆತ್ಮೀಯ ಮಿತ್ರ ಪ್ರೊ. ಹಾಲಪ್ಪನವರು ಈಗಿಲ್ಲದುದು ಅತೀವ ದುಃಖದ ಸಂಗತಿ. ಸಣ್ಣ ಪ್ರಮಾಣದ ಪ್ರಾರಂಭವುಳ್ಳ ಸಂಸ್ಥೆಗಳೇ ಮುಂದೆ ದೊಡ್ಡ ಪ್ರಮಾಣದಲ್ಲಿ ಬೆಳೆಯುವವು.

ಹಿಂದಿನ ದಿನ ನಾನು ಬೆಂಗಳೂರಿನಲ್ಲಿ ಡಾ. ವ್ಹಿ. ಕೆ. ಆರ್. ವ್ಹಿ. ರಾವ್‌ರ ಜೊತೆಗಿದ್ದಾಗ ಅವರ ಸಂಸ್ಥೆಯನ್ನು ಕಂಡು ಇಂಥ ಸಂಸ್ಥೆ ನಮ್ಮ ಧಾರವಾಡದಲ್ಲಿ ಏಕೆ ಇರಬಾರದು ? ಎಂಬ ವಿಚಾರ ಬಂದುಹೋಯಿತು. ಸಾಮಾಜಿಕ ಬದಲಾವಣೆ, ಸಾರ್ವಜನಿಕ ವ್ಯವಹಾರಗಳು ಮುಂತಾದ ವಿಷಯಗಳ ಅಧ್ಯಯನಕ್ಕಾಗಿ ಇಂಥ ಸಂಸ್ಥೆ ಅತ್ಯವಶ್ಯ. ನಮ್ಮಲ್ಲಿಯೂ ಅಂಥದೇ ಒಂದು ಸಂಸ್ಥೆಯಿತ್ತು. ಆದರೆ ಕಾರ್ಯಪ್ರಗತಿಯಲ್ಲಿ ಅದೇಕೋ ಹಿಂದೆ ಬಿದ್ದಿತ್ತು. ಈಗ ಮತ್ತೆ ಅದು ಪುನರುಜ್ಜೀವನಗೊಂಡಿದೆ. ಈ ಸಂಸ್ಥೆಯನ್ನು ಸರಿಯಾಗಿ ಪುನರುಜ್ಜೀವನಗೊಳಿಸಿದರೆ, ನನ್ನ ದಿವಂಗತ ಮಿತ್ರನ ಕನಸು ನನಸಾಗುವುದರಲ್ಲಿ ಸಂಶಯವಿಲ್ಲ. ಹಾಗಾದಲ್ಲಿ ನನಗೆ ಅತೀವ ಸಂತೋಷವಾಗುವದು. ಆ ದಿಶೆ

ಯಲ್ಲಿ ನಾವು ವಿಚಾರಿಸುತ್ತಿರುವೆವು. ಅದಕ್ಕೆ ನಾಂದಿ ಎನ್ನುವಂತೆ ನಮ್ಮ ಮಿತ್ರರು ಸಂಸ್ಥೆಯ ಅಂಗವಾಗಿ ವಿಚಾರ ಸಂಕಿರಣವನ್ನು ಸೂಚಿಸಿದ್ದಾರೆ.

ಸಂಸ್ಥೆಯ ಮುಖ್ಯ ಉದ್ದೇಶವೆಂದರೆ ಸುತ್ತಲಿನ ಸಮಾಜ ಮತ್ತು ಬುದ್ಧಿ ಜೀವಿಗಳು ಹಾಗೂ ವಿಚಾರವಾದಿಗಳಲ್ಲಿಯ ಅಂತರವನ್ನು ಕಡಿಮೆಗೊಳಿಸುವದು. ಶಾಲಾಗೋಪುರಗಳ ಮಧ್ಯದಲ್ಲಿರುವುದೇ ತಮ್ಮ ಕರ್ತವ್ಯವೆಂದು ಬುದ್ಧಿಜೀವಿಗಳು ಭಾವಿಸಿರುವರು. ಸಾರ್ವಜನಿಕರಲ್ಲಿ ಅಥವಾ ಸಮಾಜದಲ್ಲಿ ಸಂಭವಿಸುವ ಯಾವುದೇ ಸಂಗತಿಗೂ ತಾವು ಸಂಬಂಧಿಸಿಲ್ಲ ಎಂಬ ಭಾವನೆ ತಳೆದಿರುವರು. ಅದೇ ರೀತಿ ಸಮಾಜವಾದರೂ ಬುದ್ಧಿಜೀವಿಗಳ ಕಾರ್ಯ ತಮಗೇನು ಸಂಬಂಧವಿಲ್ಲ ಎಂದು ಭಾವಿಸಿದೆ. ಇಂಥ ಭಾವನೆಗಳನ್ನು, ಅಂತರಗಳನ್ನು ತೊಡೆದುಹಾಕುವುದೇ ಈ ಸಂಸ್ಥೆಯ ಮುಖ್ಯ ಉದ್ದೇಶ. ಆ ದಿಶೆಯತ್ತ ಜನತೆ, ಬುದ್ಧಿಜೀವಿಗಳು ಹಾಗೂ ವಿಚಾರವಾದಿಗಳು ಸಮಸ್ಯೆಗಳಿಗೆ ಸರಿಯಾದ ಪರಿಹಾರಗಳನ್ನು ಒದಗಿಸಬೇಕಾಗಿದೆ. ಅಂಥವುಗಳಲ್ಲಿ ಇಪ್ಪತ್ತಂಶ ಕಾರ್ಯಕ್ರಮವೂ ಒಂದು.

ಸ್ವಾತಂತ್ರ್ಯಪೂರ್ವದಲ್ಲಿ ರಾಜಕೀಯ ಸ್ವಾತಂತ್ರ್ಯಕ್ಕೆ ಯಾವರೀತಿ ಪ್ರಾಧಾನ್ಯವಿತ್ತೋ, ಅದೇ ರೀತಿಯಲ್ಲಿ ಸ್ವಾತಂತ್ರ್ಯಾನಂತರದಲ್ಲಿ ಈ ಇಪ್ಪತ್ತಂಶ ಗಳಿಗೆ ಪ್ರಾಧಾನ್ಯತೆ ಇದೆ ಎಂದು ನಾನು ಭಾವಿಸಿರುವೆ. ಈ ಕಾರ್ಯಕ್ರಮವನ್ನು ಸರಿಯಾಗಿ ಕೈಕೊಳ್ಳಬೇಕಾಗಿದೆ.

ಹಣದುಬ್ಬರದಿಂದ ಜಾಗತಿಕವಾಗಿ ಬೆಲೆಗಳು ಮೇಲೇರತೊಡಗಿವೆ. ಉದಾಹರಣಾರ್ಥವಾಗಿ ಆಸ್ಟ್ರೇಲಿಯಾ, ನ್ಯೂಝಿಲ್ಯಾಂಡ್, ಮತ್ತು ಇಂಗ್ಲಂಡ್ ಮುಂತಾದ ದೇಶಗಳಲ್ಲಿ ಬೆಲೆಗಳು ಸಾಕಷ್ಟು ಏರಿವೆ. ಈ ರೀತಿ ಅಟ್ಟಹಾಸ ಬೀರುತ್ತಿರುವ ಹಣದುಬ್ಬರವನ್ನು ತಡೆಗಟ್ಟುವದು ಸುಲಭಸಾಧ್ಯ ಕಾರ್ಯವಲ್ಲ. ಆದಾಗ್ಯೂ ಅಂಥ ಅಸಾಧ್ಯವನ್ನು ಸಾಧ್ಯಗೊಳಿಸುವತ್ತ ಈ ಇಪ್ಪತ್ತಂಶ ಕಾರ್ಯ ಕ್ರಮವು ಮುನ್ನಡೆದಿದೆ. ಇಪ್ಪತ್ತಂಶ ಕಾರ್ಯಕ್ರಮವು ಬೇರುಬಿಡುತ್ತಿರುವ ದನ್ನು ಸಫಲವಾಗುತ್ತಿರುವದನ್ನು ಯಾರಾದರೂ ಕಾಣಬಹುದು.

ಈ ಇಪ್ಪತ್ತಂಶ ಕಾರ್ಯಕ್ರಮದಲ್ಲಿ ಅಡಗಿದ ರಾಜಕೀಯ ಸಿದ್ಧಾಂತ, ಸಾಮಾಜಿಕ ಆರ್ಥಿಕ ಸಿದ್ಧಾಂತ ಮುಂತಾದವುಗಳನ್ನು, ಈಗ ಇಲ್ಲಿ ವಿಚಾರವಾದಿ ಗಳು, ರಾಜ್ಯಶಾಸ್ತ್ರಜ್ಞರು, ಅರ್ಥಶಾಸ್ತ್ರಜ್ಞರು, ಸಮಾಜಶಾಸ್ತ್ರಜ್ಞರು ಮತ್ತು ತತ್ವಜ್ಞಾನಿಗಳು ಕೂಡಿ ವಿಚಾರಿಸಿ ನಿರೂಪಿಸಬೇಕಾಗಿದೆ. ಈ ಇಪ್ಪತ್ತಂಶಗಳು ಅಲ್ಲಿ, ಇಲ್ಲಿ ಆಯ್ದ ಕೇವಲ ಅಂಶಗಳಲ್ಲ. ಈ ಇಪ್ಪತ್ತಂಶಗಳು ನಮ್ಮ ಇಡೀ

ಜೀವನವನ್ನು ಅಳವಡಿಸಿಕೊಂಡಿವೆ. ಒಂದೆಡೆ ಏರಿದ ಬೆಲೆಗಳನ್ನು ಹಿಡಿತದಲ್ಲಿಟ್ಟು ಕೊಳ್ಳುತ್ತಿದ್ದರೆ, ಇನ್ನೊಂದೆಡೆ ಉದ್ಯಮರಂಗಕ್ಕೆ ಸಾಗಿ ಅಲ್ಲಿಯ ಕಾರ್ಮಿಕರು ಹಾಗೂ ಅವರ ಸಂಘಗಳ ಸಂಬಂಧವನ್ನು ಹಿಡಿತದಲ್ಲಿಟ್ಟುಕೊಳ್ಳುತ್ತಿರುವದು. ವೇತನಗಳು, ಕನಿಷ್ಟ ವೇತನಗಳು, ಒಕ್ಕಲುತನದ ವೇತನಗಳು ಈ ರೀತಿ ಕೇವಲ ವೇತನದಲ್ಲಿಯೇ ಇಷ್ಟೊಂದು ವೈವಿಧ್ಯವಿದೆ. ಒಂದೊಂದೇ ಅಂಶವನ್ನು ಪ್ರತ್ಯೇಕವಾಗಿ ತೆಗೆದುಕೊಂಡಾಗ ಅದೇನೊ ಚಿಕ್ಕದಾಗಿ ಕಾಣಬಹುದು. ಆದರೆ ಅದೇ ಅಂಶವನ್ನು ವಿಶಾಲವಾದ ದೇಶದುದ್ದಕ್ಕೂ ಕಾರ್ಯರೂಪದಲ್ಲಿ ತರುವ ವಿಚಾರ ವೇನೂ ಸರಳವಲ್ಲ.

ನನಗನಿಸಿದಮಟ್ಟಿಗೆ ಒಳ್ಳೆಯ ಕಾರ್ಯ ಪ್ರಾರಂಭವಾಗಿದೆ ಹಾಗೂ ಒಳ್ಳೆಯ ಫಲಗಳು ಬರತೊಡಗಿವೆ. ಆದರೆ ಇಷ್ಟೇ ಮುಖ್ಯವಲ್ಲ. ವಿಜ್ಞಾನಿಗಳು ಮುಂದೆ ಬಂದು ಈ ಕಾರ್ಯಕ್ರಮಗಳನ್ನು ಕಾರ್ಯರೂಪದಲ್ಲಿ ತರುವಲ್ಲಿ ಮತ್ತೇನಾದರೂ ಸುಧಾರಣೆಯನ್ನು, ಹೊಸ ವಿಧಾನವನ್ನು ಕಂಡುಹಿಡಿದು ಸೂಚಿಸಬೇಕು. ಈ ಕಾರ್ಯಕ್ರಮವು ಕೇವಲ ರಾಜಕಾರಣಿಗಳಿಗೆ ಸಂಬಂಧಿಸಿಲ್ಲ. ಇದು ಸುತ್ತಲಿನ ಎಲ್ಲ ಜನತೆಗೆ, ಉದ್ಯಮಿಗಳಿಗೆ, ವಿಚಾರವಾದಿಗಳಿಗೆ, ಬುದ್ಧಿಜೀವಿಗಳಿಗೆ ಸಂಬಂಧಿ ಸಿದೆ. ದೇಶದ ಉದ್ಧಾರವು ಈ ಇಪ್ಪತ್ತಂಶ ಕಾರ್ಯಕ್ರಮವನ್ನು ಕಾರ್ಯಗತ ಗೊಳಿಸುವುದರಲ್ಲಿ ಅಡಗಿದೆ. ಈ ವಿಷಯದಲ್ಲಿ ನಾವು ಸಾಕಷ್ಟು ತಡಮಾಡಿದ್ದೇವೆ ಎಂಬುದು ನನ್ನ ಭಾವನೆ. ಈಗಾಗಲೇ ಸ್ವಾತಂತ್ರ್ಯಾನಂತರದಲ್ಲಿ ಸುಮಾರು ೨೫ ವರ್ಷಗಳು ಗತಿಸಿಹೋದವು. ಇತ್ತೀಚಿನ ಒಂದೆರಡು ವರ್ಷಗಳಲ್ಲಿಯಂತೂ ದೇಶವು ಸಾಕಷ್ಟು ತೊಂದರೆಗಳನ್ನು ಎದುರಿಸುತ್ತಿರುವದು. ಈ ಸಂದರ್ಭದಲ್ಲಿ ಈ ಇಪ್ಪತ್ತಂಶ ಕಾರ್ಯಕ್ರಮವು ಒಂದು ವರದಾನವಾಗಿ ಬಂದಿದೆ. ಎಲ್ಲರೂ ಇದನ್ನು ಸ್ವಾಗತಿಸಿರುವರು.

ಹಳ್ಳಿಗಳಲ್ಲಿ ಸಾಲದ ಶೂಲೆ ಕಡಿಮೆಯಾಗತೊಡಗಿದೆ. ಒಕ್ಕಲಿಗನ ಸಾಲ ವಿಮೋಚನೆಯಾದರೂ ಮತ್ತೆ ಬೇರೆ ಸಮಸ್ಯೆ ಬರಬಹುದು. ಅವುಗಳನ್ನು ಹೇಗೆ ಎದುರಿಸಬೇಕು ಆತನ ಸಹಾಯಕ್ಕೆ ಬ್ಯಾಂಕುಗಳ ಸೌಲಭ್ಯಗಳು ಮುಂದೆ ಹೇಗೆ ಬರಬೇಕು ಎಂಬಂಶಗಳನ್ನು ವಿಚಾರಿಸಬೇಕಾಗಿದೆ.

ಈ ಇಪ್ಪತ್ತಂಶಗಳು ಇಪ್ಪತ್ತು ಸೂತ್ರಗಳಂತಿವೆ. ಇವುಗಳನ್ನು ನಾವು ಸರಿಯಾಗಿ ವಿಶದೀಕರಿಸಿ, ಕಾರ್ಯರೂಪದಲ್ಲಿ ತರಲು ನೆರವಾಗಬೇಕು. ಆ ದಿಶೆ ಯಲ್ಲಿ ಬರಬಹುದಾದ ತೊಂದರೆಗಳ ನಿವಾರಣೋಪಾಯಗಳನ್ನು ನಾವು ಸೂಚಿಸ ಬೇಕಾಗಿದೆ. ಹಳ್ಳಿಗಳಿಗೆ ಸ್ವತಃ ಹೋಗಿ ನಾವು ಈ ಕಾರ್ಯಕ್ರಮದ ಕಾರ್ಯಾಚರಣೆ

ಯಲ್ಲಿ ಬರಬಹುದಾದ ತೊಂದರೆಗಳನ್ನು ಅಭ್ಯಸಿಸಬೇಕು. ವಿಚಾರವಾದಿಗಳಿಗೆ, ವಿಜ್ಞಾನಿಗಳಿಗೆ ಈ ದಿಶೆಯಲ್ಲಿ ಒಳ್ಳೆಯ ಅವಕಾಶ ಬಂದಿದೆ.

ಇಂದು ಸಾದರಪಡಿಸುತ್ತಿರುವ ಲೇಖನಗಳನ್ನು ನಾನು ಓದಿರುವೆ. ಈ ಎಲ್ಲ ಲೇಖನಗಳು ಉತ್ತಮವಾಗಿವೆ. ವಿಜ್ಞಾನಿಗಳು ಪ್ರಥಮವಾಗಿ ಈ ವಿಶಿಷ್ಟ ಸಮಸ್ಯೆಯನ್ನು ಅಭ್ಯಸಿಸಲು ಮುಂದೆ ಬಂದಿರುವರು. ಅವರು ಈ ಇಪ್ಪತ್ತಂಶಗಳಲ್ಲಿ ಹುದುಗಿದ ಸಿದ್ಧಾಂತಗಳನ್ನು ನಿರೂಪಿಸಿ ದೇಶದ ಉದ್ಧಾರದ ಕಾರ್ಯದಲ್ಲಿ ನೆರವಾಗುವರೆಂದು ಆಶಿಸುವೆ. ಲಿಂಕನ್ ಸಂಸ್ಥೆಯು ಈ ದಿಶೆಯಲ್ಲಿ ಒಳ್ಳೆಯ ನೆರವನ್ನು ನೀಡಿದೆ. ವಿಚಾರವಾದಿಗಳಿಗೆ, ವಿಜ್ಞಾನಿಗಳಿಗೆ ಇದು ಒಳ್ಳೆಯ ವೇದಿಕೆಯಾಗಿದೆ. ಜನತೆಗೆ, ದೇಶಕ್ಕೆ ಉಪಯುಕ್ತವಾಗುವ ಕೊಡುಗೆಯನ್ನು ಇದು ನೀಡಬಲ್ಲದು.

ಈ ಹಿಂದೆ ಇಂಥ ಸಂಸ್ಥೆಗಳು ಸಾಕಷ್ಟು ಪ್ರಮಾಣದಲ್ಲಿ ಸರಿಯಾಗಿ ಕಾರ್ಯವೆಸಗಿದವೆಂದೇ ಇಂಗ್ಲಂಡ ದೇಶವು ಮುಂದೆ ಬಂದಿತು ಎಂದು ಹೇಳಬಹುದು. ಜನತೆಗಾಗಿ, ದೇಶಕ್ಕಾಗಿ ಎಲ್ಲರೂ ಮುಂದೆ ಬಂದು ಕಾರ್ಯಮಾಡಬೇಕು. ಕೇವಲ ಕೆಲವರು ಕಾರ್ಯಮಾಡಿ ಉಳಿದವರೆಲ್ಲರೂ ಕೈಕಟ್ಟಿ ಕುಳಿತರೆ ದೇಶದ ಉದ್ಧಾರವಾಗಲಾರದು. ನಾವೆಲ್ಲರೂ ಕೂಡಿ, ವಿಚಾರಿಸಿ, ದೇಶದ ಕಾರ್ಯಗಳಲ್ಲಿ ಪಾಲುಗೊಳ್ಳಬೇಕು. ಈ ದಿಶೆಯಲ್ಲಿ ಇಂದಿನ ವಿಚಾರಸಂಕಿರಣವನ್ನು ಏರ್ಪಡಿಸಿರುವವನ್ನು ಕಂಡು ನನಗೆ ಅತ್ಯಾನಂದವಾಗಿದೆ. ಅತಿ ಸಂತೋಷದಿಂದ ಈ ವಿಚಾರಸಂಕಿರಣವನ್ನು ಉದ್ಘಾಟಿಸುತ್ತಿರುವೆನು. ಈ ವಿಚಾರಸಂಕಿರಣಕ್ಕೆ ಎಲ್ಲ ರೀತಿಯ ಶುಭ ಕೋರುವೆ.

ಡಾ|| ಎ. ಎಂ. ರಾಜಶೇಖರಯ್ಯ ಅವರ ಅಧ್ಯಕ್ಷೀಯ ಭಾಷಣ

ಲಿಂಕನ್ ಸಂಸ್ಥೆಯನ್ನು ಪುನರುದ್ದೀಪನ ಮಾಡಿದಂದಿನಿಂದ, ಇಂದಿನವರೆಗೆ ಏರ್ಪಡಿಸಿದ ಕಾರ್ಯಕ್ರಮಗಳಲ್ಲಿಯೇ ಇಂದಿನದು ಅತಿ ವಿಶಿಷ್ಟವಾದುದೆಂದು ಹೇಳಬಹುದು. ದೇಶದ ಮುಂದಿಟ್ಟಿರುವ ಪ್ರಾಮುಖ್ಯ ಕಾರ್ಯಕ್ರಮದ ಬಗೆಗೆ ನಾವಿಂದು ವಿಚಾರಮಂಥನ ಮಾಡಲಿದ್ದೇವೆ. ನಮಗರಿಯದಂತೆಯೇ ಈ ಕಾರ್ಯಕ್ರಮವು ಒಂದು ಶುಭದಿನದಂದು ಕೂಡಿಬಂದಿದ್ದು ಒಂದು ವಿಶೇಷವೇ. ಇಂದು ಜುಲೈ ನಾಲ್ಕನೆಯ ತಾರೀಖು. ಇದು ಲಿಂಕನ್‌ನ ನಾಡಾದ ಅಮೇರಿಕೆಯ ಸ್ವಾತಂತ್ರ್ಯದ ದಿನ. ಅಮೇರಿಕನ್ನರು ಬ್ರಿಟಿಷರ ಪಾರತಂತ್ರ್ಯದಿಂದ ಬಿಡುಗಡೆಯಾದ ದಿನ. ಅದರಲ್ಲಿಯೂ ಇಂದು ಅದರ ದ್ವಿಶತಮಾನೋತ್ಸವದ ದಿನ. ಇಂಥ ಶುಭದಿನದಂದು ಈ ವಿಚಾರಸಂಕಿರಣವು ಕೂಡಿಬಂದುದೇ ಒಂದು ವೈಶಿಷ್ಟ್ಯ.

ನಾವೀಗ ಚರ್ಚಿಸಲಿರುವ ವಿಷಯಗಳು ಹೊಸ ಸ್ವರೂಪದವುಗಳಾಗಿವೆ. ದಲಿತರ ಉದ್ಧಾರದ ಮಾರ್ಗಗಳಾಗಿವೆ. ಈ ದೃಷ್ಟಿಯಲ್ಲಿ ಆಗಿನ ಕಾಲದ ಮುಖಂಡರಲ್ಲಿಯೇ ಅಬ್ರಹಾಮ್ ಲಿಂಕನ್ ಅಗ್ರಗಣ್ಯರಾಗಿದ್ದರು. ಲಿಂಕನ್ನರ ವ್ಯಕ್ತಿತ್ವ, ವಿಚಾರಗಳು ಮತ್ತು ಅವರ ಉದಾತ್ತ ಪಾತ್ರ ಮುಂತಾದವುಗಳು ಕೇವಲ ಒಂದು ದೇಶದ ಚೌಕಟ್ಟಿಗೆ ಸೀಮಿತವಾಗಿರದೆ ವಿಶಾಲಪ್ರಪಂಚಕ್ಕೆ ಹರಡಿಕೊಂಡಿದ್ದವು. ಗುಲಾಮಗಿರಿಯ ವಿರುದ್ಧ ಬಂಡೆದ್ದು ಹೋರಾಡಿದ ಅವರಿಗೆ ಇಡೀ ಮಾನವತೆ ಋಣಿಯಾಗಿದೆ. ಯಾವುದೇ ಸ್ವರೂಪದ ಗುಲಾಮಗಿರಿಯು ದೇಶಕ್ಕೆ ಒಂದು ರೀತಿಯ ಕಲಂಕವಿದ್ದಂತೆ. ಆ ದೃಷ್ಟಿಯಿಂದ ನಮ್ಮ ದೇಶದಲ್ಲಿರುವ ಅಸ್ಪೃಶ್ಯತೆ, ಬಡತನ ಮತ್ತು ಅಜ್ಞಾನಗಳು ಕಲಂಕಗಳೇ ಸೈ. ನಮ್ಮ ಮಾನ್ಯ ಕುಲಪತಿಗಳು ವಿವರಿಸಿದಂತೆ ಇಪ್ಪತ್ತಂಶ ಕಾರ್ಯಕ್ರಮವು ಮುಖ್ಯ

ವಾಗಿ ಈ ದಲಿತರ ಉದ್ಧಾರಕ್ಕಾಗಿಯೇ ನಿರೂಪಿತವಾಗಿದೆ. ಸ್ವಾತಂತ್ರ್ಯ ಲಭಿಸಿ ಇಪ್ಪತ್ತೆಂಟು ವರ್ಷಗಳಾದರೂ ಈ ದಲಿತರು ತಾವಿದ್ದಲ್ಲಿಯೇ ಇರುವರಲ್ಲದೆ ಇನ್ನೂ ಜಮೀನದಾರ ಮತ್ತು ಸಾಹುಕಾರರ ಕಪಿಮುಷ್ಟಿಯಲ್ಲಿದ್ದಾರೆ. ನಮ್ಮ ಸಂವಿಧಾನದಲ್ಲಿ ಅವರಿಗಾಗಿ ಅನುವು ಮಾಡಿಕೊಟ್ಟ ಸೌಲಭ್ಯಗಳು ಅವರಿಗೆ ಸಂಪೂರ್ಣ ದೊರೆತಿಲ್ಲ. ಸಂವಿಧಾನದ ಪೀಠಿಕೆಯಲ್ಲಿರುವ ಉಚ್ಚ ಧ್ಯೇಯಗಳು ಕೇವಲ ಕಾಗದದ ಮೇಲೆಯೇ ಉಳಿದಿವೆ. ನಮ್ಮ ಮಾನ್ಯ ಕುಲಪತಿಯವರು ಹೇಳಿದಂತೆ, ನಮ್ಮ ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರಿತ್ತ ರಾಜಕೀಯ ಸ್ವಾತಂತ್ರ್ಯ, ರಾಜಕೀಯ ಕ್ರಾಂತಿಗಳೇ ಅಂತಿಮ ಗುರಿ ಎಂದು ತಿಳಿಯಬಾರದು. ಅವು ಉದಾತ್ತವಾದ ಸಾಮಾಜಿಕ ಮತ್ತು ಆರ್ಥಿಕ ಕ್ರಾಂತಿಗಳಿಗೆ ಸಾಧನ ಮಾತ್ರ. ಗಾಂಧೀಜಿಯವರು ರಾಜಕೀಯ ಸ್ವಾತಂತ್ರ್ಯ ತಂದುಕೊಟ್ಟಿದ್ದಾರೆ, ನೆಹರೂರವರು ಪ್ರಜಾಪ್ರಭುತ್ವ, ಜಾತ್ಯತೀತತೆ ಮತ್ತು ಸಮಾಜವಾದಗಳ ಭದ್ರ ಬುನಾದಿ ಹಾಕಿರುವರು. ಸ್ವಾತಂತ್ರ್ಯಾನಂತರದ ಭಾರತದಲ್ಲಿಯೇ ನೆಹರೂರವರು ಒಬ್ಬ ಅಗ್ರಗಣ್ಯ ಧುರೀಣರು ಮತ್ತು ಅಗ್ರಗಣ್ಯ ಸಮಾಜವಾದಿಗಳು ಆಗಿದ್ದರು. ಅವರು ಹಲವಾರು ತೊಂದರೆಗಳನ್ನು ಎದುರಿಸಬೇಕಾಯಿತು. ಏನೇ ಆದರೂ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಈ ಉಚ್ಚ ಧ್ಯೇಯಗಳಿಗೆ ಅವರು ನಿಜವಾಗಿಯೂ ಭದ್ರ ಬುನಾದಿಯನ್ನು ಹಾಕಿದರು. ಅದೇ ಪರಂಪರೆಯಲ್ಲಿ ಇಂದು ನಮ್ಮ ಪ್ರಧಾನಿಯವರಾದ ಶ್ರೀಮತಿ ಇಂದಿರಾ ಗಾಂಧಿಯವರು ಮುಂದುವರೆಯುತ್ತಿರುವರು. ಅವರೀಗ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಕೊನೆಯ ಘಟ್ಟವನ್ನು ಮುಟ್ಟಿರುವರು.

ದೈವದ ಮೇಲೆ, ಸಂಪ್ರದಾಯದ ಮೇಲೆ ನಂಬಿಗೆ ಇಟ್ಟ ನಾವು ಭಾರತೀಯರು ಬದಲಾವಣೆಯು ಅಶಕ್ಯವೆಂದು ಭಾವಿಸಿರುವೆವು. ಸಮಾಜ ವಿಜ್ಞಾನದ ಅರಿವಿದ್ದ ನಮಗೆ ಇಂಥ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಮಾಡುವದು ಎಷ್ಟು ಕಠಿಣ ಕೆಲಸವೆಂಬುದು ಗೊತ್ತು. ರಾಜಕೀಯ ಸ್ವಾತಂತ್ರ್ಯವನ್ನು ಪಡೆದಿದ್ದರೂ ಅದಕ್ಕೆ ಅನುಗುಣವಾದ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯನ್ನು ನಾವಿನ್ನೂ ಮಾಡಿಲ್ಲ. ಆ ರೀತಿಯ ಬದಲಾವಣೆ ನಮ್ಮ ಸಮಾಜದಲ್ಲಿ ಅವಶ್ಯವೆಂದೇ ನಮ್ಮಲ್ಲಿಯೇ ಅನೇಕರು ನಿರಾಶಾಭಾವನೆ ತಳೆದಿದ್ದಾರೆ. ಆದರೆ ಒಂದು ವರ್ಷದಿಂದೀಚೆಗೆ ಅಂಥ ಬದಲಾವಣೆ ಶಕ್ಯ ಎಂಬ ಭಾವನೆ ಒಡಮೂಡತೊಡಗಿದೆ. ಅದರ ಅರಿವು ಜನತೆಗೆ ಆಗತೊಡಗಿದೆ. ಇದು ಗಮನಾರ್ಹ ಸಂಗತಿ. ಜನದ ಮನದಲ್ಲಿ ಬದಲಾವಣೆಯಾಗದು ವಿನಃ ಅವರ ಜೀವನದಲ್ಲಿ ನಿಜವಾದ ಪರಿವರ್ತನೆಯಾಗುವದು ಶಕ್ಯವಿಲ್ಲ. ಹಳೆಯ ಧಾಟಿಯ ವಿಚಾರವಂತರಲ್ಲಿಯೂ

ಬದಲಾವಣೆಯಾಗಬೇಕು. ಅವರನ್ನು ಸಂಪ್ರದಾಯಶರಣರೆಂದು ನಾನು ಕರೆಯಲಾರೆ. ಅವರು ಹಳೆಯ ಛಾಟಿಯವರೆಂದು ಕರೆಯುವ ಉದ್ದೇಶವೆಂದರೆ— ಅವರ ದೃಷ್ಟಿಯಲ್ಲಿ ಇಂಥ ತೊಂದರೆಗಳು ಮತ್ತು ಆತಂಕಗಳಲ್ಲಿ ಬದಲಾವಣೆ ಕಾಣುವದು ಅಶಕ್ಯವಾಗಿದೆ.

ಇಪ್ಪತ್ತಂಶ ಕಾರ್ಯಕ್ರಮಗಳು ಉದಾತ್ತಾಂಶಗಳನ್ನು ಒಳಗೊಂಡಿವೆ. ನಮ್ಮ ಮಾನ್ಯ ಕುಲಪತಿಯವರು ಸೂಚಿಸಿದಂತೆ ಸರಕಾರ, ಜನತೆ ಪ್ರತಿಯೊಬ್ಬ ವ್ಯಕ್ತಿ, ಮುಖಂಡರು, ಬುದ್ಧಿಜೀವಿಗಳು ಅದರಲ್ಲಿ ಭಾಗವಹಿಸಬೇಕು. ಕಾರ್ಯಕ್ರಮಗಳನ್ನು ಸೈದ್ಧಾಂತಿಕವಾಗಿ ವಿಶದೀಕರಿಸುವದು ಬುದ್ಧಿಜೀವಿಗಳ ಮುಖ್ಯ ಕರ್ತವ್ಯವಾಗಿದೆ. ತಾತ್ವಿಕತೆಯಿಂದ ಕಾರ್ಯಾಚರಣೆಗೆ ಸ್ವಾಭಾವಿಕವಾಗಿ ನಾವು ತೊಡಗುತ್ತೇವೆ. ಆದರೆ ಎಷ್ಟೋ ಸಲ ನಾವು ಆಚರಣೆ ಬಿಟ್ಟು ಕೇವಲ ತತ್ವಕ್ಕೇ ಅಂಟಿಕೊಳ್ಳುತ್ತೇವೆ.

ಈ ಕಾರ್ಯಕ್ರಮಗಳಿಗೆ ಭದ್ರ ಬುನಾದಿಯನ್ನೊದಗಿಸುವದು ಈಗ ಅತ್ಯವಶ್ಯವಾಗಿದೆ. ಈ ಕಾರ್ಯಕ್ರಮಗಳು ಉಪಯುಕ್ತವಾಗಿವೆ ಎಂಬುದರಲ್ಲಿ ಸಂಶಯವಿಲ್ಲ. ಇವನ್ನು ನಾವು ಸರಿಯಾಗಿ ಕಾರ್ಯರೂಪದಲ್ಲಿ ತಂದರೆ ಇಚ್ಛಿತ ಫಲ ದೊರೆಯಲಿಕ್ಕೆ ಸಾಕು. ಇದನ್ನೇ ನಾನು 'ಬದಲಾವಣೆ' ಎನ್ನುವೆ. ಇದು ಕ್ರಾಂತಿಯ ಕೊನೆಯ ಹಂತ.

ಮಾನ್ಯ ಕುಲಪತಿಯವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಹೇಳಿದಂತೆ ಈ ಇಪ್ಪತ್ತಂಶಗಳು ಜೀವನದ ಎಲ್ಲ ರಂಗಗಳನ್ನು ಒಳಗೊಂಡಿವೆ. ಅವರು ಸೂಚಿಸಿದಂತೆ, ಈ ಹಲವಾರು ಅಂಶಗಳನ್ನು ಕಾರ್ಯರೂಪದಲ್ಲಿ ತರುವಾಗ್ಗೆ ಉದ್ಭವಿಸಬಹುದಾದ ಸಮಸ್ಯೆಗಳನ್ನು ನಾವು ವಿಚಾರಿಸುವದು ವಿಹಿತ. ಉದಾ— ಉಳುವವನಿಗೇ ಭೂಮಿಯನ್ನು ನೀಡುವುದು. ಇದರಿಂದ ಆತನಿಗೆ ಒಳ್ಳೆಯದಾಗುವುದೇ ? ಕೇವಲ ಭೂಮಾಲೀಕತ್ವವನ್ನು ಕೊಡುವುದರಿಂದ ಅವನು ಉದ್ಧಾರವಾಗುವನೇ ? ಇವೆಲ್ಲ ಚರ್ಚಿಸಲು ಯೋಗ್ಯವಾದ ಅಂಶಗಳಾಗಿವೆ. ಈ ಬದಲಾವಣೆ ಹಾಗೂ ಮಾರ್ಕ್ಸವಾದಿ ಸಿದ್ಧಾಂತದಲ್ಲಿ ಹಾಗೂ ಮಾರ್ಕ್ಸವಾದಿ ಕ್ರಾಂತಿ ಮತ್ತು ಉತ್ಪಾದನಾ ಕ್ರಾಂತಿಯಲ್ಲಿ ಅಂತರವಿದೆ. ಮಾಲೀಕರ ಸಂಖ್ಯೆಯನ್ನು ಬೆಳಸುವುದು ಮಾರ್ಕ್ಸನಿಗೆ ಬೇಕಿರಲಿಲ್ಲ. ನಾವೀಗ ಹತ್ತು ಭೂಮಾಲೀಕರ ಬದಲು ನೂರಾರು ಭೂಮಾಲೀಕರನ್ನು ಸೃಷ್ಟಿಸುತ್ತಿದ್ದೇವೆ. ಅದು ನಮ್ಮ ಗುರಿಯಲ್ಲ. ಮಾಲಿಕನಾಗುವುದರಿಂದ ಆತನ ಸ್ಥಾನಮಾನ ಹೆಚ್ಚಬಹುದು.

ಅದರ ಜೊತೆಗೆ ಆತನ ವ್ಯಕ್ತಿತ್ವವೂ ಬೆಳೆಯಬೇಕು. ಜಮೀನದಾರನು ಸ್ವತಃ ಉಳುತ್ತಿರಲಿಲ್ಲ. ಭೂಮಾಲೀಕನೇ ಸ್ವತಃ ಉಳಬೇಕೆಂಬುದು ಈ ಸುಧಾರಣೆಯ ಮೂಲ ಉದ್ದೇಶ. ಒಂದುವೇಳೆ ಜಮೀನದಾರನಿಗೆ ಉಳುವುದಾಗದಿದ್ದಲ್ಲಿ ಆತನ ಜಮೀನನ್ನು ಉಳುವವನಿಗೇ ಕೊಡಬೇಕಾಗುವದು. ಅಂದರೆ ಉಳುವವನೇ ಮಾಲೀಕನಾಗಿ ತನ್ನ ಕಾರ್ಯದಲ್ಲಿ ಮುಂದುವರೆಯುವನು. ನಂತರದ ಸಮಸ್ಯೆ ಒಕ್ಕಲುತನಕ್ಕೆ ಬೇಕಾಗುವ ಸಲಕರಣೆಗಳು, ಉದಾ— ಸಾಧನ ಸಾಮುಗ್ರಿಗಳು, ಎತ್ತುಗಳು, ಟ್ರ್ಯಾಕ್ಟರ, ಬೀಜ, ಗೊಬ್ಬರ ಇವುಗಳ ಮೇಲೆ ಉತ್ಪಾದನೆ ಅವಲಂಬಿಸಿದೆ. ನಿನ್ನಿನವರೆಗೂ ಒಬ್ಬ ಕೂಲಿಯಾಗಿದ್ದವನು ಇಂದು ಅದು ಹೇಗೆ ಈ ಸಮಸ್ಯೆಗಳನ್ನು ಎದುರಿಸಬಲ್ಲನು ? ಕೇವಲ ಮಾಲೀಕನಾಗುವುದ ರಿಂದ ಈ ಕೂಲಿಯು ಅವೆಲ್ಲ ಸಲಕರಣೆಗಳನ್ನು ಪಡೆಯಬಲ್ಲನೇ ? ಆ ಕಾರಣ, ಮತ್ತೆ ಹಲವಾರು ಸಂಘ ಸಂಸ್ಥೆಗಳು ಆತನ ನೆರವಿಗೆ ಬರಬೇಕಾಗುವದು ಅನಿವಾರ್ಯ. ಅದೇ ರೀತಿ ಹಳ್ಳಿಯಲ್ಲಿಯ ಸಾಲವಿಮುಕ್ತಿಯೂ ಒಂದು ಸಮಸ್ಯೆಯೆ. ಅದಕ್ಕೆ ಹಣ ಅವಶ್ಯ. ಸಾಲವೇ ನಮ್ಮ ಜೀವನಾಧಾರವಾಗಿ ಬಿಟ್ಟಿದೆ ! ನಾವೆಲ್ಲರೂ ಒಂದಿಲ್ಲೊಂದು ರೀತಿಯಲ್ಲಿ ಸಾಲಗಾರರೇ ! ಸಾಲಬಾಧೆ ಯಿಂದ ಅವರನ್ನೆಲ್ಲ ಮುಕ್ತಗೊಳಿಸಬೇಕಾದರೆ ಈ ಸಾಲ ಸೌಲಭ್ಯವನ್ನು ಹೇಗೆ ದೊರಕಿಸಬೇಕು ? ಇದೂ ಒಂದು ಸಮಸ್ಯೆಯಾಗಿಬಿಟ್ಟಿದೆ. ಬ್ಯಾಂಕುಗಳು ಈ ಸೌಲಭ್ಯವನ್ನು ಒದಗಿಸಲಿ ಎಂದು ವಿಚಾರಿಸಿದರೆ ಅವಾದರೂ ಎಲ್ಲಿಯವರೆಗೆ ಈ ವಿಷಯದಲ್ಲಿ ಸಮರ್ಥವಾಗಬಲ್ಲವು ?

೧೯೭೫ರ ಜುಲೈ ೧, ರಂದು ನಮ್ಮ ಪ್ರಧಾನ ಮಂತ್ರಿಯವರು ಹಲವಾರು ಎಡರು ತೊಡರುಗಳನ್ನು ಎದುರಿಸಿ ಆವಶ್ಯಕವಾದ ರಾಜಕೀಯ ವಾತಾವರಣವನ್ನು ನಿರ್ಮಿಸಿ ಈ ಕಾರ್ಯಕ್ರಮವನ್ನು ಘೋಷಿಸಿದರು. ಈ ಕಾರ್ಯಕ್ರಮದ ವಾರ್ಷಿಕೋತ್ಸವ ನಿಮಿತ್ತ ಈ ವಿಚಾರಸಂಕಿರಣ ಸಂಘಟಿತವಾಗಿದೆ. ಈ ಕಾರ್ಯ ಕ್ರಮವನ್ನು ಘೋಷಿಸಿದಾಗ್ಗೆ ಎಷ್ಟೋ ಜನರು ಅವನ್ನು ಹಗುರಾಗಿ ಕಂಡರು. ನಾವು ಸಹ ಎಷ್ಟೋ ಬುದ್ಧಿಜೀವಿಗಳು ಇವೆಲ್ಲ ಕೇವಲ ರಾಜಕಾರಣ, ಇದರಿಂದ ನಾವು ಇಚ್ಛಿತ ಗುರಿ ಮುಟ್ಟಲಾರೆವು ಎಂಬ ಭಾವನೆಗಳನ್ನು ತಾಳಿದ್ದೆವು. ಆದರೆ ಇಂದಿನ ವರೆಗೆ ಒಂದು ವರ್ಷದಲ್ಲಿ ಆಗಿರುವ ಸೌಲಭ್ಯಗಳನ್ನು ನಾವು ಕಣ್ಣಾರೆ ಕಾಣಬಹುದು. ಕುಲಪತಿಯವರು ಸೂಚಿಸಿದಂತೆ ಈ ಲೇಖನಗಳ ಮಾಲೆಯಲ್ಲಿ ಎರಡು ವಿಶೇಷ ಅಧ್ಯಯನದ ಲೇಖನಗಳೂ ಇವೆ. ಡಾ. ಕರೆಣ್ಣವರು ಮರೇವಾಡ ಹಳ್ಳಿಯ ಬಗೆಗೆ ವಿಶೇಷ ಅಧ್ಯಯನಮಾಡಿದ್ದಾರೆ ಮತ್ತು ಡಾ. ಕದೇತೋಟದರು ಒಂದು ತಿಂಗಳು ಬಾಡ ಹಳ್ಳಿಯಲ್ಲುಳಿದು ಅಧ್ಯಯನ ಮಾಡಿರುವರು. ನಮ್ಮ

ವಿಚಾರಸಂಕಿರಣಕ್ಕೆ ಈ ವಿಶೇಷ ಅಧ್ಯಯನಗಳು ಲಭ್ಯವಾದುದು ಸಂತಸದ ಸಂಗತಿ. ಉದ್ಭವಿಸಬಹುದಾವ ಸಮಸ್ಯೆಗಳನ್ನು ಹೇಗೆ ಎದುರಿಸಲಾಗಿದೆ ಎಂಬುವನ್ನು ಕಂಡುಕೊಳ್ಳಲು ನಮಗೀಗ ಅನುಕೂಲವಾಗುವದು. ಇನ್ನೂ ಹೆಚ್ಚಿನದೇನನ್ನಾವರೂ ಮಾಡಬಹುದೇ ಎಂಬುದನ್ನೂ ವಿಚಾರಿಸಲು ಅನುವಾಗುವದು. ಈ ರೀತಿ ಚರ್ಚಿಸುತ್ತಿರುವದು ಇದೇ ಪ್ರಪ್ರಥಮವೆಂದು ಹೇಳಬಹುದು. ಇದು ನಮ್ಮ ಲಿಂಕನ್ ಸಂಸ್ಥೆಗೆ ಹೆಮ್ಮೆಯ ವಿಷಯ. ಈ ಬಗೆಗೆ ಪತ್ರಿಕೆಗಳಲ್ಲಿ ದಿನಂಪ್ರತಿ ಚರ್ಚೆಯಾಗುತ್ತಿವೆ ಮತ್ತು ರಾಜಕೀಯ ರಂಗದಲ್ಲಿ ಈ ಕಾರ್ಯಕ್ರಮವನ್ನು ಪ್ರಚಾರಗೊಳಿಸಲು ಹಲವಾರು ಪ್ರಯತ್ನಗಳಾಗಿವೆ. ಆ ಮಾತು ಬೇರೆ. ಇವೆಲ್ಲಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗಿ ಪ್ರತಿಯೊಂದು ಅಂಶವನ್ನು ಪ್ರತ್ಯೇಕವಾಗಿ ವಿಷದೀಕರಿಸುವದು ನಮ್ಮ ಉದ್ದೇಶವಾಗಿದೆ. ಇವುಗಳಿಂದ ಸಮಾಜಕ್ಕೆ ಯಾವ ರೀತಿ ಉಪಯೋಗವಾಗುವದು, ಈಗಾಗಲೆ ಎಷ್ಟು ಉಪಯೋಗವಾಗಿದೆ ಎಂಬುದನ್ನು ನೋಡಬೇಕಾಗಿದೆ. ಸಮಾಜ ಮತ್ತು ಬುದ್ಧಿಜೀವಿಗಳಲ್ಲಿ ಸಾಮೀಪ್ಯ ತರುವುದೂ ಒಂದು ನಮ್ಮ ಮುಖ್ಯ ಗುರಿಯಾಗಿದೆ. ಏಕೆಂದರೆ ಬುದ್ಧಿಜೀವಿಗಳು ದೇಶಕ್ಕೆ ಮಾಡಿದುದಾದರೂ ಏನು ? ಎಂದು ಪ್ರಶ್ನಿಸುತ್ತಿರುವರಲ್ಲವೆ ಹಲವು ಸಲ ಅವರನ್ನು ಹಳಿದಿರುವರು, ಹಲವು ಸಲ ನಗೆಯಾಡಿರುವರು ಮತ್ತು ಹಲವು ಸಲ ಟೀಕಿಸಿರುವರು. ಬುದ್ಧಿಜೀವಿಗಳು ತಮ್ಮ ಪಾತ್ರವನ್ನಾಡಬೇಕೆಂದು ಪ್ರತಿದಿನ ಅರಿಕೆಗಳು, ಸೂಚನೆಗಳು ಮತ್ತು ಎಚ್ಚರಿಕೆಗಳು ಬಂದೇ ಬರುತ್ತಿರುವವನ್ನು ಕಾಣುತ್ತಿರುವಿರಿ. ಕೇವಲ ವಿದ್ಯೆ ನೀಡಿ ಎಮ್. ಎ., ಎಮ್. ಸಿ. ಮತ್ತು ಪಿಎಚ್. ಡಿ. ಪದವೀಧರರನ್ನು ಉತ್ಪಾದಿಸುವುದೊಂದೇ ನಮ್ಮ ಕೆಲಸವಲ್ಲ. ಆ ದಿಶೆಯಲ್ಲಿ ನಮ್ಮ ಜನಾಂಗ ದ್ವಿಗುಣಿತವಾಗಿವೆ. ಹಾಗೆ ನೋಡಿದರೆ ನನ್ನ ಕೈಯಲ್ಲಿಯೇ ಕನಿಷ್ಟ ಅರ್ಧ ಡಝನ್‌ದಷ್ಟು ಪಿಎಚ್. ಡಿ. ಗಳು ಹೊರಬಿದ್ದಿರುವವು. ನಾಳೆ ಅವರೂ ನನ್ನ ದಾರಿಯಲ್ಲಿ ಬರಬಹುದು. ಆದರೆ ಅಷ್ಟೇ ಮುಖ್ಯವಲ್ಲ. ನಾನು ಎಷ್ಟೋ ಸಲ ನನ್ನ ವಿದ್ಯಾರ್ಥಿಗಳಿಗೆ ನಮ್ಮ ರಂಗಕ್ಕೆ ದೊಡ್ಡ ಸಂಖ್ಯೆಯಲ್ಲಿ ಸೇರಬೇಡಿರೆಂದು ಹೇಳಿರುವೆ. ನಮ್ಮ ಜ್ಞಾನ ಜನತೆಗೆ ಮುಟ್ಟಬೇಕಾದರೆ ಮತ್ತು ಸಮಾಜಕ್ಕೆ ಅದರಿಂದ ಉಪಯೋಗಬೀಳಬೇಕಾದರೆ, ಹೊರಬಂದ ನಮ್ಮ ವಿದ್ಯಾರ್ಥಿಗಳು ಬೇರೆಡೆಗೆ ಹೋಗಿ, ಜೀವನದ ಬೇರೆ ಬೇರೆ ರಂಗಗಳಲ್ಲಿ ಸೇವೆಸಲ್ಲಿಸಬೇಕು. ಕೇವಲ ಶಿಕ್ಷಕರಾಗುವಮೊಂದೇ ಗುರಿಯನ್ನು ಅವರು ಇಟ್ಟುಕೊಳ್ಳಬಾರದು. ಈ ಯುಗದಲ್ಲಿದ್ದ ನಮ್ಮಲ್ಲಿಯ ಹಲವರು ಸಹ ಹೊರಹೋಗಬಹುದು. ಹಾಗೆ ಮಾಡಿದಲ್ಲಿ ನಾವು ಸಮಾಜಕ್ಕೆ ಎಷ್ಟು ನೆರವು ನೀಡಿದ್ದೇವೆ, ಸಮಾಜದ ಋಣವನ್ನು ಎಷ್ಟರಮಟ್ಟಿಗೆ ತೀರಿಸಿದ್ದೇವೆ

ಎಂಬುದನ್ನು ಒಳಹೊಕ್ಕು ತಿಳಿದುಕೊಳ್ಳಲು ಅನುವಾಗುವದು. ಜನತೆಯ ಕಷ್ಟ-ಸುಖಗಳಲ್ಲಿ ಭಾಗಿಯಾದಾಗ್ಗ ಮಾತ್ರ ಆ ರೀತಿ ನಾವು ಮಾಡಬಲ್ಲೆವು.

ಈ ಲೇಖನಗಳ ಮುಖಾಂತರ ಈ ಸಂಜೆ ಎನ್ನುವುದರೊಳಗೆ ನಾವು ಒಂದು ಸಿದ್ಧಾಂತಕ್ಕೆ ಬಂದು ಮುಟ್ಟಬಹುದು. ಅಲ್ಲದೆ ಕಾರ್ಯಕ್ರಮವನ್ನು ಸುಧಾರಿಸುವತ್ತ ನಾವೆಲ್ಲ ಕೂಡಿ ವಿಚಾರಿಸಿ ಹಲವು ಸೈದ್ಧಾಂತಿಕ ಸೂಚನೆಗಳನ್ನೂ ಮಾಡಬಹುದು. ಈಗಿನ ಅಂಶಗಳಿಗೆ ಇನ್ನೂ ಹಲವಾರು ಅಂಶಗಳನ್ನು ನಾವು ಸೇರಿಸಲೂಬಹುದು. ಉದಾ—ರಾಷ್ಟ್ರೀಯ ಶಿಸ್ತು.

ಸ್ವರ್ಣಸಿಂಗ ಸಮಿತಿಯು ನಾಗರಿಕರಿಗೆ ಹಲವು ಕರ್ತವ್ಯಗಳನ್ನು ಕಡ್ಡಾಯ ಮಾಡಲು ಹೊರಟಿದೆ. ಸಂವಿಧಾನದಲ್ಲಿ ಕರ್ತವ್ಯಗಳನ್ನು ಅಳವಡಿಸುವುದು ಸಂತಸದ ಸಂಗತಿ. ಅವುಗಳಲ್ಲಿ ಶಿಸ್ತು ಸಹ ಒಂದಾಗಿದೆ. ನಮ್ಮ ದೇಶದಷ್ಟು ಬಹುಶಃ ಇನ್ನಾವ ದೇಶವೂ ಅಶಿಸ್ತಿನದಾಗಿಲ್ಲ. ಕೇವಲ ರಾಜಕೀಯ ಅಥವಾ ಇನ್ನಿತರ ಅಶಿಸ್ತಷ್ಟೇ ಅಲ್ಲ. ನಾವೆಲ್ಲ ಒಂದೊಂದು ರೀತಿಯಲ್ಲಿ ಅಶಿಸ್ತನ್ನು ಬೆಳೆಸಿಕೊಂಡು ಬಂದಿದ್ದೇವೆ. ನಾವು ಹೇಗೆ ವರ್ತಿಸಬೇಕು ಎಂಬುದು ಮುಖ್ಯ. ಅದರಲ್ಲಿಯೂ ಮುಖ್ಯವಾಗಿ ವಿದ್ಯಾರ್ಥಿಗಳು, ಯುವಕರು ಮತ್ತು ಹಿರಿಯರು ಸಹ. ಎಲ್ಲೆಡೆಯಲ್ಲಿಯೂ ಶಿಸ್ತಿರಬೇಕು. ಆ ರೀತಿಯ ಒಂದು ಅಂಶವನ್ನು ಈ ಇಪ್ಪತ್ತಂಶ ಕಾರ್ಯಕ್ರಮದಲ್ಲಿ ಸೇರ್ಪಡೆ ಮಾಡಬೇಕು. ಈ ಕಾರ್ಯಕ್ರಮದಲ್ಲಿ ಒಂದು ರೀತಿಯ ಜಾದೂ ಇದೆ. ಅದನ್ನೀಗ ನಾವು ಗರಿಷ್ಠ ಪ್ರಮಾಣದಲ್ಲಿ ಉಪಯೋಗಿಸಿ ಸಮಾಜಕ್ಕೆ ಅನುಕೂಲ ಮಾಡಿಕೊಡಬೇಕಾಗಿದೆ. ಆ ದೃಷ್ಟಿಯಲ್ಲಿ ಇನ್ನೂ ಹಲವು ಅಂಶಗಳ ಬಗೆಗೆ ನಾವು ವಿಚಾರಿಸಬೇಕು. ಕೇವಲ ಇಪ್ಪತ್ತಷ್ಟೇ ಏಕೆ? ಇಪ್ಪತ್ತೈದು ಅಂಶಗಳಾಗಲಿ ಅಂಥ ಹಲವು ಅಂಶಗಳನ್ನು ಹುಡುಕಿ ತೆಗೆದು ಸರಕಾರಕ್ಕೆ ಮತ್ತು ಅವುಗಳ ಸದುಪಯೋಗದಿಂದ ಸಮಾಜಕ್ಕೆ ನಾವೀಗ ನೆರವಾಗಬೇಕಾಗಿದೆ. ನಾನು ನಿಜವಾಗಿಯೂ ಬಯಸಿದ್ದು ಈ ದಿಸೆಯಲ್ಲಿ. ಇದಕ್ಕೆ ಸರಿಯಾದ ಮನ್ನಣೆ ದೊರಕಿದುದು ಹಾಗೂ ನಮ್ಮ ಮಾನ್ಯ ಕುಲಪತಿಯವರು ನಮಗೆ ಸಾಕಷ್ಟು ಪ್ರೋತ್ಸಾಹ ನೀಡಿದುದನ್ನು ಕಂಡು ನನಗೆ ಬಹಳ ಸಂತೋಷವಾಗಿದೆ.

ವಿಚಾರಸಂಕಿರಣಗಳೆಂದರೆ ಸ್ವಾಭಾವಿಕವಾಗಿ ಖರ್ಚಿನವು. ಕುಲಪತಿಯವರು ಅವಕ್ಕಾಗಿ ಸಾವಿರಾರು ರೂಪಾಯಿಗಳನ್ನು ತೆಗೆದಿಟ್ಟಿರುವರು. ಇನ್ನುಳಿದ ಸಂಕಿರಣಗಳಿಗೆ ಅವರು ಈಗಾಗಲೇ ಸಾಕಷ್ಟು ಖರ್ಚುಮಾಡಿರುವರು. ಆದರೆ

ಈ ಸಂಕಿರಣಕ್ಕೆ ನಮಗೇನು ಹೆಚ್ಚು ಖರ್ಚು ಹಿಡಿಯುವದಿಲ್ಲ. ಇಪ್ಪತ್ತಂಶ ಕಾರ್ಯಕ್ರಮದ ನಿಜ ಅರ್ಥಕ್ಕನುಸರಿಸಿ ಕಡಿಮೆ ಖರ್ಚಿನಲ್ಲಿ ಮಾಡುತ್ತಿರುವೆ ವೆಂಬುದನ್ನು ಹೇಳಲು ನನಗೆ ಸಂತಸವಾಗುತ್ತದೆ. ಆದಷ್ಟು ಅತೀವ ಕಡಿಮೆ ಖರ್ಚಿನಲ್ಲಿ ಸಂಕಿರಣವನ್ನು ಏರ್ಪಡಿಸುವದು ಶಕ್ಯವೇ ಎಂಬುದನ್ನು ಕಂಡುಕೊಳ್ಳೋಣ. ಇಲ್ಲಿಯ ವರೆಗೆ ಮಾತ್ರ ನಾನು ಯಾವುದಕ್ಕೂ ಖರ್ಚುಮಾಡಿಲ್ಲ. ಆದರೆ ನಿಮೆಲ್ಲರನ್ನು ಸ್ವಲ್ಪ ಉತ್ತೇಜಿತರನ್ನಾಗಿ ಹಾಗೂ ಉಲ್ಲಸಿತರನ್ನಾಗಿ ಮಾಡಲು ಮುಂದಿನ ತಾಸಿನಲ್ಲಿ ಸ್ವಲ್ಪ ಖರ್ಚುಮಾಡಬೇಕಾಗುವದು. ಇಷ್ಟೆಲ್ಲ ಸಹಕಾರ ಸಿಕ್ಕಿದುದಕ್ಕೆ ನನಗೆ ಸಂತಸವಾಗಿದೆ. ಈ ರೀತಿಯ ಸಹಕಾರ ಇನ್ನು ಮುಂದೆಯೂ ಲಭಿಸಿದರೆ ಕುಲಪತಿಯವರು ಸೂಚಿಸಿದಂತೆ ಒಂದಲ್ಲ ಹಲವಾರು ವಿಚಾರಸಂಕಿರಣಗಳನ್ನು ಲಿಂಕನ್ ಸಂಸ್ಥೆಯ ಅಂಗವಾಗಿ ಏರ್ಪಡಿಸಲು ಆಶಿಸುವೆವು. ಈ ಸಂಸ್ಥೆಯು ರಾಜ್ಯಶಾಸ್ತ್ರ ವಿಭಾಗದ ಮುಖಾಂತರ ಸದಾ ವಿಶ್ವವಿದ್ಯಾಲಯಕ್ಕೆ ಎಲ್ಲ ರೀತಿಯ ಪ್ರಾಯೋಗಿಕ ಕಾರ್ಯಗಳಲ್ಲಿ ಸಹಭಾಗಿಯಾಗಿರುವದು. ಅಂಥ ಜವಾಬ್ದಾರಿಯನ್ನು ನಾವು ಸಂತೋಷದಿಂದ ಸ್ವೀಕರಿಸುವೆವು. ಈ ನನ್ನ ಕೆಲವು ಮಾತುಗಳೊಂದಿಗೆ, ನನ್ನ ವೈಯಕ್ತಿಕ ಕೃತಜ್ಞತೆಗಳನ್ನು ಮಾನ್ಯ ಕುಲಪತಿಯವರಿಗೂ ಮತ್ತು ತಮ್ಮೆಲ್ಲರಿಗೂ ಅರ್ಪಿಸಿ ಮುಂದುವರಿಯುವ ವಿಚಾರಸಂಕಿರಣದಲ್ಲಿ ತಾವೆಲ್ಲ ಭಾಗವಹಿಸುವಂತೆ ಕೇಳಿಕೊಳ್ಳುವೆನು.

——

ಸಂಪಾದಕೀಯ

ಪ್ರಸರಣ ಜ್ಞಾನದ ನೈಜಗುಣ. ಜ್ಞಾನವು ಅಡೆತಡೆಯಿಲ್ಲದೆ ಪ್ರಸಾರವಾದಷ್ಟು ಹೆಚ್ಚು ಹೆಚ್ಚು ವಿಚಾರಗಳನ್ನು ಪ್ರಕಾಶಪಡಿಸಿ ಸಂಬಂಧಪಟ್ಟ ಜನತೆಯ ಸಮಸ್ಯೆಗಳ ಅರಿವನ್ನುಂಟುಮಾಡಿ ಅವರ ಆಶೆ-ಆಶೋತ್ತರಗಳ ಸಾಫಲ್ಯಕ್ಕೆ ನೆರವಾಗಬಲ್ಲುದು. ಹಾಗಿಲ್ಲದಿದ್ದಲ್ಲಿ ಅದು ಕೇವಲ ಪರಿಣತರೆನಿಸಿದವರ ಸ್ವತ್ತಾಗಿ ಉಳಿದು ಸೈದ್ಧಾಂತಿಕವಾದ ವಿವಾದಗಳ ವಸ್ತುವಾಗಿ ಜನಜೀವನಕ್ಕೆ ನಿರುಪಯುಕ್ತವೆನಿಸುವ ಸಂಭವವೇ ಹೆಚ್ಚು. ಈ ದೃಷ್ಟಿಯಿಂದ ನೋಡಿದಾಗ, ಜ್ಞಾನಪ್ರಸಾರಕ್ಕೆ ಅತ್ಯುತ್ತಮ ಮಾಧ್ಯಮ ಪ್ರಾದೇಶಿಕ ಭಾಷೆ ಎಂಬ ಮಾತಿನ ಅಂತರ್ಯ ಸರ್ವರಿಗೂ ವೇದ್ಯವಾಗದಿರದು. ಸ್ವತಂತ್ರ ಭಾರತದ ವಿಚಾರವಂತರ ಮನದಲ್ಲಿ ಮೂಡಿಬಂದ ಈ ವಿಚಾರದ ಇಂಗಿತವನ್ನು ಬಹು ಬೇಗ ಗ್ರಹಿಸಿ ತನ್ನ ವೈಚಾರಿಕ ಹಾಗೂ ಸಂಶೋಧನಾತ್ಮಕ ಕಾರ್ಯಕ್ರಮಗಳಲ್ಲಿ ಅನುಷ್ಠಾನಕ್ಕೆ ತಂದಿರುವುದು ಹಾಗೂ ತರುತ್ತಿರುವುದು ಕರ್ನಾಟಕ ವಿಶ್ವವಿದ್ಯಾಲಯದ ಹಿರಿಮೆಯ ದ್ಯೋತಕ.

ತನ್ನ ವಿವಿಧ ವಿಭಾಗಗಳಲ್ಲಿ ನಡೆಯುವ ಚಿಂತನ ಹಾಗೂ ಸಂಶೋಧನೆಗಳ ಅಭಿವ್ಯಕ್ತಿಗೆ ಈ ವಿಶ್ವವಿದ್ಯಾಲಯವು ಇಂಗ್ಲಿಷಿನಲ್ಲಿ ಪ್ರಕಟಿಸುತ್ತಿರುವ ನಿಯತಕಾಲಿಕಗಳು ಈಗಾಗಲೇ ಪುಷ್ಟವಾಗಿ ಬೆಳೆದು, ದೇಶ ವಿದೇಶದ ವಿಶ್ವವಿದ್ಯಾಲಯಗಳ ಪುಸ್ತಕ ಭಂಡಾರಗಳನ್ನು ಅಲಂಕರಿಸಿರುವುದು ಹೆಮ್ಮೆಯ ವಿಷಯ. ಜೊತೆಗೆ ಆ ಚಿಂತನ ಹಾಗೂ ಸಂಶೋಧನೆಗಳು ಅವು ಮೂಡಿಬಂದ ನಾಡಿನ ಜನತೆಗೆ

ಮುಟ್ಟಬೇಕಾದ ಅಗತ್ಯವನ್ನು ಗಮನಿಸಿ, ನಮ್ಮ ವಿಶ್ವವಿದ್ಯಾಲಯವು 'ಮಾನವಿಕ ಭಾರತಿ'ಯನ್ನು ಪ್ರಾರಂಭಿಸಿದೆ. ಈಗಾಗಲೇ ಪ್ರಾರಂಭವಾಗಿರುವ 'ಕರ್ನಾಟಕ ಭಾರತಿ', 'ವಿಜ್ಞಾನ ಭಾರತಿ'ಗಳ ಜೊತೆಗೇ ಈ ಪತ್ರಿಕೆಯೂ ಬೆಳ್ಳಿಹಬ್ಬದ ಮುಕ್ತಾಯ ಸಮಾರಂಭದಂದು ಪ್ರಕಟಗೊಳ್ಳುತ್ತಿರುವುದು ಸಂತೋಷದ ಸಂಗತಿ.

ರಾಜ್ಯಾಡಳಿತದ ಎಲ್ಲ ಹಂತಗಳಲ್ಲಿಯೂ ಪ್ರಾದೇಶಿಕ ಭಾಷೆಯನ್ನು ಬಳಸುವುದಲ್ಲದೆ ನ್ಯಾಯ ಮತ್ತು ಆಡಳಿತದ ವಿಚಾರ ಹಾಗೂ ವೈಜ್ಞಾನಿಕ ಚಿಂತನ-ಸಂಶೋಧನೆಗಳನ್ನೂ ಪ್ರಾದೇಶಿಕ ಭಾಷೆಯಲ್ಲಿ ಪ್ರಕಟಿಸಬೇಕೆಂಬ ಸರ್ಕಾರದ ಧೋರಣೆಯನ್ನು ಈ ನಿಯತಕಾಲಿಕವು ತಕ್ಕಮಟ್ಟಿಗಾದರೂ ಈಡೇರಿಸಬೇಕೆಂಬ ಬಯಕೆ ನಮ್ಮದಾಗಿದೆ.

ಪ್ರಸ್ತುತ ಸಂಪುಟದಲ್ಲಿ ಪ್ರಕಟವಾಗಿರುವ ಲೇಖನಗಳು ಬಹುಮಟ್ಟಿಗೆ ನಮ್ಮ ವಿಶ್ವವಿದ್ಯಾಲಯದ ಸಾಮಾಜಿಕ ವಿಜ್ಞಾನದ ವಿವಿಧ ವಿಭಾಗಗಳಲ್ಲಿ ನಡೆದಿರುವ ವೈವಿಧ್ಯಪೂರ್ಣ ವಿಚಾರ-ವಿವೇಚನೆಯ ಒಂದು ಪ್ರತಿಬಿಂಬದಂತಿವೆ. ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಮನೋವಿಜ್ಞಾನ, ಮಾನವಶಾಸ್ತ್ರ, ಇತಿಹಾಸ, ಸಮಾಜಕಾರ್ಯ ಮುಂತಾದ ಹಲವು ಕ್ಷೇತ್ರಗಳಲ್ಲಿ ಬೋಧನ ಹಾಗೂ ಸಂಶೋಧನಗಳಲ್ಲಿ ತೊಡಗಿರುವ ಅಧ್ಯಾಪಕರು ತಮ್ಮ ತಮ್ಮ ವಿಚಾರಗಳನ್ನು ಕನ್ನಡಿಸುವಲ್ಲಿ ಸಾಕಷ್ಟು ಸಫಲರಾಗಿದ್ದಾರೆ. ಸಾಮಾನ್ಯ ಓದುಗರಿಗೂ ಅವು ಉಪಯುಕ್ತವಾಗಬಲ್ಲವೆಂಬ ಭರವಸೆ ನಮ್ಮದಾಗಿದೆ.

ಪ್ರಯಾಸಕರವಾದ ಇಂತಹ ಕಾರ್ಯವನ್ನು ಸುಲಭಗೊಳಿಸಿಕೊಟ್ಟ ಶ್ರೇಯಸ್ಸು ಸಹೃದಯರೂ, ವಿಚಾರಶೀಲರೂ ಆದ ನಮ್ಮ ಕುಲಪತಿಗಳಾದ ಡಾ. ಆರ್. ಸಿ. ಹಿರೇಮಠ ಅವರಿಗೆ ಸಲ್ಲುತ್ತದೆ. ಈ ನಿಯತಕಾಲಿಕದ ಪ್ರಕಾಶನಕ್ಕೆ ನಿರಂತರ ಪ್ರೋತ್ಸಾಹ ಮತ್ತು ನೆರವು ನೀಡುತ್ತಿರುವ ಸನ್ಮಾನ್ಯ ಕುಲಪತಿಗಳಿಗೆ ನಾವು ತುಂಬ ಕೃತಜ್ಞರಾಗಿದ್ದೇವೆ. ಇಂತಹ ಒಂದು ರಚನಾತ್ಮಕ ಕಾರ್ಯಸಾಧನೆಯಲ್ಲಿ ನೆರವಾದವರೆಲ್ಲರಿಗೂ ನಮ್ಮ ನೆನಕೆಗಳು ಸಲ್ಲಬೇಕು.

ಈ ಸಂಚಿಕೆಯ ಲೇಖಕರು

೧. ಡಾ. ಎ. ಎಮ್. ರಾಜಶೇಖರಯ್ಯ
ಪ್ರೊಫೆಸರ್ ಮತ್ತು ಮುಖ್ಯಸ್ಥರು,
ರಾಜ್ಯಶಾಸ್ತ್ರ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೨. ಶ್ರೀ ಹಾ. ವೆಂ. ನಾಗೇಶ,
ರೀಡರ್ ಮತ್ತು ಮುಖ್ಯಸ್ಥರು,
ಸಮಾಜಶಾಸ್ತ್ರ ವಿಭಾಗ,
ಜೆ. ಎಸ್. ಎಸ್. ಬನಶಂಕರಿ ಆರ್ಟ್ಸ್ ಕಾಲೇಜ,
ವಿದ್ಯಾಗಿರಿ, ಧಾರವಾಡ.

೩. ಶ್ರೀ ವ್ಹಿ. ಎಸ್. ಪಾಟೀಲ,
ಲೆಕ್ಚರರ್, ರಾಜ್ಯಶಾಸ್ತ್ರ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೪. ಡಾ. ಎನ್. ಎ. ಪಾಟೀಲ
ಲೆಕ್ಚರರ್, ರಾಜ್ಯಶಾಸ್ತ್ರ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೫. ಪ್ರಿನ್ಸಿಪಾಲ್ ವ್ಹಿ. ಎಸ್. ಕುಲಕರ್ಣಿ
ಸಿ. ಎಸ್. ಬೆಂಬಳಗಿ ಆರ್ಟ್ಸ್ ಮತ್ತು ಸಾಯನ್ಸ್ ಕಾಲೇಜ,
ರಾಮದುರ್ಗ.

೬. ಡಾ. ಎನ್. ಕೆ. ಕಡೆತೋಟದ
ಸಂಶೋಧಕರು, ಮಾನವಶಾಸ್ತ್ರ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೭. ಶ್ರೀ ಬ. ಹ. ಅಮಾತಿ
ಲೆಕ್ಚರರ್, ಸಮಾಜಶಾಸ್ತ್ರ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ,

೮. ಡಾ. ಕೆ. ಜಿ. ಗುರುಮೂರ್ತಿ
ರೀಡರ್, ಮಾನವಶಾಸ್ತ್ರ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೯. ಶ್ರೀ ಎಂ. ಕುಮಾರಸ್ವಾಮಿ
ಲೆಕ್ಚರರ್, ಅಪರಾಧಶಾಸ್ತ್ರ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೦. ಶ್ರೀ ಎ. ಎಸ್. ಧರಣೇಂದ್ರಯ್ಯ
ಲೆಕ್ಚರರ್, ಮನೋವಿಜ್ಞಾನ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೧. ಶ್ರೀ ಎಸ್. ಎಫ್. ಪೂಜಾರ
ಸಂಶೋಧಕರು, ಸಮಾಜಕಾರ್ಯ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೨. ಶ್ರೀ ಎಸ್. ಎ. ಅವರಾದಿ
ಮಾನವಶಾಸ್ತ್ರ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೩. ಡಾ. ಎಸ್. ಎಲ್. ಶಾಂತಕುಮಾರಿ
ಲೆಕ್ಚರರ್, ಪ್ರಾಚೀನ ಇತಿಹಾಸ ಮತ್ತು ಶಾಸನ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೪. ಡಾ. ಅ. ಸುಂದರ
ರೀಡರ್, ಪ್ರಾಚೀನ ಭಾರತ ಇತಿಹಾಸ ಮತ್ತು ಶಾಸನ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೫. ಡಾ. ಸಿ. ವ್ಹಿ. ರಂಗಸ್ವಾಮಿ
ಲೆಕ್ಚರರ್, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೬. ಶ್ರೀ ಮಾಲಿ ಮದ್ದಣ್ಣ
ರೀಡರ್ ಮತ್ತು ಮುಖ್ಯಸ್ಥರು, ರಾಜ್ಯಶಾಸ್ತ್ರ ವಿಭಾಗ,
ಸರಕಾರಿ ಆರ್ಟ್ಸ ಕಾಲೇಜ, ಬೆಂಗಳೂರು.

ಮಾನವಿಕ ಭಾರತಿ

ಪ್ರಥಮ ಸಂಚಿಕೆ : ಜನವರಿ

ದ್ವಿತೀಯ ಸಂಚಿಕೆ : ಜುಲೈ

ವಾರ್ಷಿಕ ಚಂದಾ : ರೂ. ೬-೦೦ (ಅಂಚೆ ವೆಚ್ಚ ಸಹಿತ)
ಬಿಡಿ ಪ್ರತಿಯ ಬೆಲೆ : ರೂ. ೩-೫೦ (,, ,, ಪ್ರತ್ಯೇಕ)
ವಿದ್ಯಾರ್ಥಿಗಳಿಗೆ ರಿಯಾಯಿತಿ ಚಂದಾ ದರ ರೂ. ೪-೦೦

ಹಣವನ್ನು ಡಿಮಾಂಡ ಡ್ರಾಫ್ಟ್ ಇಲ್ಲವೆ ಪೋಸ್ಟಲ್ ಆರ್ಡರ ಮೂಲಕ

ಫಾಯನಾನ್ಸ್ ಆಫೀಸರ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ-೫೮೦೦೦೩

ಇವರಿಗೆ ಕಳುಹಿಸಬೇಕು.